START

ROLL NO: 166

MICROFILMED BY

KARNATAKA STATE

ARCHIVES

1983

KODAGU Weekly

News paper :-

File No: ARS 19 APP 83

From 29:6:1951

Contd/.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಮಡಿಕೇರಿ.

ಕೂರ್ಗ್ ಪ್ರಾವಿನ್ಷಿಯಲ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಸಂಸ್ಥೆಯವರ ಆಳ್ವಿಕೆಯಲ್ಲಿ ಕಾರ್ಯ ನಡೆಸುತ್ತಿರುವ ಸಂಸ್ಥೆಯು. (1921ರಲ್ಲಿ ಸ್ಥಾಪಿಸಲಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ.	1,99,400.
ಸ್ಥಿರನಿಧಿ	ರೂ.	59,000.
ಇತರ ನಿಧಿಗಳು	ರೂ.	36,000.

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಊಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರೆಸರಿ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು.

ಹೆಚ್ಚಿನ ಮಾಹಿತಿಯನ್ನು ಅಧಿಕಾರಿಯಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.

ಕೆ. ಪಿ. ಅಪ್ಪಚ್ಚು, M. L. C. ಪ್ರೆಸಿಡೆಂಟ್ ಮತ್ತು ಮೆನೇಜರ್.

ದಿ ಟ್ರೊಪಿಕಲ್
ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:—ಲಾಲ ಶಂಕರ್ ಲಾಲ್.
ಮುಖ್ಯ ಆಫೀಸು:— ಹೊಸ ದೆಲ್ಲಿ.
53-9 ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು.	ಎಸ್. ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮಲ್‌ಖಾನ್.	ಡಾ|| ಎಂ. ಎ ಅನ್ಸಾರಿ.

Transacts:-Life, Fire, Motor, and Marine.

ಯಂ. ಯು. ಅಚ್ಚಣ್ಣ, ಇನ್ಸ್‌ಪೆಕ್ಟರರು, ಮಡಿಕೇರಿ, ಕೊಡಗು.	ಎಂ. ಎ. ಬೆಳ್ಯಪ್ಪ, ಬ್ರಾಂಚ್ ಸೆಕ್ರೆಟರಿ, ಹಂಪನಕಟ್ಟೆ, ಮಂಗಳೂರು.

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್,
ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಿಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245ರ ವರೆಗೆ.
2. 12ನೇ ನಂಬರಿನ ಒಂಟಿ ಹೊಳವಿನ ಕೋವಿ ಕ್ರಯ ರೂ. 320-0-0
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott)
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make)
5. .32 ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಿಗಳೂ ಸಹ ದೊರೆಯುತ್ತವೆ.
6. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇಮಾಡುವ ಪಂಪುಗಳು (Spraying Pumps)
7. ¾" ½" ¼" ¾" ¾" ಕಬ್ಬಿಣದ ಸಲಕರಣೆಗಳು.

ಹೆಚ್ಚಿನ ಮಾಹಿತಿಯನ್ನು ಅಧಿಕಾರಿಯಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಿಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದಿರಬೇಕಾಗಿ ಮಾಡಿಕೊಳ್ಳಲಾಗಿದೆ)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

52—61

Edited Printed and Published by P. I. Belliappa at 'Kodagu' Press, Mercara, for 'Kodagu' Ltd.

ಪ್ರಾಚೀನ ಮತ್ತು ಆಧುನಿಕ ಸಂಸ್ಕೃತಿ ಮತ್ತು ಶಿಕ್ಷಣ.

ಲೇಖಕರು:— ಶ್ರೀ ಚೇ. ಸೋ. ಮು.

ಸಂಸ್ಕೃತಿಯನ್ನು ವಿವರಿಸುವುದು ಸುಲಭವಲ್ಲ. ಸಂಸ್ಕೃತಿ ಎಂದರೆ ನೆನ್ನೆ ಆಭಿಪ್ರಾಯದಲ್ಲಿ ಒಂದು ಜನಾಂಗದ ಮೂಲ ಬೆಳವಣಿಗೆ ಮತ್ತು ಆದರ ಸಾಮಾಜಿಕ ಸುಧಾರಣೆ ಎಂದು ಹೇಳಬಹುದು. ಆ ದೃಷ್ಟಿಯಿಂದ ಮಹಾಭಾರತದ ಸಂಸ್ಕೃತಿ ಮತ್ತು ಆಧುನಿಕ ಸಂಸ್ಕೃತಿಯನ್ನು ತಾಳೆ ಹಾಕಿ ನೋಡಿದರೆ ಈಗಿನ ಸಂಸ್ಕೃತಿಯು ಬರೀ ಶಾರೀರಕ ಸುಧಾರಣೆಯಲ್ಲಿ ಮಗ್ನವಾಗಿದೆಯಲ್ಲದೆ ಭೌತಿಕ ದೃಷ್ಟಿಯಲ್ಲಿ ಬರೀ ಬೊಗ್ಗಾದ ಜೀವನವೆಂದರೆ ಅತಿಶಯೋಕ್ತಿ ಆಗಲಾರದೆಂದು. ಮೊನಪ ಕಟ್ಟಿಂದಿನಲ್ಲಿ ಈ ರೀತಿಯ ಭಾವನೆ ಬರಲು ನಮ್ಮ ಈಗಿನ ವಿದ್ಯಾಭ್ಯಾಸ ಮತ್ತು ಜೀವನ ಕ್ರಮವೇ ಇದರ ಮೂಲವೆಂದು ಹೇಳಿದರೆ ಎಲ್ಲರೂ ಒಪ್ಪಬೇಕಾದ ವಿಷಯ.

ನಮ್ಮ ಪುರಾಣ ಗ್ರಂಥ ಮಹಾಭಾರತದ ಕಾಲದ ಸಂಸ್ಕೃತಿಯ ವಿಷಯ ಒಬ್ಬ ಒಬ್ಬ ಮೇಧಾವಿಯು ಆಧುನಿಕ ಸಂಸ್ಕೃತಿಯನ್ನು ಈ ಕಳಗಿನ ರೀತಿಯಲ್ಲಿ ವರ್ಣಿಸಿದ್ದಾರೆ "ನಮ್ಮ ಈಗಿನ ಶಿಕ್ಷಣ ಎಷ್ಟರ ಮಟ್ಟಿಗೆ ಇದು ಸರಿಹೋಗುತ್ತದೆ ಎಂಬುದು ಇದರಿಂದ ವ್ಯಕ್ತವಾಗುತ್ತದೆ. ಮಹಾಭಾರತದಲ್ಲಿ ವರ್ಣಿತವಾಗಿರುವ ನಾಗರಿಕತೆಯನ್ನು ಧಾರ್ಮಿಕವೆಂದು ಹೇಳಬಹುದು. ಅದು ಕೇಳು, ವಿವಾಹವಿಚ್ಛೇದ, ವ್ಯಭಿಚಾರ, ರಕ್ಷಪಶ, ರಾಜಕೀಯ ಮತ್ತು ಸಾಮಾಜಿಕ ವಂಚನೆ ಮೊದಲಾದುವುಗಳಿಂದ ಕೂಡಿದ ಆಧುನಿಕ ನಾಗರೀಕತೆಯಲ್ಲ. ಈ ನಾಗರೀಕತೆಯ ಉತ್ಪಾಪಾಂಶವು ಭೌತಿಕ ಸುಖಲಾಲಸೆ, ಉನ್ಮತ್ತ ಪಕರ ಪಾನೀಯಗಳು ಕಾನೂನೋಪಾಸನೆ ಹೆಂಗಸರು, ಮಧ್ಯರಾತ್ರಿಯು ಕುಡಿತ ಮತ್ತು ಸುಖಾನೇಕ್ಷೆಯ ಜಯಕಯಲ್ಲ. ಮಹಾಭಾರತದ ಕಾಲದ ನಾಗರೀಕತೆಯು ಗುರಿಯು ಇವಾಗಿರಲಿಲ್ಲ. ಆ ಕಾಲದ ನಾಗರೀಕತೆಯೆಂದರೆ ವೈಭವನ್ನು, ಮಾನವ ಹೃದಯವನ್ನು ಅಲ್ಲೋಲಕಲ್ಲೋಲ ಮಾಡುವ ಕಾಮಲೋಭಗಳನ್ನು ಹಿಡಿತದಲ್ಲಿಟ್ಟುಕೊಳ್ಳುವ ಆ ಎಣೆಯಿಲ್ಲದ ಆನಂದವಾಗಿತ್ತು. ಆ ನಾಗರೀಕತೆಯ ಗುರಿಯು ಧಾರ್ಮಿಕ ನಾಗರೀಕತೆಯನ್ನು ಹಬ್ಬಿಸಿ ಆ ಮೂಲಕ ಮಾನವನ ಮನಸ್ಸನ್ನು ಆಕರ್ಷಕ್ಯಗೊಳಿಸುವ ಸಂಗತಿಗಳನ್ನು ಶೋಧಿಸುವುದಾಗಿತ್ತು.' ಈ ಮೇಲಿನ ಒಂದು ವಿವರಣೆ ಈಗಿನ ಸಂಸ್ಕೃತಿ ಪತ್ತೆ ಪೂರ್ವಿಕರ ಸಂಸ್ಕೃತಿಯನ್ನು ಎತ್ತಿ ತೋರಿಸುತ್ತದೆ

ಇದೇರೀತಿ ಪಾಶ್ಚಿಮಾತ್ಯ ಶಿಕ್ಷಣವು ನಮ್ಮ ಪ್ರಾಚೀನ ಶಿಕ್ಷಣದ ಕ್ರಮವನ್ನು ಸಂಕ್ಷಿಪ್ತವಾಗಿ ವಾಚಕರ ಮುಂದಿಡುತ್ತೇನೆ. ಇದೂ ಕೂಡ ಎಷ್ಟರ ಮಟ್ಟಿಗೆ ನಮ್ಮ ಭಾರತಕ್ಕೆ ಅಸ್ಪಯಿಸುತ್ತದೆ ಎಂಬದನ್ನು ವಿಚಾರಿಸಬೇಕು. ಪಾಶ್ಚಿಮಾತ್ಯ ಕ್ರಮದ ಶಿಕ್ಷಣವು ಹೆಚ್ಚಿನ ಮಟ್ಟಿಗೆ ನಮ್ಮ ಜ್ಞಾನವನ್ನು ಶೀಕ್ಷಣವಾಗಿ ಮಾಡುತ್ತದಲ್ಲದೆ ಹೃದಯವನ್ನು ಮೂಸಡಿಸುವುದಿಲ್ಲ (It trains true intellect and not true heart) ಎಂಬುದಾಗಿ ಸ್ವಾಮಿ ವಿವೇಕಾನಂದರು ಒಂದೆಡೆಯಲ್ಲಿ ಹೇಳಿರುವರು. ವಿದ್ಯಾಭ್ಯಾಸದ ಮುಖ್ಯ ಧ್ಯೇಯವು ವಿರಾಮ ಕಾಲವನ್ನು ಸದುಪಯೋಗಮಾಡುವುದೇ ಎಂದು ಅರಿಸ್ಟಾಟಲ್ ಎಂಬಗ್ರೀಕ್ ತತ್ವಜ್ಞಾನಿಯು ಹೇಳಿರುವನು (The noble employment of leisure should be the main aim of education) ಆದರೆ ಪಾಶ್ಚಿಮಾತ್ಯ ಶಿಕ್ಷಣವು ನಮ್ಮ ಬೌದ್ಧಿಕ ಜ್ಞಾನವನ್ನು ಪೂರ್ತಿ ಹಾಳುಮಾಡಿ ನಮ್ಮ ನೈತಿಕ ಹಾಡಿಯನ್ನು ಕೂಡ ಪೂರ್ಣ ಕೆಡಿಸಿರುವುದು ನಮ್ಮ ಈಗಿನ ಶಿಕ್ಷಣ ಕ್ರಮವನ್ನು ಕುರಿತು ಸ್ವಾಮಿ ವಿವೇಕಾನಂದರು ಒಂದೆಡೆಯಲ್ಲಿ ಈ ರೀತಿ ಹೇಳಿರುವರು.

'ನೀವು ತಂಬಾ ವಿದ್ಯಾವಂತರೆಂದು ಯೋಚಿಸುತ್ತಿರುವಿರಿ. ಎಂಥಾ ತಿಳಿಗೇಡಿ ವಿಚಾರವನ್ನು ನೀವು ಕಲಿತಿರುವಿರಿ? ಇತರರ ಭಾವನೆಯನ್ನು ವಿದೇಶಿ ಭಾಷೆಯ ಮೂಲಕ ಕೇಳಿಪಾಠ ಪಡಿದು ನಿಮ್ಮ ಮೆದುಳನ್ನು ಅವುಗಳಿಂದ ತುಂಬಿಸಿ ವಿಶ್ವವಿದ್ಯಾಲಯದ ಡಿಗ್ರಿಯೊಂದನ್ನು ಗಳಿಸಿ ನೀವು ಮಹಾವಿದ್ಯಾವಂತರೆಂದು ಭಾವಿಸುತ್ತೀರಿ ನಿಮಗೆ ಧಿಕ್ಕಾರವಿರಲಿ! ಇದು ವಿದ್ಯೆಯೇ? ಒಂದೋ ಗುಮಾಸ್ತಗಿರಿ ಇಲ್ಲವೇ ಕಪಟಿ ತುಂಬಿದ ವಕೀಲ, ಇಲ್ಲವೇ ಹೆಚ್ಚು ಹೊಗಳಿಸಿಕೊಳ್ಳುವ ಗುಮಾಸ್ತಗಿರಿಯದ ಒಂದು ಡಿಪ್ಯೂಟಿ ಮೇಜಿಸ್ಟ್ರೇಟ್! ಇದೇ ಈಗಿನ ವಿದ್ಯೆಯ ಪುರುಷಾರ್ಥವೇ? ಈ ವಿದ್ಯೆಯು ನಿಮಗಾಗಲೀ, ನಿಮ್ಮ ದೇಶಕ್ಕಾಗಲಿ ಯಾವ ಹಿತಮಾಡೀತು? ಕಣ್ಣೆರೆಯಿ. ಸಂಪತ್ತಿಗೆ ನೆಚೆಮನೆಯೆಂದು ಕೇರ್ತಿಸಾಡಿದ ಭರವಸೆಯಿಂದಲ್ಲಿ ಆಹಾರಕ್ಕಾಗಿ ಎಧ-ಆರ್ತರವು ಕೇಳಬರುತ್ತದೆ. ಕೇಳಿರಿ. ನಿಮ್ಮ ವಿದ್ಯೆ ಈ ಬೇಡಿಕೆಯನ್ನು ಸರಿಪಡಿಸಬಲ್ಲದೇ? ಖಂಡಿತಾ ಇಲ್ಲ.' ಈ ಭವಿಷತ್‌ವಾಣಿ ಇಂದಿನ ಭಾರತಕ್ಕೆ ಎಷ್ಟರ ಮಟ್ಟಿಗೆ ಸರಿಹೋಗುತ್ತದೆ. ಎಂಬದನ್ನು ಎಲ್ಲರೂ ವಿಚಾರಿಸುವ ವಿಷಯವಾಗಿದೆ. ಯಾವ ಶಿಕ್ಷಣದಲ್ಲಿ ಶೀಲವಿಲ್ಲವೋ ಇದೇಯೇ ಆ ವಿದ್ಯೆಯ ಪಧ ವೀಧರರು ದೇಶದ ವಿಳಿಗೆ ಎಂದೂ ಸಹಯ ಕರಾಗರು. ಒಳ್ಳೆ ಶೀಲವೇ ವಿದ್ಯೆಯ ಮುಖ್ಯ ಲಕ್ಷಣ ಆದುದರಿಂದ ಆಧುನಿಕ ಸಂಸ್ಕೃತಿಯಲ್ಲೂ ಮತ್ತು ನಮ್ಮ ಶಿಕ್ಷಣದಲ್ಲಾ ಇರೀ ವಿಷಯಲ್ಲಿ ಅದರಲ್ಲೂ ನಮ್ಮ ಭಾರತ ಭೂಮಿಯ ಲ್ಲಿ ಮಹತ್ತಾದ ಮಾರ್ಪಾಟುಗಳು ಈ ಎರಡು ಕ್ಷೇತ್ರಗಳಲ್ಲಿ ಆಗದಿದ್ದರೆ ಮಾನವ ವರ್ಗದ ಅಂತ್ಯವು ಬಹಳ ದೂರದಲ್ಲಿಲ್ಲವೆಂದು ಹೇಳಬೇಕಾಗಿಲ್ಲ. ಭಗವಂತನು ಇಡೀ ವಿಶ್ವವನ್ನು ಇಂತಹ ಒಂದು ಅವಘಡದಿಂದ ಕಾಪಾಡಲಿ.

ಜೈ ಹಿಂದ್.

Licence No. 60.
Licenced to Post without Prepayment

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಟಿ. ವಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. ೮–೦–೦.

ಸಂಪುಟ ೩೦ | ಕಾರೀಕು ೨೯–೬–೧೯೩೦ನೇ ಶುಕ್ರವಾರ | ಸಂಚಿಕೆ ೪೫

ಭಾರತದಲ್ಲಾಗುತ್ತಿರುವ ಔದ್ಯೋಗಿಕ ಪ್ರಗತಿ.

ನೂಲು ವಸ್ತ್ರ ಬಟ್ಟೆ

ಹಿಂದುಸ್ಥಾನದಲ್ಲಿಯ ಸುಸಂಘಟಿತವಾದ ದೊಡ್ಡ ಉದ್ಯೋಗವೆಂದರೆ ಜವಳಿ ನಿರ್ಣಗಳದು. ೧೯೪೬ ರಿಂದ ೧೯೩೦ ವರೆಗೆ ಹಿಂದುಸ್ಥಾನದಲ್ಲಿ ಪ್ರತಿ ವರ್ಷದಲ್ಲಿ ಹುಟ್ಟುವಳಿಯಾದ ನೂಲು ಮತ್ತು ಬಟ್ಟೆ ಕೆಳಗಿನಂತಿದೆ:—

ವರ್ಷ	ನೂಲು (ಪೌಂಡ)	ಬಟ್ಟೆ (ಗಜ)
೧೯೪೬	೧೩೯,೫೫,೭೦೫	೩೬,೯೧,೧೧೪
೧೯೪೮	೧೫೪,೪೭,೬೧೬	೪೫,೧೦,೩೦೩
೧೯೪೯	೧೩೫,೫೯,೧೧೯	೩೯,೦೪,೭೦೩
೧೯೩೦	೧೧೧,೭೩,೦೩೬	೩೬,೬೩,೩೪೪

(ಅಂಕಿಗಳು ಸಾವಿರದಲ್ಲಿ)

ಈ ಅಂಕಿಗಳನ್ನು ನೋಡಿದರೆ ೧೯೪೬ ರಲ್ಲಿ ಹುಟ್ಟುವಳಿ ತೀರ ಹೆಚ್ಚಿಗಿದ್ದುದೂ ೧೯೩೦ ರಲ್ಲಿ ತೀರ ಕಡಿಮೆ ಇದ್ದುದೂ ಕಂಡುಬರುವುದು. ೧೯೩೦ ರಲ್ಲಿ ಉತ್ಪಾದನೆ ಕಡಿಮೆಯಾಗಲು ಕಾರಣವೆಂದರೆ ಹತ್ತಿಯ ಕೂರತೆ, ಕೆಲಸಗಾರರ ಮುಷ್ಕರ, ಕೆಲಸ ತಪ್ಪಿಸುವದು ಮೊದಲಾದದ್ದು. ಕಳೆದ ವರ್ಷ ಮಂಬಯಿಯಲ್ಲಿ ಕಮಟಗಿ ವದಿಗಳೂ ಕವ ನಿಸ್ಥರೂ ಕೂಡಿ ಸರಿಪಡಿಸಿದ ಜವಳಿ ಕೆಲಸಗಾರರ ಮುಷ್ಕರದಿಂದ ನೂಲಿನ ಉತ್ಪಾದನೆಯಲ್ಲಿ ಪತ್ತು ಬಟ್ಟೆಯ ಉತ್ಪಾದನೆಯನ್ನು ೮೦ ಲಕ್ಷ ಪೌಂಡು ನೂಲು ಇಪ್ಪತ್ತು ಕೋಟಿ ವಾಪತ್ತು ಲಕ್ಷ ಗಜ ಬಟ್ಟೆ ಕಡಿಮೆಯಾಯಿತಲ್ಲದೆ ಹದಿನಾರು ಕೋಟಿ ಐವತ್ತು ಲಕ್ಷ ರೂಪಾಯಿಗಳ ಹಾನಿಯಾಯಿತ.

ಹಿಂದುಸ್ಥಾನದಲ್ಲಿ ಈಗ ನಡೆದಿರುವ ಗಿರಣಿಗಳಿಗೆ ಪ್ರತಿ ವರ್ಷ ೪೨ ಲಕ್ಷ ಬೇಲ ಅಂಚೆ ಬೇಕಾಗುತ್ತದೆ. ಇದರಲ್ಲಿ ೩೬ ಲಕ್ಷ ಬೇಲುಗಳ ನವ್ಮ ದೇಶದಲ್ಲಿದ್ದ ನಯ ಬಟ್ಟೆಗಾಗಿ ೬ ಲಕ್ಷ ಬೇಲುಗಳನ್ನ ಈಜಿಪ್ತ, ಪೂರ್ವ ಆಫ್ರಿಕಾ ಮತ್ತು ಸುದಾನಗಳಿಂದ ತರಿಸಬೇಕಾಗುವದು. ದೇಶವಿಭಜನೆಯ ನಂತರ ನವ್ಮ ರೂಪಾಯಿಯ ಬೆಲೆ ಇಳಿಸಿದ ನಂತರ ಪಾಕಿಸ್ತಾನದ ಆರಳ ಬರುವದು ನಿಂತಿತ. ೧೯೨೨–೨೩ ರಲ್ಲಿ ನವ್ಮ ದೇಶದಲ್ಲಿ ೩೨ ಲಕ್ಷ ಗಂಟು ಆರಳೆಯು ಉತ್ಪತ್ತಿಯಾಯಿತ ಆನಂದ ಕಂದ ಕಡಿಮೆ. ಬಿದ್ದ ಆರಳೆಯನ್ನ ಆವೇ ರಳೆಯಿಂದ ತರಿಸಬೇಕಾಯಿತ. ಈ ಆರಳೆಯಿಂದ ನಯ ಬಟ್ಟೆ ಹೊರಡುವದರಿಂದ ಇಲ್ಲಿಯ ಗಿರಣಿಗಳ ಸ್ವರೂಪವೇ ಬದಲಾಗಿದೆ. ೧೯೪೮–೪೯ ರ ವರೆಗೆ ನಯ ಮತ್ತು ಅತಿನಯವಾದ ಬಟ್ಟೆ ಅನುಕ್ರಮವಾಗಿ ನೂರಕ್ಕೆ ೩೫ ಮತ್ತು ೨೯ ರಷ್ಟು ಹೊರಡುತ್ತಿತ್ತ. ಆದರೆ ೧೯೩೦ ರಲ್ಲಿ ೧೯೦೦ ಕ್ಕೆ ಇಳಿ ಮತ್ತು ೪೦ ರಷ್ಟು ಉತ್ಪಾದಿಸಲ್ಪಟ್ಟಿತ. ಇದರಿಂದ ಉರುಟು ಬಟ್ಟೆಯ ಉತ್ಪಾದನೆ ಕಡಿಮೆಯಾಯಿತ. ಹಿಂದುಸ್ಥಾನದಿಂದ ನಿರ್ಯಾತವಾಗುವ ಬಟ್ಟೆಯಲ್ಲಿ ೧೦೦ಕ್ಕೆ ಅತಿ ರಷ್ಟ ಒರಟು ವತ್ತ ಮಧ್ಯಮ ತರಗತಿಯದು ಇದರಿಂದ ಇಲ್ಲಿಯ ಜನರಿಗೆ ಆ ಬಟ್ಟೆ ದೊರೆಯದೆ ನಯವಾದ ಬಟ್ಟೆಯನ್ನೇ ಉಪಯೋಗಿಸಬೇಕ ಯಿತ್ತು.

ಒಕ್ಕಲಿಗರು ಹೆಚ್ಚು ಹತ್ತಿ ಬೆಳೆಯುವಂತೆ ಪ್ರೋತ್ಸಾಹವನ್ನು ಕೂಡ ನದಕ್ಕಾಗಿ ಪ್ರತಿ ಖಂಡಿಗೆ ೧೫೦ ರೂಪಾಯಿ ಬೆಲೆ ಹೆಚ್ಚಿಕಲಯಿತು. ೧೯೩೦ ರ ಪ್ರಾರಂಭದಲ್ಲಿ ನೂಲು ಮತ್ತ ನೂಲಿನ ಬಟ್ಟೆಯ ನಿರ್ಯಾತವು ಇನಿಲ್ಲದಂಥವಾಗಿ ಸಾಗಲು ಸರಕಾರವು ಅನುಮತಿ ಕೊಟ್ಟಿತು ಯೂ ಕೆಂಪದೆ ಗಿರಣಿಗಳಲ್ಲಿ ಸಂಗ್ರಹವೂ ಬಹಳ ಷ್ಟಿತ. ಆವರೆ ಇದ್ದುದರ ಬಹು ಭಾಗವು ನಿರ್ಯಕ್ತವಾದುದರಿಂದ ಇಲ್ಲಿಯ ಜನರಿಗೆ ಬಟ್ಟೆಯ ಕೊರತೆಯುಂಟಾಗ ಹತ್ತಿತ.

೧೯೪೬ ರಿಂದ ೧೯೩೪ ರ ವರೆಗೆ ಕೈ ಮಗ್ಗಗಳಿಗೆ ಸಾಕಷ್ಟು ನೂಲಿನ ಪ್ರೂರೈಕೆಯಾಗುತ್ತಿತ್ತು. ಆದರೆ ೧೯೩೦ ರಲ್ಲಿ ಈ ಪೂರೈಕೆಯು ಕೇವಲ ೧೦೦ಕ್ಕೆ ೫೨ ರಷ್ಟ ಮಾತ್ರ ಆಯಿತ. ಅನಂತರ ನೂಲಿನ ನಿರ್ಯಾತವನ್ನು ನಿರ್ಬಿರಿಸಲಾಯಿತು. ಮತ್ತು ತವಗೆ ಇಷ್ಟ ಬಂದವರಿಗೆ ತನ್ನ ಉತ್ಪಾದನೆಯಲ್ಲಿ ನೂಲನ್ನು ಕೊಡಬಹುದೆಂದು ಗಿರಣಿಯೊಡೆಯರಿಗೆ ಕೊಟ್ಟ ಸೌಲಭ್ಯವನ್ನೂ ನಿಶ್ಚಿಸಲಾಯಿತು. ಮತ್ತು ಹಲವಿ ಲವು ಹೊಸ ಗಿರಣಿಗಳನ್ನೂ ಪ್ರಾರಂಭಿಸಲಾಯಿತು. ಈ ಗಿರಣಿಯೊಳಗಿಂದ ೫೫ ಲಕ್ಷ ಪೌಂಡು ನೂಲಿನ ಉತ್ಪಾದನೆಯೂ ಗಬಹುದೆಂದು ಲೆಕ್ಕ ಮಾಡಲಾಗಿದೆ. ಈ ಗ ಗಿರಣಿಗಳು ಬೇಕಾದಲ್ಲಿಂದ ಅರಳೆಯನ್ನು ಕೊಳ್ಳುವದಕ್ಕೂ ತಡೆಹಾಕಲಾಗಿದೆ

ಕಲ್ಲಿದ್ದಲಿ

ನವ್ಮ ದೇಶದ ಇನ್ನೊಂದು ಮಹತ್ವದ ಉತ್ಪಾದನೆಯೆಂದರೆ ಕಲ್ಲಿದ್ದಲಿ. ಇದೂ ನಿಯಂತ್ರಿತ ಉದ್ಯೋಗವಿದೆ ಕಲ್ಲಿದ್ದಲಿಗೆ ನವ್ಮ ದೇಶದಲ್ಲಿ ಕೊರತೆ ಇಲ್ಲ.

ಕಲ್ಲಿದ್ದಲಿಯ ಉತ್ಪಾದನೆ:—

೧೯೪೬ ರಲ್ಲಿ	೩ ಕೋಟಿ ೯೮ ಲಕ್ಷ ಟನ್
೧೯೪೮ ರಲ್ಲಿ	೩ ಕೋಟಿ ೧೪ ಲಕ್ಷ ಟನ್
೧೯೩೦ ರಲ್ಲಿ	೩ ಕೋಟಿ ೧೯ ಲಕ್ಷ ಟನ್

೧೯೩೦ ರಲ್ಲಿ ೩೦ ಲಕ್ಷ ಟನ್ ಕಡಿಮೆ ಸವಿರದ ವರೆಗೆ ಮಿತ. ಆದರೂ ಕೋಲಿಯೂ ಯುದ್ಧದ ಪೂರ್ವಕ ಬೆಲೆಗಳು ಏರ್ಪಡಿಂದ ೧೯೪೮ ರಲ್ಲಿ ೩ ಲಕ್ಷ ೮೭ ಸಾವಿರ ಟನ್ ಆಯಿತವ್ಯಾದದ್ದು ೧೯೩೦ ರಲ್ಲಿ ೩ ಲಕ್ಷ ಆಳ ಸಾವಿರಕ್ಕೆಳಿಯಿತು. ಆ್ದರಿಂದ ಉಕ್ಕಿನ ಕೊರತೆ ಕೆಲವಂಶದಲ್ಲಿ ಕಂಡು ಬಂತ ಇಲ್ಲಿಯ ಉತ್ಪಾದನೆಯಿಂದ ರೈಲ್ವೆ ಗಳಿಗೆ ಬೇಕಾದಷ್ಟನ್ನು ಪೂರೈಸಲಾದೂ ಜನತೆಗೆ ಮಾತ್ರ ಸಾಕಷ್ಟು ಲಭ್ಯವಾಗಲಿಲ್ಲ ಆ್ದರಿಂದ ಉಕ್ಕಿನ ವಿತರಣೆಯ ಪದ್ಧತಿಯಲ್ಲಿ ಬದಲು ಮಾಡಲಾಯಿತು.

ಹಿಂದುಸ್ಥಾನದಲ್ಲಿ, ಟಾಟಾ ಆಯರ್ನ್ ಆ್ಯಂಡ್ ಸ್ಟೀಲ್ ಕಂಪೆನಿ, ವೈಸೂರ್ ಐರನ್ ಮತ್ತು ಸ್ಟೀಲ್ ಕಂಪೆನಿ, ಬಂಗಾಲ ಸ್ಟೀಲ್ ಕಾರ್ಪೋರೇಶನ್ ಇವು ಉಕ್ಕಿನ ಉತ್ಪಾದನೆ ಮಾಡುವ ಮುಂ ಖ ಸಂಸ್ಥೆಗಳು. ಇವರಲ್ಲಿ ಟಿ ಟಿ. ಕಂಪೆನಿಯ ಸರಾಸರಿ ವರ್ಷ ೧ ಲಕ್ಷ ಟನ್ ಸಾವಿರ ಉಕ್ಕ ತಯಾರು ಮಾಡುವ ಹೊಸ ಯೋಜನೆಯನ್ನು ಸಿದ್ಧಪಡಿಸಿದ್ದು ಅದಕ್ಕೆ ೩೫ ಕೋಟಿ ರೂಪಾಯಿಗಳು ಕಗಬಹುದು ಇದರಲ್ಲಿ ಅರ್ಧ ಹಣವನ್ನು ಹಿಂದುಸ್ಥಾನ ಸರಕಾರವು ಕೊಡಲಿದ್ದು ಇನ್ನರ್ಧವನ್ನು ಕಂಪೆನಿಯು ಬೇಮಿಕೆಯಂದ ಈ ಕಾರ ಖಾನೆಯಿಂದ ಹೊರಡುವ ಮುಖ್ಯ ವಸ್ತುಗಳೆಂದರೆ ನೀರಿನ ಕೊಳವೆಗಳು.

ವೈಸೂರು ಕಾರ್ಖಾನೆಗೂ ಹಿಂದುಸ್ಥಾನ ಸರಕಾರವು ಪಾಲ ಕೊಡಲು ಒಪ್ಪಿದ್ದು ಅಲ್ಲಿ ಪ್ರತಿ ವರ್ಷ ೭೦ ಸಾವಿರ ಟನ್ ಉಕ್ಕ ಹೆಚ್ಚಾಗಿ ಉತ್ಪಾದಿಸಲ್ಪಡವದು.

ಬಂಗಾಲ ಸ್ಟೀಲ ಕಾರ್ಪೋರೇಶನದ ವರು ಮತ್ತೆ ಎರಡು ಕೋಟಿ ಹೆಚ್ಚಿನ ಬಂಡವಾಳವನ್ನು ಹಾಕಿ ಕಮ್ಮ ಉತ್ಪಾದನೆ ಹೆಚ್ಚಿಸಲಿದ್ದಾರೆ.

ಸಿಮೆಂಟ್.

೧೯೪೮ ರಲ್ಲಿ ೧೧ ಲಕ್ಷ ಟನ್ ಸಿಮೆಂಟನ ಉತ್ಪಾದನೆಯೂಗತ್ತು ಆದರೆ ೧೯೩೦ ರಲ್ಲಿ ಆದರ ಇನ್ನೂ ಡಿಗಿಂತ ಹೆಚ್ಚು ಅಂದರೆ ೩೬ ಲಕ್ಷ ಟನ್ ಉತ್ಪಾದಿಸಲ್ಪಟ್ಟಿತು. ಹಿಂದುಸ್ಥಾನದಲ್ಲಿ ಒಟ್ಟು ೨೧ ಸಿಮೆಂಟ್ ಕಾರಖಾನೆಗಳಿದ್ದು ಅವೆಲ್ಲವೂ ತಮ್ಮ ಉತ್ಪಾದನೆ ಹೆಚ್ಚಿಸಿವೆ ಈಗ ಮತ್ತೆ ೯ ಕಾರಖಾನೆಗಳ ಯೋಜನೆ ಪೂರ್ತಿಯಾಗಲಿದ್ದು ಈ ವರ್ಷದಲ್ಲಿ ಮತ್ತೆ ೧೦ ಲಕ್ಷ ಟನ್ನಿನ ವರೆಗೆ ಉತ್ಪಾದನೆ ಹೆಚ್ಚಬಹುದು. ಇಲ್ಲಿಂದ ಪರದೇಶಗಳಿಗೂ ಸಿಮೆಂಟಿನ ನಿರ್ಯಾತ ನಡೆದೇ ಇದೆ. ಹೋದ ವರ್ಷ ೪೪ ಸಾವಿರ ಟನ್ ಸಿಮೆಂಟನ್ನು ಪರದೇಶಗಳಿಗೆ ನಿರ್ಯಾತ ಮಾಡಲಾಯಿತು.

ಉಪ್ಪು,

ಹಿಂದುಸ್ಥಾನದಲ್ಲಿ ಒಟ್ಟು ೪೪೭೧ ಉಪ್ಪಿನ ನಿರ್ಮಿತಿ ಕೇಂದ್ರಗಳಿವೆ. ಇವು ೧೦೬ ಗುಂಪುಗಳಲ್ಲಿ ಇವೆ. ಅವುಗಳಲ್ಲಿ ೨೮ ಕೇಂದ್ರ ಸರಕಾರದ ಒಡೆತನದಲ್ಲಿವೆ. ಉಳಿದವು ಸರಕಾರದ ಒಡೆತನದ ಭೂಮಿಯಲ್ಲಿವೆ. ೧೯೪೪ ರಲ್ಲಿ ಉಪ್ಪಿನ ಈ ಕ್ಷೇತ್ರವು ೫೧,೪೪೫ ಇದ್ದದ್ದು ಈಗ ೪೫,೭೧೫ ಎಕರೆಗಳ ವರೆಗೆ ಹಬ್ಬಿದೆ. ೧೯೪೭ರಿಂದ ಪ್ರತಿ ವರ್ಷ ಕೆಳಗಿನಂತೆ ಉತ್ಪಾದನೆಯಾಯಿತು.

೧೯೪೭	ರಲ್ಲಿ	೫೧೬ ಲಕ್ಷ ಮಣ
೧೯೪೮	,,	೬೩೫ ,, ,,
೧೯೪೯	,,	೫೫೬ ,, ,,
೧೯೫೦	,,	೭೧೩ ,, ,,

ಇವರಲ್ಲಿ ವಿದೇಶೀಯ ಸರಕಾರದ ಉತ್ಪಾದನೆ ೫೧೧ರಲ್ಲಿ ೧೦೦ಕ್ಕೆ ೩೭ ರಷ್ಟಾಗಿದ್ದರೆ ವಿದೇಶೀಯ ಸರಕಾರದ ಮುಂಬರಿಂದ ೧೦೦ಕ್ಕೆ ೬೦ ರಷ್ಟು ಆಗುತ್ತದೆ.

ಪ್ರಪಂಚದಲ್ಲಿ ಪ್ರತಿ ವರ್ಷ ಪ್ರತಿಯೊಬ್ಬನು ಉಪಯೋಗಿಸುವದು ೩೦ ಪೌಂಡು ಉಪ್ಪು. ಹಿಂದುಸ್ಥಾನದಲ್ಲಿ ವರ್ಷಕ್ಕೆ ಪ್ರತಿಯೊಬ್ಬನ ಪ್ರಮಾಣ ೧೪ ಪೌಂಡು ಇದೆ ಮದ್ರಾಸದಲ್ಲಿ ಮಾತ್ರ ೩೦ ಪೌಂಡು ಇದೆ. ಈ ಲೆಕ್ಕದ ಮೇಲಿಂದ ೧೯೫೦ ರಲ್ಲಿ ಹಿಂದುಸ್ಥಾನಕ್ಕೆ ೬೮೩ ಲಕ್ಷ ಮಣ ಸಾಗುತ್ತಿತ್ತು. ಆದರೆ ಸೋಡಾ ಆ್ಯಶ್‌ಕ್ಕೆ ಹೆಚ್ಚು ಉಪ್ಪು ಬೇಕಾಗುವದು ಆ ದೃಷ್ಟಿಯಿಂದ ಹೋದ ವರ್ಷ ೪೫ ಲಕ್ಷ ಮಣ ಉಪ್ಪನ್ನು ಪರದೇಶಗಳಿಂದ ತರಿಸಲಾಯಿತು. ಒಂದು ಲಕ್ಷ ಮಣ ಸ್ಕಾಧಿಲವಣವನ್ನು ಪಾಕಿಸ್ತಾನದಿಂದೆ ತರಿಸಲಾಯಿತು. ಮತ್ತ ಇದರಲ್ಲಿ ೨. ಲಕ್ಷ ಮಣವನ್ನು ಜಪಾನಕ್ಕೂ ೨೪ ಲಕ್ಷ ಮಣವನ್ನು ಪೂರ್ವ ಪಾಕಿಸ್ತಾನಕ್ಕೂ ಕಳಿಸಲಾಯಿತು

ಕಾಗದ

ಕಾಗದದ ಉತ್ಪಾದನೆ ಬಳಕೆಗಳಲ್ಲಿ ಹಿಂದುಸ್ಥಾನವು ಸ್ವಾವಲಂಬಿಯಾಗಿಲ್ಲ ವೃತ್ತಪತ್ರಿಕೆಗಳಿಗೆ ಬೇಕಾಗುವ ಕಾಗದ ಕ್ಕಂತೂ ನಾವು ಸಂಪೂರ್ಣ ಪರಾಶ್ರಯಿಗಳಾಗಿದ್ದೇವೆ ಮಧ್ಯಪ್ರದೇಶದಲ್ಲಿ ವೃತ್ತಪತ್ರಿಕೆ ಕಾಗದದ ಗಿರಣಿಯೊಂದು ೧೯೫೧ ರಲ್ಲಿ ಪ್ರಾರಂಭವಾಗಲಿದ್ದು ಅಲ್ಲಿ ಪ್ರತಿ ವರ್ಷ ಸರಾಸರಿ ೫೦ ಸಾವಿರ ಟನ್ ಕಾಗದದ ಉತ್ಪಾದನೆಯಾಗಬಹುದೆಂದು ಅಂದಾಜು ಇದೆ. ಕಾಗದದ ಉತ್ಪಾದನೆ ಕೆಳಗಿನಂತಿದೆ—

೧೯೪೮	ರಲ್ಲಿ	೧೪೨,೬೦೦ ಟನ್
೧೯೪೯	,,	೧೨೬,೭೦೦ ,,
೧೯೫೦	,,	೧೨೮,೯೦೭ ,,

ಇಷ್ಟು ಕಾಗದದ ಉತ್ಪಾದನೆ ನವ್ಮ ದೇಶದಲ್ಲಾಯಿತ. ಈ ರೀತಿಯಾಗಿ ನವ್ಮ ಔದ್ಯೋಗಿಕ ಕ್ಷೇತ್ರದಲ್ಲಿ ಪ್ರಗತಿಯಾಗಿದ್ದುದು ಕಂಡು ಎಂದರೂ ಇನ್ನೂ ಸ್ವಾವಲಂಬಿಯಾಗುವಷ್ಟು ಸಾಧಿಸಲು ಹಳ ಸ್ಟಿದೆ

'ಜೈ ಹಿಂದ್'

———

ವಿವಾಹ ಮತ್ತು ಕುಟುಂಬ.

ಓರ್ವ ಸ್ತ್ರೀ ಮತ್ತು ಓರ್ವ ಪುರುಷನು ಜೀವನದಲ್ಲಿ ಒಂದಾಗಿ ಬಾಳುವಂತೆ ಮಾಡುವ ಬಂಧನವಾದ ವಿವಾಹವು ಕಾಲ ಕಾಲಕ್ಕೆ ಅನೇಕ ಪರಿವರ್ತನೆಗಳಿಗೆ ಒಳಗಾಗಿತ್ತು ಇದರ ಸ್ಥಾಪನೆಗಳು ಬದಲಾವಣೆ ಹೊಂದಿವೆ. ವಿವಾಹನೆಲಬಾದರ ಆವಶ್ಯಕತೆಯು ಒಂದು ಕಾಲದಲ್ಲಿ ಒಂದಾಗಿದ್ದರೆ ಇನ್ನೊಂದು ಕಾಲದಲ್ಲಿ ಮತ್ತೊಂದಾಗಿತ್ತು. ಇಂದು ವಿವಾಹನೆಂಬುದರ ತಾತ್ಪರ್ಯವು ಸಾವಿರಾರು ವರ್ಷಗಳ ಹಿಂದೆ ಆದೇ ಪದಕ್ಕಿದ್ದ ಅರ್ಥಕ್ಕಿಂತ ತೀರಾ ಭಿನ್ನವಾಗಿದೆ. ಮುಂದಿನ ಜನಾಂಗವು ವಿವಾಹವೆಂಬುದನ್ನು ಯಾವ ದೃಷ್ಟಿಯಿಂದ ನೋಡಬಹುದು ಎಂದು ಈಗ ತರ್ಕಿಸುವುದು ಅಸಾಧ್ಯವಿದೆ.

ವಿವಾಹ ಬಂಧನವನ್ನು ಜೀವಿತ ಕಾಲದಲ್ಲಿ ಮುರಿದು ಬಿಡುವುದು ಅಸಾಧ್ಯವೆಂದು ಇನ್ನು ಪೂರ್ವಜನರು ತಿಳಿದುಕೊಂಡಿದ್ದರು. ವಿವಾಹಿತರಲ್ಲದೆ ಇತರ ಸ್ತ್ರೀಪುರುಷರ ಸಂಬಂಧಗಳು ಅಶ್ಲೀಲ ಹಾಗೂ ಪಾಪವೆಂದು ಪರಿಗಣಿಸಲ್ಪಡುತಿತ್ತು. ಸ್ತ್ರೀಯು ಓರ್ವ ಪುರುಷನ ಕೈ ಹಿಡಿದ ನಂತರದಲ್ಲಿ ತನ್ನ ಅಂತ್ಯದ ತನಕ ಅವನನ್ನು ಆವಲಂಬಿಸತಕ್ಕದೆಂದು ಧಾರ್ಮಿಕ ಕಾಯಿದೆಗಳಿದ್ದವು. ಈ ನಿಯಮವನ್ನು ಉಲ್ಲಂಘಿಸಿದವರು ರೌರವ ನರಕಕ್ಕೆ ಹೋಗುವರೆಂದು ಭೀತಿಯ ತ್ತು. ಸಮಾಜವು ಈ ನಿಯಮವನ್ನು ವ್ಯಕ್ತಿಗಳ ಮೇಲೆ ಹೇರಿಸಿತ್ತು.

ಮನುಷ್ಯನು ಶಲಾಂತರಗಳಿಂದ ಅನೇಕ ಪಾರ್ವಾಟುಗಳಿಗೆ ಒಳಗಾಗುವಾಗ ಸಂಸಾರಿಕ ಜೀವನದಲ್ಲೂ ಅನೇಕ ಬದಲಾವಣೆಗಳು ಆದುವು. ಪುರಾತನ ನಿಯಮಗಳು, ಕಟ್ಟು ಕಟ್ಟಳೆಗಳು ಆಧುನಿಕ ರೀತಿನೀತಿಗಳಿಗೆ ದಾರಿಕೊಟ್ಟು ಮೂಲೆ ಪಾಲಾದುವು. ಸಮಾಜವು ವಿವಾಹವನ್ನು ಆಧುನಿಕ ದೃಷ್ಟಿಯಿಂದ ನೋಡತೊಡಗಿತು. ಆರ್ಥಿಕ ಸ್ಥಿತಿಗತಿಗಳಿಗನುಗುಣವಾಗಿ ಮನುಷ್ಯನು ವಿವಾಹನೆಂಬ ಶಬ್ದದ ಅರ್ಥವನ್ನೇ ಬದಲಾಯಿಸಿದನು. ಪ್ರಜಾಪ್ರಭುತ್ವದ ತಳಹದಿಯ ಮೇಲೆರೆಗೆಸಲ್ಪಟ್ಟ ಸರಕಾರಗಳು ವಿವಾಹ ಪದ್ಧತಿಗಳಲ್ಲಿ ಮಾರ್ಪಾಟು ಗಳನ್ನು ಮಾಡಿದವು. ಸ್ತ್ರೀಪುರುಷರ ಸಂಬಂಧವನ್ನು ಪ್ರತ್ಯೇಕ ದೃಷ್ಟಿಯಿಂದಲೆ ನೋಡಲಾಯಿತು.

ಇಂದಿನ ವಿವಾಹ ಪುರಾತವದ ಕಟ್ಟು ಕಟ್ಟಳೆಗಳ ಪ್ರಕಾರ ನಡೆಯವಂತಾಗಿದ್ದಲ್ಲ. ದಂಪತಿಗಳಾದವರು ಅಂಧಶ್ರದ್ಧೆಗೆ ಬಲಿ ಬೀಳುವಷ್ಟು ಪುಕ್ಕರಲ್ಲ. ವಿವಾಹನೆಂಬುದು ಇಬ್ಬರ ನಡುವೆ ಒಪ್ಪಂದ ಮಾತ್ರ; ಅವಶ್ಯ ಬೇಕಾದಾಗ ಮುರಿಯಬಹುದ ; ಅದೆಂದಿಗೂ ಜನ್ಮಜನ್ಮಾಂತರಗಳ ಬಂಧನವಲ್ಲ ಎಂದು ಜನ ತಿಳಿದಿದ್ದಾರೆ. ಗಂಡನ ದಬ್ಬಾಳಿಕೆಯನ್ನು ಎದುರಾಡದೆ ಸಹಿಸಿ ಮೂಕ ಪಶುವಿನಂತೆ ಹೊಡೆತ ಬಾಳಬೇಕೆಂದಿಲ್ಲ. ದುರಾಚಾರಿ ಪುರುಷನ ಅತಿರೇಖಾಗಿಯೇ ಜೀವಿಸಬೇಕೆಂದಿಲ್ಲ. ತನ್ನ ಹಿತಕ್ಕಾಗಿ, ತನ್ನ ವಿನೋದನೆಗಾಗಿ ಸ್ತ್ರೀ ಎಲ್ಲಿ ಬಂಧನಗಳನ್ನು ಹರಿದೊಗೆದು ತನ್ನ ಇಚ್ಛಾಶಯಾನುಸಾರ ವರ್ತಿಸಬಹುದಾಗಿದೆ ಹೆಂಡತಿಯನ್ನು ಸಾಕಲಾರದ ಗಂಡನು ಅವರ ಧಿಮೊಗುವನು.

ಇಷ್ಟು ಇವನ್ನೆಲ್ಲಾ ನೋಡುವಾಗ ಸ್ತ್ರೀಯರಿಗೆ ಸಮೂಜದಲ್ಲಿ ಹೆಚ್ಚಿನ ಸ್ವತಂತ್ರ ಸಿಕ್ಕಿದೆ ಎಂಬ ಸಂಗತಿ ಸ್ಪಷ್ಟವಾಗಿ ಹೊರಿಯಬತ್ತದೆ. ಇದೇ ರೀತಿಯಲ್ಲಿ ಹೆಕ್ಕವರ ಮತ್ತು ಮಕ್ಕಳ ನಡುವಣ ಸಂಬಂಧದಲ್ಲಿಯೂ ಬದಲಾವಣೆಗಳಾಗಿವೆ. ಹಿಟ್ಟದಾರಭ್ಯದಿಂದ ಸಾಯುವ ತನಕ ಮಕ್ಕಳು ತಂದೆ ತಾಯಿಗಳ ಆಜ್ಞಾಪಾಲಕರಾಗಬೇಕೆಂದಿಲ್ಲ. ಪ್ರಾಯ ಬಂದ ನಂತರ ಮಕ್ಕಳು ತಮ್ಮ ಇಚ್ಛೆಯಿಂದ ತಮ್ಮ ಜೀವನವನ್ನು ರೂಪುಗೊಳಿಸಬಹುದು. ಗಂಡು ಮಕ್ಕಳು ತಮಗೆ ಬೇಕಾದ ಹೆಣ್ಣುಗಿಯರನ್ನು ವಿವಾಹವಾಗಬಹುದು. ಹೆಣ್ಣು ಮಕ್ಕಳು ಬೇಕಾಡ ವರನನ್ನು ಪಡೆಯುವಷ್ಟು ಸ್ವತಂತ್ರರಿರುವರು.

ಮನುಷ್ಯನು ವಿವಾಹದ ಅರ್ಥವನ್ನು ಬದಲಾಯಿಸಿರುವಾಗ ಆ ವಿವಾಹದಿಂದ ವ್ಯಕ್ತಿಗೆ ಅಥವಾ ಸಮೂಜಕ್ಕೆ ಹಿತವಾಗಿದೆಯೇ ಎಂಬುದನ್ನು ತಿಳಿದುಕೊಳ್ಳಲು ಶ್ರಯತ್ನಿಸುವಾಗ ಇಂದಿನ ವಿವಾಹಗಳಿಂದ ಅನೇಕ ಸಂಸಾರಗಳು ಸಂಕಷ್ಟಗಳೆಂಬ ಒಡೆಗೆ ತಗಲಿ ನಜ್ಜುಗುಜ್ಜಾಗಿವೆ ವಿವಾಹ ವಿಚ್ಛೇದನೆಗಳು ಹೆಚ್ಚಿವೆ. ಗಂಡ ಹೆಂಡಂದಿರು ಮನೆಯಲ್ಲಿ ಜಗಳಾಡುವ ಬದಲಾಗಿ ನ್ಯಾಯಾಲಯಗಳ ಮಟ್ಟಿಲೆ ತಮ್ಮ ವಿವಾಹಗಳನ್ನು ಹಾಕಿ ಅವಹೇಳನೀಯ ಪ್ರಸಂಗಗಳನ್ನು ತಂದೊಡ್ಡುತ್ತಿದ್ದಾರೆ ಎಂದು ಸ್ಪಷ್ಟವಾಗಿ ಕಾಣುತ್ತಲಿದೆ. ಆಧುನಿಕ ರೀತಿಯಲ್ಲಿ ವಿವಾಹ ಬಂಧನಕ್ಕೆ ಸಿಲುಕಿರುವರು ಶೀಘ್ರದಲ್ಲೇ ವಿವಾಹ ವಿಚ್ಛೇದನೆಯನ್ನು ಅಪೇಕ್ಷಿಸುತ್ತಲಿದ್ದಾರೆ. ವಿವಾಹ ವಿಚ್ಛೇದನೆಯನ್ನು ಮಾಡಿಕೊಳ್ಳುವವರ ಸಂಖ್ಯೆ ಮತ್ತು ಮಾರುವಿವಾಹ ಮಾಡಿಕೊಳ್ಳುವರ ಸಂಖ್ಯೆ ಹೆಚ್ಚಾಗುತ್ತ ಸಾಗುತ್ತಲಿದೆ.

ಹಿಂದಿನ ಕಾಲದಲ್ಲಿ ಎಳೇ ಪ್ರಾಯದಲ್ಲೇ ವಿವಾಹಗಳು ನಡೆಯುತ್ತಿದ್ದುವು. ಈಗಲಾದರೂ ಎಳೇ ಪ್ರಾಯದವರಿಗೆ ಮದುವೆಯಾಗುವುದೇ ಕಂಡುಬರುವುದಿಲ್ಲ. ಇತ್ತ ಕುಟುಂಬದಲ್ಲಿ ಎಳೇ ಪ್ರಾಯದಲ್ಲಿ ವಿವಾಹಗಳಾಗುವುದಾದರೂ ಐಶ್ವರ್ಯವಂತರು ಮದುವೆಯಾಗುವುದನ್ನು ಆದಷ್ಟು ಮುಂದೂಡುತ್ತಲಿದ್ದಾರೆ. ಹೆಣ್ಣು ಗಂಡುಗಳ ವಿವಾಹ ಪ್ರಾಯ ಏರಿಕೆಯಲ್ಲಿದೆ

ವರದಕ್ಷಿಣೆ ಪಡೆಯುವ ಪದ್ಧತಿಯನ್ನು ನಿರ್ಮೂಲನ ಮಾಡಬೇಕೆಂದು ಸರಕಾರವೂ, ಸಾಮಾಜಿಕ ಕಾರ್ಯಕರ್ತರೂ ಪ್ರಯತ್ನಿಸುತ್ತಿರುವರಾದರೂ ಶ್ರೀಮಂತ ಕುಟುಂಬಗಳಲ್ಲಿ ವರದಕ್ಷಿಣೆಯಿಲ್ಲದೆ ವಿವಾಹ ನಡೆಯುವಂತೆಯೇ ಇಲ್ಲ. ಪರಿಣಾಮವಾದ ಬಡ ಕುಟುಂಬಗಳು ತಮ್ಮ ಬೆಳೆದ ಹೆಣ್ಣುಗಳನ್ನು ತಾಲಾ ತಾಲೇಜು ಗಳಿಗೆ ವಿದ್ಯಾರ್ಜನೆಗಾಗಿ ಕಳುಹಿಸುವ ಪರಿಸ್ಥಿತಿಗೆ ಬಂದೊದಗಿದೆ.

ಯೂರೋಪು ಅಮೇರಿಕಾ ಮೊದಲಾದ ಔದ್ಯೋಗಿಕ ರಾಷ್ಟ್ರಗಳ ಜನರು ಅವರ ಆರ್ಥಿಕ ಸ್ಥಿತಿಗತಿಗಳಿಗನುಗುಣವಾಗಿ ವಿವಾಹದ ಆವಶ್ಯಕತೆಯನ್ನು ನಿರ್ಧರಿಸಿರುತ್ತಾರೆ. ಸ್ತ್ರೀಯರಾಗಲಿ, ಪುರುಷರಾಗಲೀ ಆರ್ಥಿಕ ಸ್ವಾವಲಂಬನೆ ಹೊಂದಿದೆ ವಿವಾಹ ಬಂಧನಕ್ಕೆ ಸಿಲುಕಿ ಬೀಳುವುದಿಲ್ಲ. ಸಂಸಾರವು ಸುಖಮಯವಾಗಿ ಸಾಗುವುದಕ್ಕೆ ಮೊದಲಾಗಿ ತಮ್ಮ ಆರ್ಥಿಕ ಸ್ಥಿತಿಗತಿಗಳು ಭದ್ರವಿರಬೇಕೆಂದು ಎಂದೇ ಅವರು ಅಪೇಕ್ಷಿಸುತ್ತಾರೆ ಆದುದರಿಂದ ವಿವಾಹ ಯೋಗ್ಯ ವಯಸ್ಸು ದಾಟಿದರೂ ಅನೇಕರು ತಮ್ಮ ಆರ್ಥಿಕ ಸ್ಥಿತಿ ಉತ್ತಮಗೊಳ್ಳದೆ ಭಾವೀ ಕುಟುಂಬವು ಸುಖಭರಿತವಾಗದೆಂಬ ಭಾವನೆ ಕಟ್ಟಿಕೊಂಡು ವಿವಾಹವಾಗುವಂತಿಲ್ಲ. ಆದುದರಿಂದ ವಿವಾಹಗಳೇ ಕಡಿಮೆಯಾಗಿವೆ. ಇದರಿಂದ ಜನನ ಸಂಖ್ಯೆಯೂ ಕಡಿಮೆಯಾಗಿದೆ ಭಾರತದಲ್ಲಿ ಜನಸಂಖ್ಯೆಯೂ ಮತ್ತು ಆಹಾರಾಭಾವದ ಸಮಸ್ಯೆಗಳೂ ಇತ್ತೀಚೆಗೆ ತೀವ್ರವಾಗಿರುವಾಗ ವಿವಾಹಗಳು ಕಡಿಮೆಯಾಗುವುದು ಹಾಗೂ ತೀರಾ ಕರುಣೆಹುಟ್ಟುವ ಆದಷ್ಟು ವಿಟ್ಟಗೆ ಆವಿವಾಹಿತರಾಗಿದ್ದಲ್ಲಿ ಹಿತಕಾರಿಯಾಗುವುದು

ಹೀಗೆ ಮುಂದಿನ ವರ್ಷಗಳಲ್ಲಿ ವಿವಾಹದ ಅರ್ಥ, ಆದರ ಆವಶ್ಯಕತೆಗಳು ತೀರಾ ಬದಲಾವಣೆ ಹೊಂದುವುದು ಖಂಡಿತ. ಗಂಡು ಹೆಣ್ಣುಗಳ ಸಂಬಂಧದ ಉದ್ದೇಶ ಬದಲಾಗುವುದು. ಕಾಲದ ಬದಲಾವಣೆಯೊಡನೆ ಸಂಸಾರ ಬಂಧನದ ರೂಪವೂ ಆವಶ್ಯಕತೆಗಳೂ, ಬದಲಾವಣೆಗಳಿಗೆ ಒಳಗಾಗುವವು.

ನ ಭಾ

ಡಿಫ್ತೀರಿಯಾ ಮತ್ತು ನಾಯಿ ಕೆಮ್ಮುಲ್ಲು.

[ಕೊಡಗು ವೈದ್ಯ ಜಿಲಾಪೆಯವರಿಂದ]

ಡಿಫ್ತೀರಿಯ ಪಾಯಿಲೆಯು ಕ್ರಿಮಿಗಳಿಂದುಂಟಾಗುವ ಗಂಟಲಿನ ಒಂದು ಅಂಟುರೋಗ ಈ ಕಾಯಿಲೆಯು ೧ ವರ್ಷದಿಂದ ೧೦ ವರ್ಷದ ಮಕ್ಕಳಲ್ಲಿ ಬಹಳ ಜಾಸ್ತಿಯಾಗಿ ಕಂಡು ಬರುವುದು. ಇದು ಹೆಚ್ಚಾಗಿ ಶರತ್ಕಾಲ ಮತ್ತು ಚಳಿಗಾಲದಲ್ಲಿ ಕಂಡು ಬರುವುದು ಈ ಪಾಯಿಲೆಯು ಮಕ್ಕಳಿಂದ ಮಕ್ಕಳಿಗೆ ಕೆಮ್ಮುವಾಗ ಮತ್ತು ಮೂತನಾಡುವಾಗ ಹಾರುವ ಎಂಜಲು ಹನಿಗಳಿಂದ ಹರಡುತ್ತವೆ.

ಈ ಕಾಯಿಲೆಯು ಪ್ರಾರಂಭವಾದಾಗ ಗಂಟಲಿಗೆ ಶರೀರದಲ್ಲಿ ಅಲಸ್ಯ ಕಂಡು ಬರುತ್ತದೆ. ಊಟವೂಡಲು ಇಸ್ಟ ಪಡುವುದಿಲ್ಲ. ಶರೀರದ ಅಂಗಾಂಗಗಳಲ್ಲಿ ನೋವು ಕಂಡುಬರುತ್ತದೆ. ಸ್ವಲ್ಪ ಮಟ್ಟಿಗೆ ಜ್ವರಕಾಣುತ್ತದೆ. ಗಂಟಲಿನ ಒಳಗಿರುವ ಮೂಸ ಗ್ರಂಥಿಗಳ ಮೇಲೆ ಹಾಲಿನ ಕೆನೆಯ ರೂಪದಲ್ಲಿರುವ ತೆಳುವಾದ ಪೊರೆ ಕಂಡು ಬರುವುದು. ಮಗುವಿನ ಕತ್ತಿನಲ್ಲಿ ಹೊರಗಡೆ ಗ್ರಂಥಿಗಳು ದಪ್ಪವಾಗುವುವು. ಮಗುವು ಬಹಳ ನಿತ್ರಾಣದಲ್ಲಿದ್ದು ಪಾಖಾನೆಯಾಗಲನ್ನು ಕೂಡ ನಿಂಗಲು ಕಷ್ಟಪಡುವುದು. ಹಾಗೆ ಮಾಡಿದರೂ ಅನೇಕ ಸಲ ಸೂಸಿನಿಂದ ಹೊರಗೆ ಬರುವುದು

ಈ ಪಾಯಿಲೆಯು ಕಂಡು ಬಂದ ತಕ್ಷಣವೇ ಚಿಕಿತ್ಸೆ ಮಾಡಬೇಕು. ಒಂದೆರಡು ದಿನ ನಿಧಾನವಾದಲ್ಲು ಮಗುವಿನ ಪ್ರಾಣಕ್ಕೆ ಅಪಾಯವು ಒದಗ ಬಹುದು ಆದ್ದರಿಂದ ಅವ್ಯಕ್ತಿಗೆ ಕರೆದು ತರುವುದು ಅಗತ್ಯಕರವಾದುದು.

ನಾಯಿ ಕೆಮ್ಮುಲ್ಲೂ ಕೂಡ ಡಿಫ್ತೀರಿಯಾ ಪಾಯಿಲೆಯಂತೆಯೇ ಚಿಕ್ಕ ಮಕ್ಕಳಲ್ಲಿ ಜಾಸ್ತಿಯಾಗಿ ಕಂಡು ಬರುವುದು ಮತ್ತು ಮಕ್ಕಳಿಂದ ಮಕ್ಕಳಿಗೆ ಕೆಮ್ಮುವಾಗ ಹಾರುವ ಎಂಜಲು ಹನಿಗಳಿಂದ ಹರಡುತ್ತದೆ.

ಈ ಪಾಯಿಲೆಯು ಮೊದಲಿನಲ್ಲಿ ಸಾಧಾರಣ ಕೆಮ್ಮಿನಂತೆ ಸ್ವಲ್ಪ ಜ್ವರದಿಂದ ಪ್ರಾರಂಭವಾಗುವುದು. ಸ್ವಲ್ಪ ದಿನದಲ್ಲಿಯೇ ಈ ಕೆಮ್ಮಲು ನಿಲೆತದ ರೂಪವನ್ನು ತಾಳಿ ವಾಂತಿಯೊಗಲು ಮೊದಲಾಗುವುದು. ಕೆಮ್ಮುವಾಗ ಶ್ವಾಸವು ಕಟ್ಟಿ ಕಣ್ಣು ಮುಂಗಿನಲ್ಲಿ ನೀರು ಬರುವುದು. ಅನೇಕ ಸಲ ಮಕ್ಕಳಿಗೆ ಈ ಪಾಯಿಲೆಯು ಪರಿಣಾಮವಾಗಿ ಸನ್ನಿರೋಗ ಕಂಡುಬರುತ್ತದೆ. ಮೂಗಿನಲ್ಲಿ ರಕ್ತ ಸುರಿಯಲು ಮೊದಲಾಗುವುದು. ತಿಂದ ಆಹಾರವು ವಾಂತಿಯೊಗುವುದರಿಂದ ಶರೀರವು ಕ್ಷೀಣಿಸುವುದು. ವತ್ಸಬ್ಯಾಂಶೋ ನ್ಯೂನೋನಿಯಾ ಎಂಬ ಪಾಯಿಲೆಯು ಅನೇಕ ಸಲ ಸಂಭವಿಸಬಹುದು.

ಈ ಮೇಲೆ ಹೇಳಿದ ಪಾಯಿಲೆಗಳು ಬಂದರೆ ಹಾಗೆ ಚಿಕ್ಕ ವಯಸ್ಸಿಗೆ ಇಂತಾಕ್ಯು ಲೇಶನ್ ಮಾಡಬಹುದು. ೬ ತಿಂಗಳಿನ ಮಕ್ಕಳಿಗೂ ಕೂಡ ಇದನ್ನು ಮಾಡಿಸಬಹುದು. ಎರಡು ಪಾಯಿಲೆಗಳನ್ನೂ ಒಂದೇ ಇಂಜಕ್ಷನ್ ಕೊಡುವುದರ ಮೂಲಕ ತಡೆಗಟ್ಟಬಹುದು. ಇದಕ್ಕೆ ಹೆಸರು "ಡಿಫ್ತೀರಿಯಾ ಪರ್ಟ್ಯುಸಿಸ್ ಕಂಬೈನ್ಡ್ ಪ್ರೋಫಿಲೇಕ್ಟಿಕ್ ವ್ಯಾಕ್ಸೀನ್" ಎಂದು. ಇದರ ಬೆಲೆಯು ಕೂಡ ಬಹಳ ಕಮ್ಮಿ. ಒಂದು ಬಾಟ್ಲಿಗೆ ಸುಮಾರು ೪ ರೂಗಿ ಆಗಿ. ಒಂದು ಬಾಟ್ಲಿನಲ್ಲಿ ಮೂರು ಮಕ್ಕಳಿಗೆ ಇಂಜಕ್ಷನ್ ಮಾಡಿಸಬಹುದು

ಈ ಪಾಯಿಲೆಗಳು ಬಂದ ಮೇಲೆ ಚಿಕಿತ್ಸೆಮಾಡುವುದಕ್ಕೆ ಹೆಚ್ಚಿನ ಕ್ರಮವು ಮತ್ತು ಖರ್ಚು ಆಗುವುದರಿಂದ, ಕಡಿಮೆ ಖರ್ಚಿನಿಂದ ತಡೆಗಟ್ಟುವುದೇ ಉತ್ತಮವೆಂದು ಹೇಳಲೇಕಾಗಿಲ್ಲ.

ಶ್ರೀ ಕೆ. ಯಂ. ಮೊಗಪ್ಪನವರು,
"ಕೊಡಗು" ಏಜೆಂಟರು,
ಸೋಮವಾರಪೇಟೆ.

ಇಂದಿನ ಈ ಕಷ್ಟ ಜೀವನಕ್ಕೆ ಕಾರಣರಾರು?

ಲೇ:-ಗುಪ್ತ ಮಡಿಕೇರಿ

ದಿನದಿಂದ ದಿನಕ್ಕೆ ಏರುತ್ತಿರುವ ಜೀವನಾವಶ್ಯಕ ವಸ್ತುಗಳ ಬೆಲೆಯಿಂದ ನನಗೆ ತಲೆಸಿರಿಗೆದ್ದಂತಾಗಿ "ಜೀವನವೇ ಸಾಕೆನಿಸಿ ಹೋಗಿದೆ. ಸರಕಾರವು ಬೆಲೆಯನ್ನು ಹತೋಟಿಗೆ ತಂದು ಬಡವನ್ನು ಹಸಿಗರಗೆಳೆಯಬಹುದೆಂಬ ವಿಶ್ವಾಸವಿಲ್ಲ ಸಾಕಾಗಿದೆ. ಸರಕಾರದ ಕೈಯಿಂದ ಏನೂ ಸಾಧಿಸಲಾಗುವುದಿಲ್ಲವೆಂಬ ನಂಬಿಕೆ ದಿನ ದಿನಕ್ಕೆ ಬೇರೂರುತ್ತಿದೆ ಸರಕಾರವು ನಿಯಂತ್ರಣ ಆಜ್ಞೆ ಮಾಡಿದರೂ ಅದು ಜಾರಿಯಲ್ಲಿ ಬರದೆ ನಮ್ಮ ಜೀವನ ಮೇಲೆಗಿನ ಹಾಸಿಗೆಯೊಳಗುತ್ತಿರುವದನ್ನು ಅನುಭವಿಸಿ ಸಾಕಾಗಿದೆ. ಈ ಬೆಲೆಯ ಏರುವಿಕೆಗೆ ಕಾರಣವೇನೆಂಬುದು ಹುಡುಕಲು ಹೊರಟು ಅ ಪ್ರಯತ್ನದಲ್ಲಿ ನನಗೆ ದೊರೆತ ಉತ್ತರ, ಅನುಭವಗಳನ್ನು ಎಲ್ಲರ ಗಮನಕ್ಕಾಗಿ ಬರೆಯುತ್ತಿರುವೆನು

ನಾನು ಅಕ್ಕಿ ಉಪಯೋಗಿಸುವವನಾದ್ದರಿಂದ ಮೊದಲಾಗಿ ಬತ್ತ ಬೆಳೆಯುವ ರೈತನನ್ನಲ್ಲಿಗೆ ಹೋಗಿ ಬತ್ತದ ಬೆಲೆಯನ್ನು ಸ್ವಲ್ಪವಾದರೂ ಕಡಿಮೆ ಮಾಡಲೊಪ್ಪಿದರೆ ನನಗೆ ಹಿತವಾಗುವದು; ದಯಮಾಡಿ ಹಾಗೆ ಮಾಡಿರಿಎಂದು ಕೇಳಿದೆನು. ಆದಕ್ಕೆ ರೈತನು ಈ ರೀತಿ ಉತ್ತರವಿತ್ತನು 'ಇಲ್ಲಿ ನೋಡಿ, ಬಡ ರೈತನು ದುಡಿದು ಬೆಳೆಸುವ ಧಾನ್ಯದ ಬೆಲೆ ಕಡಿಮೆ ಮಾಡಬೇಕೆಂದು ಕೂಗಾಡುವದು ಇಂದಿನ ಒಂದು ಘೋಶನೆಯಂತಾಗಿದೆ. ಎಲ್ಲಿಯವ ಕಡೆ ಹೋದರೂ ಬಡ ರೈತನಿಗೆ ಪೆಟ್ಟು ಗುದ್ದುಗಳು, ರೈಲ್ವೆ, ಅಂಚೆ ಕೆಲಸಗಾರರ, ಗಿರಣಿ ಕಾರ್ಮಿಕರ ಸಂಘಗಳಲ್ಲಿರುವಂತೆ ರೈತರಾದ ನಮಗೆ ಸಂಘ,ಸಂಸ್ಥೆಗಳಿಲ್ಲ. ನಮ್ಮಲ್ಲಿ ಒಗ್ಗಟ್ಟು ಇಲ್ಲ. ಅನಕ್ಷರಸ್ಥರಾಗಿ ಅವಿದ್ಯಾವಂಶರಾಗಿರುವ ನಾವು ಸಂಘಟನೆ ಮಾಡಿಕೊಳ್ಳಲಾರೆವು ಆದ್ದರಿಂದ ನಾವು ಬೆಳೆಸಿದ ಬತ್ತದ ಮೇಲೆ ಖಡ್ಡಾಯ ನಿಯಂತ್ರಣ ವಿದೆ. ಅದೇ ಅಲ್ಲ, ಅಧಿಕಾರಿಗಳು ತಮ್ಮ ಇಚ್ಛೆಯಂತೆ ಅಂದಾಜು ಮಾಡಿ ಮನೆಯಿಂದ ಕೊಂಡೊಯ್ಯುವರು. ನನ್ನ ಕಣಜದಲ್ಲಿ ೫೦ ಒಟ್ಟೆ ಬತ್ತವಿದ್ದರೆ ೭೦ ಒಟ್ಟೆ ಇದೆಯೆಂದು ಅಂದಾಜುಮಾಡಿ ೫೦ ಒಟ್ಟೆ ಸರಕಾರದ ವಶಕ್ಕೊಪ್ಪಿಸಬೇಕೆಂದು ಆಜ್ಞೆಮಾಡುವರು. ಪರಿಣಾಮವಾಗಿ ಬೆಳೆಸುವ ನಮಗೇ ಉಣಲು, ಮುಂದಿನ ವರ್ಷದ ಆರಂಭವಾಗಲು ಬೇಕಾದ ಧಾನ್ಯವಿಲ್ಲದಂತಾಗಿದೆ. ನಮಗೆ ಬೇಕಾದ ಇತರ ವಸ್ತುಗಳ ಬೆಲೆಗೆ ನಿಯಂತ್ರಣವಿದ್ದರೂ ಆ ಬೆಲೆಗೆ ನಮಗೆ ದೊರೆಯುವದಿಲ್ಲ. ಆದ್ದರಿಂದ ಬತ್ತದ ಬೆಲೆಯನ್ನು ಕಡಿಮೆ ಮಾಡಬೇಕೆನ್ನುವಹಕ್ಕು ನಮಗಿಲ್ಲ ಇಂದಿನ ಪರಿಸ್ಥಿತಿಯಲ್ಲಿ ವಿಪರೀತ ತೊಂದರೆಗೊಳಗಾದವರಿದ್ದರೆ ಅದು ರೈತರ ವರ್ಗ.' ರೈತನ ಈ ಮಾತು ನಿಜವೆಂದು ನನಗೆ ತೋರಿತು.

ಹಾಗಾದರೆ ಇತರ ವಸ್ತುಗಳ ಬೆಲೆ ಏರಿಸಲು ವ್ಯಾಪಾರಿಯೇ ಕಾರಣವಿರಬೇಕೆಂದು ಅವನಲ್ಲಿಗೆ ಹೋಗಿ "ನಿಮ್ಮ್ಯಾಬಟ್ಟೆ ಪಾತ್ರೆಗಳ ಬೆಲೆ ಏಕೆ ಏರಿಸುವಿರಿ? ವಸ್ತುಗಳ ಸಾಕಷ್ಟಿಲ್ಲವೆಂದೇ ಸಂಸಾರ ಕೂಡ ಹೂಡಲಾರೆವು ಪ್ರತಿದಿನ ದುಡಿದೂ ದುಡಿದೂ ಸಾಕಾಗಿ ಹೋಗಿದೆ. ಒಂದು ದಿನ ಕೆಲಸ ಮಾಡದಿದ್ದರೆ ಉಪವಾಸ ಬೀಳಬೇಕಾಗುವದು. ನಾವು ವಾಸಿಸುವ ಮನೆ ಅಯ್ಯೋ, ಆವನ್ನು ಮನೆ ಎನ್ನಲಾಗುವದೇ? ಛೆ,ಗೆ ಕೊಡಲ್ಪಡುವ ರೇಶನ್ನಿನಿಂದ ಜೀವ ಹೊಸಗಾದೆ ಉಳಿಯುವದು ಕಷ್ಟ! ನಿಕ್ಕಾಣನಾಗಿ ನಾನು ಕೆಲಸ ಮಾಡಲಾರೆ. ಆದಕ್ಕಾಗಿ ನನ್ನನ್ನು ದಕ್ಷ ಕೆಲಸಗಾರನೆನ್ನಲಿನ್ನು ಕಾರಿ ಒಮ್ಮೆ ಮಜದೂರನೆಂದರೆ ಕೀಳಂತು ತುಂಬಿನ ಸಾವಿರ ಸಂತಾನವರೆಗೂ ಅವರು ಮಜದೂರರೆ! ವಿದ್ಯೆ, ಉತ್ತಮ ಬಟ್ಟೆ, ನಿವಾಸಸ್ಥಾನ, ಕೊಂಗಸ ಮಕ್ಕಳನ್ನು ಬಯಸುವದೇ ಅಪರಾಧದಂತಾಗಿದೆ! ದಿನಕ್ಕೆ ದೊರೆಯುವ ಒಂದೂವರೆ ರೂಪಾಯಿಯಲ್ಲಿ ನನ್ನ ಖರ್ಚನ್ನು ನಾನು ಗಟ್ಟುವದೆಂತು? ನಾನು ದರಿದ್ರನಾಗಿ ಹುಟ್ಟಿದೆನೆ. ದರಿದ್ರನಾಗಿಯೇ ಸಾಯುವೆನೆ ? ಮಜದೂರನ ಮಾತು ಕೇಳಿ ಕನಿಕರವಾಯಿತು ಎಲ್ಲಿಯವ್ವ ಎಲ್ಲರೂ ಕಷ್ಟಪಡುವವರೆ. ಪ್ರಕೆಯೊಬ್ಬನಿಗೂ ಆತನಿಗೆ ದೊರೆಯುತ್ತಿರುವದು ಆತನ ಖರ್ಚಿಗೆ ಸಾಲದು. ಹಾಗಿರುವಾಗ ಈ ವಿಪರೀತ ಬೆಲೆಯು ಕಾರಣವೇನು? ಉತ್ಪಾದನೆಯು ಜಾಗೂ ಬೇಕೆಯು ಬೆಲೆಗಳಲ್ಲಿನ ಅಂತರವು ಯಾರ ಕಿವಿಗೆ ಕೋಗುತ್ತಿಲ್ಲ ಎಲ್ಲ ಒಡೆಯಲಾರದೆ ಒಗಟು. ಓತ್ತುತ್ತಿರುವ ನಿಮಗೇನಾದರು ಇದರ ಉತ್ತರ ಹೊಳೆಯಿಸುವದೇ?

ತಿಳಿಸಿರಿ.

ಭೂಮಿ, ಕೋಟಿ ಜಾಗ ಪೇಟೆಯಲ್ಲಿ ಮನೆ ಅಥವ ನಿವೇಶನ. ಪೂರಲಿರುವವರು ಮತ್ತು ಕೊಂಡುಕೊಳ್ಳಲಿಚ್ಛಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿಸಿ. ಅಲ್ಲಿಯೆ ಬೇಕಾದವರಿಗೆ ಕಂಡಿಯವೆನ್ನೆ. ಹಳ ನಾತ್ಮ ಉಳಿ ಎಲ್ಲ ಮತ್ತು ಕೋಣಗಳನ್ನೂ ಒಗಿಸಿ ಕೊಡಲಂಗಳುವುದು. ಬೇಕಾದವರಿಗೆ ತಕ್ಕಂತೆ ಬೇಕಾದ ತಾರೀಕಿನ ಎಂಟು ದಿನಗಳಿಗೆ ಮುಂದೆ ಕಳುಹಿಸಬೇಕಾಗಿದೆ. ವಿವರಗಳಿಗೆ ಈ ಪತ್ರಿಕೆಗೆ ಬರೆಯುವುದು.

P. A. N. & SONS.
Commission Agent,
Gonicoppal
26-21 S. Coorg

SALE.

About six thousand the best variety of orange plants are for sale at the rate of Rs 30/- per hundred. Hight of the plants range between 2½ to 3½ feet. For further particulars, please write to the below address.

M. P. Appayya
Chinnalli Estate
Somwarpet Post
North Coorg

ಕೊ ಡ ಗು

ತಾ. ೨೯-೬-೧೯೫೧ನೇ ಶುಕ್ರವಾರ

"ಅಭಿಪ್ರಾಯ ಸ್ವಾತಂತ್ರ್ಯವು ನಮ್ಮ ಜನ್ಮಸಿದ್ಧ ಹಕ್ಕು. ಅದು ರಾಜ್ಯಘಟನೆಯಿಂದ ಸಂಪೂರ್ಣ ಮುಸ್ಕಿಡೆ ಪಡೆಯುವ ವರೆಗೆ ನಾವು ಮೌನ ತಳೆಯಲಾರೆವು."

ರಾಜ್ಯ ಘಟನೆಯ ೧೯ (೨) ನೇ ಕಲಮು.

ರಾಜ್ಯ ಘಟನೆಯ ಳ್ಳಿ ಇತ್ತೀಚೆಗೆ ಮಾಡಿದ ತಿದ್ದುಪಡಿಗಳಲ್ಲಿ ಕಲವು ಅತ್ಯಾವಶ್ಯಕವಾದವುಗಳಾದರೂ ಸೆಕ್ಷನ್ ೧೯ (೨) ರಲ್ಲಿ ಮಾಡಿರುವ ತಿದ್ದುಪಡಿಯು ಹಾನಿಕಾರಕವಾಗಿದೆ. ಈ ತಿದ್ದುಪಡಿಯ ಪ್ರಕಾರ ಸರಕಾರವನ್ನು ಟೀಕೆ ಮಾಡುವ ಯಾವುದೇ ಪತ್ರಿಕೆಯು ಕತ್ತುಹಿಸುಕಲವದು ಸುಲಭವಾಗಿದೆ. ನಮ್ಮ ರಾಜ್ಯ ಘಟನೆಯಲ್ಲಿ ಪ್ರತಿಯೊಬ್ಬ ನಾಗರೀಕನಿಗೆ ವಾಕ್ ಸ್ವಾತಂತ್ರ್ಯ, ಅಭಿವ್ಯಾಯ ಸ್ವಾತಂತ್ರ್ಯ ಕೊಡಲ್ಪಟ್ಟಿದೆ ಆದರೆ ಈಗ ಜಾರಿಯಲ್ಲಿ ತಂದಿರುವ ತಿದ್ದು ಪಡಿಯ ಪ್ರಕಾರ ಪತ್ರಿಕೆಗಳ ಅಭಿವ್ಯಾಯ ಸ್ವಾತಂತ್ರ್ಯಕ್ಕೆ ಗದಾ ಪ್ರಹಾರವಾಗಿದೆ.

ಇಂಥಾ ತಿದ್ದುಪಡಿಗಳನ್ನು ಜಾರಿಯಲ್ಲಿ ತರುವಾಗ ದೇಶೀಯರ ಅಭಿಮತ ತೆಗೆದು ನೋಡಬೇಕಿತ್ತು. ಅದು ಸಾಧ್ಯವಿಲ್ಲದಿದ್ದರೆ ಅಖಿಲ ಭಾರತ ಪತ್ರಿಕಾ ಸಂಪಾದಕರ ಪ್ರಾತಿನಿಧ್ಯವನ್ನಾದರೂ ಕೇಳಿ ಬೇಕಿತ್ತು. ಸರಕಾರವು ಇದಾವುದನ್ನೂ ಮಾಡದೆ ಅತಿ ತುರಿತದಿಂದ ನಿರಂಕುಶ ರೀತಿಯಲ್ಲಿ ಈ ತಿದ್ದು ಪಡಿಯನ್ನು ತಂದು ಪಾಸು ಮಾಡಿತು. ಅತ್ಯಲ್ಪ ಪೈಸಿಟೇಟರೂ ತ್ವರಿತ ರೀತಿಯಿಂದಲೇ ಸಹಿಮಾಡಿದರು!

ಈ ತಿದ್ದುಪಡಿಯು ಭಾರತ ಪತ್ರಿಕಾ ಸ್ವಾತಂತ್ರ್ಯದ ಬುಡಕ್ಕೇ ಕೊಡಲಿ ಹಾಕಿದೆ. ನಿರ್ಭೀತಿಯಿಂದ ತಮ್ಮ ಅಭಿಪ್ರಾಯವನ್ನು ಜನತೆಯ ಮುಂದಿಡಬಲ್ಲ ಪತ್ರಿಕೆಗಳೇ ನಾಡಿನ ಜನತೆಯನ್ನು ಮುನ್ನಡೆಸುವ, ಹಾಗೂ ಸರಕಾರವನ್ನು ಯೋಗ್ಯ ಪಥದಲ್ಲಿ ಸಾಗಿವಂತೆ ನಿರ್ದೇಶಿಸುವ ಶಕ್ತಿಗಳು. ಪ್ರಜಾಸ್ವಾಭುತ್ವವು ಬೆಳೆಯಲು ಇಂಥ ಪತ್ರಿಕೆಗಳೇ ಮೂಲ ಕಾರಣ. ಆ ಭಾರತದ ಪತ್ರಿಕೆಗಳ ಗಂಟಲನ್ನು ಈ ತಿದ್ದುಪಡಿಯು ಹಿಡಿದಿದೆ. ಅಭಿವ್ಯಾಯ ಸ್ವಾತಂತ್ರ್ಯವು ಹತ್ತಿಕ್ಕಲ್ಪಟ್ಟಿದೆ.

ಪಂಡಿತ ನೆಹರೂರವರು ಈ ತಿದ್ದು ಪಡಿಯು ಸತ್ಪತ್ರಿಕೆಗಳ ಸ್ವಾತಂತ್ರ್ಯ ಹರಣಕ್ಕಾಗಿಯಲ್ಲ; ಮುಂದೆ ಬರಬಹುದಾದ ಅನಿಷ್ಟ ಸರಂಪರೆಯ ಕಾಲದ ಎಚ್ಚರಿಕೆಗಾಗಿ ಎಂದು ಹೇಳಿದರೂ ಅದು ಯಾರನ್ನೂ ತೃಪ್ತಿಪಡಿಸುವದಿಲ್ಲ. ಈ ತಿದ್ದುಪಡಿಯ ಸಹಾಯದಿಂದ ಸರಕಾರವನ್ನು ಟೀಕಿಸುವ ಯಾವದೇ ಪತ್ರಿಕೆಯ ಬಾಯಿಮುಚ್ಚಿಸುವದು ಸಾಧ್ಯವಿದೆ. ನೆಹರೂ ಸರಕಾರವು ಇಂಥಾ ಅಯೋಗ್ಯ ತಿದ್ದುಪಡಿಗೆ ಅಪಕಾರ ಕೊಡಬಾರದಿತ್ತು.

ಅಂದು ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ದೇಶದ ಪತ್ರಿಕೆಗಳು ಕಾಂಗ್ರೆಸ್ಸನ್ನು ಎತ್ತಿ ಹಿಡಿದು ಬ್ರಿಟಿಷರ ವಿರುದ್ಧ ದೇಶದ ಬಿಡುಗಡೆಗಾಗಿ ಅಪೂರ್ವ ತ್ಯಾಗಬುದ್ಧಿಯಿಂದ ಹೋರಾಡಿದವು ಕಾಂಗ್ರೆಸಿನ ಮುಖಪತ್ರಗಳಾಗಿ ಕಾಂಗ್ರೆಸಿನ ಸಂದೇಶವನ್ನು ನಾಲ್ದೆಸೆಗೂ ಹಬ್ಬಿಸಿ ಕಾಂಗ್ರೆಸ್ಸನ್ನು ಅಧಿಕಾರಕ್ಕೆ ತಂದ ಜನಾಬ್ದಾರಿಯು ಅಖಿಲಭಾರತ ಪತ್ರಿಕೆಗಳಿಗೆ ಕೂಡಾ ದುದೆಂಬುದರಲ್ಲಿ ಸಂಶಯವಿಲ್ಲ. ಅಧಿಕಾರ ಪೀಠದಲ್ಲಿ ಕುಳಿತ ಕಾಂಗ್ರೆಸ್ಸು, ಅಧಿಕಾರ ಮದದಿಂದ ತಪ್ಪು ಹೆಜ್ಜೆ ಇಡುತ್ತಿರುವಾಗ ಅದನ್ನು ಸರಿದಾರಿಗೆ ಬರುವಂತೆ ಎಚ್ಚರಿಸುತ್ತಿರುವ ಪತ್ರಿಕೆಗಳಿಗೆ ಗದಾಪ್ರಹಾರ ಮಾಡಲು ಹೊರಟಿರುವ ಈ ನೀತಿಯು ಖಂಡನೀಯವಾದುದು. ಮುಂಬರುವ ಚುನಾವಣೆಯ ಕಾಲದಲ್ಲಿ ತಮಗೆ ಅಸತ್ಯವಾಗಿ ತೋರುವ ಪತ್ರಿಕೆಗಳ ಬಾಯಿಮುಚ್ಚಿಸಲು ಈ ತಿದ್ದುಪಡಿಯೂ ಗಿದೆಯೆಂದು ಕೇಂದ್ರ ಶಾಸನ ಸಭೆಯಲ್ಲಿ ಕೆಲವು ಸದಸ್ಯರು ಹೇಳಿದ ಮಾತಿನಲ್ಲಿ ಸತ್ಯತೆ ಇಲ್ಲದಿಲ್ಲ. ಇಂಥಾ ಹಿಂದು ಸ್ವಾತಂತ್ರ್ಯಹರಣ ಕಾರ್ಯವು ಸರ್ವ ಎದೆಗಳಿಂದ ಎದುರಿಸಲ್ಪಡಬೇಕು.

ಮೊನ್ನೆಯೊಗಿ ಬೊಂಬಾಯಿಯಲ್ಲಿ ಸೇರಿದ ಅಖಿಲ ಭಾರತ ಪತ್ರಿಕಾ ಸಂಪಾದಕರ ಸಮ್ಮೇಳನವು ಸರಕಾರದ ನೀತಿಯನ್ನು ಖಂಡಿಸಿ ನಿರ್ಣಯ ಮಾಡಿದೆ. ಸರಕಾರದ ನಿರಂಕುಶ ನೀತಿಯನ್ನು ವಿರೋಧಿಸಿ ತಮ್ಮ ಅತೃಪ್ತಿಯನ್ನೂ ನಿರೋಧವನ್ನೂ ವ್ಯಕ್ತಮಾಡಲೋಸುಗ ತಾ. ೧೩-೬-೫೧ ರಲ್ಲಿ ದೇಶವ್ಯಾಪ್ತ ಎಲ್ಲಾ ಪತ್ರಿಕೆಗಳು ಪ್ರಕಟವಾಗದೆ ಹರತಾಳ ಆಚರಿಸುವವು. ಆದೇ ಅಲ್ಲ, ಈ ಕರಾಳಶಾಸನವನ್ನು ಹಿಂಪಡೆಯುವ ವರೆಗೆ ಪತ್ರಿಕೆಗಳು ಸರಕಾರದೊಡನೆ ಈ ಹಿಂದಿನಂತೆ ಸಹಕರಿಸಲಾರವು. ದೇಶದ ಪ್ರತಿಯೊಬ್ಬ ಪ್ರಜೆಯೂ ಸರಕಾರದ ನೀತಿಯಿಂದ ದೇಶಕ್ಕೊದಗಿರುವ ಗಂಡಾಂತರವನ್ನು ಲಕ್ಷಿಸಿ ಅಖಿಲ ಭಾರತ ಪತ್ರಿಕಾ ಸಂಪಾದಕರ ನಿರ್ಣಯಕ್ಕೆ ಬೆಂಬಲಸೂಚಿಸಬೇಕಾಗಿದೆ ಕರ್ತವ್ಯವಾಗಿದೆ.

ವರ್ತಮಾನ.

ಪ್ರಾಮಾಣಿಕ ಕಾರ್ಯಕರ್ತರಿಂದ ಕೂಡಿರುವ ಶೃಂಗಾರಿಯಲ್ಲಿನ ಶ್ರೀ ಶಾರದಾಂಬಾ ಸೇವಾ ಸಮಿತಿಯ ಕೆಲಸ ಕಾರ್ಯಗಳನ್ನು ಪರಿಶೀಲಿಸಿದ ಅಧಿಕಾರಿಗಳು ಸಂತೃಪ್ತಿ ವ್ಯಕ್ತಪಡಿಸಿರುವುದಾಗಿ ತಿಳಿದು ಬಂದಿದೆ. ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಕೆ. ಎಸ್. ಸುಬ್ರಹ್ಮಣ್ಯ ಅಯ್ಯರ್ ಅವರು ಸಮಿತಿಯ ಕಾರ್ಯಕ್ರಮಗಳನ್ನು ವಿವರಿಸಿದರು.

ಕಾರೇಕಾ ತಾ-೬-೫೧ ರಲ್ಲಿ ನಡೆಯುವದೆಂದು ನಿಶ್ಚಯಿಸಲ್ಪಟ್ಟಿದ್ದ ಕೊಡಗು ನ್ಯಾಯವಿಧಾಯಕ ಸಭೆಯು ವಿಮಾನಗತಿ ತಾ. ೭-೭-೫೧ ರಲ್ಲಿ ನಡೆಯುವದು.

ಕೊಡಗು ಚೇಂಬರ್ ಫಾರ್ ಕಾಮರ್ಸ್ ಇನ್ ಇಂಡಸ್ಟ್ರೀಸ್ ಸಂಸ್ಥೆಯ ಶ್ರೀ. ಜಿ. ಶಂಕರಪ್ಪನವರು ತಾ. ೪-೭-೫೧ ರಲ್ಲಿ ನಿವೃತ್ತರಾಗುವರು. ಅವರ ಬದಲು ಆ ಸ್ಥಾನಕ್ಕೆ ಶ್ರೀ. ಕೆ. ಮೊಣ್ಣಪ್ಪ ಎಂಬವರು ಬರುವರೆಂದು ತಿಳಿದು ಬಂದಿದೆ.

ಧನಗಾಲ ಗ್ರಾಮದಲ್ಲಿರುವ ಶ್ರೀ. ಚಾರಿಮಂಡ ಚಿಂಗಪ್ಪ ಸರ್ವಕ್ಕ ಈ ಕಳೆದ ಸಾಲ್ಕು ತಿಂಗಳೆಂದ ಕಿಂಡಣ್ಣದ ಒಂದು ಎತ್ತು ಬಂದು ಸೇರಿಕೊಂಡಿದೆ. ಸೂಲೇ ಕರು ತಕ್ಕ ರುಜುವಾತಿನಿಂದ ಅದನ್ನು ಹೊಡೆದುಕೊಂಡು ಹೋಗಬಹುದಾಗಿ ತಿಳಿಸಲಾಗಿದೆ.

ಮದ್ರಾಸು ಟೆಕ್ನಿಕಲ್ ಕಾಲೇಜುಗಳಲ್ಲಿ ಕೊಡಗಿಗೆ ಇಟ್ಟಿರುವ ಸೀಟುಗಳನ್ನು ಈ ಕಳಗಿನವರಿಗೆ ಕೊಡಲು ಶಿಫಾರಸ್ಸು ಮಾಡಲಾಗಿದೆ. ಇಂಜಿನಿಯರಿಂಗ್ ಕಾಲೇಜಿನ ಎರಡು ಸೀಟನ್ನು ಶ್ರೀಗಳಾದ ಬೊನ್ನೇರಿಯಂಡ ಜೋಷ್ಪ ಮತ್ತು ಎಚ್. ಪಿ. ರೆಂಗರಾಜ ಇವರಿಗೆ ಮೆಡಿಕಲ್ ಕಾಲೇಜಿನ ಎರಡು ಸೀಟನ್ನು ಶ್ರೀಮತಿ ಬಿದ್ದಂಡ ಮುತ್ತಮ್ಮ (ಇನ್ನೊಂದು ಸೀಟಿಗೆ ಯಾರಿಂದ ನಿರ್ಣಯವಾಗಿಲ್ಲ) ಎಗ್ರಿಕಲ್ಚರಲ್ ಕಾಲೇಜು ಎರಡು ಸೀಟನ್ನು ಶ್ರೀಗಳಾದ ಕೆ. ಎಂ ಬೋಜಪ್ಪ ಮತ್ತು ಪಿ. ಕೆ. ಬೆಳ್ಯಪ್ಪ ಇವರಿಗೆ ವೆಟರ್ನರಿ ಕಾಲೇಜಿನ ಒಂದು ಸೀಟು ಶ್ರೀ ಕೆ. ಎಸ್. ಸುಂದರ ಇವರಿಗೆ.

ಅಭಿಪ್ರಾಯ ಸ್ವಾತಂತ್ರ್ಯ ಪತ್ರಿಕೆಯ ಜನ್ಮಸಿದ್ಧ ಹಕ್ಕು.

ಅಖಿಲ ಭಾರತ ಪತ್ರಿಕಾ ಸಂಪಾದಕರ ವಿಶೇಷ ಅಧಿವೇಶನದಲ್ಲಿ ಗೊತ್ತುವಳಿಗಳ ಸ್ವೀಕಾರ.

ಭಾರತದ ಘಟನೆಯ ೧೯ (೨) ನೇ ಕಲವಿಗೆ ತಿದ್ದುಪಡಿ ಮಾಡಿ, ಪತ್ರಿಕಾ ಸ್ವಾತಂತ್ರ್ಯದ ಮೇಲೆ ಗದೆ ಎತ್ತುವ ಮತ್ತು ಅಭಿಪ್ರಾಯ ಸ್ವಾತಂತ್ರ್ಯವನ್ನು ನಿಯಂತ್ರಿಸುವ ಈ ಕೃತ್ಯದಿಂದುಂಟಾಗುವ ಪರಿಸ್ಥಿತಿಯನ್ನು ಪರಿಶೀಲಿಸುವ ಸಲುವಾಗಿ ಅಖಿಲ ಭಾರತ ಪತ್ರಿಕಾ ಸಂಪಾದಕರ ವಿಶೇಷ ಅಧಿವೇಶನವನ್ನು ಬೋಬಾಯಿಯಲ್ಲಿ ಕರೆಯಲಾಗಿತ್ತು. ಅಲ್ಲಿ ಸ್ವೀಕಾರವಾದ ನಿರ್ಣಯಗಳು.

(೧) ಈ ಅಧಿವೇಶನವು ಅ. ಭಾ. ಪ. ಸಂ ಪದಪತ್ತಿನ ಅಧ್ಯಕ್ಷರು ಪಂಡಿತ ನೆಹರೂರ ಕಡೆಗೆ ಹೋದ ನಿಯೋಗಕ್ಕೂ ಮತ್ತು ಈ ಬಗ್ಗೆ ಸ್ಥಾಯೀ ಸಮಿತಿಯು ಗೊತ್ತುವಳಿಗೂ ತನ್ನ ಒಪ್ಪಿಗೆಯನ್ನು ಸೂಚಿಸಿದೆ. ಇದೂ ಅಲ್ಲದೆ, ಈ ಅಧಿವೇಶನವು ಎಲ್ಲಾ ಸಂಬಂಧಿತರಿಗೆ ಸ್ಪಷ್ಟಪಡಿಸುವುದೆಂದರೆ, ಪತ್ರಿಕಾ ಪ್ರಪಂಚವು ಸಾರ್ವಜನಿಕರ ಹಿತದೃಷ್ಟಿಯಿಂದ; ತಕ್ಕೀಚೆಗೆ ಅವಸರವಾಗಿ ಮತ್ತು ಅವಿವೇಕತನದಿಂದ ಘಟನೆಯನ್ನು ತಿದ್ದುಪಡಿ ಮಾಡಿ ಅಳ್ವೆ ಮಾಡಿರುವುದನ್ನು ಹಂತೆಗೆದುಕೊಂಡು ಪತ್ರಿಕಾ ಸ್ವಾತಂತ್ರ್ಯಕ್ಕೆ ಧಕ್ಕೆ ಬರದಂತೆ ಆಶ್ವಾಸನೆಕೊಡುವ ವರೆಗೆ ಸುಮ್ಮನೆ ಕೂಡಲಾರದು.

(೨) ನಾವು ಬೇಡುತ್ತಿರುವುದು ಒಂದು ವಿಶೇಷ ಹಕ್ಕಲ್ಲ ಆದರೆ ಅದು ತಮಗೆ ನೇರವಾಗಿ ಸಂಬಂಧಿಸಿದ್ದಂತೆ ಮತ್ತು ಅಭಿಪ್ರಾಯ ಸ್ವಾತಂತ್ರ್ಯದ ಹಕ್ಕನ್ನು ಕಸಿದುಕೊಳ್ಳುತ್ತಿದೆ ಎಂಬದನ್ನು ಸಾರ್ವಜನಿಕರ ಮನಸ್ಸಿನ ಮೇಲೆ ಪರಿಣಾಮವಾಗುವಂತೆ ಮಾಡಲು ಈ ಅಧಿವೇಶನವು ಅಭಿಪ್ರಾಯ ಕಳೆದಿದೆ. ರಾಷ್ಟ್ರದಲ್ಲಿ ಪ್ರಸಿದ್ಧ ಲೆಕ್ಕಪತ್ರಗಾರ ಪತ್ರಿಕೆಗಳಲ್ಲ, ತನ್ಮ ಹೊಣೆಯನ್ನು ನಿರ್ವಹಿಸುವ ದೃಷ್ಟಿಯಿಂದ ತಮ್ಮ ಸಹಾಕಾರ್ಯ ಕೇಷನದ ಮೇಗಡೆ ಪ್ರಾಮುಖ್ಯವಾಗಿ ಕಾಣುವಂತೆ ನಿಶ್ಚಿತ ಘೋಷಣೆಯನ್ನು ಪ್ರಸಿದ್ಧಿಪಡಿಸಬೇಕು.

(೩) ಅಭಿಪ್ರಾಯ ಸ್ವಾತಂತ್ರ್ಯಕ್ಕೆ ಯಾವುದೇ ಕಡೆಯಿಂದ ಗಂಡಾಂತರದ ವಿರೋಧಾರ್ಥವಾಗಿ ರಾಷ್ಟ್ರದ ಎಲ್ಲಾ ಪತ್ರಿಕೆಗಳೂ ೧೯೫೧ನೇ ಜುಲೈ ೧೫ರಂದು ಪತ್ರಿಕೆಯ ಮುದ್ರಣವನ್ನು ನಿಲ್ಲಿಸಬೇಕೆಂದು ಈ ವಿಶೇಷ ಅಧಿವೇಶನವು ಕೇಳಿಕೊಳ್ಳುತ್ತದೆ.

(೪) ಎಲ್ಲಾ ಪ್ರದಾರರೂ ಮುಂಬರುವ ಚುನಾವಣೆಯಲ್ಲಿ ಸ್ಪರ್ಧಾಳುವ ಉಮೇದುವಾರರಿಂದ, ೧೯ (೨) ನೇ ಕಲಮಿನ ತಿದ್ದುಪಡಿಯನ್ನು ಎಷ್ಟೂ ಬೇಕೆಂದು ಅನಂದಿಂದ ವಾಗ್ದಾನಪಡೆಯಬೇಕಾಗಿ ಈ ಅಧಿವೇಶನವು ಮುಂದಿರಬಿಲ್ಲರಿಗೂ ಒತ್ತಾಯಪಡಿಸುತ್ತದೆ.

(೫) ಈ ವಿಶೇಷ ಅಧಿವೇಶನವು ಘಟನಾ ತಿದ್ದುಪಡಿಯಿಲ್ಲಿ ಅದಗಿರುವ ಅಭಿಪ್ರಾಯ ಸ್ವಾತಂತ್ರ್ಯದ ಕತ್ತು ಹಿಸುಕುವ ಕೃತ್ಯಕ್ಕೆ ಒಲವಾದ ವಿರೋಧವನ್ನೂ ಟೀಮಾಡಬೇಕೆಂದು, ಎಲ್ಲಾ ಪತ್ರಿಕೆಗಳಿಗೂ ಮತ್ತು ಪತ್ರಿಕೆಯ ಹಿಂಬಸಿನ್ನ ಕಾರ್ಯಚೇತನ್ವವ ಎಲ್ಲಾ ಸಂಸ್ಥೆಗಳಿಗೂ ಆರಿಕೆ ಮಾಡಿಕೊಂಡಿದೆ.

(೬) ಪ್ರಾಂತ ಹಾಗೂ ಕೇಂದ್ರ ಸರಕಾರಗಳೊಡನೆ ಸಹಕಾರದಿಂದಾಗಲೀ ಇಲ್ಲವೆ ಸರ್ಕಾರವು ನೇಮಿಸಿದ ಸಲಹಾಸಮಿತಿಗಳಲ್ಲಾಗಲಿ ಕಾರ್ಯಮಾಡುವಾಗ ದೆಂದು ಈ ವಿಶೇಷ ಅಧಿವೇಶನವು ನಿರ್ಧರಿಸಿದೆ. ಪುನರ್ವಿಮರ್ಶೆಯನ್ನವ ಪರಿಸ್ಥಿತಿ ಉದ್ಭವಿಸಿದರೆ, ಈ ಗೊತ್ತುವಳಿಗಳ ಬೆಳಕಿನಲ್ಲಿ ಪುನರ್ವಿಮರ್ಶೆ ಮಾಡಲು ಈ ಅಧಿವೇಶನವು ಸ್ಥಾಯೀ ಸಮಿತಿಗೆ ಅಧಿಕಾರ ಕೊಡುತ್ತದೆ.

ಬೈರನಾಡು ಚೆಂಬೆಬೆಳ್ಯೂರು ಹೆಚ್. ಇ. ಶಾಲಾ ಕಟ್ಟಡಕ್ಕೆ ಧನಸಹಾಯ ಮಾಡಿದ ಮಹನೀಯರ ಹೆಸರುಗಳು-

ಶ್ರೀಗಳಾದ		ರೂ.
1	ಒಕ್ಕಲಿಗರ ಕುಸ್ತಿಯುಸಲರು	100 0 0
2	ಪ್ರಾಮಾಣಿಕರ ಸಾಮಾನ್ಯರು	,, 100 0 0
3.	ಪಣಿಯೆಲ್ಲ ಮಹಮ್ಮದ್ ಮತ್ತು ಅಸು	,, 100 0 0
4.	ಪುಣ್ಯಾಳರ ಗಣಪತಿ	,, 100 0 0
5.	ಚಾವಿಮಂಡ ಕೆ. ಅಪ್ಪಯ್ಯ	,, 100 0 0
6.	ಮೇಳೇರ ಅಪ್ಪಯ್ಯ	,, 60 0 0
7.	ಮೈತಾಡಿ ದೇವಣಗೇರಿ ಜಮೀನ್ದಾರ ಯತ ಮುಸಲ್ಮಾನರು	, 60 0 0
8	ಚಡಗರ ಪರಮೇಶ್ವರಯ್ಯ	,, 50 0 0
9.	ಅಮ್ಮಣಕುಟ್ಟೋಡ ಗಣಪತಿ	,, 50 0 0
10	ಚಡಗರ ಕೇಶವಯ್ಯ	,, 25 0 0
11.	ಪೈನಂ ನಾಗಪ್ಪ	,, 20 0 0
	ಉಳಿದ ಈ ಪೊಡಮಟ್ಟರು ಸದರಿ ಶಾಲೆಗೆ	
	ಪಸೂಲಾದ ಮೊಬಲಗು	7,344 0 0
	ಅಂಚು ಖಾಮ್ಸ	8,199 0 0

FOR SALE.

A running concern known as the Popular Motor works, Mercara, dealing in motor parts and accessories. Tenders invited. Apply to:-

Mercara, 27—6—51. CHAIRMAN, The Coorg Transport Ltd.

ಕೋಮುವಾರು ವಿಷ

ಸರಕಾರಿ ಉದ್ಯೋಗಗಳಿಗೆ ಅಥವಾ ಶಾಲಾ ಕಾಲೇಜುಗಳಿಗೆ ಆಯ್ಕೆಯು ಸಮುದಾಯದ ಲಿಂಗಾಯತ ಹಿಂದುಳಿದವರೇ? ಇಂದೂ ಕೂಡ ಕೊಡಗಿನ ವಿವಿಧ ಭಾಗಗಳಲ್ಲಿ ವಸತಿಗಳನ್ನು ಇಟ್ಟುಕೊಂಡು ಅವುಗಳಿಗೆ ವಿಶಾಲ ರೀತಿಯ ಜಮೀನುಗಳನ್ನು ಪಡೆದು ವಿದ್ಯೆ ಸಂಪತ್ತುಗಳಿಂದ ಕೂಡಿರುವ ಸ್ವಯಂ ಪ್ರಭೆಯ ಬಸವಣ್ಣನವರ ಅನುಯಾಯಿಗಳು ಹಿಂದುಳಿದವರೇ? ಇವರನ್ನು ಹಿಂದುಳಿದವರೆಂದು ವರ್ಗೀಕರಿಸಿದ್ದು ಇತರ ಕೋಮುಗಳಿಗೆ ಅನ್ಯಾಯಮಾಡಿದಂತೆ. ಈ ವರ್ಗೀಕರಣವು ಶೀಘ್ರ ರದ್ದಾಗಬೇಕು.

ಬಿ. ಕುಶಾಲಪ್ಪ

ಅನ್ಯಾಯ.

ಮೊನ್ನೆಯಾಗಿ ನಡೆದ ಮೆಡಿಕಲ್ ಕಾಲೇಜ್ ಸೀಟಿನ ಸಿಲೆಕ್ಷನ್‌ನಲ್ಲಿ ದ್ವಿತಿಯ ಶ್ರೇಣಿಯ ತೀರ್ಗಡೆಯಾದವರೊಬ್ಬರನ್ನು ಆರಿಸುವ ಸಲುವಾಗಿ ಹಿಂದುಳಿದ ಪಂಗಡದವರೆಂದು ಅವರಿಗೆ ಕೊಟ್ಟಿರುವದಾಗಿಯೂ ತಿಳಿದುಬಂತು. ನನಗೆ ತಿಳಿದಿರುವ ಮಟ್ಟಿಗೆ ಹಿಂದುಳಿದ ಪಂಗಡದವರಲ್ಲಿ ಇವರಿಗಿಂತಲೂ ಹೆಚ್ಚು ಮಾರ್ಕು ಪಡೆದ ಇತರರು ಇದ್ದರು. ಪ್ರಥಮ ತರಗತಿಯಲ್ಲಿ ಪಾಸಾದವರಿಗೆ ಮೊದಲ ಸ್ಥಳಗಳನ್ನು ಕೊಡುವರೆಂಬ ಮಾತಿರುವ ಕಾರಣ ದ್ವಿತಿಯ ಶ್ರೇಣಿಯವರಾರೂ ತಮ್ಮ ಅರ್ಜಿಗಳನ್ನು ಹಾಕಿರಲಿಲ್ಲ. ಆಗ ಅವಕಾಶವಿಟ್ಟವರ ಹೆಸರೂ ಕೂಡ ಹಿಂದಿನಿಂದ ಸೇರಿಸಲ್ಪಟ್ಟಿದೆಂಬ ವರ್ತಮಾನವಿದೆ. ಆದ್ದರಿಂದ ಪ್ರಥಮ ತರಗತಿಯಲ್ಲಿ ಪಾಸಾದ ಹಿಂದುಳಿದ ಪಂಗಡದವರಲ್ಲದ್ದರಿಂದ ಹಿಂದುಳಿದವರಲ್ಲಿ ದ್ವಿತಿಯ ಶ್ರೇಣಿಯಲ್ಲಿ ಪಾಸಾದ ಮೂರ್ನಾಲ್ಕು ಮಂದಿಯಾದರೂ ಅರ್ಜಿ ಹಾಕಿದ್ದರೆ ಅವರಲ್ಲಿ ಒಬ್ಬರಿಗೆ ಸೀಟು ದೊರೆಯುವ ಸಂಭವವಿತ್ತು. ಹೀಗೆ ಮಾಡದ ಕಾರಣ ಇತರ ವಿದ್ಯಾರ್ಥಿಗಳಿಗೆ ಪೂರಾ ಅನ್ಯಾಯವಾಗಿದೆ.

ವಿದ್ಯಾರ್ಥಿ.

ಇದು ನ್ಯಾಯವೇ?

ಟೆಕ್ನಿಕಲ್ ಕಾಲೇಜುಗಳಿಗೆ ವಿದ್ಯಾರ್ಥಿಗಳನ್ನು ಆರಿಸುವ ಸಮಿತಿಯವರು ಮೊನ್ನೆ ಇಂಜಿನಿಯರಿಂಗ್ ಕಾಲೇಜಿಗೆ ಕೊಡಗು ಸರಕಾರಿ ಕಾಲೇಜಿನವರಲ್ಲದ ವಿದ್ಯಾರ್ಥಿಯೊಬ್ಬರನ್ನು ಆರಿಸಿದ್ದಾರೆ. ಹೀಗೆ ಆರಿಸಿದ ದಕ್ಕೆ ನನ್ನ ಹಾಗೂ ದೇಶಿಯರ ವಿರೋಧವಿಲ್ಲ. ಏಕೆಂದರೆ ಯೋಗ್ಯತೆಗೆ ಎಲ್ಲೆ ಇಡಬಾರದು ಗೌರವ ಕೊಡಲ್ಪಡಬೇಕು. ಆದರೆ ಸಿಲೆಕ್ಷನ್ ಸಮಿತಿಯವರು ಈ ತತ್ವವನ್ನು ಎಲ್ಲೆಡೆಯಲ್ಲೂ ಪರಿಪಾಲಿಸದೆ ಒಂದು ಕಣ್ಣಿಗೆ ಸುಣ್ಣ, ಮತ್ತೊಂದು ಕಣ್ಣಿಗೆ ಬೆಣ್ಣೆ' ಎಂಬಂತೆ ವರ್ತಿಸಿದ್ದಾರೆ. ಇಂಜಿನೀಯರಿಂಗ್ ಕಾಲೇಜಿನ ಸೀಟನ್ನು ಯೋಗ್ಯತೆ ನೋಡಿ ಹೊರಗಿನ ವಿದ್ಯಾರ್ಥಿಗೆ ಕೊಟ್ಟವರು ಎನ್ಜಿನಿಕಲ್ಚರಲ್ ಕಾಲೇಜಿನ ಸೀಟನ್ನು ದೊರೆಯಬೇಕಾಗಿದ್ದ ವಿದ್ಯಾರ್ಥಿಗೆ ಕೊಡಬೆ ಅತನು ಹೊರಗಿನ ಕಾಲೇಜಿನವನೆಂಬ ಕಾರಣವನ್ನು ಕೊಟ್ಟು ಬೇರೊಬ್ಬರಿಗೆ ಕೊಟ್ಟಿರುವರಂತೆ! ಇದು ನಿಜವಾದರೆ ಸಮಿತಿಯ ನೀತಿಯು ಖಂಡನಾರ್ಹವಾದುದು. ನ್ಯಾಯರೀತಿ ವರ್ತಿಸಿದ್ದರೆ ಈ ಸೀಟು ಲಿಂಗಾಯತರಿಗೆ ಹೋಗುವಷ್ಟೇ ಬಲಕಾರಣದಿಂದ ಕೋಮುವಾರು ತತ್ವವಾದಿಗಳು ಗೌಡ ಕೋವಿ ನವರಿಗೂ ಒಂದು ಸೀಟು ದೊರೆಯಲೆಂದು ನ್ಯಾಯದ ಕೊಲೆ ಮಾಡಿರಬಹುದೇ?

ನಿರೀಕ್ಷಕ.

ಕೊಡಗಿನ ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್, ಮತ್ತು ಸ್ಕಾಫ್ ಸಿಲೆಕ್ಷನ್ ಬೋರ್ಡ್.

ಉದ್ಯೋಗವಿಲ್ಲದವರಿಗೆ ಉದ್ಯೋಗವನ್ನು ನೌಕರರನ್ನು ಬೇಕಾದವರಿಗೆ ನೌಕರರನ್ನು ದೊರಕಿಸಿ ಕೊಡಲು 'ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್" ಆಫೀಸೊಂದು ಕೊಡಗಿನಲ್ಲಿ ಸ್ಥಾಪಿತವಾಗಿ ಈಗಾಗಲೇ ಎರಡು ಮೂರು ವರ್ಷಗಳಾಗಿರುವುದು ಸಕಲರಿಗೂ ತಿಳಿದ ವಿಷಯ. ನಿರುದ್ಯೋಗದ ಪ್ರಶ್ನೆಯು ದಿನೇ ದಿನೇ ಹೆಚ್ಚುಗುತ್ತಿರುವ ಈ ಸಂಧಿಗ್ಧ ಪರಿಸ್ಥಿತಿಯಲ್ಲಿ ಇಂತಹ ದೊಂದು ಇಲಾಖೆಯು ಎಷ್ಟು ಅಗತ್ಯವೆಂದು ಬೇರೆ ಹೇಳಬೇಕಾಗಿಲ್ಲ. ಉದ್ಯೋಗ ಅಥವಾ ನೌಕರಿ ಬೇಕಾದ ಪ್ರತಿಯೇರ್ವನೂ ಈ ಆಫೀಸಿನಲ್ಲಿ ತಮ್ಮ ಹೆಸರುಗಳನ್ನು "ರಿಜಿಸ್ಟರ್" ಮಾಡಿಸಿಕೊಂಡು, ಇದರ ಮುಖಾಂತರವೇ ತಮ ತಮಗೆ ಯೋಗ್ಯವಾದ ಹುದ್ದೆಗಳನ್ನು ಪಡೆಯಬೇಕಾಗಿದೆ.

ಆದರೆ ಇತ್ತೀಚೆಗೆ ಈ ಆಫೀಸಿನಿಂದ ಹೆಚ್ಚಿನ ಪ್ರಯೋಜನವು ಸಕಲರಿಗೂ ದೊರಕುತ್ತಿಲ್ಲವೆಂಬ ವಿಷಾದದಿಂದ ಹೇಳಬೇಕಾಗುತ್ತದೆ. "ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್" ವಲ್ಲಿ ಹೆಸರು "ರಿಜಿಸ್ಟರ್" ಮಾಡಿಸಿದರೂ, ಆ ರೀತಿ "ರಿಜಿಸ್ಟರ್" ಮಾಡಿಸಿದವರ ಬೈಕೆ ಯೋಗ್ಯರಾದವರನ್ನು ಹೆಕ್ಕಿ ಅವರನ್ನು ಉದ್ಯೋಗಕ್ಕೆ ನೇಮಿಸುವ ಹಕ್ಕನ್ನು "ಎಂಪ್ಲಾಯಿಮೆಂಟ್ ಆಫೀಸರ್"ರವರು ಪಡೆದಿರುವುದಿಲ್ಲ. ಫಲವಾಗಿ, ಆ ಆಯ್ಕೆಯನ್ನು ಮಾಡುವ ಮತ್ತು ಉದ್ಯೋಗಕ್ಕೆ ನೇಮಿಸುವ ಅಧಿಕಾರವನ್ನು ಪಡೆದ ಅಧಿಕಾರಿಗಳು ನ್ಯಾಯ ಸಮ್ಮತವಾದ ರೀತಿಯಲ್ಲಿ ಮತ್ತು ನಿಷ್ಕಾಕ್ಷತೆಯಿಂದ ವರ್ತಿಸುತ್ತಿಲ್ಲವೆಂದು ಹಲವಾರು ಕಡೆಗಳಿಂದ ಮಾತುಗಳು ಕೇಳಬರುತ್ತಿವೆ.

ಕೊಡಗಿನ "ಸ್ಕಾಫ್ ಸೆಲೆಕ್ಷನ್ ಬೋರ್ಡ್" ಸರಕಾರಿ ಉದ್ಯೋಗಗಳಿಗೆ ಜನರನ್ನು ಚನಾಯಿಸುವ ಸಂಸ್ಥೆ. ಈ ಸಂಸ್ಥೆಯಲ್ಲಿ "ಸೆಲೆಕ್ಟ್" ಆಗದ, ಅದರಲ್ಲೂ ಈ ಸಂಸ್ಥೆಯು ಚನಾವಣಾ ಪರೀಕ್ಷೆಗೂ ಸಹ ಹಾಜರಾಗದವರಿಗೆ ಕೆಲಸ ದೊರೆತಿರುವ ದಂತೆ! ಇದು ನಿಜವಾದರೆ ಎಂತಹ ಅನ್ಯಾಯ?

ಇನ್ನು ಮುಂದಕ್ಕಾದರೂ ಇಂಥಾ ಅನ್ಯಾಯ ಮತ್ತು ಮೋಸಗಳನ್ನು ಪೂರ್ಣವಾಗಿ ತಡೆದು, ನ್ಯಾಯ ಮಾರ್ಗವನ್ನನುಸರಿಸಿ, ದೇಶದ ಸಕಲ ಪ್ರಜೆಗಳ ಹಿತವನ್ನು ಬಯಸುವ ಉದ್ದೇಶಕ್ಕಾಗಿ ಈ ಮೂಲಕ ಪ್ರಾರ್ಥಿಸಿಕೊಳ್ಳಲಾಗಿದೆ.

"ತಿಮ್ಮ"

ನಿರೀಕ್ಷಿಸಬಹುದೇ?

ಕಳೆದವಾರ '(;)' ಎಂಬ ಹೆಸರಿನಲ್ಲಿ 'ನಮ್ಮ ಪ್ರಿನ್ಸಿಪಾಲ್‌ರ ಒಳ್ಳೆ ಮೂಡಿದ ಪ್ರಜೆಯೆನ್ನೂ, ಅವರು ಮಜಾಸಿಗೆ ಹೋಗಲಿರುವ ವಿಷಯವನ್ನೂ ಕುರಿತು ಬರೆದ ಲೇಖನವನ್ನು ಆದ್ಯಂತ ಓದಿಕೊಂಡೆನು. ಓದಿ ಬಹಳ ವ್ಯಸನವಾಯಿತು ನಜಗೆ. ಏಕೆಂದರೆ ನಾನೊಬ್ಬ ಕಾಲೇಜ್ ವಿದ್ಯಾರ್ಥಿ- 'ನಮ್ಮ ಪ್ರಿನ್ಸಿಪಾಲ್‌ರು ಎಷ್ಟು ದಕ್ಷರು, ಎಷ್ಟು ಸಮರ್ಥರು ಎಂಬುದು ನನಗೆ ಗೊತ್ತು. ನಮ್ಮ ದುರಾದೃಷ್ಟ ವಶಾತ್ ಅವರು ಹೊರಟೇ ಹೆ ೀಗುವುದ ದರೆ ನಮಗೆ ಅಪಾರ ನಷ್ಟವಾಗುವುದು ಖಂಡಿತ. ನಷ್ಟ ಕಾಲೇಜಿಗೇ ಮಾತ್ರವಲ್ಲ, ಇಡೀ ಕೊಡಗಿಗೆ ಎಂದರೆ ಅತಿಶಯೋಕ್ತಿಯಲ್ಲ. ಆ ನಷ್ಟವನ್ನು ಭರ್ತಿಮಾಡುವುದು ಅಸಾಧ್ಯವಾದ ಕೆಲಸ.

ಈಗಾಗಲೇ ವೈಸ್ ಪ್ರಿನ್ಸಿಪಾಲರಿಗೆ, ಅವರ ಸರ್ವೀಸು ಅನುಗತ್ಯವೆಂದು ಕೊಟ್ಟ ನೋಟೀಸನ್ನು ಸರಕಾರವೇ ವಾಪಾಸು ತೆಗೆದುಕೊಂಡಿದೆ. ಇದು ಬಹು ಸಂತಸದ ಸಂಗತಿ. ಆದೇ ವೇಳೆಗೆ 'ನಮ್ಮ ಪ್ರಿನ್ಸಿಪಾಲರು' ಕಾಲೇಜು ಬಿಟ್ಟು ಯೋಗಕ್ಕಿತ್ತೊಬಿಡದೆ ಬಹು ದೂರೀಕರವಾದ ಮಾತು. ನಮ್ಮ ಕಾಲೇಜಿನ ಆಧಾರಸ್ತಂಭದಂತಿರುವ ಅವರು ಹೋಗದಿರಲಿ; ಹೋಗಲು ನಾವು ಬಿಡಲೂ ಬಾರದು.

ನಮ್ಮ ಪ್ರಿನ್ಸಿಪಾಲರಾದ ಮಿ. ಕೋಲ್ ಮೆನ್ ರವರು, ನಮ್ಮೆಲ್ಲರ ಏಳಿಗೆಗಾಗಿ ಇಲ್ಲೇ ನಿಷ್ಠಾವಂತ ದೊಡ್ಡ ಮನುಷ್ಯ ಮಾಡುವರೆಂದು ನೀರೀಕ್ಷಿಸಬಹುದೇ?

'ಕಾಲೇಜ್ ವಿದ್ಯಾರ್ಥಿ'

ಮೃಗೀಯತೆ.

ಮನುಷ್ಯನು ಸ್ವಾರ್ಥಕನೆಂದುಕೊಂಡರೂ ಆತನಲ್ಲಿ ವ್ಯಾಘ್ರ ಬುದ್ಧಿ ಇನ್ನೂ ಇದೆ. ಅತೀ ಭಯಂಕರ ಬಿಂಕಕ ಪ್ರಾಣಿಗಳಿಗಿಂದಲೂ ಹೇಯ ಕೃತ್ಯವನ್ನು ಆತನು ಮಾಡುವನು. ಉದಾಹರಣೆಗೆ ಹೇಳುವುದಾದರೆ ಮಡಿಕೇರಿ ಪುರಸಭೆಯ ಅಮೂಲ್ಯ ಕಾರ್ಯವನ್ನು ಎತ್ತಿ ಹೇಳಬಹುದು. ನಿನ್ನೆ ಮೊನ್ನೆಯಿಂದ ನೆಲೆಸಿದ ಹಾದಿ ಬೀದಿಯಲ್ಲಿರುವ ನಾಯಿ, ಆಡು, ಹಂದಿಗಳಿಗೆ ಪುರಸಭೆಯವರು ಗುಂಡು ಹಾಕಿಸಿರುವರು. ನಿನ್ನೆ (ತಾ ೩೬) ಸಾಯಂಕಾಲ ಬಸ್ ಸ್ಟೇಂಡ್ ಬಳಿ ನಾನು ನಿಂತಿದ್ದೆ. ಒಂದು ಆಡು ಹತ್ತಿರದಲ್ಲಿ ಮೇಯುತ್ತಿತ್ತು. ಅದಕ್ಕೆ ಗುಂಡು ಹಾಕಲಾಯಿತು. ಗುಂಡು ತಾಗಿದ ಆಡು ಬೇಕಲ್ಲಿ. ಬದಲು ಸ್ವಲ್ಪ ದೂರ ಓಡಿತು. ಮಲಮೂತ್ರಗಳು ಹೊರಬಂದುವು. ಆದರ ಕಣ್ಣಿನಲ್ಲಿ ನೀ

ರು ಸೀಮೆಂಟು ರಸ್ತೆಗೆ ತೊಟ್ಟೆಕ್ಕಿತು. ಪುನಹ ಮತ್ತೊಂದು ಗುಂಡು ಬಿತ್ತು. ಆಡು ಕೆಳಗೆ ಬಿದ್ದಿತು. ಅದು ಗರ್ಭಿಣಿ ಆಡು! ಎಂಥಾ ಅನಾಚಾರವಿದು! ಈ ರೀತಿ ಮೂಕ ಪ್ರಾಣಿಗಳ ಬಲಿ ತೆಗೆಯುವದು ಯಾವ ಧರ್ಮ? ಪುಕಸಭೆಯವರ ನಿಯಮದಂತೆ ಸಾಕದೆ ನಾಯಿ,ಹಂದಿ,ಆಡುಗಳನ್ನು ರಸ್ತೆಗೆ ಬಹುವವರಿಗೆ ಶಿಕ್ಷೆವಿಧಿಸಲ್ಪಡಲಿ. ಅಂಥಾವರನ್ನು ಬೇಕಾದರೆ ಹಿಡಿದು ಜೈಲಿಗೆ ಸೇರಿಸಲಿ. ಅದರೆ ಅವರ ತಪ್ಪಿಗಾಗಿ ಈ ಮೂಕಪ್ರಾಣಿಗಳ ಜೀವ ಪಾಪಿ ಮಾಡುವದೇ? ನಾಯಿಗಳಿಗೆ ಹುಚ್ಚು ಹಿಡಿದು ಮನುಷ್ಯನಿಗೆ ಮಾರಕವಾಗಬಹುದು. ಹಂದಿಗಳು ರಸ್ತೆಗಳನ್ನು ಉತ್ತು ನಷ್ಟ ಮಾಡಬಹುದು. ಆಡ ಆಡುಗಳು ಯಾವ ಅಪಹಾನಿ ಮಾಡುವವು? ಮಡಿಕೇರಿ ಮಹದೇವಪೇಟೆ ರಸ್ತೆಯಲ್ಲಿ ನೂರಾರು ಸಂಖ್ಯೆಯಿಂದ ನಿಂತಿರುವ ದನಗಳನ್ನು ಹಾಗಾದರೆ ಮಾಸಿಸಿವಾಲಿಟಿಯವರು ಏಕೆ ಗುಂಡುಹಾಕುವದಿಲ್ಲ? ಅಲ್ಲಲ್ಲಿ ಹುಚ್ಚು ಹುಚ್ಚಾಗಿರುಗುತ್ತಿರುವ ಕತ್ತೆ, ಕುದುರೆಗಳಿಗೆ ಗುಂಡೇಕೆ ಹಾಕಲಾರರು? ಮುನಿಸಿಪಾಲಿಟಿಯವರು ಸ್ವಲ್ಪ ಆಲೋಚಿಸಬೇಕು. ಈ ಪ್ರಾಣಿಗಳನ್ನು ಸಾಕುವವರು ಅವನ್ನು ಸಾರ್ವಜನಿಕ ತೊಂದರೆಗೆಡೆಯಾಗುವಂತೆ ಬಿಡದಂತೆ ಖಡ್ಡಾಯ ಶಿಕ್ಷೆವಿಧಿಸಬೇಕೇ ವಿನಾ ಮೂಕ ಬಡ ಪ್ರಾಣಿಗಳನ್ನು ಕೊಂದಿಕ್ಕುವದಲ್ಲ. ಪುರಸಭೆಯ ಅಧಿಕಾರಿಗಳು ಇತ್ತ ಇನ್ನಾದರೂ ಗಮನಿಸುವರೇ?

"ಭೂತದಯಾಪರ"

"ನಮ್ಮ ಭಾಗಮಂಡ್ಲದ ವೈಶಿಷ್ಟ್ಯ."

ಕೊಡಗಿನ ಇತರ ಯಾವ ಬೇರೆ ಸ್ಥಳದಲ್ಲಿ ಎಲ್ಲಿಯೂ ಇಲ್ಲದ ಆಹಾರದ ಕೊರತೆ, ಆರ್ಥಿಕ ಉಲ್ಬಣ, ಅರಿವೆಗಳ ತುಟ್ಟಿಯನ್ನು ಕಾಣಬಹುದಾದ ಸ್ಥಳವೇದರೆ "ನಮ್ಮ ಭಾಗಮಂಡ್ಲ"ದಲ್ಲಿ. ಸಾಡೇ ತೀನ್ ಅಂಗಡಿಗಳಿಂದ ಅಲ್ಪ ಜನ ಸಂಖ್ಯೆಯಿಂದಿರುವ ನನ್ನ ಭಾಗಮಂಡ್ಲವು ಕರಾಳಕಂತೆಯ ತವರೂರಿನಂತಿದೆ.

ದೈನಿಕ ಜೀವನಕ್ಕೆ ಅವಶ್ಯವಾಗಿರುವ ಸಾಮಗ್ರಿಗಳಿಗೆ ವಿಪರೀತ ಬೆಲೆ ಒಟ್ಟಿರು ಬೆಲೆಯಂತೂ ಪರಮಾವಧಿಗೇರಿದೆ. ಬೇರೆ ಯಾವ ಸ್ಥಳಗಳಗಿಂತಲೂ ಕ್ರಯದಲ್ಲಿ ಅಧಿಕವಲ್ಲದೆ, ಕಡಿಮೆ ಇಲ್ಲ ಅದು ಹಾಗಿರಲಿ; ಅಪರೂಪವಾಗಿ ಬರುತ್ತಿರುವ ಮಿಲ್ಲ್ ಬಟ್ಟೆಗಳು ಪದಾ ಅನೃಶ್ಯವಾಗಿಯೇ ಕಂಡುಬರುತ್ತಿದೆ. ಅಲ್ಲೋ, ಇಲ್ಲೋ, ಅಲ್ಪ ಸ್ವಲ್ಪ ಗೋಚರಿಸಿದ ಅರಿವೆಗಳ ಮೇಲೆ ಕಂಟ್ರೋಲ್ ಕ್ರಯ ಪಟ್ಟಿಯು ಅಗೋಚರವಾಗಿಯೇ ಇರುವುದು ಬಟ್ಟೆ ಬಂದ ಮರುದಿನ ಅಂಗಡಿಯಲ್ಲಿ ಬಟ್ಟೆಗಳೇ ಇರುವುದಿಲ್ಲ ಬಂದೆರಡು 'ಹೆಲ್ಲ' ಬಟ್ಟೆಗಳ ತಾನು ಮತ್ತ ಬಹಿರಂಗ ಆಸ್ಥಾನವನ್ನು ಪಡೆದಿರುತ್ತವೆ ಅವುಗಳನ್ನು ತೊಳ್ಳುವವರಿಲ್ಲದ್ದರಿಂದ ಬೇಗನೆ ಖರ್ಚಿಯಾಗುವುದಕ್ಕೋಸ್ಕರ ಅದಕ್ಕೆ ಅ ಸ್ಥಳ. ಉತ್ತಮ ಬಟ್ಟೆಗಳಿಗೆ ಮತ್ತ ಅಂಗಡಿಯ ಒಳಗಿನ ಕತ್ತಲೆ ಕೋಣೆ. ಏಕೆಂದರೆ ಆ ಬಟ್ಟೆಗಳನ್ನು ನಮ್ಮ ವ್ಯಾಪಾರಸ್ಥರು ಸಹಬಿ. ಯಂ. ನಲ್ಲಿ ದೇರೆ ಸ್ಥಳದಿಂದ ನಮಗಾಗಿ ಬಹು ಪ್ರಯೋಸದಿಂದ ಒಂದೆರೆಡರ ದೇಟನಲ್ಲಿ ತಂದಿದ್ದಾಗಿ ಕೃತಜ್ಞತೆಯಿಂದ ಪ್ರಕಟಿಸಿಕೊಳ್ಳುವರು. ಇದು ನಿಜವೆಲ್ಲವಿದ್ದರೆ ಇದು ಕಪ್ಪುಸಂತೆಯ ಮತ್ತೊಂದು ನೂತನ ಸಂಶೋಧನೆಯೆಂದು ಧಾರಾಳವಾಗಿ ಹೇಳಬಹುದಲ್ಲವೆ?

ಭಾಗಮಂಡ್ಲದ ಗಿರಾಕಿಗಳನ್ನು ತೃಪ್ತಿಪಡಿಸುವುದೇ ಕಷ್ಟಕ್ಕೆ ಬಂದಿರುವಾಗ ನಮ್ಮ ವ್ಯಾಪಾರಸ್ಥರು ೧೪ ಮೈಲು ದೂರದಲ್ಲಿರುವ ಕರಿಕೆಗೆ ತಲೆಹೊರೆಯಿಂದ ಹೊತ್ತುಕೊಂಡು ಹೋಗಿ ಅಲ್ಲಿಯ ಬಡ ಕಾರ್ಮಿಕರಿಗೆ (ಜನತೆಗೆ) ಬಟ್ಟೆಯ ಪರಬರಾಯಿಯನ್ನು ಮಾಡುವ ದೇಶಸೇವಾ ಕಾರ್ಯದಲ್ಲಿಯೂ ನಿರತರಾಗಿರುತ್ತಾರೆ ಅದರೆ ಅವರು ಹೇಳಿದ್ದೆ ಬೆಲೆ. ಹಾಗಾದರೆ ಇದು ಬಿ. ಯಂ. ನ ವೀನ ಶೋಧನೆಯಲ್ಲವೆ?

ನಮ್ಮಲ್ಲಿಯ ಶ್ರೀಮಂತರು ಸಹಕಾರಿ ಸಂಸ್ಥೆಯ ಆರಾಧಕರೆಂದು ಇತ್ತೀಚೆಗೆ ಗೊತ್ತಾಯಿತು. ಅವರು ಸರಕಾರಿ ದೊಡನೆ ಸಹಕರಿಸುತ್ತಾ, ಕಷ್ಟಕಾಲದಲ್ಲಿ ಬಡವರಿಗೆ ನೆರವನ್ನೀಯುತ್ತಾ ತಮ್ಮ ಆರಾಧನೆಯಲ್ಲಿ ಅನುರಕ್ತರಾಗಿರುವರೇ. ಏಲಕ್ಕಿ ಮಲೆಯ ಪ್ರಯುಕ್ತ ಅಕ್ಕಿ ಪರ್ಮಿಟ್ ತೆಗೆದು ಉಳುವರಿ ಬತ್ತವಿಲ್ಲೆಂದು ಸರಕಾರಕ್ಕೆ ಗೊತ್ತುಪಡಿಸಿದರು. ಪರ್ಮಿಟ್‌ದಾರರಲ್ಲಿ ಮೊನ್ನೆ ರೇಷನ್ ಅಧಿಕಾರಿಗಳು ಚೆಕ್ಕ್ ಮಾಡಲಾಗಿ ಒಬ್ಬೊಬ್ಬರಲ್ಲಿ ಐದಾರು ಗಾಡಿ ಬತ್ತ ಕಂಡುಬಂದಿತು. ಈ ಬತ್ತವನ್ನು ಕಷ್ಟಕಾಲದಲ್ಲಿ ಅಲ್ಲಿಯ ಬಡವರು ಬಂದು ಕೇಳಿದಾಗ ಸಹಾಯ ಮಾಡುವುದಕ್ಕೆಂದು ಯಾರೋ ಹೇಳಿದರು ಅಂತರೆ ಧಾರಣೆ ಮೊತ್ತ ಕಂಟ್ರೋಲ್ ರೇಟಿಗಿಂತ ಎರಡು ಮೂರು ಪಟ್ಟು ಅಧಿಕವಂತೆ! ಇದು ನಮ್ಮ ಶ್ರೀಮಂತರು ಕಂಡು ಹಿಡಿದ ಬಿ. ಯಂ. ನ ಹೊಸ ತೋಧನೆಯಾಲ್ಲವೆ? ಪ್ರತಿ ದಿನವೂ ಮುಂಡ್ರೋಟ್ಟೆಗೆ ಇಳ್ಳಿಂದ ಅಕ್ಕಿ ಸಾಗುತ್ತಲಿದೆ. ಪೋಲೀಸ್ ನವರು ೨೪ ಗಂಟೆಗಳ ಕಾಲ ಎಡೆಬಿಡದೆ ಕಾಯುತ್ತಿದ್ದಾರೆ! ಆದರೂ ಪ್ರಯೋಜನವಾಗಿಲ್ಲ. ಇದನ್ನು ಯಾವ ರೀತಿಯ ಸಂಶೋಧನೆ ಎಂದು ಕರೆಯೋಣ?

'ನಾಡಿಗ'

ಪ್ರಕಟಣೆ.

ಹೆಚ್ಚು ಆಹಾರ ಬೆಳೆಯುವ ಯೋಜನೆಯಲ್ಲಿ 1951-52 ನೇ ಇಸವಿಯಲ್ಲಿ ಕೈಕೊಳ್ಳುವ ಕೆಲಸಗಳನ್ನು ಪರ್ವರ ತಿಳುವಳಿಕೆಗಾಗಿ ಈ ಕೆಳಗೆ ಕೊಡಲಾಗಿದೆ

1. ನೀರಾವರಿ ಯೋಜನೆ (ಸ್ವಂತ ಕೆಲಸಗಳು)

(a) ಕೆರೆಗಳು –ಈ ವರ್ಷ ಕೊಡಗಿನಲ್ಲಿ ಹೆಚ್ಚು ಕಡಿಮೆ 120 ಕೆರೆಗಳನ್ನು ತೋಡಿಸಲು ತೆದಾಗಲೀ ಯಾ ರಿಪೇರಿ ಮಾಡುವುದಾಗಲೀ ಕೈಕೊಂಡು ಬೆಳೆಗಳಿಗೆ ನೀರು ಪರಬರಾಯಿ ಮಾಡುವ ವಿಚಾರ ಮಾಡುತ್ತಿದೆ.

(b) ಕಟ್ಟೆ ವತ್ತ ತೋಡುಗಳು– ಇದೇ ವರ್ಷ ಹೆಚ್ಚು ಕಡಿಮೆ 50 ತೋಡುಗಳು ಯಾ ಕಟ್ಟೆಗಳನ್ನು ಕಟ್ಟಿಸಿ ವ್ಯವಸಾಯಕ್ಕೆ ನೀರಿನ ಅನುಕೂಲತೆ ಮಾಡುವುದು.

ಈ ಮೇಲಿನ ಕೆಲಸಗಳನ್ನು ರೈತರೇ ಕೈಗೊಳ್ಳಬೇಕು. ಮತ್ತು ಇಂಥಾ ಕೆಲಸಗಳನ್ನು ಕೈಕೊಂಡು ಇದೇ ವರ್ಷ ಮುಗಿಸುವ ನಂಬಿಕೆಯಿರುವ ರೈತರು ಈ ವರೆಗೆ ಅರ್ಜಿ ಹಾಕಿದಿದ್ದ ಪಕ್ಷದಲ್ಲಿ ಒಡನೆ ಕೊಡಗು ವ್ಯವಸಾಯ ಇಲಾಖಾ ಅಧಿಕಾರಿಯವರಿಗೆ ಅರ್ಜಿ ಹಾಕತಕ್ಕದ್ದು ಇಂಥಾ ಕೆಲಸಗಳನ್ನು ಸಾ. 31-12-1951 ಒಳಗೆ ಸಂಯೋಗಿ ಪೂರ್ತಿ ಮಾಡಿದರೆ ಸರಕಾರದ ಲೆಕ್ಕಚಾರದ ಮೇರೆ ಅಂಥಾ ಕೆಲಸಗಳ ಹೆಚ್ಚು ಕಡಿಮೆ ಅರ್ಧ ಖರ್ಚನ್ನು ರೈತರಿಗೆ ಕೊಡಲಾಗುತ್ತೆ

2. ಗೊಬ್ಬರ ಮುಂತಾದುವುಗಳ ಬಟವಾಡೆ

(a) ಗ್ರಾಮದ ಕಂಪೋಸ್ಟು ಯೋಜನೆ–ಮೊದಲಿನ ವರ್ಷಗಳಲ್ಲಿ ಗೊತ್ತಾಗಿರುವಂತೆ ಯೇ ಈ ವರ್ಷವೂ ಸಹ ಗ್ರಾಮದ ಕಂಪೋಸ್ಟು ಯೋಜನೆಯನ್ನು ಜಾರಿಗೆ ತರಲಾಗುತ್ತಿದೆ ಮತ್ತು ವ್ಯವಸಾಯ ಇಲಾಖೆಯ ಸಲಹೆಗಳ ಮೇರೆ ಶಾಸ್ತ್ರೀಯ ರೀತಿಯಲ್ಲಿ ಹೆಚ್ಚು ಕಂಪೋಸ್ಟು ಗೊಬ್ಬರವನ್ನು ತಯಾರು ಮಾಡುವವರಿಗೆ ಬಹುಮಾನಗಳನ್ನು ಕೊಡಲಾಗುತ್ತದೆ ಈ ವರ್ಷ ಕೊಡಗಿನಲ್ಲಿ ಎರಡು ಲಕ್ಷ ಟನ್ನು ಕಂಪೋಸ್ಟು ಗೊಬ್ಬರವನ್ನು ಮಾಡಬೇಕೆಂದು ನಿರ್ಣಯಿಸಲಾಗಿದೆ ಮತ್ತು ಪ್ರತಿಯೊಬ್ಬ ರೈತನೂ ತನ್ನ ಕೈಯಲ್ಲಾದಷ್ಟು ಗೊಬ್ಬರವನ್ನು ಮಾಡಿ ಮೇಲೆ ತೋರಿಸಿದ ಗುರಿಯನ್ನು ಸಾಧಿಸಲು ಸಹಾಯ ಮಾಡಬೇಕೆಂದು ಕೋರಲಾಗಿದೆ.

(b) ಹಿಂಡಿ ಗೊಬ್ಬರ ಬಟವಾಡೆ– ಈ ವರ್ಷ 700 ಟನ್ನು ಹಿಂಡಿಗೊಬ್ಬರವನ್ನು ತಂದು ವ್ಯವಸಾಯ ಇಲಾಖೆಯ ಮತ್ತು ಸಹಕಾರ ಸಂಘಗಳ ಮೂಲಕ ಬಟವಾಡೆ ಮಾಡಲಾಗುತ್ತಿದೆ. ಈ ವರೆಗೆ ಗೊಬ್ಬರಕ್ಕೆ ಅರ್ಜಿ ಹಾಕಿಕೊಳ್ಳದವರು ಒಡನೆ ವ್ಯವಸಾಯ ಇಲಾಖಾ ಅಧಿಕಾರಿಗಳಿಗೆ ಯಾ ಯೂನಿಯನ್ನಿಗೆ ಅರ್ಜಿ ಬರೆದು ಕೊಂಡು ಅವರವರಿಗೆ ಬೇಕಾದ ಗೊಬ್ಬರವನ್ನು ಪಡಕೊಳ್ಳಬಹುದು. ಬರುವ ವರ್ಷಕ್ಕೆ ಬೇಕಾದ ಹಿಂಡಿಗೊಬ್ಬರವನ್ನು ತರಿಸಲು ಏರ್ಪಾಡುಮಾಡಲಾಗುತ್ತಿದೆ.

(c) ಮೂಳೆ ಗೊಬ್ಬರ ಮತ್ತು ಮತ್ತು ಸುಪರ್ ಫಾಸ್‌ಫೇಟ್–ಈ ವರ್ಷ ಹೆಚ್ಚು ಕಡಿಮೆ 250 ಟನ್ನು ಮೂಳೆ ಗೊಬ್ಬರ ವತ್ತು 100 ಟನ್ ಸೂಪರ್ ಫಾಸ್‌ಫೇಟ್‌ನ್ನು ತರಿಸಿ ಇವುಗಳನ್ನು ವಿಶ್ವಾಸ ಗೊಬ್ಬರವಾಗಿ ಮಾರಾಟಮಾಡಲಾಗುತ್ತೆ.

ಮೇಲೆ ತೋರಿಸಿದ ಗೊಬ್ಬರ ಮತ್ತು ಮಿಶ್ರಿತ ಗೊಬ್ಬರಗಳನ್ನು ಆಹಾರ ಪದಾರ್ಥಗಳ ಬೆಳೆಗಳಿಗೆ ಮಾಪ್ರ ಅರ್ಧ ಕ್ರಯದಲ್ಲಿ ಕೊಡಲಾಗುತ್ತದೆ. ಇವುಗಳ ಅಪಶ್ಯಕತೆಯಿರುವವರು ವ್ಯವಸಾಯ ಇಲಾಖಾ ಅಧಿಕಾರಿಗಳಿಗಾಗಲೀ ಯೂ ಡೆವಲಪ್‌ಮೆಂಟ್ ಸ್ಟೇಟರುಗಳಿಗಾಗಲೀ ಅರ್ಜಿ ಹಾಕಿಕೊಂಡು ಅವರವರಿಗೆ ಬೇಕಾದ ಗೊಬ್ಬರಗಳನ್ನು ಪಡಕೊಳ್ಳಬಹುದು.

(d) ಹಸುರೆಲೆ ಗೊಬ್ಬರ–ಈ ವರ್ಷ ತಮ್ಮ ತಮ್ಮ ಭೂಮಿಗೆ ಹಸುರೆಲೆ ಗೊಬ್ಬರವನ್ನು ಹಾಕುವವರಿಗೆ ಪ್ರತಿ ವರ್ಷ ಏಕ್ರೆಗಳಿಗೆ ಹೆಚ್ಚು ಕಡಿಮೆ 10 ರೂಪಾಯಿಯಂತೆ ಬಹುಮಾನ ಕೊಡುವಂತೆ ಏರ್ಪಾಡು ಮಾಡಲಾಗಿದೆ ಈ ಬಹುಮಾನವನ್ನು ವಿಶ್ವಾಸ ಗೊಬ್ಬರದ ರೀತಿಯಲ್ಲಿ ಕೊಡಲಾಗುತ್ತದೆ ಒಂದು ಏಕ್ರೆಗೆ ಕಡಿಮೆ ಮತ್ತು ಆರು ಏಕ್ರೆಗಳಿಗಿಂತ ಏನಿಲ್ಲವಾಗಿ ಹಸುರೆಲೆ ಗೊಬ್ಬರ ಹಾಕಿರುವ ಸ್ಥಳವನ್ನು ಬಹುಮಾನ ಕೊಡುವ ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ತಮ್ಮ ತಮ್ಮ ಗದ್ದೆಗಳಿಗೆ ಹಸುರೆಲೆ ಗೊಬ್ಬರ ಹಾಕಿಸುವವರು ವ್ಯವಸಾಯ ಇಲಾಖೆಯ ಸಿಬ್ಬಂದಿಗಳಿಗೆ ಅರ್ಜಿ ಹಾಕಿಕೊಂಡು ಅವರವರಿಗೆ ಸಿಕ್ಕುವ ಬಹುಮಾನವನ್ನು ಪಡಕ್ಕು ಬೇಗನೆ ಹೋದಿಕೊಳ್ಳಬಹುದು.

(e) ಗೆದ್ದೆಗೆ ಗೆಣಸುಗಳ ಬೆಳೆಗಳು– ಈ ವರ್ಷ ಕೊಡಗಿಗೆ ಮತ್ತ ಪೊನ್ನಂಪೇಟೆ ವ್ಯವಸಾಯ ಇಲಾಖಾ ಕ್ಷೇತ್ರಗಳಲ್ಲಿ ಹೆಚ್ಚು ಕಡಿಮೆ ಮೂವತ್ತು ಸಲ್ಕೆಗಳಷ್ಟು ಜಾಗದಲ್ಲಿ ಮರಗಣಸು ಸಿಹಿಗೆಣಸು ಮೊದಲಾದ ಗೆದ್ದೆಗೆಣಸುಗಳನ್ನು ಬೆಳೆಸಲು ಏರ್ಪಾಡು ಮಾಡಲಾಗಿದೆ ಮತ್ತು ಮರಗೆಣಸು ಬೆಳೆಸಲು ಇಚ್ಛಿಸುವವರಿಗೆ ನೆಡಲಿಕ್ಕೆ ಬೇಕಾದ ಮರಗಣಸಿನ ಕೊಂಬೆಗಳನ್ನು ಮಿನಿಕತ್ತಾಗಿ ಕೊಡಲಾಗುತ್ತದೆ. ತಮಗೆ ಬೇಕಾದ ಮರಗಣಸಿನ ಕೊಂಬೆಗಳಿಗೆ ಒಡನೆ ವ್ಯವಸಾಯ ಇಲಾಖಾ ಅಧಿಕಾರಿಗಳಿಗೆ ಅರ್ಜಿ ಹಾಕಿಕೊಳ್ಳಬಹುದು.

(3) ಕಬ್ಬಿಣದ ಹತ್ಯಾರುಗಳು– ಮೇಲೆ ನಮೂದಿಸಿದಂತೆ ಗೆದ್ದೆಯಲ್ಲಿ ವ್ಯವಸಾಯದ ಹತ್ಯಾರುಗಳನ್ನೆತ್ತುಕೊಂಡಲಿಕ್ಕೆರವ ಕಬ್ಬಿಣದ ಸಾಮಾನುಗಳನ್ನೂ ಆಹಾರ ಪದಾರ್ಥದ ಬೆಳೆಗಳನ್ನೂ ಕಾಪಾಡಲು ಮುಳ್ಳುತಂತಿಯನ್ನೂ, ನೀರು ಹಾಯಿಸಲಿಕ್ಕೆರವ ಕಬ್ಬಿಣದ ಕೊಳವೆಗಳನ್ನೂ, ಗಾಡಿ ಪಟ್ಟಿ, ಜಂಕ್ಷೀಟ್ ಮೊದಲಾದುವುಗಳನ್ನು ತರಿಸಿ ರೈತರಿಗೆ ಹಂಚುವ ಏರ್ಪಾಡು ಮಾಡಲಾಗಿ ತ್ತಿದೆಯೆಂದೂ, ಮತ್ತು ವ್ಯವಸಾಯದ ಉಳಿಯೇ ಗಿಕ್ಕಾರ್ಕಿ ಮೇಲಿನ ಹತ್ಯಾರುಗಳ ಅವಶ್ಯಕತೆಯುಂಟಾದವರು ತಮಗೆ ಬೇಕಾದ ಹತ್ಯಾರುಗಳಿಗೆ ವೀರಾಜಪೇಟೆಯಲ್ಲಿರುವ ಕೋಪರೇಟಿವ್ ಮಾರ್ಕೆಟಿಂಗ್ ಫೆಡರೇಶನ್ನಿಗೆ ಅರ್ಜಿ ಹಾಕಿಕೊಳ್ಳಬಹುದೆಂದೂ ಸರ್ಕಾರಿಗೆ ಈ ಮೂಲಕ ತಿಳಿಸಲಾಗಿದೆ. ಇಂಥಾ ಅರ್ಜಿಗಳ ಆಧಾರದ ಮೇಲೆ ಫೆಡರೇಶನು ವ್ಯವಸಾಯ ಇಲಾಖೆಗೆ ಹತ್ಯಾರುಗಳ ಪಟ್ಟಿಯನ್ನು ಕಳುಹಿಸುವುದಾಗಿಯೂ, ಪಟ್ಟಿಯಂತೆ ಹತ್ಯಾರುಗಳನ್ನು ತರಿಸಿ ಹಂಚುವ ಏರ್ಪಾಡನ್ನು ವ್ಯವಸಾಯ ಇಲಾಖೆಯವರು ಮಾಡವದೆಂದೂ ಈ ಮೂಲಕ ತಿಳಿಸಲಾಗಿದೆ ಇದೇ ವಿಚಾರವಾಗಿ ವ್ಯವಸಾಯಕ್ಕೆ ಬೇಕಾದ ಸೀವೇಟಿಗೂ ಸಹ ಅನ್ವಯಿಸಿಕೊಳ್ಳತಕ್ಕದ್ದೆಂದು ಪ್ರತಿಯೊಂದು ಅರ್ಜಿಯನ್ನು ಅರ್ಜಿಯ ತಾರೀಕ ಮತ್ತು ಹತ್ಯಾರುಗಳ ಸ್ಟಾಕನ್ನು ನೋಡಿ ಆಕ್ರಮಿತ ಪ್ರಕಾರ ಹತ್ಯಾರುಗಳನ್ನು ಕೊಡಲಾಗುತ್ತೆ.

ಕೊಡಗಿನ ಪ್ರತಿಯೊಬ್ಬ ರೈತನೂ ಮೇಲೆ ನಮೂದಿಸಿಗ ಸಲಕರಣೆಗಳ ಉಪಯೋಗಗಳನ್ನು ಹೋದಿಕೊಂಡು ತನ್ನ ಕೈಯಲ್ಲಾದಷ್ಟು ಹೆಚ್ಚು ಆಹಾರ ಪದಾರ್ಥಗಳನ್ನು ಬೆಳೆದು ದೇಶದಲ್ಲಿರುವ ಆಹಾರ ಪದಾರ್ಥದ ಮಗ್ಗಟ್ಟನ್ನು ಮುಂಯಲು ಸಹಾಯಕರಾಗಬೇಕೆಂದು ಒತ್ತಿ ಕೋರಲಾಗಿದೆ.

ಬಿ ಎಸ್ ವರದರಾಜನ್.
ವ್ಯವಸಾಯ ಇಲಾಖಾ ಅಧಿಕಾರಿ.

WANTD.

A Manager for the Coorg Transport Ltd., Mercara on a Salary of Rs 150-10-200/- with dearness allowance of Rs. 20/- per mensum. Apply with testimonials to the under signed by 15-7-51.

Mercara, 27—6—51. CHAIRMAN, The Coorg Transport Ltd.

॥ ಸ್ತ್ರೀ ದಾಕ್ಷಿಣ್ಯ ॥

ಲೇ:—ಕ. ಘ. ಮಹಾಬಲಾಚಾರ

ನಮ್ಮ ಸ್ಮೃತಿಕಾರರೂ ಕವಿಗಳೂ ಶಾಸ್ತ್ರಗ್ರಂಥಗಳಲ್ಲಿಯೂ ಕಾವ್ಯಗಳಲ್ಲಿಯೂ ಎಷ್ಟೋ ಕಡೆ ಸ್ತ್ರೀಯರ ಬಗ್ಗೆ ಅತ್ಯಂತ ಉದಾತ್ತ ಭಾವನೆ-ದೃಷ್ಟಿಗಳನ್ನು ವ್ಯಕ್ತಪಡಿಸಿದ್ದಾರೆ. ನಮ್ಮ ಕೆಲವು ಹಾಸ್ಯ ಸಂಕಥನಗಳಲ್ಲಿ ಸ್ತ್ರೀಯರಲ್ಲಿ ಅಸಾಧಾರಣ ಗೌರವ ಮತ್ತು ದಾಕ್ಷಿಣ್ಯವನ್ನು ಪ್ರಕಟಿಸಿದ್ದಾರೆ. ಕೆಲವು ಕತೆಪದ್ಯಗಳಲ್ಲಿ ಪರಮಾತ್ಮನನ್ನು 'ತಂದೆ' ಯೆಂದು ಕರೆಯುತ್ತಾ 'ತಾಯಿ' ಯೆಂದು ಸಂಬೋಧಿಸಲಾಗಿದೆ. ಸೀತಾ, ಸಾವಿತ್ರಿ, ದಮಯಂತಿ ಮೊದಲಾದ ಅನೇಕ ಪತಿವ್ರತೆಯರ ಹೆಸರುಗಳನ್ನು ರಾಮ, ಕೃಷ್ಣ, ಯುಧಿಷ್ಠಿರಾದಿ ಪುರುಷವೀರರ ಹೆಸರುಗಳಕ್ಕಿಂತ ಭಕ್ತಿಯಿಂದ ಸ್ಮರಿಸುವರು. ಹಿತ್ಯಜೀವನದಲ್ಲಾದರೂ ಅಜ್ಞಾತವಾಸ, ನಿರಕ್ಷರತೆ, ಒಮ್ಮೊಮ್ಮೆ ಜಗಳ ಇವಿಷ್ಟೆಲ್ಲ ಇದ್ದರೂ ಒಟ್ಟಿನ ಮೇಲೆ ಗಂಡ-ಹೆಂಡತಿ, ಮಾತ-ಪುತ್ರ, ಅತ್ತೆ-ಸೊಸೆಯರೊಳಗಿನ ಸಂಬಂಧದಲ್ಲಿ ಶಾಂತಿ, ಸವಧಾನ, ಸೌಹಾರ್ದ, ಅನುಕಂಪಗಳು ಇಲ್ಲದಿಲ್ಲ. ಸಾಮಾನ್ಯವಾಗಿ ಸಂಸಾರದಲ್ಲಿ ಸುಖವಿಲ್ಲವೆಂದು ಹೇಳಬರುವದಿಲ್ಲ. ಮನೆತನದ ಅನೇಕ ಶ್ಲೀತಗಳಲ್ಲಿ ಗೃಹಿಣಿಯು ಮಾತೇ ವೆಂದವಾಕ್ಯವಾಗಿ ಉಳಿದಿದೆ. ಹೀಗಿದ್ದರೂ ನಮ್ಮ ಧಾರ್ವಿಕ ಮತ್ತು ಸಾಮಾಜಿಕ ದೃಷ್ಟಿಕೋನದಲ್ಲಿಯೂ ಗುಣಶೋಲನೆಯಲ್ಲಿಯೂ ಹೆಂಗಸಿನೊಡನೆ ನಮ್ಮ ವ್ಯವಹಾರದಲ್ಲಿಯೂ ಒಂದು ಹೇಳುವಾದ ವಿಚಾರಧಾರೆಯಿದೆ. ಸಂಧಿಕಾಲಗಳಲ್ಲಿ ಅದು ಮೇರೆಯಿಂದ ಹೊರಗೆ ತಲೆಯಿಕ್ಕಿ ಅವಳ ಬಗ್ಗೆ ನಮ್ಮ ಸಹಜೋತಪದ ಅಭಿಪ್ರಾಯವೇನೆಂದು ಪ್ರಕಟಿಗೊಳಿಸುವುದು. ಆ ಅಭಿಪ್ರಾಯದ ಪ್ರಕಾರ, ಮನೆಯಲ್ಲಿಯೂ ಸಮಾಜದಲ್ಲಿಯೂ ಹೆಂಗಸಿನ ಸ್ಥಾನವು ಬಳಲಲು ಬರುವಷ್ಟು ಸಂಸ್ಥಿತಿಯಲ್ಲಿರುವ ಮನೆಯು ಯಾವುದಾದರೂ ಪಾಶ್ಚಿ ಪರಿಣಿಸಲಾ ಕೀಳೆಂಬಂತಿದೆ. ತಮ್ಮ ಹೊಲವನೆ ಸೊತ್ತುಗಳ ರಕ್ಷಣೆಗಾಗಿ ಪ್ರಾಣ ಕೊಡಲು ಸಿದ್ಧರಾದ ಜನರೆಷ್ಟೋ ಸಿಗಬಹುದು; ಆದರೆ ತಮ್ಮ ಹೆಂಗಸರನ್ನು ಅಥವಾ ದನಕರುಗಳನ್ನು ಳಿಸಿಕೊಳ್ಳಲು ಪ್ರಾಣಕೊಡಬಲ್ಲವರು ಸ್ವಲ್ಪ ವಿರಳ ದಕೆಕರುಗಳಾಗಿ ಜೀವ ಕೊಡುವವರೂ ಇರಬಹುದು; ಹೆಂಗಸರಿಗಾಗಿ ಮಾತ್ರ ಇಲ್ಲ ಪ್ರಾಣರಕ್ಷಣೆಗಾಗಿ ಪಲಾಯನ ಮಾಡುವ ಪ್ರಸಂಗವೇ ಬಂದರೆ ಅವರು ಸಾಧ್ಯವಿದ್ದ ಷ್ಟು ಸೊತ್ತುಗಳನ್ನು ಕಲೆಯಿಸಿ ಮೇಲಾದರೂ ಕೊತ್ತುಕೊಂಡು ಹೋಗುವರು, ಆದರೆ ತನ್ನ ಜಿ ವಕ್ಕಾಗಲಿ ಸೊತ್ತಿಗಾಗಲಿ ಅಪಾಯ ಬರುವಂತಿದ್ದರೆ ಅವರು ತಮ್ಮ ಹೆಂಗಸರಿಗಾಗಿ ಕಾಯುವುದಿಲ್ಲ. ವಿಶ್ವಾಸದ ಪರೀಕ್ಷೆ ಬಂದಾಗ ಗಂಡಸು ಅನೇಕ ವೇಳೆ ವಿಶ್ವಾಸಘಾತ ಮಾಡುತ್ತಾನೆ ಹೆಂಗಸಿನ ಕ್ಷಾಣವೊನ್ನುಗಳು, ಅವಳ ಸ್ವಂತ ಮನೆಯಲ್ಲಿ ಕೂಡ, ಗಂಡಸಿನ ಕೈಯಲ್ಲಿ ಸುರಕ್ಷಿತವಾಗಿವೆಯೆನ್ನಲಾಗುವುದಿಲ್ಲ. ಅವಳು ಪ್ರಯಾಣ ಮಾಡುವಾಗಲೂ ಉತ್ಸವ ಸಮಾರಂಭಗಳಲ್ಲಿ ಜನ ನೆರೆದಲ್ಲಿ ಹೋಗುವಾಗಲೂ ಅವಳಿಗೆ ಅಪಾಯಭೀತಿ ವಿದ್ದೇ ಇದೆ. ಅವಳ ಬಂಧು ಬಳಗದವರು ಯಾರಾದರೂ ಹೇಳಬಹುದು. ಭಾರತ ರಕ್ಷಣೆಯಲ್ಲಿ ಅವಳನ್ನು ಬಿಟ್ಟಿರುವ ಕೋ ಅವರಿಂದಲೂ ಅವಳಿಗೆ ಭಯ ತಪ್ಪಿದ್ದಲ್ಲ. ದಿವಂಗತ ಅನಂತೀ ಬಾಯಿ ಕರ್ನೆಯವರು ತನ್ನ ಚಿಕ್ಕ ಪುರಸ ಅತ್ಯಲ್ಪ ಅತ್ಯಲ್ಪ ಪ್ರತ್ಯೇಯಲ್ಲಿ ಸ್ವಂತ ಅನುಭವದಿಂದ ಕೆಲ ಉದಾಹರಣೆಗಳನ್ನು ಉಲ್ಲೇಖಿಸಿ ತೀರ ಆತ್ಮೀಯ ಸ್ನೇಹಿತರು ಕೂಡ ಹೆಂಗಸಿನ ವಿಷಯದಲ್ಲಿ ಎಷ್ಟು ಅವಿಶ್ವಸನೀಯರಾಗಿರಬಹುದೆಂದು ತೋರಿಸಿಕೊಟ್ಟಿದ್ದಾರೆ. ಇಂಥಾ ಅನುಭವಗಳು ಇನ್ನೂ ಅನೇಕ ಸ್ತ್ರೀಯರಿಗೆ ಬಂದಿರಬಹುದು. ಈಚೆಗೆ ಕೆಲ ವರ್ಷಗಳಿಂದ ಈ ಕೇಡು ಹೆಚ್ಚು ಹೆಚ್ಚಾಗುತ್ತಿದೆ ಮಹಾಯುದ್ಧ ಅಥವಾ ಮನ್ವಂತರ ಮಹಾ ಸಂಹಾರಲೀಲೆಯೂ ಕಾಲದಲ್ಲಿಯೂ ಕದನಂತರದಲ್ಲಿಯೂ ಗಂಡಸು ಎಳೆ ಹೆಣ್ಣು ಮಗುಗಳ ಮೇಲೆ ಕೂಡ ತನ್ನ ಕಾಮುಪಿಪಾಸೆ ಹಿಂಸಾಬುದ್ಧಿಗಳನ್ನು ತೀರಿಸಿಕೊಳ್ಳಲು ಸಿದ್ಧನಾಗಬಹುದೆಂಬ ಸಂಯಮಶೂನ್ಯನಾಗುವಂತೆ ತೋರುತ್ತದೆ.

ಗಂಡಸರ ನಿರಪರಾಧಿ ಹೆಂಗಸರಲ್ಲಿಯೂ ಹುಡುಗಿಯಲ್ಲಿಯೂ ಹೀಯ ರೀತಿಯ ಶಿಕ್ಷೆ ನಡೆದುಕೊಂಡ ಬಗ್ಗೆ ಈಚೆಗೆ ನನಗೆ ಬಿಟ್ಟುಬಿಡದೆ ವರದಿಗಳು ಬರಹೊಡಗಿವೆ.

ಒಂದು ಶತಾಬ್ದದಲ್ಲಿ ೨೦ ವರ್ಷದೊಳಗಿನ ಯುವಕ ಉಪಾಧ್ಯಾಯನು ಇನ್ನೂ ಹತ್ತು ವರ್ಷವಾಗದ ಹುಡುಗಿಯ ಮೇಲೆ ಅತ್ಯಾಚಾರ ನಡೆಸಿದ್ದನು ಇನ್ನೊಂದರಲ್ಲಿ, ಸಂಸಾರವಂದಿಗ ಅಧ್ಯಾಪಕನು ತನ್ನ ರಕ್ಷಣಕತ್ತಿದಲ್ಲಿ ತನ್ನ ಮನೆಯಲ್ಲೇ ಇದ್ದ ೧೩-೧೪ ವರ್ಷದ ಭೀರು ಹುಡುಗಿಯ ಮೇಲೆ ಮತ್ತೆ ಮತ್ತೆ ಅತ್ಯಾಯ ಮಾಡಿದ್ದನು. ಮತ್ತೊಂದರಲ್ಲಿ, ಆಸ್ಪೇ ವಯಸ್ಸಿನ ಹಡುಗಿಯೊಬ್ಬಳು ಖಾ ವರ್ಷ ವಯಸಿನ ಹಲವು ವಕ್ಕಳಿಗೆ ತನ್ನ ಸ್ವಂತ ತಂದೆಯೂ ಕಾವ ಚೇಷ್ಟೆಗೆ ಆಂಜಿ ನೆರೆಮನೆಯಲ್ಲಿ ಆಶ್ರಯ ಹೊಂದಬೇಕಾಯಿತು ಮಗುದೊಂದರಲ್ಲಿ, ಇಪ್ಪತ್ತು ವರ್ಷದ ಕಸ್ತೂರಬಾ ನಿಧಿಯ ಗ್ರಾಮಸೇವಿಕೆಯೊಬ್ಬಳ ಮೇಲೆ, ವಿಶ್ವಾಸಾರ್ಹನೆಂದು ಜಿಲ್ಲಾ ಮಂದಾಳಿನ ಶಿಫಾರಸು ಪಡೆದ, ಆ ಸ್ಥಳದ ಕಾಂಗ್ರೆಸ್ ಮತ್ತು ಜನಪದಸಮಿತಿಗಳ ಪದಾಧಿಕಾರಿಯೂದ ಹಳ್ಳಿಯ ಮುಂದಾಳೊಬ್ಬನು ಅತಿಚರಿತಳಿಳಿಸಿದನು ಈ ಘಟನೆಯಿಂದ ಯುವತಿಯರಾದ ಗ್ರಾಮಸೇವಿಕೆಯರಿಗೂ ಸಹಜವಾಗಿ ಆಂಜಿಕೆಯುಂಟಾಗಿದೆ ಹಳ್ಳಿಯ ಹಿರಿಯರೂ ಮುಂದಾಳುಗಳೂ ಆದವರೇ ತಮ್ಮು ಲೋಲುಪರಾಗಿದ್ದಾರೆ ಎಳೆಯ ಅನನುಭವಿ ಯುವತಿಯರು ಯಾರ ರಕ್ಷಣೆಯನ್ನು ನೆಚ್ಚಬೇಕು? ಅವರು ಹಿಂದೆಂದೂ ಕಂಡರಿಯದ ಹಳ್ಳಿಗಳಲ್ಲಿ ಅವರನ್ನು ಯಾರ ನೆರೆಕಳ್ಳಿ, ವರ್ಗದರ್ಶನದಲ್ಲಿ ತಂದು ನಿಲ್ಲಿಸಬೇಕು?

ಬಹುಶಃ ಇವು ಅಪವಾದಗಳೆಂದು ಯಾರಾದರೂ ಹೇಳಬಹುದು. ಭಾರತದಂಥ ವಿಸ್ತಾರ ದೇಶದಲ್ಲಿ ಒಂದಲ್ಲಿ ಬಾದು ಕಡೆ ಇಂಥ ಘಟನೆಗಳು ಜರಗಿಯೇ ಜರಗುವುವು ಎಂದು ಅವರು ವಾದಿಸಲೂ ಬಹುದು ಆದರಿಂದ ಇಡೀ ಸಮಾಜವೇ ಪತಿತವಾಗಿದೆಯೆಂದು ತೀರ್ಮಾನಿಸಲಾಗದು ಅವರ ಕೆಳಗಿನ ಘಟನೆಗಳು ಸಾಮಾನ್ಯವಾಗಿ ಹೆಂಗಸಿನ ಬಗ್ಗೆ ಒಸಕೆಯು ಮನೋವೃತ್ತಿಯ ಚಿತ್ರವನ್ನು ತೆರೆದು ತೋರಿಸುತ್ತವೆ

ಇದು ಪೂರ್ವ ಪಂಜಾಬಿನಲ್ಲಿ ನಡೆದ ಘಟನೆಯಂತೆ. ದುಸ್ತಾಹಸಿ ಪಂಜಾಬೀಯುವಕನೊಬ್ಬನು ನಿರಾಶ್ರಿತ ಕನ್ಯೆಯೊಬ್ಬಳ ಮೇಲೆ ಅತ್ಯಾಚಾರ ಮಾಡಹೋದ ನಂತೆ ಇದರಿಂದ ಉಳಿದ ನಿರಾಶ್ರಿತರು ಸಿಟ್ಟಿಗೆದ್ದು ಅಪರಾಧಿಯನ್ನು ಹಿಡಿದು ಬೆಸ್ತಾಗಿ ಥಳಿಸಿದರು. ಅಷ್ಟರಲ್ಲೇ ಶಂಕರಪ್ಪಂಗಡೆ, ಆಗಲೆ ಸುಂಠರಮ್ಮ ದೊಡ್ಡ ಜಂಗುಳಿಯೊಡಗಿದ್ದ ಆ ನಿರಾಶ್ರಿತರು ಆವನ ಮನೆಯ ಮೇಲೇರಿ ಹೋಗಿ, ಅವನ ಬಂಧ ಬಳಗದವರನ್ನು ಹೊಡೆದು ಬಡಿದು, ಅವನ ಹೆಂಡತಿಯನ್ನು ಬೀದಿಗೆಳೆದು, ಅವಳ ಬಟ್ಟೆಯನ್ನು ಹರಿದು ಬತ್ತಲೆ ಮಾಡಿ ಅವಳನ್ನು ಬೀದಿಯಲ್ಲಿ ನಾನಾ ಹೊಲಸು ಅಂಗಭಂಗಿಗಳನ್ನು ಪ್ರದರ್ಶಿಸುತ್ತ ಮೆರವಣಿಗೆ ಮಾಡಿದರು ಇದರ ವಿರುದ್ಧ ಯಾವನೊಬ್ಬ ಗಂಡಸಾಗಲಿ ಹೆಂಗಸಾಗಲಿ ಸಿಪಂಧ ಸೂಚಿಸಲು ಬೆರಳನ್ನು ಕೂಡ ಎತ್ತಲಿಲ್ಲ

ಇವರು ನಿರಕ್ಷರಿ, ಅಸಂಸ್ಕೃತ ನಿರಾಶ್ರಿತರು; ಅವರ ಸ್ವಂತ ಕ್ಲೇಶಗಳ ಫಲವಾಗಿ ಅವರ ನೈತಿಕ ತೂಕ ತೀರ ತಪ್ಪಿದೆ, ಈ ಹೆಂಗಸಿನ ಗಂಡನ ಅಪರಾಧದಿಂದ ಅವರು ಉದ್ರಿಕ್ತರಾಗಿದ್ದರು ಎಂದೆಲ್ಲ ಸಮಾಧಾನ ಹೇಳುವವರಿರಬಹುದು ಆದರೆ ನಾಗಪುರದಲ್ಲಿ ಜೀವನ ವಿಕಾಸ ಪ್ರದರ್ಶನದಲ್ಲಿ ನಡೆದ ಹೀನ ಘಟನೆಗೆ ಈ ಬಗೆಯ ಸಮಾಧಾನ ಕೂಡ ಹೇಳಲು ಸಾಧ್ಯವಿಲ್ಲ ಅಲ್ಲಿ ನಡೆದದ್ದು ಕೇವಲ ಇಪ್ಪತ್ತೇ-ಮೊದಲು ಹುಸಿದ್ದಿಸಿದ್ದ ಹೆಂಗೇಕ ಕಚೇರಿಯನ್ನು ನಿಶ್ಚಿತ ಸಮಯ ಕಳೆದು ಬಹಳ ಹೊತ್ತಾಗುವ ವರೆಗೂ ಸ್ವೀಕೃತಕರನ್ನು ಕಾಯಿಸಿ, ಆ ಮೇಲೆ ರದ್ದುಗೊಳಿಸಲಾಯಿತು. ಪ್ರೇಕ್ಷಕ ಗಣದಲ್ಲಿ ಅನೇಕ ಕಾಲೇಜು ಮತ್ತು ಹೈಸ್ಕೂಲು ವಿದ್ಯಾರ್ಥಿಗಳೂ ಇತರ ಪುಂಡರೂ ಅಲ್ಲದೆ ಮಧ್ಯಮ ವರ್ಗದ ಹಲವು ಯುವತಿಯರಿದ್ದರು. ಕಾರ್ಯಕ್ರಮ ರದ್ದಾದ್ದನ್ನು ಕೇಳಿದೊಡನೆ, ಕಲಾಸಂಸ್ಥೆಗಳ ಲೈವಾನಗಳನ್ನಿಸಿಕೊಳ್ಳವ ಈ ಜನರು ಸದಸದ್ವಿವೇಕವನ್ನು ಕಳೆದುಕೊಂಡು ಪುಂಡರೂ ಪಕಂಗಳೂ ಆದರು ಆವರು ಕಿಡಿಕಿಯ ಗಾಜುಗಳನ್ನು ಒಡೆದು ಪುಡಿಪುಡಿ ಮಾಡಿ ದೀಪಕಗಳನ್ನು ಕಂದಿಸಿ, ಹೆಂಗಸರ ಮೈಮೇಲೆ ಏಗಿಹೋಗಿ, ಆವರೊಡನೆ ವ್ಯಗಳೂ ನಾಚುವಂತೆ ನಡೆದುಕೊಂಡರು ಶಾಂತಿಸುವ್ಯವಸ್ಥೆಯನ್ನು ಸ್ಥಾಪಿಸಬೇಕಾದರೆ ಪೊಲೀಸರಿಗೆ ಸಾಕಾಗಿ ಹೋಯಿತು. ಇದು ಬುದ್ಧಿಪೂರ್ವಕ ಉದ್ದಾಮನನವೇ ಸರಿ

ಈ ಬಗೆಯ ವರ್ತನೆ ದಿನಹೋದಂತೆ ಹಬ್ಬು ತೊಡಗಿದೆ ಶಾಲೆಗಳೂ, ವಿಶ್ವವಿದ್ಯಾಲಯಗಳೂ ದೀರ್ಘಕಾಲದು ತವರು ಮನೆಗಳಾಗಿವೆ ಸಮ್ಮೇಲನಗಳಲ್ಲಿ ಪುಂಡಾಟಿಕೆ ಮೂಡುವುದು, ಅಧ್ಯಾಪಕರ ಮೇಲೆ, ಪ್ರತಿಸ್ಪರ್ಧಿ ವಿದ್ಯಾರ್ಥಿಗಳ ಮೇಲೆ, ತಮ್ಮ ಅಭಿಪ್ರಾಯಗಳಿಗೆ ಒಲಿಯೂಗಲೊಪ್ಪದ ಹುಡುಗಿಯರ ಮೇಲೆ ಪ್ರಾಣಹಾರಕ ಆಕ್ರಮಣ ಮಾಡುವುದು ಅನುಗಳಿ ನೀರು ಕುಡಿದಷ್ಟಾಗಿದೆ ಈ ವಿದ್ಯಾ ಸಂಸ್ಥೆಗಳಲ್ಲಿ ಅವರಿಗೆ ದೊರೆಯುವ ಜ್ಞಾನವೂ ಅಸ್ಪಷ್ಟ. ಅವಾತಾವರಣದಲ್ಲಿರುವ ಬುದ್ಧಿಸಂಸ್ಕಾರ ಸಾಮರ್ಥ್ಯವಂತೂ ಇನ್ನೂ ಕಡಿಮೆ. ಹುಡುಗಿಯರನ್ನು ಹುಡುಗರು ಬರಬೇಡಿಯಲ್ಲಿ ಬೆನ್ನಟ್ಟುತ್ತಾರೆ. ಈ ದುರ್ಬುದ್ಧಿಗಳಿಗೆ ಪಾರ ಕಲಿಸುವ ದಿಟ್ಟತನವುಳ್ಳ ಹುಡುಗಿಯರ ಸಂಖ್ಯೆ ತೀರಾ ಕಡಿಮೆ. ಇನ್ನು ಕೆಲವರು ಅಪಕ್ತಿಂದ ಪತ್ರಗಳು ಯಕ್ತಿಗಳನ್ನು ಹೊತಬೇಕಾಗುತ್ತದೆ ಹುಡುಗರ ಈ ವರ್ತನೆ ಪಶುವೃತ್ತಿಗಿಂತಲೂ ಕೀಳು, ಪಶುಗಳು ಅವರಿಗಿಂತ ಎಷ್ಟೋ ಜೆನ್ನಾಗಿ ನಡೆದುಕೊಳುತ್ತವೆ

ಈಗ ಕೆಲವು ವರ್ಷಗಳಿಂದ ನಾವು ಸಂಸ್ಕೃತಿಯನ್ನು ಕುರಿತು ಮಾತಾಡುವುದಕ್ಕೆಲ್ಲವೇ ಇಲ್ಲ ನಾವುಸಾಂಸ್ಕೃತಿಕ ಸಮ್ಮೇಲನಗಳನ್ನು ಕೂಡಿಸುತ್ತೇವೆ ಹೆಚ್ಚು ಕಡಿಮೆ ಪ್ರತಿಯೊಂದು ಸಭೆ ಸಮ್ಮೇಲನದಲ್ಲೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲದ್ದೇ ಇರುತ್ತವೆ ನಮ್ಮ ಪ್ರಾಚೀನ ಸಂಸ್ಕೃತಿಯನ್ನು ಹೆಮ್ಮೆಯಿಂದ ಹೇಳಿಕೊಂಡು ಅದರ ಉಜ್ಜೀವನದ ಮಾತಾಡುತ್ತೇವೆ ನಮ್ಮಲ್ಲಿ ಪೌರ ಸಂಸ್ಕೃತಿ ಇದೆ ಮೂಲನಿವಾಸಿ ಸಂಸ್ಕೃತಿ ಇದೆ ಆರ್ಯ ಸಂಸ್ಕೃತಿ ಇದೆ, ಇಸ್ಲಾಮಿ ಸಂಸ್ಕೃತಿ ಇದೆ, ಕ್ರಿಶ್ಚ ಸಂಸ್ಕೃತಿಗಳವೆ, ಗುಜರಾತಿ, ಮಹಾರಾಷ್ಟ್ರ ಮತ್ತು ಇತರ ಪ್ರಾಂತೀಯ ಸಂಸ್ಕೃತಿಗಳೂ ಇವೆ. ಆದರೆ ಭಾರತದಲ್ಲೆಲ್ಲಾ ಸ್ತ್ರೀಯರ ತನುಮಾನಗಳಿಗೆ ಭಯವನ್ನುಟುಮಾಡುತ್ತಿರುವ ಈ ಸಂಸ್ಕೃತಿ ಯಾವುದೆಂದು ಬೊರಾದರೂ ದಯವಿಟ್ಟು ಹೇಳುವರೆ? ಭಾರತದ ಪುರುಷಜಾತಿಯಲ್ಲಿ ಈ ವೈಶಾಚಿಕ ಉದ್ರೇಕ ಎಲ್ಲಿಂದ ಬಂತು? ಮೂರು ನಾಲ್ಕು ಸಾವಿರ ವರ್ಷಗಳ ಹಿಂದೆ ವ್ಯಾಸನು ದ್ರೌಪದೀ ವಸ್ತ್ರಾಪಹಾರದ ಕಥೆಯನ್ನು ಹಾಡಿದಂದಿನಿಂದ ಭಾರತೀಯ ನಾರಿಯರು, ಕೌರವರ ಆತ್ಯಾಚಾರದಿಂದ ತನ್ನನ್ನು ಕಾಪಾಡಲು ದ್ರೌಪದಿ ಹಾಡಿದ ಮೊರೆಯನ್ನು ಉಚ್ಚರಿಸುತ್ತ ಬಂದಿದ್ದಾರೆ ಆದರೆ ಆ ಘಟನೆಯೂ ಹಳಕಾಗಿಲ್ಲ. ಮೊರೆಯೂ ಹಳಿದಂತಿಲ್ಲ. ನಿಶ್ಚಯಾಯ ದ್ರೌಪದಿಯರೂ ದುಷ್ಟ ಕೌರವರೂ ನಿರಂತರವಾಗಿ ಉಳಿದಿರುವಂತೆ ಮತ್ತು ಕಾಲ ಹೋದ ಹಾಗೆ ವಿಪುಲವಾಗುತ್ತಿರುವಂತೆ ತೋರುತ್ತದೆ.

ವೈಯಕ್ತಿಕವಾಗಿ ಉದಾತ್ತ ಗುಣಪರಿಪೂರ್ಣರಾದ ಜನರಿಗೆ-ಭಾರತದಲ್ಲಿ ಕೊರತೆಯಿಲ್ಲ. ಆದರೆ ಭೀಷ್ಮ ದ್ರೋಣರೂ ಅಂಧವರೇ ಇದ್ದರು. ಇವರ ವೈಯಕಿಕ್ತ

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ.ಆಪರೇಟಿವ್ ಸೊಸೈಟೀಸ್ ಆ್ಯಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ನೇ ಸಾಲಿನವರಿಗೆ.

ಅಧಿಕೃತ ಶೇರು ಭಂಡವಾಳ	ರೂ. 10,00,000.
ವಸೂಲಾದ ಶೇರು ಮೊಬಲಗು	ರೂ. 1,99,400.
ಕ್ಷೇಮನಿಧಿ	ರೂ. 59,000.
ಇತರ ನಿಧಿಗಳು	ರೂ. 36,000.

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು

ಈ ಬ್ಯಾಂಕಿನಿಂದ ಹೊಸ್ತಾಗಿ ಸಹಕಾರ ಸಂಘಗಳಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಅಡಿನ ಮೇಲೆ ಸಹ ಸಾಲ ಕೊಡಲಾಗುವುದು. ಹೆಚ್ಚಿನ ಪ್ರಾಪ್ತಿಗಳ ವಿಸ್ತಾಂಟು ಮಾಡಲ್ಪಡುವುದು. ಟ್ರಸ್ಟಿ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ವಿವರಗಳಿಗೆ ಕಛೇರಿಯಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಜಿ. ಪಿ. ಅಪ್ಪಯ್ಯ, ಬಿ. L. O.
ಆನ. ಕಾರ್ಯದರ್ಶಿ, ಪ್ರೆಸಿಡೆಂಟ್ ಮತ್ತು ಮ್ಯಾನೇಜರ್.

ದಿ ಟ್ರೊಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:–ಲಾಲ ಶಂಕರ್ ಲಾಲ್.
ಮುಖ್ಯ ಆಫೀಸು:– ಹೊಸ ದೆಲ್ಲಿ.
52–10 ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು.	ಎಸ್. ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮಲ್‌ಖಾನ್.	ಡಾ|| ಎಂ. ಎ. ಅನ್ಸಾರಿ.

Transacts:–Life, Fire, Motor, and Marine.

ಯು. ಯು. ಅಚ್ಚಣ್ಣ,	ಎಂ. ಎ. ಬೆಳ್ಳಿಪ್ಪ,
ಇನ್ಸ್‌ಪೆಕ್ಟರು,	ಬ್ರಾಂಚ್ ಸೆಕ್ರೆಟರಿ,
ಮಡಿಕೇರಿ, ಕೊಡಗು.	ಹಂಪನಕಟ್ಟೆ, ಮಂಗಳೂರು.

ಕೊಡಗು ಪ್ರಾಂತೀಯ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ

ಸಮ್ಮೆಲ್ಲ ಕೋವಿಗಳು, ತೋಟಿಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245ರ ವರೆಗೆ.
2. 12ನೇ ನಂಬರಿನ ಒಂಟಿ ಹೊಳವಿನ ಕೋವಿ ಕ್ರಯ ರೂ. 320–0–0
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott)
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make)
5. .32 ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಿಗಳೂ ಸಹ ದೊರೆಯುತ್ತವೆ.
6. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪೈಮಾಡುವ ಔಷಧಗಳು (Spraying Pumps)
7. ½" ¾" 1" 1½" 1½" ಳಬ್ಬಣದ ಸಲಾಕೆಗಳು.

ಹೆಚ್ಚಿನ ವಿವರಗಳನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಿಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ಕೊಡಲಾಗುವುದು)

ಎಂ. ಎಸ್. ಸೋಮಯ್ಯ,
52–42 ಗೌರವ ಕಾರ್ಯದರ್ಶಿ.

Edited, Printed and Published by P. I. Bellappa at 'Kodagu' Press, Mercara, for 'Kodagu' Ltd.

ಪಾತ್ರತ್ವವು ಬೇಧಿಸ್ಸ ಸಾಮಾಜಿಕ ಅನ್ಯಾಯಗಳನ್ನು ನಿವಾರಿಸಲು ಸಾಲದು. ಕೆಡುಕಿನ ವಿರುದ್ಧ ಒಂದಾಗಿ ಪ್ರತಿಭಟಿಸಲು ಎದ್ದು ನಿಲ್ಲದ ಕಜ್ಜನಿಕೆಗೆ ಕಾಸಿನ ಬೆಲೆಯಿಲ್ಲ. ಅದರ ಒಟ್ಟು ಪರಿಣಾಮ ಕೆಡುಕನ್ನು ಮಟ್ಟಿಡುವುದರಲ್ಲಿ ಅಥವಾ ಅದರ ಬಗ್ಗೆ ಪಿಳುನುಡಿಯಲ್ಲಿ ಮಾತಾಡುವುದರಲ್ಲಿ ಮಾತ್ರ ಅದರಿಂ ಆ ಸಜ್ಜನಿಕೆಯಿಂದ ಏನು ಫಲ? ಅದು ಬಾ ಹರಬೆಯೆನಿಸೀತೇ ಹೊರತು ಪರಿಹಾರವೆನಿಸಲಿಕ್ಕಿಲ್ಲ

ಹೆಂಗಸರೂ ಹೆಚ್ಚು ಧೈರ್ಯಶಾಲಿಗಳಾಗಬೇಕು. ಉನ್ನತ ಚಾರಿತ್ರದ ಸಾವಿರಾರು ಹೆಂಗಸರಿರುವರೆಂಬುದಕ್ಕೆ ಸಂದೇಹವಿಲ್ಲ. ಆದರೆ ಅಂಥವರು ಪರಿಶುದ್ಧ ಚಾರಿತ್ರದ ಪರಿಣಾಮವೋ ಎಂಬಂತೆ ವ್ಯಭಿಚಾರಿಣಿಯರಿಗಿಂತ ದುರ್ಬಲರಾಗಿರುವುದೇ ಹೆಚ್ಚು. ಚಾರಿಣಿಯರು ಗಂಡಸರಿಗೆ ಹೆದರುವುದಿಲ್ಲ. ಮನಸು ಬಂದರೆ ಅವರು ತಮ್ಮನ್ನೆನ್ನ ಕವ್ವ ಆಶ್ರಿತರನ್ನೂ ಗಂಡಸರ ಆಕ್ರಮಣದಿಂದ ಯಶಸ್ವಿಯಾಗಿ ರಕ್ಷಿಸಿಕೊಳ್ಳಬಲ್ಲರು. ಆಲ್ಲದೆ ಗಂಡಸಿನ ಕಾಮಾತುರಕ್ಕೆ ಬಲಿಯಾದ ಹೆಂಗಸರ ಮೇಲೆ ಸತಿವ್ರತೆಯರಿಗಿಂಥ ವ್ಯಭಿಚಾರಿಣಿಯರೇ ಹೆಚ್ಚು ಸಹಾನುಭೂತಿ ತೋರಿಸುತ್ತಾರೆ. ಪ್ರತಿವ್ರತೆಯರಿಗೆ ಗಂಡಸರನ್ನು ಎದುರಿಸಲು ಭಯವಾಗುತ್ತದೆ. ಆದರಿಂದ ಅವರು ಗಂಡಸಿನ ಅನ್ಯಾಯಕ್ಕೆ ಗುರಿಯಾದವರ ಮೇಲೆ ದಯೆ ತೋರಿಸಲು ಹಿಂದೆಮುಂದೆ ನೋಡುತ್ತಾರೆ. ಹಾಗೆ ಬಲಿಯಾದವರು ದೂರವಾಡಲಾರದಷ್ಟು ಹತ್ತಿರದವರಾಗಿದ್ದರೆ ಅವರು ತೀರ ಛಿಟನೆಯವರನ್ನೇ ಮದುವೆಯಲು ನೋಡುವರು ಹೊರತು ಅವರಾಧಿಯ ವಿರುದ್ಧ ದೊಬ್ಬಟ ಎಬ್ಬಿಸುವುದಿಲ್ಲ. ಈ ಬಗೆಯ ಸಜ್ಜನಿಕೆಗೆ ಏನೂ ಬೆಲೆಯಿಲ್ಲ. ಅದು ಅಹಿಂಸೆಯಿಂದಾಗಲಿ ಸತ್ಯ ಪ್ರಿಯತೆ ಆಥವಾ ಪಾತಿವ್ರತ್ಯ ಪ್ರಿಯತೆಯಿಂದಾಗಲಿ ಹುಟ್ಟಿದುದಲ್ಲ. ಅದು ಬರಿ ಭೀರುತ್ವಪೂರಿತ ಸ್ವಾರ್ಥತ್ವ ಮತ್ತು ಬಲಹೀನ ಸಜ್ಜನಿಕೆಯೆನಿಸುತ್ತದೆ. ಅದು ಸ್ತ್ರೀ ಜಾತಿಯ ಮಾನವನ್ನು ರಕ್ಷಿಸಲಾರದು. ಅದರ ಬಗ್ಗೆ ಗೌರವವನ್ನು ವರ್ಧಿಸಲೂ ಆರದು.

ಎಲ್ಲ ಮುಖ್ಯ ಮುಖ್ಯ ಸ್ಥಳಗಳಲ್ಲಿಯೂ ಗೃಹರಕ್ಷಕ ದಲಗಳು ಸಂಘಟಿಸಲ್ಪಡುತ್ತಿವೆಯಂತೆ. ಅವರು ನಮ್ಮ ಹೆಣ್ಣು ಮಕ್ಕಳನ್ನು ಹೇಗೆ ರಕ್ಷಿಸುತ್ತಿದ್ದಾರೆ?

ಪಂಜಾಬದಲ್ಲಿ ಗವರ್ನರರ ಆಡಳಿತ.

ಪಂಜಾಬದ ಆಡಳಿತವನ್ನು ಅಲ್ಲಿನ ಗವರ್ನರರ ಹಸ್ತಗತ ಮಾಡಿ ಅವರೇ ಸರಕಾರದ ಸೂತ್ರಗಳನ್ನು ನಡೆಸಲು ಬೇಕೆಂದು ರಾಷ್ಟ್ರಾಧ್ಯಕ್ಷ ಡಾ. ರಾಜೇಂದ್ರ ಪ್ರಸಾದರು ಮೊನ್ನೆ ಬುಧವಾರ ದಿವಸ ಒಂದು ಘೋಷಣೆ ಹೊರಡಿಸಿದರು. ಪಂಜಾಬ ಗವರ್ನರ್ ಸರ್ ಚಂದ ಲಾಲ ತ್ರಿವೇದಿಯವರು ಮುಖ್ಯ ಮಂತ್ರಿ ಡಾ. ಭಾರ್ಗವರ ಮತ್ತು ಅವರ ಅರು ಮಂದಿ ಸಹದ್ಯೋಗಿಗಳ ರಾಜಿನಾಮೆಯನ್ನು ಸ್ವೀಕರಿಸಿರುವರು.

ಪಂಜಾಬದಲ್ಲಿ ಗವರ್ನರರ ರಾಜ್ಯ ಸ್ಥಾಪನೆಯೊಗಲು ಅಕ್ಷಿನ ಕಾಂಗ್ರೆಸ್ ಪಕ್ಷವೇ ಕಾರಣಭೂತವಾಗಿರುತ್ತದೆ ಶಾಸನ ಸಭೆಯಲ್ಲಿ ಬಹುಮತವಿದ್ದ ಕಾಂಗ್ರೆಸ್ ಪಕ್ಷವು ಇಬ್ಬಾಗವಾಗಿ ಒಡೆದು ಆವುಗಳಲ್ಲಿ ಪರಸ್ಪರ ಕಚ್ಚಾಟಗಳು ಆರಂಭವಾದುವು. ಶ್ರೀ| ಭೀಮಸೇನ ಸಾಚಾರರು ಒಬ್ಬೆ ಮುಖ್ಯ ಮಂತ್ರಿಗಳಾಗಿ ಅಧಿಕಾರ ಚಲಾಯಿಸಿದರೆ ಅನಂತರ ಡಾ ಭಾರ್ಗವರು ಮುಖ್ಯ ಮಂತ್ರಿ ಪದಕ್ಕೇರಿದರು. ಪರಿಣಾಮವಾಗಿ ಪಂಜಾಬದ ರಾಜಕೀಯದಲ್ಲಿ ಅನಿಶ್ಚಿತ ಪರಿಸ್ಥಿತಿ ನೆಲೆನಿಂತಿತು. ಮಂತ್ರಿ ಮಂಡಳದ ಕಾರ್ಯವು ಕುಂಠಿತವಾಯಿತು. ಪ್ರಾಂತದ ಒತಸಾಧನೆಯಲ್ಲಿ ಮಂತ್ರಿ ಮಂಡಳವು ನಿರತವಾಗುವ ಬದಲಿಗೆ ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳುವುದರಲ್ಲೇ ನಿರತವಾಯಿತು.

ಈ ಅವಸ್ಥೆಯನ್ನು ಗಮನಿಸಿದ ಕಾಂಗ್ರೆಸಿನ ಕೇಂದ್ರ ಪಾರ್ಲಿಮೆಂಟರಿ ಬೋರ್ಡು ಕೆಲ ಸಮಯದ ಹಿಂದೆ ಪಂಜಾಬ ಶಾಸನ ಸಭೆಯ ಕಾಂಗ್ರೆಸ್ ಪಕ್ಷಕ್ಕೆ ಒಂದು ಸೂಚನೆ ಕಳುಹಿಸಿ ಎರಡೂ ಪಕ್ಷದ ಪ್ರತಿನಿಧ್ಯತ್ವಕ್ಕೆ ಮಂತ್ರಿ ಮಂಡಳ ಪಂಜಾಬದಲ್ಲಿ ಏರ್ಪಡಿಸಬೇಕೆಂದು ತಿಳಿಯಪಡಿಸಿತು. ಮುಖ್ಯ ಮಂತ್ರಿ ಡಾ| ಭಾರ್ಗವರು ಆ ಸಲಹೆಯನ್ನು ಗೌಣವಿಸದೆ ತನ್ನ ಶತ್ರುವರ್ಗವನ್ನು ಬಲಪಡಿಸುವ ಪ್ರಯತ್ನ ಕೈಬಿಡಿದರು. ವಿರೋಧ ಗುಂಪಿನವರನ್ನು ಮಂತ್ರಿ ಮಂಡಳದಲ್ಲಿ ಸೇರಲು ಬಿಟ್ಟಲ್ಲಿ ಕಾಂಗ್ರೆಸ್ ಪಕ್ಷದ ಕಚ್ಚಾಟಗಳು ಮಂತ್ರಿ ಮಂಡಳದೊಳಗೂ ಬಂದು ಅದರಲ್ಲೂ ಕಚ್ಚಾಟ ಪ್ರಾರಂಭವಾಗುವುದೆಂದು ಅವರು ಹೆದರಿದರೊ.

ಕೇಂದ್ರ ಪಾರ್ಲಿಮೆಂಟರಿ ಬೋರ್ಡು ಇದನ್ನು ಗಮನಿಸಿ ಪಂಜಾಬದಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆಯುವ ತನಕ ಕಾಂಗ್ರೆಸ್ ಸರಕಾರವನ್ನು ವಿಸರ್ಜಿಸಿ ಅಲ್ಲಿ ಗವರ್ನರರ ರಾಜ್ಯವನ್ನು ಏರ್ಪಡಿಸುವ ನಿರ್ಣಯ ಮಾಡಿತು.

ಸರಕಾರವು ರಾಜಿನಾಮೆ ಕೊಡಬೇಕೆಂದ ಡಾ. ಭಾರ್ಗವರಿಗೆ ಪಾರ್ಲಿಮೆಂಟರಿ ಬೋರ್ಡು ತಿಳಿಯಪಡಿಸಿದಾಗ ಅವರು ರಾಜಿನಾಮೆ ಕೊಡಲು ಸಮ್ಮತಿಸಲಿಲ್ಲವೆಂದು ಸುದ್ದಿ ಹಬ್ಬಿತ್ತು. ಆದರೆ ಡಾ. ಭಾರ್ಗವರು ರಾಜಿನಾಮೆ ಕೊಟ್ಟನಂತರ ತಾವು ಆ ಬಗ್ಗೆ ವಿಳಂಬ ಮಾಡಿದ ಕಾರಣಗಳನ್ನು ವಿವರಿಸುತ್ತಾ, ಪಂಜಾಬವು ವಿಭಜನೆಯ ಪರಿಣಾಮವಾಗಿ ಬಹಳ ಹಾನಿಗೊಳಗಾಗಿದ್ದು ನಿರಾಶ್ರಿತರ ಪುನರ್ನಿವೇಶನ ಕಾರ್ಯವು ಅತ್ಯಂತ ಜರೂರಾತಿನದಾಗಿದೆ. ಕಾಂಗ್ರೆಸ್ ಮಂತ್ರಿ ಮಂಡಳವು ರಾಜಿನಾಮೆ ಕೊಟ್ಟು ಹೊರಹೋದಲ್ಲಿ ಕಾರ್ಯಗಳೆಲ್ಲಾ ಕುಂಠಿತವಾಗುವವು ಎಂದು ಹೇಳಬಲ್ಲರು. ಈ ವಿಷಯದಲ್ಲಿ ಡಾ. ಭಾರ್ಗವರು ಪಾರ್ಲಿಮೆಂಟರಿ ಬೋರ್ಡಿನ ಅಜ್ಞೆಯನ್ನು ಉಲ್ಲಂಘಿಸಿ ಪ್ರತ್ಯೇಕ ಮಂತ್ರಿ ಮಂಡಳವನ್ನು ರಚಿಸುವುದರಲ್ಲಿ ಮಂಡಿಯೂರುವುದಿಲ್ಲವೆಂದೂ ಸಿದ್ಧಿಯಿತ್ತ.

ಈಗ ಪಂಜಾಬವು ಗವರ್ನರರ ಆಡಳಿತಕ್ಕೊಳಗಾಗಿದೆ. ಮುಂದಿನ ಸಾರ್ವತ್ರಿಕ ಚುನಾವಣೆಗಳ ತನಕ ಈ ಗವರ್ನರರ ಆಡಳಿತದಲ್ಲೇ ಉಳಿಯುವುದು. ಆಸ್ತರ ತನಕ ಗವರ್ನರರು ಸಲಹೆಗಾರರ ಸಹಾಯದಿಂದ ಆಡಳಿತ ಪಡೆಸಲಿರುವರು

Licence No. 60.
Licenced to Post without Prepayment

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. ೮–೦–೦.

ಸಂಪುಟ ೩೦ | ತಾರೀಕು ೬–೭–೧೯೬೦ನೇ ಶುಕ್ರವಾರ | ಸಂಚಿಕೆ ೬

ಹರಟೆ

ಸ್ತ್ರೀಗೆ ಸ್ಥಾನವೆಲ್ಲಿ?

ತರ್ಕಿಸಿದವರು:–ಶ್ರೀ ಎಂ ಎಸ್. ಮೊಣ್ಣಪ್ಪ, ಕಾನೂರು.

ಇಂದು ಸ್ತ್ರೀಯರ ಸ್ಥಾನಮಾನಗಳು ಸಮಾಜದಲ್ಲಿ ಗಣನೀಯವಾಗಿವೆ. ಈ ವರೆಗೆ ಪುರುಷರಿಗೆ ಸ್ತ್ರೀಯರ ಮೇಲಿದ್ದ ಹೀನಭಾವನೆಯು ಹಿಂಗಿ ಪೂಜ್ಯಭಾವನೆಯು ಒಡಮೂಡಿತ್ತಿದೆ ಅವರಿಗೂ ಸಮಾಜ ಪಲ್ಲಿ ತಮ್ಮಂತೆಯೇ ಸಮಾನತೆಯು ದೊರೆಯಬೇಕೆಂದು ಹಲವಾರು ಸಮಾಜ ಸುಧಾರಕರು ಕಂಕಣಬದ್ಧರಾಗಿ ದುಡಿದು ಸ್ತ್ರೀ ಸ್ವಾತಂತ್ರ್ಯ ದೊರಕಿಸಿಕೊಟ್ಟಿದ್ದಾರೆ. ಆವರೆ ಇವನ್ನು ಉಳಿಸಿಕೊಳ್ಳುವ ಸಾಮರ್ಥ್ಯವು ಅವರಲ್ಲಿದೆಯೇ ಎಂಬುವುದು ಸಂದೇಹಾಸ್ಪದವಾಗಿದೆ ಇದನ್ನು ದೊರಕಿಸಿಕೊಟ್ಟ ಪುರುಷರಿಗೆ ವಂದಿಸಿದು ಮನೆಯ: ವೇಲೆ ಬೀಳಿಸಿಕೊಂಡಂತಾಗಿದೆ. ಅರಬಿಯವನ ಡೇರೆಗೆ ಒಂಟೆನುಗ್ಗಿದ ಕಥೆಯಂತಾಗಿದೆ!

ಹಿಂದೂಕೋಡ್ ಬಿಲ್ ಪಾಸಾದ ನಂತರ ಹಲವಾರು ಸ್ತ್ರೀಯರಿಗೂ 'ಕೊಡುಗಳು' ಮೂಡತೊಡಗಿವೆ. ಹಸು, ಎಮ್ಮೆ, ಕುರಿಗಳ ಕೊಡುಗಳು ಅವುಗಳ ಅತ್ಯರ್ಪಣೆಗೆಂದರೆ ನಮ್ಮ ಮಹಿಳೆಯರ ಕೊಡುಗೆ ಪುರುಷ ಸಂಹಾರಕ್ಕೆ! ಇದರಿಂದ ಈ ವರೆಗೆ ಪ್ರೇಮಸಂಸಾರವನ್ನು ಮೂಡಿಕೊಂಡಿದ್ದ ಪುರುಷರ ಹೃದಯವು ಅಲ್ಲೋಲಕಲ್ಲೋಲವಾಗತೊಡಗಿದೆ. ಭಂಡವಾಳ ಕಾಯಿಗಳಿಗೆ ಕವ್ಯೂನಿಸ್ಟರಿಂ ಭಯವಂತೆ ಗಂಡಸರಿಗೆ ಹೆಂಗಸರ ಭಯವಾಗತೊಡಗಿದೆ. ಎಲ್ಲಿ ಯಾವಾಗ ತಮ್ಮ ಸಂಸಾರವು ಒಡೆದು ಹಿಂದೂಸ್ಥಾನ ಪಾಕಿಸ್ತಾನವಾಗುವುದೋ ಎಂಬ ಭಯವುಂಟಾಗಿದೆ. ಮಾತುಮಾತಿಗೂ ಹೆಂಡತಿಯು ಗಂಡನಿಗೆ ಹೊಸವಾಗಿ ಮೊಳೆತ 'ಕೋಡ್' ತೋರಿಸುತ್ತಿದ್ದಾಳೆ. ಅರ್ಧಾಂಗಿಯನ್ನು ಅತಿಗೆ ಮನೆಯಲ್ಲಿಟ್ಟು ಅರಿಯುವುದು ಪೂರ್ವಕಾಲದ ಪುರುಷ ಲಕ್ಷಣವಾದರೆ ಅದು ನವಯುಗದ ಸಾಗರಿಕತೆಯಲ್ಲವೆಂದು ಕೆಲವು ಹೆಂಗಸರು ಅತಿಗೆ ಮನೆಯಂಡ ಹೊರಹಿಮ್ಮಿ, ಕನ್ನಡಿಯ ಮುಂದೆ ನಿಂತು ತಾಲಲೆಯಿಸುತ್ತಿದ್ದಾರೆ. ಹಲವರು, ಸ್ತ್ರೀ ಸಮಾಜದ ಉದ್ಧಾರಕ್ಕೆಂದು ಕೃತಕ ಹಾವಭಾವಗಳಿಂದ ಜಾಗಿಲು ಮರೆಯನ್ನು ತೊರೆದು ಹೆಂಸ್ಟಿಲಿಂದ ಹೊರಳಿ ಜಗಲಿಳಿದು ರಾಜಪಥಗಳದಲ್ಲಿ ನಡೆದು, ಸಭಾಮಂಟಪದ ಮೇಲೆ ಹತ್ತಿ, ಭಾಷಣ ಬಿಗಿದು, ಗೃಹಕೃತ್ಯವನ್ನು ಗಂಡಂದಿಯರಿಗೆ ಒಪ್ಪಿಸಿದ್ದಾರೆ. ಸಂಂದಿನ ಮಾತೆಯರಾಗಬೇಕಿರುವ ಯುವತಿಯರು ಸ್ವಾತಂತ್ರ್ಯ ಜೀವನಕ್ಕಾಗಿ ನರ್ತನಮಾಡಿ ಸಾಹ್ಯ ಸಂಪಾದನೆಗಿಳಿದ್ದಾರೆ. ಇನ್ನು ಕೆಲವರು ಅರ್ಧ ಮರ್ಧ ಇಂಗ್ಲಿಷು ಕಲಿತು ಅರ್ಧನಾರಿಯರಾಗಿ ಚಾಕರಿಪಡೆವ ಸಂಬಳ ಸಂಪಾದಿಸಿ ಸಂಸಾರ ಬೆಂಡಿದ ಪತ್ನ್ಯಾಸಿಗಳಾಗುತ್ತಿದ್ದಾರೆ. ಹಾಗಾದರೆ ಸ್ತ್ರೀಯರಿಗೆ ಸ್ಥಾನ ಸನ್ಯಾಸಾಶ್ರಮವೆ? ಇದು ಸಾಧ್ಯವಾಗಲಿಕ್ಕಿಲ್ಲ! ಈ ವರೆಗೆ ಇತಿಹಾಸಕಾಲದಿಂದಲೂ ಕಣ್ವಮುನಿ, ವೇದವ್ಯಾಸಮುನಿ, ವಶಿಷ್ಠ; ವಿಶ್ವಾಮಿತ್ರ ಇತ್ಯಾದಿ ಪುರುಷರೇ ಮುನಿಗಳಾಗಿರುವುದಲ್ಲದೆ, ಅದು ಸ್ತ್ರೀಯರಿಗೆ ಸಿದ್ಧಿಸಿಲ್ಲ. ಹೆಣ್ಣು, ಹೊನ್ನು, ಮಣ್ಣು, ತ್ಯಾಗಮಾಡಿದರೆ ಸ್ವರ್ಗವಿನೆಂಬುದು ಎಂಬ ಪ್ರತೀತಿಯಿದೆ. ಹಾಗಾದರೆ ಹೆಂಗಸರಿಗೆ ಸ್ವರ್ಗದಲ್ಲೂ ಸ್ಥಾನವಿಲ್ಲವೆಂದಾಯಿತ!

ಪುರುಷ, ಸಂಪಾದನೆಯನ್ನು ಮಾಡಿದರೆ ಸ್ತ್ರೀಯಂ ಸಂರಕ್ಷಣೆಯ ಹೊಣೆಯನ್ನು ಹೊತ್ತಿರುವುದು ಅನಾದಿಕಾಲದಿಂದಲೂ ನಡೆದುಬಂದಂದು ನಮಗೆ ವೇದ್ಯವಿದೆ. ಹಾಗಾಗಿ ಅಡಿಗೆ ತಿಲಪದ ತಲೆಯಿಂ ಅವಳ ಜನ್ಮಸಿದ್ಧವಾದ ಹಕ್ಕೆಂದಾಯಿತು. ಪಾಕಶಾಸ್ತ್ರ ಪಂಡಿತೆಯೂಗಿ ಹೊಟೇಲು ಇಟ್ಟು ಹಣ ಸಂಪಾದಿಸಿ ಸ್ವಾತಂತ್ರ್ಯ ಜೀವನ ನಡೆಸಬೇಕೆಂದು ಹಲವರ ಅಭಿಪ್ರಾಯವಿದೆ. ಹೊಟೇಲು ವ್ಯಾಪಾರ ಸ್ತ್ರೀಯರಿಂಜ ಸಾಧ್ಯವಿಲ್ಲ ಕಾರಣ, ಎಲ್ಲಿ ನೋಡಿದರೂ 'ಶ್ರೀಕಂಠವಿಲಾಸ' 'ಇಂದ್ರಭವನ,' 'ಗಣೇಶಲಾಡ್ಜ' ಎಂಬದಾಗಿ ಬೋರ್ಡ್ ತೂಗುತ್ತಿದೆಯಲ್ಲದೆ; ಸಾವಿತ್ರಿ ಭವನವೆಂದಾಗಲಿ, ಸೀತಾಮಂದಿರವೆಂದಾಗಲಿ ನಾವು ನೋಡಿದಿಲ್ಲ. 'ನಳಪಾಕ'ವೆನ್ನುವರಲ್ಲದೆ 'ದಮಯಂತಿ' ಪಾಕವೆನ್ನುವುದಿಲ್ಲ. ಆದ್ದರಿಂದ ಪಾಕಕಲೆಹುಟ್ಟಿರುವುದೂ ಅವರಿಗೆ ಸ್ಥಾನದೊರೆಯದು. ಅದೂ ಅಲ್ಲದೆ ಯಜಮಾನನಿಲ್ಲದ ಮನೆಯಲ್ಲಿ ಊಟಮಾಡುವುದಿಲ್ಲವೆಂದು ನಳಚೇತನು ಯಮುವುರಿಯಿಂದ ವಾಪಾಸು ಬಂದಿರುವಾಗ ಮನುಧರ್ಮ ಶಾಸ್ತ್ರ ಓದಿದ ಪುರುಷರಾರೂ ಸ್ತ್ರೀಯರ ಹೊಟೇಲಿನಲ್ಲಿ ಊಟಮಾಡಲಿಕ್ಕಿಲ್ಲ. ಒಮ್ಮೆ ಊಟ ಮಾಡಿದರೂ ಮತ್ತೆ ಅಲ್ಲಿಗೆ ಹೋಗಲಿಕ್ಕಿಲ್ಲ. ಕಾರಣ ಅಲ್ಲಿಯ ತಿಂಡಿ ತೀರ್ಥಗಳು ರುಚಿಶುಚಿಯಾಗಿರಲಿಕ್ಕಿಲ್ಲ. ಹೆಂಗಸರಿಗೆ ರುಚಿಯಾದ ತಿಂಡಿ ಮಾಡಲು ಗೊತ್ತಿದ್ದರೆ ಮನೆಯಲ್ಲೇಕೆ ರಾವ, ಕೃಷ್ಣ (ಮಲೆಯಾಳ)ರನ್ನು ಅಡಿಗೆಗೆ ನೇಮಿಸಿಕೊಳ್ಳಬೇಕು?

ಉಪಾಧ್ಯಾಯಿನಿಯಾಗುವುದೆ? ತನ್ನ ಗೇ ಸಂಸಾರ ಬೇಡವೆನ್ನುವ ಕಾಯಿ ಬೇರೆ ನೂರಾರು ತಂದೆ ತಾಯಿಗಳ ಕಾಮ ಕೂಟದಲ್ಲಿ ಹುಟ್ಟಿದ ಮಕ್ಕಳನ್ನು ಹತೋಟಿಯಲ್ಲಿಟ್ಟು ಅವರಿಗೆ ವಿದ್ಯೆಯನ್ನು ಕಲಿಸುವುದೆಂತು? ಅವಳು ಎಷ್ಟು ದೊಡ್ಡದಾಗಿ ಕೂಗಿಕೊಂಡರೂ ಗಂಡು ಮಕ್ಕಳು ಕೂಗಿ ಗೊಲ್ಲಬ್ಬಿಸಿ ಅವಳ ಕ್ಷೀಣಸ್ವರವನ್ನು ಗಾಳಿಯಲ್ಲಿ ತೇಲಿಸಿಬಿಡುವರು ನೀಲ ಧಿಕಾರಿ ಬಂದಾಗ ಅವಳಿಗೆ ಅಲ್ಲಿಯೂ ಸ್ಥಾನವಿರಲಾರದು. ಸಿವಾಯಿಗೆ ಸೇರಿಕೊಂಡು ಯುದ್ಧ ಮಾಡುವುದೆ? ಅದು ಕುರಿಗಳ್ಳರಿಗೆ ತಕ್ಕುದಲ್ಲವೆಂದು ಅರೋಗ್ಯಮಂತ್ರಿ ಅಮೃತಕೌರವರು ಸೇವಾಗ್ರಾಮದಲ್ಲಿ ವಿದ್ಯಾರ್ಥಿನಿಯರನ್ನು ಕುರಿತು ಮಾತಾಡಿದ್ದಾರೆ. ಮರುವನ್ನು ಕಂಡಾಗ ಬಳ್ಳಿಯಂತೆ ಕೆಡೆ ಮೂಲಿಕೊಂಡು ಹೋಗಿ ಅದನ್ನು ಆದರಿಸಿಕೊಂಡು ಹಬ್ಬುವಂತೆ ಹೆಣ್ಣು ಸೈನಿಕರು ಗಂಡು ಸೈನಿಕರನ್ನು ಕಂಡಾಗ ಅವರ ಒಲವು ಗಂಡಸರ ಕಡೆ ಮೂಲಿಕೊಂಡು ಸುಲಭದಲ್ಲಿ ಶತ್ರುಗಳಿಗೆ ಶರಣಾಗತರಾಗಬಹುದೆಂದು ಅವರ ಅಭಿಪ್ರಾಯವಿರಬಹುದು. ಅಲ್ಲದಿದ್ದರೆ ಅಲ್ಲಿ ಬರಿ ಹುಬ್ಬುಗಳ ಎ ಸಿ. ಆಗಿ ತಮಗೆ ಇಚ್ಛೆಯಿಲ್ಲದಿದ್ದರೂ ಮತ್ತೊಬ್ಬರನುನಯತೋಷಪಡಿಸುವುದು ತಾನೆ ಅಲ್ಲಿಯ ಕೆಲಸ? ಅಲ್ಲಿ ಸ್ವಾತಂತ್ರ್ಯವಿದೆಯೆ? ಸ್ಥಾನವಿದೆಯೆ?

ಸಾಹಿತ್ಯ ರಂಗದಲ್ಲಿ ಅವಳಿಗೆ ಸ್ಥಾನವಿದೆಯೆ? ಸಾಮಾನ್ಯವಾಗಿ ವೈದಾಣಿಕ ಕಾಲದಿಂದಲೂ ಕವಿಗಳ ಸಾಲಿನಲ್ಲಿ ಹೆಂಗಸರ ಹೆಸರು ಬಂದಿದಿಲ್ಲ. ವಾಲ್ಮೀಕಿಕವಿ, ಕಾಳಿದಾಸಕವಿ ಎಂಬವರೇ ಪ್ರಸಿದ್ಧಿಗೆ ಬಂದಿದ್ದವರು. ಈಗಿನ ಕಾಲದಲ್ಲೂ ಒಬ್ಬಿಬ್ಬರು ನಂಠಕವಿಶ್ರಿಗಳನ್ನು ಬಿಟ್ಟರೆ ಯಾರೂ ಪ್ರಾಶಸ್ತ್ಯಕ್ಕೆ ಬಂದುದಿಲ್ಲ. ಕೃತಿ ಚೌರ್ಯಮಾಡಿ, ಸಮಸ್ಯೆಗೆ ಉತ್ತರವನ್ನಪೇಕ್ಷಿಸಿ ಒಬ್ಬಿಬ್ಬರು ಪತ್ರಿಕೆಗಳಲ್ಲಿ ಹೆಸರನ್ನ ಜಾಹಿರಾತುಪಡಿಸಲು ಬರೆಯುತ್ತಾರಲ್ಲದೆ ಸಾಹಿತಿಗಳೆನಿಸಿಕೊಂಡಿರುವುದಿಲ್ಲ. ಆದರೆ ಸ್ತ್ರೀಯರು ಸಾಹಿತಿಗಳ ಕೈಹಿಡಿದು ಅವರಿಗೆ ಸ್ಫೂರ್ತಿಯನ್ನು ಕೊಟ್ಟ ಉದಾಹರಣೆಗಳಿವೆ. ಮುದ್ದಣ್ಣಕವಿಯು ತನ್ನ ಹೆಂಡತಿ ಮನೋರಮೆಯೊಡನೆ ಚಕ್ಕಂದವಾಡುತ್ತಿದ್ದಾಗ ಉಪಯೋಗಿಸಿದ ಮಾತುಗಳೆಲ್ಲಾ ಸಾಹಿತ್ಯವೇ ಆಗಿದೆ. ಅವಳ ಅನುಕಂಪೆಯನ್ನು ಈಗಿನ ಕೆಲವು ಸ್ತ್ರೀ ಸಾಹಿತಿಗಳು ಮಾಡಿಕೊಂಡು ತಮ್ಮ ಗಂಡಂದಿಯರನ್ನು ಪರಿಚಯಿಸಿ ಪೀಡಿಸಿದಾಗ ಕೋಪಗೊಂಡ ಸಾಹಿತಿ ಗಂಡಂದಿಯರು ಸಿಡಿಮಿಡಿಗೊಂಡು 'ಸಕಲಗುಣಾಸಂಪನ್ನೇ (ಏಕ ಗುಣಾಹೀನೆ) ಮನುಷ್ಯ ಗುಣಾಹೀನೆ' ಎಂದಾಗ ಅದರ ಅರ್ಥವನ್ನೇ ಮಾಡಿಕೊಳ್ಳಲಾರದೆ ಅಷ್ಟರಲ್ಲೇ ತೃಪ್ತಿಗೊಳ್ಳುವ ಮುಗ್ಧ ಸ್ತ್ರೀ ಸಾಹಿತಿಗಳೂ ಇದ್ದಾರೆ ಮನುಷ್ಯ ಗುಣವೇ ಇಲ್ಲದವಳಲ್ಲಿ ಮತ್ತೆ ಯಾವ ಗುಣವಿದ್ದೀತು?

ಗಂಡನ ಕೈಹಿಡಿದು ಸಂಸಾರಿಯಾಗಿ ಅರ್ಧಾಂಗಿಯೆನ್ನುವ ಭಾವಾರ್ಥಕ್ಕೆ ಸರಿಯಾಗಿ ಪಡೆದು ಗೃಹಿಣಿಯು ಸ್ಥಾನವನ್ನು ದೊರಕಿಸಿಕೊಳ್ಳುವರೆ? ಅದೂ ಇಲ್ಲ. ಸ್ತ್ರೀಯನ್ನು ಸಂಸಾರದಲ್ಲಿ ಗಾಡಿಯು ಒಂದು ಚಕ್ರವೆಂತಲೂ ಮುಖದಲ್ಲೊಂದು ಕಣ್ಣೆಂತಲೂ, ತಾಯಿಯೆಂತೂ, ದೇವತೆಯೆಂದು ನಂಬಬಹುದು. ಆದರೆ ಅರ್ಧಾಂಗಿಯೆಂದು ನಂಬಲಕಾಶದು. ಬೂವಾಗ ತನ್ನ ಗಂಡನ ಅರ್ಧಾಂಗವಾಗಿ ಅತನ ಆತ್ಮೀಯತೆಯನ್ನು ಪಡೆದು ಹೃದಯು ಕಮಲದಲ್ಲಿ ಸ್ಥಾನ ಪಡೆಯಬತ್ತಾಳೋ ಅಂದು ಅರ್ಧಾಂಗಿಯೆಂದು ಹೇಳಬಹುದು. ಪುರುಷರ ಹೃದಯಲ್ಲಿ ಸ್ಥಾನವನ್ನು ಪಡೆಯಬೇಕಾದರೆ ಸ್ತ್ರೀಯರು ಅಡಿಗೆ ಮನೆಯೆಂಬ ಅಭೀಸಿನಿಂದ ಚತುರತೆಯೆಂಬ ಪಾಸ್ ಪೋರ್ಟ್ ತೆಗೆದ ಕೊಂಡು ಪತಿಪ್ರೇಮವೆಂಬ ಮಾರ್ಗದಿಂದ ನಡೆದು ಹೃದಯಕಮಲದಲ್ಲಿ ಚಿರಸ್ಥಾಯಿಯೂಗಿ ಸ್ಥಾನವನ್ನು ಪಡೆಯಬೇಕು. ಆ ಸ್ಥಾನವನ್ನು ಗಳಿಸಿಕೊಳ್ಳದೆ ಬರೀ ಕಾಮುಪ್ರೇಮಿಣಿ ಪತ್ನಿಯೆಂದರೆ ಒರೀ ಪೊಟ್ಟೆಗಳಕ್ಕಿಡುವ 'ಕಾಯಿನ್ ಬೀ' ಯೆಂದೇ ಹೇಳಬೇಕಾ ಸಂಪಾದನೆಮಾಡುವ ಗಂಡನಿಗೆ ಸಂರಕ್ಷಣೆ ನೂಡುವ ಹೆಂಡತಿಯಾದರೆ ಅವಳನ್ನು ಮತ್ತೆ ಯಾವ ಹೆಸರಿನಿಂದ ಕರೆಯಬಹುದು?

ಮರವು ಚಿಗಿತು ಮಿಡಿಹೂವು ಹಣ್ಣುಗಳೆಂದೊಡಗೂಡಿ ನೋಡುವವರ ಮನಸೆಳೆದು ಪ್ರಶಂಸೆಗೆ ಕಾರಣವಾಗುವುದಾದರೂ ಆ ಪ್ರಶಂಸೆಗೆ ಮುಖ್ಯ ಕಾರಣ ನೆಲದಡಿಯಲ್ಲಿರುವ ಬೇರು. ಅದು ಮರಕೆ ಬೇಕಿರುವ ರಸವನ್ನು ಸಂಗ್ರಹಿಸಿಕೊಡುವುದರಿಂದ ಪ್ರಪಂಚದ ಬೆಡಗಿನ ವಾತಾವರಣದ ಸವಿಯನ್ನು ತಾನು ಅನುಭವಿಸಬೇಕೆಂದು ಬೇರು ನೆಲದಡಿಯಿಂದ ಮೇಲೆ ಬಂದಿದ್ದೇ ಆದರೆ ಸರ್ವನಾಶವಾದೀತು. ಅದರಂತೆ ಸ್ತ್ರೀಯರು ಪುರುಷರಂತೆ ತಮಗೂ ಪುರುಷರಷ್ಟೇ ಸ್ಥಾನಮಾನಗಳು ಬೇಕೆಂದು ಹಟತೊಟ್ಟಿದ್ದಾದರೆ ಸಂಸಾರ ಶಕಟವು ಮೊಟಕಾಗದಿರದು. ಸ್ತ್ರೀಯು ಆದಿಯಿಂದಲೂ ಪುರುಷನ ಜೀವನ ಸಾಮ್ರಾಜ್ಯದಲ್ಲಿ ತನ್ನ ಅತ್ಯುನ್ನತ ಸ್ಥಾನಮಾನಗಳನ್ನು ಪಡೆದಿರುತ್ತಾಳೆ. ಹಾಗಾದ ಮೇಲೆ ಇಂದು ಸ್ತ್ರೀಯರು ಪುರುಷನ ಕೈಯೊಳಗೆ ಕನ್ನಡಿಯೋಗಿರುವರೆಂದೂ ಸಂಸಾರದಲ್ಲಿ ತವ ಗೆ ಪೃಥಮ ಸ್ಥಾನ ದೊರೆಯಬೇಕೆಂದೂ ಸರ್ವ ಸ್ವಾತಂತ್ರ್ಯವಿರಬೇಕೆಂದೂ ಹೂಕೆ ಕೂಗಿಕೊಳ್ಳುತ್ತಿದ್ದಾರೆ? ಪೂರ್ವದಿಂದಲೂ ಸ್ತ್ರೀಪುರುಷರು ಪ್ರೇಮ ಸೌಹಾರ್ದದಿಂದ ಸಂಸಾರ ನೀಗಿಸಿಕೊಂಡು ಬಂದು ಆದರ್ಶಕರಾಗಿದ್ದಾರೆ ಆದಕಾರಣ ಪತಿವ್ರತಾಶಿರೋಮಣಿಗಳೆಸ್ಬೆ ಕೀರ್ತಿವಂತರಾಗಿ ಸರ್ವರಿಗೂ ಪೂಜಾರ್ಹರಾಗಿದ್ದಾರೆ. ಮತ್ತೀತಕ್ಕೆ ಈಗ ಈ ಹುಚ್ಚು ಆವೇಶವನ?

ಕಟ್ಟಡದ ಮೇಲೆ ಲಕ್ಷೋಪಲಕ್ಷ ರೂಪಾಯಿಗಳ ಬೆಲೆಬಾಳುವ ಸ್ವರ್ಣಕಲಶಗಳಿರಬಹುದು. ಅದನ್ನು ಹೊತ್ತು ನಿಂತ ಕಟ್ಟಡದ ತಳದಲ್ಲಿ ಕಲಿಕಲ್ಲುಗಳ ಅಸ್ತಿ ಭಾರವಿದೆಯೆಂಬುವುದು ಸರ್ವರಿಗೂ ವಿದಿತವಿದೆ. ಆ ಸ್ವರ್ಣಕಲಶದ ತುದಿಗೇರಬೇಕೆಂದು ಕಲಿಕಲ್ಲುಗಳು ಬಯಸಿ ಹೊರಟರೆ ಇಡೀ ಕಟ್ಟಡವೇ ಕಸಿದುಬಿದ್ದು ಹಾನಿಯಾಗಬಹುದು. ಗೃಹಿಣಿಯು ತನ್ನ

ವಿಶ್ವಸಾಹಿತಿ ಹೆಚ್. ಜಿ. ವೆಲ್ಸ್.

[ಲೇ:-ಶ್ರೀ ಹು. ಚೀ. ನಾಗರಾಜಶರ್ಮಾ, ಚಿತ್ರದುರ್ಗ]

ಸುಮಾರು ಎಪ್ಪತ್ತೈದು ವರ್ಷದ ಕೆಳಗೆ ಲಂಡನ್ ನಗರದ ಒಂದು ರಸ್ತೆಯಲ್ಲಿ ಅನೇಕ ಹುಡುಗರು ಆಟವಾಡುತ್ತಿದ್ದಾಗ ಒಂದು ಘಟನೆ ಪಡೆಯಿತು. ಆ ಹುಡುಗರ ಪೈಕಿ ಹಿರಿಯವನಾದವನೊಬ್ಬ ಬೆಕ್ಕ ಹುಡುಗನನ್ನು ಹಿಡಿದು ಎತ್ತಿಕೊಂಡು 'ಬ್ಯಟ್ ವೆಲ್ಸ್' ಎಂದು ಕರೆದು, ಗಾಳಿಯಲ್ಲಿ ಮೇಲಕ್ಕೆ ತೂರಿದನು. ಆ ಬಡ್ಡಿ ವೆಲ್ಸ್ ಕೆಳಗೆ ಬರುವಾಗ ಅವನನ್ನು ಹಿರಿಯ ಹುಡುಗನು ಹಿಡಿದುಕೊಳ್ಳುವ ಬದಲು ಕೆಳಗೆ ಬೀಳಿಸಿ, ಅವಘಡ ಕಾಲನ್ನು ಮುರಿದನು.

ಅನೇಕ ತಿಂಗಳ ವರೆಗೆ ಬಡ್ಡಿಯು ಹೋವಿನಿಂದ ಹಾಸಿಗೆಯಲ್ಲಿ ನರಳಿದನು; ಅವನ ಕಾಲುಗಳು ಬಹು ಭಾರವಾಗಿದ್ದವು. ಕಾಲಿನ ಎಲುಬು ಪರಿಯಾದ ಸ್ಥಳದಲ್ಲಿ ಹೊಂದಿಕೊಳ್ಳಲಿಲ್ಲ. ಎಲುಬನ್ನು ಮತ್ತೆ ಮುರಿದು ಸರಿಪಡಿಸಲೇಬೇಕಾಯಿತು. ಆದು ಅತ್ಯಂತ ಘೋರವಾದ ಅನುಭವ; ಚಿಕ್ಕ ಬಡ್ಡಿಯು ಭಯಂಕರವಾದ ತೀವ್ರ ವೇದನೆಯಿಂದ ತರಳಿದನು.

ಕಾಲುಮುರಿದುದು ಸಾಹಿತ್ಯ ಭಾಗ್ಯಕ್ಕೆ ಅನುಕೂಲವಾಯಿತು.

ಆಗ ಆದು ಒಂದು ರುದ್ರನಾಟಕದಂತೆ ಕಂಡರೂ, ಬಡ್ಡಿಗೆ ವಿಶ್ವಸಾಹಿತಿಯಾಗಲು ಸಹಾಯಕವಾಯಿತು. ನನಗೆ ಗೊತ್ತಿರುವ ಹರ್‌ಬರ್ಟ್ ಜಾರ್ಜ್‌ವೆಲ್ಸ್ ಅಥವಾ ಹೆಚ್. ಜಿ ವೆಲ್ಸ್, ಈ ಬಡ್ಡಿವೆಲ್ಸ್, ಸಾಮಾನ್ಯವಾಗಿ ಅವರ ಗ್ರಂಥಗಳನ್ನು ಓದದವಳೇ ವಿರಳ. ಅವರು ಇಪ್ಪತ್ತೈದು ಗ್ರಂಥಗಳಿಗಿಂತ ಹೆಚ್ಚಾಗಿ ರಚಿಸಿರುತ್ತಾರೆ.

ತಮ್ಮ ಕಾಲು ಮುರಿದು ಹೋಗಿದ್ದು ತಮ್ಮ ಅದೃಷ್ಟದ ಸಂಕೇತ ಎಂದು ಅವರು ಆಗಾಗ್ಗೆ ಹೇಳುತ್ತಿದ್ದರು. ಏಕೆಂದರೆ ಕಾಲನ್ನು ಮುರಿದುಕೊಂಡ ಕಾಲದಲ್ಲಿ ಒಂದು ವರ್ಷದ ಕಾಲ ಅವರು ಮನೆಯಿಂದ ಹೊರಗೆ ಹೋಗದಂತೆ ಪ್ರತಿಬಂಧಿಸಲ್ಪಟ್ಟಿದ್ದರು. ಆಗ್ಗೆ ಅಸಕ್ತಿಯಿಂದ ಕೈಗೆ ಸಿಕ್ಕಿದ ಪುಸ್ತಕಗಳನ್ನೆಲ್ಲಾ ಓದಿದರು. ಓದುವುದು ಬಿಟ್ಟು ಮತ್ತೊಂದು ಕೆಲಸ ಮಾಡಲು ಅವರಿಗೆ ಅವಕಾಶವಿರಲಿಲ್ಲ. ಇದರ ಪರಿಣಾಮವಾಗಿ ಸಾಹಿತ್ಯದಲ್ಲಿ ಅಭಿರುಚಿಯೂ ಗ್ರಂಥಗಳನ್ನು ಓದುವುದರಲ್ಲಿ ಆಸಕ್ತಿಯೂ ಬೆಳೆಯಿತು. ಅವರಂತೆ ಅವರು ಉತ್ಸೇಜನ ಹೊಂದಿ ಸಾಹಿತ್ಯಾಭಿವೃದ್ಧಿ ಮಾಡಲು ಪ್ರೇರಿತರಾದರು. ಪಾಮರತ್ವವನ್ನ ತೊರೆದು ಪಾಂಡಿತ್ಯವನ್ನು ಪಡೆಯಬೇಕೆಂದು ಪ್ರತಿಜ್ಞೆ ಮಾಡಿದರು. ಮುಂದೆ ಕಾಲು ಅವರನ್ನು ಜೀವಪರ್ಯಂತ ಒಂದು ಹೊಸ ಪಥಕ್ಕೆ ಕರೆದೊಯ್ಯಿತು!

ಕ್ರಿಕೆಟ್ ಆಟಗಾರನ ಮಗ.

ಹೆಚ್. ಜಿ. ವೆಲ್ಸ್‌ರು ಗ್ರಂಥಗಳಿಂದಲೇ ಅತಿ ಹೆಚ್ಚಾಗಿ ಹಣ ಪಡೆಯುವ ವಿಶ್ವಗ್ರಂಥಕರ್ತರಲ್ಲಿ ಒಬ್ಬರಾಗಿ ಬಾಳಿದರು. ಲೇಖನಗಳಿಂದಲೇ ಸಮಾರು ೨೦,೦೦೦ ಪೌಂಡು ಹಣವನ್ನು ಗಳಿಸಿದರು. ಆದರೂ ಅವರು ಬೆಳೆದು ಬಂದುದು ಲೋಭಿ ಜೀವನದಲ್ಲಿ ಅವರ ತಂದೆಯವರು ಒಬ್ಬ ಪ್ರಸಿದ್ಧ ಕ್ರಿಕೆಟ್ ಆಟಗಾರರು; ಕ್ರಿಕೆಟ್ ಆಟದಿಂದಲೇ ಬೇಕಾದಷ್ಟು ಹಣ ಗಳಿಸಿದ್ದರ. ಅವರು ಮಧ್ಯೆವರ್ಗದ ಕೆಳಸ್ತರಗಳ ಅಂಗಡಿಯೊಂದನ್ನು ನಡೆಸಿಕೊಂಡು ಬರುತ್ತಿದ್ದರು ಆದರೆ ಅದು ನಷ್ಟದಲ್ಲಿ ಮುಳುಗಲಾರಂಭಿಸಿತು.

ಹೆಚ್. ಜಿ. ವೆಲ್ಸ್‌ರು ಆ ಅಂಗಡಿಯ ಒಂದು ಸಣ್ಣ ಕೊಠಡಿಯಲ್ಲಿ ಜನಿಸಿದರು. ಅಂಗಡಿಯು ನೆಲಮಾಳಿಗೆಯೊಳಗೆ ಅಡಿಗೆ ಮನೆಯಿತ್ತು. ಅಡಿಗೆ ಕೋಣೆಕಾದ ಕತ್ತಲು ಮಬ್ಬೆ. ಅಲ್ಲಿಗೆ ಮೇಲಿನ ಕೊಠಡಿಯೊಂದರ ಕಂಡಿಯಿಂದ ಮಾತ್ರ ಬೆಳಕು ಬರುತ್ತಿತ್ತು. ಹೆಚ್. ಜಿ. ವೆಲ್ಸ್‌ರು ಆ ಕತ್ತಲು ಕೋಣೆಯಲ್ಲಿ ಕುಳಿತುಕೊಂಡು, ಮೇಲಿನ ಕೊಠಡಿಗೆ ಬರುತ್ತಿದ್ದ ಜನರ ಕಾಲಿನ ಶಬ್ದವನ್ನು ಗ್ರಹಿಸುತ್ತಿದ್ದರು. ಕೆಲವು ವರ್ಷಗಳ ನಂತರ ಅವರ ಜನರ ಕಾಲುಗಳ ಮತ್ತು ಪಾದರಕ್ಷೆಗಳ ಶಬ್ದದಿಂದ ತಾವು ಜನಾಂಗವನ್ನು ಹೇಗೆ ಗುರುತಿಸುತ್ತಿದ್ದರೆಂಬ ವಿಚಾರದಲ್ಲಿ ಲೇಖನವನ್ನು ಬರೆದರು.

ತಂದೆಯು ಮಣ್ಣಿನ ಪಾತ್ರೆಯ ಅಂಗಡಿಯನ್ನು ಕೊನೆಗೆ ಮುಳುಗಿಸಿತು. ಸಂಸಾರವನ್ನು ಹೇಗೆ ನಡೆಸಬೇಕೆಂದು ದಿಕ್ಕೇ ತೋಚದಂತಾಯಿತು. ವೆಲ್ಸ್‌ರ ತಾಯಿಯವರು ಒಂದು ಹೊಡ್ಡ ಎಸ್ಟೇಟಿನಲ್ಲಿ ಮೇಲ್ವಿಚಾರಕರಾಗಿ ಕೆಲಸಕ್ಕೆ ಸೇರಿಕೊಳ್ಳಬೇಕಾಯಿತು. ತಾಯಿಯವರ ಬಳಿ ಅನೇಕ ಮಂದಿ ಸೇವಕರಿದ್ದರು. ತಾಯಿಯು ದರ್ಶನಕ್ಕಾಗಿ ಆಗಾಗ್ಗೆ ಅಲ್ಲಿಗೆ ವೆಲ್ಸ್‌ರು ಹೋಗಿ ಬರುತ್ತಿದ್ದರು. ಅಲ್ಲಿಯೇ ಅವರು ಮೊಟ್ಟ ಮೊದಲು ಇಂಗ್ಲಿಷ್ ಜನರ ಭವ್ಯಜೀವನವನ್ನು ಕಂಡರು. ಆದೂ ಅ ಸೇವಕರ ಮನೆಯಲ್ಲಿ!

ಜವಳಿ ವ್ಯಾಪಾರಿಯ ಗುಮಾಸ್ತೆಯಾಗಿ

'ದಿ ಔಟ್‌ಲೈನ್ ಆಫ್ ಹಿಸ್ಟರಿ' ಎಂಬ ಗ್ರಂಥವನ್ನು ವೆಲ್ಸ್‌ರವರು ರಚಿಸುವ ಮುನ್ನ, ತಮ್ಮ ೧೩ನೇ ವರ್ಷದಲ್ಲಿ ಜವಳಿ ವ್ಯಾಪಾರಸ್ಥನ ಗುಮಾಸ್ತೆಯಾಗಿ ವಾಣಿಜ್ಯ ಜೀವನದಲ್ಲಿ ಕಾಲಿಟ್ಟರು. ಮುಂಜಾನೆ ಐದು ಗಂಟೆಗೆ ಎದ್ದು, ಅಂಗಡಿಯ ಕಸ ಬಳಿದು, ಬೇಕಿಯನ್ನು ಹೊತ್ತಿಸಿ ದಿನಕ್ಕೆ ೧೪ ಗಂಟೆಗಳ ಕಾಲ ಜವಾನನೇತೆ ದುಡಿಯಬೇಕಾಯಿತು. ಇದು ನಿತ್ಯ ಕ್ಲೇಶವಾಯಿತು. ಕೆಲಸವು ಹೀನವಾಗಿ ಕಾಣಿಸಿತು. ತಿಂಗಳ ಕೊನೆಯಲ್ಲಿ ಯಜಮಾನನು ವೆಲ್ಸ್‌ರನ್ನು ತ್ರಾಸದಾಯಕವಾಗಿದ್ದಾನೆಂದೂ, ಶಿಸ್ತು ಸಂಯಮ ಇಲ್ಲವೆಂದೂ, ಚತುರನಲ್ಲವೆಂದೂ ಹೇಳಿ ಕೆಲಸದಿಂದ ತೆಗೆದು ಹಾಕಿದನು.

ಆನಂತರ ಒಂದು ಔಷಧಿ ಅಂಗಡಿಯಲ್ಲಿ ಕೆಲಸಕ್ಕೆ ಸೇರಿದರು. ಪುನಃ ತಿಂಗಳ ಕೊನೆಯಲ್ಲಿ ಅವರು ಕೆಲಸದಿಂದ ತೆಗೆದು ಹಾಕಲ್ಪಟ್ಟರು.

ಕೊನೆಗೆ ಮತ್ತೊಬ್ಬ ಜವಳಿ ವ್ಯಾಪಾರಿಗಾರನ ಅಂಗಡಿಯಲ್ಲಿ ಕೆಲಸ ಸಿಕ್ಕಿತು. ಊಟದ ವ್ಯವಸ್ಥೆಯಿದ್ದುದರಿಂದ ಈ ಬಾರಿ ಕೆಲ ಕಾಲ ಅಲ್ಲಿಯೇ ನೆಲೆಸಲು ಹಿಡಿದ ವರ್ಷಗಳು ಕಳೆಯಲು, ಅಲ್ಲಿಯೇ ಇರಲು ಅವರಿಗೆ ಕಷ್ಟ ಸಾಧ್ಯವಾಯಿತು. ಒಂದು ದಿನ ಭಾನುವಾರ ಮುಂಜಾನೆ, ಬೆಳಗಿನ ಉಪಾಹಾರವನ್ನು ಲೆಕ್ಕಿಸದೆ, ಹದಿನೈದು ಮೈಲಿ ದೂರ ಬರೀ ಹೊಟ್ಟೆಯಲ್ಲಿ ಕಾಯಿಯವರ ದರ್ಶನ ಪಡೆಯಲು ನಡೆದೇ ಹೋದರು. ವೆಲ್ಸ್‌ರು ಉದ್ಯೋಗ ಗೊಂಡಿದ್ದರ. ಕಾಯಿಯರ್ನ್ನು ಬೇಡಿಗರು; ಅತ್ತರು. ಇನ್ನೂ ಆ ಜವಳಿ ಅಂಗಡಿಯಲ್ಲೇ ಕಾವಿರಬೇಕಾದರೆ ಪ್ರಾಣಹತ್ಯೆ ಮಾಡಿಕೊಳ್ಳುವುದಾಗಿ ಅಸೆ ಮಾಡಿದರು

ಉಪಾಧ್ಯಾಯರ ವೃತ್ತಿಗೆ ಕರೆ

ಆಗ್ಗೆ, ಹೃದಯ ಸ್ಪರ್ಶಿಸುವಂತ ಒಂದು ದೀರ್ಘ ಪತ್ರವನ್ನು ತಮ್ಮ ಸಹೆಯ ಶಿಲೆಯ ಗುರುಗಳಿಗೆ ಬರೆದರ. ಜೀವನವು ಬಹು ಬೇಜಾರಾಗಿರುವುದಾಗಿಯೂ, ಮತ್ತೆಸ್ಸು ನಿರಾಶೆಯಿಂದ ಕೂಡಿರುವುದಾಗಿಯೂ ಇನ್ನ ಜೀವಂತರಾಗಿರಲು ತಮಗೆ ಆಶೆ ಇಲ್ಲವೆಂದೂ ತಿಳಿಸಿದ್ದರು.

ಗುರುಗಳು ಆಶ್ಚರ್ಯಭರಿತರಾಗಿ ಕಾಗದವೊಂದನ್ನು ಬರೆದು ಧೈರ್ಯ ಹೇಳಿ, ಶಾಲೆಯ ಉಪಾಧ್ಯಾಯರಾಗಿ ತೆಗೆದುಕೊಳ್ಳುವುದಾಗಿ ಉತ್ತರವಿತ್ತರು. ಆದು ಅವರ ಜೀವನದಲ್ಲಿಯ ಮೊತ್ತೊಂದು ಘಟ್ಟ.

ಆದಾಗ್ಯೂ ಹೆಚ್. ಜಿ. ವೆಲ್ಸ್‌ರು ಸಣ್ಣ ಧ್ವನಿ ಮತ್ತು ಸ್ಪಷ್ಟ ನುಡಿಯ ಜೀವಂತ ಅಂಗಡಿಯಲ್ಲಿ ಕಳೆದ ನಿತ್ಯ ಕ್ಲೇಶದ ವರ್ಷಗಳು ತಮಗೆ ಬೇರೆ ರೂಪದಲ್ಲಿ ಅಶೀರ್ವಾದ ಮಾಡಿದಂತಾಗಿದೆ' ಎಂದು ತಾತ್ವಿಜೆಗೆ ಹೇಳುತ್ತಿದ್ದರು. ಅವರು ನಿಜವಾಗಿಯೂ ಸೋಮೂರಿ ಮತ್ತು ಪೈಗಳ್ಳರಾಗಿದ್ದರು. ಅವರಿಗೆ ಜವಳಿ ಅಂಗಡಿಯ ವನು ಕೆಲಸ ಮಾಡುವುದನ್ನು ಹೇಳಿಕೊಟ್ಟನು.

ಅನಿರೀಕ್ಷಿತ ವಿಪತ್ತು.

ಉಪಾಧ್ಯಾಯರಾದ ಕೆಲವು ವರ್ಷಗಳ ನಂತರ ಅನೀಕ್ಷಿತ ವಿಪತ್ತು ಹೆಚ್. ಜಿ. ವೆಲ್ಸ್‌ರಿಗೆ ಒದಗಿತು. ಆದು ನಡೆದುದು ಹೀಗೆ-ಒಂದು ದಿನ ಅವರು ಫುಟ್‌ಬಾಲ್ ಆಟುತ್ತಿದ್ದರು. ಆಟವು ಒಂದು ಘಟ್ಟವನ್ನು ಮುಟ್ಟಿ ಉದ್ವೀಪಿತಗೊಂಡಾಗ ಆಟಗಾರರು ಅವರನ್ನು ಕೆಳಗೆ ಬೀಳಿಸಿ ತುಳಿದುಬಿಟ್ಟರು. ಅವರ ಮೂತ್ರ ಪಿಂಡಕ್ಕೆ ಬಲವಾದ ಏಟು ಬಿದ್ದಿತು. ಬಲ ಶ್ವಾಸಕೋಶಕ್ಕೆ ಒಹು ಧಕ್ಕೆ ಯಾಯಿತು. ರಕ್ತಪ್ರವಾಹ ಹರಿಯಿತು.

ಡಾಕ್ಟರುಗಳು ತಮ್ಮ ಪ್ರಯತ್ನವು ನಿಷ್ಪ್ರಯೋಜನವೆಂಬು ಬರೆದರು. ಹೆಚ್. ಜಿ. ವೆಲ್ಸ್‌ರು ತಿಂಗಳು ಗಟ್ಟಲೆ ಸಾವಿನ ಭಯದಲ್ಲಿ ಕಾಲ ತಳ್ಳಿದರು. ಜನ್ಮಾರಂಭ ವರುಷ ಕಠಿಣ ಪರಿಸ್ಥಿತಿಯಲ್ಲಿ ಬೆಂದು ಸ್ವಲ್ಪ ಸುಧಾರಿಸಿಕೊಂಡರು. ಅದೇ ಹನ್ನೆರಂಡು ವರುಷಗಳಲ್ಲಿಯೇ ಅವರು ತಾಗಿರಿಕತೆಯುಳ್ಳ ಹೇಶಗಳಲ್ಲೆಲ್ಲಾ ತಮ್ಮ ಹೆಸರನ್ನು ಸ್ಥಿರವಂಥ ಕೆಲಸವನ್ನು ಕೈಗೊಂಡರು.

ಲೇಖನಗಳನ್ನು ಬರೆದು ಸುಟ್ಟು ಹಾಕಿದರು.

ಏನು ಪರಿವರ್ತನೆಗಳ ಕಾಲ ಅವರು ಅನಂತವಾಗಿ ಬರೆದರು ಆದರೆ ಆಗ ಬರೆದ ಗ್ರಂಥಗಳು, ಲೇಖನಗಳು ಮತ್ತೆ ಕೆಲವೆಗಳು ರಚನೆತ್ತಾಗಿರಲಿಲ್ಲ. ಮತ್ತೆನ ಸ್ವಯೋಜಕವಾಗಿದ್ದವು. ಅಂತೆಯೇ ಅವರು ತಾವು ರಚಿಸಿದ ಸಾಹಿತ್ಯವನ್ನೆಲ್ಲಾ ಸುಟ್ಟು ಬೂದಿ ಮಾಡಿದರು.

ಆನಾರೋಗ್ಯದಿಂದ ಸ್ವಲ್ಪ ಚೇತರಿಸಿಕೊಂಡಾಗ ಪುನಹ ಉಪಾಧ್ಯಾಯ ವೃತ್ತಿಗೆ ಸೇರಿದರು. ಬಯೊಲಜಿ ತರಗತಿಯಲ್ಲಿ ಒಬ್ಬ ಚೆಲುವೆ ಹುಡುಗಿ ಇದ್ದಳು. ಅವಳ ಹೆಸರು ಕ್ಯಾಥರೀನ್ ರಾಬಿನ್ಸ್ ಎಂದು. ಬಯೊಲಜಿ ವಾರಕ್ಕಿಂತ ಕ್ಯಾಥರೀನಳು ಹೆಚ್ಚು ಚಕ್ಕಾರ್ಯಕರ್ತಳಾಗಿ ಹೆಚ್. ಜಿ ವೆಲ್ಸ್‌ಗೆ ಕಡೆ ಹೆಚ್. ಜಿ. ವೆಲ್ಸ್‌ರೂ ಹುಗಿದೆ! ಕೃಷ್ಣನೇ ಸಾಧ್ಯವಾದ ಸಖ ಸಂಕೋಚಗಳನ್ನು. ಅನುಭವಿಂಬೇಕೆಂದು ಇಬ್ಬರೂ ನಿಶ್ಚಯ ಮಾಡಿದರು. ಆ-ತೆಯೇ ನಂದನೆಯೊದರು. ಆದು ೫೦ ವರ್ಷಗಳ ಹಿಂದಿನ ಮಾತು ಕಾಯಿ ಲೆಯಿಂದ ವೆಲ್ಸ್‌ರು ಆ ಜೀವನವನ್ನಾಗದೆ ಜೀವನಗೊಂಡರು ಕ್ಯಾಮಾನವಯಂತ್ರವಾಗಿ ಆದರ ಶಕ್ತಿಯಿಂದ ವರ್ಷಕ್ಕೆ ಎಡರಂತೆ ಬ್ರಹ್ಮಗ್ರಂಥಗಳನ್ನು ರಚಿಸಿದರು. ಆ ಗ್ರಂಥಗಳು ಲೋಕವಿಖ್ಯಾತವಾದವು ೧೯೪೬ರಲ್ಲಿ ಹೆಚ್. ಜಿ. ವೆಲ್ಸ್‌ರು ನಿಧನ ಹೊಂದಿದರು.

ನಡುರಾತ್ರಿಯಲ್ಲಿ ಎದ್ದು ಭಾವನೆಗಳನ್ನು ಬರೆದಿಡುತ್ತಿದ್ದರು.

ಹೆಚ್. ಜಿ ವೆಲ್ಸ್‌ರು ಅಪರಿಮಿತವಾದ ಜ್ಞಾನ ಸಂಪದಿಸಿದ್ದರು ನಡುರಾತ್ರಿಯಲ್ಲಿ ಎದ್ದು, ತಮಗೆ ಹೊಳೆದ ಸಾಮಾನ್ಯವಾದ ಅಭಿಪ್ರಾಯಗಳನ್ನು ತಮ್ಮ ಕಣ್ಣಾ ಪುಸ್ತಕಗಳಲ್ಲಿ ಒರೆದಿಡುತ್ತಿದ್ದರು. ಜವುಳಿ ಅಂಗಡಿಯಲ್ಲಿ ಕೆಲಸ ಮಾಡಲು ಅಸಮರ್ಥನಾಗಿದ್ದ ಈ ದಡ್ಡ ಹುಡುಗ ಕೊನೆಗಾಲದ ಹೊತ್ತಿಗೆ ತನ್ನ ಪುಸ್ತಕದಲ್ಲಿ ನಾರೈವತ್ತು ವರ್ಷಗಳಿಗೆ ಬೇಕಾದ ಸಾಹಿತ್ಯ ಸಾಮಗ್ರಿಗಳನ್ನು ತೀಪರಿಸಿದ್ದನು.

ಲಂಡನಿನ ಅಂಗಡಿಯಲ್ಲಿ, ಹೊಗೆ ಬಂಡಿಯಲ್ಲಿ, ವೆಂಡಿಬರೀನಿಯನ್ ಸಮುದ್ರ ಅಕರ್ಷಣೆಯ ಫೀಲಿ ನೀರಿನ ದಡದಲ್ಲಿ, ಎಲ್ಲಿ ಕಂಡರೆ ಅಲ್ಲಿ ಬರೆಯುವುದೇ ವಾಡಿಕೆ; ಫ್ರೆಂಚ್ ದೇವೀರಾ ಬಳಿ ಎರಡು ಬಂಗಲೆಗಳನ್ನು ಬಾಡಿಗೆಗೆ ತೆಗೆದುಕೊಂಡಿದ್ದರು. ಒಂದು ಕರ್ಮಕಾಲೆ, ಪತ್ನಿಯಂದು ಆಕಿಧಿಗಳ ಬಿಡಾರ. ಸಾಮಾನ್ಯಕಾಲ ಮಾತ್ರ ಆಕಿಧಿಗಳೊಡನೆ ಹರಟೆ ಹೊಡೆಯಲ್ತಿದ್ದರು. ಆಗ ವ್ಯವಸ್ಥಿತವಾಗಿ ಕೂಡಿಟ್ಟ ಮದ್ಯವನ್ನು ತರಿಸಿ ಆತಿಥಿಗಳಿಗೆ ಹೊಚ್ಚ ತಾವೂ ಕುಡಿಯುತ್ತಿದ್ದರು. ವಿಶ್ವ ಸಾಹಿತಿ ಹೆಚ್. ಜಿ. ವೆಲ್ಸ್‌ರೊಡನೆ ಸಂಧಾನೆಗೆ ನಡೆಸುವುದೆಂದರೆ ಆತಿಥಿಗಳಿಗೆ ಬಹು ಇಷ್ಟ.

ಇಂದು ಹೆಚ್. ಜಿ. ವೆಲ್ಸ್‌ರೊಡನೆ ಸಂಧಾನೆಗೆ ನಡೆಸಲು ಸಾಧ್ಯವಿಲ್ಲದಿದ್ದರೂ, ಅವರ ಗ್ರಂಥಗಳನ್ನು ಪಠಿಸಿದರೆ, ಅವರೇ ಎದುರಿಗೆ ಕುಳಿತು ಮಾತನಾಡುತ್ತಿದ್ದಂತೆ ಭಾಸವಾಗುತ್ತದೆ.

'ಕಾಯಿನಾಡು'

ಮನೆಯಲ್ಲೇ ಆಳಿದು ಮನೆಗಲಸ, ಪಕ್ಕಳಾಬೈಕೆ ಇತ್ಯಾದಿ ಅಮೂಲ್ಯ ಮತ್ತು ಅತ್ಯಾವಶ್ಯಕ ಕೆಲಸಗಳನ್ನು ಮಾಡಬೇಕಿರುವುದರಿಂದ ಅವಳು 'ಅಜ್ಞಾತವಾಸದಲ್ಲಿರುವುದು ಸಾಮಾನ್ಯ. ಆದರಲ್ಲಿಯೇ ಅವಳಿಗೆ ಏಳ್ಗೆಯಿದೆ. ಇದೇ ಸಂಸಾರದಲ್ಲಿ ಅವಳ ಮುಖ್ಯ ಕರ್ತವ್ಯ, ಅಗ್ರಸ್ಥಾನ. ಸಂಸಾರಕ್ಕೆ ಅತಿಗಲ್ಲಾಗಿ ದೇವಧರ್ಮರಾಜ್ಯದಲ್ಲಿ ತೊಳಗಿ ಬೆಳಗಿ ಮಕ್ಕಳಿಗೆ ಮಾತೆಯಾಗಿ, ಮನೆಗೆ ಮಡದಿಯಾಗಿ, ಗೃಹಸ್ಥನಿಗೆ ಗೃಹಿಣಿಯಾಗಿ ಗುರುವಾಗಿ ಅತನ ಜೀವನದಲ್ಲಿ ಗೆಳತಿಯಾಗಿ, ಜೀವನದ ಗುರಿಯನ್ನು ಸಾಧಿಸುವಂತಹ ಶ್ರೇಷ್ಠ ಪಥದಲ್ಲಿ ನಡೆದು ಪುರುಷರ ಹೃದಯವನ್ನು ತೊಕ್ಕಿದರೆ ಸ್ತ್ರೀಯರಿಗೆ ಅಲ್ಲಿ ಸ್ಥಾನ, 'ಪತಿಯೇ ಪ್ರತ್ಯಕ್ಷ ದೇವತಾ' ಎಂದು ತಿಳಿದಿರುವ ಗೃಹಿಣಿಯವಳಿಗೆ ಮತ್ತೆಲ್ಲಿ ಸ್ಥಾನದೊರೆಕಿದೆ?

ಕೆಸಾನ ಮಜದೂರ್ ಪ್ರಜಾಪಕ್ಷ

ಕಳೆ ಸಂಗಳಲ್ಲಿ ನಗರದಲ್ಲಿ ಆಯೆಲ ಜಾರತ ರಾಜಕೀಯ ಪರಿಷತ್ತ ಕೂಡ ಂಗ್ರೆಸ್ಸಿನ ನಿಂದ ಹೋದ ವರ ಆಚಾರ್ಯ ಕೃಪಾಲಾನಿಯವರ ವಂದ ಳೆದ್ದಿದಲ್ಲಿ ಕೆಸಾನ ಪಜದೂರ ಪ್ರಜ ಪಕ್ಷವೆಂಬ ವಿರೋಧಿ ಪಕ್ಷವನ್ನ ಸ್ಥಾಪಿಸಿದರು.

ಪಾಟ್ನಾದಲ್ಲಿ ಜಂಗಿಗ ರಾಜಕೀಯು ಪರಿಷತ್ತಿನಲ್ಲಿ ಕಾಂಗ್ರೆಸನ್ನು ಹಾಗೂ ಸರ ಕಾರವನ್ನು ಟೀಕಿಸಿ ಮಂಡಿಳುಗಳು ಕೊಟ್ಟ ಭಾಷಣಗಳನ್ನು ಸಭಿಕರು ಗ್ರಹಿಂ ಡ ಹರ್ಷೋದ್ಗಾರಗಳಿಂದ ಸ್ವಾಗತಿಸಿದರು. ಕಾಂಗ್ರೆಸ್ ಸರಕಾರವು ಜನರ ಅನ್ನದ, ಬಟ್ಟೆಯ ಸಮಸ್ಯೆಗಳನ್ನು ಪರಹರಿಸುವುದ ರಲ್ಲಿ ಯಶಸ್ಸು ಸಿಗಿರುವುದಿಲ್ಲ ಜನರ ಸಂಕಷ್ಟಗಳು ಹೆಚ್ಚಾಗಿದೆ ಎಂದು ಭಾಷಣ ಮಾಡಿದವರು ಖಂಡತಂಡವಾಗಿ ಹೇಳಿದರು

ಭಾರತದಲ್ಲಿ ಪ್ರಬಲ ವಿರೋಧಿ ಪಕ್ಷ ವೊಂದನ್ನು ಏರ್ಪಡಿಸುವ ಆಗತ್ಯವಿದೆ ಎಂ ಬ ಅಕಾಂಕ್ಷೆಯಿಂದ ಆ ಅಕಾಂಕ್ಷೆಯನ್ನು ಈಡೇರಿಸುವ ಉಲವಾಗಿ ಪ್ರಜಾ ಪಕ್ಷವು ನಿರ್ಮಾಣಗೊಂಡಿತ್ತು ಎಂದು ಪಕ್ಷದ ನಿರ್ಮಾಣದ ಸ್ವಾಗತಿಸಿದರು.ತ

ಪಟ್ನಾ ಪರಿಷತ್ತಿನಲ್ಲಿ ಕಾಂಗ್ರೆಸ್ ನಿಂದ ಸಿಡಿದು ಹೊಂದವಂಗೆ ಮೂಕ್ರವಲ್ಲ ಭಾರತ ಸಮಾಜವಾದಿ ಪಕ್ಷದ ಮುಂದಾ ಳಗಳಾದ ಶ್ರೀ ಜಯ ಪ್ರಕಾಶ ನಾರಾಯ ಣರವರೂ ಭಾಷಣ ಮಾಡುವರೆ ಆಸ್ಪದ ಕೊಡಲಾಯಿತು. ಮುಂಬರುವ ಚುನಾವ ಣೆಗಳಲ್ಲಿ ಕಾಂಗ್ರೆಸಿನ ವಿರುದ್ಧವಾಗಿ ಇತರ ರಾಜಕೀಯ ಪಕ್ಷಗಳು ಸಂಯುಕ್ತ ರಂಗ ವನ್ನು ಏರ್ಪಡಿಸುವ ಸಲುವಾಗಿ ಸಮಾಜ ವಾದಿ ಪಕ್ಷವು ಪ್ರಜಾ ಪಕ್ಷದೊಡನೆ ಸೇರಿ ಕೊಳ್ಳುವುದೆಂದು ಶ್ರೀ ಜಯ ಪ್ರಕಾಶ ನಾರಾಯಣರವರು ಈಗಾಗಲೇ ಹೇಳಿರುವ ರ. ಆದುದರಿಂದ ಪ್ರಜಾ ಪಕ್ಷವು ಮುಂ ಬರುವ ಸಾರ್ವತ್ರಿಕ ಚುನಾವಣೆಗಳಲ್ಲಿ ಇ ತರ ಪಕ್ಷಗಳೊಡನೆ ಸೇರಿಕೊಂಡು ಕಾಂಗ್ರೆ ಸಿಗೆ ವಿರೋಧವಾಗಿ ಸ್ಪರ್ಧಿಸುವ ಕಾರ್ಯ ದಲ್ಲಿ ನಿರತವಾಗಿದೆ

ಭಾರತದಲ್ಲಿ ಪ್ರಜಾಸತ್ತೆಯು ಯಶಸ್ವಿ ಯಾಗುವ ಸಲುವಾಗಿ ಪ್ರಬಲ ವಿರೋಧಿ ಪಕ್ಷವೊಂದು ಏರ್ಪಡುವುದು ಆಗತ್ಯವೆಂ ದು ಕಂಡು ಬಂದಿದೆ. ವಿರೋಧಿ ಪಕ್ಷವು ರಚನಾತ್ಮಕ ಟೀಕೆಗಳನ್ನ ಕೊಡುವುದರಿಂ ದ ದೇಶಕ್ಕೆ ಹಿತವಾದೆಯೆಂದು ಮುಖ್ಯಮಂ ತ್ರಿ ಶ್ರೀ ನೆಹರುಗಳು ಹೇಳಿರುವರು.

ದೇಶದಲ್ಲಿ ಈಗ ಕಾಂಗ್ರೆಸು ಅತ್ಯಂತ ಪ್ರಬಲ ಸಂಸ್ಥೆಯಾಗಿದ್ದು ಅವನ್ನು ಜುನಾ ವಣೆಗಳಲ್ಲಿ ಸೋಲಿಸುವುದು ಬಹು ಕಷ್ಟತ ರವಾಗಿರುತ್ತದೆ. ಆದರೆ ಸ್ವಾತಂತ್ರ್ಯಾ ನಂತರದಲ್ಲಿ ದೇಶದ ಪರಿಸ್ಥಿತಿ ಹದಗೆಡ ತ್ತಾ ಬಂದಿರುವ ಪರಿಣಾಮವಾಗಿ ಕಾಂಗ್ರೆ ಸು ಅನೇಕ ಟೀಕೆಗಳಿಗೆ ಒಳಗಾಗಿ ತನ್ನ ವರ್ಚಸ್ಸನ್ನು ಕಳಕೊಂಡಿರುವುದರಿಂದ ವಿ ರೋಧಿ ಪಕ್ಷದ ನಿರ್ಮಾಣದ ಕಡೆಗೆ ಜನ ರ ಮನಸು ತಿರುಗಿದೆ.

ಈಗ ಸ್ಥಾಪನೆಯಾದ ಪ್ರಜಾ ಪಕ್ಷವು ಜನರ ಆ ಕಾಂಕ್ಷೆಗಳನ್ನು ತಾಡೀರಿಸಬಹುದೆ, ಚುನಾವಣೆಗಳಲ್ಲಿ ಯಶಸ್ವಿಯಾಗುವುದೇ ಇತ್ಯಾದಿ ಪ್ರಶ್ನೆಗಳಿಗೆ ಈಗಾಗಲೇ ಉತ್ತರಿಸುವುದು ಅಸಾಧ್ಯವಿ ರುತ್ತದೆ.

ೀ ಕಿಡ್ವಾಯಿ ನುನರ ಧೋರಣೆ

ಬಾರತ್ಯ ೀ ಂಯ್ ಡಳ ದಲ್ಲಿದ್ದ ಕೊಂ ನಮ್ಮ ಂಸ್ಟ್ರಿ ಸ್ಟೀಹರುಗಳು ವಿಧೇಯಂಂಗಿ ಕಿರ್ಯಂತ್ರ ವಿರೋಧಿ ಕ್ಸ ಸ್ಟ್ಕಾರು ಆಚಾರ್ಯ ಕೃಪಲಾನಿಯವರಿಗೆ ಬೆಂಬಲಿಗ ರಾಗಿರುವ ಶ್ರೀ ರಫಿ ಅಹಮ್ಮದ್ ಕಿದ್ವಾಯಿ ಯವರು ಭಾರತ ರಾಜಕೀಯದಲ್ಲಿ ಅತ್ಯಂತ ದೊಡ್ಡ ಸವ ಸೈಯಾಗಿರ ವರು.

ಆಚಾರ್ಯ ಕೃಪಾಲಾನಿಯ ವರು ಪ್ರಜಾತಾತ್ಮಕ ರಂಗವನ್ನ ವೆರ್ಪಡಿಸಿದಾ ಗ ಶ್ರೀ ಕಿದ್ವಾಯಿಯವರು ಅವರಿಗೆ ಬಲ ಗೈಯಂತಿದ್ದರು. ಆಚಾರ್ಯ ಕೃಪಲಾ ನಿಯವರು ಕಾಂಗ್ರೆಸಿನಿಂದ ಹೊರಬೀಳುವ ಮುಂಚಿತವಾ ಗಿಯೇ ಶ್ರೀ ಕಿದ್ವಾಯಿಯವರ ರಾಜಿನಾಮೆ ಕೊಟ್ಟಿದ್ದು ಸುದ್ದಿ ಪ್ರ ಚಿತ. ಆದರೆ ಪ್ರಜಾಪಕ್ಷವು ಏರ್ಪಟ್ಟ ತು. ಆಚಾರ್ಯ ಕೃಪಾಲಾನಿಯವರೂ ಮತ್ತಿತರ ಕಾರ್ಯಕರ್ತರೂ ಕಾಂಗ್ರೆಸಿಗೆ ರಾಜೀನಾಮೆಯನ್ನಿತ್ತರೂ ಕಿದ್ವಾಯಿಯ ವರು ಮಾತ್ರ ಏನು ಮಾಡುತ್ತಲಿರುವರೆಂಬುದನ್ನು ಹೇಳುವುದೇ ಅಸಾಧ್ಯವಾಗಿರು ತ್ತದೆ

ಶ್ರೀ ರಫಿ ಅಹಮದ್ ಕಿದ್ವಾಯಿ ಯವರು ಅಚಲ ಕಾಂಗ್ರೆಸ್ ಭಕ್ತರೆಂದ್ಹಾ ರೆ. ದೇಶದ ಸೇವೆಯ ಲ್ಲೇ ಅವರು ಜೀವನ ವನ್ನ ಕಳೆದಿದ್ದಾರೆ ಅವರಿ ಕಳೆದ ಎರಡು ವರ್ಷಗಳಿಂದ ಕಾಂಗ್ರೆಸ್ಸಿನೊಡನೆ ಅವರ ಸಂಬಂಧವು ಹಿತಕರವಾಗಿದೆಯೆಂದು ಕಾ ಣುವುದಿಲ್ಲ ಉತ್ತರ ಪ್ರದೇಶದಲ್ಲಿ ಕಾಂ ಗ್ರೆಸಿಗರನೇಕರು ಅವರ ಬೆಂಬಲಿಗರಿಬ್ಬರ ವರು ಕಳೆದ ವರ್ಷ

ಕೊಡಗು

ತಾ. ೬-೭-೧೯೫೧ನೇ ಶುಕ್ರವಾರ

ಕಾಶ್ಮೀರ.

ಕಾಶ್ಮೀರ ಸಮಸ್ಯೆಯನ್ನು ಹಿಂದೂ ದೇಶವು ಸಂಯುಕ್ತ ರಾಷ್ಟ್ರ ಸಂಘದ ಮುಂದೆ ತಂದು ವರ್ಷಗಳು ಕಳೆದರೂ ಸಂಯುಕ್ತ ರಾಷ್ಟ್ರ ಸಂಘವು ಖಂಡತುಂಡವಾದ ನಿರ್ಣಯವನ್ನು ಕೈಕೊಳ್ಳದೆ ವರ್ತಿಸುತ್ತಿರುವ ವಿಚಾರ ಈ ಹಿಂದೆ ಬರೆಯಲಾಗಿತ್ತು. ಇತ್ತಲಾಗಿ ಅದು ತನ್ನ ವಿಶೇಷ ಪ್ರತಿನಿಧಿಯೊಬ್ಬನನ್ನು ನೇಮಿಸಿ ಅವರು ಕರಾಚಿಯಲ್ಲಿ ಮೂತುಕತೆ ನಡೆಸಿ ದಿಲ್ಲಿಗೆ ಬಂದಿದ್ದಾರೆ. ಇವರ ನೇಮಕವನ್ನು ಪಾಕಿಸ್ತಾನವು ಈ ಹಿಂದೆಯೇ ಸ್ವಾಗತಿಸಿತ್ತು. ಇಂಡಿಯೂ ಸರಕಾರವು ತನ್ನ ಅಸಹಕಾರವನ್ನು ಪ್ರಕಟಿಸಿತ್ತು. ಡಾ. ಗ್ರಾಹಮ್‌ರವರು ಮೊನ್ನೆಯೂಗಿ ದೆಲ್ಲಿಗೆ ಬಂದು ಕೇಂದ್ರ ಸರಕಾರದಲ್ಲಿ ಸಂಬಂಧಿಸಿದವರೊಡನೆ ಮೂತುಕತೆ ನಡೆಸುತ್ತಿದ್ದಾರೆ. ತಾರೀಕು ೩ ರಲ್ಲಿ ಗ್ರಾಹಮ್‌ರವರು ಪಂಡಿತ ನೆಹರೂರವರನ್ನು ಕಂಡಿದ್ದಾರೆ. ಕಾಶ್ಮೀರದ ಸಮಸ್ಯೆಯ ನಿಜಸ್ಥಿತಿಯೆನ್ನು ತಿಳುಸಲು ಕೇಂದ್ರ ಸರಕಾರವು ಸದಾ ತಯೂರಿದ್ದರೂ ಡಾ. ಗ್ರಾಹಮರು ಮೂದುವ ತೀರ್ಮೂನಕ್ಕೆ ಅದು ಬದ್ಧವಾಗಿಲ್ಲ.

ಈ ಮಧ್ಯೆ ಪಾಕಿಸ್ತಾನವು ಕಾಶ್ಮೀರ ಗಡಿಯಲ್ಲಿ ಹತ್ಯಾಸ್ತ್ರಕರಣವನ್ನು ಪ್ರಾರಂಭಿಸಿದೆ. ಒಂದರ ನಂತರ ಒಂದರಂತೆ ಕೊಲೆಗಳು ನಡೆಯುತ್ತಿವೆ. ದಿನ ಕಳೆದಂತೆ ಇದು ಹೆಚ್ಚತೊಡಗಿವೆ. ಜಮ್ಮು ಪ್ರಾಂತದಲ್ಲಿ ಗಡಿಯಿಂದ ಸುಮೂರು ೮೦೦ ಅಡಿ ಒಳಗೆ ಪಾಕಿಸ್ತಾನ ಸುಸಜ್ಜಿತ ಸೇನಾ ತುಕಡಿಗಳು ನುಗ್ಗಿ ಭಾರತ ಸೈನಿಕರ ಮೇಲೆ ಧಾಳಿ ಮೂಡಿರುವರು. ಇದರಿಂದ ಮೃತರಾದ ಎರಡು ಜನ ಸೈನಿಕರ ಶವವನ್ನು ನಂತರ ಕೊಲೆಗಾರರು ಪಾಕಿಸ್ತಾನ ಸರಹದ್ದಿಗೆ ಎಳೆದು ಹಾಕಿದರು. ಈ ಶವಗಳು ಸಂಯುಕ್ತ ರಾಷ್ಟ್ರ ಸಂಘದ ಶ್ರೇಕ್ಷಕರೂಬ್ಬರು ಕೈಯಾಕಿದ ಕಾರಣವೇ ಹಿಂದಕ್ಕೆ ದೊರೆತವು. ಇನ್ನೊಂದೆಡೆ ಅದೇ ಭಾಗದಲ್ಲಿ ಪಾಕಿಸ್ತಾನ ಗಡಿಯಿಂದ ಭಾರತ ಸೇನೆಗಳ ಮೇಲೆ ಗುಂಡು ಹಾರಿಸಲಾಗಿ ಒಬ್ಬರು ಸತ್ತು ಮೂರು ಜನರಿಗೆ ಗಾಯವಾಗಿದೆ ಮತ್ತೆ ತಿತ್‌ವಾಲ್ ಗಡಿಯಲ್ಲಿ ಹಿಂದೀ ಸೈನಿಕರ ಮೇಲೆ ಗುಂಡು ಹಾರಿಸಲಾಗಿದೆ ಇದೇ ಅಲ್ಲದೆ ಇನ್ನೂ ಹಲವು ಬಾರಿ ಪಾಕಿಸ್ತಾನ ಸೇನೆಗಳು ಗುಂಡು ಹಾಕಿವೆ. ಈ ವಿವರಗಳು ಭಾರತ ಸರಕಾರದ ಅವಗಾಹನೆಗೆ ಬಂದು ಪಂಡಿತ ಜವಾಹರಲಾಲ್ ನೆಹರೂರವರು ಭಾರತ ವ್ಯತಿನಿಧಿ ಬಿ. ಎನ್ ರಾವ್‌ರವರ ಮೂಲಕ ಭದ್ರತಾಸಮಿತಿಯ ಪ್ರೆಸಿಡೆಂಟರಿಗೆ ನಿಶೇಧ ಪತ್ರ ಬರೆದಿರುವದಲ್ಲದೆ ಪಾಕಿಸ್ತಾನದ ಈ ಕೆರುಕುಳವನ್ನು ತೀಕ್ಷ್ಣ ನಿಲ್ಲಿಸತಕ್ಕದೆಂದು ಕೇಳಿದ್ದಾರೆ. ಕಾಶ್ಮೀರದಲ್ಲಿ ಯುದ್ಧ ನಿಲ್ಲಿಸಿದ್ದು ಸಂಯುಕ್ತ ರಾಷ್ಟ್ರ ಸಂಘದ 'ಸೀಸ್‌ಫೈಯರ್' ಒಪ್ಪಂದದಿಂತೆ. ಈಗ ಆ ಒಪ್ಪಂದವನ್ನು ಪಾಕಿಸ್ತಾನವು ಮುರಿದು ಧಾಳಿ ನಡೆಸುವದಾದರೆ ಅದನ್ನು ನಿಲ್ಲಿಸುವ ಜವಾಬ್ದಾರಿ ಸಂಯುಕ್ತ ರಾಷ್ಟ್ರ ಸಂಘದ್ದಾಗಿದೆ.

ಕಾಶ್ಮೀರ ಗಡಿಯಲ್ಲಿ ನಡೆದ ಈ ಘಟನೆಗಳನ್ನು ಪರಿಶೀಲಿಸಿದರೆ ಪಾಕಿಸ್ತಾನದ ಈ ಧಾಳಿಯು ಯೋಜನಾ ಪೂರ್ವಕವಾಗಿ ನಡೆದಿದೆಯೆನ್ನಿಸಲಿಲ್ಲ. ಈ ಕೆರುಕುಳವನ್ನು ಪ್ರಾರಂಭದಲ್ಲೇ ನಿಲ್ಲಿಸದಿದ್ದರೆ ಕ್ರಮಶಃ ಭಾರತ ಮತ್ತು ಪಾಕಿಸ್ತಾನಗಳಲ್ಲಿ ಪುನಹ ಕಪನ ಆರಂಭವಾಗಬಹುದು ಸಂಯುಕ್ತ ರಾಷ್ಟ್ರ ಸಂಘದವರು ನ್ಯಾಯಪೂರ್ವಕವಾಗಿ ಕೆಲಸ ಮೂಡುತ್ತಿದ್ದರೆ ಭಾರತ ಪ್ರಧಾನ ಮಂತ್ರಿಗಳ ನಿಶೇಧವನ್ನು ಎತ್ತಿಹಿಡಿಯು ಪಾಕಿಸ್ತಾನವನ್ನು ಎಚ್ಚರಿಸಬೇಕಾಗಿತ್ತೆ. ಕಾಶ್ಮೀರ ಸ್ಪಕರಣದಲ್ಲಿ ಹಲವಾರು ಬಾರಿ ತನ್ನ ಕರ್ತವ್ಯವನ್ನು ಯೋಗ್ಯ ರೀತಿ ಮೂಡದ ಸಂಯುಕ್ತ ರಾಷ್ಟ್ರಸಂಘವು ಈಗ ಹೇಗೆ ವರ್ತಿಸುವದೆಂಬುದನ್ನು ನೋಡಬೇಕಿದೆ.

ವರ್ತಮಾನ.

ತಾ ೯-೭-೫೧ ರಿಂದ ಸರ್ವರಾಗಿ ಹೋಗುವ ಕೊಡಗು ಸರಕಾರಿ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಆರ್ ಎಚ್ ಪಿ. ಹೋಲ್‌ಮೆನ್ನರ ಬಾಲ ತಾತ್ಕಾಲಿಕ ಪ್ರಿನ್ಸಿಪಾಲರಾಗಿ ಕೊಡಗಿನ ನಿವೃತ್ತ ವಿದ್ಯಾಧಿಕಾರಿಯೂದ ಶ್ರೀ ಬಿ ಎಸ್. ಕಾಳಪ್ಪನವರನ್ನು ನೇಮಿಸಿರುವರು

ಕೊಡಗನ್ನು ಬಿಟ್ಟು ಹೋಗಲಿರುವ ಶ್ರೀ ಆರ್ ಎಚ್ ಪಿ ಹೊಲ್‌ಮೆನ್ನರನ್ನು ಬೀಳ್ಕೊಡಲು ತಾರೀಕು ೩-೭-೫೧ ರಲ್ಲಿ ಕಾಸ್ಮೋಪಾಲಿಟನ್ ಕ್ಲಬಿನವರೂ, ತಾ ೬-೭-೫೧ ರಲ್ಲಿ ಕಾಲೇಜಿನ ವಿದ್ಯಾರ್ಥಿಗಳೂ ಚಹಪಾನ ಕೂಟವನ್ನು ಏರ್ಪಡಿಸಿದ್ದರು.

ಕೊಡಗಿನ ಚೀಫ್ ಕಾರಿಸ್ಟ್ ಆಫೀಸರಾಗಿ ಬಂದಿರುವ ಶ್ರೀ ಸೀತಾರಾಮಯ್ಯನವರ ಕಾರ್ಯಭಾರವನ್ನು ತಾ ೬-೭-೫೧ ರಲ್ಲಿ ಕೆಲವರ ಪ್ರಮುಖರು ಸ್ವೀಕರಿಸಿದರು.

ಕೊಡಗಿನ ಚೀಫ್ ಕಾರಿಸ್ಟ್ ಆಫೀಸರಾಗಿ ಬಂದಿರುವ ಶ್ರೀ ಸೀತಾರಾಮಯ್ಯನವರ ಕಾರ್ಯಭಾರವನ್ನು ತಾ ೬-೭-೫೧ ರಲ್ಲಿ ಕೆಲವರ ಪ್ರಮುಖರು ಸ್ವೀಕರಿಸಿದರು.

ಪ್ರೊಫೆಶನಲ್ ಕಾಲೇಜುಗಳಿಗೆ ವಿದ್ಯಾರ್ಥಿಗಳನ್ನು ಆರಿಸಲು ಸಿಲೆಕ್ಟ್ ಕಮಿಟಿಯು ಸೂಚಿಸಿದ ಸೂಚನೆಯನ್ನು ಬದಲಾಯಿಸಿ ಎಗ್ರಿಕಲ್ಚರಲ್ ಕಾಲೇಜಿಗೆ ಶ್ರೀ ಎಸ್ ಬಿ. ವಸಂತ ಮತ್ತು ಕೆ ಎಸ್. ಈಶ್ವರ ಇವರನ್ನು ಚೀಫ್ ಕಮಿಷನರು ಆರಿಸಿರುವರು.

ಕೊಟ್ಟಗೇರಿ ಗ್ರಾಮದ ಶ್ರೀ ಮೂಪಂಗಡ ಕರುಂಬಯ್ಯನವರು ತಾ ೨೬-೬-೫೧ ರಲ್ಲಿ ಮೈಸೂರು ಕೃಷ್ಣರಾಜ ಆಸ್ಪತ್ರೆಯಲ್ಲಿ ನಿಧನರಾದರು

ತಾ ೩೦ ರಲ್ಲಿ ಶನಿವಾರಸಂತೆಯ ಮನೆಯಲ್ಲಾನ ಗೌಸ್ ಎಂಬವರನ್ನು ಯಾರೋ ಕಿವಿದಿ ಕೊಂದಿರುವರೆಂದೂ ಪೋಲೀಸು ತನಿಪೆ ನಡೆಯುತ್ತಿವೆಯೆಂದೂ ತಿಳಿಯು ಬಂದಿದೆ.

ಮಡಿಕೇರಿಯಲ್ಲಿ ವನಮಹೋತ್ಸವವು ತಾ ೩೦ ರಲ್ಲಿ ಆಚರಿಸಲ್ಪಟ್ಟಿತು. ಚೀಫ್ ಕಮಿಷನರು ಕೋಟೆಯು ಆವರಣದಲ್ಲಿ ಎರಡು ಸಂಪಿಗೆ ಗಿಡಗಳನ್ನು ನೆಟ್ಟರು. ಆ ದಿನ ಇತರರಿಗೆ ನೆಡಲು ಹಣ್ಣು ಹಂಪಲು ಗಿಡಗಳು ಕೊಡಲ್ಪಟ್ಟವು. ಕಳೆದ ವರ್ಷದ ವನಮಹೋತ್ಸವದಲ್ಲಿ ಕೊಡಗಿನಲ್ಲಿ ನೆಟ್ಟ ಒಂದೂವರೆ ಲಕ್ಷ ಗಿಡಗಳಲ್ಲಿ ಸುಮೂರು ಒಂದೂ ಕಾಲು ಲಕ್ಷ ಗಿಡಗಳು ಬದುಕಿರಬಹುದೆಂದು ಸರಕಾರ ಅಂದಾಜು ಮೂಡಿದೆ.

ಮಡಿಕೇರಿ ಸೇಟ್ಸಲ್ ಹೈಸ್ಕೂಲಿನ ದೇವಿ ಡಿಬೇಟಿಂಗ್ ಸೊಸ್ಯಾಟಿಯು ಪ್ರಾರಂಭ ಭಾಷಣವನ್ನು ಕೊಡಗು ಸಹಕಾರ ಸಂಘಗಳ ರಿಜಿಸ್ಟ್ರಾರವರಾದ ಶ್ರೀ ಪಿ. ಎನ್. ಚಂಗಪ್ಪನವರು ಮಾಡಿದರು. ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಪಿ. ಎಂ. ಉತ್ತಪ್ಪನವರು ಅಗ್ರಾಸನವನ್ನು ವಹಿಸಿದ್ದರು.

ಮೆಕ್‌ಡಂವೆಲ್ ಕಂಪೆನಿಯು ಮಡಿಕೇರಿ ಶಾಖೆಯ ಮೇನೇಜರುಗಿದ್ದು ತಾರೀಕು ೩೦ ರಲ್ಲಿ ನಿವೃತ್ತರಾದ ಶ್ರೀ ಪುಟ್ಟಿಚಂಡವಂಡ ಪಪ್ಪನವರ ಬದಲು ಶ್ರೀ ಕೊಡ್ಲಿದರ ಎಸ್. ಅಚ್ಚಯ್ಯನವರನ್ನು ನೇಮಿಸಿರುವರು.

ತಾ ೧-೭-೫೧ ರಲ್ಲಿ ವೀರ ಜಪೇಟೆ ನಾಲ್ಕೇರಿ ಗ್ರಾಮದ ಶ್ರೀ ಮೂಳೆರ ಮಂದಣ್ಣನವಂಪ್ಪ ಊರೋ ತಿವಿದು ಕೊಂದಿರುವರೆಂದೂ ಆ ಸಂಬಂಧ ಅವರ ಮಗ ವಿಶ್ವ ಹೆಂಡತಿಯ ದೃಷ್ಟಿಗಿರುವಾಗಿ ಪೋಲೀಸ್ ತನಿಪೆ ನಡೆಯುತ್ತಿದೆಯೆಂದೂ ಸುದ್ದಿ

ತಾರೀಕು ೩೦-೬-೫೧ ರಲ್ಲಿ ಮಡಿಕೇರಿಯಲ್ಲಿ ಕಮ್ಯೂನಿಷ್ಟ್ ಪಕ್ಷ ಭಕ್ತರು ಸೇರಿ ಕೊಡಗಿನಲ್ಲಿ ಒಂದು ಶಾಖೆಯನ್ನು ತೆರೆಯುವ ವಿಷಯ ಮಂಬರುವ ಚುನಾವಣೆಯಲ್ಲಿ ಭಾಗವಹಿಸುವ ಹಾಗೂ ತೀರ್ಮಾನಿಸಿದರು.

ಕೊಡಗಿನ ಶಾಸನಸಭಾ ಚುನಾವಣೆಯು ಬರುವ ನವಂಬರು ತಾರೀಕು ೩೬ ರಿಂದ ೪೯ರೊಳಗೆ ನಡೆಯುಬೇಕೆಂದು ಕೇಂದ್ರ ಸರಕಾರವು ನಿಶ್ಚಯಿಸಿದೆ.

ಈ ವರ್ಷದ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಮಡಿಕೇರಿ ಹುಡುಗಿಯರ ಶಾಲೆಯಲ್ಲಿ ಓದಿತ್ತಿದ್ದ ಶ್ರೀಮತಿ ಏಜ್ಜೆಟ್ಟಿರ ಎಸ್. ಸರಸ್ವತಿಯವರು ೩೫೬ ಪೂರ್ಣಗಳನ್ನು ಪಡೆದು ಕೊಡಗಿನಲ್ಲಿ ಒಂದನೆಯ ದಾಗಿ ತೇರ್ಗಡೆಯೂಗಿರುವರು.

ಕೊಡಗು ಸಹಕಾರ ಇಲಾಖೆಯ ಇನ್ಸ್‌ಪೆಕ್ಟರು ಹಾಗೂ ಸಹಕಾರ್ಯೆಜರರ ವಾರ್ಷಿಕ ಆಡಿಟ್ ಕೋರ್ಸ್ ಮಡಿಕೇರಿಯಲ್ಲಿ ತಾ ೨೦ ರಿಂದ ಪ್ರಾರಂಭವಾಗಿದೆ.

ತಿದ್ದು ಪಡಿ

ಕಳೆದ ಸ್ಕೂಲ್ ಫೈನಲ್ ಪರೀಕ್ಷೆಯ ಫಲಿತಾಂಶ ಸ್ಪತಟವಾದಾಗ ನಾಪೋಕ್ಲು ಶಾಲೆಯ ಕಟ್ಟಿಯಲ್ಲಿ ಶ್ರೀ ಕುಂಡಂಡ್ಕ ಪೂಚಯ್ಯ ಎಂಬ ಹೆಸರು " ಕುಂಡಿಯಂಡ ಪೂಚಯ್ಯ " ಎಂದು ಪ್ರಕಟವಾಗಿತ್ತು. ಇದನ್ನು ಸರಿಪಡಿಸಿ ಓದಿಕೊಳ್ಳಬೇಕಾಗಿದೆ.

ಸಂ.

ಶ್ರೀ ಟಿ. ಎನ್. ಗೋವಿಂದರಾಜು,
'ಕೊಡಗು' ವಿಶೇಷ ವರದಿಗಾರರು,
ವೀರಾಜಪೇಟೆ.

ನೋಟೀಸು.

ಇದರಿಂದ ಸಮಸ್ತ ಜನರಿಗೆ ತಿಳಿಸುವದೇನಂದರೆ–

ಶನಿವಾರಸಂತೆ ಹೋಬಳಿ ನಂದಿಗುಂದ ಗ್ರಾಮದ ರಾಜಗೌಡರ ಹೆಂಡತಿ ದೇವಮ್ಮನವರು ಕಟುಂಬಕ್ಕೆ ಸೇರಿದ ಭೂವಿ ಮತ್ತು ಬಾಣಿ ಸ್ವತ್ತುಗಳನ್ನು ಪರಾಧೀನ ಮೂಡುವ ಪ್ರಯತ್ನದಲ್ಲಿದ್ದಾರೆ. ಈ ಸ್ವತ್ತುಗಳು ಕಟುಂಬಕ್ಕೆ ಸೇರಿದ ಆಸ್ತಿಗಳಿದ್ದು ಅವುಗಳಿಗೆ ಬೇರೆ ಹಕ್ಕುದಾರರಿರವದಿಲ್ಲ. ಈ ಆಸ್ತಿಗಳನ್ನು ಅವರಿಂದ ಯಾರಿಂದರೂ ಪಡೆಕೊಂಡಲ್ಲಾ ಅದು ಅವರಿಗೆ ಹಕ್ಕುಗಳಾಗದು. ಹಾಗೆ ಪಡೆಯಂಕೊಳ್ಳುವವರಿಂದ ಬರುವ ಸರ್ವ ನಷ್ಟಗಳಿಗೂ ಅವರೇ ಜವಾಬ್ದಾರರಾಗಿರಬೇಕೆಂದು ಈ ಮೂಲಕ ಶೃಕಪಡಿಸಿದೆ.

6-7-51 ನಂದಿಗುಂದ ಸೋಮಪ್ಪ.

"PEPPER ON VINES FOR SALE"

Those interested for the purchase of Pepper Standing Crop 1951/52 in both Peremboocolly and Whaddon Estates contact the Manager Peremboocolly Estate Chetali P. O. for permission to view the Crop and further details on or before 27th July 51.

GREENFIELD ESTATE PEPPER CROP FOR SALE ON VINES SEASON 1951/52

Those interested in Purchasing please communicate with Manager, Greenfield Estate for permission to inspect and for further particulars on or before 24th July 1951.

2-1 GREENFIELD ESTATE,
SIDAPUR P. O.

THE CAUVERY PAPER MILLS & FOREST INDUSTRIES LTD.

(Ineorporated in Coorg)

Notice is hereby given that the Register of Members of the Company will be closed for a period of thirty days from 14th July 1951.

Bangalore, VINAI VEL & CO.,
1-7-'51. *Managing Agents.*

ಈಗಿನ ಕೂಪನ್ ಸಾರಾಯಿ.

ಶ್ರೀಮಂಗಲನಾಡು ಹುದಿಕೇರಿ ಪೋಲೀಸ್ ಸ್ಟೇಷನ್ನಲ್ಲಿ ಕಳೆದ ಎರಡು ತಿಂಗಳಿಂದ ಸಿಕ್ಕುತ್ತಿರುವ ಸಾರಾಯಿಯು ಈಡಿಯಟ್ ಅವರನ್ನು ಸಾನಾತರದ ಕಾಯಲ್ತರ್ತನ್ನಾಗಿ ಮಾಡುವಂತಿದ್ದು. ೧.ಡಿ ಸೋಡ ವಾಗ ನಿನ್ನೆಯವರಿಗಿದ್ದು ಕಡಿಯವಾಗ ಒಂದು ಕರದ ಸೀಮೆಣ್ಣೆ ವಾಸನೆಯಿಂದ ಕೂಡಿರುತ್ತದೆ ಅದೂ ಅಲ್ಲದೆ ಮೊದಲಿನಂತೆ ಕುಸ್ಸಿ ತುಂಬ ಇರುವದಿಲ್ಲ. ಕುಪ್ಪಿಯಲ್ಲಿ ಅರ್ಧಾವು ಕವ್ಮಿ. ಸರಕಾರಿ ಡಿಪೋದಲ್ಲೇ ಹೀಗಾಗುವೆಕೆ? ಸಂಬಂಧಿಸಿದವರು ಇದನ್ನು ವಿಚಾರಿಸಬೇಕಾಗಿದೆ.

'ಶ್ರೀಮಂಗಲ ನಾಡಿನ ರೈತ'

ಅನ್ಯಾಯ ನಿಲ್ಲಬೇಕು!

ಬಟ್ಟೆಯ ಬೆಲೆ ಹೇಳತೀರದು. ವ್ಯಾಪಾರಿಗಳಿಗೆ ಸುವರ್ಣ ಕಾಲವಿದ! ಬಡಜನತೆ ತಮ್ಮ ನೆನ್ನೆ ಜೀವನದ ಪರಿಹಾರಕ್ಕಾಗಿ, ಹೊಟ್ಟೆಗೆ ಅನ್ನವಿಲ್ಲದಿಯೂ ಸಂವಾದಿಸಿದ ಹಣವನ್ನು ಇಟ್ಟು 'ಕೋಟಾ ಬಟ್ಟೆ' ಗೆ ಕಾಯುತ್ತಿರುವುದು ವಾಸ್ತವ. ಆದರೆ ಬಟ್ಟೆ ಎಲ್ಲಿ ಹೋರೆಯುತ್ತದೆ? ದೊರೆತರೂ ಯಾವ ಬೆಲೆ?

ದೇಶದ ಹಿತಸಾಧಿಸುವೆವೆನ್ನುವ ಪಾಥಿ ಧಾರಿಗಳೇ ಈ ರೀತಿಯು ಹೀನ ವ್ಯಾಪಾರಕ್ಕಿಳಿದ ಮೇಲೆ ಬೇರೆಯ ಪರ ಮಾತೇ? ಬಡ ಜನತೆಯ ಹಿತ ಸಾಧಿಸಬೇಕು. ಇನ್ನಾದರೂ ಸರಕಾರವೂ ತನ್ನ ಶಾಸನಗಳು ಎಲ್ಲಿಡೆಯಲ್ಲೂ ಜಾರಿಯಲ್ಲಿ ಬರುವಂತೆ ಪ್ರಯತ್ನಿಸುವದೇ?

'ವಾಣಿ'

ಕಾನೆಯೊದ ಕಳ್ಳ

ಮಡಿಕೇರಿ ಜೈಲಿನಿಂದ ಪರಾರಿಯಾದ ಪಣಿಯುರು ಚುಂದನೆಂಬ ಕಳ್ಳನು ಈಗ ಕುಟ್ಟ ಗ್ರಾಮದಲ್ಲಿ ಬಹಳ ಲೂಟಿ ಮಾಡತ್ತಲಿರುವನಂತೆ. ಇದನ್ನು ತಿಳಿದು ಪೋಲೀಸ್ ಅಧಿಕಾರಿಯು ಕೆಲವು ಪೋಲೀಸರನ್ನು ಕಳ್ಳನಿರುವ ಗ್ರಾಮಕ್ಕೆ ಕಳುಹಿಸಿರುತ್ತರು. ಆ ಕಳ್ಳನು ಕುಟ್ಟದಲ್ಲಿ ಒಂದು ಚೆಕ್ಕ ಕಾಡಿನಲ್ಲಿ ಜೀವಿಸುತ್ತಿರುವನೆಂದು ಸುದ್ದಿ. ಆದರೆ ಪೋಲೀಸ್ ಸಿಪಾಯಿಗಳು ಬರೇ ಟೌನಿನಲ್ಲಿ ಸುತ್ತುತ್ತಿರುವಂತೆ ತೋರುತ್ತದೆ. ಈ ಕಳ್ಳನಿಂದಾಗಿ ಗ್ರಾಮದ ಜನರೆಲ್ಲರೂ ಬಹಳ ಹೆದರಿಕೆಯಿಂದ ಜೀವಿಸುತ್ತಿದ್ದಾರೆ. ಈ ಗ್ರಾಮದಲ್ಲಿ ಕೃತನ ಪ್ರಾರಂಭವಾಗಿ ವಾರಗಳಾದವು. ಇಂಥಾ ಒಬ್ಬ ಚೆಕ್ಕ ಕಳನು ಇನ್ನೂ ಸಿಕ್ಕಿಲ್ಲವೆಂಗರೆ ಪೋಲೀಸರ ದಕ್ಷತೆಯನ್ನು ನೆನೆಯಬೇಕಾಗುವದು.

'ಚಿರದುಃಖಿ'

ರೈತನ ಗೋಳು

ಬಡ ರೈತರ ಜೀವನವು ಬಹಳ ಕಷ್ಟದಲ್ಲಿದೆ. ಜೂನ್ ಪ್ರಾರಂಭದಿಂದ ಡಿಸೆಂಬರ್ ಆಖೈರ್ ವರೆಗೆ ಒಬ್ಬೊಬ್ಬನಿಗೆ ೭೫ ಬಟ್ಟೆ ಬತ್ತದಂತೆ ರೇಷನ್ ಮೂಡಿ ಮಾಡಿರುವದು ಸಂಬಂಧಿಸಲ್ಲಿ ಬಾಕಿ ಇರುವ ಉಳಿದ ಬತ್ತವನ್ನೆಲ್ಲಾ ಬಲತ್ಕಾರದಿಂದ ತೆಗೆದುಕೊಂಡು ಹೋಗಿರುವರು. ಆದರೆ ಇದರ ಪೈಕಿ ಕೇರಳ ಪ್ರಾಂತ್ಯದಿಂದ ಜನರಿಗೆ ಭೂಮಿ ಇಲ್ಲದೆ ದುಡಿದು ಉಣ್ಣುವವರು! ಅವರಿಗೆಲ್ಲಾ ಈಗಲೇ ಒಂದು ಕಾಳು ಅಕ್ಕಿ ಸಿಕ್ಕದೆ ಪರಗ್ರಾಮದಿಂದ ಬಟ್ಟೆಗೆ ೩೦ ರೂ. ಗಳಂತೆ ಕೊಟ್ಟು, ರಾತ್ರಿಯಲ್ಲಿ ಯಾರಿಗೂ ತಿಳಿಯದಂತೆ ತಂದು ಜೀವಿಸುತ್ತಿದ್ದಾರೆ. ಇಂಥಹ ಕಷ್ಟ ಸಂತತಿಗಳಿಗೆ ಸರಕಾರವೇ ಕಾರಣವಲ್ಲವೆ? ನಷ್ಟ ಇಲ್ಲಿ ಕಂಬಾರರು ಮಡಿಕೆ ಸೂಟಾಟ ಮಾಡಿ ಇಟ್ಟುಕೊಂಡ ಸ್ವಲ್ಪ ಬತ್ತವನ್ನೂ ಸಹ ಕೊಂಡುಹೋಗಿದ್ದಾರೆ ಹೀಗೆ ಮಾಡಿದ ಇನ್ಸ್‌ಪೆಕ್ಟರಿಗೆ ಈಗ ಒಳ್ಳೆಯ ಉದ್ಯೋಗ ದೊರೆತಿರಬಹುದ. ಆ ಬಡಜನರ ಸ್ಥಿತಿ? ತುಂಬಾ ಭೂಮಿ, ತೋಟ ಇರುವಂತ ರೈತರೂ ತಿಂದ ರೆಪಡುತ್ತಿದ್ದಾರೆ. ಹೊಟ್ಟೆಗೆ ಅನ್ನವಿಲ್ಲದೆ ಕೆಲಸಕ್ಕೆ ಆಳಿಗರು ಒರುವುದೇ ಇಲ್ಲ, ಹಾಗಾಗಿ ಅಕ್ಕಿ ಇಲ್ಲದೆ ಗದ್ದೆ, ತೋಟಗಳ ಕೆಲಸ ಮಾಡುವುದು ಬಂಡಿತವಾಗಿಯೂ ಅಸಾಧ್ಯ. ಜೊತೆಗೆ ಮಳೆ ಇಲ್ಲದೆ ಸಾಧಾರಣ ೧೦ ರಿಂದ ದಿವಸಗಳಿಂದ ಗದ್ದೆಗಳೆಲ್ಲಾ ನೀರಿಲ್ಲದೆ ಒಣಗಿ ಹೋಗಿರುವುದು. ಹೀಗೆ ಮಳೆ ಇಲ್ಲದೆ ಹೋದರೆ ಭೂಮಿಯಲ್ಲಿ ಯಾವ ರೀತಿಯ ಬೆಳೆಯು ಬೆಳೆಯಬಹುದು? ಕೊಡಗಿನಲ್ಲಿ ಬಡ ರೈತರಿಗೆ ಮತ್ರ ರೇಶನ್ ಅಲ್ಲದೆ ದೊಡ್ಡವರಿಗೆ ಯಾವ ರೇಶನ್ ಇರುವುದಿಲ್ಲ ಬಡ ರೈತರು ಬೆಳೆಸಿದ ಬತ್ತವನ್ನು ಸರಿಯಾದ ಕಂಟ್ರೋಲ್ ಬೆಲೆ ೧೮೯ ರೂಪಾಯಿಗಳಂತೆ ಬಲತ್ಕಾರದಿಂದ ತೆಗೆದುಕೊಂಡರು ಆದರೆ ಮಡಿಕೇರಿಯಲ್ಲಿ ಬೆಲ್ಲ ಕಾಫೀಗೆ ರೂ ಒಂದಿದ್ದರೆ ಗ್ರಾಮದಲ್ಲಿ ರೈತನು ೧೮೦ ಕೊಡಬೇಕ ! ಕಳ್ಳರೆಯಂತೂ ಸಿಕ್ಕುವುದೇ ಇಲ್ಲ ಕೋಟಾ ಬಟ್ಟೆಗಳಂತೂ ಹೇಟ್ ಬಾಟ್ ಹಾಕಿದವರಿಗೇ ಸಿಕ್ಕುವುದಲ್ಲದೆ ಬಡ ರೈತರಿಗೆ ಏನೂ ಇಲ್ಲ ಆದರೆ ಬಡ ರೈತನ ಗೋಳನ್ನು ಕೇಳುವ ಸರಕಾರ ನಮಗಿದೆಯೆ?

ಬಡ ರೈತ.

ಪ್ರೊಫೆಷನಲ್ ಕಾಲೇಜುಗಳಿಗೆ ವಿದ್ಯಾರ್ಥಿಗಳ ಅರಿಸುವಿಕೆ.

ಪ್ರೊಫೆಷನಲ್ ಕಾಲೇಜುಗಳಿಗೆ ವಿದ್ಯಾರ್ಥಿಗಳನ್ನು ಆಯುವಾಗ ಸರಕಾರದವರು ಈ ಕೆಳಗಣ ಸಂಗತಿಗಳನ್ನು ಅವಗಾಹನೆಗೆ ತೆಗೆದುಕೊಳ್ಳಬೇಕಾಗಿ ವಿನಂತಿ—

(೧) ಕೊಡಗಿನಲ್ಲಿ ಈ ಕೆಳಗಿನ ಜನಾಂಗಗಳು ಹಿಂದುಳಿದ ಜನಾಂಗಗಳಲ್ಲ.

(೧) ಕೊಡವರು.
(೨) ಗೌಡರು.
(೩) ಬ್ರಾಹ್ಮಣರು.
(೪) ಲಿಂಗಾಯಿತರು.

(೨) ಪ್ರೊಫೆಷನಲ್ ಕಾಲೇಜುಗಳಿಗೆ ಅರ್ಜಿ ಹಾಕಬಹುದಾದ ವಿದ್ಯಾರ್ಥಿಗಳು ಅವರ ಮೂರನೆಗೆ ಗ್ರೂಪ್ ವಿಷಯ ಮಾರ್ಕ್ಸ್‌ಗಳಲ್ಲಿ ಲೆಕ್ಕಚಿಂಗಿಕ್ಕಿವಿರಿ ಮಾರ್ಕ್ಸ್ ಪಡೆದಿರಬೇಕೆಂಬದಾಗಿ ಮದ್ರಾಸು ಸರಕಾರದವರು ತೀರ್ಮಾನಿಸಿರುತ್ತಾರೆ.

ಇದಕ್ಕಾದರೂ ಕಾರಣಗಳು ಏನು?- ಕಾಲೇಜುಗಳಲ್ಲಿ ಸ್ಥಳ ಸಂಕೋಚವಾದ ಈ ವರ್ಷಗಳಲ್ಲಿ, ಆ ಕಾಲೇಜುಗಳಲ್ಲಿ ಕಲಿಯುತ್ತಿರುವ ಕಷ್ಟ ತರಹದ ಪಾಠಗಳನ್ನು ಉತ್ತಮ ತರಗತಿಯ ವಿದ್ಯಾರ್ಥಿಗಳೇ ನಿಭಾಯಿಸಿಕೊಂಡು ಮಾಡಿದಷ್ಟು ವರ್ಷಗಳಲ್ಲಿ ಪೂರೈಸುವರು. ಅಯೋಗ್ಯ ವಿದ್ಯಾರ್ಥಿಗಳು ಕೆಚ್ಚು ವರ್ಷಗಳನ್ನು ತೆಗೆದುಕೊಳ್ಳಬಹುದು, ಯಾ ಕಲಿಯುವುದು ಅಸಾಧ್ಯವೆಂದು ಹಿಂದಕ್ಕೆ ಬರಬಹುದು.

(೩) ಕೊಡಗಿನಿಂದಲೂ ಕೂಡ ಅಯೋಗ್ಯ ವಿದ್ಯಾರ್ಥಿಗಳನ್ನು ಆರಿಸಿ ಮುಂದೆ ಕಳುಹಿಸಿದಲ್ಲಿ, ತಪ್ಪ ವಿದ್ಯಾವ್ಯಾಸಂಗವನ್ನು ಕಾಲಕ್ಕೆ ಸರಯಾಗಿ ಪೂರೈಸಲಿಯಲು, ಕಲಿಯವುದು ಅಸಾಧ್ಯವೆಂದು ಹಿಂತಿರುಗಿದ ಉದಾಹರಣೆಗಳು ಇವೆ ಇಂತಹ ವಿದ್ಯಾರ್ಥಿಗಳನ್ನು ಆರಿಸುವುದರಿಂದ ದೇಶಕ್ಕೆ ನಷ್ಟವಲ್ಲದೆ, ದೇಶದ ವಿದ್ಯಾರ್ಥಿ ಜನಾಂಗಕ್ಕೂ ಸರಕಾರಕ್ಕೂ ಕೂಡ ನಾಚಿಕೆಯೆ!

'ದೇಶಾಭಿಮಾನಿ'

ಬೇಕರಿ ದೋಣಿ

ಬೇಕರಿ ಕಡೆವಿನಲ್ಲಿರುವ ದೋಣಿಯು ಹಳೆಯದಾಗಿ ಹಲವಾರು ಕಡೆಗಳಲ್ಲಿ ತೂತು ಬಿದ್ದು ಜನರು ದಾಟಲು ಅಪಾಯದ ಸ್ಥಿತಿಯಲ್ಲಿರುವ ವಿಷಯವು ಸಂಬಂಧಪಟ್ಟ ಅಧಿಕಾರಿಗಳಿಗೆ ಕಳೆದ ವರ್ಷವೇ ತಿಳಿದಿದ್ದರೂ ಸಹ, ಈ ವರೆಗೆ ಇದನ್ನು ಬದಲಾಯಿಸದಿರುವದು ಬಹಳ ನಷ್ಟಕ್ಕೆ ದೋಣಿ ದಾಟುವ ಜನರಿಗೆ ಅತ್ಯಪ್ತಿಯನ್ನುಂಟು ಮಾಡಿದೆ ಈ ದೋಣಿಯ ನ್ನು ದ್ದದಲ್ಲಿರುವ ಹಲವಾರು ತೂತುಗಳನ್ನು ಟಿನ್ನು ಚೂರುಗಳಿಂದ ಮುಚ್ಚಿ ರಿಪೇರಿ ಮಾಡಲಾಗಿದೆ ಇದಕ್ಕೂ ಸಾಲುತ್ತಿಲ್ಲ ಗೋಣಿಯ ಪೇಲಿನ ಒಂದು ಭಾಗದ ಮರ ಹಲಿಯ ದಾಗಿ ಹಾಕಿಹೋಗಿರುತ್ತದೆ ಈ ದೋಣಿಗೆ ಬೂಟಿಳು ಹಾಕಿದ ಕಾಲಿನಿಂದ ಒತ್ತಲಿ ಅ ಭಾಗದ ಮರ ಅಲ್ಲಿಂದ ಲೇ ಕಸಿದು ಬೀಳುತ್ತದೆ ಇದರಲ್ಲಿ ಹತ್ತು ಜನರಿಗಿಂತ ಜಾಸ್ತಿಯಾಗಿ ಅದೂ ಸ್ವಲ್ಪ ಹೆಚ್ಚು ನೀರಿಲ್ಲದ ನೀರಿನಲ್ಲಿ ಸಾಗಿಸಲು ಸಾಧ್ಯವಿಲ್ಲ ಇಂಥ ಅವ್ಯವಸ್ಥೆಯ ದೋಣಿಯನ್ನು ಪ್ರವಾಹದಲ್ಲಿ ನಡಿಸಲು ಬಿಟ್ಟದ್ದೇ ಆದರೆ ಖಂಡಿತವಾಗಿ ಒಳಗೆ ನೀರು ತುಂಬಿ ದೋಣಿ ಮುಳುಗಿ ಜನರ ಪ್ರಾಣಕ್ಕೆ ಆಪಾಯವಾಗುವದರಲ್ಲಿ ಹೊಸ ಸಂದೇಹವಿಲ್ಲ. ದಿವಸಕ್ಕೆ ನಾಲ್ಕು ಸಲ ವೀರಾಜಪೇಟೆಯಿಂದ ಮತ್ತು ಮಡಿಕೇರಿಯಿಂದ ಬಸ್ಸಿನಲ್ಲಿ ಬರುವ ಜನರು ಇಂಥಾ ದೋಣಿಯಲ್ಲಿ ದಾಟುವದನ್ನು ಮತ್ತು ಪ್ರತಿಯೊಂದು ಬಸ್ಸಿನ ಜನರನ್ನು ಸಾಗಿಸಲು ನಾಲ್ಕು ಸಲ ಈ ದೋಣಿ ಬರ ಬೇಡವನ್ನು ಸಹ ಸಂಬಂಧಪಟ್ಟ ಅಧಿಕಾರಿಗಳು ಕಡಿದ್ದರೂ ಸಹ, ಇದನ್ನು ಬದಲಾಯಿಸುವ ವಿಷಯದಲ್ಲಿ ಯಾವ ಕೊಂದರೆಯನ್ನು ತೆಗೆದುಕೊಳ್ಳವರುವದು ಕೇಶವಮಯವಾದುದು. ಇನ್ನಾದರೂ ಈ ದೋಣಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಬದಲಾಯಿಸಲು ಮನಸು ಮಾಡುವರೇ?

ಕೆ. ಸೋಣಪ್ಪ 4-3

ನಿರಾಧಾರ.

ತಾ. ೨೯-೬-೫೦ ನೇ 'ಕೊಡಗು' ಪತ್ರಿಕೆಯಲ್ಲಿ 'ನನ್ನ ಭಾಗವಂಡ್ಲದ ವೈಶಿಷ್ಟ್ಯ'ವೆಂಬ ಲೇಖನ ಓದಿ ನೋಡಿದೆನು ವಿಲ್ ಬಟ್ಟೆಯನ್ನು ಕರಿಕೆ ಗ್ರಾಮಕ್ಕೆ ಕಳಿಹೊರೆಯಿಂದ ಹೊತ್ತುಕೊಂಡು ಹೋಗಿ ಮೂರಂಟಮಾಡುತ್ತಾರೆಂದು 'ನಾಡಿಗರು' ಬರೆದಿರುತ್ತಾರೆ. ಕರಿಕೆ ಗ್ರಾಮಕ್ಕೆ ವಿಲ್ ಬಟ್ಟೆಯ ಸಪ್ಲೈ ಇದು ವರೆಗೆ ಇಲ್ಲದ, ಕಾರಣ ಲೈಸನ್ಸ ಮೂಲ ಕರಿಕೆಯಲ್ಲಿ ಹೋಗಿ ಒಟ್ಟೆ ವ್ಯಾಪಾರ ಮಾಡಿದ್ದಾಗಿರುತ್ತೆ. ವ್ಯಾಪಾರ ಮಾಡುವಾಗ ಸ್ಥಳೀಯ ಪೊಲೀಸಿನವರಿಗೆ ತಿಳಿಸಿಯೇ ವ್ಯಾಪಾರ ಮಾಡಿದ್ದಾಗಿರುತ್ತೆ. ಭಾಗವಂಡಕ್ಕೆ ಮೂರು ಲೈಸನು ಅಂಗಡಿಗಳ ಮೂಲಕವೂ, ಸಹಕಾರ ಸಂಘದ ಮುಖಾಂತರವೂ ಒಟ್ಟೆ ಸಪ್ಲೈ ಆಗುವದ ನಾಡಿಗರಿಗೂ ತಿಳಿದ ವಿಷಯವಾಗಿರುತ್ತೆ. ಒಟ್ಟೆ ಬಂದ ಮೂರನೆಯ ದಿನ ಅಂಗಡಿಯಲ್ಲಿ ಒಟ್ಟೆಗಳು ಇರುವದಿಲ್ಲವೆಂದು ಹೇಳುವದು ಸರಿಯಾದ ಸಂಗತಿಯಲ್ಲ ಒಂದೆರಡು ಕಾನು ಒಟ್ಟೆಗಳು ಖಾಜಾದ ನಂತರ ಬಾಕಿ ಉಳಿದ ಬಿಳಿ ಒಟ್ಟೆಗಳನ್ನು ಕೊಳ್ಳವವರೇ ಇರುವದಿಲ್ಲ ಸರಕಾರದವರು ಕೊಟ್ಟ ಕೋಟಾ ಬಟ್ಟೆಯಲ್ಲದೆ ಹೆಚ್ಚಿಗೆ ಹೊರಗಿನಿಂದ ವಿಲ್ ಒಟ್ಟೆ ತರಿಸಿ ನಿರಾಕರಿಗಳಿಗೆ ಕೊಡುವದೇ ಕಂದ ಬಟ್ಟೆಯೇ ಖರ್ಚಿಗೂ ಇಲ್ಲದೆ ಇರುವಾಗ ಬಿ. ಯಂ. ನ ಒಟ್ಟೆ ಮೂರಂಟ ಮಾಡುವದು ತಾನೆ ಯಾರಿಗೆ? ಇದೆಲ್ಲಾ ಸುಮ್ಮನೆ ತಪ್ಪು ಅಭಿಪ್ರಾಯಗಳು ತಿಳಿಸಿಕೊಡದ್ದಾಗಿ ನನ್ನ ಮನಸಿಗೆ ತೋರುತ್ತೆ. ಕರಿಕೆಯವರಿಗೆ ರೇಷನ್ ಸಹ ಭಾಗವಂಡ್ಲದಿಂದಲೇ ಇರುತ್ತೆ. ಆದ್ದರಿಂದ ಬಟ್ಟೆಯನ್ನ ಸಹ ಅವರಿಗೆ ಇದಗಿಸಿಕೊಡುವದಕ್ಕೆ ನಾಡಿಗರು ಸಂತೋಷಪಡಬೇಕು ಇಲ್ಲಿಯ ವ್ಯಾಪಾರಸ್ಥರು ಖಂಡಿತವಾಗಿ ಬಿ. ಯಂ ಮಾಡುವದಿಲ್ಲ ಹಾಗೆ ಬಿ ಎ. ನಷ್ಟೆ ಒಟ್ಟೆಯನ್ನು ಸೂಂಟ ಮಾಡಿ ನಾಡಿಗರ ಅವಗಾಹನೆಗೆ ಬಂದಿರಬೇಕು ಮೇಲಿನ ಅಧಿಕಾರಿಗಳಿಗೆ ತಿಳಿಸಿ ಪುನಾನು ನೇಕೆ ಶಿಕ್ಷಿಸುವ ವಿಷಯದಲ್ಲಿ ಮಾಡಿಕ್ಕಾಗಿ ನಾಡಿಗರಲ್ಲೂ ಮತ್ತ ನವ್ಮಿಂದ ಬಟ್ಟೆ ಹೋದಿಕೊಳ್ಳುವ ಮಹನೀಯರಲ್ಲಾ ಈ ಮೂಲಕ ಕೇಳಿಕೊಳ್ಳುತ್ತೇನೆ.

'ಕರಿಕೆಗೆ ಹೋದ ಬಟ್ಟೆ ವ್ಯಾಪಾರಸ್ಥ'

ಟೆಂಡರು ನೋಟಿಸ್
TENDERS INVITED FOR CARDAMOM MALAI.

ಕಡಿಯತ್ತನಾಡಿನ ಜಿಲ್ಲಾವರ ಗ್ರಾಮದಲ್ಲಿರುವ ಬಿದ್ದಂಡ ಕುಟ್ಟಪ್ಪನ ಸೇರಿದ ೩೦೦ ಎಕರೆ ವಿಸ್ತೀರ್ಣವಿರುವ ಕಬ್ಬಿ ಏಲಕ್ಕಿ ಮಲೆಯನ್ನು ೨೧ ವರ್ಷಗಳ ಗೇಣಿಗೆ ಕೊಡಲಾಗುವದು. ಏಲಕ್ಕಿ ಸ್ವವಾಯಕ್ಕೆ ಅತ್ಯುತ್ತಮವಾಗಿದ್ದು ಈಗ ವರ್ಷಕ್ಕೆ ಒಂದು ಖಂಡಿ ಏಲಕ್ಕಿ ಬರುತ್ತಿದೆ. ಯಾರಿ ಶರಾರರು ತಮ್ಮ ಟೆಂಡರುಗಳನ್ನು ಈ ಕೆಳಗಿನ ಅಡ್ರೆಸಿಗೆ ತಾ-೧೫-೭-೫೦ ರೊಳಗೆ ಬರೆದುಕೊಳ್ಳುವದು.

ಬಿ. ಎಂ ಕಾರ್ಯಪ್ಪ, B. A., L. T.,
ಪ್ಲೆಡರ್ಸ್
ಬಿದ್ದಂಡ ಫ್ಯಾಮಿಲಿ ಟ್ರಸ್ಟ್ ಫಂಡ್ಸ್
"ಚಿಕ್ಕಾ"
ಮಡಿಕೇರಿ

ಬೋಧಕ ಕಥೆ-

ಕೆಂಪಯ್ಯನ ಮುತ್ತು ಪ್ಲೇಗಿನ ಬಾಯಿಗೆ ತುತ್ತು.

(ಕೊಡಗು ಆರೋಗ್ಯ ಇಲಾಖೆ.)

ಮಲೆನಾಡಿನ ಒಂದು ಹಳ್ಳಿ. ಪೈರು ಪಚ್ಚೆಗಳಿಂದ ಹೊಲಗಳು ಹಸನಾಗಿ ಕಾಣುತ್ತಿದ್ದುವು. ರೈತರು ಬೇಸಾಯವೂ ಮಾಡಿಕೊಂಡು ಮಕ್ಕಳು ಮರಿಗಳಿಂದಲೂ ದನಕರುಗಳಿಂದಲೂ ದವಸ ಧಾನ್ಯಗಳಿಂದಲೂ ಸಂತುಷ್ಟರಾಗಿದ್ದರು. ಆ ಹಳ್ಳಿಗೆ ಒಂದು ಚಿಕ್ಕ ಪೇಟೆ. ನಾಲ್ಕಾರು ಅಂಗಡಿಮನೆಗಳೂ ಸರಕಾರದ ಒಂದೆರಡು ಕಟ್ಟಡಗಳೂ ಅಲ್ಲಿದ್ದುವು ಕೆಂಪಯ್ಯನೆಂಬವನು ಈ ಪೇಟೆಯಲ್ಲಿ ಒಬ್ಬ ಗಣ್ಯನಾದ ವನುಷ್ಯನಾಗಿದ್ದನ. ದೊಡ್ಡದಾದ ಒಂದು ಪಡಹಿಯ ಮನೆಯನ್ನು ಕಟ್ಟಿಸಿ ಇದರಿಗೆ ಅಂಗಡಿಯ ಮಳಿಗೆಯನ್ನು ತೆರೆದು ಬಿರುಸಿನಿಂದ ವ್ಯಾಪಾರವನ್ನು ನಡೆಸುತ್ತಿದ್ದನು ಅವನಿಗೆ ಹಣ ಕಾಸುಗಳಿಗೆ ಕೊರತೆ ಇದ್ದಿಲ್ಲ. ರೇಶನ್ನಿನ ಕಾಲ. ಹಳ್ಳಿಯ ದತ್ತವನ್ನೆಲ್ಲಾ ಕಾಲಕ್ಕೆ ಸರಿಯಾಗಿ ಸಂಗ್ರಹಿಸಿ ಉಗ್ರಾಣದಲ್ಲಿ ಕಟ್ಟಡ ಕಿದ್ದನ ಲಿ ಖ್ಯಕ್ಕೆ ಹೆಚ್ಚಾದ ಬತ್ತವನ್ನು ಗಟ್ಟಿಗಿ ನೆಲಮಾಳಿಗೆಯ ಉಗ್ರಾಣದಲ್ಲಿ ಬಚ್ಚಿಡುತ್ತಿದ್ದನು ಇದಕ್ಕಾಗಿಯೇ ತನ್ನ ವಲಗುವ ಕೋಣೆಗೆ ಸಮೀಪವಾಗಿ ಒಂದು ಉಗ್ರಾಣವನ್ನು ಕಟ್ಟಿಸಿದ್ದನ. ನೂರಾರು ಬಟ್ಟಗಟ್ಟಲೆ ಒಕ್ಕವು ಈ ಉಗ್ರಾಣದಲ್ಲಿ ತುಂಬಿತ್ತು.

ಕೆಂಪಯ್ಯನಿಗೆ ಹಲವು ಕಾಲ ಮಕ್ಕಳಿರಲಿಲ್ಲ ಅದಕ್ಕಾಗಿ ಒಂದಲ್ಲ ಎರಡು ಮದುವೆಯೂಗಿದ್ದನು ಕಂಡ ದೇವರಿಗೆಲ್ಲಾ ಕೈ ಮುಗಿದ, ತಿರುಪತಿಯಾತ್ರೆಯನ್ನ ಪೂರೈಸಿ ನಡು-ಪ್ರಾಯ ಮಿರುವ ವೇಳೆಗೆ ಒಂದು ಗಂಡುಮಗುವನ್ನು ಪಡೆದಿದ್ದನ ಆ ಮಗುವನ್ನು ಹರಕೆ ಹಾತುಗಳಿಂದ ಅಚ್ಚು ಮೆಚ್ಚಾಗಿ ಸಾಕಿ ವರ್ತು ಎಂದು ಮುದ್ದಾದ ಹೆಸರನ್ನಿಟ್ಟು ಅವನಿಗಾಗಿ ಹೇರಳ ಹಣವನ್ನ ಸಂಗ್ರಹಿಸುತ್ತಿದ್ದನು ಕಪ್ಪು ಸಂತೆಯಲ್ಲದೆ ಹಣ ಸಂಪಾದನೆಗೆ ಸುಲಭ ದಾರಿಯಿಲ್ಲವೆಂದು ತಿಳಿದು ಗ್ರಾಮದ ಬತ್ತವನ್ನು ಮುಂದಾಗಿ ಶೇಖರಿಸಿ ಸುಳ್ಳು ಲೆಕ್ಕವನ್ನು ದಾಖಲು ಮಾಡಿ ತಾನು ಕಪ್ಪು ಸಂತೆಯ ವ್ಯಾಪಾರ ಹಲ್ಲಿ ಪ್ರವೀಣನಾಗಿದ್ದನು.

ಆ ಹಳ್ಳಿಯಲ್ಲಿ ಒಮ್ಮೆ ಪ್ಲೇಗು ತಲೆ ದೋರಿತು. ಮೊದಲಾಗಿ ಇಲಿಗಳು ಸಾಯಲು ಸುರುವಾಯಿತು; ಆರೋಗ್ಯ ಇಲಾಖೆಯವರು ಹಂಗರ ಹೊಡೆಸಿ ಪ್ರತಿಯೊಂದು ಮನೆಯವರೂ ಇಲಿಗಳು ಬೀಳುವುದನ್ನು ಅಧಿಕಾರಿಗಳಿಗೆ ಒಡನೆಯೇ ತಿಳಿಸಬೇಕೆಂದು ಸಾರಿದರು. ಜನರು ಭೀತಿಗೊಂಡು ಇಲಿ ಬಿದ್ದಂತೆಲ್ಲಾ ವರ್ತಮಾನ ತಿಳಿಸುತ್ತಿದ್ದರು ಅವರ ಮನೆಯವನ್ನು ಸರಕಾರದ ಅಧಿಕಾರಿಗಳು ಔಷಧಿಯಿಂದ ತೊಳೆಸುತ್ತಿದ್ದರು.

ಉಗ್ರಾಣವಿದ್ದಲ್ಲಿ ಇಲಿಗಳು ಹೆಚ್ಚಾ. ಕೆಂಪಯ್ಯನ ಮನೆಯಲ್ಲಿ ಸದ ಕಾಲ ಇಲಿಗಳ ಓಡ್ಯಾಟವಿತ್ತು. ಆದರೇನು ಮಾಡುವುದು? ಇಲಿಗಳು ಬೀಳುವ ಜಾಗವನ್ನು ತೋರಿಸಿದರೆ ತಾನು ಗುಟ್ಟಾಗಿ ಶೇಖರಿಸಿಟ್ಟ ಬತ್ತದ ಪತ್ತೆ ಹೆಚ್ಚುವುದು ಆ ತೊಂದರೆಯನ್ನು ತಪ್ಪಿಸಲಿಕ್ಕಾಗಿ ಬಿದ್ದ ಇಲಿಗಳ ವರ್ತಮಾನವೇ ಇಲ್ಲದಂತೆ ಕೈಯ್ಯಲ್ಲಿ ಹಿಕ್ಕಿ ಎಸೆದುಬಿಡುತ್ತಿದ್ದನು ತನ್ನ ಮನೆಯಲ್ಲಿ ಇಲಿಗಳು ಬೀಳುವುದಿಲ್ಲವೆಂದೇ ಅಧಿಕಾರಿಗಳಿಗೆ ತೋರಿಸುತ್ತಿದ್ದನು ಸತ್ತ ಇಲಿಗಳ ಪತ್ತೆ ಕೊಡದಂತೆ ತನ್ನ ಮನೆಯವರಿಗೆಲ್ಲಾ ಕಟ್ಟಪ್ಪಣೆ ಮಾಡಿಸಿದನು.

ಕೆಂಪಯ್ಯನ ಮಳಿಗೆಯಲ್ಲಿ, ಮಹಡಿಯಲ್ಲಿ, ಉಗ್ರಾಣದಲ್ಲಿ ಇಲಿಗಳು ಒಂದೊಂದಾಗಿ ಬೀಳತೊಡಗಿದವು ಬಿದ್ದಂತೆ ಅವುಗಳನ್ನು ಗಟ್ಟಾಗಿ ಎಸೆಯುವ ಕೆಲಸವೂ ನಡೆದಿತ್ತು ಕೆಂಪಯ್ಯನ ಮಗ ಮೂರ್ತು ಏಳು ವರ್ಷದ ಹುಡುಗನಾಗಿದ್ದನ. ಅವನಿಗೆ ಅಜ್ಜಂದಯ ಆಟವಾಗಿ ತೋರಿತು ಕೋಣೆಯಲ್ಲಿ ಸತ್ತು ಬಿದ್ದ ಇಲಿಯನ್ನ ಬಾಲಹಿಡಿದು ಎತ್ತಿ ಗಿರಗಿಸಿ ಬೀಸಿ ಹಿತ್ತಲಿಗೆ ಎಸೆದನು ಪ್ಲೇಗಿನ ಚಿಗಟೆಗಳು ಇಲಿಯ ಮೈತಂಬಾ ಇದ್ದುವು. ಒಮ್ಮೆಗೆ ಮೂರ್ತುವಿನ ಮೈಗೆ ಆವರಿಸಿಕೊಂಡುವು ಮೂರು ದಿನಗಳೊಳಗಾಗಿ ಮೂರ್ತುವಿಗೆ ಕರಿಣ ಜ್ವರ ಬಂತು ಮನೆಯವರಿಗೆಲ್ಲಾ ಗಾಬರಿ. ಮೂರ್ತು ಹಾಸಿಗೆ ಹಿಡಿದು ಮಲಗಿದವ, ತೊಡೆಯ ಸಂಧಿಯಲ್ಲಿ ಪ್ಲೇಗಿನ ಗೆಡ್ಡೆ ಕಾಣಿಸಿಕೊಂಡಿತು. ನೋಡಿದವರು ಪ್ಲೇಗೆಂದು ಗುಸುಗುಸು ಮಾತನಾಡತೊಡಗಿದರು ಕೆಂಪಯ್ಯನಿಗೆ ನೇಬಿಕೆ ಇಲ್ಲ. ನಂಬಿದರೂ ಒಪ್ಪಲಾರ. ಸರಕಾರದವರು ತನ್ನ ಮನೆಯನ್ನು ಸಂಶೋಧಿಸಬಹುದೆಂಬ ಹೆದರಿಕೆ ಮಂತ್ರ ತಂತ್ರಗಳ ದಾರಿಯೇ ಸರಾಗ ಕಂಡಿತ. ನೂಲು ಕಟ್ಟಿಸಿದರು. ಬಲಿ ತೆಗಸಿದರು ಏನಾದರೂ ಫಲವಿಲ್ಲ. ಮೂರ್ತುವಿನ ಸ್ಥಿತಿ ದಿನದಿಂದ ದಿನಕ್ಕೆ ಕರಿಣವಾಯಿತ. ಇನ್ನು ಅವನು ಉಳಿಯುವುದೇ ಸಂಶಯ ವಾಯಿತು ಒಬ್ಬನೇ ಮಗನಾದ ಮೂರ್ತುವನ್ನು ಕಳಕೊಳ್ಳುವುದೆಂದರೆ ಕೆಂಪಯ್ಯನು ಸತ್ತ ಹಾಗೆಯೇ ಸರಿ. ಇನ್ನೇನು ಮಾಡುವುದೆಂದು ತೋಚದೆ ಡಾಕ್ಟರನ್ನು ಕರೆಸಿದ. ಅವರು ಪ್ಲೇಗು ತಗಲಿದೆಯೆಂದೂ, ಮೂರ್ತುವನ್ನು ಪ್ಲೇಗಿನ ಆಸ್ಪತ್ರೆಗೆ ತಕ್ಷಣವೇ ಸಾಗಿಸಬೇಕೆಂದೂ ಹೇಳಿದರು ಇದ-ದ ಎರಡು ಗಂಟೆಯಲ್ಲಿ ಮೂರ್ತು ಮೂತನಾಡಲಾರದೆ ಹೋದನ. ಮತ್ತೆರಡು ಗಂಟೆಯಲ್ಲಿ ಪ್ರಾಣವಾಯುವೂ ಹಾರಿ ಹೋಯಿತು. ತಂದೆಯು ಧನ ಪಿಶಾಚಿ ನಿರಪರಾಧಿಯಾದ ಮುದ್ದು ಮಗುವನ್ನು ಕಳಿಂಗಿತು.

ಕೆಂಪಯ್ಯನಿಗೆ ಜೀವನವೇ ಶೂನ್ಯ ವಾಯಿತು. ಹಣ ಬೇಕಿಲ್ಲ ಮನೆ ಬೇಕಿಲ್ಲ ಹೆಚ್ಚೇಕೆ, ಅನ್ನ ಆಹಾರಗಳೂ ಬೇಡವೆಂದಾಯಿತು. ಸರಕಾರದ ಅಧಿಕಾರಿಗಳನ್ನು ಕರೆಸಿ ತನ್ನ ಘೋರ ಅಪರಾಧವನ್ನು ವಿವರಿಸಿ ಶೇಖರಿಸಿದ ಹಣವನ್ನೆಲ್ಲಾ ಧರ್ಮ ಕಾರ್ಯಕ್ಕೆ ವಿನಿಯೋಗಿಸುವಂತೆ ಧಾರೆ ಎರೆದುಕೊಟ್ಟನು.

For Sale.

Dodge 15 cwt Ex-Army Weppon Carrier 1945 Model, 27 34 H P. For inspection and further particulars please communicate with Manager, Greenfield Estate

2-1 GREENFIELD ESTATE, SIDAPUR P O.

ನಿಮ್ಮ ಸ್ವಂತ ಲಾಭಕ್ಕಾಗಿ ವಿಮೆ ಮಾಡಿ-ಅಥವಾ
— ಪ್ರತಿನಿಧಿಯಾಗಿ —

ದಿ ಬಾಂಬೆ ಮ್ಯೂಚುಯಲ್ ಲೈಫ್ ಅಷ್ಯೂರೆನ್ಸ್ ಸೊಸೈಟಿ ಲಿಮಿಟೆಡ್.

ಭಾರತದಲ್ಲಿನ ಅತ್ಯಂತ ಹಳೆಯ ವಿಮಾ ಸಂಸ್ಥೆ.

12-1 [ಸ್ಥಾಪಿತ 1871]

ವಿವರಗಳಿಗೆ:-ದಿ ಬ್ರಾಂಚ್ ಸೆಕ್ರೆಟರಿ,
172-173, ನರಸಿಂಹರಾಜರೋಡು, ಬೆಂಗಳೂರು 2,

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಮಡಿಕೇರಿ.

ಕರ್ನಾಟಕ(ಹಿಂದಿನ ಮೈಸೂರು) ಅಪೆಕ್ಸ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾದದ್ದು (1912ನೇ ಸ್ಥಾಪಿತವಾಗಿ

ಅಧಿಗೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ	1,99,400
ಕ್ಷೇಮನಿಧಿ	ರೂ.	59,000.
ಇತರ ನಿಧಿಗಳು	ರೂ	36,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದ

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ತಾಡಿನ ಮೇಲೆ ಸಣ್ಣ ಸಾಲ ಕೊಡಲಾಗುವುದು. ಚೆಕ್ ಯೂ ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು ಟ್ರಸ್ಟಿ ಕತ್ತು ವಾರ್ಡರ್ಸ್ ಇನ್ಶೂರೆನ್ಸ್ ಕಂಪನಿಗಳ ಟ್ರಸ್ಟಿಯಂ ಹಣವನ್ನು ಠೇವಣಿಕೊಳ್ಳಲಾಗುವುದು. ಹೆಚ್ಚಿನ ವಾಹಿತಿಯನ್ನು ಅಧಿಕಾರಿಯಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಕೆ. ಪಿ. ಅಪ್ಪಯ್ಯ, M L C
ಅಧ್ಯಕ್ಷರು, ಉಪಾಧ್ಯಕ್ಷರು

ದಿ ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:-ಲಾಲ ಶಂಕರ್ ಲಾಲ್.
ಮುಖ್ಯ ಜಾಗೇರಿ:- ಹೊಸ ದೆಲ್ಲಿ.
52-11 ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ನೋತಿಲಾಲ್ ನೆಹರು. ಎಸ್ ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮಲಖಾನ್. ಡಾ|| ಎಂ. ಎ. ಅನ್ಸಾರಿ.

Transacts:-Life, Fire, Motor, and Marine.

ಯಂ. ಯು. ಅಚ್ಚಣ್ಣ, ಇನ್ಸ್‌ಪೆಕ್ಟರು, ಮಡಿಕೇರಿ, ಕೊಡಗು.
ಎಂ. ಎ ಬೆಳ್ಳಿಪ್ಪ, ಬ್ರಾಂಚ್ ಸೆಕ್ರೆಟರಿ, ಹಂಪನಕಟ್ಟಾ, ಮಂಗಳೂರು.

ಆಚಾರ್ಯ ವಿನೋಬಭಾವೆ-ಗಾಂಧೀಜಿಯ ಉತ್ತರಾಧಿಕಾರಿ.

ಲೇ—ಶ್ರೀ ಭಾರತನ್ ಕುಮಾರಪ್ಪ

ಗಾಂಧೀಜಿಗುವರು ಈಗ ಇಲ್ಲದಿರುವಾಗ ಅವರ ಸ್ಥಳವನ್ನ ಕೆಗೆದುಕೊಳ್ಳುವವರು ಹಿಂದೂದೇಶದಲ್ಲಿ ಯಾರಾದರೂ ಇದ್ದಾರೆಯೇ ಎಂಬ ಪ್ರಶ್ನೆಯು ಅನೇಕರಿಗೆ ಕಾಡಲ್ಲಿ ಕೇಳಲ್ಪಟ್ಟಿತು ನಾನು ಭಾರತಕ್ಕೆ ಹಿಂದಿರುಗಿದನಂತರ ಆ ಪ್ರಶ್ನೆಗೆ ಸಮಾಧಾನ ಉತ್ತರವನ್ನ ಕಂಡುಕೊಂಡೆನು ಮಾನವನ ಸಮಸ್ಯೆಗಳಿಗೆ ಅಹಿಂಸೆಯು ಇಲ್ಲವೇ ಪ್ರೀತಿಯು ತತ್ವವು ನಿಜವಾದ ಉತ್ತರವೆಂಬುವುದನ್ನು ಗಾಂಧೀಜಿಯವರಂತೆಯೇ ವಿನೋಬರು ಕಾರ್ಯರೂತಃ ತೋರಿಸುತ್ತಿದ್ದಾರೆ ಗಾಂಧೀಜಿಯವರಿಗೆ ನೈತಿಕವಾಗಿ ಇನ್ನೂ ಏನತ್ತರಲ್ಲಿರುವ ವಿನೋಬರು ಮಹಾ ಪಂಡಿತರು ಹಿಂದೂದೇಶದ ಪೌರಾಣಿಕ ತತ್ವಗ್ರಂಥಗಳ ಪರಿಚಯವು ಗಾಂಧೀಜಿಯವರಿಗೆ ಕಡಿಮೆ ಇತ್ತು ಆದರೆ ವಿನೋಬರು ಸಂಸ್ಕೃತ ಪಂಡಿತರಾಗಿರುವರೆಲ್ಲದೆ ಹಿಂದೂದೇಶದ ಆರ್ಷೇಯ ಪುರಾಣ ಇತಿಹಾಸಗಳ ಜ್ಞಾನದಲ್ಲಿ ಪೂರ್ಣರ. ಗಾಂಧೀಜಿಯವರು ಸ್ವಾಭಾವಿಕ ಬುದ್ಧಿಯಿಂದ ಭಾರತದ ಆತ್ಮನನ್ನ ಪ್ರದರ್ಶಿಸಿದ್ದರೆ ವಿನೋಬರಲ್ಲಿ ಗಾಂಧೀಜಿಯವರ ಸ್ವಾಭಾವಿಕ ಬುದ್ಧಿಯು ಭಾರತ-ಹಿಂದೂ ಸಂಬಲ ಸಾಧ್ಯವಾದ ಯುಗಾಂತರಗಳ ಜ್ಞಾನದಿಂದ ಜೋಡಿಸಲ್ಪಟ್ಟಿದೆ

ಈ ಎರಡು ವ್ಯಕ್ತಿಗಳಿಗೆ ಒಂದೇ ವಿಶ್ವಾಸ, ಒಂದೇ ನೈತಿಕತೇಜ, ಒಂದೇ ಗುರಿಯೂ ಇರುವ ವ್ಯತ್ಯಾಸವೆಂದರೆ ವಿಜ್ಞಾತ್ಮರು ಜಗತ್ತಿನ ವ್ಯಕ್ತಿಯಾಗಿ ಖ್ಯಾತಿ ಪಡೆದರು ಆದರೆ ವಿನೋಬರು ಅಜ್ಞಾತರಾಗಿಯೇ ಇದ್ದಾರೆ ಗಾಂಧೀಜಿಯವರು ಸಾರ್ವಜನಿಕ ಮಂದಾಕ್ಷ ಸಾರ್ವಜನಿಕ ಕೆಲಸಗಳಿಗಾಗಿ ದೊಡ್ಡ ದೊಡ್ಡವರ ಸಂಬಂಧ ಅವರಿಗೆ ಅನಿವಾರ್ಯವಾಗಿತ್ತು. ಆದರೆ ವಿನೋಬರು ಸಾರ್ವಜನಿಕ ಕೈ ಚಪ್ಪಾಳೆಗೆ ಮುಖ ತಿರುಗಿಸುವವರು ಅವರು ತೀವ್ರ ಪಂಡಿತರ. ಅವರು ತಮ್ಮ ಜ್ಞಾನದ ಬೆಳಕನ್ನೂ ಕೂಡ ತಮ್ಮ ಸುತ್ತಿರುವವರ ಮಟ್ಟಿಗೆ ಚೆಲ್ಲುವದರಲ್ಲಿ ಮಾತ್ರ ತೃಪ್ತರಾಗಿದ್ದಾರೆ ವರ ಆ ಬೆಳಕೂ ಕೂಡ ಮಹಾತ್ಮ ಗಾಂಧೀಜಿಯವರ ತತ್ವವಾದ ಅಹಿಂಸಾವೇ ಆಗಿದೆ ಈ ಅಹಿಂಸಾವು ವಿನೋಬರ ಜೀವನದಲ್ಲಿ ಯಾವ ರೀತಿ ಪ್ರದರ್ಶಿಸಲ್ಪಟ್ಟಿದೆಯೆಂದು ನೋಡೋಣ

ಅವರ ಅಹಿಂಸೆ ಅಥವ ಪ್ರೇಮವು ಜಗತ್ತಿನ ಎಲ್ಲಾ ತಗಳಲ್ಲೂ ಆಕ್ತಿ ತೆಗೆದುಕೊಳ್ಳುವಂತೆ ಅವರನ್ನು ಪ್ರೇರೇಪಿಸಿತು. ಅವರು ಜಗತಿನ ದೊಡ್ಡ ಮತಗಳ ಪ್ರಾಮುಖ್ಯ ತತ್ವಗಳನ್ನು ಅಭ್ಯಾಸಮಾಡಿದ್ದಾರೆ ಹಿಂದೂಧರ್ಮ, ಬೌದ್ಧಧರ್ಮ, ಸಿಕ್ ಧರ್ಮ, ಇಸ್ಲಾಂ ಮತ್ತು ಕ್ರಿಶ್ಚಿಯನ್ ಧರ್ಮಗಳನ್ನು ಅವಾಗಿ ಅಧ್ಯಾಸಮಾಡಿದ್ದಾರೆ ಈ ರಿನಿನ ತರ್ಜಮೆಯನ್ನು ಓದಿ ತೃಪ್ತರಾಗದೆ ಅರಬೀ ಭಾಷೆಯನ್ನು ಕಲಿತು ಕ ರಾನಿನ ತೂಲಗ್ರಂಥವನ್ನೇ ಓದಿದ್ದಾರೆ ಬೈಬಲಿನಲ್ಲಿ ಅವರಿಗಿರುವ ಜ್ಞಾನವು ಅಗಾಧವಾದುದು. ಅವರು ಬೈಬಲನ್ನು ಬಾಯಿ ಪಾಠ ಹೇಳಬಲ್ಲರು ಅನೇಕ ಕ್ರೈಸ್ತಿಯನ್ ವ ತಪ್ರುವಾದಿಗಳಿಂದಾ ಚೆನ್ನಾಗಿ ಕ್ರಿಸ್ತನ ತತ್ವಗಳನ್ನು ಅವರು ವಿವರಿಸಬಲ್ಲರು ವಿವಿಧ ಮತಗಳನ್ನು ಅಧ್ಯಾಸ ಮಾಡುವ ಅವರ ದೃಷ್ಟಿಯು ಅವುಗಳಲ್ಲಿನ ನ್ಯೂನತೆಯನ್ನು ಹುಡುಕುವುದಾಗಿರದೆ ಅವುಗಳಲ್ಲಿರುವ ಪ್ರೇಮವನ್ನು ಅರಿಯುವದಾಗಿದೆ.

ಅವರ ಮಾತೃ ಭಾಷೆಯು ಮಂಠಿ ನ ರಾಷ್ಟ್ರ, ಸಂಸ್ಕೃತಗಳನ್ನಲ್ಲದೆ ಅವರು ಪರ್ಶಿಯನ್, ಅರೇಬಿಕ್, ಇಂಗ್ಲಿಷ್‌ಗಳನ್ನ ಅಭ್ಯಾಸಮಾಡಿದ್ದಾರೆ ಹಿಂದೂದೇಶದ ಎಲ್ಲಾ ಜೀವಂತ ಭಾಷೆಗಳೂ ಬಂಗಾಲಿ, ತಮಿಳ ತೆಲುಗು, ಮಲೆಯಾಳ ಮತ್ತು ಕನ್ನಡ-ಅವರಿಗೆ ಬರತ್ತದೆ ೧೯೪೮-೪೯ ರಲ್ಲಿ ಅವರು ಜೈಲಿನಲ್ಲಿದ್ದಾಗ ಭಾಷೆಗಳನ್ನು ಕಲಿಯುವದೇ ಅವರ ಕೆಲಸವಾಗಿತ್ತು ಆ ಕಾಲಕ್ಕೆ ಬೆಳಿಗ್ಗೆ ಸ್ನಾನದ ಮನೆಯಲ್ಲಿ ತಮಿಳು ಕವಿ ತಿರುವಳ್ಳುವರ ಕವನಗಳನ್ನು ಅವರು ಓದುವದನ್ನು ಅನುದಿನ ಕೇಳಬಹುದಿತ್ತು ಅವರ ಪ್ರೇಮಕ್ಕೆ ಭಾಷೆ, ಸಂಸ್ಕೃತಿಗಳ ಬೇಧವಿಲ್ಲ. ಅವರ ದೃಷ್ಟಿಯಲ್ಲಿ ಎಲ್ಲಾ ಜನತೆಯೂ ಪ್ರೇಮಾರ್ಹರು

ಭಿರಪಬುಂಡದಲ್ಲಿ ಹಾಗೂ ಜಗತ್ತಿನಲ್ಲಿ ನಾಗರೀಕತೆ, ಚರಿತ್ರೆಗಳು ಯಾವ ರೀತಿ ಯಾವ ಯಾವ ಸವ ಯದಲ್ಲಿ ಬದಲಾವಣೆ ಹೊಂದಿ ಬೆಳೆದವು ಯಾವ ರೀತಿ ಜ್ಞಾನವಿಕಾಸವಾಗುತ್ತಾ ಬಂದಿತೆಂಬುದು ಅವರ ಬಾಯಿಯಲ್ಲಿದೆ ಪಾಶ್ಚಿಮಾತ್ಯ ಬಗೆಗಳ ಬಗ್ಗೆ ಅವರ ದೃಷ್ಟಿಯು ಸಹಾನುಭೂತಿಯುಳ್ಳದ್ದು, ನ್ಯಾಯಸಮರ್ಪಕವಾದುದೂ ಇದೆ

ಅವರಿಗೆ ಕೋಮುವಾರು ಭಾವನೆ ಇಲ್ಲ ಕೋಮುವಾರು ಘರ್ಷಣೆಗಳಾಗಿ ಅವರು ತಮ್ಮ ಕೋವಿನರನ್ನೇ ಹೆಚ್ಚು ಟೀಕಿಸುವವರು ಕೆಲವು ದಿನಗಳ ಹಿಂದೆ ಅವರು ಹೈದರಾಬಾದಿನ ತೆಲಂಗಣದಲ್ಲಿ ಸುತ್ತುತ್ತಿದ್ದಾಗ, ಪಾಕಿಸ್ತಾನವು ರೂಪುಗೊಳ್ಳಲು ಇಸ್ಲಾಂ ತತ್ವಗಳು ಕಾರಣವಲ್ಲವೆಂದೂ, ಹಿಂದುಗಳ ನಿರ್ದಿಷ್ಟತೆ, ಇತರರನ್ನು ಅಸ್ಪೃಶ್ಯರೆಂದು ದೂರವಿರಿಸುವ ಬುದ್ಧಿಯೇ ಕಾರಣವೆಂದೂ ಅವರು ಹೇಳಿದ್ದರು. ಅವರ ಪ್ರೇಮತತ್ವವು ಇತರರಲ್ಲಿ ತಪ್ಪನ್ನ ಹುಡುಕಲಾರದು, ತಮ್ಮಲ್ಲೇ ತಪ್ಪನ್ನು ಹುಡುಕುವದು! ಏಕೆಂದರೆ ನಮ್ಮ ತಪ್ಪನ್ನು ತಿದಿಕೊಂಡು ನಾವು ಸರಿದಾರಿಯಲ್ಲಿ ನಡೆದರೆ ನಮ್ಮ ಶತ್ರುವೂ ಕೂಡ ಕ್ರಮಶಃ ಮಿತ್ರನಾಗುವನೆಂದು ಅವರ ದೃಢವಿಶ್ವಾಸ

ವಿನೋಬರ ದೃಷ್ಟಿಯಲ್ಲಿ ಜಾತಿ ಮತ, ಬಡವ ಬಲ್ಲಿದ ಎಂಬ ಭೇದವಿಲ್ಲ ಸಮಾಜದಿಂದ ವರ್ಜಿತರಾದವರನ್ನೂ ಎದೆಗಪ್ಪಿಕೊಳ್ಳುವ ಪ್ರೇಮ ಅವರದು. ಅದ್ರಿಂದಲೇ ಕಷ್ಟರೋಗಿಗಳಿಗಾಗಿ ತಮ್ಮ ಕೆಲಸಗಾರರೊಬ್ಬರನ್ನ ತರಬೇತುಗೊಳಿಸಿ ಅದೇ ಕೆಲಸಕ್ಕೆ ಅನೆಮಾಡಿದ್ದಾರೆ. ಗಾಂಧೀಜಿಯವರಂತೆ ವಿನೋಬರೂ ರಾಜಕೀಯದಲ್ಲಿ ಅಹಿಂಸೆಯನ್ನು ಉಪಯೋಗಿಸುವದನ್ನು ಸರಿ ಎನ್ನುತ್ತಾರೆ ಇಲ್ಲಿ ಅಹಿಂಸೆ ಸಂದರ್ಭಸಾಧನೆಯು ರಾಜಕೀಯವಲ್ಲ ಆತ್ಮ ವಿಶ್ವಾಸದ ಪರವೂವಧಿ ಅವ್ರಿಂದಲೇ ರ್ಗಳು ರಲ್ಲಿ ಹಠಗ್ರಹಿಗಳಿ ವಿರುದ್ಧವಾಗಿ ವ್ಯಕ್ತಿಗತ ಕಾಯುದಿಳ್ಗಂಗ ಜೀವವು ಪ್ರಾರಂಭವಾದಾಗ ಗಾಂಧೀಜಿಯವರು ವಿನೋಭಾರನ್ನು ತಮ್ಮ ಪ್ರಥಮ ಸತ್ಯಾಗ್ರಹಿಯೂಗಿ ಆರಿಸಿದರು ಆ ಕಾಲಕ್ಕೆ ಗಾಂಧೀಜಿಯವರು ವಿನೋಬರ ವಿಚಾರ ಹೇಳುತ್ತಾ ವಿನೋಬರು ಆದರ್ಶ ಸತ್ಯಾಗ್ರಹಿಯೆಂದೂ ಅಹಿಂಸೆ ಅಥವ ಪ್ರೇಮದ ತತ್ವದಲ್ಲಿ ತಮ್ಮ ಜೀವನಕ್ಕೆ ಅತಿ ನಿಕಟವಾಗಿರುವ ವ್ಯಕ್ತಿ ಇವರೆಂದೂ ನುಡಿದರು

ವಿನೋಬರದು ರಾಜಕೀಯ ದೃಷ್ಟಿಯಲ್ಲ ಅವರ ದೃಷ್ಟಿ ಭಾರತದ ತಳಿಯಲ್ಲಿಟ್ಟ ಒಡ ಜೀವಿಗಳ ಹಿತಕ್ಕಾಗಿ ಆದ್ದರಿಂದಲೇ ಅವರು ಹೊಸ ರಾಜಕೀಯ ರಂಗದಲ್ಲಿ ಮೇಲೆದ್ದು ನಿಲ್ಲಲು ಆಶೆ ಪಡದೆ ಕೆಲಪೂಂದು ಗ್ರಾಮಗಳಲ್ಲಿ ಬಡ ಜನರೊಡನೆ ಅವರ ಹಿತಕ್ಕಾಗಿ ದುಡಿಯುತ್ತಾ ಆನಾವ ಧ್ಯಯಂಗಾಗಿ ಉಳಿಯುವದರಲ್ಲೇ ತೃಪ್ತಿಪಟ್ಟಕೊಳ್ಳುತ್ತಾರೆ ಅವರ ಗುರಿಯೆಂದರೆ ಗ್ರಾಮಗಳನ್ನು ಸ್ವಾವಲಂಬಿಗಳಾಗಿ ಮಾಡುವದು ಗ್ರಾಮಗಳು ತಮ್ಮ ಕೆಲಸಗಳನ್ನು ತಾವೇ ಮಾಡಿಕೊಂಡು ಸ್ವತಂತ್ರ ಘಟಕಗಳಾಗಿರಬೇಕೆಂಬುದೇ ಅವರ ಗುರಿ. ಹೊರಗಿನ ಶಕ್ತಿಗಳು ಗ್ರಾಮಗಳನ್ನು ಶೋಷಿಸುವ ವಿಧಾನವು ಅಹಿಂಸಾತತ್ವಕ್ಕೆ ವಿರುದ್ಧವಾದುದೆಂದು ಅವರು ಹೇಳುತ್ತಾರೆ ಗ್ರಾಮಗಳು ಆರ್ಥಿಕ ದೃಷ್ಟಿಯಿಂದ ಸ್ವತಂತ್ರವಾಗಬೇಕು. ತಮಗೆ ಬೇಕಿರುವ ಜೀವನಾವಶ್ಯಕ ವಸ್ತುಗಳನ್ನು ಸಾಧ್ಯವಾದಷ್ಟ ತಾವೇ ಉತ್ಪಾದಿಸಬೇಕು ಅಂದರೆ ನೈಪಸಾಯ ಮತ್ತು ಗ್ರಾಮ ಕೈಗಾರಿಕೆಗಳಿಗೆ ಹೆಚ್ಚಿನ ಗಮನ ಕೊಡಬೇಕು

ಗ್ರಾಮದ ಪುನರುಜ್ಜೀವನದ ಗುರು ತಾಗಿ, ಗ್ರಾಮೊ ಜನರು ತಮ್ಮ ಕಾಲಲ್ಲಿ ತಾವು ನಿಲ್ಲುವ ಸಾಧನವಾಗಿ ಗಾಂಧೀಜಿಯವರು ನೂಲು ವದನ್ನು ರಾಷ್ಟ್ರದ ಜೀವನಾಡಿಯೆಂದು ಸಾರಿದ್ದರು. ವಿನೋಬರು ನೂಲು ನೂಡುವದನ್ನು ಕೈಕೊಂಡು, ತಮ್ಮ ಅಗಾಧ ಜ್ಞಾನವನ್ನು ಅದರಲ್ಲಿ ಅವಡಿಸಿ ನೂಲುವವರಲ್ಲಿ ನಿಷ್ಠಾತರಾಗಿ ವಿಚಾರದಲ್ಲಿ ವಾರ ಪುಸ್ತಕಗಳನ್ನು ಒರೆತರು ಮೂಲ ಶಿಕ್ಷಣವು ಅಧ್ಯಾಪಕರಿಗಾಗಿ ಅಡು ಇಂದೂ ವಿೀಕಲಿದೆ. ಇದರ ಜೊತೆಗೆ ಗ್ರಾಮದಲ್ಲಿ ಪರಸ್ಪರರು ಏಕ್ಯರಾಗಿ ಸಹಕಾರ ಜೀವನ ನಡೆಸುವದನ್ನು ಅವರು ಕಾರ್ಯರೂತಃ ಮಾಡಿತೋರಿಸಿದ್ದಾರೆ ಸಮೂಹದ ಜನತೆಯ ಪೂರ್ಣ ಅಭಿವೃದ್ಧಿಗಾಗಿ ಸರ್ವೋದಯ ಅಭಿದಾನದಿಂದ ಗಾಂಧೀಜಿಯವರಿಂದ ಯಾವದೇ ಜಾತಿ, ವರ್ಗ, ಬಡವ ಬಲ್ಲಿದ, ಶಕ್ತ ಅಶಕ್ತರೆಂಬ ಬೇಧವಿಲ್ಲದೆ ಎಲ್ಲರಿಗೂ ಅನ್ವಯಿಸುವಂತೆ ಪ್ರಾರಂಭಿಸಿದ ಮಹಾ ಚಳವಳಿದಲ್ಲಿ ವಿನೋಬ ಕೆಲಸಗಳೆಲ್ಲ ಅಡಕವಾಗಿವೆ ಪ್ರೇಮದ ಶಕ್ತವು ಯಾರನ್ನೂ ದೂರತಿಳದು. ಯಾರನ್ನೂ ಕಡೆಗಣಿಸದು ಎಲ್ಲರ ಹಿತಕ್ಕಾಗಿ ಎಲ್ಲರೂ ಅಭಿವೃದ್ಧಿಗೊಳ್ಳಬೇಕು. ವಿನೋಬರು ಅಂಥಾ ಒಂದು ಯೋಜನೆಯನ್ನು ಗ್ರಾಮಗಳಲ್ಲಿ ಜಾರಿಯಲ್ಲಿ ತರಲಯತ್ನಿಸುತ್ತಿದ್ದಾರೆ

ಇದಕ್ಕೆ ವಿರುದ್ಧವಾಗಿ ಕಮ್ಯೂನಿಸ್ಟ್ ತತ್ವವು ಖಂಗಡಗಳ ದ್ವೇಶವನ್ನು ಉಪ್ಪೇಕಿಸಿ ಹಿಂಸಾಮಾರ್ಗದಿಂದ ಆಸ್ತಿಗಾರರ ಸರಿಗೆಯನ್ನು ಬೋಧಿಸುತ್ತದೆ ಹೈದರಾಬಾದಿನ ತೆಲಂಗಣದಲ್ಲಿ ಈ ತತ್ವವು ಕಾರ್ಯರೂಪಕ್ಕೆ ಬಂದಿತ್ತು ಕೊಲ್ಲುಕೊಲೆಗಳು, ಲೂಟಿ ದರೋಡೆಗಳು ಆಗಬೇತವಾಗಿ ಪಡೆಯುತ್ತಿದ್ದ ಕಮ್ಯೂನಿಸ್ಟ್ ತತ್ವ ಬದ್ಧ ತೆಲಂಗಣದಲ್ಲಿಯೇ ತಮ್ಮ ಅಹಿಂಸಾತತ್ವವನ್ನು ಪ್ರಯೋಗಿಸಿ ನೋಡಲು ವಿನೋಬರು ಕಂಕಣಬದ್ಧರಾಗಿ ಕೆಲವು ದಿನಗಳ ಹಿಂದೆ ಅಲ್ಲಿಗೆ ಅಹಿಂಸಾ, ಶಾಂತಿಯ ದೂತರಾಗಿ ಸ್ವೋದರು ಕಮ್ಯೂನಿಸ್ಟ್ ಸ್ವೀತ್ರದಲ್ಲಿ[illegible]ರ ಜೀವವೇ ಗಾಂತರದಲ್ಲಿತ್ತು ಆದರೂ ಪೊಲೀಸ್ ಸಹಾಯ ಕೇಳಿಕೊಳ್ಳಲಿಲ್ಲ. ಅವರು ಜೈಲಿನಲ್ಲಿದ್ದ ಮತ್ತು ಹೊರಗಿನ ಕಮ್ಯೂನಿಸ್ಟ್ ಮುಂದಾಳುಗಳನ್ನು ಕಂಡರು. ಅವರಂತೆಯೇ ತಾವೂ ಕೂಡ ಕಮ್ಯೂನಿಸ್ಟ್ ತತ್ವದ ಅಂತಿಮ ಗುರಿಯನ್ನೆ ಮಟ್ಟಿಲು ಪ್ರಯತ್ನಿಸುತ್ತಿರುವವನೆಂದೂ ಬಡಜನರ ಶೋಷಣೆ ಸ್ವಾತಂತ್ರ್ಯಕ್ಕಿದ ಅಪಹಾರಗಳನ್ನು ನಿಷ್ಠಿಸುವದೇ ದ್ವೇಷಯೆಂದೂ ಆದರೆ ಅದು ಅಹಿಂಸಾ ಮಾರ್ಗದಿಂದಲೇ ಸಾಧ್ಯವೆಂದೂ ವಿವರಿಸಿದರು. ಅವರ ಸ್ನೇಹಕರಾಗಿ ಅವರೊಡನೆ ವಾದಿಸಿದರು ಅವರು ತೆಲಂಗಣದ ಗ್ರಾಮಗಳನ್ನು ಸುತ್ತಿದರು ದೊಡ್ಡ ಜಮೀನ್ದಾರರು ಸಾವಿರಗಟ್ಟಿ ಎಕರು ಒಮೀನನ್ನು ತಮ್ಮ ಹಿಡಿತದಲ್ಲಿಟ್ಟು ಬಡ ಕೆಲಸಗಾರರನ್ನ ಶೋಷಿಸುತ್ತಿರುವ ದಾರುಣ ಪರಿಸ್ಥಿತಿಯನ್ನ ನೋಡಿದರು ಅಲ್ಲಿಯ ಪರಿಸ್ಥಿತಿಗೆ ಉಪಾಯವು ಬೇರೆ ಯಾವುದೂ ಅಲ್ಲವೆಂದೂ ಬಡ ಕೆಲಸಗಾರರಿಗೆ ಭೂಮಿಯನ್ನು ಹಂಚಿಕೊಡುವದೇ ದಾರಿಯೆಂದೂ ತಿಳಿದರು ಕಮ್ಯೂನಿಸ್ಟರು ಇದನ್ನ ಸಾಧಿಸಲು ಹಿಂಸಾಮಾರ್ಗ ಕೈಕೊಂಡಿದ್ದರು ಕೊಲೆ, ಸುಲಿಗೆಗಳಾಗಿ ಇವರಿಂದ ಸರಕಾರಕ್ಕೆ ವರ್ಷಕ್ಕೆ ೫೦ ವಿಲಿಯ ಹಣ ವೆಚ್ಚವಾಗುತ್ತಿತ್ತು ವಿನೋಬರು ಇಂಥಾ ಏಂಸಾತ್ಮಕ ಕ್ಷೇತ್ರದಲ್ಲಿ ತಮ್ಮ ಪ್ರೇಮ ತತ್ವವನ್ನು, ಅಹಿಂಸಾ ಮಂತ್ರವನ್ನು ಉಪದೇಶಿಸಿದರು. ಜಮೀನ್ದಾರರು ತಮ್ಮ ಹೆಚ್ಚಿನ ಭೂಮಿಯನ್ನು ಬಡ ಜನರಿಗೆ ಹಂಚಲು ಕೊಡಬೇಕೆಂದು ಕೇಳಿದರೆ ಗ್ರಾಮ ಗ್ರಾಮಗಳನ್ನು ಕಾಲ್ನಡಿಗೆಯಲ್ಲಿ ಸುತ್ತಿ ಆ ಜಿಲ್ಲೆಯ ೩೦೦ ಗ್ರಾಮಗಳನ್ನು ಕಂಡರ್ಶಿಸಿದರು. ಅಲ್ಲಿಯ ಭೀಕರ [illegible]

ಕೈಸಡೆ ಸುಮಾರು ಒಂಭಂ ಮೈಲುಗಳನ್ನು ಆರು ವಾರಗಳಲ್ಲಿ ನಡೆದರು. ಅವರ ಅಹಿಂಸಾತ್ಮಕವಾದ, ದೃಢವಿಶ್ವಾಸ, ನಿಸ್ವಾರ್ಥತೆ ಜನರನ್ನು ಒಲಿಸಿಕೊಂಡವು. ಜನರು ಸಾವಿರ ಸಂಖ್ಯೆಯಲ್ಲಿ ಬಂದು ಅವರ ಮಾತುಗಳನ್ನು ಕೇಳಿದರು. ನಿರ್ಬಲ ಕರ ರಥಾಧಿಯಾಗಿ, ಯಾವುದೇ ಆಹಾರವಿಲ್ಲದೆ ಕೇವಲ ಕೆನೆನೊಸರಿಂದ ಜೀವಿಸಿಕೊಂಡು ಪ್ರತಿದಿನ ಬೆಳಿಗ್ಗೆ ೩ ಗಂಟೆಯಿಂದ ಗ್ರಾಮ ಗ್ರಾಮಗಳನ್ನು ಸುತ್ತಿ ಇತರರಿಗಾಗಿ ಕಷ್ಟಪಡುವ ಈ ದೇವತಾಮನುಷ್ಯನ ನಿಸ್ವಾರ್ಥ ಪ್ರೇಮವು ಎಂದೂ ಅನರ್ಥವಾಗದು. ಅವರ ಪ್ರಾರ್ಥನಾ ಸಭೆಗಳು ಜನಪ್ರಿಯವಾದವು. ಅಲ್ಲಿಯ ಜಮೀನ್ದಾರರು ಕರಗಿ ಹೋದರು. ಒಟ್ಟಾಗಿ ೧೫,೧೧೩ ಎಕರೆ ಭೂಮಿಯನ್ನು ಬಡ ಜನರಿಗೆ ಕೊಡಲಿಕ್ಕಾಗಿ ಅವರೂ ವಿನೋಬರಿಗೆ ಒಪ್ಪಿಸಿದರು. ವಿನೋಬರು ಮೂರು ಜನರ ಒಂದು ಸಮಿತಿಯನ್ನು ಮಾಡಿ ಈ ಭೂಮಿಯನ್ನು ಬಡರೈತರ ಕುಟುಂಬಕ್ಕೆ ಹಂಚಿಸಿದರು. ಕಮ್ಯೂನಿಷ್ಟರು ಬಲಾತ್ಕಾರದಿಂದ ಜಮೀನ್ದಾರರಿಂದ ಕಸಿದುಕೊಂಡಿದ್ದ ಸ್ಥಳವನ್ನು ಜಮೀನ್ದಾರರಿಗೆ ವಾಪಾಸು ಕೊಡುವಂತೆ ಪ್ರೇರೇಪಿಸಿದರು. ಜಮೀನ್ದಾರರು ಪರಿವರ್ತಕರಾಗಿ ಇವನ್ನು ಬಡ ಜನತೆಗೆ ಕೊಟ್ಟರು. ಈ ಆದರ್ಶ ಮಾರ್ಗದಿಂದಾಗಿ ಜಮೀನ್ದಾರರೂ ರೈತರೂ ಸೌಹಾರ್ದತೆಯಿಂದ ಜೀವಿಸುವ ವಾತಾವರಣ ನಿರ್ಮಿಸಿತು.

ಗಾಂಧೀಜಿಯವರು ಪ್ರೇಮ ಯ ಅಹಿಂಸಾತತ್ವವನ್ನು ರಾಜಕೀಯ ಕಾರಣಕ್ಕಾಗಿ ಉಪಯೋಗಿಸಿ ಅನುಪಮ ಜಯ ಪಡೆದರು. ಈ ಮಾರ್ಗದಿಂದಲೇ ಭಾರತವು ಸ್ವಾತಂತ್ರ್ಯವನ್ನು ಪಡೆಯಿತು. ವಿನೋಬಾರವರು ಅದೇ ತತ್ವವನ್ನು ಆರ್ಥಿಕ ಪುನರ್ನಿರ್ಮಾಣಕ್ಕಾಗಿ ಉಪಯೋಗಿಸಿ ಅಲ್ಲಿಯೂ ಕೂಡ ಅದು ಶಕ್ತಿಯಿಂದ ಬಡವರನ್ನು ಉದ್ಧರಿಸಬಲ್ಲುದು ಎಂಬುದನ್ನು ತೋರಿಸಿ ಕೊಟ್ಟಿದ್ದಾರೆ. ಜನತೆಯು ನ್ಯಾಯ ಮಾರ್ಗಕ್ಕೆ ಎಂದೂ ತಲೆಬಾಗುವದೆಂಬುದನ್ನು ಅವರು ಶ್ರುತ ಪಡಿಸಿದ್ದಾರೆ. ಆದ್ದರಿಂದ ಕಮ್ಯೂನಿಷ್ಟರಂತೆ ಹಿಂಸಾ ಮಾರ್ಗ ಕೈಕೊಳ್ಳುವ ಅವಶ್ಯಕತೆ ಇಲ್ಲ. ಮಾನವ ವರ್ಗದ ಭಿನ್ನಾಭಿಪ್ರಾಯ ಜಟಿಲ ಸಮಸ್ಯೆಗಳಿಗೆ ಶಾಶ್ವತವಾದ ಉತ್ತರ ದೊರೆಯಬೇಕಾದರೆ ಅದು ಈ ಆದರ್ಶ ಅಹಿಂಸಾ ಮಾರ್ಗದಿಂದಲೇ ಎಂಬುದರಲ್ಲಿ ಸಂಶಯವಿಲ್ಲ. ಇದನ್ನು ಯೋಗ್ಯರೀತಿ ಸಾಧಿಸಿದರೆ ಹಿಂದಿನ ಶತ್ರುವು ವಿಶ್ವಾಸಿಗಳಾಗಿ ಪರಸ್ಪರ ಪ್ರೇಮವು ಬೆಳೆಯುವದು.

ಇಂದು ಹಬ್ಬುತ್ತಿರುವ ರಷ್ಯಾದ ಕಮ್ಯೂನಿಸಂ ತತ್ವಕ್ಕೆ ಶತಮಾನಗಳ ಅನುಭವ ಮತ್ತು ಬೆಂಬಲದಿಂದ ಭಾರತವು ಕಂಡು ಕೊಂಡ ಉತ್ತರವು ಈ ಅಹಿಂಸಾಮಾರ್ಗ. ಈ ಉತ್ತರವೇ ಜಗತ್ತಿಗೆ ಕಮ್ಯೂನಿಜಂನಿಂದ ಒದಗಿರುವ ಗಂಡಾಂತರಕ್ಕೂ ನಿವಾರಕವಾದುದು. ದ್ವೇಷವನ್ನು ಪ್ರೇಮಕ್ಕೆ, ಜಗಳವನ್ನು ಕಾಣಿಕೆಗೆ ಪರಿವರ್ತಿಸುವ ಈ ಮಾರ್ಗವೇ ಸ್ಥಿರವಾದುದು. ಗಾಂಧೀಜಿಯವರ ಹೆಜ್ಜೆಯಲ್ಲಿ ನಡೆದು ಅಹಿಂಸೆಯ ಭಕ್ತನಾದ ಈ ದೃನ್ಯ ಪೂಂತ ವ್ಯಕ್ತಿಯು ನಮ್ಮ ದೇಶದ ಒಂದು ಮೂಲೆಯಲ್ಲಿ ಇಷ್ಟಿದ ಈ ಸಾಧನೆಯು ಜಗತ್ತಿಗಾರ್ಹವಾದುದು.

'ಸ್ವತಂತ್ರ' ಇಂಗ್ಲಿಷ್ ಪತ್ರಿಕೆಯಿಂದ.

ಟಿಬೇಟಿನ "ದ್ರೌಪದಿ"ಯರು.

ಟಿಬೇಟು ಬೌದ್ಧ ಪ್ರಧಾನವಾದ ನಾಡು. ಬೌದ್ಧ ಪ್ರಭಾವದಲ್ಲಿ ಒಂದು ಹೆಣ್ಣು ಒಂದಕ್ಕಿಂತ ಹೆಚ್ಚು ಗಂಡುಗಳನ್ನು ಮದುವೆ ಮಾಡಿಕೊಳ್ಳುವದು ಅಧರ್ಮವೆಂದು ಸಿದ್ಧಾಂತವಿದ್ದರೂ, ಟಿಬೇಟಿನಲ್ಲಿ ಸೂತ್ರ ಬಹುಪತಿತ್ವವೆ ರೂಢಿಯಾಗಿರುತ್ತದೆ ಇದಕ್ಕೆ ಕಾರಣವಿಲ್ಲದಿಲ್ಲ ಟೇಬೇಟು ದೇಶವು ತುಂಬಾ ಬಡನಾಡು ಗುಡ್ಡ ಕಾಡು ಪ್ರದೇಶ ಬಂಜರು ನೆಲ. ಅಸ್ತಿ-ಪಾಸ್ತಿ ಮೊದಲೇ ಕಡಿಮೆ ಅದು ದರಿಂದ ಶಕ್ಯವಿದ್ದಷ್ಟು ಆಸ್ತಿಯು ಹಂಚಿಕೆಯನ್ನು ತದೆಹಿಡಿಯಬೇಕೆಂದೇ ಬಹು ಪುರಾತನ ಕಾಲದಿಂದಲೂ ಈ ಬಹುಪತ್ನಿತ್ವ ಪದ್ಧತಿ ರೂಢಿಯಲ್ಲಿ ಬಂದಿರಬೇಕು. ಪದ್ಧತಿಗೆ ಸಹ ಇದೇ ಪದ್ಧತಿಯು ಟಿಬೇಟಿನ ಜನತೆಯಲ್ಲಿ ರೂಢವಾಗಿರುತ್ತದೆ

ಟಿಬೇಟಿನ ಜನರು ಪರಂಪರಾಗತ ಪದ್ಧತಿಯವರು. ಅದುದರಿಂದಲೇ ಅವರು ಪೂರ್ವ ಕಾಲದಿಂದ ನಡೆದು ಬಂದ ಪದ್ಧತಿ ಪರಂಪರೆಗಳನ್ನು, ಬೌದ್ಧಮತ ವನ್ನು ಸ್ವೀಕರಿಸಿದ ಮೇಲೂ ಚಾ-ಚೂ ತಪ್ಪದೆ ಅನುಸರಿಸಿಕೊಂಡು ಬರುತ್ತಿದ್ದಾರೆ. ಆದರೆ ಟಿಬೇಟಿನಲ್ಲಿ ಈ ವರೆಗೂ ನಡೆದುಕೊಂಡು ಬರುತ್ತಿದ್ದ ಈ ಬಹುಪತಿತ್ವ ಪದ್ಧತಿಗೆ ಮಾತ್ರ ಅಪಕ ಪರಂಪರಾಗತ ಪದ್ಧತಿಯನ್ನು ಅನುಸರಿಸುವ ರೂಢಿಗಿಂತಲೂ ಆರ್ಥಿಕ ಪರಿಸ್ಥಿತಿಯ ಪ್ರಭಾವವೇ ಹೆಚ್ಚು ಕಾರಣವೆಂದು ಹೇಳಬಹುದು. ವಂಶಪರಂಪರಾಗತವಾಗಿ ಬಂದ ಆಸ್ತಿ-ಪಾಸ್ತಿಗಳನ್ನು ವಿಭಾಗವಾಗದಂತೆ ನೋಡಿಕೊಳ್ಳುವುದೇ ಈ ಬಹುಪತಿತ್ವ ಪದ್ಧತಿಯನ್ನು ಅನಿವಾರ್ಯವಾಗಿ ಅನುಸರಿಸಲು ಹೆಚ್ಚಿರುವುದೆಂದು ಹೇಳಿದರೂ ತಪ್ಪಾಗಲಾರದು.

ಅದಕ್ಕೆಂದೇ ಟಿಬೇಟಿನವರು ತನ್ನ ತಿ ತ್ರ್ಯಾರ್ಜಿತ ಆಸ್ತಿ-ಪಾಸ್ತಿ, ಮನೆ-ನೂರು ಗಳನ್ನು ಅನೇಕ ಅಣ್ಣ ತಮ್ಮಂದಿಯರೊಳಗೆ ಹಂಚಿಕೊಳ್ಳಲಾರದೆ ಎಲ್ಲರೂ ಕೂಡಿ ಒಂದೇ ಹೆಣ್ಣನ್ನು ಮದುವೆಯಾಗಿ ಬಂದ ಈ 'ದ್ರೌಪದಿ' ಮನೆಯೊಳಗಿನ ಎಲ್ಲ ಅಣ್ಣ ತಮ್ಮಂದಿಯರಿಗೂ ಹೆಂಡತಿಯಾಗಿ ಮಕ್ಕಳು ಮರಿಗಳನ್ನು ಹಡೆಯುತ್ತಾಳೆ. ಎಲ್ಲರೂ ಏಕತ್ರ ಕುಟುಂಬದವರಂತೆ ಒತ್ತಟ್ಟಿಗೇ ಬಾಳನ್ನು ಸಾಗಿಸುತ್ತಾರೆ.

ಬಾಗ್ಮಾ-ಮೂಗ್ವಾ.

ಟಿಬೇಟಿನವರಲ್ಲಿ ನಡೆಯುವ ಈ ಅನೇಕ ಅಣ್ಣ ತಮ್ಮಂದಿಯರನ್ನು ಒಬ್ಬಳೇ ಸ್ತ್ರೀಯು ವಿವಾಹ ಮಾಡಿಕೊಳ್ಳುವ ಪದ್ಧತಿಗೆ 'ಬಾಗ್ಮಾ' ವಿವಾಹ ಪದ್ಧತಿ ಎಂದು ಹೆಸರು. ಆದರೆ ಒಂದು ಕುಟುಂಬದಲ್ಲಿ ಬರೀ ಹೆಣ್ಣು ಮಕ್ಕಳು ಜನಿಸಿದಲ್ಲಿ ಅಂದರೆ ಅಣ್ಣ ತಮ್ಮಂದಿಯರೂ ಇರದೆ ಎಲ್ಲರೂ ಅಕ್ಕ ತಂಗಿಯರೇ ಆದಲ್ಲಿ, ಹಿರಿಯಕ್ಕ ಒಬ್ಬಳನ್ನೊಳಿದು ಉಳಿದವರಿಲ್ಲರೂ ಹುದುವೆ ಮಾಡಿಕೊಂಡು ಹೋಗುತ್ತಾರೆ; ಹಾಗೂ ಅನೇಕ ಅಣ್ಣ ತಮ್ಮಂದಿಯರಿಗೆ 'ಹೆಂಡತಿ'ಯಾಗಿ ಬಾಳುತ್ತಾರೆ. ಹಿರಿಯಮ್ಮಳು ಮಾತ್ರ ಆ ಕುಟುಂಬದ ಆಸ್ತಿಗೆ ಮೂಲಕಳಾಗಿ ಒಬ್ಬನನ್ನು ಮದುವೆಯಾಗುತ್ತಾಳೆ. ಆಕೆಗೆ ಹುಟ್ಟಿದ ಮಕ್ಕಳೇ ಆ ಮನೆತನದ ಆಸ್ತಿ-ಪಾಸ್ತಿಗಳಿಗೆ ಹಕ್ಕುದಾರರಾಗುತ್ತಾರೆ ಈ ತರದ ಮದುವೆ ಪದ್ಧತಿಗೆ 'ಮೂಗ್ವಾ' ವಿವಾಹ ಎಂದು ಹೇಳುತ್ತಾರೆ 'ಬಾಗ್ಮಾ' ಪದ್ಧತಿಯಲ್ಲಿ ಅಣ್ಣ ತಮ್ಮಂದಿರು ಮನೆತನದ ಮುಖ್ಯಸ್ಥರಾಗುತ್ತಾರೆ. 'ಮೂಗ್ವಾ' ಪದ್ಧತಿಯಲ್ಲಿ ಹಿರಿಯಕ್ಕನು ಮನೆತನದ ಮುಖ್ಯಸ್ಥಳಾಗುತ್ತಾಳೆ.

ಇದಲ್ಲದೆ ಇನ್ನೂ ಒಂದು ವಿಶಿಷ್ಟ ಲಗ್ನಪದ್ಧತಿಯು ಟಿಬೇಟಿನಲ್ಲಿ ಆಸ್ತಿತ್ವದಲ್ಲಿದೆ. ಅದರ ಹೆಸರು 'ಚಪಾಡಂಗ್' ಈ ಪದ್ಧತಿಯ ವಿವಾಹದಲ್ಲಿ-ಇದೂ ಬಹು ಪತಿತ್ವ ವಿವಾಹ ಪದ್ಧತಿಯೇ-ತಂದೆ ಮಕ್ಕಳು ಎಲ್ಲರೂ ಆ ವಧುವಿಗೆ ಗಂಡಂದಿರಾಗುತ್ತಾರೆ. ಆದರೆ ಈ ಸಧು ಮಕ್ಕಳ 'ಹೆಡೆದ ತಾಯಿ' ಮಾತ್ರ ಅಲ್ಲ. ಉದಾಹರಣೆಗೆ (ಆಕೆಗೆ ಗಂಡು ಮಕ್ಕಳೂ ಇರುತ್ತಾರೆ) ತಂದೆಯು ಇನ್ನೊಂದು ವಿವಾಹ ಮಾಡಿಕೊಳ್ಳುತ್ತಾನೆ ಆ ವಧು (ಈ ಮಕ್ಕಳ ಮಲತಾಯಿ) ಈ ಮಕ್ಕಳಿಗೂ ಹೆಂಡತಿಯಾಗಿ ನಡೆದುಕೊಳ್ಳಬೇಕು. ಅಥವಾ ತಾಯಿ ಸತ್ತ ಬಳಿಕ ಈ ಮಕ್ಕಳಲ್ಲಿ ಯಾರೊಬ್ಬ (ಬಹುತಕಿ ಹಿರಿಯ ಮಗ) ನುದುವೆ ಮಾಡಿಕೊಂಡರೂ ಆ ವಧು ಉಳಿದ ತಮ್ಮಂದಿರಿಗೆಲ್ಲ ಹೆಂಡತಿಯಾದಂತೆ ಈ ತಂದೆಗೂ ಹೆಂಡತಿಯಾಗಿ ನಡೆದುಕೊಳ್ಳಬೇಕು. ಅಂದರೆ ಅಣ್ಣ ತಮ್ಮಂದಿಯರಿಗೆ ಮಲತಾಯಿ, ಹೆಂಡತಿಯಂತೆ ಹಾಗೂ ತಂದೆಗೆ ಸೊಸೆ ಹೆಂಡತಿಯಂತೆ ನಡೆದುಕೊಳ್ಳಬೇಕಾಗುತ್ತದೆ. ಹೀಗೆ ಮಲತಾಯಿಗೆ ಮಕ್ಕಳು ಗಂಡಂದಿರಾಗಿಯೂ ಸೊಸೆಗೆ ಮಾವಂದಿರು ಗಂಡಂದಿರಾಗಿಯೂ ನಡೆದುಕೊಳ್ಳುವುದರಿಂದ, ಮಲತಮ್ಮನು ಮಗನಾಗಿಯೂ ಮೊಮ್ಮಗನು ಮಗನಾಗಿಯೂ ಆಗಬೇಕಾಗಿ ಬರುತ್ತದೆ.

ಈ ಬಗೆಯ ಬಹುಪತಿತ್ವವಿವಾಹ ಪದ್ಧತಿಯ ಕುಟುಂಬಗಳಲ್ಲಿ ಹಿರಿಯಣ್ಣನು ಉಳಿದೆಲ್ಲರಿಗಿಂತಲೂ ಅಕ್ಷರಶಃ ಹಾಗೂ ಮಹತ್ವದ ವ್ಯಕ್ತಿಯಾಗುತ್ತಾನೆ. ಒಳ್ಳೆಯ ವ್ಯಕ್ತಿತ್ವವಿದ್ದಲ್ಲಿ ಆವನ ಮಹತಿ ಹೆಚ್ಚು ಇನ್ನೊಂದು ಸೋಜಿಗದ ಮಾತೆಂದರೆ, ಈ ಬಹುಪತಿತ್ವ ವಿವಾಹ ಪದ್ಧತಿಯಲ್ಲಿ ಟಿಬೇಟೀ ಕುಟುಂಬದಲ್ಲಿ ಹುಟ್ಟಿತಿಚ್ಚು ಇರದಿರುವುದು. ಇದಕ್ಕೆ ಕಾರಣವೂ ಇದೆ ಒಬ್ಬ ಬಂಧು ಮನೆಯಲ್ಲಿ ಉಳಿಯುತ್ತಾನೆ. ಉಳಿದ ಅಣ್ಣ ತಮ್ಮಂದಿರು ಹೊಟ್ಟೆಯ ಹೋರಾಟಕ್ಕೆ ಹೊರ ಹೊರಡುತ್ತಾರೆ.

ಬಹುಪತಿತ್ವ ವಿವಾಹ ಪದ್ಧತಿಯ ಕುಟುಂಬಗಳಲ್ಲಿ ಪಸ್ತ್ರೀ ಅಥವಾ ಪರಪುರುಷ ಸಂಬಂಧವು ಅತ್ಯಂತ ನಿಕಟತೆಯಿಂದ ನಿರ್ಬಂಧಿಸಲ್ಪಟ್ಟಿರುವುದಲ್ಲದೆ, ಅದಕ್ಕೆ ಘೋರವಾದ ದಂಡನೆಯನ್ನು ಇಡಲ್ಪಟ್ಟಿದೆ. ಬಾಗ್ಮಾ ವಿವಾಹ ಪದ್ಧತಿಯಲ್ಲಿ ಸ್ತ್ರೀಗೂ ವ್ಯಭಿಚಾರಿಣಿಯೆಂದು ಕಂಡು ಬಂದಲ್ಲಿ, ಆ ವಳು ಅಪವಿತ್ರಳೆದ್ದರೆ ಅವಳನ್ನು ತನ್ನ ಮನೆಯಿಂದ ಹೊರ ದಬ್ಬಲಾಗುತ್ತದೆ. ಪುರುಷನು ವ್ಯಭಿಚಾರಿಯೆಂದು ಕಂಡು ಬಂದಲ್ಲಿ ಅವನಿಗೆ ಘಟಿಕ ಶಿಕ್ಷೆಯನ್ನು ವಿಧಿಸಲಾಗುತ್ತಿದೆಯಷ್ಟಿದೆ, ಆವನು ವ್ಯಭಿಚರಿಸಿದ ಸ್ತ್ರೀಯ ಅಧಿಕೃತ ಪತಿಗೆ ಅವನಿಂದ ಭಾರೀ ದಂಡವನ್ನು ತೆರಲು ಹೆಚ್ಚಲಾಗುತ್ತದೆ. ಮೂಗ್ವಾ ವಿವಾಹ ಪದ್ಧತಿಯಲ್ಲಿ ಸ್ತ್ರೀ ವ್ಯಭಿಚಾರಿಣಿಯೊದಲ್ಲಿ ಗಂಡನಿಗೆ ಘಟಸ್ಫೋಟ ಮಾಡಿಕೊಳ್ಳಲು ಮಾತ್ರ ಅಧಿಕಾರವಿರುತ್ತದೆ ಹೀಗಿತ್ತೆ ಟಿಬೇಟಿನ ದ್ರೌಪದಿಯರ ಕತೆ. 'ಜೈ ಹಿಂದ್'

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಿಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245ರ ವರೆಗೆ.
2. 12ನೇ ನಂಬರಿನ ಒಂಟಿ ಹೊಳವಿನ ಕೋವಿ ಕ್ರಯ ರೂ. 320-0-0
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott)
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make)
5. .32 ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಿಗಳೂ ಸಹ ದೊರೆಯುತ್ತವೆ.
6. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೆಮಾಡುವ ಪಂಪುಗಳು (Spraying Pumps)
7. ¾" ½" ⅜" ¼" ಕಬ್ಬಿಣದ ಪಲಾಕೆಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಿಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ಕೊಡಲಾಗುವುದು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

೪೨-೪೩

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

Licence No. 60.
Licenced to Post without Prepayment

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಎ. ಬೆಳ್ಯಪ್ಪನವರು] [ಪ್ರಾರ್ಷಿಕ ಚಂದಾ ರೂ. ೮–0–0.

ಸಂಪುಟ ೩೧ | ತಾರೀಕು ೧೩–೭–೧೯೫೧ನೇ ಶುಕ್ರವಾರ | ಸಂಚಿಕೆ ೭

॥ ಭಾಷಾನ್ವಯ ವಿಭಜನೆ ॥

[ಲೇ:—ಶ್ರೀ ಕ. ಶಿ. ಮಹಾದೇವಾಲಾ.]

ತೇಕಚಂದ ಸಮಿತಿಯವರು ಡಾಂಗ ಪ್ರದೇಶವನ್ನು ಚುನಾವಣೆಗಳ ಬಗ್ಗೆ ನಾಸಿಕ ಜಿಲ್ಲೆಗೆ ಜೋಡಿಸುವ ತೀರ್ಪು ಕೊಟ್ಟನಂತರವೂ ಅದರ ವಿರುದ್ಧ ಗುಜರಾತ ದಲ್ಲಿ ಚಳವಳಿ ನಡೆಯುತ್ತಿರುವದನ್ನು ನಾನು ಗಮನಿಸಿದ್ದೇನೆ. ಗುಜರಾತ ಪ್ರಾಂತಿಕ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಕನ್ಹಯ್ಯಾಲಾಲ ದೇಸಾಯಿಯವರು ತೇಕಚಂದ ಸಮಿತಿಯ ತೀರ್ಪನ್ನು ಸಾಡಿನ್ನುದಿಂದ ಸ್ವೀಕರಿಸಿ ಧೀರನಲ್ಲಿರಬೇಕಾದ ಔದಾರ್ಯವನ್ನು ಪ್ರದರ್ಶಿಸಿದ್ದಾರೆ. ಅವರು ಹೀಗೆ ಹೇಳಿದರು:—

'ಈ ತೀರ್ಪಿನಿಂದ ಗುಜರಾಥದಲ್ಲಿ ತುಂಬಾ ಆಶ್ಚರ್ಯವೂ ನಿರಾಶೆಯೂ ಉಂಟಾದೀತು. ಆದರೆ ಮಧ್ಯಸ್ಥರ ತೀರ್ಪನ್ನು ಸ್ವೀಕರಿಸುವದಾಗಿ ನೋಡಲೇ ಒಪ್ಪಿಕೊಂಡಿದ್ದುದರಿಂದ ಅದಕ್ಕೆ ನಾನು ತಲೆಬಾಗಬೇಕಾಗಿದೆ. ಪ್ರಜಾತಂತ್ರಾತ್ಮಕ ರೀತಿಯಲ್ಲಿ ನ್ಯಾಯಬದ್ಧವಾದ ಇತ್ಯರ್ಥವನ್ನು ಪಡೆಯಲು ನಾವು ಪ್ರಯತ್ನಿಸಿದ್ದೆವು. ಈ ತೀರ್ಪಿನಿಂದ ಗುಜರಾತಿಗರಿಗೆ ಆಗಿರುವ ನಿರಾಶೆಯನ್ನು ಹೋಗಲಾಡಿಸಲು ನಾವು ಪ್ರಯತ್ನಿಸುತ್ತೇವೆ. ಮುಂಬಾಯಿ ರಾಜ್ಯದಲ್ಲಿ ಭಾಷಾನ್ವಯ ಪ್ರಾಂತರಚನೆಯೊಗ್ಗುವದರ್ಭ ಬಂದಲ್ಲಿ ಡಾಂಗ ಪ್ರದೇಶ ಗುಜರಾತಕ್ಕೆ ಸೇರಬೇಕೋ ಮಹಾರಾಷ್ಟ್ರಕ್ಕೋ ಎಂಬ ವಿಶಾಲ ಪ್ರಶ್ನೆಗೂ ಈ ತೀರ್ಪಿಗೂ ಏನೇನೂ ಸಂಬಂಧವಿಲ್ಲ. ನನಗೆ ಒಪ್ಪಿಸಲ್ಪಟ್ಟ ನಿರ್ದಿಷ್ಟ ಪ್ರಶ್ನೆಗಳಿಗೆ ಕೊಟ್ಟ ಈ ತೀರ್ಪಿನ ಕಕ್ಷೆಯಲ್ಲಿ ಆ ವಿಚಾರ ಸರ್ವಥಾ ಒಳಪಟ್ಟಿಲ್ಲ. ಆ ಪ್ರಶ್ನೆ ಉದ್ಭವಿಸಿದರೆ, ಉದ್ಭವಿಸಿದಾಗ ಅದನ್ನು ಪ್ರತ್ಯೇಕವಾಗಿ ವಿಚಾರಿಸಬೇಕಾಗುವುದು. ಆ ಪ್ರಶ್ನೆಯ ತೀರ್ಮಾನದ ಮೇಲೆ ನಮ್ಮೀ ನಿರ್ಣಯವು ಯಾವ ವರ್ಜ್ಯವನ್ನೂ ಬೇರುವುದೆಂದು ತಿಳುಕೊಳ್ಳತಕ್ಕದಲ್ಲ.'

'ಡಾಂಗ ಪ್ರದೇಶ ಗುಜರಾತಕ್ಕೆ ಸೇರಲಿ' ಎಂಬುದರ ಪಕ್ಷಪಾತಗಳು ಈ ವಿವರಣೆಯಿಂದ ಸಂತುಷ್ಟರಾಗಬೇಕಾದ್ದು ವಿಹಿತ.

ಡಾಂಗದ ಹಕ್ಕಿಗಾಗಿ ಮಹಾರಾಷ್ಟ್ರ ಗುಜರಾಥಗಳೊಳಗಿನ ವಿವಾದವಲ್ಲಿ ಯಾವುದೋ ಒಂದು ಪ್ರಾಂತ ಅಥವಾ ಭಾಷೆಯ ಅಭಿಮಾನದಿಂದ ಪ್ರೇರಿತನಾಗಿ ಮಾತಾಡುವುದು ನನ್ನಿಂದಾಗದ ಕೆಲಸ. ಯಾವ ದೊಂದು ಪ್ರಾಂತ ಅಥವಾ ಭಾಷೆಯು ಭಕ್ತರ ಹೃದಯದಲ್ಲಿ ತಿರಬಹುದಾದ ಭಾವನೆಗಳಿಗೆ ನಾನು ಸುತರಾಂ ಅಪರಿಚಿತ. ಆದರೆ ಶ್ರೀ ಕನ್ಹಯ್ಯಾಲಾಲ ದೇಸಾಯಿಯವರ ಒಂದುಹೇಳಿಕೆಯು ಈ ಕೆಳಗಿನವಾಕ್ಯಗಳನ್ನು ಓದಿ ನನಗೆ ಸಂತೋಷವಾಯಿತು.

'ಮುಂಬಾಯಿ ಮೂರು ಮಜಲು ಭಾಷೆಗಳನ್ನೊಳಗೊಂಡ ಸಂಯುಕ್ತ ಪ್ರಾಂತ ವೆಂದು ನನ್ನ ವಾದ ಅಂಥಾ ಪ್ರಾಂತದಲ್ಲಿ ಒಂದಕ್ಕಿಂತ ಹೆಚ್ಚು ಭಾಷೆಗಳು ಪ್ರಚಲಿತವಾಗಿರುವ ಪ್ರದೇಶಗಳು ಇದ್ದೇ ತೀರುವುವು. ಅಂಥ ಪ್ರಕರಣದಲ್ಲಿ ಮತದಾರ ಸಂಘಗಳನ್ನು ಗೊತ್ತುಪಡಿಸುವದಕ್ಕೆ ಭಾಷೆಯೊಂದೇ ಆಧಾರವಾಗಲಾರದು. ಸಂಬಂಧಮತ್ತ ಆಡಳಿತೆಯ ಅನುಕೂಲ ಇವು ಸೂತ್ರ ಆಗಬೇಕು. ಗಮ್ಯಗಳಾಗಬೇಕು.'

ಕಡೆಯ ವಾಕ್ಯಕ್ಕೆ 'ಅಂಥ ಪ್ರದೇಶದಲ್ಲಿ ವಾಸಿಸುವ ಜನತೆಯ ಹಿತ' ಎಂಬ ಇನ್ನೊಂದು ಗಮ್ಯ ವಿಷಯವನ್ನು ಸೇರಿಸಿದರೆ, ಯಾವುದೊಂದು ಪ್ರದೇಶ ಯಾವ ಪ್ರಾಂತಕ್ಕೆ ಸೇರಬೇಕೆಂಬುದನ್ನು ನಿರ್ಣಯಿಸಲಿಕ್ಕೆ ಮೇಲಿನದೇ ಅತ್ಯುತ್ತಮ ನಿಯಮವೆಂದು ನಾನು ಅಂಗೀಕರಿಸುತ್ತೇನೆ.

ದಿನಾಲಶಪ್ಪ ಹೀಂಪೆಯೇ ಕರಾಚಿಯು ಭಾಷಾನ್ವಯ ಪ್ರಾಂತರಚನಾ ನಿರ್ಣಯದ ಹುಟ್ಟುತೆಯ ಬಗ್ಗೆ ನನಗೆ ಸಂದೇಹ ಬಂದು ಅದನ್ನು ಪುನರ್ವಿಚಾರಿಸಬೇಕೆಂದು ವಾದಿಸಿದ್ದೆ. ಆಡಳಿತೆಯ ಕಾರ್ಯವನ್ನು ಪೂರೈಸಲು ಪ್ರತ್ಯೇಕವಾಗಿ ಪ್ರತ್ಯೇಕವಾಗಿ ಪ್ರದೇಶಗಳನ್ನು ಒದಗಿಸಿಕೊಡುವದು ಸಾಧ್ಯವೆಂದು ನನ್ನ ನಂಬಿಕೆ. ವಾಸ್ತವಿಕವಾಗಿ, ಏಕ ಭಾಷಾ ಪ್ರಾಂತಗಳಿಗಿಂತ ಬಹು ಆಡಳಿತವಾಗಿದೆಯೆಂದು ನಾನು ಭಾವಿಸಿದ್ದೇನೆ. ಈಗಾಗಲೇ ನಮ್ಮ ಆಡಳಿತಯ ವೆಚ್ಚದ ಭಾರ ಅತಿರೇಕವಾಗಿದೆ. ಹೀಗಿರುವಾಗ ಇನ್ನೆಷ್ಟು ಪ್ರಾಂತಗಳನ್ನು ನಿರ್ಮಿಸುವುದೆಂದರೆ ದುಂದುಗಾರಿಕೆಯೇ ಸರಿ. ಭಾರತವು ಇದಕ್ಕೆ ತಾಳಲಾರದು. ಅಗತ್ಯ ರಾಜ್ಯಗಳನ್ನು ಕೂಡ ರದ್ದುಗೊಳಿಸಿ ಅಖಿಲ ಭಾರತವನ್ನು ಹೆಚ್ಚು ಕಡಿಮೆ ಸ್ವಿಟ್ಜರ್ಲಾಂಡಿನಂತೆ ಆಳಬೇಕೆಂದು ಶ್ರೀ ಮನ್ನು ಸುಬೇದಾರರು ವಾದಿಸುತ್ತಾರೆ. ಅವರ ಅಭಿಪ್ರಾಯಗಳು ಮನನಾರ್ಹವಾಗಿದೆ. ಆದೊತ್ತಟ್ಟಿಗಿರಲಿ, ಆದರೆ ಬಹು ಭಾಷಾ ಪ್ರಾಂತಗಳು ಪ್ರಾಂತೀಯತೆಯನ್ನೂ ಭಾಷೆಗಳ ಸಂಕುಚಿತ ಬೆಳವಣಿಗೆಯನ್ನೂ ತಿದ್ದಲು ಸಾಧನವಾಗುವವು. ಸ್ಥಾನಿಕ ಸಂಬಂಧಗಳಾಗಲಿ ವರ್ಜಿಸ್ಥಾನಗಳೇ ಇಲ್ಲದ ಅಧಿಕಾರಿಗಳನ್ನು ನೇಮಿಸಲು ಇದರಿಂದ ಅನುಕೂಲವಾಗುವುದು. ಕೆಲವೇಳೆ ಇದು ಅತ್ಯವಶ್ಯಕವೆಂಬ ಸುತ್ತದೆ.

ಒಂದೇ ಭಾಷೆಯನ್ನು ಮಾತಾಡುವ ಎಲ್ಲ ಜನರೂ ಸಾಧ್ಯವಾದಷ್ಟು ಮಟ್ಟಿಗೆ ಒಂದೇ ರಾಜ್ಯದಲ್ಲಿರುವಂತೆ ನೋಡುವದು ಮತ್ತ ಇಷ್ಟವಾಗಿದೆ. ಆದರೆ 'ಒಂದು ಭಾಷೆ–ಒಂದು ರಾಜ್ಯ' ಎಂದರುವದು ಅವಶ್ಯವಿಲ್ಲ. ಒಂದು ರಾಜ್ಯದಲ್ಲಿ ಎರಡು ಮೂರು ಭಾಷೆಗಳನ್ನು ಒಳಪಡಿಸಿ ಪಕ್ಷಪಾತವಿಲ್ಲದ ತಿಪಡುಗಳಿಗಾಗಿ ಹಿಂದಿಯಷ್ಟು ಸಾಮಾನ್ಯ ಭಾಷೆಯಾಗಿ ಉಪಯೋಗಿಸಿದರೆ ಏನು ತೊಂದರೆಯಾಗಲಾರದು.

ಈ ಅಭಿಪ್ರಾಯ ಸಮ್ಮತವಾದರೆ, ಆಗ ಡಾಂಗವನ್ನು ಸುರತಕ್ಕೆ ಜೋಡಿಸಬೇಕೋ ನಾಸಿಕಕ್ಕೋ ಎಂಬೀ ಜಗಳ ಪ್ರಶ್ನೆಗಳನ್ನು ಭಾಷಾದೃಷ್ಟಿಯೊಂದರಿಂದಲೇ ಬಿಡಿಸದೆ ಭೌಗೋಲಿಕ ಸಂಬಂಧ ಮತ್ತು ಆಡಳಿತೆಯ ಸೌಕರ್ಯಗಳನ್ನು ನೋಡಬೇಕಾಗುತ್ತದೆ. ಇಡೀ ರಂಜ್ಯದ ಯಾವ ಭಾಗದಲ್ಲಿದ್ದರೂ ಯಾವ ಭಾಷೆಯೂ ಯಾವ ಭಾಷಾತ್ಮಕ ಅಲ್ಪ ಸಂಖ್ಯಾತ್ಮಕ ಸಮೂಹವೂ ಅನ್ಯಭಾಷೆಯಿಂದ ದಬ್ಬಾಳಿಕೆಯೊಗ್ಗಾಗಿದೆಂಬ ಭಯವನ್ನಿಟ್ಟುಕೊಳ್ಳಬೇಕಿಲ್ಲ. ತೀರ ಚಿಕ್ಕ ಅಲ್ಪ ಸಂಖ್ಯಾತ್ಮಕ ಗುಂಪಿದ್ದರೆ ಅದು ಸುತ್ತಲ ಪ್ರದೇಶದ ಬಹು ಸಂಖ್ಯಾತ್ಮಕರ ಭಾಷೆಯನ್ನು ಅಂಗೀಕರಿಸುವುದು ಅದಕ್ಕೇ ಹಿತವೆಂಬುದು ಖಂಡಿತ. ಹೀಗೆ ಪುನೆಯಲ್ಲಿ ಶತಮಾನಗಳಿಂದ ನೆಲಸಿದ ಗುಜರಾತಿಗರು, ಸಿಂಧೀಯರು, ಪಂಜಾಬಿಗಳೂ, ಮದ್ರಾಸಿಗಳೇ ಮೊದಲಾದವರು ಎಲ್ಲ ಕಾರ್ಯಗಳಿಗೂ ಮರಾಠಿಯನ್ನೇ ಬಳಸಿಕೊಳ್ಳುವುದು ಇಷ್ಟವಾದಂತೆ ಬೆಡೋದೆಯ ನೆಲೆಯೂರಿದ ವರ್ತಕರಾಷ್ಟ್ರೀಯರೇ ಮೊದಲಾದವರು ಪೂರ್ಣ ಗುಜರಾತಿಗರೇ ಆಗಿಬಿಡುವದು ಹಿತವೆಂದು ನನ್ನ ಅಭಿಪ್ರಾಯ. ಈಗಾಗಲೆ ಹಲವರು ಹೀಗಾಗಿಬಿಟ್ಟಿದ್ದಾರೆ. ಪಾನಪೇಶ, ಅಹಮದನಗರ, ಬಲಾಪುರ (ವರ್ಹಾಡ)ಗಳಲ್ಲಿರುವ ಗುಜರಾತಿಗರು ಹೆಚ್ಚು ಕಡಿಮೆ ಪೂರ್ಣ ಮರಾಠಿಗರೇ ಆಗಿದ್ದಾರೆ; ಮಹಾಕೋಸಲ, ಉತ್ತರ ಪ್ರದೇಶಗಳಲ್ಲಿರುವಷ್ಟರು ಹಿಂದೀ ಭಾಷಿಗಳಾಗಿದ್ದಾರೆ. ಅವರಲ್ಲಿ ಕೆಲವರು ತಂತಮ್ಮೊಳಗೆ ಬೇರೊಂದು ಭಾಷಾಸ್ರಭೇದವನ್ನು ಬಳಸಿ, ಅದನ್ನೇ ಗುಜರಾತಿಯೆಂದು ಕರೆದಾಕ್ಷಣ ಅದು ಗುರ್ಜರ ದೇಶದ ಗುಜರಾಥಿಗರಾಗಲಾರದು. ಹಾಗೆಯೇ ಕರ್ನಾಟಕದಲ್ಲಿ ರಜಪೂತರಿದ್ದಾರೆ; ಅವರು ಪೂರ್ಣ ಕನ್ನಡಿಗರಾಗಿದ್ದಾರೆ. ಗುಜರಾಥದಲ್ಲಿರುವ ಮಹೇಶ್ವರಿಗಳು ಮಾರವಾಡಿ ಭಾಷೆಯು ಗಂಧವನ್ನೂ ಅರಿಯರು.

ಭಾಷಾನ್ವಯ ಪ್ರಾಂತಾಭಿಮಾನಿಗಳು ತಮ್ಮ ದೃಷ್ಟಿಕೋನವನ್ನು ಬದಲಿಸಿ ನಮ್ಮ ಸಮಸ್ಯೆಗಳಿಗೆ ಅವರ ಪ್ರತ್ಯೇಕತಾವಾದಿ ಪರಿಹಾರಗಳನ್ನು ಕೈತ ಹಿಡಿಯಬೇಕೆಂದು ವಿನ್ಮವಿಸುತ್ತೇನೆ. ಜನ ಸಾಮಾನ್ಯರು ಇಷ್ಟು ವಿಶಾಲ ದೃಷ್ಟಿಗಳೂ ಅಸಂಕುಚಿತರೂ ಇದ್ದಲ್ಲಿ ಕೆಲವಾದ ವಿವಿಧ ಪ್ರಶ್ನೆಗಳ ಸ್ವರೂಪವನ್ನು ಅಯಲಾರದಷ್ಟು ಅಜ್ಞರೂ ಆಗಿರುವಾಗ, ಮೇಲಿರುವ ಕೆಲ ಆಡಳತಗಾರರು, ರಾಜಕಾರಣಿಗಳು, ವ್ಯಾಪಾರಿಗಳ ಹಿತ್ತು ಪ್ರತಿಷ್ಠಾನಿಗಳ ಬೆಂಬಲದಿಂದ ಅವರನ್ನು ಸಾಕಿದ ಪಶುಗಳಂತೆ ಒಂದು ಆಡಳಿತೆಯಿಂದ ಇನ್ನೊಂದಕ್ಕೆ ಪರಾರಿಯಿಸ ಹೋಗುವದು ವಿಷಾದಕರ ಅಂಥ ಪ್ರಸಂಗಗಳಲ್ಲಿ ಸಾರ್ವತ್ರಿಕ ನಿರಾಕರಣೆ ಕೂಡ ಸರಿಯಾದ ರೀತಿಯಲ್ಲಿ ಅದು ಚಿತ್ತವಟ್ಟಕ್ಕಿಂತಲೂ ಅಶಿತ್ತ. ಏಕೆಂದರೆ ಚಿತ್ತವಟ್ಟದ ಪರಿಣಾಮ ಪುಡಾರಿಗಳ ತಿರುಬೊಬ್ಬೆಯಿಂದಾಗಲಿ, ಹಣದಿಂದಾಗಲಿ, ಕೊಡದಿಂದಾಗಲೀ ಪ್ರಭಾವಿತವಾಗುವುದಿಲ್ಲ. ಬಹಳ ಕಾಲದಿಂದ ಬಳಕೆಯಲ್ಲಿದ್ದು ಜನರಿಗೆ ಒಗ್ಗಿಹೋದ ವ್ಯವಸ್ಥೆಯ ನ್ನು ಜನಹಿತ ಆದರಲ್ಲೇ ಇದೆಯೆಂದು ವಿದ್ವಾಂಸರಿಂದ ಸಿದ್ಧವಾದ ಹೊಸತು ಒಳ್ಳೆದೊಪ್ಪಿಬದಲಾಯಿಸುವದು ಸುಲಭವಲ್ಲ. ಈ ಕಾರಣ ನಡೆಯುವ ಎಲ್ಲ ವಾದವಿವಾದಗಳಲ್ಲಿಯೂ ಗತ ರಾಜಕೀಯ ಇತಿಹಾಸ, ಆಡಳಿತರು ಸೌಕರ್ಯ, ವ್ಯಾವಹಾರ ಸಂಪರ್ಕ, ನೈಸರ್ಗಿಕ ಸಂಪತ್ತಿ ಮೊದಲಾದುವುಗಳನ್ನು ಒತ್ತಿ ಹೇಳಲಾಗುತ್ತದೆ ಆದರೆ ಜನತೆಯನ್ನು ಮಾತ್ರ ಎಲ್ಲರೂ ಮರೆತವರೇ.

ಜೀವಕೋಶಗಳು ಒಡೆದು ಒಂದಿನ್ನು ಹೊಸಜೀವಕೋಶಗಳಾಗುವ ಜೀವಕಾಸ್ಥಾತ್ಮಕ ಪ್ರಕ್ರಿಯೆ ನಮ್ಮ ದೇಹದಲ್ಲಿ ರಭಸದಿಂದ ನಡೆಯುವುದನ್ನು ನೋಡಿದರೆ ಗಾಬರಿಯಾಗುತ್ತದೆ. ಈಗ ಈ ಪ್ರಕ್ರಿಯೆಯನ್ನು ಹಿನ್ನೆಡೆಸಿ ಒಂದುಗೂಡಿಸುವ ಪ್ರಕ್ರಿಯೆಯಿಂದ ಬಲ ಐಕ್ಯವನ್ನು ತೆಯನ್ನು ಪಡೆಯಬೇಕಾದ ಕಾಲವೊದಗಿದೆ. ಆದರೆ ಕೇಂದ್ರೀಕೃತ ಅಧಿಕಾರ ಮತ್ತು ನಿರ್ದೇಶವೂ ಮೇಲೆ ಹೇಳಿದ ನ್ಯವಸ್ಥೆಯೂ ಒಂದೇ ಎಂದು ಯಾರೂ ಭ್ರಾಂತರಾಗಲಾರದು.

—ಪೆಡಿಯನ

GREENFIELD ESTATE PEPPER CROP FOR SALE ON VINES SEASON 1951 52

Those interested in Purchasing please communicate with Manager, Greenfield Estate for permission to inspect and for further particulars on or before 24th July 1951.

2-2 GREENFIELD ESTATE, SIDAPUR P. O.

For Sale.

Dodge 15 cwt. Ex-Army Weppon Carrier 1945 Model, 27.34 H. P. For inspection and further particulars please communicate with Manager, Greenfield Estate.

2-2 GREENFIELD ESTATE, SIDAPUR P. O.

ಚುನಾವಣೆ ಸಿದ್ಧತೆಗಳು.

ಮುಂದಿನ ಶರತ್ಕಾಲದಲ್ಲಿ ನಡೆಯಲಿರುವ ಮಹಾಚುನಾವಣೆಯ ಸಿದ್ಧತೆಗಳು ಇಹ ಭರದಿಂದ ನಡೆಯುತ್ತಿವೆ.

ಹದಿನೇಳು ಕೋಟಿ ಐನತ್ತು ಲಕ್ಷ ಮತದಾರರ ನೋಂದಣಿಯಲ್ಲಿಯೂ ಯಂತ್ರಗಳಲ್ಲೇ ಅತಿ ದೊಡ್ಡದಾಗಿದ್ದು, ಅದು ಸಿದ್ಧವಾಗಿದೆ. ಚುನಾವಣೆ ನಡೆಸುವ ವಿಧಾನದ ವಿಚಾರ ಹಾಗೂ ಪರಿಶೀಲನಾ ಸಮಿತಿಗಳ ರಚನೆ ಇವೆಲ್ಲವೂ ನಿರ್ಣೀತವಾದಂತೆಯೇ ಸರಿ.

ಚುನಾವಣಾ ಕಮೀಷನರು ಪಟೇಲ್ ಇವರ ಸಹ ಅಧಿಕಾರಿಗಳು ಅವಿಶ್ರಾಂತವಾಗಿ ದುಡಿಯುತ್ತಿರುವರು.

ಜಗತ್ತಿನಲ್ಲೇ ಸೃಜಾ ಪ್ರಭುತ್ವದ ಅತಿ ದೊಡ್ಡ ಪ್ರಯೋಗವೆಂದು ಕರೆಸಿ ಕೊಳ್ಳುತ್ತಿರುವ ಈ ಚುನಾವಣೆಯನ್ನು ನಡೆಸುವ ರೀತಿ ನೀತಿಗಳ ಬಗ್ಗೆ ಹಗಲಿರುಳು ಚುನಾವಣಾ ಕಮೀಷನರು ತಲೆಹಾಕುತ್ತಿರುವರು. ಇತರ ಕೆಲಸ ಮಹತ್ವದ್ದಾದುದು. ಎರಡು ಲಕ್ಷ ಮತಗಟ್ಟೆಗಳ ಬಗ್ಗೆ ವ್ಯವಸ್ಥೆ ಮಾಡಬೇಕು. ೧೯ ಲಕ್ಷ ಓಟಿನ ಪೆಟ್ಟಿಗೆಗಳನ್ನು ತಯಾರಿಸಬೇಕು. ೫೮ ಕೋಟಿ ಬ್ಯಾಲೇಟ್ ಪೇಪರುಗಳನ್ನು ಮುದ್ರಿಸುವ ಕೆಲಸ ಇವರ ಹೆಗಲ ಮೇಲೆ ಇರುವುದು. ಇದಲ್ಲದೆ ಐದು ಲಕ್ಷ ಜನ ಕಾರ್ಯಕರ್ತರಾಗಿ ಸ್ವಯಂಸೇವಕರಾಗಿ ಚುನಾವಣೆ ನಡೆಯುವುದರಲ್ಲಿ ಕೆಲಸ ಮಾಡಬೇಕಾಗಿದೆ.

ಈ ಬೃಹತ್ ಪ್ರಯೋಗದ ಪ್ರೌಢ ಮತದಾನವು ಯಶಸ್ವಿಯಾಗುವುದರ ವಿಚಾರದಲ್ಲಿ ನಿರೀಕ್ಷಕರೆಲ್ಲೂ ಎರಡು ಬಗೆಯ ಅಭಿಪ್ರಾಯಗಳು ಕಂಡುಬರುತ್ತಿಲ್ಲ. ೧೫೫ ದಶಲಕ್ಷ ಜನರಲ್ಲಿ ಬಹಳಷ್ಟು ಜನರು ಮತಗಟ್ಟೆಗೆ ಬರುವರು. ಮತ್ತು ಈ ಚುನಾವಣೆಯು ಯಶಸ್ವಿಯಾಗುವುದೆಂದು ಅಭಿಪ್ರಾಯಪಡುವವರು ಒಂದು ಪಂಗಡ. ದೇಶದಲ್ಲಿರುವ ಅನಕ್ಷರತೆ, ಅಧಿಕ ಜನಸಂಖ್ಯೆ ಇವುಗಳಿಂದಾಗಿ ಈ ಪ್ರೌಢ ಮತದಾನ ಪದ್ಧತಿಯು ಯಶಸ್ವಿಯಾಗಲಾರದೆಂದೂ ಸಂದೇಹಿಸುವರು ಇನ್ನೊಂದು ವಿಚಾರ ಧಾರೆಯುವರು.

ರಾಜಕೀಯ ನಿರೀಕ್ಷಕರು ಚುನಾವಣೆ ಆಡಳಿತ ಯಂತ್ರವು ಸಂಪೂರ್ಣವಾಗಿದೆ ಎಂದು ಅಭಿಪ್ರಾಯಪಡತೊಡಗಿರುವರು. ಉಮೇದುವಾರರ ಅರ್ಹತೆಯನ್ನು ನಿರ್ಧರಿಸಿರುವುದರಲ್ಲಿ ಜನತಾ ಪ್ರಾತಿನಿಧ್ಯ ಮಸೂದೆಯು ಮಾಡಿರುವ ಸಹಾಯದಿಂದ ಮುಂದಿನ ಶಾಸನ ಸಭೆಗಳು ಹಾಗೂ ಪಾರ್ಲಿಮೆಂಟು ಉತ್ತಮ ಪಟ್ಟದ ಪ್ರಾತಿನಿಧ್ಯವನ್ನು ಪಡೆಯುವುದೆಂದು ಇವರು ನಿರೀಕ್ಷಿಸುತ್ತಾರೆ.

ಜನತಾ ಪ್ರಾತಿನಿಧ್ಯ ಸುಗಮವಾಗಿರುವ ಸರಕಾರದೊಂದಿಗೆ ಕಟ್ಟುಕಟ್ಟಳೆ ಹೊಂದಿರುವ ಜನರೂ ಕಂಪನಿಯ ಡೈರೆಕ್ಟರುಗಳೂ ಮತ್ತು ಸರಕಾರದ ನೌಕರಿಯಿಂದ ಅಪ್ರಮಾಣಿಕತೆಗಾಗಿ ವಜಾ ಮಾಡಲ್ಪಟ್ಟವರೂ ಚುನಾವಣೆಗೆ ಉಮೇದುವಾರರಾಗಿ ನಿಲ್ಲಲು ಬರುವುದಿಲ್ಲ.

೬ ಪ್ರಾಂತಗಳ ಶಾಸನ ಸಭೆಗೆ ಮತ್ತು ಪಾರ್ಲಿಮೆಂಟಿಗೆ ನಿಲ್ಲುವ ಉಮೇದುವಾರರ ಕನಿಷ್ಠವಯೋಮಿತಿ ೨೫ ಮತ್ತು ೩೦ ಆಗಿದ್ದು ಮತದಾರರ ಕನಿಷ್ಠವಯೋಮಿತಿ ೨೧ ಇರಬೇಕೆಂದು ನಿರ್ಧರಿಸಲಾಗಿದೆ.

ಕಾದಿಡಲ್ಪಡದಿರುವ ಜಾಗೆಗಳಿಗೆ ಪರಿಶಿಷ್ಟ ವರ್ಗದವರೂ ಗುಜ್ಜಾಗಾಡಿನ ಜನರೂ ಪ್ರತಿನಿಧಿಸಬಹುದು. ಆದರೆ ಅವರಿಗಾಗಿ ಕಾದಿಟ್ಟ ಜಾಗಗಳಿಗೆ ಪ್ರತಿನಿಧಿಸಬಾರದು.

ಸದಸ್ಯರ ಸಂಖ್ಯೆ

ಜನಕಾ ಸಭೆಗಾದ ಭಾರತ ಸೃಜಾ ರಾಜ್ಯದ ಪಾರ್ಲಿಮೆಂಟಿಗೆ ಲೋಕ ಜನರನ್ನು ಆರಿಸಬೇಕಲ್ಲದೆ ಇದರ ಜೊತೆಗೆ ಅಧ್ಯಕ್ಷರು ಎಟಿ. ಜನರ ನಾಮ ಕರಣಗೊಡಬೇಕು. ಈ ಎಟು ಜನರಲ್ಲಿ ಇತ್ತ ಜನರು ಜಮ್ಮು ಕಾಶ್ಮೀರದಿಂದಲೂ ಒಬ್ಬನು ಅನುಸೂಚನ ಮತ್ತು ನಿಕಾಬಾರ ದ್ವೀಪದಿಂದಲೂ ಆಸಾಮಾದ ಸೃಕೇತ್ರ ಜೆಲ್ಲೆಯ ಪರಿಶಿಷ್ಟ ವರ್ಗದಿಂದ ಒಬ್ಬನನ್ನು ಆರಿಸಿಕೊಳ್ಳಲಾಗುವದು. ಒಟ್ಟಿನಲ್ಲಿ ಪಾರ್ಲಿಮೆಂಟಿನ ಪ್ರತಿನಿಧಿಗಳ ಪ್ರಮಾಣವು ಸೃತಿ ೭೫೦,೦೦೦ ಜನಕ್ಕೊಬ್ಬರಂತಾಗುವುದು.

ಪ್ರಾಂತದ ಶಾಸನ ಸಭೆಗಳು (ಮೇಲ್ಮನೆ ಮತ್ತು ಕೆಳಮನೆ ಸೇರಿ) ೩೦೦ ಜನರನ್ನು ಆರಿಸಬೇಕಾಗಿದೆ. ಇದರಲ್ಲಿ ಸಿ. ಸ್ಟೇಟುಗಳು ನಂತ್ರ ಜಮ್ಮು ಕಾಶ್ಮೀರವನ್ನು ಸೇರಿಸಿಲ್ಲ. ಇವುಗಳ ಪೈಕಿ ೨೮೪ ಜನರು ಎ. ಸ್ಟೇಟುಗಳಲ್ಲೂ ಉಳಿದವರು ಬಿ ಸ್ಟೇಟುಗಳಲ್ಲೂ ಇರುವರು.

ಪ್ರತಿಯೊಂದು ಪಕ್ಷವೂ ತನ್ನ ಮತಪಟ್ಟಿಗೆ ಬೇರೆ ಬೇರೆ ಸಂಕೇತವನ್ನು ಹೊಂದಿರುವುದರಿಂದ ಬೆಲೆಟ್ ಪೇಪರಿನ ಮೇಲೆ ಗುರುತು ಮಾಡಿ ಕನ್ನಡವು ಮತದಾರನಿಗೆ ತಪ್ಪುವುದಲ್ಲದೆ ಹಾಳಾದ್ದೂ ತಗಲೂ ಇಲ್ಲವಾಗುವುದು ಎಂಬಿಯಂ ಸಲಭವಾಗುವುದು.

ಸಾಮ್ಯವಾದಿಗಳ ಪಂಚವಾರ್ಷಿಕ ಕಾರ್ಯಕ್ರಮ.

ಚುನಾವಣೆ ಘೋಷಣೆ ಪತ್ರಿಕೆ.

ಕಲಕತ್ತೆಯಲ್ಲಿ ಕೂಡಿದ್ದ ಸಾಮ್ಯವಾದೀ ಪಕ್ಷದ ರಾಷ್ಟ್ರೀಯ ಸಾಧಾರಣ ಸಭೆಯಲ್ಲಿ ಭಾವೀ ಸಾರ್ವತ್ರಿಕ ಚುನಾವಣೆಯ ಸಂಬಂಧದಲ್ಲಿ ೧೫ ಸಾವಿರ ಶಬ್ದಗಳ ಪಂಚವಾರ್ಷಿಕ ಕಾರ್ಯಕ್ರಮವನ್ನೊಳಗೊಂಡ ಘೋಷಣಾ ಪತ್ರಿಕೆಯು ಸ್ವೀಕೃತವಾಯಿತು. ಸಾಮ್ಯವಾದೀ ಪಕ್ಷವು ಅಧಿಕಾರಕ್ಕೆ ಬಂದರೆ ಮುಂದಿನ ಐದು ವರ್ಷಗಳಲ್ಲಿ ಯೂನ ಯೂವ ಕಾರ್ಯಸಾಧಿಸಬಹುದೆಂಬದನ್ನು ಈ ಕಾರ್ಯಕ್ರಮದಲ್ಲಿ ಹೇಳಲಾಗಿದೆ. ಜನಸಾಮಾನ್ಯನಿಗೆ, ರೈತನಿಗೆ, ಕೂಲಿಕಾರನಿಗೆ, ಕಾರ್ಮಿಕನಿಗೆ ಒಕ್ಕ ಉದ್ದಿವೆದಾರನಿಗೆ ಉಂಟಾಗುತಿರುವ ವಿಘ್ನೆಗಳ ನಿವಾರಣೆಗಾಗಿ ಈ ಪಂಚವಾರ್ಷಿಕ ಕಾರ್ಯಕ್ರಮವನ್ನು ಸಾಮ್ಯವಾದಿಗಳು ಸಿದ್ಧಪಡಿಸಿದ್ದಾರೆ. ಪರಿಹಾರ ಕೊಡದೆ ಜಮೀನುದಾರರನ್ನು ನಿರ್ಮೂಲಗೊಳಿಸುವದು; ಪ್ರತಿಯೊಂದು ದೈತ ಕುಟುಂಬಕ್ಕೆ ೩೦ ಏಕರೆಗಿಂತ ಹೆಚ್ಚಿಗೆ ಭೂಮಿಯ ಒಡೆತನವಿರಬಾರದು. ಒಕ್ಕೆಜಮೀನುದಾರರಿಗೆ ಪುನರ್ನಿವೇಶನದ ರೂಪದಲ್ಲಿ ಪರಿಹಾರ ಕೊಡಲಾಗುವದು ಮತ್ತು ೩೦ ಏಕರೆಗಿಂತ ಹೆಚ್ಚು ಭೂಮಿ ಇದ್ದವರಿಗೆ ೧೦೦ ಏಕರೆಗಳ ವರೆಗೆ ಹಕ್ಕು ವರ್ಗವರ್ಗಾಯನ ದೊರೆಯುವುದು. ಒಕ್ಕಲತನದ ಪುನರ್ಘಟಿತ ಆರ್ಥಿಕ ಪದ್ಧತಿಗೆ ಪ್ರೌಢ ಮತದಾನ ಪದ್ಧತಿಯಿಂದ ರಚಿತವಾದ ಗ್ರಾಮಪಂಚಾಯತಿಗಳು ಮತ್ತು ವಿವಿಧೋದ್ದೇಶ ಸಹಕಾರಿ ಸಾಸ್ಥೆಗಳು ಆದಾರಸ್ತಂಭಗಳಾಗುವವು. ಸ್ವತಿಯೊಂದು ಪ್ರದೇಶ ರಾಜ್ಯ ಮತ್ತು ಭಾರತ ಒಕ್ಕೂಟಕ್ಕೆ ಭೂಮಿ ಮಂಡಳಿಗಳನ್ನು ರಚಿಸಿ ಒಕ್ಕಲತನ ಶಾಲೆಯನ್ನು ದಕ್ಷ ರೀತಿಯಲ್ಲಿ ಪುನರ್ಘಟಿಸಲಾಗುವದು. ಭೂಮಿಯ ಉತ್ಪಾದನೆಯನ್ನು ಹೆಚ್ಚಿಸುವದಕ್ಕಾಗಿ ಭೂಮಿ ಸ್ವಯಂಸೇವಕರನ್ನು ಸಂಘಟಿಸಲಾಗುವದು. ಇವರು ಭಾವಿ, ಗೊಬ್ಬರ ಕಂಡಿ, ಜಳ ಭೂಮಿಗೆ ಕಾಲುವೆ ತೋಡುವ ಮತ್ತು ಒಡ್ಡು ಹಾಕುವ ರಸ್ತೆ ಹಾಕುವ ಕೆಲಸಗಳಲ್ಲಿ ನೆರವಾಗುವರು. ಸರಕಾರವು ಕಟ್ಟುವ ಆಹಾರ ಸೇನೆಯು ಪಡಭೂಮಿ ಸಾಗುವಳಿ ಮಾಡುವದು. ಸಹಕಾರಿ ಒಕ್ಕಲತನ ಅದಿಯಾಗಿ ಎಲ್ಲ ಸಹಕಾರಿ ಚಟುವಟಿಕೆಗಳನ್ನು ಪ್ರೋತ್ಸಾಹಿಸಲಾಗುವದು.

ದೇಶದ ಉತ್ಪಾದನೆಯ ಶಕ್ತಿಯನ್ನು ಹೆಚ್ಚಿಸುವದಕ್ಕಾಗಿ ಸರಕಾರವು ಕೆಲವು ಉದ್ಯೋಗಗಳನ್ನು ವಶಪಡಿಸಿಕೊಳ್ಳುವದು. ಬ್ಯಾಂಕು ಮತ್ತು ವಿಮಾ ಕಂಪೆನಿಗಳನ್ನು ರಾಷ್ಟ್ರೀಕರಿಸಿದರೆ ಬಂಡವಲು ಸಂಗ್ರಹಿಸಲು ಅನುಕೂಲವಾಗುವದು. ಕಬ್ಬಿಣ ಉಕ್ಕು, ವಿದ್ಯುಚ್ಛಕ್ತಿ, ಗಣಿಗಳು, ರಸಾಯನಿಕ ಗೊಬ್ಬರ ಕಾರಖಾನೆಗಳು, ಸಾಮೂಹಿಕ ಒಡೆತನವು ವ್ಯವಸ್ಥಿತ ಆರ್ಥಿಕ ಬೆಳವಣಿಗೆಗೆ ಅವಶ್ಯವಾಗಿದೆ. ಜವಳಿ, ಸಕ್ಕರೆ, ಸಿಮೆಂಟು ಉದ್ಯೋಗಗಳನ್ನು ಸರಕಾರವಶಪಡಿಸಿಕೊಂಡರೆ ಜನಸಾಮಾನ್ಯದ ಬೇಡಿಕೆಗಳನ್ನು ಪೂರಯಿಸಲು ಸಾಧ್ಯವಾಗಿ ಇದು ವರೆಗೆ ಆವರಿಗಾದ ನಿರಾಶೆ ಅಳಿಯುವದು. ಉಳಿದ ಉದ್ಯೋಗಗಳನ್ನು ಖಾಸಗಿ ಉದ್ದಿಮೆದಾರರಿಗೆ ಬಟ್ಟು ಕೊಡಲಾಗುವದು. ಇವುಗಳಿಗೆ ಬರುವ ವಿಘ್ನೆಗಳ ನಿವಾರಣೆಯಾಗುವಂತೆ ಸರಕಾರವು ನಿಯಂತ್ರಣವನ್ನಿಡುವದು. ರಾಷ್ಟ್ರೀಕೃತ ಉದ್ಯೋಗಗಳಿಗೆ ಬೇಕಾಗುವ ವಸ್ತುಗಳನ್ನು ವಿರಳವಾದ ಯಂತ್ರಗಳಲ್ಲಿ ಕಚ್ಚಾ ಮೂಲನ್ನು ಆಯತ ಮಾಡಲು ಸಹಕಾರಿ ವ್ಯಾಪಾರ ಸಂಸ್ಥೆಗಳನ್ನು ಸ್ಥಾಪಿಸಲಾಗುವದು. ವ್ಯಾಪಾರಕ್ಕರ ಹಾಗೂ ಗ್ರಾಹಕರ ಹಿತರಕ್ಷಣೆಯಾಗುವ ರೀತಿಯಲ್ಲಿ ಸರಕಾರಿ ನಿಯಂತ್ರಣವುಳಿಯುವದು. ಲಂಚಗುಳಿತನ ಮತ್ತು ಕೃಪಕ್ಷಪಾತಕ್ಕೆ ಕಾರಣವಾದ ಅಸಮರ್ಥವಾದ ಅಂಕುಶ ನಿಯಂತ್ರಣವನ್ನು ಕಿತ್ತುಹಾಕಿ ಕಚ್ಚಾವಸ್ತುಗಳಿಂದ ಪ್ರಾರಂಭಮಾಡಿ ಸಿದ್ಧ ಸರಕುಗಳ ವರೆಗೆ ವ್ಯಾಪಾರಕರ ನಿಯಂತ್ರಣವನ್ನು ಜಾರಿಗೆ ತರಲಾಗುವದು. ಆರ್ಥಿಕ ಸಮಾನತೆಯನ್ನು ಸಾಧಿಸಿ ಹಣ ಕಾಸಿನ ಘೋರಣದಲ್ಲಿ ಬದಲಾವಣೆಯನ್ನು ಮಾಡಲಾಗುವದು.

ದೇಶದಲ್ಲಿಯ ಆರ್ಥಿಕ ಸ್ಥಿರತ್ವವನ್ನು ಹೋಗಲಾಡಿಸುವದಕ್ಕಾಗಿ ನಿರೋದ್ಯರಿಗಿರುವ ಸಕಲ ಸಾಕ್ಷ್ಯಗಳನ್ನು ವರ್ತಾಶನಗಳನ್ನು ಕಿತ್ತಿಹಾಕಲಾಗುವದು. ಆಸ್ತಿ ಸಂಗ್ರಹ ಪುನ್ಯಕ್ಕೆ ಕಡಿಹಾಕುವಂತೆ ಮತ್ತು ಸ್ವತಿಯೊಬ್ಬನ ಆದಾಯವು ಕನಿಷ್ಠ ೧೦೦ ರೂ. ಮತ್ತು ಸರಾಸರಿಯಲ್ಲಿ ೧೦೦೦ ರೂ ಗಳಷ್ಟಿರುವಂತೆ ಕರಧಾರವನ್ನು ಹೇರಲಾಗುವದು. ಉತ್ಪಾದನೆಯ ಹೆಚ್ಚಳದೊಂದಿಗೆ ಕಷ್ಟಬಾರದ ಸ್ವನೂಣವೂ ಹೆಚ್ಚುವದು. ಜಾತಿಭೇದ ವರ್ಗಭೇದ ನಿರ್ಮೂಲ ಮಾಡಲಾಗುವದು. ಹಿಂದುಳಿದ ವರ ಶಿಕ್ಷಣಕ್ಕಾಗಿ ಹತ್ತು ವರ್ಷಗಳಲ್ಲಿ ನೂರುಕೋಟಿ ರೂ ವೆಚ್ಚಮಾಡಲಾಗುವದು. ಹಿಂದುಳಿದವರ ಉನ್ನತಿಯ ಬಗ್ಗೆ ಎಲ್ಲ ಬಗೆಯಿಂದ ಪ್ರಯತ್ನಿಸಲಾಗುವದು. ಮಲಿಕೆಯ ಅಪಾತ್ರತೆಯನ್ನು ದೂರಮಾಡಲಾಗುವದು. ಅಲ್ಪ ಸಂಖ್ಯರಿಗೆ ಧಾರ್ಮಿಕ ಸ್ವಾತಂತ್ರ್ಯವಿರಿ; ತಮ್ಮ ಭಾಷೆ ಲಿಪಿ ಸಾಹಿತ್ಯಗಳಿಗೆ ತಮ್ಮ ವೈಶಿಷ್ಟಪೂರ್ಣ ಹಾಗು ಸಾಂಸ್ಕೃತಿಕ ಸಂಸ್ಥೆಗಳ ಮುಖಾಂತರ ಸೇವೆಯಲ್ಲಿರುವ ಅಧಿಕಾರವಿದೆ. ನಿರಾಶ್ರಿತರಿಗೆ ಸಂಪೂರ್ಣ ಕೆಲಸಗಳನ್ನು ಜನತೆಯ ಸ್ವಾತಂತ್ರ್ಯ ಸ್ವೇತ್ರವನ್ನು ವಿಸ್ತರಿಸುವದಕ್ಕಾಗಿ ಘಟನೆಯಲ್ಲಿ ಆವಶ್ಯಕ ತಿದ್ದುಪಡಿ ಮಾಡಲಾಗುವದು. ಗಡಿನಿರ್ಣಯ ಸಮಿತಿಯ ಸಲಹೆ ಪಡೆದು ಭಾಷಾನ್ವಯ ಪ್ರಾಂತಗಳನ್ನು ರಚಿಸಲಾಗುವದು. ಈ ರೀತಿ ರಚಿತವಾಗುವ ಪ್ರಾಂತಗಳಿಗೆ ಸಮಾನ ಧಿಕಾರ ಕೊಡಲಾಗುವದು ಭಾರತವು ಕಾಮನ್‌ವೆಲ್ತಿನಿಂದ ಹೊರಬಿದ್ದು ಸಂಪೂರ್ಣ ಸ್ವಾತಂತ್ರ್ಯ ಸಾಧನೆಯ ಪ್ರತಿಜ್ಞೆಯನ್ನು ಪೂರೈಸುವದು. ಆಡಳಿತಯಂತ್ರದಲ್ಲಿಯ ಲಂಚಗುಳಿತನ ವಿಲಂಬ ಪ್ರವೃತ್ತಿ ಮೊದಲಾದವುಗಳನ್ನು ಹೋಗಲಾಡಿಸುವದು ಅಟ್ಲಾಂಟಿಕ್ ರಾಷ್ಟ್ರಗಳು ಹಾಗು ರಶಿಯದ ನಡುವೆ ನಡೆಯುವ ತಂಟೆಯಲ್ಲಿ ಭಾರತವು ಸೇರುವದಿಲ್ಲ. ಇಂದೋನೇಶಿಯದಿಂದ ಇಜಿಪ್ತಿನ ವರೆಗಿನ ಪ್ರದೇಶದ ಸಂರಕ್ಷಣೆಗಾಗಿ ಸಂಯುಕ್ತ ಭದ್ರತಾ ಯೋಜನೆಗಳನ್ನು ಕೈಕೊಳ್ಳಲಾಗುವದು. ಹಿಂದುಳಿದ ಜನರ ಉದ್ಧಾರಕ್ಕಾಗಿ ಹತ್ತು ಅನ್ನ ಹಾಗು ಯುದ್ಧಗಳ ನಿವಾರಣೆಗಾಗಿ ಪ್ರಯತ್ನಿಸುವ ಯುಕ್ತ ರಾಷ್ಟ್ರ ಸಂಘದ ಸಂಸ್ಥೆಗಳೊಡನೆ ಸಹಕರಿಸುವದು. ರಾಷ್ಟ್ರರಾಶಕಗಳಲ್ಲಿ ಭೇದವ್ಯೂಹವ ಅಂತರಾಷ್ಟ್ರೀಯ ಒಡಂಬಡಿಕೆಗಳನ್ನು ಭಾರತವು ಒಪ್ಪುವದು. ಆಫ್ರಿಕೆಯಲ್ಲಿಯ ಸ್ವಾತಂತ್ರ್ಯ ಆಂದೋಲನಕ್ಕೆ ಮತ್ತು ಜಗತ್ತಿನ ಯೂವ ಭಾಗದಲ್ಲಿಯೂ ನಡೆಯುಬಹುದಾದ ಸಾಮ್ಯವಾದಿಗಳ ಆಂದೋಲನಕ್ಕೆ ಬೆಂಬಲವೀಯಂತ್ತ. ಈ ಪಂಚವಾರ್ಷಿಕ ಯೋಜನೆಯಿಂದ ಜನತೆಯಲ್ಲಿ ಉತ್ಸಾಹ ಉಟ್ಟಾಗಿ ರಾಷ್ಟ್ರದ ಸಂಪತ್ತನ್ನು ಹೆಚ್ಚಿಸಿ ಅದರ ಸವಿಫಲಗಳನ್ನು ಪಡೆಯಲು ಅದು ಮುಂದಾಗುವಂತೆ ಹೊಸ ಚೈತನ್ಯವನ್ನೀಯುತ್ತದೆ.

"ಕೂಳಿ ಅಂದಪ್ಪು; ದೇವ ನಿಂದಪ್ಪು"

ಲೇ:-ಶ್ರೀ ಪಿ. ಜಿ. ಐಯ್ಯಪ್ಪ, ಬಿ. ಎ, ಬಿ. ಎಲ್.

ಜುಲಾಯಿ ತಿಂಗಳು ೧೩ ಆದರೂ ಮಳೆ ಇಲ್ಲ. ಮತಿಕೇರಿಯ ಬೀದಿಗಳಲ್ಲಿ ಈ ಸಮಯದಲ್ಲಿ ಜನ ತೆ ದಿವಸ ಬಿಟ್ಟರೆ, ಹತ್ತಾರು ಜನರನ್ನೂ ಸಹ ಕಾಣುವುದು ಅಪರೂಪವಾಗಿತ್ತು. ಬಸ್‌ಸ್ಟೇಂಡಿನಿಂದ ಪೌರಕಾರ್ಯವರೆಗೆ ನಡೆಯುವುದೆಂದರೆ, ಸಾಧಾರಣ ತ್ರಾಣವಿಲ್ಲದವರಿಗೂ, ಒಂದು ವರ್ಷ ಹಳೆದಾದ ಕೊಡೆಗಳಿಗೂ, ದುಸ್ತಾದ್ಯ ವಾಗಿತ್ತು. ಅಂತಹ ಭೋಗರ್ತಿಯಲ್ಲಿ ಬೇರಾದ ಮಳೆಗಾಲದಲ್ಲಿ, ಮಡಿಕೇರಿಯ ಪುರವಾಸಿಗಳು, ತಮ್ಮ ಹಾಸಿಗೆ ಕಂಬಳಿಗಳನ್ನು ಬಿಸಿಲಿಗೆ ಹಾಕುತ್ತಿದ್ದಾರೆಂದರೆ, ಕೊಡಗಿನ ಬೇರೆ ಭಾಗಗಳ ಸ್ಥಿತಿ ಹೇಗಿರಬಹುದು?

ಈ ತಿಂಗಳುಗಳಲ್ಲಿ ಕೊಡಗಿನ ರೈತನ ಜೀವನವೆಂದರೆ, 'ಕಿತ್ತಿ ಬಾ ಬುದ್ಧ ಕುಣಿಯನ ತಿರಿಕ್ ನೋಟತ ಸಮಯ' (ಬೆಂಕಿಗೆ ಬಿದ್ದ ಮಗುವನ್ನು ತಿರುಗಿನೋಡದ ಸಮಯ) ಎಂಬಂತೆ. ಆತಹ ರೈತನು, ಯಾವುದೊಂದು ಕೆಲಸ ಮಾಡಲು ಮನಸಿಲ್ಲದೆ, ಜೋಲು ಮೋರೆ ಹಾಕಿಕೊಂಡು, ಆಕಾಶವನ್ನು ನೋಡುತ್ತಾ ನಿಟ್ಟುಸಿರು ಬಿಡುತ್ತಿದ್ದಾನೆ. 'ಹಿಡಿ ಅಗೆ' ಬಂದಿದೆ. ಪೈರಿಗೆ ನೀರಿಲ್ಲ. ಮೂರು ನಾಲ್ಕು ಸಾಲು ಉತ್ತ ಗದ್ದೆಗಳು ಒಣಗಲಿಕ್ಕೆ ಮೊದಲಾಗಿದೆ ಪೈರು ಬೆಳೆದರೂ, ಸಮಯಕ್ಕೆ ಸರಿಯಾಗಿ ನಾಟಿ ಮಾಡಲು ಪೈರ್ಯಾಯೂರಿಗೂ ಇಲ್ಲದಾಗಿದೆ.

ಹೀಗಾಗಲು ಕಾರಣವಾದರೂ ಏನಿರಬೇಕು? ಈಗ್ಗೆ-೬ ವರ್ಷಗಳಿಂದ ಕೊಡಗಿನ ರೈತನ ಸ್ಥಿತಿಯೇ ಬಹಳ ಶೋಚನೀಯವಾಗಿದೆ. ಇಲ್ಲವೆ ಸಮಯಕ್ಕೆ ಸರಿಯಾಗಿ ಮಳೆಯಿಲ್ಲ. ಮುಂಗಾರು ಸರಿಯಿದ್ದರೆ, ಹಿಂಗಾರು ಕಡಿಮೆ. ಬೆಳೆ ಚೆನ್ನಾಗಿದ್ದರೂ ಫಸಲು ಇಲ್ಲ. ಇಲ್ಲವೇ ಹೋಟೆ ಅಥವಾ ಜಳ್ಳು. ಎತ್ತುಗಳಿಗೆ ರೋಗ. ಒಂದಲ್ಲದಿದ್ದರೆ ಒಂದು ಅನಾಹುತವು ಬರುತ್ತಲೇ ಇವೆ.

ಪೂರ್ವ ಕಾಲದಲ್ಲಿ ಒಂದು ದೇಶಕ್ಕೆ ಕಾಪ್ಪಿನ ಅಥವಾ ಬೇರೆ ಯಾವದೊಂದು ಅನಾಹುತವು ಬಂದರೆ, ಅಳುವ ಅರಸರ ನಡಾವಳಿ ಕಟ್ಟಿರಬೇಕೆಂದು ಹೇಳುತಿದ್ದರಂತೆ. ಹಾಗೆಯೇ ಅರಸರು ಅದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡಿ, ದೇಶಕ್ಕೆ ಉಂಟಾದ ಅನಾಹುತವನ್ನು ಹೋಗಲಾಡಿಸುತ್ತಿದ್ದರು. ಈ ಕಾಲದಲ್ಲಾದರೋ, ದೇಶವನ್ನು ರಾಜರು ಆಳುವಂತಿಲ್ಲ. ಪ್ರಜೆಗಳ ಮುಂದಾಳುಗಳೇ ಆಳುವುದರಿಂದ, ಈ ತರದ ನೈಸರ್ಗಿಕ ಕೋಪಕ್ಕೆ ಯಾವ ತೊಬ್ಬ ವ್ಯಕ್ತಿಯ ನಡಾವಳಿಕೆಯನ್ನು ಕಾರಣವಾಗಿ ತೋರಿಸಲು ಸಾಧ್ಯವಿಲ್ಲ. ಆದುದರಿಂದ ಈ ಕಾಲದಲ್ಲಿ ನಾವು ನಮ್ಮ ಒಟ್ಟಿನ ನಡಾವಳಿಕೆಗಳಲ್ಲಿ ಏನಾದರೂ ನ್ಯೂನತೆಗಳಿವೆಯೇ ಎಂದು ಪರಿತೀಲಿಸಬೇಕಾಗಿದೆ. ಹಾಗೆ ಪರಿತೀಲಿಸಿ ಕಂಡ ಲೋಪವನ್ನು ನಿವೃತ್ತಿನೂಡದಿದ್ದರೆ, ಈ ತಾಹದ ದೈವೇಚ್ಛಿತ ಅನಾಹುತಗಳನ್ನು ತಡೆಗಟ್ಟಲು ಸಾಧ್ಯವಿರಲಾರದು.

ಸಂವು ನಮ್ಮ ಆಗಿನ ಕಾಲದ ನಡಾವಳಿಕೆಗಳನ್ನೂ ಪೂರ್ವಜರ ನಡಾವಳಿಕೆಗಳನ್ನೂ ಕೂಲಂಕುಷವಾಗಿ ಪರಿತೀಲಿಸಿನೋಡಿದರೆ, ಒಂದು ಸರ್ವತಿಯು ಸ್ಪಷ್ಟವಾಗಿ ಕಾಣುತ್ತದೆ ಅದೇನೆಂದರೆ, ನಮ್ಮಲ್ಲಿ ಈಗ ಕಂಡುಬರುವ ದೈವೀಪ್ರೇಮವು ಕೇವಲ ಕವಿತ್ವ ತರ್ದ್ದಲ್ಲಿದೆ, ಒಂದು ರೀತಿಯಲ್ಲಿ; ಕೃತ್ರಿಮ, ಯಾ ರಕ್ಷಿತನದ ಭಕ್ತಿಯೇ ಎಂದೂ ಹೇಳಬಹುದು. ನಾವೀಗ ವೇದಗಳನ್ನು ಓದಲು ಕಲಿತಿರಬಹುದು. ಹರಿಕಥೆಗಳಲ್ಲೂ, ವೇದಾಂತ ಭಾಷಣಗಳಲ್ಲೂ ಭಾಗಿಗಳಾಗುತ್ತಿರಬಹುದು. ಆದರೆ ನಮ್ಮ ಭಕ್ತಿ ಮಾತ್ರ ಟೊಳ್ಳುತರಹದೆಂದೇ ಹೇಳಬೇಕು. 'ಸಂಕಟ ಬರುವಾಗ ವೆಂಕಟರಮಣ' ಎಂಬಂತೆ, ದೇವರ ಮರೆಹೊಕ್ಕಿದರೂ, ನಮ್ಮ ಭಕ್ತಿ, ಯಾ ಪೂಜೆಗಳಲ್ಲಿ ಭಯ, ಭಕ್ತಿ ಶ್ರದ್ಧೆಗಳು ಅಣು ಮಾತ್ರವೂ ಇಲ್ಲ. ನಮ್ಮ ಪೂರ್ವಜರಿಗೆ ಇಷ್ಟು ವೈಜ್ಞಾನಿಕ ಜ್ಞಾನವಿದ್ದಿಲ್ಲ ವಾದರೂ, ಅವರು ಕಾಲಕ್ಕೆ ಸರಿಯಾಗಿ ನಡಾವಳಿಕೆಯಲ್ಲಿ ನಡೆಯುತ್ತಿದ್ದರು. ಅವರು ದೇವರ ಯಾ ಮನೆ ದೇವರ ಉತ್ಸವ, ಪೂಜೆಗಳನ್ನು ಭಯಭಕ್ತಿಯಿಂದ ಜರಿಗಿಸುತ್ತಿದ್ದರು. ಈಗ ನಾವು ಅದನ್ನೆಲ್ಲಾ ಕಡೆಗಣಿಸಿರುವುದು ಎಂಗು ಬಿಟ್ಟಿದ್ದೇವೆ ನಮ್ಮ ನವನಾಗರೀಕತೆಯು ಕಾರಣವು ಎಂದು ಮಾಡಿತೆಯವ ದೊಡ್ಡ ದೇವರ ಪೂಜೆಗಳನ್ನಾದರೂ ಶ್ರದ್ಧಾಭಕ್ತಿಯಿಂದ ಮಾಡಕ್ಕೆಯೇ? ಇಲ್ಲ ಹೆಸರಿಲ್ಲವೆಂಬ ನೆಪದಿಂದ, ನಮ್ಮ ಬೇರೆ ಯಾವದೊಂದು ನಡಾವಳಿಕೆಯಲ್ಲಿ ಬೋಷಿ ಮಾಡಿಲ್ಲವಾದರೂ, ದೇವತಾ ಕಾರ್ಯಗಳಲ್ಲಿ ಸಂಪೂರ್ಣ ಖರ್ಚಿ ಕಡಿಮೆ ಮಾಡಿರುತ್ತೇವೆ. ಮದುವೆ ಮುಂಜಿಗಳಿಗೆ, ೫೦ ಯಾ ನೂರು ಜನರಿಗಿಂತ ಹೆಚ್ಚು ಕರೆಸಬಾರದು, ಒಂದು ಬಗೆಯ ಭೋಜ್ಯ ಪದಾರ್ಥವಲ್ಲದೆ, ಹೆಚ್ಚು ಕೊಡಬಾರದೆಂಬ, ಕಾನೂನು ಕಂಠೋಕ್ತವಾಗಿದ್ದರೂ, ಈ ನಡಾವಳಿಕೆಗಳನ್ನು ಯಾರೂ ಈ ಪರಿಗೆ ಆಚರಣೆಯಲ್ಲಿ ನಡೆಸಿದಂತೆ ಕಂಡುಬರಲಿಲ್ಲ ಅನರ ಬದಲು ವಿತಿಯಿಂದೇ ಖರ್ಚಿ ಮಾಡುತ್ತಿದ್ದೇವೆ ಆದರೆನಮ್ಮ ದೇಶದ ಪ್ರಾಮುಖ್ಯ ದೇವಾಲಯ ಳಾದ, ಶ್ರೀಕಾವೇರಿಯಮ್ಮನ ದೇವಸ್ಥಾನದಲ್ಲೂ, ಪಡಿಕೇರಿ ಓಂಕಾರೇಶ್ವರ ದೇವಸ್ಥಾನದಲ್ಲೂ, ಹತ್ತು ವರ್ಷಕ್ಕೆ ಮೊದಲು ನಡೆಯುತ್ತಿದ್ದ ಪೂಜೆಗಳನ್ನು ಈಗ ನಡೆಯುತ್ತಿರುವ ಪೂಜೆಗಳೊಡನೆ ಹೋಲಿಸಿ ನೋಡಿದರೆ, ನಾವು ಎಸ್ಟರ ವಟ್ಟಿಗೆ ದೇವತಾರಾಧನೆಗಳನ್ನು ಕೆಳಗಿಳಿಸಿದ್ದೇವೆ ಎಬುವುದು ಮನವಟ್ಟದೆ ತಿರಲಾರದು.

ಮಡಿಕೇರಿ ಓಂಕಾರೇಶ್ವರ ದೇವಸ್ಥಾನದಲ್ಲಿ ಸಂಗೀತವಾದ್ಯ ನಿತ್ಯ ಈಗಾಗಲೇ ಎರಡು ಮೂರು ವರ್ಷವಾಯಿತು. ದೇವರಿಗೆ, ವಾದ್ಯವೆಂದರೆ ಒಹು ಪ್ರೀತಿ ಎಂದು ತಿಳಿದವರು ಹೇಳುತ್ತಾರೆ. ಕಾವೇರಿ ದೇವಸ್ಥಾನದಲ್ಲೂ ವಾದ್ಯವಿಲ್ಲವೆಂದು ಕೆಲವು ತಿಂಗಳ ಹಿಂದೆ ಯಾರೋ ಹೇಳಿದರು. ಓಂಕಾರ ದೇವಸ್ಥಾನದಲ್ಲಿ ನಡೆಯುವ ಪೂಜೆಯು ಯಾವ ಹೇವರಿಗೆ ತೃಪ್ತಿಯಾಗಬಹುದೋ ನನಗೆ ಗೊತ್ತಾಗುವುದಿಲ್ಲ! ಸೂರ್ಯಬ್ಬನಲ್ಲಿ ಕಡೇಕರಹದ ಕಾಯಿ, ಬಾಳೆಹಣ್ಣು ತಾಂಬೂಲ ಗಂಧಾಕ್ಷತೆಗಳು ದೇವಸ್ಥಾನಕ್ಕೆ ಬರುವಂತೆ ಕಾಣುತ್ತವೆ. ನಮ್ಮ ಉಪಯೋಗಕ್ಕೆ ಮಾತ್ರ ಹಸನಾದ ಸಾಮಾನುಗಳು; ಕೃಯ ವೆಚ್ಚಾದರೂ ಸರಿಯೆ, ಧಾರಾಳವಾಗಿ ದೊರೆಯುವಾಗ, ಎಲ್ಲವನ್ನೂ ನಮಗೆ ದಯಪಾಲಿಸಿದ ಭಗವಂತನ ಪೂಜೆಗೆ ಮಾತ್ರ ಕಡಿಗೆಟ್ಟ ಸಾಮಾನುಗಳ; ಏನೂ ಕೆಲಸಕ್ಕೆ ಬಾರದ ಪೂಜಾದ್ರವ್ಯಗಳ ಹೆಚ್ಚು ಕಡಿಮೆ ಅವಶ್ಯವಿಲ್ಲ, ವಾದ್ಯ ಅವಶ್ಯವಿಲ್ಲ, ಹಾಲು ಅವಶ್ಯವಿಲ್ಲ ಎಂದು ರಿಪ್ರೆಂಜ್ ಮಾಡುತ್ತಾ ಬಂದರೆ ಈತರಹದ ಕೃತ್ರಿಮತೆಯಲ್ಲಿ ಪೂಜಾಫಲಿಕಾಂಕ್ಷೆಯು ಇರಲಾರದೆಂಬ ಬೇರೆ ವಿವರಣೆ ಕೊಡಬೇಕಾಗಿಲ್ಲ. ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಪರಮಾತ್ಮನು ಹೇಳಿಲ್ಲವೇ In whatever way men worship me in the same way do I fulfil I heir disires' ಎಂದು? (ಮನುಷ್ಯನು ಯಾವ ರೀತಿಯಲ್ಲಿ ನನ್ನನ್ನು ಪೂಜಿಸುತ್ತಾನೋ, ಹದೋ ರೀತಿಯಲ್ಲಿ ನಾನು ಅವನ ಮನೋಭಿಷ್ಟವನ್ನು ಈಡೇರಿಸಿಕೊಡುತ್ತೇನೆಂದು) ಈಗ ನಾವು ನಮ್ಮ ಸುಖಕ್ಕೆ ಬೇಕಾದಷ್ಟನ್ನು ಇಟ್ಟುಕೊಂಡೂ, ದೇವರಿಗೆ ಮಾತ್ರ ಇಲ್ಲ ವೆಂದು ಹೇಳಲಿಕ್ಕೆ ಕೈಮೆ. ಅದೇ ರೀತಿಯಲ್ಲಿ ದೇವರೂ ತೋರಿಸುತ್ತಿದ್ದಾನೆ ಮೋಡ ಬರಲಿದೆ, ಮಳೆಯಿಲ್ಲ; ಕೂಡಾ-ಗತ್ರ ದಿ ಕಾಫಿ ಇಲ್ಲ, ಯಾಲಕ್ಕಿ ಇಲ್ಲ, ಬೆಳೆ ಬೆಳೆಯಲಾಗಲಿ, ಫಸಲು ಕಡಮೆ; ಬೇಕಾದಷ್ಟು ಡಾಕ್ಟರುಗಳು, ಔಷಧಿಗಳೂ ಇವೆ, ರೋಗವಿಲ್ಲವೆಂಬುದಿಲ್ಲ.

ಇಷ್ಟಾದರೂ ನಮ್ಮ ಮುಂದಾಗುಳು ಈ ಆನಾಹುತಗಳನ್ನು ಪಡೆಗಟ್ಟಲು, ವನನಮಹೋತ್ಸವನಡೆಸಿ, ಮಕ್ಕಳು ಹೆಚ್ಚಿಸುವನ್ನು ಕಡಮೆ ಮಾಡಿ, ವಾರಕ್ಕೋ, ದಿವಸಕ್ಕೋ ಒಂದು ಹೊತ್ತು ಅನ್ನ ಬಿಡಿ, ಖರ್ಚು ಕಡಮೆಮಾಡಿ' ಎಂದು ಮೊದಲಾಗಿ ಬೋಧಿಸುತ್ತಾರಲ್ಲದೆ, 'ಎಲ್ಲರೂ ಸೇರಿ ದೇವರಿಗೆ ಒಪ್ಪಿಸಿದಂತೆ ಮೊರೆ ಇಡುವ, ಅವನ ಪ್ರೀತಿಯನ್ನು ಗಳಿಸುವ, ಎಂಬ ಅಭಿಪ್ರಾಯವನ್ನು ಯಾರೂ ಸೂಚಿಸುವಂತಿಲ್ಲ. ಹಾಗೆ ಹೇಳಿದರೆ, ಅವರನ್ನು ಅಜ್ಞಾನಿಗಳೆಂದೋ, ಮೂಢರೆಂದೋ ಹೇಳಿಯಾರೆಂಬ ಹೆದರಿಕೆ ಇರಬಹುದು. ಸೂರ್ಯನು ಹಗಲೂ, ರಾತ್ರಿಯೂ ಕಂತದೇ ಇರುವಷ್ಟು ವಿಸ್ತೀರ್ಣವಿದ್ದ ನಾಮ್ರಾಜ್ಯವನ್ನು ಆಳುತ್ತಿದ್ದ, ಬ್ರಿಟಿಷ್ ಚಕ್ರವರ್ತಿಗಳೂ, ಅವರ ರಾಜ್ಯಾಧಿಕಾರಿಗಳೂ ಸಹ, ಕಳೆದ ಎರಡು ಘೋರ ಯುದ್ಧಗಳಲ್ಲೂ, ತಮಗೆ ಜಯ ವಾಗಬೇಕೆಂದು, ದೇವಸ್ಥಾನಗಳಲ್ಲೂ, ಮಸೀದಿಗಳಲ್ಲೂ ಮತ್ತು ಚರ್ಚ್‌ಗಳಲ್ಲೂ ಸಾರ್ವಜನಿಕ ಪೂಜೆಗಳನ್ನೂ, ಪ್ರಾರ್ಥನೆಗಳನ್ನೂ ಆಗಿಂದಾಗ್ಗೆ ಮಾಡಿಸುತ್ತಿದ್ದದು ಎಲ್ಲರಿಗೂ ವೇದ್ಯವಿದೆ. ಟೆನ್ನಿಸನ್ ಕವಿಯು ಹೇಳಿದಂತೆ' "More things are wrought by prayer than this world dreams of'. (ಲೋಕದ ಮನುಷ್ಯರೂ ಆಶಿಸುವುದಕ್ಕಿಂತಲೂ ಹೆಚ್ಚಿನ ಸೌಕರ್ಯವನ್ನು ಪ್ರಾರ್ಥನೆಯು ಧಗವಂತನಿಂದ ಸಂಪಾದಿಸಬಲ್ಲುದು.)

ಎರಡನೆಯದಾಗಿ, ಉಳುವರಿ ಪ್ರಹೇಶಕ್ಕೆಂದು ಪರಿಗಣಿಸಲ್ಪಟ್ಟಿರುವ ನಮ್ಮ ದೇಶದಲ್ಲಿ ನೂರಾರು ವರ್ಷಗಳಿಂದ ಜೂತ್ರಿಕರಿಗೆ ಕೊಡಲ್ಪಡುತ್ತಿದ್ದ ಅಕ್ಕಿಪಡಿಯನ್ನು ನಿಲ್ಲಿಸಿದ್ದಾಯಿತು. ದೇಶದ ಇತರ ಪ್ರದೇಶಗಳಲ್ಲಿ ದೇವಸ್ಥಾನದ ಪಡಿಯನ್ನು ನಿಲ್ಲಿಸಿರುವುದಿಲ್ಲ. ಸುಬ್ರಮಣ್ಯ, ಧರ್ಮಸ್ಥಳ ಈ ದೇವಸ್ಥಾನಗಳಲ್ಲಿ ಮಜಾರಾಗುವ ಅಕ್ಕಿಯ ಹತ್ತಿಲೆಲ್ಲೊಂದು ಭಾಗ ಸಹ ಕಾವೇರಿ ದೇವಸ್ಥಾನದಲ್ಲಿ ಖರ್ಚಾಗುತ್ತಿದ್ದಿಲ್ಲ. ಅದೂ ಅಲ್ಲದೆ ದೇವಸ್ಥಾನಕ್ಕೆ ಸೇರಿದ ಆಸ್ತಿಗಳು ವಿಳಾಸಾವರದ ವಿಳಾ ನೂರು. ಬಟ್ಟೆ ಗದ್ದೆಗಳೂ, ೭೫೦ ಎಕ್ರೆ ಸೊಗಸಾದ ಕಾಡುಗಳೂ ಇವೆಯಂತೆ. ಇಷ್ಟು ಗದ್ದೆಗಳಿಂದಾಗಿ ವರ್ಷಕ್ಕೆ ಬರೇ ಅಳತ ಬಟ್ಟೆ ಬತ್ತ ಮಾತ್ರ ಉತ್ಪತಿಯಾಗುತ್ತದೆ ಎಂದರೆ ಇದು ಎಷ್ಟು ನಾಚಿಕೆಕೇಡು ಈ ಮಜಾರಾಯಿ ಕಲಾವೆಯ ಕಮಿಟಿಯವರು ಈ ಆಸ್ತಿಗಳನ್ನು ಒಮ್ಮೆಯಾದರೂ ನೋಡಿರುವರೇ? ನೂರು ಬಟ್ಟಿಗೆ ೩೦ ಬಟ್ಟು, ಹೋಗಲಿ ೨೫ ಬಟ್ಟು ಬತ್ತ ಗುತ್ತಿಗೆ ಬಂದರೂ ೭೫೦ ಒಟ್ಟು ಬತ್ತ ಬರಬಹುದು. ಅಲ್ಲದೆ, ಕೊಡಗು ದೇಶದವರ ಕಲವಾಕೆಯಾದ ಶ್ರೀಕಾವೇರಿ ಅಮ್ಮನ ಉಗ್ರಾಣಕ್ಕೆಂದರೆ ಕೊಡಗಿನ ಪ್ರತಿಯೊಬ್ಬನು ಜಾತಿ, ಕುಲಮತ ಬೇಧವಿಲ್ಲದೆ ತನ್ನ ಯಥಾನ್ಯಾಯಕ್ಕೆ ದಾನ ಕೊಡಲು ಎಂದೂ ಹಿಂದುಮುಂದು ಕ್ಕಿಲ್ಲ.

ಈ ಕವಿಟಿಯವರು ಈ ತರಹದ ಯಾವದೊಂದು ಉತ್ಪತ್ತಿ ಹೆಚ್ಚಿಸುವ ದಾರಿಯನ್ನು ಕಂಡು ಹಿಡಿಯಲಿಲ್ಲವೆಂದರೆ ಬಡಲು ಪೂಜೆಯ ಖರ್ಚುಗಳನ್ನೂ, ಪೂಜಾರಿಗಳ ಸಂಖ್ಯೆಯನ್ನೂ ವರುಷದಿಂದ ವರುಷಕ್ಕೆ ಕಡಿಮೆ ಮಾಡುವುದರಲ್ಲೇ ತಮ್ಮ ಜಾಣ್ಮೆಯನ್ನು ಚಲಾಯಿಸಿದರೆ ಸಾಲದು.

ಲೋಕದಲ್ಲಿ ಪ್ರತಿಯೊಂದು ವ್ಯಕ್ತಿಯೂ ತನ್ನ ಹೊಟ್ಟೆ ಪಾಡಿಗಾಗಿ ಕೆಲಸ ಮಾಡುತ್ತಿರುವಾಗ ದೇವರ ಸೇವೆ ಎಂಬ ಈ ಪುಣ್ಯ ಕೆಲಸವನ್ನು ಮಾಡುವ ಪೂಜಾರಿಗಳು ಮಾತ್ರ ಅರ್ಧ ಹೊಟ್ಟೆಯಲ್ಲೂ ಅರ್ಧ ಒಟ್ಟೆಯಲ್ಲೂ ದೇವರ ಕೆಲಸ ಮಾಡಬೇಕೆಂದು ಹಾರೈಸುವುದು ಹುಚ್ಚುತನ. ಅವರೂ ಸಹ ನಮ್ಮ ಹಾಗೆ ಮನುಷ್ಯರೇ ತಾನೆ. ಆವರ ಹೊಟ್ಟೆ ಬಟ್ಟೆಗಳಿಗಾಗಿರುವ ದಾರಿಯಂ ನ್ಯಾಯವಾಗಿ ನಿಶ್ಚಿತವಾದಲ್ಲ ಅವರು ತಮ್ಮ ದೈನಂದಿನ ದೇವತಾ ಕಾರ್ಯಗಳನ್ನು ಭಯ ಭಕ್ತಿಯಿಂದ ಪೂರೈಸುವರು ಆದರ ಬದಲು ಅವರಿಗೆ ಈಗ ನಡಾವಳಿಕೆಯಲ್ಲಿರುವಂತೆ ೮-೧೦ ರೂ. ಸಂಬಳ, ಎರಡು ಹೊತ್ತು ಅನ್ನ, ಒಂದು ಸೀರೆ ಕೊಟ್ಟರೆ ಈ ಉದ್ಯೋಗಕ್ಕೆ ಹೆಚ್ಚು ಕಲಿತವರು ಮುಂದೆ ಬರುವ

ಕೊ ಡ ಗು

ತಾ. ೧೩-೭-೧೯೫೧ನೇ ಶುಕ್ರವಾರ

ಕೊರಿಯೂಯುದ್ಧ ಸಂಧಾನ.

ಕೊರಿಯಾ ಯುದ್ಧ ಸ್ಥಾರಂಭವಾಗಿ ಒಂದು ವರ್ಷ ದಾಟಿತು. ಈ ಒಂದು ವರ್ಷದಲ್ಲಿ ಸಂಯುಕ್ತ ರಾಷ್ಟ್ರಸಭೆಯ ಬೆಂಬಲ ಪಡೆದ ದಕ್ಷಿಣ ಕೊರಿಯ ನರೂ, ಚೈನಾ, ರಷ್ಯಾಗಳ ನೆರವು ಪಡೆದ ಉತ್ತರ ಕೊರಿಯನರೂ ನಿರ್ನಾಶಕಾರಕವಾಗಿ ಹೊಡೆದಾಡಿದ್ದಾರೆ. ಕೊರಿಯಾ ಕದನವು ಉತ್ತರ ಮತ್ತು ದಕ್ಷಿಣ ಕೊರಿಯನರಿಗೂ, ಸಂಯುಕ್ತ ರಾಷ್ಟ್ರಸಭೆಗೂ ಸಂಬಂಧಿಸಿದ ಆಂತರಿಕ ಕಲಹವಾದರೂ ಜಗತ್ತಿನ ಎಡ ಮತ್ತು ಬಲ ಶಕ್ತಿಗಳು ಒಂದೊಂದು ಪಕ್ಷದ ಬೆಂಬಲಕ್ಕೆ ನಿಂತ ಕಾರಣ ಅದು ಜಗತ್ತಿನ ಸಮಸ್ಯೆಯಾಗಿ ಪರಿಣಮಿಸಿತು. ರಷ್ಯಾ ಮತ್ತು ಅಮೇರಿಕಾಗಳು ಈ ಕೊರಿಯಾ ಆಂತರ್ ಸಮಸ್ಯೆಯಲ್ಲಿ ಆಸಕ್ತಿ ವಹಿಸಲು ಕಾರಣವಿಲ್ಲದೆ ಇಲ್ಲ. ಇಂದು ಜಗತ್ತು ಎಂದು ಕಡೆ ಟಂಬದಂತಾಗಿದೆ. ಒಂದು ಮೂಲೆಯಲ್ಲಾದ ಬೆಳವಣಿಗೆಯ ಪರಿಣಾಮ ಇನ್ನೊಂದು ಮೂಲೆಯಲ್ಲಿರುವವರಿಗೂ ತಗಲದಿರದು. ಉತ್ತರ ಕೊರಿಯನರು ಚೀನಾದ ಬೆಂಬಲ ಪಡೆದು ದಕ್ಷಿಣ ಕೊರಿಯಾವನ್ನು ಪದೆ ಪದೆ ಆಕ್ರಮಿತ ಕೊರಿಯಾವನ್ನು ರಚಿಸಿದರೆ ಕ್ರಮಶಃ ಕೊರಿಯಾದಲ್ಲಿ ಚೀನಾದ ಆರ್ಥಾತ್ ಕಮ್ಯೂನಿಷ್ಟ್ ಪ್ರಭಾವವೇ ಉಳಿಯುವದೆಂಬುದು ಅಮೇರಿಕಾಕ್ಕೂ, ಸಂಯುಕ್ತ ರಾಷ್ಟ್ರಸಭೆಗೂ ಗೊತ್ತು. ಆದ್ದರಿಂದಲೇ ಅದೀ ರೀತಿಯ ಸಮಸ್ಯೆಯಾಗಿ ಮುಂದೆ ಬಂದ ಕಾಶ್ಮೀರ ಪ್ರಶ್ನೆಯನ್ನು ಸಂಯುಕ್ತ ರಾಷ್ಟ್ರ ಸಂಘವು ಕಡೆಗಣಿಸಿ ವಿಳಂಬಕಂಠಕ ಪಥವನ್ನು ಅನುಸರಿಸಿದರೂ ಕೊರಿಯಾದಲ್ಲಿ ಮಿಂಚಿನ ವೇಗದಿಂದ ವರ್ತಿಸಿ, ಅಸಾಮಾನ್ಯ ತ್ಯಾಗ ಮಾಡಿತು. ಕಾರಣವಿಷ್ಟೆ. ಕಾಶ್ಮೀರದಲ್ಲಿ ಕಮ್ಯೂನಿಸ್ಟ್ ಪ್ರಭಾವವಿಲ್ಲ. ಆದರೆ ಕೊರಿಯಾದಲ್ಲಿ ಕಮ್ಯೂನಿಸ್ಟ್ ಕೈ ಇವೆ. ಇಂದು ಜಗತ್ತಿನ ಮೂಲ ಮೂಲೆ ಮೂಲೆಯನ್ನೂ ಕಮ್ಯೂನಿಸ್ಟ್ ಮುನ್ನಡೆಯನ್ನು ತಡೆಯುವದು ಅಮೇರಿಕಾ, ಬ್ರಿಟನುಗಳ ಗುರಿಯಾಗಿದೆಯೆಂದರೆ ಅತ್ಯುಕ್ತಿಯಲ್ಲ. ಇವುಗಳಿಂದ ಸ್ವಭಾವಿತವಾದ ಸಂಯುಕ್ತ ರಾಷ್ಟ್ರ ಸಂಘವೂ ಆ ರೀತಿ ವರ್ತಿಸಿದರೆ ಆಶ್ಚರ್ಯವಿಲ್ಲ.

ಹೌದು, ಕೊರಿಯಾದಲ್ಲಿ ಒಂದು ವರ್ಷಕ್ಕಾ ವಿಂ ಯುದ್ಧ ನಡೆಯಿತು. ಒಮ್ಮೆ ದಕ್ಷಿಣ ಕೊರಿಯನರು ಉತ್ತರದವರನ್ನು ಆಕ್ರಮಿಸಿ ಮುಂದೊತ್ತಿದರೆ ಮತ್ತೊಮ್ಮೆ ಉತ್ತರದವರು ದಕ್ಷಿಣದವರನ್ನು ಆಕ್ರಮಿಸಿ ಹಿಮ್ಮೆಟ್ಟಿಸಿದರು. ಈ ರೀತಿ ಕೊರಿಯಾದಲ್ಲಿ ಯುದ್ಧ ಶಕಟವು ಅತ್ತಿಂದಿತ್ತ ಇತ್ತಿಂದತ್ತ ಸುತ್ತಾಡಿ ಈಗತಿಳಿನೇ ಅಕ್ಷಾಂಶದಲ್ಲಿ ನಿಂತಿದೆ. ಕೊರಿಯಾದಂಥಾ ಚಿಕ್ಕ ಪ್ರದೇಶದಲ್ಲಿ ಈ ರೀತಿಯು ಲ್ಲಿ ಎರಡು ಮಹಾಶಕ್ತಿಗಳು ತಮ್ಮ ಸ್ವಾರ್ಥ ಹಾಗೂ ಜಿಗ್ಗುಳಿಯ ಕಾರಿಣಕ್ಕಾಗಿ ಹೊಯ್ದಾಡಿಕೊಂಡು ಈ ಮಹಾ ಘೋರ ಹತ್ಯೆಯಲ್ಲಿ ಸಿಕ್ಕಿ ಕೊರಿಯನರು ನಜ್ಜುಗುಜ್ಜಾಗಿ ಹೋಗಿದ್ದಾರೆ. ಈ ಒಂದು ವರ್ಷದ ಯುದ್ಧ ಅನುಭವಗಳ ನಂತರ ಈ ಎರಡು ಶಕ್ತಿಗಳಿಗೂ ಜ್ಞಾನೋದಯವಾಗಿದೆ.

ಕೊರಿಯಾದಲ್ಲಿ ಯುದ್ಧ ನಿಲ್ಲಿಸುವ ಸೂಚನೆಯನ್ನು ರಷ್ಯಾವು ಹೊರಬಿದ್ದಿತು. ಇದಕ್ಕೆ ಕಾರಣವನ್ನು ಕೇವಲ ಊಹಿಸಿಕೊಳ್ಳಬೇಕಲ್ಲದೆ ಬೇರೆಲ್ಲೂ ಕೊಡಲ್ಪಟ್ಟಿಲ್ಲ. ಈ ಒಂದು ವರ್ಷದ ಅವಧಿಯಲ್ಲಿ ಸೋವಿಯೆಟ್ ಮಿಲಿಟರಿಗಳ ನಿರ್ಣಯವಾಗಿಯೂ ಯುದ್ಧದಿಂದ ಶಕ್ತಿಹ್ರಾಸವಾಗಿರಲಿಲ್ಲವೆಂದು ರಷ್ಯಾಕ್ಕೆ ಅನಿಸಿರಬೇಕು. ಇದೇ ಕೀಳರಿಮೆಯ ಭಾವನೆಯು ರಷ್ಯಾವು ಮುಂದೆ ತಂದ ಸಂಧಾನ ಸೂಚನೆಯನ್ನು ತೃಪ್ತಿಯಿಂದ ಒಪ್ಪಿಕೊಳ್ಳಲು ಅಮೇರಿಕಾವನ್ನು ಪ್ರೇರಿಸಿರಬೇಕು. ರಷ್ಯಾ ಮತ್ತು ಅಮೇರಿಕಾಗಳು ಸಮ ಬಲದವಳಿಗಳಾಗಿದ್ದು ಅವುಗಳೊಳಗಿನ ಯುದ್ಧದೀರ್ಘ ಜಯಾಪಜಯಗಳ ನಿರ್ಣಯವಾಗಿ ಪದಿಲ್ಲವೆಂದೂ ಕ್ರಮಶಃ ರಾಷ್ಟ್ರರ ಶಕ್ತಿಗಳಂದವೆಂದೂ ಕೊರಿಯಾ ಕ್ಷೇತ್ರವನ್ನು ಈ ಪ್ರಹಾರ ಸ್ಪರ್ಧೆಗಳಿಗೆ ಸ್ಥಾನ ದಿಕ್ಕೆ ಮಾಡಿದ್ದರೆ ಅದು ಭವಿಷ್ಯ ಜಗತ್ತಿಗೆ ಶುಭದಾಯಕವಾದ ದೆಂದು ಹೇಳಲಡ್ಡಿ ಇಲ್ಲ ಆದರೆ ಹಾಗೆ ನಂಬುವದು ಕುಂಬಾ ಆಕಸ್ಮಿಕ ಮಾತ ಬೇಕು.

ಹೇಗೂ ಕೊರಿಯಾ ಯುದ್ಧವನ್ನು ನಿಲ್ಲಿಸಬೇಕೆಂಬ ಅವಶ್ಯಕತೆ ಎರಡು ಕಡೆಯವರಿಗೂ ತೋರಿ ಬಂದಿದೆ. ತೀರ್ಪುವಾಗಿ ಅಲ್ಲಿ ನಡೆಯುತ್ತಿರುವ ಹತ್ಯಾಕಾಂಡವು ನಿಂತು ಸಂಧಾನದ ಮೂಹೂರ್ತ ಪ್ರಾರಂಭವಾಗಲಿ ಸಂಧಾನದ ಮೂಹೂರ್ತವು ಕಾಲಕ್ಕೆ ಇಕ್ಕಡೆಯವರೂ ಎಚ್ಚರಿಕೆಯಿಂದ ವರ್ತಿಸಬೇಕು. ಈ ಯುದ್ಧಕ್ಕೆ ಕಾರಣರಾರು? ಎಂಬಿತ್ಯಾದಿ ಹಳೆ ಪ್ರಶ್ನೆಗಳನ್ನೆತ್ತಿ ಪರಿಸ್ಥಿತಿಯನ್ನು ಹಾಳುಮಾಡಿಕೆ ಳದೆ, ಇಲ್ಲವೇ ಸಂಧಾನದ ಸೂಚನೆಯ ಹಿನ್ನೆಲೆಯಲ್ಲಿ ಕಾಣ್ತಿತಗುರಿ ಇದೆಯೆಂಬುದನ್ನು ತರ್ಕಿಸದೆ ಜಗತ್ತಿನ ಹಿತದೃಷ್ಟಿಯಿಂದ ನ್ನಿಟ್ಟು ವರ್ತಿಸಬೇಕಾಗಿದೆ.

ಇಕ್ಕಡೆಯವರಿಗೂ ದೊರೆಯಬೇಕಾದ ನ್ಯಾಯ ಸಮಸ್ಯೆಗಳಿವೆ. ಉದಾಹರಣೆಗೆ ಕಮ್ಯೂನಿಸ್ಟ್ ಚೈನಾಕ್ಕೆ ಭದ್ರತಾ ಮಂಡಲದಲ್ಲಿ ಸ್ಥಾನ, ಫಾರ್ಮೋಸಾ ದ್ವೀಪದ ಹಿಡಿತ ಇವು ಇಂದಿಲ್ಲ ನಾಳೆ ಕೊಡಲ್ಪಡಬೇಕಾದುವು. ಆದ್ದರಿಂದ ಸಂಧಾನ ಮಾತುಕತೆಯ ಸಮಯದಲ್ಲಿ ಜಗತ್ತಿನ ಶಾಂತಿ ಹಿತಗಳ ಕಡೆಗೆ ಗಮನವಿಟ್ಟವರೆಂತೆ ಈ ರಾಷ್ಟ್ರಗಳಿಗೆ ಭಗವಂತನು ಬುದ್ಧಿ ಕೊಡಲೆಂದು ಪ್ರಾರ್ಥಿಸುವೆವು.

ವರ್ತಮಾನ.

ಕಳೆದ ಮೂರನೇ ಶನಿವಾರದ ಸರೀ ಕ್ಷೆಯಲ್ಲಿ ವೀರಾಜಪೇಟೆ ಹೈಸ್ಕೂಲಿನ ವಿದ್ಯಾರ್ಥಿ ಶ್ರೀ. ಜೋನಿರ ಎಂ. ಪೊನ್ನಪ್ಪನವರು ಕೊಡಗಿನಲ್ಲಿ ಒಂದನೆಯದಾಗಿ ಪಾಸಾಗಿರುವರು.

ಪೊನ್ನಂಪೇಟೆ ಮಾಧ್ಯಮಿಕ ಶಾಲೆಯ ಬಾಲ ಸಮಾಜದ ಉದ್ಘಾಟನಾ ಸಮಾರಂಭವು ಅಲ್ಲಿಯ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ. ಪಿ. ಎ ಪೂವಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು.

ತಾ. ೧೬-೭-೫೧ರಿಂದ ಸಿವಿತ್ರರಾಗಿ ಬೇಕಿದ್ದ ಕೊಡಗಿನ ಜಿಲ್ಲಾ ಮೆಜಿಸ್ಟ್ರೇಟರಾದ ಶ್ರೀ. ನೆಲ್ಲಿಮಕ್ಕಡ ಸುಬ್ಬಯ್ಯನವರ ಅಧಿಕಾರವಧಿಯನ್ನು ಕೇಂದ್ರ ಸರಕಾರವರು ಮುಂದರಿಸಿರುವರೆಂದು ಸುದ್ದಿ.

ಕೊಡಗು ಸರಕಾರಿ ಕಾಲೇಜಿನ ಪ್ರಿನ್ಸಿಪಾಲರ ಕೆಲಸದ ಚಾರ್ಜನ್ನು ಶ್ರೀ. ಬಿ. ಎಸ್. ಕುಶಾಲಪ್ಪನವರು ತಾ. ೧೮-೭-೫೧ರಿಂದ ವಹಿಸಿಕೊಂಡಿರುವರು. ಸರಕಾರಿ ಕಾಲೇಜಿನ ಇಂಗ್ಲಿಷ್ ಟ್ಯೂಟರಾಗಿದ್ದ ಶ್ರೀ ಕೆ. ಕೃಷ್ಣಮೂರ್ತಿಯವರು ತಮ್ಮ ಕೆಲಸಕ್ಕೆ ರಾಜೀನಾಮೆಯಿತ್ತಿರುವರು.

ಕೊಡಗು ಪೊಲೀಸು ದಳಕ್ಕೆ ಕನ್ನಡ ಚೆನ್ನಾಗಿ ಓದಲು ಬರೆಯಲು ತಿಳಿಯು ಪ್ರಾಯ ಗರಿಂದ ಮಾರ ವಳಗೆ ಇದ್ದು ಎತ್ತರ ೫ ಅಡಿ ೫ಇಂಚು ಇರುವ ತರುಣರು ಬೇಕಾಗಿರುವರು. ಕುತೂಹಲವುಳ್ಳವರು ಜೂಲೈ ತಾ. ೩೦ನೇ ಸೋಮವಾರ ಬೆಳಿಗ್ಗೆ ೧೦ಗಂಟೆಗೆ ಮಡಿಕೇರಿ ಡಿಸ್ಟ್ರಿಕ್ಟ್ ಎಂಪ್ಲಾಯಿಮೆಂಟ್ ಆಫೀಸಿಗೆ ಹಾಜರಾಗಬೇಕಾಗಿದೆ.

ಕೊಡಗಿನಲ್ಲಿ ಭತ್ತ, ರಾಗಿ ಮುಂತಾದ ಪೈರುಗಳಿಗೆ ತಗಲುವ ಕ್ರಿಮಿಗಳಾವಳಿಯನ್ನು ತಪ್ಪಿಸುವುದಕ್ಕೆ ಪ್ರವಸಾಯ ಇಲಾಖೆಯ ಮೂಲಕ ಈ ವರೆಗೆ ಸುಫಲತ್ತಾಗಿ ಕೊಡಲ್ಪಡುತ್ತಿದ್ದ ಕ್ರಿಮಿನಾಶಕ ಔಷಧಗಳಿಗೆ ಗರಾಜೇ ಜುಲೈ ೧ರ ಲಾಗಾಯಿತು ಕೊಡಗಿನ ಚೀಫ್ ಕಮಿಷನರ ಮುಕಾಂ ನೇರೆ ಕೇಡ ಪ್ರಾರಂಭ್ ಚಾರ್ಜನ್ನು ವಸೂಲು ಮಾಡಲಾಗುತ್ತೆ ಎಂದು ಪ್ರವಸಾಯ ಅಧಿಕಾರಿಗಳು ತಿಳಿಸುತ್ತಾರೆ.

ಭರತ ಖಂಡವು ಬಿಡಿದ ಬಿಡನೇ ಸ್ವಾತಂತ್ರ್ಯ ದಿನೋತ್ಸವವು ತಾ. ೧೫-೮-೫೧ರಲ್ಲಿ ಬರುವದು. ಆ ಸಮಯದಲ್ಲಿ ಮಡಿಕೇರಿಯ ಕೋಟೆಯಲ್ಲಿ ಬೆಳಿಗ್ಗೆ ೧೧ಗಂಟೆಗೆ ಧ್ವಜಾರೋಹಣ, ರಾಷ್ಟ್ರೀಯ ಗೀತೆ ಮತ್ತು ಪೊಲೀಸ್ ಪೆರೇಡ್ ನಡೆಯುವದು. ವೀರಾಜಪೇಟೆ ತಾಲೂಕು ಸ್ಪೈದಾನದಲ್ಲಿ ಇದೇ ರೀತಿ ಕಾರ್ಯಕ್ರಮ ನಡೆಯುವುದು.

(ಹಿಂದಿನ ಪುರವಿಂದ ಸಾಗಿದ್ದು.)

ದು ಹೇಗೆ? ಅದರಿಂದಲೇ ದೇವಸ್ಥಾನಗಳಲ್ಲಿ ಪೂಜೆಗೆ ಯೋಗ್ಯರಾದ ಪೂಜಾರಿಗಳೇ ಸಿಕ್ಕುವುದು ಕಷ್ಟವಾಗಿದೆ. ಮೊದಲಾದರೂ ಯಾವ ನೈವೇದ್ಯಕ್ಕೂ ಪೂಜೆಗೂ ಅಧಿಕವಾಗಿ ಅಕ್ಕಿ, ತೆಂಗಿನಕಾಯಿ, ತಪ್ಪ ಎಣ್ಣೆ ಇವಕ್ಕಾದುವುಗಳು ಕೊಡಲ್ಪಡುತ್ತಿರುವಾಗ್ಗೆ ಸಂಬಳ ಕಡಿಮೆಯಾದರೂ ಇದರಿಂದ ಅವರ ಜೀವನ ಸರಾಗವಾಗಿ ನಡೆಯುತ್ತಿತ್ತು. ಈಗ ಅದನ್ನು ಒಹಿಷ್ಕರಿಸಿಬಿಟ್ಟಿರುವುದರಿಂದ ಈ ಸಂಬಳಕ್ಕೆ ಯೋಗ್ಯರಾದ ಪೂಜಾರಿಗಳು ಖಂಡಿತ ಒದಗಿಕ್ಕಿಲ್ಲ ಆಸೋಗ್ಯರಾದ ಪೂಜಾರಿಗಳಿಂದ ದೇವರಿಗೆ ತೃಪ್ತಿಯಾಗದ ರೀತಿಯಲ್ಲಿ ಪೂಜೆ ನಡೆಸಿದರೆ ದೇಶಕ್ಕೆ ಎಂದೂ ಕಲ್ಯಾಣವಾಗಲಾರದು.

ಆದುದರಿಂದ ಆಗಿರುವ ಸೈ ತಲೆಹೋ ರಿಸಿರುವ ಅನಾಹುತಗಳನ್ನು ತಡೆಗಟ್ಟಿ ಕಾಲಕ್ಕೆ ತಕ್ಕಂತೆ ಎಲ್ಲಿಗಳಾಗಿರುವ ದೇವಸ್ಥಾನಗಳಲ್ಲಿ ಪೂಜೆ ಇಡಲು ನಾವೆಲ್ಲ ಭಗವಂತನಲ್ಲಿ ಪೂರೆ ಇಡುವದು ಒಂದು ದಾರಿಯಾಗಿ ಕಾಣುತ್ತದೆ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳೂ, ಪ್ರಜ್ಞಾವಂತ ಇಲಾಖೆಯವರೂ ಒಂದು ನಿರ್ದಿಷ್ಟ ಧೋರಣೆಯನ್ನು ಗೊತ್ತು ಮಾಡಿ ಅದರಂತೆ ದೇಶವು ಕಲ್ಯಾಣಕ್ಕಾಗಿ ಎಲ್ಲಾ ದೇವಸ್ಥಾನಗಳಲ್ಲೂ ಪೂಜೆಯಾಗಿ ಬಿದ್ದಲ್ಲಿಗಳಲ್ಲೂ ನಿತ್ಯ ಪೂಜೆ ನಡೆಯುವಂತೆ ಏರ್ಪಾಡಿಸುವುದು ಒಳ್ಳೆಯದು. ಅಲ್ಲದೆ ಸ್ವಯಕ್ಕೆ ಇವೇ ಸುತ್ತ ಓಂಕಾರೇಶ್ವರ ದೇವಸ್ಥಾನಗಳಲ್ಲಾದರೂ, ಹಳೇಆಯಿಲ್ಲಿ ಪೂಜೆ ಪುನಸ್ಕಾರಗಳು ವಾದ್ಯ ಘೋಷಗಳೊಡನೆ ನಡೆಯುವಂತೆಯೂ ಅನ್ನ ಸಂತರ್ಪಣೆ ನಡೆಯುವಂತೆಯೂ ಕ್ರಮ ಏರ್ಪಾಡು ಸರಕಾರದವರೂ ಮಂಜಾಯಿ ಇಲಾಖೆಯವರೂ ಸೇರಿ ಮಾಡುವುದು ಒಳ್ಳೆಯದೆಂಬ ನಿಲುವು ನಮ್ಮದು.

—೦೦—

TENDERS FOR PEPPER ON VINES

Tenders are invited for the sale of standing pepper crop for the year 1951-52 of Athur Estate, Suntieoppa, Coorg. Interested persons or parties may write to the below mentioned address. Tender applications will be opened on 30th july at 10 A. M. at the office of the Estate. Successful bidder will have to deposit 50/- of the value on the spot. Tender envelops must be marked 'Tender'.

Manager,
Athur Estate
Suntieoppa, Coorg.

ಒಳ್ಳೆ ಮಣಿಸು ಫಸಲು ಮೂರಾಟಕ್ಕಿದೆ.

ಸುಂಟಿಕೊಪ್ಪದ ಆತ್ಮೂರು ತೋಟದಲ್ಲಿಯ ಗರಾಜಾಯರ ಸಾಲಿನ ಒಳ್ಳೆಯ ಮಣಿಸು ಫಸಲನ್ನು ಕೊಂಡುಕೊಳ್ಳಲಿಚ್ಚಿಸುವವರು ಈ ಕೆಳಗಿನ ಆಡ್ರೆಸಿಗೆ ತಮ್ಮ ಟೆಂಡರು ಕಳುಹಿಸಬಹುದು. ಟೆಂಡರು ಅರ್ಜಿಗಳನ್ನು ತೋಟದ ಆಫೀಸಿನಲ್ಲಿ ತಾ. ೩೦-೭-೫೧ರ ಬೆಳಿಗ್ಗೆ ೧೦ ಗಂಟೆಗೆ ತೆರೆಯಲಾಗುವುದು. ಟೆಂಡರು ಕಳುಹಿಸುವವರು ಲಕೋಟೆಯ ಮೇಲೆ 'ಟೆಂಡರು' ಎಂದು ಬರೆದಿರಬೇಕು. ಟೆಂಡರು ವಶೀಲಾನೆಯಲ್ಲಿ ಜಯಶೀಲರಾದವರು ಮೌಲ್ಯದ ಶೇಕಡ ೫೦ರಷ್ಟನ್ನು ಅಲ್ಲೇ ಡಿವಾಜಿಟ್ಟು ಮಾಡತಕ್ಕದ್ದು.

Manager,
Athur Estate
Suntieoppa, Coorg.

ಹಂಡಿ ವಿಶ್ವವಿದ್ಯಾಲಯದ ವಿಜ್ಞಾನಿಗಳು ನವೀನ ತರಹದ ದೃಷ್ಟಿ ಚಶ್ಮಾಗಳನ್ನು ತಯಾರಿಸಿದ್ದಾರೆ. ಅವನ್ನು ಧರಿಸಿಕೊಳ್ಳುವವರಿಗೆ ಕಶ್ಮಲಲ್ಲೂ ಕಣ್ಣು ಕಾಣುವುದಂತೆ!

ಇದಾಗುವ ಕೆಲಸವೆ ?

ಇದೀಗ ನಮ್ಮ ಕೈಯ್ಯಲ್ಲಿ ತಿಂಗಳು. ಇನ್ನೊಂದು ಹೆಚ್ಚು ಕಡಿಮೆ ಸಮಯದಲ್ಲಿ ತಿಂಗಳವರೆಗೆ ವಿಧಾನ ಸಭೆಯ ಚುನಾವಣೆ ಇದ್ದೇ ಇರುವದು. ಈಗಾಗಲೇ ಕೆಲಸ ತೊಡಗಿಯೂ ಆಗಿದೆ. ನೀವು ತಂಬಿದೆ. ಈ ನೀವು ಕಷ್ಟಪಟ್ಟಾಗಿನದಾದರೆ ಜನವರಿ ತಿಂಗಳು ಬರಬೇಕು. ಅಲ್ಲಿ ರಿ ಹೇರಿ ಮಾಡುವದಾಗಲಿ, ಕೋಟುಗಳಿಗೆ ಕಟ್ಟಿ ಕಟ್ಟುವದಾಗಲಿ, ಭೆಟ್ಟವರು ಅಥವಾ ಮೂರ್ಚಿ ತಿಂಗಳುಗಳಲ್ಲಿದೆ ಸಾಧ್ಯವಿಲ್ಲ. ನೀರಾವರಿ ಯೋಜನೆ (ಸ್ವಂತ ಕೆಲಸಗಳು) ಎಂದು ವ್ಯವಸಾಯ ಇಲಾಖೆಯ ಅಧಿಕಾರಿಗಳು. ಒಂದು ಪ್ರಕಟಣೆಯನ್ನು ತಾರೀಕು ೨೯-೬-೩೫ರಂದು ಪತ್ರಿಕೆಯಲ್ಲಿ ಹೊರಡಿಸಿರುವರು. ಈ ಪ್ರಕಟಣೆಯಲ್ಲಿರುವ ಸ್ಥಲಸೀತಾಂಶವನ್ನೆ. ರೈತರಿಗೆ ತಿಳಿಯಲಿಲ್ಲವೆಂಬಂಥ ದೂರು ಇಬ್ಬಾರದು ಸರಕಾರದ ಹಣವು ಖರ್ಚಾಗಬಾರದು ! ಡಿಸೆಂಬರು ಆಖೈರೊಳಗೆ ಕೆಲಸ ಪೂರ್ತಿ ಮಾಡಿದರೆ ಅವರು ಮಾಡಿದ ಖರ್ಚಿನ ಅರ್ಧ ಹಣವನ್ನು ರೈತರಿಗೆ ಕೊಡುವರಂತೆ. ಈ ಪ್ರಕಟಣೆಯು ಇದೇ ಒಂದು ವರ್ಷಕ್ಕೆ ಮಂಜೂರಿಸಿದ್ದಾಗಿರಬೇಕಾಗಿತ್ತು. ಅಧಿಕ ಖರ್ಚು ಬರುವ ವಿಷಯಲ್ಲಿ ತಿಂಗಳು ಆಖೈರೊಳಗೆ ಕೆಲಸ ತೀರಿದಂತೆ ಇರಬೇಕಾಗಿತ್ತು. ಈ ಮೊದಲು 'ಗ್ರೊಮೋರ್ ಪುಡ್' ಇಲಾಖೆಯವರನ್ನು ಜನರು ಸಂಬಿ ಕೆಲವು ಹಣವನ್ನು ಸಾಲವಾಗಿ ಸಾಲವಾಗಿ ಗದ್ದೆರಿಸುಂಯ ತಲಸವನ್ನು ವಿತ್ತ ಕೆರೆ ರಿವೇರಿಯನ್ನು ಮಾಡಿಸಿಹರು. ಕದೆಗೆ ಸರಕಾರದವರು ಕೊಟ್ಟ ಹಣವು ರೈತರ ಖರ್ಚಿನ ಕಾಲ ಂಕಕ್ಕೂ ಸಾಕಾಗಲಿಲ್ಲ. ಈ ಸಮಯದಲ್ಲಿ ರೈತರು ಈ ಹಣವನ್ನು ನಂಬಿ ಎಷ್ಟೋ ಜನ ಸಾಲಗಾರರಾಗಿದ್ದಾರೆ. ಇಪ್ಪತ್ತೆ ಸವ್ವಂದಹಟ್ಟ ಅಧಿಕಾರಿಗಳು ಡಿಸೆಂಬರು ಆಖೈರೊಳಗೆ ಎಂಬುವುದನ್ನು ಮೂರ್ಚಿ ತಿಂಗಳ. ಆಖೈರೊಳಗೆ ಕೆಲಸ ತೀರಿಸುವಂತೆ ಎಂದು ಪ್ರಕಟಿಸಿ ರೈತರಿಗೆ ತೊಂದರೆಯಾಗದ ರೀತಿ ನೋಡಿಕೊಳ್ಳಬೇಕಾಗಿ ರೈತರ ಕೋರಿಕೆ.

ಸೋಮಯ್ಯ.

ವ್ಯವಸಾಯ ಇಲಾಖೆಯವರ ನ್ಯಾಯ ಪರಿತೀಲನೆ.

ರೈತನು ದೇಶದ ಬೆನ್ನೆಲುಬು. ರೈತರ ಜೀವನವನ್ನು ಉತ್ತಮಪಡಿಸಬೇಕೆಂಬುದಾಗಿ ದೇಶದಾದ್ಯಂತ ರೈತರ ಏಳಿಗೆಗಾಗಿ ಹೆಚ್ಚು ಬೆಳೆಸಿರಿ ಪತ್ತು ಇದಕ್ಕೆ ಸರಕಾರದ ಬೆಂಬಲವಿದೆಯೆ ಎಂದು ವ್ಯವಸಾಯ ಇಲಾಖೆಯು ಪ್ರೋತ್ಸಾಹಕೊಡುತ್ತಾ ಇದೆ. ಆದರೆ ಇವರ ಎಣಿಕೆಯಲ್ಲಿ ನ್ಯಾಯ ಕಂಡುಬರುವದಿಲ್ಲ. ಹೆಚ್ಚು ಬೆಳೆಯುವವರಲ್ಲಿ ಪೈಪೋಟಿಯನ್ನು ಹುಟ್ಟಿಸಿ ಜನರಲ್ಲಿ ಚೆನ್ನಾಗಿ ಬೆಳೆಸುವ ಹುರುಪು ಉಂಟಾಗಲಿ ಎಂಬ ದಾಗಿ ಸರಕಾರದವರು ಕ್ರಾಪ್ ಕಾಂಪಿಟೆಶನ್ ಮತ್ತು ಕಂಪೋಸ್ಟ್ ಗೊಬ್ಬರ ತಯಾರಿಸುವವರಿಗೆ ಬಹುಮಾನಗಳನ್ನು ವಿತರಣೆಮಾಡುವದಾಗಿದೆ. ಹಾಗೆಯೇ ಈಚೆಯ ವರ್ಷ ಕೊಡಗಿನಲ್ಲಿ ಕ್ರಾಪ್ ಕಾಂಪಿಟೆಶನ್ ಏರ್ಪಡಿಸಲಾಗಿತ್ತು. ಹಳ್ಳಿಯ ಆನರನ್ನು ಮಂಡಿಗೊಳಿಸಲು ಗ್ರಾಮಗಳಲ್ಲಿ ಕೆಲ ಮೀಟಿಗಳನ್ನು ಏರ್ಪಡಿಸಿ ಅವರು ಆಯಾ ಅರ್ಜಿದಾರರ ಬತ್ತವನ್ನು ತೂಕಮಾಡಿ ಬಹುಕಾರ ಯೂನಿಯನ್ನಿಗೆ ಕಳಹಿಸಿಕೊಡಲು ಸಂತೆಯೂ ಯೂನಿಯನ್ನಿನವರು ವಸ್ತು ವ್ಯವಸಾಯ ಇಲಾಖೆಯವರ ಅಧಿಕಾರಿಯು ಸೇರಿ ಎಲ್ಲಾ ಗ್ರಾಮಗಳ ಫಾರಂನ್ನು ಪರಿಶೀಲಿಸಿ ಬಹುಮಾನಿತರನ್ನು ನಿಶ್ಚಯಿಸಿ ಸಂತೆಯೂ ನಿಯಮ ಸರಿಯಾಗಿತ್ತು. ಹಳ್ಳಿಯ ಜನರನ್ನು ಮಂಕುಗೊಳಿಸಲು ಈ ರೀತಿಯು ಪ್ರಾಣೂನು ಮಾಡಿ ಕಡೆಗೆ ಅಧಿಕಾರವರ ಸ್ವಇಚ್ಛೆಯಿಂದ ಬಹುಮಾನ ಹಂಚಲಾಯಿತು.

ಖುದ ಹೀಗೆಗೆ ಕಿರಂಡಾಡು ಗ್ರಾಮದಲ್ಲಿ ತಿಜನರು ಸ್ಪರ್ಧೆಗೆ ನಿಂತರು ಗ್ರಾಮದ ಕವಿ.ಟಿಗಳ ಸರಿಯೊಗಿ ನ್ಯಾಯದಿಂದ ತೂಕಮಾಡಿ ಅವರಲ್ಲಿ ಒಬ್ಬರ ಬತ್ತ ಸುಗ ಮೌಂಡಿಗಿಂತ ಹೆಚ್ಚಾಗಿ ತೂಗಿತ. ಕಡೆಗೆ ಬಹುಮಾನ ವಿತರಣೆ ದಿನ ಹೆಚ್ಚಿಗೆ ತೂಗಿದವರು ತನಗೆ ಬಹುಮಾನ ವಿದಿಯೆಂಗ ಹೇಳಗಲು ಅಲ್ಲಿ ಗ್ರಾಮದ ಕವಿ ಟಿಯವರೂ ನಿನ್ನಕ್ಕ ಉದ್ಯೋಗಸ್ಥರೂ ಆದವರಿಗೆ ಬಹುಮಾನ ಕೊಡಲಾಯಿತ್ತು. ಅವರು ಬತ್ತದ ತೂಕ ಬರೀ ೧೫ ಪೌಂಡಿಗಿಂತ ಕವಿ್ಕ ! 'ಬತವ ಮಡಗಿದವರು.' ಎನ್ನುವಂತೆ ಉದ್ಯೋಗಸ್ಥರು ಉದ್ಯೋಗಸ್ಥರನ್ನೇ ಪ್ರೋತ್ಸಾಹಿಸುವದು ಇಂದಿನ ಪ್ರಜಾ ಸರಕಾರದಲ್ಲಿಯೂ ಸಹ ರೂಢಿಯಾಗಿ ಹೋಗಿದೆ ಆದರಿಂದ ಇಂಥಾ ಸ್ಪರ್ಧೆಗಳು ಕೇವಲ ತೋರಿಕೆಯವು. ಇದರಿಂದ ರೈತರಿಗೆ ನಿರುತ್ಸಾಹವಲ್ಲದೆ ಪ್ರೋತ್ಸಾಹವಿಲ್ಲ. ಆದ್ದರಿಂದ ವ್ಯವಸಾಯ ಅಧಿಕಾರವರು ಇದಕ್ಕೆ ಸರಿಯಾದ ಜವಾಬು ಕೊಡಬೇಕು. ಇನ್ನು ಮುಂದಾದರೂ ಈ ರೀತಿಯ ಬಹುಮಾನಿತರನ್ನು ಸರಿಯಾಗಿ ಪರಿತೀಲಿಸಿ ಬಹುಮಾನಕೊಡಬೇಕಾಗಿಯೂ, ಅಲ್ಲದೆ ಮುಂದಿನ ವರ್ಷಕ್ಕೆ ಇಂಥಾವರಿಗೆ ಬಹುಮಾನ ಕೊಡಲಾಗುತ್ತೆಂಬುವ ಸರಿಯಾದ ಯೋಜನೆಯನ್ನು ಮೊದಲೇ ಪ್ರಕಟನೆ ಮಾಡಿ ಈ ರೀತಿ ಸತ್ಪದಿಂದ ವರ್ತಿಸಬೇಕಾಗಿಯೂ ಅಪೇಕ್ಷಿಸುತ್ತೇನೆ.

ಗ್ರಾಮದ ರೈತ.

'ಬೂಧಿ ಕುಂಬಳ ಕಾಯಿ ಕಥೆ.'

ಇಲ್ಲಿ ಸಮಸಿಸುಗಿರುವೊಂದು ಉತ್ತರ ವಿಲಿ. ಗೊತ್ತಾಯಿತು, ನೀವೆ ಕಾಕೆಗೆ ತಲೆ ಹೊರೆಯಿಂದ ಜವಳಿ ತೆಗೆದುಕೊಂಡು ಹೋದವರೇನೂ ತಾ. ೨೯-೬-೩೫ರ ಪತ್ರಿಕೆಯಲ್ಲಿ 'ನಾಡಿಗ' ನಾದ ನಾನು ಗ್ರಾಮ್ಯ ಭಾಗವಂಲ್ಲದ ವೈಶಿಷ್ಟ್ಯ 'ವೆಂಬ ಲೇಖನವನ್ನು ಪ್ರಕಟಿಸಿದನೆನ್ನು ನೀವು ನೋಡಿ ಆಸ್ಥೆಂದರು ಗಾಬರಿಗೊಂಡಿರೇನೂ ನನ್ನ ಅನಾಗಹನೆಗೆ ಬಂತ.

ಆ ಲೇಖನ ನಾಜೂಕಿನಲ್ಲಿ ಜವಳಿ ಅಂಗಡಿಗಳಿಂದ ಕೊಡಿದ ನನ್ನ ಭಾಗವಂಲ್ಲದ ನಾಗರಿಲ್ಲಾಗೂ ಸಕ್ತಿಕ್ತರ ಶ್ರೀಮಂತ ಬಿ. ಯಂ. ಭಕ್ತರಿಗೂ ಸಂಬಂದಪಟ್ಟಿತ್ತು ಅದರಲ್ಲಿ ನಿಮ್ಮ ವಿಷಯವೂ ಇತ್ತೆಂಬುದು ಬಿಡುನ್ನಿ ! ಆದರೆ ಲೇಖನದಲ್ಲಿ ಖಡ್ಗಾಕ್ಷರವಿಲ್ಲದಿನ್ನಲಂಗದಲ್ಲ. ನೋಡಿ, ಮೊನ್ನೆ ನನ್ನ ಶ್ರೀಮಂತರೊಬ್ಬರ ಮನೆ ರೇಷನ್ ಅಧಿಕಾರಿಗಳಿಂದ ಜಪ್ತಿ ಮಾಡಲಂಗಿ ನಾಲ್ಕಗಾಡಿ ಬತ್ತ ಸಿಕ್ಕಿಕ್ಕು. ಮೂರೆ ದಿನ ನಂಂದ್ಯೋಟಿಗೆ ಜನರು ಸಾಗಿಲ್ಲಿದ್ದ ಐದಂರ್ಗಡಿ ಅಕ್ಕಿಯು ಅಧಿಕಾರಿಗಳ ಕೈಗೆ ಸಿಕ್ಕಿಬಿತ್ತ. ಇದು ಬಿ ಎಂ ಆಲ್ಲನೇ? ನನ್ನ ಭಾಗವಂಡ್ಲು ಬರಗಲಕ್ಕೆ ತತ್ಕಾಲು ಕಾರಣನೇನೆಂದು ಬಲ್ಲಿರಿ? ಇದ್ದುದನ್ನು ಬಿ. ಯಂ. ನಲ್ಲಿ ವಂದೋಟಿಗೆ ಸಾಗಿಸಿದರ. ಈಗ ಅವರಲ್ಲಿ ಬತ್ತ ಇಲ್ಲ! ರೇಷನ್ ಅಧಿಕಾರಿಗಳಿಗೆ ಅರ್ಜಿ ಬಗೊಂಡರು. ಆಹಾರವಿಲ್ಲದವನಿಗೆ ಆಹಾರವನ್ನೊದಗಿಸುವುದು ಸರಕಾರದ ಕರ್ತವ್ಯವಲ್ಲವೆ? ಈಗ ಅವರು ಪರಿವರ್ತನೆಯೊಂದಿಗೆ ಬತ್ತ ತೆಗೆಯುವವರಂಗಿದ್ದಾರೆ! ಅವರ ಜಾಣತನವೆ ಹೀಗಿದೆ ನೋಡಿ! ಇವರ ದೆಸೆಯಿಂದ ಅಲ್ಪ ಸ್ವಲ್ಪ ಬತ್ತವಿದ್ದವರೂ ಪಸಿಗೆ ರೇಷನ್ ಅಧಿಕಾರಿಗಳು ನುಗ್ಗಿ, ಆ ನುನೆಯ ಪಂಚಾಯಿತಿಯ ಈ ಕಸ್ತಲ್ಕೊಳಗಾಗಬೇಕಾಯಿತು.

ಕಾಳಿಗೆ ರೇಷನ್ ಸಹ ಭಾಗವಂಡ್ಲಿದಂದ ಎಂದೂ, ಅದಂದರೆ ನೀವು ಬಟ್ಟೆ ಸಪ್ಲೈ ಮಾಡಿದ್ದಕ್ಕೆ 'ನಾಡಿಗ' ಸಂತೋಷಪಡಬೇಕೆಂದೂ ಒರಿದ್ದ ಪಯನ್ನು ಕಾರಿಕೆಗೆ ರೇಷನ್ ಹೊತ್ತು ತೆಗೆದುಕೊಂಡು ಹೋಗಿ ಆ ಬಡ ಜನತೆಗೆ ಅಲ್ಲಿ ಸಪ್ಲೈ ಮಾಡತ್ತಾರೊ ಎಂಬುದನ್ನು ತಿಳಿಸಿರಿ. ನೀವು ಇಲ್ಲಿ ಒಟ್ಟೆ ಮೂರುವಾಗ ನಿಮ್ಮ ಸೇಲ್ಸ್‌ಮ್ಯಾನ್, ಆಕ್ಟ್ರಾಯಿ, ಇನ್ನಿತರ ಖರ್ಚಿಗಳನ್ನು ಸೇರಿಸಿ ತಾನೆ ಬಟ್ಟೆ ಮೂರು ತ್ತಿರವುದು? ಹಾಗಾದರೆ ಅಕ್ಷಿಗೆ ಬಲವು ವಾಗ ಯಾವ್ಯಾವ ಬಟ್ಟೆಗಳು ಲೆಕ್ಕದಲ್ಲಿ ಮಿಲವಾದುವು?

ಇದರಿಂದ ಹೆಗಲ ಮೇಲೆ ಬೂದಿ ಕಡಿಯುತ್ತಿಗುವುದೆನ್ನುವ ಮೊದಲೇ ಕಂಠಯದಿಂದ ತಾ. ೬-೭-೩೫ರ 'ಕೊಡಗು' ಪತ್ರಿಕೆಯಲ್ಲಿ 'ನಿರಾಧಾರ' ವೆಂಬುದಾಗಿ ಕೈಚೆರಪಡಿಸಿ ಭಾಗವಾರ್ಡ್‌ಗಳಲ್ಲಿ ಬಿ. ಎ. ನಡೆಯುವುದಲ್ಲವೆಂದು ಬರೆದರ್ದು ಆಯಿತು. ಕಳೆದ ವಾರ ನಮ್ಮಲ್ಲಿಯ ಜವಳಿ ಅಂಗಡಿಗಳಲ್ಲಿ 'ಕೋಟ್' ಬಟ್ಟೆಯೇ ಕಾಣಸಿಕ್ಕಿಲ್ಲ ಪೊನ್ನೆಂಬಂದಿದ್ದಾಗ ದೇವರ ದಯೆಯಿಂದ ಇದ್ದದೆಲ್ಲಾ ಹೋಗಿ ಕಾಣುತ್ತಿದ್ದುವಲ್ಲಾ ಇದು ಹೇಗೆ?

ನೀವು ನಿಜವಾದ ವ್ಯಾಪಾರವನ್ನು ಮಾಡಿದ್ದಲ್ಲಿ ನಿಮಗೇಕೆ ಭಯವಿತ್ತಾವಿ! ನಿಮ್ಮನ್ನೆ ಅಧಿಕಾರಿಗಳು ಬಂದು ಚೆಕ್ಕ್ ಮಾಡಿದ್ದಲ್ಲಿ, ನೀವು ತಪ್ಪಿತಸ್ಥರಲ್ಲವೆಂದು ಪ್ರಮಾಣಪಡಿಸಿದಲ್ಲಿ ಬಿ ಯಂ. ಆರಾಧಕರಲ್ಲವೆಂದು ಅವರ ವೆಚ್ಚಗೆಗೂ, ಗಿರಾಕಿಗಳ ವೆಚ್ಚಗೆಗೂ, ವಿತ್ತರವೆ ಚ್ಚಗೆಗೂ ಪಾತ್ರರಾಗುವದಿಲ್ಲವೇ? ನಾನೇನು ನಿಮ್ಮ ವೇಲೆ ದ್ವೇಷಾಸೂಯೆಯಿಂದ ಬರೆದುದಲ್ಲವೆಂತಲೂ, ಅನು ಸಾರ್ವಜನಿಕ ಸೇವಾದೃಷ್ಟಿಯಿಂದ ಮಾಡಲಾಯಿತೆಂದೂ ನೀವು ಅವಗಾಹನೆಗೆ ತಂದುಕೊಂಡು ನಿಮ್ಮ ಕರ್ತವ್ಯವನ್ನು ಜನಹಿತ ದೃಷ್ಟಿಯಿಂದ ಮಾಡಿದರೆ ಕ್ಷೇಮ ಸಾಕು.

'ನಾಡಿಗ.'

ಬಡ ರೈತನ ಹಾಡು ಏನಾಗಬೇಕು?

ಎಲ್ಲೆಲ್ಲಿಯೂ ಎಲ್ಲಾ ಜನರು ಸಾರು ತ್ತಿದ್ದಾರೆ ರೈತರು ದೇಶದ ಬೆನ್ನೆಲುಬು ಎಂ. ಆತನಿಗೆ ಎಲ್ಲಾ ತರದ ಅನುಕೂಲತೆಗಳನ್ನು ಕೊಡಬೇಕೆಂದು ಇಡೀ ಜಗತ್ತೇ ಕೃಯತ್ನಪಡುತ್ತಿದೆ ಅದರೆ ಕೊಡಗಿನ ಪ್ಲೆಂಟರಾದ ಕೂಲಿತೆಯನ್ನು ಆರಂಭಿಸಿದ ರೀತಿ ಕಾಣ ತ್ತಿದೆ. ಹೇಗೆಂದರೆ:—

ಕೊಡಗಿನಲ್ಲಿ ಸಾಧಾರಣ ಎಲ್ಲಾ ಜನರು ಮುಖ್ಯ ವೃತ್ತಿಯು ಬತ್ತದ ಬೆಳೆ. ರೈತನು ಬಂದ ಉತ್ಪನ್ನಿಯಲ್ಲಿ ಸ್ವಲ್ಪವನ್ನು ಮೂರಿ ಕಸನೆ ಬೇಕಾದ ಆಹಾರ ಸಾಮಗ್ರಿಗಳ, ದನಕರುಗಳು, ಬಟ್ಟೆ ಜವನ ಕಂದಾಯ, ಸಾಲನಿವಾರಣೆ ಮೊದಲಾದುವುಗಳನ್ನು ಒಕ್ಕಲ. ಗಲಾ ಮಾಡಿದ ಕೂಡಲೇ ಅದಕ್ಕೆ ಬೇಕಾದ ಖರ್ಚಿಗಿರುವ ಬತ್ತವನ್ನು ಮೂರಿ ತೀರಿಸಿಕೊಳ್ಳುತ್ತಾನೆ ಇದಂಹರಿದ ಮೇಲೆ ಅವನು ಒಂದಾ ಸಮಯ ಅನಾನಾನಾ ರದಲ್ಲಿ ಕಾಯಿಲೆಯೊ ದರಿ ಕಲ್ಲಲೇ ಅವನ ದನಕರುಗಳು ಸತ್ತು ಹೋದರೆ ಅಲ್ಲವೇ ಅವನ ನಿಟ್ಟಿಕೆಲಸ ಹಬ್ಬ ಮೊದಲಾದುವುಗಳಿಗೆ ಸಾಮಾನು ತರಲಿಕ್ಕೆ ಅವನು ಎಲ್ಲಿಗೆ ಹೋಗಬೇಕು? ಇವನಿಗೆ ಯಾರು ಅಗಿನ ಕಾಲದಲ್ಲಿ ಸಾಲ ಕೊಡುವರು? ಸಾಲ ಕೊಟ್ಟರೆ ಒಂದಕ್ಕೆ ಮೂರರಂತೆ ವಸೂಲು ಮಾಡುತ್ತಾರೆ. ಈ ಒಡ್ಡಿಗೆ ತೆಗೆಯುವ ಹಣವು ಬಡಲು ಅವನ ಜೀವನಿಗೆ ಹಣ ಬೇಕಾಗುವ ಸಮಯದಲ್ಲಿ ಬತ್ತಕಟ್ಟೆ ಅಕ್ಕಿ ಮಾಡಿ ಪೇಟೆಗಳಲ್ಲಿ ತೆಗೆದುಕೊಂಡು ಹೋಗಿ ಮೂರಿ ಅವನ ಕಾಲವನ್ನು ಕಳೆಯುತ್ತಿದ್ದನು. ಬತ್ತ ಕಟ್ಟೆ ಅಕ್ಕಿ ನೋಡಲೆ ಅದರಲ್ಲಿ ಸಿಗುವ ಕೂಡು ದನಕರುಗಳಿಗೆ ಬೇಕಾಗುತ್ತವೆ. ನಮ್ಮ ಕೋಳಿ ಬಾತುಕೋಳಿಗಳಿಗೆ ಉಪಯೋಗವಾಗುತ್ತವೆ ಇದರ ಹೊಟ್ಟನ್ನು ಗದ್ದೆಗಳಿಗೂ ತೋಟಕ್ಕೂ ಉಪಯೋಗಿಸುತ್ತಾನೆ. ಈಗ ರೈತನು ಮನೆಯಲ್ಲೇ ಬತ್ತಕಟ್ಟೆ ಅಕ್ಕಿಮಾಡಿ ಮಾರುವ ಬದಲು ಬತ್ತವನ್ನೆಲ್ಲಾ ಮಿಲ್ಲಿಗೆ ಕೊಡಬೇಕೆಂದು ಗವರ್ನಮೆಂಟಿನವರು ಖಡ್ಡಾಯವಾದ ಪಾನಾನನ್ನ ಹೊರಡಿಸಿದ್ದಾರೆ. ಆನಿಗೆ ಸಮಯ ಬೀಳುವಾಗ ಒಂದು ಬಟ್ಟೆ ಯಾ ಎರಡು ಬಟ್ಟೆ ಬತ್ತವನ್ನು ಮಾಡಬೇಕಾದರೆ ಅವನು ಹೇಗೆತಾನೆ ಮಿಲ್ಲಿಗೆ ಸಾಗಿಸುವುದ ? ಸಾಗಿಸಬೇಕಾದರೂ ಅದರ ಜೊತೆಗೆ ಪರಿವರ್ತು ಬೇಕು. ಬತ್ತದ ವಿಜಟರುಗಳಿಗೆ ಕೊಟ್ಟರೆ ಕಜ್ಜೋಲು ಬೆಲೆಯು ಸಿಕ್ಕುವದಿಲ್ಲ. ಯಾಕೆಂದರೆ ಅವನಿಗೆ ವ್ಯ

ಓದುಗರ ಓಲೆಗಳು

ಳೆಗಾಲದ ಸಮಯದಲ್ಲಿ ರೈತನ ಮನೆಯಿಂದ ಸಾಗಿಸುವ ಖರ್ಚು ಒಂದಕ್ಕೆ ನಾಲ್ಕು ಬೀಳುತ್ತೆ. ಆಗ ಒಂದು ಯೂ ಎರಡು ಬಿತ್ತ ಬಿತ್ತ ಕೊಂಡುಕೊಳ್ಳಲಿ ಕೈ ಗ್ರಾನುದ ಒಳಗೆ ಬರುವುದೇ ಇಲ್ಲ. ಪರ್ಮಿಟಿಗೆ ಕಂಟ್ರೋಲು ಇನ್ಸ್‌ಪೆಕ್ಟರನ್ನು ಹುಡುಕಿದರೆ ಅವರನ್ನು ಕಾಣಿಸಿಗುವುದೇ ಕಷ್ಟ. ಹುಂಜಿ ರೈತನು ಬತ್ತಕುಟ್ಟಿ ಪೇಟೆಗಳಲ್ಲಿ ಮಾರಿ ಅವನಿಗೆ ಬೇಕಾಗುವ ಸಾಮಾನುಗಳನ್ನು ತರುತ್ತಿದ್ದನು. ಇಲ್ಲವೆ ಬರುವ ವಾರದಲ್ಲಿ ಅಕ್ಕಿ ಕೊಡುತ್ತೇನೆಂದು ಹೇಳಿ ವ್ಯಾಪಾರಸ್ಥರ ಕೈಯಿಂದ ಸಾಮಾನು ತರುತ್ತಿದ್ದನು. ಈಗ ಕಂಟ್ರೋಲ್ ಎಂದು ಹೇಳಿ ರೈತನನ್ನು ಯಾವ ಕಡೆಗೂ ಮುಖ ವನ್ನು ತೋರಿಸದ ರೀತಿ ಗವರ್ನ್‌ಮೆಂಟಿನ ವರು ಮಾಡಿರುತ್ತಾರೆ. ರೈತನಿಗೆ ಅಡಿಗೆ ಮಾಡಲು ಸಾಮಾನು ಇಲ್ಲ, ಕಾಫಿ ಕ.ಡಿ ಯಲು ಬೆಲ್ಲವಿಲ್ಲ. ತೆಂಗಿನೆಣ್ಣೆಯಂತೂ ನೋಡಲೇ ಇಲ್ಲ. ಅಕ್ಕಿ ಮಾರಿ ತರುವ ಎಂದರೆ ಮಾರಲು ಡುತ್ತವಿಲ್ಲ. ಅವನು ಜೀವನವನ್ನು ಹೇಗೆ ಕಳೆಯುವುದು? ಈ ಗ ಬರುವುದು ಕಾಳು ಕೆಲಸದ ಸಮಯ. ಇನ್ನು ಎರಡು ತಿಂಗಳವರೆಗೆ ಸಮಯವು ಬಹಳ ಕಮ್ಮಿ. ಕಷ್ಟವನ್ನು ಸಹಿಸಲಾರದೆ ಸ್ವಲ್ಪ ಅಕ್ಕಿ ಮಾರಿ ಸಾಮಾನು ತರುತ್ತೇನೆಂದು ಹೋದರೆ ಪೋಲೀಸರ ಕಾಟ ತಡೆಯಲಾಗುವದಿಲ್ಲ ಅಷ್ಟರಲ್ಲಿ ಕಂಟ್ರೋಲ್ ಇನ್ಸ್‌ಪೆಕ್ಟರರು. ಈಗ ಪೋಲೀಸರಿಗೆ ಸಿಕ್ಕುವ ಕೇಸುಗಳು ಒಂದು ಅಕ್ಕಿ ಮಾರುವ ರೈತನನ್ನು ಹಿಡಿಯುವುದು, ಎರಡನೆಯದು ಬಸ್ಸಿನಲ್ಲಿ ಒವರ್ ಲೋಡು ಚಾರ್ಜು ಮಾಡುವದು. ಇವೆರಡಲ್ಲದೆ ಬೇರೆ ಯಾವ ಕೇಸು ಸಿಗುವುದಿಲ್ಲ. ಪೇಟೆಗಳಲ್ಲಿ ಯಾವಾಗಲೂ ಸಾರಾಯಿಯ ಕಪ್ಪುಸಂತೆ ನಡೆಯುತ್ತಾ ಇದೆ. ಅದು ಪೋಲೀಸರಿಗೆ ಸಿಗುವುದೇ ಇಲ್ಲ ಪಾಪ, ಅದು ಅವರಿಗೆ ಗೊತ್ತೇ ಇಲ್ಲ. ಯಾಕೆಂದರೆ ಸುರಾದೇವಿಗೆ ಮೋಹಿತರಾಗದವರಾರು? ಕಳೆದ ಸುತ್ತಿಯ ಸಮಯದಲ್ಲಿ ಬೆಲ್ಲ ಪಂಚೇರಿಗೆ ೩ ರೂಪಾಯಿಯಿದ್ದಲ್ಲಿ ಸಾಧಾರಣ ಎಲ್ಲಾ ಅಂಗಡಿಗಳಲ್ಲಿ ಬೆಲ್ಲ ಸಿಕ್ಕುತಿತ್ತು. ಪೋಲೀಸರಿಗೂ ಮತ್ತು ಕಂಟ್ರೋಲ್ ಇನ್ಸ್‌ಪೆಕ್ಟರರಿಗೂ ಮತ್ತು ಅಂಗಡಿಗಳಿಗೆ ನೆಗ್ಗಿದರೆ ಬೆಲ್ಲ ಅವರ ಕಣ್ಣಿಗೆ ಬೀಳುತ್ತಿರಲಿಲ್ಲ. ರೈತನ ಹಿತಕ್ಕಾಗಿ ಯಾರೂ ಇಲ್ಲ. ನಾವು ಅರಿಸಿದಂತಹ ಕೌನ್ಸಿಲು ಮೆಂಬರುಗಳು ಓಟಿನ ಸಮಯದಲ್ಲಿ ಊರೊಳಗೆ ಲ್ಲಾ ಸುತ್ತಾಡಿ ಪಾಯಿಖಾನೆಗೆ ಹೋದವರನ್ನು ಸಹ ಪೂತಾರಿಸಿ ಓಟು ಪಡೆದರು. ಈಗ ಅವರ ಸುಳಿವು ಕಾಣುವುದೇ ಇಲ್ಲ. ಆದ್ದರಿಂದ ಇನ್ನಾದರೂ ಕೌನ್ಸಿಲು ಸೆಂಬರುಗಳು ಮತ್ತು ಇದಕ್ಕೆ ಸಂಬಂಧಿಸಿದ ಅಧಿಕಾರಿಗಳು ಸೇರಿ ರೈತನಿಗೆ ಕೊಡಗಿನೊಳಗೆ ಅಕ್ಕಿ ಮಾರಾಟ ಮಾಡುವ ಅವಕಾಶವನ್ನು ಒದಗಿಸಿ ಕೊಡಬೇಕಾಗಿದೆ. ಇದರಿಂದ ಅವಶ್ಯಕುದುದ್ದಿನ ಕಷ್ಟ ಸ್ವಲ್ಪ ಮಟ್ಟಿಗೆ ನಿವಾರಣೆಯಾಗುವದು.

ಕೊಡಗಿನಿಂದ ಹೊರಗೆ ಹೋಗುವ ಅಕ್ಕಿಯನ್ನು ಹೊತ್ತ ಪೋಲೀಸರೂ ಕಂಟ್ರೋಲ್ ಆಫೀಸರೂ ತಡೆಯಲಿ. ಇದಕ್ಕೆ ರೈತರಿಂದ ಸಹ ಸಹಾಯ ಒದಗಬಹುದು. ಕೊಡಗಿನೊಳಗೆ ರೈತನು ಎಲ್ಲಿ ಬೇಕಾದರೂ ಸಾಗಿಸುವ ರೀತಿ ಮಾಡಬೇಕಾಗಿದೆ. ಇಲ್ಲವಾದರೆ ರೈತನು ಬೇಸರಗೊಂಡು ಯಾವ ಕೆಲಸವನ್ನು ಮಾಡಲು ಸಮಯ ಸಿಗದೆ ಬತ್ತದ ಬೆಳೆಯು ಉತ್ಪತ್ತಿ ಕಮ್ಮಿಯಾಗುವುದೇ ಹೊರತು ಹೆಚ್ಚಾಗಲಾರದು. ಯಾಕೆಂದರೆ ಇವನ ಖರ್ಚಿಗೆ ಬೇಕಾಗುವ ಹಣವನ್ನು ಹುಡುಕಲು ಅವನಿಗೆ ಸಮಯ ಸಾಲದು. ಆದುದರಿಂದ ಇದಕ್ಕೆ ಸಮ್ಮಂದಿಸಿದವರೆಲ್ಲರೂ ರೈತರ ಕಷ್ಟವನ್ನು ನಿವಾರಣೆ ಮಾಡಲು ಪ್ರಯತ್ನಪಡಿರಿ.

"ರೈತ"

—೦—೦—

ಹೋಟೆಲುಗಳ ಸುಧಾರಣೆ ಆಗಬೇಕು.

ನೂರಾರು ವರ್ಷಗಳಿಗೆ ಹಿಂದೆ ಜನತೆಯು ಹಿತಕ್ಕೋಸ್ಕರ ದೇಶದ ಉದ್ದಗಲಕ್ಕೂ ಅಲ್ಲಲ್ಲಿ ಛತ್ರಗಳು ತೆರೆಯಲ್ಪಟ್ಟಿದ್ದುವು. ಆ ಛತ್ರಗಳು ಧರ್ಮ ದೇವತೆಯ ಹೆಸರಿನಲ್ಲಿ ತೆರೆಯಲ್ಪಟ್ಟು, ಭಿಕ್ಷುಕರಿಗೂ ಅಂಗಹೀನ ವತ್ತು ಅನಾಥರಿಗೂ, ಬಳಲಿದ ದಾರಿ ಹೋಕರಿಗೂ ಅನ್ನ ಪಾನೀಯಗಳನ್ನು ಮಿಷತ್ತಾಗಿ ನೀಡಿ ಸಹಾಯ ಮಾಡುತ್ತಿದ್ದುವು. ಆದರೆ ವರ್ತಮಾನಗಳು ಏರುತ್ತಾ ಬಂದಂತೆಯೇ ಛತ್ರಗಳು ಒಂದೊಂದಾಗಿ ವಂಚ್ಚಿತವಾಗುತ್ತಾ ಬಂದುವು. ಆ ವುಗಳಿಗೆ ಬದಲಾಗಿ ತಾವು ನೀಡುವ ಅನ್ನ ಪಾನೀಯಗಳಿಗೆ ಕಕ್ಕ ಪ್ರತಿಫಲವನ್ನು ಹೊಂದಿಕೊಂಡು ಪ್ರಯಾಣಿಕರೂ, ದಾರಿ ಹೋಕರಿಗೂ ಸೌಲಭ್ಯವನ್ನು ಕಲ್ಪಿಸಿ ಕೊಡುವ ಹೋಟೆಲುಗಳ ಉದಯವಾದುವು ಬರಬರುತ್ತಾ ಈ ಹೊಟೇಲುಗಳಲ್ಲಿ ನಾವು ಬಳಸುವ ಈ ಅನ್ನ ಪಾನೀಯಗಳಿಗೆ ಹೊಂದಿಕೊಳ್ಳುವ ಪ್ರತಿ ಫಲದೊಡನೆ ಕೊಂಚವಿಟ್ಟಿಗೆ ಲಾಭ ಹೊಂದಿಕೊಳ್ಳುವ ಅಲ್ಪಾಸೆಯು ಮೂಡುತ್ತಾ ಬಂತು ಈ ಅಲ್ಪ ಲಾಭ ನೀಕ್ಷಣಾ ಪದ್ಧತಿಯು ಭೂತವಾಗಿ ಬೆಳೆದು, ಧರ್ಮ ದೇವತೆಯು ಬಲಿಗೆಯ್ದು, ವ್ಯಭಿಚಾರೀ ಕೃತ್ಯದವರಿಗೆ ಮಟ್ಟೆದೆ.

ಇಂದಿನ ಅನೇಕ ಹೊಟೇಲುಗಳು ಬಹಳ ಶೋಚನೀಯವಾದ ಸ್ಥಿತಿಯಲ್ಲಿವೆ. ಹೊಟೇಲಿನ ಎಸಳುಗಡೆ ನೋಟವುಗಳಂಗು ಬಳಿದು ರಮ್ಯವಾಗಿ ತೋರುತ್ತಿರಬಹುದು. ದಪ್ಪ ಅಕ್ಷರದ ಬಣ್ಣದ ಬೋರ್ಡುಗಳು ಮುಂದುಗಡೆ ತೂಗುತ್ತಿರಬಹುದು ರೇಡಿಯೋ, ಗ್ರಾನುಫೋನ್‌ಗಳ ಇಂಪು ಸ್ವರವು ಮನವನ್ನು ಅತ್ತ ಕಡೆ ಸೆಳೆಯಬಹುದು ಆದರೆ ಬಾಹ್ಯ ಥಳಕು ಮಾತ್ರ ಜನ ದೃಷ್ಟಿಗೋಚರವಾಗುವುದಲ್ಲದೆ ಒಳಗಿನ ಹುಳುಕು ಯಾರಿಗೂ ತಿಳಿಯದು. ಅತ್ಯಾವಶ್ಯಕವಾದಂತಹ ಬಚ್ಚಲುಮನೆ, ಕಕ್ಕಸು, ಕಸದ ತೊಟ್ಟಿಗಳು ಅನೇಕ ಹೊಟೇಲುಗಳಲ್ಲಿ ಇಲ್ಲ.

ಈ ವಿಶಯವನ್ನು ಆರೋಗ್ಯ ಇಲಾಖಾ ಅಧಿಕಾರಿಗಳಿಗೆ ಪುಕಾರುಮಾಡಿದ ಸಂಗತಿ ಹೊಟೇಲಿನವರಿಗೆ ತಿಳಿದರೆ ಮರು ದಿವಸದಿಂದ ಅನ್ನವೇ ಇಲ್ಲ ಎಲ್ಲಾ ಹೊಟೇಲುಗಳು ಇದೇ ರೀತಿಯಲ್ಲಿರುವವೆಂದು ಇದರ ಅರ್ಥವಲ್ಲ. ಕೆಲವು ಹೊಟೇಲುಗಳು ಜನರ ಹಿತದ ಕಡೆ ಗಮನ ಕೊಟ್ಟು ವ್ಯಾಪಾರ ನಡೆಸುತ್ತಿವೆ. ಆದರೆ ಅಂತಹ ಹೊಟೇಲುಗಳು ಬಹಳ ವಿರಳ.

ನಮ್ಮ ದೇಶದಲ್ಲಿರುವ ಬಹು ಸಂಖ್ಯೆಯ ಈ ರೀತಿಯ ಹೊಟೇಲುಗಳು ಮೂಲೆ ವಾಗಬೇಕು. ಹೊಟೇಲುಗಳ ಮೂಲಕ ಕಳ್ಳ ಲಾಭಕ್ಕಾಗಿ ಹೊಟೇಲು ಇಡುವುದರ ಬದಲು ಜನರ ಸೌಕರ್ಯಕ್ಕಾಗಿ, ಸಮಾಜದ ಹಿತಕ್ಕಾಗಿ ಹೊಟೇಲು ಇಡುವದೆಂಬ ಉದಾರಭಾವನೆ ಮೂಡಬೇಕು. ಸಾಕಷ್ಟು ಗಮನ ಶುಚಿತ್ವದ ಕಡೆ ಕೊಡಬೇಕು. ಸಾಕಷ್ಟು ಎಚ್ಚರಿಕೆ ಕೆಲಸಗಾರ ರಾಗೂ ಅಡಿಗೆ ಮಾಡುವವರಕ್ಕ ಇರಬೇಕು. ಸಾಕಷ್ಟು ಶ್ರಮ ಶಕ್ತಿ ಜನರ ಸೌಲಭ್ಯ, ಸೌಕರ್ಯಗಳಿಗಾಗಿ ನೃಯೋಗ ಬೇಕು.

ಈ ವಿಶಯಗಳ ಕಡೆ ಆರೋಗ್ಯ ಇಲಾಖೆಯವರು ಹೆಚ್ಚಿನ ಗಮನವಹಿಸಬೇಕಾಗಿದೆ. ಈ ಬಾಬಿನಲ್ಲಿ ಇವರ ಕೈಮುಂದಾಗಬೇಕಿದೆ ಇವುಗಳ ಉಸ್ತುವಾರಿಗಾಗಿಯೇ ಕೆಲವು ಜನ ನಿಬ್ಬಂದಿಗಳ ನೇಮಕವಾಗಿದ್ದರೂ ಕೂಡ ಇದರಿಂದ ಹೆಚ್ಚಿನ ಪ್ರಯೋಜನ ಕಂಡು ಬರುವುದಿಲ್ಲವೆಂದೇ ಹೇಳಬೇಕು. ಬಹು ಮಟ್ಟಿಗೆ ಹೊಟೇಲುಗಳ ಹಣೆಬರಹವು ಆರೋಗ್ಯ ಇಲಾಖೆಯವರ ಕೈಯಲ್ಲಿರಬೇಕು.. ಇದ್ದ ಕಿದ್ದಂತೆಯೇ ಹೊಟೇಲಿನವರಿಗೆ ಅರಿವಿಲ್ಲದಂತೆ ಒಳಗೆ ನುಗ್ಗಿ ಪರೀಕ್ಷೆಮಾಡುವದು ಬಹಳ ಪ್ರಯೋಜನಕಾರಿವಾದ ಕೆಲಸವಾಗಿದೆ. ಇತ್ತೀಚೆಗೆ ಒಂದೊಂದು ವೇಳೆ ಈ ರೀತಿಯ ಕಾರ್ಯಕ್ರಮವು ನಡೆಯುತ್ತಿರುವುದು ಸಂತೋಷಕರ. ಆದರೆ ಇದಿಷ್ಟಕ್ಕೆ ಸಾಲದು. ಹೊಟೇಲುಗಳವರಿಗೆ ಆರೋಗ್ಯ ಶುಚಿತ್ವದ ವಿಚಾರ ಹೆಚ್ಚಿನ ಮಾಹಿತಿ ಕೊಡಬೇಕು.

ಎಲ್ಲಾ ಸಾಮಾನುಗಳ ಬೆಲೆ ಸಾಧಾರಣವಾಗಿ ನಿಯಂತ್ರಿತವಾಗಿರುವುದರಿಂದ ಊಟ, ತಿಂಡಿಗಳ ದರವು ಕೂಡಾ ನಿಯಂತ್ರಿತವಾಗಬೇಕು, ಆಗಾಗ್ಗೆ ಮಾಡಲು ಸಲಕರಣೆ ಒದಗಿಸಿ ಕೊಡಬೇಕು ಮತ್ತು ಅವುಗಳ ಸಲಕರಣೆ ಹೊಂದಿಕೊಳ್ಳಲು ಒತ್ತಾಯಿಸಬೇಕು ಈ ಎಲ್ಲಾ ರೀತಿಯಲ್ಲಿ ಆರೋಗ್ಯ ಇಲಾಖೆಯವರು ಸಮಾಜದ ಉನ್ನತಿಗಾಗಿ ಶ್ರಮವಹಿಸಿದ್ದೇ ಆದರೆ ದೇಶದಲ್ಲಿ ಅಲ್ಲಲ್ಲಿ ತೋರಬರುವ ಅಟ್ಟುಹಾಸ್ಯಗಳು ಬೇರು ಸಹಿತ ಕಿತ್ತು ಹಾಕಿದಂತಾಗುವುದು ಜನರ ಆರೋಗ್ಯಸೌಭಾಗ್ಯದ ದೃಷ್ಟಿಯಿಂದ, ಸಮಾಜದ ಉನ್ನತಿಯು ದೃಷ್ಟಿಯಿಂದ, ದೇಶದ ಏಳಿಗೆಯ ದೃಷ್ಟಿಯಿಂದ ಆರೋಗ್ಯ ಇಲಾಖೆಯವರು ಹಾಗೂ ಹೊಟೇಲು ಮಾಲಿಕರು ಹೆಚ್ಚು ಶ್ರಮವಹಿಸಿ ಸಮಾಜದ ಹಾಗೂ ದೇಶದ ಪ್ರಗತಿಯ ಹಾಳ್ಬೆಸಿಗರಾಗಬಹುದೆಂದು ನಂಬಲಾರದೇ?

ಕೆ. ಸಿ ಕರುಂಬಯ್ಯ.

—೦—

ಸಿನೆಮ ಮಂದಿರ.

ವೀರಾಜಪೇಟೆಯಲ್ಲಿ ಒಂದು ಸಿನೆಮ ಮಂದಿರವು ಇದೆ. ಅದರ ಸ್ಥಿತಿಯು ಇಹೆಳ ಶೋಚನೀಯವಾಗಿದೆ. ಬದಿರು ಕಂಬಗಳನ್ನು ನೆಟ್ಟು ಬದಿರಿನಿಂದಲೇ ನಿರ್ಮಿತವಾದ ಮಾಡುಗಳ ಮೇಲೆ ಹರಕು ಬಟ್ಟೆಗಳಿಂದ ಮುಚ್ಚಿರುತ್ತಾರೆ. ಅದಷ್ಟು ದೂರದಿಂದ ನೋಡುವವರಿಗೆ ಹೊಟ್ಟೆಗೆ ಅನ್ನವಿಲ್ಲದೆ ಸಾಯಲಿಕ್ಕೆ ಬಿದ್ದ ನಂನೇಷ್ಯನ ಆಸ್ಥಸಂಜರದಂಥಾ ವೈಮೇಲೆ ಹರಕು ಚಿಂದಿಬಟ್ಟೆಗಳಾವರಿಕೆ ತೋರುತ್ತದೆ. ಇದರೊಳಗೆ ಮಳೆಗಾಲಕ್ಕೆ ತಕ್ಕಂಥ ಸ್ವಂಟು ಪಿಕ್ಚರುಗಳನ್ನು ಜೂನ್ ಒಂದರಿಂದಲೇ ಪ್ರಾರಂಭಿಸಿರುವರು. ಈ ಮಂದಿರದೊಳಗೆ ಮಳೆ ಸೋರು ಬೀಳುವ ಜಾಗದಲ್ಲಿ ಕಾಲುಸೆಗಳನ್ನು ತೋಡಿರುತ್ತಾರೆ ಮಳೆ ಬೀಳದ ಜಾಗದಲ್ಲಿ ಬೆಂಚುಗಳನ್ನು ಕುರ್ಚಿಗಳನ್ನು ಹಾಕಿಸಿರುತ್ತಾರೆ. ವಿಶೇಷವಾದ ಒಡನೆ ಮೂರಾಣೆ ಟಿಕೇಟಿನವರಿಗೆ ಏಜಾಣೆಗೂ, ಏಜಾಣೆ ಟಿಕೇಟಿನವರಿಗೆ ಎಟಾಣೆಗೂ, ಎಟಾಣೆ ಟಿಕೇಟಿನವರಿಗೆ ಹನ್ನೆರಡಾಣೆಗೂ ಪ್ರಮೋಶನ್ ಸಿಕ್ಕುವುದು. ಈ ಮಳೆಗಾಲದಲ್ಲಿ ಈ ರೀತಿಯ ಚಿತ್ರ ಪ್ರದರ್ಶನವನ್ನು ನಿಶ್ಚಪಡಿಸೋಕ್ಕು ಸಾಧ್ಯವಿದ್ದರೆ ತಕ್ಕ ವಿಚಾರಿಸಿನಿಂದ ಪ್ರೇಕ್ಷಕರಿಗೆ ಯಾವ ತೊಂದರೆಯೂಗದ ರೀತಿ ಸಿನೇಮಾ ಪ್ರದರ್ಶನ ಮಾಡಬೇಕಲ್ಲದೆ ಈ ರೀತಿಯ ವಿಚಾರಣೆನ್ನು ಇನ್ನಾದರೂ ಸಂಬಂಧಿಸಿದವರು ನಿರ್ಬಂಧಿಸಬೇಕು..

ಎಂ. ಕೆ. ಕಾರ್ಯಪ್ಪ.

ನಿಮ್ಮ ಸ್ವಂತ ಲಾಭಕ್ಕಾಗಿ ಏನು ಮಾಡಿ-ಅಥವಾ
— ಪ್ರತಿನಿಧಿಯಾಗಿ —
ದಿ ಬಾಂಬೆ ಮ್ಯೂಚುಯಲ್ ಲೈಫ್ ಅಷ್ಯೂರೆನ್ಸ್ ಸೊಸೈಟಿ ಲಿಮಿಟೆಡ್.
ಭಾರತದಲ್ಲಿನ ಅತ್ಯಂತ ಹಳೆಯ ವಿಮಾ ಸಂಸ್ಥೆ.
12-2 [ಸ್ಥಾಪಿತ 1871]
ವಿವರಗಳಿಗೆ:-ದಿ ಬ್ರಾಂಚ್ ಸೆಕ್ರೆಟರಿ,
172-173, ಸರಸಿಂಹರಾಜರೋಡು, ಬೆಂಗಳೂರು 2,

ಭಾರತದ ಭಾವೀ ಚುನಾವಣೆ.

ಲೇ:—ಶ್ರೀ ಬಸ್ತಿ ಸದಾನಂದ ಶೈ.

ಭಾರತವು ಸ್ವತಂತ್ರವಾದ ಬಳಿಕ ಇದೀಗ ಮೊದಲ ಭಾರಿ, ಪ್ರಾಯಸ್ಥರಿಂದ ಚುನಾಯಿಸಲ್ಪಟ್ಟ ಶಾಸನ ಸಭೆ ಕೂಡುವ ಸುದಿನ ಹತ್ತಿರ ಬರುತ್ತಾ ಇದೆ. ಇದೇ ಬರುವ ನವಂಬರ್, ದಶಂಬರ್ ತಿಂಗಳ್ಳಲ್ಲಿ ಭಾರತದಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆಯಲಿರುವುವು. ಸ್ವಾತಂತ್ರ್ಯ ಸಿಕ್ಕಿದ ಮೇಲೆ ಕೂಡಾ, ನಾಯಕರೆಂದು ಹೆಸರುಗಳಿಸಿದವರು ನೇಮಿಸಿದ ಮಂತ್ರಿ ಮಂಡಲದ ಅಧಿಕಾರವು ಹೋಗಿ ಜನರು ತಮಗೆ ಬೇಕಾದವರನ್ನು ಆರಿಸಿ, ಸರಕಾರವನ್ನು ರಚಿಸಿ, ಅವರಿಂದ ದೇಶದ ಅಭಿವೃದ್ಧಿಯನ್ನೂ, ಕನಸು ಕಾಣುತ್ತಿದ್ದ ರಾಮರಾಜ್ಯವನ್ನೂ, ಪಡೆಯುವ ದಿನಗಳು ಬಹಳ ಹತ್ತಿರವಿರುತ್ತವೆ.

ಭಾರತದಲ್ಲಿ ಇದೊಂದು ನಿಜವಾಗಿಯೂ, ಉತ್ತಮ ಕಾರ್ಯವಾಗಿದೆ. ಯಾಕೆಂದರೆ, ವಾಶ್ಚಿಮಾತ್ಯರ ಕೈಯಲ್ಲಿ ಭಾರತವು ಬಂಧನಕ್ಕೊಳಗಾಗಿ ಕಷ್ಟದಲ್ಲಿ ಬಿದ್ದಿತ್ತು. ಆ ಮೇಲೆ ಜನರ ಅನಪರತ ಯತ್ನದ ಫಲದಿಂದ ಸಹಸ್ರಾರು ವೀರಯೋಧರ ಮರಣದಿಂದ ಆ ಕಷ್ಟಗಳು ದೂರವಾಗುವ ಸೂಚನೆಯು ಕಂಡುಬಂತು. ಭಾರತದ ಮೂಡಣ ದಿಗಂತದಲ್ಲಿ ಭಾಸ್ಕರನ ಉದಯದ ಸೂಚನೆ ತೋರಿ ಬಂತು. ಭಾರತವು ಸ್ವತಂತ್ರವಾಯಿತು. ನಮ್ಮನ್ನು ಆಳುತ್ತಿದ್ದ ದಾಸರಕ್ತವನ್ನಿಗಿ ಮಾಡಿಕೊಂಡ, ಆ ಪ್ರಭುಗಳು ನಿಮ್ಮನ್ನು ನೀವೇ ಸುಧಾರಿಸಿಕೊಳ್ಳಿ ಎಂದುಹೇಳಿ ಹೊರಟು ಹೋದರು.

ಭಾರತವು ಸಣ್ಣ ಭೂಮಂಡಲವೇನೂ ಅಲ್ಲ. ಸುಮಾರು ಆಸ್ಟ್ರಕೋಟಿ ಜನಸಂಖ್ಯೆಯುಳ್ಳ ಭಾರತದ ಆಡಳಿತೆಯೆಂದರೆ ಕಬ್ಬಿಣದ ಕಡಲೆಯೇ ಸೈ. ಭಾರತದ ಸ್ವಾತಂತ್ರ್ಯ ಕಾಲದಲ್ಲಿ ಹಿಂದೂಸ್ಥಾನ ಮತ್ತು ಪಾಕಿಸ್ತಾನಗಳೆಂಬ ಎರಡು ವಿಧಾಗಗಳನ್ನಾಗಿ ಮಾಡಿ ಬ್ರಿಟಿಷರು ನವ ಗಿತ್ತರು. ಇದು ಇನ್ನೂ ದೊಡ್ಡ ಹೊರೆಯನ್ನು ಭಾರತೀಯರ ತಲೆಯ ಮೇಲಿಟ್ಟಂತಾಯಿತು. ಆದರೂ ಅದನ್ನು ಸಮರ್ಥರಾದ ಮಂಡಿಂಡರು ತಮ್ಮತಲೆಯ ಮೇಲೆ ತೆಗೆದುಕೊಂಡರು. ಸ್ವಾತಂತ್ರ್ಯ ದೊರೆತೊಡನೆ ನಾವು ಸುಖವನ್ನಣುಭವಿಸಬೇಕು ವಿಚಾರಗಳಾದ ಹಲವಾರು ಅವಿವೇಕಿಗಳ ಅಪವಾದಗಳನ್ನು ಲೆಕ್ಕಿಸದೆ, ಮುಗ್ಗರಿಸಿದರೂ, ಬೀಳಗೊಡದೆ ಇಂದಿನ ಪರಿಗೆ ಅಡಳಿತೆಯನ್ನು ನಡೆಸಿದರು. ಸ್ವಾತಂತ್ರ್ಯ ಸಿಕ್ಕುವ ವರೆಗೆ ಜನರಲ್ಲಿದ್ದ ಮನೋವೃತ್ತಿ ಸ್ವತಂತ್ರವಾದೊಡನೆ ಬದಲಾಯಿತು. ಮಹಾತ್ಮಾಜೀಯವರಿತ್ತ ಅಮರ ಸಂದೇಶಗಳು ಬೇಡವಾದವು ಅಂದಿನ ವರೆಗಿದ್ದ ದೇಶಪ್ರೇಮ, ತ್ಯಾಗ ಭಾವನೆಗಳು ದೂರ ಸರಿದವು. ದೇಶಪ್ರೇಮವು ಇಂದು ಅಧಿಕಾರ ಲಾಲಸೆಯಾಗಿ ಮಾರ್ಪಟ್ಟಿದೆ. ಅಂದು ತ್ಯಾಗಮಾಡಿ ಕಳೆದುಕೊಂಡ ಹಣವನ್ನು ಇಂದು ಲಂಚ, ಲಾಭಗಳಿಕೆಯಿಂದ ಭರ್ತಿ ಮಾಡುತ್ತಿರುವರು. ಇಂತಹ ದೋಷಪೂರಿತ ಜನರ ಮತ ದಾನಗಳಿಂದ ನಿವಾರಣೆಗೆ ಕೆಲವು ಮಂಡಿಂಡರು ಒದ್ದಾಡುತ್ತಿರುವರು.

ಭಾರತದ ಇಂದಿನ ಸ್ಥಿತಿಯು ಕುರಿತು ಹೇಳುವುದಾದರೆ ಭಾರತೀಯರ ಆಂತರಿಕ ರೀತಿ ನೀತಿ ಬಹಳ ಕೆಟ್ಟಿದ್ದಿದೆ. ಜನರು ಧನಪಿಶಾಚಿಯುಳ್ಳವರಾಗಿದ್ದಾರೆ. ಧನಕ್ಕಾಗಿ ಕಾವೇನೂ ಮಾಡಬೇಸು, ಏನು ಮಾಡಬಾರದು ಎಂಬುದನ್ನು ಯೋಚಿಸುವುದಿಲ್ಲ. ಸೋದರಭಾವವು ಅಳಿಯುತ್ತಾ ಹೋಗಿದೆ. ಸ್ವಾರ್ಥವು ಜನರ ಜೀವನವನ್ನು, ಸಮೂಹದ ಹಿತವನ್ನು ಹಾಳುಗೆಡವುತ್ತ ಭೀಕರಾಕೃತಿಯನ್ನು ತಳೆದಿದೆ. ಇದರ ತಪ್ಪು ಕಾಂಗ್ರೆಸು ಸರಕಾರದ ಮೇಲೆ, ಅರ್ಥಾತ್ ನೆಹರೂ ಸರಕಾರದ ಮೇಲೆ ಹೊರಿಸಲಾಗುತ್ತಿದೆಯೆಂದರೆ ಅದರ ಹಿನ್ನಲೆಜ್ಜಾದ್ದವಾದ ವಿಷಯು ಬೇರಿಲ್ಲ.

ಕಾಂಗ್ರೆಸಿನ ಹೆಸರು ಹೇಳಿ ಇಂದು ಹಲವರು ಸರಕಾರದ ಕಾರ್ಯಕ್ಷೇತ್ರದಲ್ಲಿ ಪ್ರಮುಖ ವ್ಯಕ್ತಿಗಳಾಗಿ ದಂಡಿಯುತ್ತಿರುವರು. ಇವರು ದಂಡಿಯುವುದು ಜನೋಪಕಾರಕ್ಕಲ್ಲ, ಜನಸಾಮಾನ್ಯರ ಹಿತಕ್ಕಲ್ಲ, ತಮ್ಮ ಸ್ವಾರ್ಥಸಾಧನೆಗಾಗಿ ಎಂದು ಹೇಳಿದರೆ ಅತ್ಯುಕ್ತಿದೋಷಗಳಾರದು.

ಇಂದು ಮುಖ್ಯ ಮಂತ್ರಿ ನೆಹರುಗಳು ದೇಶದ ಕಡೆಗಿಟ್ಟಷ್ಟು ದೃಷ್ಟಿಯನ್ನು ಬೇರೆಯವರು ಇಟ್ಟಿಲ್ಲ. ದೇಶದ ಹಿತಬಯಸಿ ದುಡಿದಿಲ್ಲಿ ಭಾರತವಿಂದು ಪ್ರಪಂಚದಲ್ಲಿ ಮೊದಲ ರಾಷ್ಟ್ರವಾಗಲಹರಿವಿದೆ. ಮಹಾತ್ಮರ ಕನಸಿನ ರಾಮರಾಜ್ಯವಾಗಲೂ ಕಂದೇಹವಿರಲಾರದು. ದೇಶದ ಪ್ರತಿಯೊಬ್ಬ ಪ್ರಜೆಯೂ, ಅನ್ನ ಬಟ್ಟೆಗಳ ಕೊರತೆಯಿಂದ ಮುಕ್ತನಾದಾನು. ಸರ್ವದಾ ಸಹಿಸಲಾರದ ಬವಣೆ ಪಡುತ್ತಿರುವ ಬಂಧುವರ್ಗ ಇತ್ತ ದೃಷ್ಟಿ ಹೊರಡಿಸಬೇಕು. ನಮಗಾಗಿ ದೇಶದ ಹಿತಕ್ಕಾಗಿ ಇಂದು ಯಾರು ಕಾರ್ಯಮಾಡುತ್ತಿರುವರು. ಅಥವಾ ಇನ್ನು ಮುಂದೆ ಮಾಡಲು ಸಮರ್ಥರು ಎಂಬ ಕುರಿತು ಯೋಚಿಸಬೇಕು. ದೇಶದ ಅಹಿತವನ್ನು ಬಯಸುವ, ಗೋಮುಖ ವ್ಯಾಘ್ರಗಳನ್ನು ಹೊಡೆದೋಡಿಸಬೇಕು.

ಇಂದು ನಾನಾ ಕಡೆಗಳಿಂದ 'ನಮಗೆ ಓಟು ಕೊಡಿರಿ' ಎಂಬ ಕೂಗು ಕರ್ಣವನ್ನು ಕೊರೆಯುತ್ತಿದೆ. ಹಲವಾರು ಜನರ ಭಾರತದ ಭವಿತವ್ಯವನ್ನು ರೂಪಿಸಲು ಹೊರಟಿರುವರು. ಈ ಒಂದು ಓಟಿಗಾಗಿ ಎಷ್ಟೋ ಜನರು ಸಾವಿರಗಟ್ಟಲೆ ಹಣವನ್ನು ಧುರ್ವ್ಯಯಮಾಡುವದು ತೋರುತ್ತದೆ. ಇದರ ಅಭಿಪ್ರಾಯವೇನೆಂದು ತಿಳಿಯುವುದಿಲ್ಲ. ತಮಗೆ ಓಟು ಸಿಕ್ಕಿದ್ದರೆ? ಎಂಬ ಈ ಹುಟ್ಟು ಯೂರಲ್ಲಿಯೂದರೂ ಇದ್ದು ಅವರು ಓಟಿಗಾಗಿ ಹಣ ಖರ್ಚುಮಾಡುತ್ತಾರೆ. ಹಣ ಕೊಟ್ಟು ಓಟನ್ನು ಪಡೆಯುತ್ತಾರೆ. ಅವಳನ್ನು ಬಸುಗಳಲ್ಲಿ, ಮೋಟಾರುಕಾರುಗಳಲ್ಲಿ ಕರೆತರುತ್ತಾರೆ, ಕಾಫಿ ಕುಡಿಸುತ್ತಾರೆ, ತಮಗೆ ಓಟು ಕೊಡಬೇಕೆಂದು ಒತ್ತಾಯಿಸುತ್ತಾರೆ. ಅಂತಹ ಸಂದರ್ಭದಲ್ಲಿ ಪ್ರತಿಯೊಬ್ಬ ಓಟರರೂ ಜಾಗರೂಕರಾಗಿರುವುದು ಅಗತ್ಯ.

ಚುನಾವಣೆಗಳಿಗಾಗಿ ವಿದೇಶಗಳಲ್ಲಿ ಕೂಡಾ ಪ್ರಚಾರ ಇಲ್ಲಿಯಂತೆಯೇ ನಡೆಯುತ್ತಿದೆ. ಅವರೂ ಕುಬೇರ ಹಣವನ್ನು ಖರ್ಚು ಮಾಡುತ್ತಾರೆ. ಅದರೆ ಇದಕ್ಕೂ, ಅವಕ್ಕೂ ಅಜಗಜಾಂತರವಿದೆ. ಅಲ್ಲಿಯ ಎಲ್ಲಾ ಓಟರರೂ ಬಹುತೇಕವಾಗಿ ವಿದ್ಯಾವಂತರೆಷ್ಟಬಹುದು. ಆದರೆ ನಮ್ಮಲ್ಲಿ ಹಾಗಲ್ಲ ಶೇಕಡ 85% ಅವಿದ್ಯಾವಂತರಿರುವ ನಮ್ಮ ದೇಶದಲ್ಲಿ ಅವರ ಪ್ರಯೋಜನವನ್ನು ಕೆಲವರೇ ಪಡೆಯುವುದು ಕಾಣುತ್ತದೆ.

ಕಷ್ಟಕಾಲದಲ್ಲಿ ಸಹಾಯ ಯಾಚಿಸಿದಾಗ ಒಲ್ಲೆನೆಂದವರು, ಒಂದು ಓಟಿಗಾಗಿ ಮನೆಯ ವರೆಗೆ ಓಡಿಬಂದವರು. ಅಂತಹ ಪರಿಸ್ಥಿತಿಯಲ್ಲಿ ಅವನು ಜಾಗರೂಕನಾಗಿರಬೇಕು. ದೇಶದ ಹಿತಕಾಂಕ್ಷಿಗಳು ಯಾವಾಗಲೂ ಪ್ರಜೆಗಳಿಗೆ ಸಹಾಯನೂಡುತ್ತಾರೆ. ಆದರೆ ರಾವಣಸನ್ನಿಭಗಳೂ ಚುನಾವಣೆಗೆ ನಿಲ್ಲುತ್ತಾರೆ. ಅವರ ವಿಷಯದಲ್ಲಿ ಜನರು ಜಾಗರೂಕರಾಗಿರತಕ್ಕದ್ದು ಅತಿ ಅಗತ್ಯ.

ಓಟು ಕೊಡುವುದು ಎಂದರೆ ಆದೇನೂ ಚಿಲ್ಲರೆಯ ಕೆಲಸವಲ್ಲ. ಪ್ರತಿಯೊಬ್ಬನೂ ಮತದಾನದ ಮಹತ್ವವನ್ನರಿತು ಕಾರ್ಯ ಮಾಡಬೇಕು. ಭಾರತದ ಭವಿಷ್ಯವು ಅಂಧಕಾರಮಯವಾಗಿ ಕಾಣುತ್ತಿದೆ ಅಂತಹ ಸಮಯದಲ್ಲಿ ಸಮರ್ಥರಾದ ಕಾರ್ಯಕರ್ತರ ಅವಶ್ಯಕತೆಯಿದೆ. ಜನರು ಅವನ್ನು ಗಮನದಲ್ಲಿಟ್ಟುಕೊಳ್ಳಬೇಕು. ದಾಕ್ಷಿಣ್ಯಕ್ಕಾಗಲೀ, ಅಧಿಕಾರಕ್ಕಾಗಲೀ ಯಾವಾಗಲೂ ಮಣಿಯಬಾರದು.

ಇನ್ನು ಚುನಾವಣೆಗಾಗಿ ನಿಲ್ಲುವ ಚುರಿಯಳುಗಳೂ ಒಂದು ಮತತ್ವವನ್ನು ಲಕ್ಷದಲ್ಲಿಟ್ಟುಕೊಳ್ಳಬೇಕು. ತಾವು ಚುನಾಯಿತರಾದರೆ ಮಂಂದೇನು ಮಾಡಲು ಸಾಧ್ಯವಿದೆ ಎಂಬುದನ್ನು ಹಾರ್ದಿಕವಾಗಿ ಯೋಚಿಸಿ ಅಂತಹ ಕಾರ್ಯಗಳನ್ನು ಆದಷ್ಟು ಬೇಗನೇ ಮಾಡಿವೆವು ಎಂದು ಪ್ರತಿಜ್ಞೆ ತೆಗೆದುಕೊಳ್ಳಬೇಕು. ಮತ್ತು ಇನ್ನು ಕೆಲವರು ಹುರಿಯಾಳುಗಳನ್ನು ಯೋಚಿಸಿಕೊಳ್ಳಬೇಕು. ತಾನು ಹುರಿಯಾಳಾದರೆ ಚುನಾಯಿತನಾದೇನೇ? ಜನರ ಮನಸು ಹೇಗಿದೆ. ನಾನು ಜನಹಿತಕ್ಕ, ಅಥವಾ ದೇಶಹಿತದ ಯಾವ ಕಾರ್ಯವನ್ನು ಮಾಡಿದ್ದೇನೆ ಎಂಬುದನ್ನು ಯೋಚಿಸಬೇಕು.

ಭಾರತದಲ್ಲಿ ನಡೆಯುವ ಚುನಾವಣೆಗಳು ಇಂದು ಹೊಸ ರೂಪದಲ್ಲಿ ನಡೆಯಲಿವೆ. ಜನರು, ದೇಶ, ಕಾಲ, ಪಾತ್ರವರಿತು ತಮ್ಮ ತಮ್ಮ ಓಟನ್ನು ಕೊಡಬೇಕು. ಚುನಾವಣಾ ಘೋಷಣೆಗಳಿಗೆ ಮರುಳಾಗಬಾರದು. ನಿಜವಾದ ಕಾರ್ಯಕರ್ತರಿಗೆ ಕರೆದು ಓಟು ಕೊಡಬೇಕು ಆಗ ಮಾತ್ರ ನವ್ಮಿಂದಲೇ ಆರಿಸಿದ ಪ್ರತಿನಿಧಿಗಳು ಸರಕಾರ ನಡೆಸುವರು. ಜನಕಯ ಕಷ್ಟವನ್ನು ಹೋಗಲಾಡಿಸುವರೆ ಪ್ರಯತ್ನಿಸುವರು. ಅದುದರಿಂದ ಪ್ರತಿಯೊಬ್ಬ ಭಾರತೀಯನೂ ಓಟು ಕೊಡುವ ಮೊದಲೇ ಯೋಚಿಸಿಕೊಳ್ಳಬೇಕು. ಕೊಟ್ಟ ಮೇಲೆ ಹೋಯಿತು. ಭಾರತದ ಭವಿತವ್ಯವನ್ನು ರೂಪಿಸುವ ಮಹತ್ತಾದ ಕಾರ್ಯ ಜನತೆಯ ಮೇಲಿದೆ. ಜನತೆ ಯೋಚಿಸಿ ನೋಡಲಿ. 'ನ. ಭಾ.'

ಸ್ವತಂತ್ರರಾಜ್ಯದಲ್ಲಿ

ಪ್ರಜೆಗಳ ಜವಾಬ್ದಾರಿ ಮತ್ತು ಕರ್ತವ್ಯ.

ಲೇ:—ಶ್ರೀ ಐ. ಕೆ. ಪಿ. ಶರ್ಮಾ. ಮಂಗಳೂರು.

ಸ್ವಾತಂತ್ರ್ಯ ದೊರಕಿಸಿಕೊಳ್ಳುವ ಶ್ರಮಕ್ಕಿಂತ ಅದನ್ನು ಕಾಪಾಡಿಕೊಳ್ಳುವುದೇ ಹೆಚ್ಚು ಪರಿಶ್ರಮದ ಕೆಲಸವಾಗಿದೆ. ಸ್ವಾತಂತ್ರ್ಯ ಪ್ರಾಪ್ತಿಯೊಡನೆ ಜನರು, ದೇಶೋದ್ಧಾರದ, ಪುನರ್ರಚನೆಯ ಸಕಲ ಜವಾಬ್ದಾರಿಕೆಯನ್ನು ಸರಕಾರದ ಮೇಲೆ ಹೊತ್ತು ಹಾಕಿ, ತಾವು ತಟಸ್ಥರಾಗಿರುವುದಲ್ಲ. ಪ್ರತಿಯೊಬ್ಬನು ತನಗಾಗಿ, ನೆರೆಕರೆಯವನಿಗಾಗಿ ತನ್ನ ಸಮೂಹಕ್ಕಾಗಿ ದೇಶಕ್ಕಾಗಿ ಮಾಡುವ ಕರ್ತವ್ಯಗಳಿವೆ. ಈ ಜವಾಬ್ದಾರಿಯನ್ನು ರಚಿಸಿದಿ ಒಗೆದು ಯಾರೂ ಮುಂಗೈ ಕೈ-ಬೈರಲಾಗುವುದಿಲ್ಲ.

ನಾಲ್ಕೈದು ವರ್ಷಗಳಿಗೊಮ್ಮೆ, ಚುನಾವಣೆಯ ಕಾಲ ಓಟು ಕೊಟ್ಟರೆ ಜನರ ಕರ್ತವ್ಯ ಮುಗಿಯುಲಿಲ್ಲ ಸ್ವಾತಂತ್ರ್ಯದ ಸಿಹಿ-ಕಹಿ, ಸುಖ-ದುಃಖಗಳನ್ನು, ಮನಾಸಮೂನಗಳೂ, ಕೇವಲ ಸರಕಾರವನ್ನು ಸಂಚಾಲಿಸುವವರಿಗೆ, ಮಂತ್ರಿಗಳಿಗೆ, ಪ್ರಜಾಪ್ರತಿನಿಧಿಗಳಿಗೆ ಮಾತ್ರವಲ್ಲ. ಮಹಾತ್ಮಾಜಿಯವರಂತೆ, ಸ್ವರಾಜ್ಯದ ಸವಿಯು ದಾರಿಹೋಕನಿಗೂ ಸವಿಯಲಿಕ್ಕೆ ದೊರಕಬೇಕು.

ದೇಶವು ಸ್ವತಂತ್ರವಾದರೂ ತನ್ನ ಪ್ರಜೆಗಳ ನಿತ್ಯ ಜೀವನಕ್ಕೆ ಬೇಕಾದಷ್ಟು ಆಹಾರ ಬಟ್ಟೆಬರೆ ಔಷಧಿಗಳ ಪೂರೈಕೆಗೆ ಬೇಕಾದಷ್ಟು ಉತ್ಪತ್ತಿ, ಬೆಳೆಸದ ದುಡ್ಡೇಸ್ಪ ಜಮೀನು, ಮನುಷ್ಯ ಶಕ್ತಿ ಮತ್ತಿತರ ಅನುಕೂಲತೆಗಳಿದ್ದರೂ ಅವಿಚ್ಛಿನ್ನತೆ ಅಥವಾ ಅಲಕ್ಷ್ಯದಿಂದ ಸ್ವಯಂಪೂರ್ಣತೆ ಸಾಧಿಸದೆ ಅನ್ಯದೇಶಗಳ ಕಡೆಗೆ ಸಹಾಯಕ್ಕಾಗಿ ದೃಷ್ಟಿಯೆತ್ತುವಿದ್ದರೆ, ಆ ದೇಶವು ಸರ್ವತಂತ್ರ ಸ್ವತಂತ್ರವೆನಿಸಲಾರದು.

ಯಾವ ಸ್ವರಾಜ್ಯದಲ್ಲಿಯಾದರೂ ಪ್ರಜೆಗಳಿಗೆ ಆರೋಗ್ಯಕರವಾಗಿ ಜೀವಿಸಲು ಬೇಕಾಗುವಷ್ಟು ಆಹಾರ ಉಡಲಿಕ್ಕೆ ಬಟ್ಟೆಗಳು, ಇರಲಿಕ್ಕೆ ಮನೆಗಳು ಅನಾರೋಗ್ಯ ವೇಳೆಯಲ್ಲಿ ವೈದ್ಯಕೀಯ ಸಹಾಯ, ಮಕ್ಕಳಾಯವಾಗಿ ವಿದ್ಯಾಭ್ಯಾಸ ಕ ಶಿಕ್ಷಣದ ಅನುಕೂಲತೆ ಮತ್ತು ಇತ್ತ ಇಲ್ಲದಿದ್ದರೆ ಅದು ನಿಜವಾದ ಸ್ವರಾಜ್ಯವಾಗಿರದೆ, ಕೇವಲ

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ. 10,00,000.
ವಸೂಲಾದ ಶೇರು ಮೊಬಲಗು	ರೂ. 1,99,400.
ಕ್ಷೇಮನಿಧಿ	ರೂ. 59,000.
ಇತರ ನಿಧಿಗಳು	ರೂ. 36,000.

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ಪಗಡೆಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಮೂಲಕ ಹಣ ತೆಗೆಯುವ ಖಾತೆಗಳಲ್ಲಿ ಡಿಸ್ಕೌಂಟು ಮಾಡಲ್ಪಡುವುದು. ಫೈನಲ್ ಮತ್ತು ವಾರ್ಷಿಕ ಇನ್ಸೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಜಿ. ಪಿ. ಅಪ್ಪಯ್ಯ, M. L. C.
ಸಾ. ಕಾರ್ಯದರ್ಶಿ. ಪ್ರೆಸಿಡೆಂಟ್ ಮತ್ತು ಮ್ಯಾನೇಜ್.

ದಿ ಟ್ರಾಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:-ಲಾಲ ಶಂಕರ್ ಲಾಲ್.
ಮುಖ್ಯ ಖಚೇರಿ:- ಹೊಸ ಡೆಲ್ಲಿ.
52-12 ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು,	ಎಸ್. ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮಲಖಾನ್.	ಡಾ|| ಎಂ. ಎ. ಅನ್ಸಾರಿ.

Transacts:-Life, Fire, Motor, and Marine.

ಯಂ. ಯು. ಅಚ್ಚಣ್ಣ,	ಎಂ. ಎ. ಬೆಳ್ಳಪ್ಪ,
ಇನ್ಸ್‌ಪೆಕ್ಟರು,	ಬ್ರಾಂಚ್ ಸೆಕ್ರೆಟರಿ,
ಮಡಿಕೇರಿ, ಕೊಡಗು.	ಹಂಪನಕಟ್ಟೆ, ಮಂಗಳೂರು.

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ಸಮ್ಮೆಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245ರ ವರೆಗೆ.
2. 12ನೇ ನಂಬರಿನ ಒಂಟಿ ಹೊಳಪಿನ ಕೋವಿ ಕ್ರಯ ರೂ 320-0-0
3. 12ನೇ ನಂಬರಿನ ಜೋಡು ಹೊಳಪಿನ ಕೋವಿ (Webley & Scott)
4. 12ನೇ ನಂಬರಿನ ಜೋಡು ಹೊಳಪಿನ ಕೋವಿ (Spanish make)
5. .32 ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಗಳೂ ಸಹ ದೊರೆಯುತ್ತವೆ.
6. ಕಾಫಿ ಮತ್ತು ಕೆತ್ತಳೆ ಸಿಡಿಗುಗಳ ಸ್ಪ್ರೇಮಾಡುವ ಪಂಪುಗಳು (Spraying Pumps)
7. ¾" ¾" ¾" ¾" ¾" ಕಬ್ಬಿಣದ ಸಲಾಕೆಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ,
52-44 ಗೌರವ ಕಾರ್ಯದರ್ಶಿ.

Edited, Printed and Published by P. I. Bellappa at 'Kodagu' Press, Mercara, for 'Kodagu' Ltd.

ಅಧಿಕಾರ ಹಸ್ತ ಬಹಳಾವಣೆಯು ರಾಜ್ಯ ವಾದೀತು.

ಮಹಾತ್ಮಾಜಿಯವರಂದಿದ್ದರು:-"ಜೀವ ಕದಲ್ಲಿ ಬಡವ-ಬಲ್ಲಿದರೆಂಬ ಭೇದವಿಲ್ಲದೆ, ಸಕಲ ಜನರಿಗೆ ಬೇಕಾದಷ್ಟು ಆಹಾರ ವಸ್ತ್ರ, ವಸತಿ, ಆರೋಗ್ಯ, ವಿದ್ಯೆ ಮತ್ತು ಉದ್ಯೋಗ, ಮಕ್ಕಳಿಗೆ ಕಡಿಯಲಿಕ್ಕೆ ಹಾಲು, ತರಕಾರಿ ಹಂಬಾಹಂಬಲುಗಳು ದೊರೆಯುವಂತೆ ವಿಧಿಸುವ ಸ್ವರಾಜ್ಯವನ್ನು ಹೊಂದಿ ನೋಡುವುದಕ್ಕಾಗಿ ನಾನು ಬಡಿ ತಿರುವೆನು."

ಸತ್ಯ, ಪ್ರೀತಿ, ಅಹಿಂಸೆ, ಧರ್ಮ, ನೀತಿ, ತ್ಯಾಗ ಮತ್ತು ಪರಮಾತ್ಮನಲ್ಲಿ ಅಚಲ ವಿಶ್ವಾಸವನ್ನುಳ್ಳ ರಾಮರಾಜ್ಯ ಸ್ಥಾಪನೆಯ ಕಲ್ಪನೆಯನ್ನು ನಮಗೆ ತ್ಯಾಜಿ ಅಗಿಂ ತಾಗ್ಗೆ ವಿವರಿಸುತ್ತಿದ್ದರು

ಇಂತಹ ಕಲ್ಪನೆಯು ಸ್ವೇಚ್ಛಾರಿತನ ಮತ್ತು ಸ್ವಾರ್ಥದಿಂದ ಸಿದ್ಧಿಯಾಗಲಾರದು. ಯಾವ ದೇಶದಲ್ಲಿ ಧೈರ್ಯ, ಔದ್ಯೋಗಿಕ, ವಿದ್ಯೆ ಕಲೆ ಮುಂತಾದುವುಗಳನ್ನು ಕಲಿಯುವರೆಗೆ ಯತ್ನಿಸ್ಸ ಧನಸಂಗ್ರಹ ತಯಾರಿಯಿಂದ ಮುಂದೆ ಬರುವ ಯೋಗ್ಯ ವಿದ್ಯಾರ್ಥಿಗಳಿಗೂ ಸೌಕರ್ಯ ಸಿಕ್ಕದೆ ಜಾತಿವಾರಿದ ಮೇಲೆ ಕಟ್ಟುನಿಟ್ಟುಗಳಿಂದ ಧಿಯಂತ್ರಣದ ನಿರ್ಬಂಧನೆ ಇರುವುದೋ,—

ಯಾವ ದೇಶದಲ್ಲಿ ಕಲಿತ ಮತ್ತು ಸಾಮರ್ಥ್ಯವುಳ್ಳ ಜನರಿಗೆ ಯೋಗ್ಯವಾದ ಉದ್ಯೋಗ ದೊರಕದೆ ಇರುವುದೋ—

ಯಾವ ದೇಶದಲ್ಲಿ ಯೋಗ್ಯತೆಗೆ ಪೂರ್ಣ ಮತ್ತು ವೈಜ್ಞಿಕ ದೊರಕದೆ ಜಾತೀಯತೆಯ ಮೇಲೆ ಉದ್ಯೋಗ ಮತ್ತು ಮಾನ ನಿರ್ದಿಷ್ಟವಾಗುವುದೋ,—

ಯಾವ ದೇಶದಲ್ಲಿ ನಿರುದ್ಯೋಗವು ಪೂರ್ಣವಾಗಿ ಅಳಿಸಲ್ಪಡುವುದಲ್ಲವೋ,—

ಯಾವ ದೇಶದಲ್ಲಿ ನಿರಕ್ಷರಕುಕ್ಷಿಗಳ ಮಟ್ಟವನ್ನು ನಿರ್ದಿಷ್ಟ ಸಮಯದೊಳಗೆ ಇಳಿಸಲಿಕ್ಕೆ ಸಾಧ್ಯವಾದ ಕಾರ್ಯಕ್ರಮಗಳು ಜಾರಿ ಇರುವುದಿಲ್ಲವೋ,—

ಯಾವ ದೇಶದಲ್ಲಿ ಜನರ ಸೇವಾರಿತನವನ್ನು ಹೋಗಲಾಡಿಸುವರೆ ಬೇಕಾದ ವಿಧಾನಗಳು ಇರುವುದಿಲ್ಲವೋ,—

ಯಾವ ದೇಶದಲ್ಲಿ ಸಾಕಷ್ಟು ಶಿಕ್ಷಿತ ನೈಪುಣ್ಯವಿಲ್ಲದೆ ಜನತೆಯು ಕಷ್ಟಪಡುತ್ತಾ ಇರುವಾಗ ಮತ್ತು ನೈಪುಣ್ಯವಿಲ್ಲದ್ದಕ್ಕಾಗಿ ಚಿಕಿತ್ಸಾಲಯಗಳನ್ನು ಮುಚ್ಚುವ ಪ್ರಸಂಗ ಇರುವಾಗ, ವೈದ್ಯಕೀಯ ಶಿಕ್ಷಣಕ್ಕಾಗಿ ಹಾತೊರೆಯುವ ಬಡವ ತರುಣೋತ್ಸಾಹಿಗಳಿಗೆ ವೈದ್ಯ ಶಿಕ್ಷಣಾಲಯದ ಪೂರ್ಣ ಬಾಗಿಲು ತೆರೆಯಲ್ಪಡುವುದಿಲ್ಲವೋ,—

ಆ ದೇಶವು ಹೇಗೆ ಉದ್ಧಾರವಾಗಬಹುದು? ಈ ಕುತ್ಸವನ್ನು ಹೋಗಲಾಡಿಸಲು ಜನತೆ ಜಾಗೃತಿಯಾಗಬೇಕು. ಈ ಜಟಿಲ ಸಮಸ್ಯಾ ನಿವಾರಣೆಗೆ ಕ್ರಾಂತಿಕಾರಕ ಕಾರ್ಯಕ್ರಮವು ಕೈಕೊಳ್ಳಬೇಕು

ಪ್ರತಿಯೋರ್ವ ಸ್ತ್ರೀ-ಪುರುಷರು ಸ್ವತಂತ್ರ, ಶಿಲ್ಪದ ಅರ್ಥವನ್ನು ಚೆನ್ನಾಗಿ ಪರಿಣತ ಮಾಡಬೇಕು. ನಮ್ಮಲ್ಲಿ ಜನ್ಮ ಜಾತ್ಯಂತರದಿಂದ ರಕ್ತಗತವಾಗಿರುವ ಕ್ಷುದ್ರ ಜಾತೀಯತೆಯ ಮತ್ತು ಸ್ವಾರ್ಥದ ಸಂಕುಚಿತ ಭಾವನೆಯನ್ನು ಬಿಟ್ಟು ಔದಾರ್ಯ ತ್ಯಾಗಗಳ ಬುದ್ಧಿಯನ್ನು ಬೆಳೆಸಬೇಕು. ಹಿಂದೆ ಸ್ವಾಮಿ ವಿವೇಕಾನಂದರು 'ನಮ್ಮ ದೇಶದ ಜಲವು ಸ್ತ್ರೀ-ಪುರುಷರು ಮೆದುಳುಗಳಿಗೆ ಕರಿಯೂ ತೆಲುಕ ಕೊಡದೆ ಶಕ್ತಿ ಹಿಡಿಯುತ್ತಿದೆ'ಂದು ಹೇಳಿದ್ದರು. ಎಷ್ಟು ನಿಜ! ಪ್ರತಿಯೊಬ್ಬನು ತನಗೆ, ದೇಶಕ್ಕೆ ಮಾಡಬೇಕಾದ ಸಹಾಯಗಳಿರುವಾಗ, ಕರ್ತವ್ಯವಿಮುಖರಾಗಿ ಎಷ್ಟೊಂದು ಸ್ತ್ರೀಯರೂ, ಪುರುಷರೂ, ಹೊತ್ತೇ ಹೋಗಂವುದಿಲ್ಲವೆಂದು ಗೊಣಗುಟ್ಟುತ್ತಾ, ಅಮೂಲ್ಯ ಆಯುಷ್ಯವನ್ನು ವ್ಯರ್ಥಮಾಡುತ್ತಿರುವರು!

ವ್ಯಕ್ತಿಯು ಮೊದಲು ಸ್ವತಂತ್ರ ಜೀವನವನ್ನು ಅನುಭವಿಸಲೇಬೇಕು; ಆಗ, ದೇಶದ ಸ್ವಾತಂತ್ರ್ಯದ ಮಹತ್ವವು ತಿಳಿಯುವುದು. ತನ್ನ ಕೆಲಸಗಳನ್ನು ತಾನೇ ಮಾಡಲು ಕಲಿಯಬೇಕು. ಅನ್ನಕ್ಕಾಗಿ ಪರರೇ ಕಡೆ ಬಾಯಿ ಪಿಡಿಯುವಂತೆ ತಾನೇ ಸ್ವತಃ ತನ್ನವರಿಗಾಗಿ ಎಷ್ಟು ಆಹಾರ ಬೆಳೆಸಿಕೊಳುವೆನು, ಮತ್ತು ಸ್ವಾರ್ಥದ ಬೆಲೆಯನ್ನು ಕೊಡುತ್ತಿರುವೆನು ಎಂಬುದನ್ನು ಹೇಳುವ ರೆಷ್ಟು ಮಂದಿ?

ಜನರಲ್ಲಿ ಜಾಗೃತಿಯ ನ್ಮಂಟುಮಾಡಲು, ಅವರನ್ನು ದೀರ್ಘನಿದ್ದೆಯಿಂದೆಬ್ಬಿಸಿ ಕಾರ್ಯಕ್ಕೆ ಹಚ್ಚುವಂತೆ ಪ್ರೇರೇಪಿಸಲು, ದೇಶಪ್ರೇಮವುಳ್ಳ ಸ್ವಾರ್ಥರಹಿತ, ಅನುಭವಸ್ಥ ಕಾರ್ಯಕರ್ತರ ಮುಂದೆ ಬಂದು ಕಟ್ಟಣದಲ್ಲಿಯ ಮತ್ತು ಪ್ರತಿಗ್ರಾಮದಲ್ಲಿಯು ಪ್ರತಿಯೊಂದು ಮನೆಯನ್ನು ಬಿಡದೆ ಸಂದರ್ಶಿಸಿ; ಅವರನ್ನು ಗೃಹ ಕೈಗಾರಿಕೆಗಳಿಗೆ ಮತ್ತು ತೋಟಗಾರಿಕೆಗೆ ಹಚ್ಚುವಂತೆ ಅವರಲ್ಲಿ ಚಟುವಟಿಕೆಯನ್ನು ಹುಟ್ಟಿಸುವಂತೆ ಬೋಧಿಸಬೇಕು. ಗೃಹ ಕೈಗಾರಿಕೆಗಳನ್ನೂ ತೋಟಗಾರಿಕೆಯನ್ನೂ ಪ್ರತ್ಯಕ್ಷವಾಗಿ ಮಾಡಿ ತೋರಿಸಿ ಅವರಲ್ಲಿ ಉತ್ಸಾಹವನ್ನುಂಟುಮಾಡಬೇಕು; ತಿಳುವಳಿಕೆಯನ್ನು ಹರಡಬೇಕು'

"ರಚನಾತ್ಮಕ ಕಾರ್ಯಕರ್ತರು" ಎಂದೆನಿಸಿಕೊಳ್ಳುವವರು ನಮ್ಮ ಜಿಲ್ಲೆಯಲ್ಲಿ ಇಂತಹ ಕೆಲಸವನ್ನು ಎಲ್ಲಿ ಎಷ್ಟು ಮಾಡಿರುವರು? ನಮ್ಮ ಮುಖಂಡರೆನಿಸಿದವರು ಆಗಾಗ್ಗೆ ಸಭೆಕೂಡಿ ಆಲಂಕಾರದ ತರಾವು ಗಳನ್ನು ಮಾತ್ರ ಮಾಡಿರುವರು ವಿನಾ, ಬೇರೆ ಯಾವ ಮಹತ್ಕಾರ್ಯ ಸಾಧಿಸಿರುವರು ನಮ್ಮಲ್ಲಿ ದೇಶ ಪ್ರೇಮಿಗಳಾದ, ಅನುಭವಿಗಳಾದ ಕಾರ್ಯದುರಂಧರರಾದ ಮುಖಂಡರು ಇರುವರೇ? ಇದ್ದರೆ ನಮ್ಮ ಭಾಗ್ಯ.

ವಿಷ್ಣು ಸಹಾಯ್ ಎಂಬ ಉತ್ಸಾಹೀ ತರುಣನೊಬ್ಬನು ಕೆಲ ತಿಂಗಳ ಹಿಂದೆ, ತಾನು ಭೂಚಿತದ ಪ್ರಧಾನ ಪಂಡಿತ ನೆಹರುವರ ವೈಯಕ್ತಿಕ ಸಿಬ್ಬಂದಿಗೆ ಸೇರಿದವನೆಂದು ನಟಿಸುತ್ತ ಕೃಷಿ ಮಂತ್ರಿ ಮೋಡಲದ ಒರ್ವ ಅಧಿಕಾರಿಗಳ ಕುಟುಂಬಿಯನ್ನು ವಿವಾಹವಾದನು. ಲಗ್ನ ಕಳೆದು ಹೋದನಂತರ ಈ ಮೋಸವು ಬಯಲಾಗಿ ವಿಚಾರಣೆ ನಡೆದು ಆವನಿಗೆ ಎಡು ವರ್ಷ ಕಠಿಣ ಜೆಲ್ ಮತ್ತು ೧೦೦೦ ರೂಪಾಯಿ ಜುಲ್ಮಾನೆ ವಿಧಿಸಲಾಗಿದೆ. ಈ ವಿವಾಹ ಕೂಡಿ ಬರುವಂತೆ ವಿಷ್ಣು ಸಹಾಯಿಗೆ ಸಹಾಯ ಮಾಡಿದವನ ವಿಶ್ವಸ್ತಕೊಬ್ಬನಿಗೂ ಇದೇ ಪ್ರಮಾಣದ ಶಿಕ್ಷೆ ವಿಧಿಸಲ್ಪಟ್ಟಿದೆ.

Licence No. 60.
Licenced to Post without Prepayment

Reg. No. M. 1559.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಬಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. ೬–೦–೦.

ಸಂಪುಟ ೩೦ | ತಾರೀಕು ೨೦–೬–೧೯೬೯ನೇ ಶುಕ್ರವಾರ | ಸಂಚಿಕೆ ೪

॥ ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಅಧಿವೇಶನ ॥

ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ತಾ ೧೫ ರಲ್ಲಿ ಮಧ್ಯಾಹ್ನ ಎರಡು ಘಂಟೆಗೆ ಬೆಂಗಳೂರಿನ ಅಲಂಕೃತ ಗಾಜಿನ ಸ್ಥಭವನದಲ್ಲಿ ಕೂಡಿತ. ಕಾಂಗ್ರೆಸ್ ಅಧ್ಯಕ್ಷರಿಂದ ಪುರಸ್ಕೃತವಾದ ತಾಂಡವ್ ಇವರನ್ನು ಸಭಾಭವನಕ್ಕೆ ವೇದವಿಗೆಯಲ್ಲಿ ಕರೆದೊಯ್ಯಲಾಯಿತ. ಸಭಾ ಭವನದಲ್ಲಿ ಸುಮಾರು ೩೦೦ ಸದಸ್ಯರು ಹಾಗೂ ಇನ್ನೂರು ಪ್ರೇಕ್ಷಕರು ಇದ್ದರು. ಸ್ಥಳದ ಅಭಾವದಿಂದ ಒಳಗಡೆ ಹೋಗದ ನೂರಾರು ಪ್ರೇಕ್ಷಕರ ಹೊರಗಿನಿಂದೆ ನೋಡಿದರು.

ಅಧ್ಯಕ್ಷರ ವ್ಯಾಸಪೀಠದ ಹಿಂದುಗಡೆ, ತ್ರಿವರ್ಣ ಧ್ವಜದಿಂದ ಅಲಂಕರಿಸಲ್ಪಟ್ಟ ತ್ತಲ್ಲದೆ, ಅಕ್ಕ ಪಕ್ಕದಲ್ಲಿ ಮಹಾತ್ಮಾ ಗಾಂಧಿ, ಮುಖ್ಯ ಮಂತ್ರಿ ನೆಹರೂ ಮತ್ತು ದಿವಂಗತ ಸರ್ದಾರ ಪಟೇಲ ಇವರ ಭಾವಚಿತ್ರಗಳಿದ್ದವು.

ಮುಖ್ಯಮಂತ್ರಿ ನೆಹರೂರವರು ಅಗಮಿಸುತ್ತಲೇ ಸಭಿಕರು ಹರ್ಷೋದ್ಗಾರದಿಂದ ಅವರನ್ನು ಸ್ವಾಗತಿಸಿದರು. ವೇದಿಕೆಯ ಮೇಲೆ ನೆಹರೂರವರ ಪಕ್ಕಕ್ಕೆ ತಮಿಳುನಾಡಿನ ಮುಖ್ಯ ಮಂತ್ರಿಗಳಾದ ಶೇಕ ಅಬ್ದುಲ್ಲಾರು ಕುಳಿತುಕೊಂಡಿದ್ದರು.

ಅಧ್ಯಕ್ಷರ ಭಾಷಣ.

ಪುರುಷೋತ್ತಮ ದಾಸ್ ತಾಂಡನ್ನರು ಅಧಿವೇಶನವನ್ನು ಉದ್ಘಾಟಿಸುತ್ತಾ ಹೀಗೆ ಹೇಳಿದರು.

ಮೊನ್ನೆ ಸಿಕ್ಕಿಬಿದ್ದ ಕಳ್ಳಪೇಟೆಯ ಬಟ್ಟೆಯನ್ನು ನಿಯಂತ್ರಣ ಅಧಿಕಾರಿಗಳು ಸಮ್ಮಖದಲ್ಲಿಯೇ ವಿಕ್ರಯಿಸಿದರು. ಪೇಪರುವಾಸಿಗಳಿಗೆ ಕೆಲವರಿಗೆ ಹೊರಲಾರದ ಪಟ್ಟು ಸಿಕ್ಕಿತ. ಸುದ್ದಿಯನ್ನು ಕೇಳಿ ಧಾವಿಸಿ ಬಂದ ನಾಡಿಗರಿಗೆ ಕೂನ್ಯ! ಈ ರೀತಿಯ ಅಧಿಕಾರ ಸಲ್ಲದು.

ಅಧಿಕಾರಿಗಳು ಟೊಂಕಕಟ್ಟಿ ಇಂದಿನಿಂದಲೇ ಹೊರಬೆಟ್ಟಿಲ್ಲಿ ಕಪ್ಪು ಸಂತೆಯನ್ನು ಕಿತ್ತೊಗೆಯುವುದು ಪ್ರಯೋಜವಾಗಲಾರದು. ಮಡಿಕೇರಿ, ವೀರಾಜಪೇಟೆಯಲ್ಲಿ ಕೊಡಗಿಗೆ ಎರಡು ಮೂರು ವರ್ಷಕ್ಕೆ ಸಾಕಾಗುವಷ್ಟು ಬಟ್ಟೆಯು ಕಪ್ಪು ಸಂತೆಗಾಗಿ ಬಚ್ಚಿಟ್ಟಿದ್ದನ್ನು ದೈರ್ಯವಾಗಿ ಕೋಧಿಸಬಹುದು. ಮಡಿಕೇರಿಯ ಅಧಿಕಾರಿಗಳ ಔದ್ಯರ್ಯವಂತರ ಮನೆಯ ತಪಾಸಣೆಯನ್ನು ನಡೆಸಿದರೆ ಗಾಡಿಗಟ್ಟಿ ಬತ್ತ ದೊರಕಬಹುದಲ್ಲವೆ? ರೇಷನ್ ಅಧಿಕಾರಿಗಳು 'ಪ್ಲೋಕ್ಕೂರ್ ಮೆಂಟ್' ಪಾರಿತೋಷಕವನ್ನು ಪಡೆಯಲು ಕ್ರೂರ ಮನೋಭಾವನೆಯಿಂದ ವರ್ತಿಸಿ ನಾಡಿನ ಜನತೆಯು ಇಂದಿನ ದುಸ್ಥಿತಿಗೆ ಕಾರಣರೂ. ಇವರು ನಾಡಿನಲ್ಲಿ ಉಳುವಷ್ಟು ಭತ್ತವಿರುವ ಪ್ರತಿಯೊಬ್ಬರ ಮನೆಯನ್ನು ಪರಿಶೀಲಿಸದೆ ಅಲ್ಲಲ್ಲಿ ಅವರ 'ಲೈಬಿಸ್' ಮೂಡಿದವರಲ್ಲಿಗೆ ಹೆಜ್ಜೆಯನ್ನಿಡಲಿಲ್ಲವೆಂದರೆ ನೋಂದವರು ತಮ್ಮ ವೇದನೆಯನ್ನು ಯಾರಲ್ಲಿ ನಿವೇದಿಸುವುದು? ತಮ್ಮ ಅಧಿಕಾರಿಗಳು ಲೋಕ ಹಿತ ಚಿಂತನೆಯನ್ನೆರಿಕು ಸಮಕಾಲ ದೃಷ್ಟಿಯಿಂದ ಅಧಿಕಾರವಶ್ಯನ್ನು ವಿನಿಯೋಗಿಸಬಾರದೇ?

'ಶ್ರೀನಿವಾಸ'

ಪ್ರಯೋಣಿಕರ ಸೌಕರ್ಯ.

ಸೋಮವಾರಪೇಟೆಯಿಂದ ಮಡಿಕೇರಿ ಕಡೆ ಹೋಗುವವರಿಗೆ ಎಲ್ಲಾ ಸೌಕರ್ಯಗಳವೆ. ಆದರೆ ಸೋಮವಾರಪೇಟೆಯಿಂದ ಉತ್ತರಕ್ಕೆ ಹೋಗುವವರಿಗೆ ಅಷ್ಟು ಸೌಕರ್ಯಗಳಿಲ್ಲ. ಇದಕ್ಕೆ ಸಂಬಂಧಪಟ್ಟ ಬಸ್ ಮಾಲೀಕರಲ್ಲೂ ಮತ್ತು ಉದ್ಯೋಗಸ್ಥರಲ್ಲೂ ಒಂದು ಕೋರಿಕೆ ಏನೆಂದರೆ—ಸೋಮವಾರಪೇಟೆಯಿಂದ ಉತ್ತರಕ್ಕೆ ವ್ಯಾಪಾರಕ್ಕಾಗಿಯೂ ಉದ್ಯೋಗಸ್ಥರಿಗೂ ಮೊದಲು ಸಿಕ್ಕುವ ಬಸ್ಸು ಮಡಿಕೇರಿಯಿಂದ ಬಂದು ಮೈಪಡಕ್ಕೆ ಹೋಗುವ ೧೦-೩೦ ಗಂಟೆಯದ್ದು! ಕೊಡ್ಲಿಪೇಟೆಯಿಂದ ಹಿಂದಕ್ಕೆ ಬರುವ ಕಡೇ ಬಸ್ಸು ಸಂಜೆ ೪ ಗಂಟೆಗೆ. ಇಷ್ಟೊಂದು ಸಮಯದಲ್ಲಿ ಶನಿವಾರದಂದು ಕೂಡ್ಲಿಪೇಟೆಯಲ್ಲಿ ಹೆಚ್ಚು ಕೆಲಸ ಮಾಡಲಾಗುವದಿಲ್ಲ. ಇಲ್ಲವಾದರೆ ಇನ್ನೊಂದು ದಿವಸ ಉಳಿಯಬೇಕಾಗುವುದು—ಇದರಿಂದ ಹಣ ವ್ಯಯ-ಸಮಯ ಹಾಳು! ಅದುದರಿಂದ ದಯವಿಟ್ಟು ಸೋಮವಾರಪೇಟೆಯಿಂದ ಬೆಳಿಗ್ಗೆ ೨ಳಿಂ ಗಂಟೆಗೆ ಹೋಗಿ ಸಾಯಂಕಾಲ ೨ಳು ಗಂಟೆಗೆ ವಾಪಾಸು ಬರುವಂತೆ ಒಂದು ಬೈಸು ವಿಶ್ವಡಿಸಿದರೆ ಸಮ್ಮಂದ ಪಟ್ಟವರಿಗೆಲ್ಲಾ ಸೋಮವಾರಪೇಟೆಯ ಪರು ಚೆಂಜು.ಡೆಯೊಗುವೆವು.

"ಸರಸ್ವತಿ"

ಮಲೇರಿಯಾ ಕಾಯಿಲೆ

ಕೊಡಗಿನಲ್ಲಿ ಈ ಕಾಯಿ ತೆಯು ಕಮ್ಮಿಯಾಗಿದೆ. ಆದರೆ ನಾಪೋಕ್ಲುವಲ್ಲಿ ಇದು ಕಮ್ಮಿಯಾದಂತೆ ತೋರುವುದಿಲ್ಲ ಇಲ್ಲಿ ಒಬ್ಬ ವೈದ್ಯರೂ ಮಂಜ್ಯ ಆಧಿಕಾರಿಯವರೂ ತಾವು ಮಾಡಬೇಕಾದ ಕೆಲಸವನ್ನು ಬಿಟ್ಟು ಟೌನಿನಲ್ಲಿ ಕೆಲವು ದೇಡದ ಕೆಲಸವನ್ನು ಮಾಡುತ್ತಿರುವರು! ಅವರು ಆ ವಿಷಯದಲ್ಲಿ ಗಮನ ಕೊಡಿಯುವುದಿಲ್ಲವೆಂಬುದಕ್ಕೆ ಒಂದು ಕಾರಣ ಕೊಡುತ್ತೇನೆ ಏನೆಂದರೆ ಅವರ ಮನೆಯ ಮುಂದುಗಡೆ ಒಂದು ಕೆಸರು ಗುಂಡಿ ಆದೆ. ಇದರಲ್ಲಿ ಹಲವಾರು ಹಂದಿಗಳು ಸುಖ ಶಿತ್ಯ ಮಲಗಿರುವವು. ಮತ್ತು ಅಲ್ಲಿ ಲಕ್ಷಾಂತರ ಸೊಳ್ಳೆಗಳು ಹುಟ್ಟುತ್ತಿರುವವು. ಇದನ್ನು ಸರಿಪಡಿಸುವದು ಅವರ ಕರ್ತವ್ಯವಲ್ಲವೇ? ಕಣ್ಣೆದುರಿಗಿರುವ ಈ ವಿಚಾರವನ್ನೇ ನೋಡದವರು ಗ್ರಾಮಗಳಲ್ಲಿ ಏನು ಮಾಡಬಹುದು? ಇವರು ಇನ್ನು ಮುಂದಕ್ಕಾದರೂ ತಮ್ಮ ಅಡ್ಡ ತಾಪತ್ರೆಯನ್ನು ಬದಿಗೊತ್ತು ವಂತೆ ಭಗವಂತನು ಇವರಿಗೆ ವಿವೇಕವನ್ನು ಕೊಡಲಿ,

ಇವರಿಗೆ ಮೇಲಿನ ಅಧಿಕಾರಿಗಳ ಭಯವಿಲ್ಲ ಏಕೆಂದರೆ ನಾಪೋಕ್ಲಿನ ಸುತ್ತಲೂ ನಡಿಗಳರುವುದರಿಂದ ಯಾರೂ ಬರಲಾರರು!

ರಾಜ.

ಗಾಡಿಗೆ ಆರು ರೂಪಾಯಿ ಹೆಚ್ಚಿಗೆ!

ಗಾಡಿಗೆ ೬ ರೂಪಾಯಿ ಇಂಡಿಯಾ ಸರಕಾರದವರು ಹೆಚ್ಚಿಗೆ ಮಂಜೂರು ಮಾಡಿದ್ದಾರೆಂದು ಕೆಲವು ಮಂಡಿಯವರು ಧಾನ್ಯಗಳಿಂದಲೂ ಪತ್ರಿಕೆಗಳಿಂದಲೂ ತಿಳಿದು ನಷ್ಟಂಥ ಬಡ ರೈತರು ಆಡನ್ನು ಸ್ವಲ್ಪ ದಿವಸಗಳ ಸಂತೆ ಖರ್ಚಿಗೆ ಉಪಯೋಗಿಸಬಹುದೋ ಎಂಬ ಆಶಯದಲ್ಲಿದ್ದೆವು ಆದರೆ ಈ ಹೆಚ್ಚಿಗೆ ಬಂದ ರೂಪಾಯಿ ಯಾರಿಗೂ ದೊರೆತ ಸುದ್ದಿ ಕೇಳಿ ಬಂದಿಲ್ಲ. ಅದುದರಿಂದ ದಯವಿಟ್ಟು ಈ ರೂ. ೬ ಏನಾಯಿತ್ತೆಂಬದನ್ನು ಸರಕಾರದವರು ಬಡ ರೈತರಿಗೆ ವಿವರವಾಗಿ ತಿಳಿಸಬೇಕಾಗಿ ಪ್ರಾರ್ಥನೆ.

ಬಡರೈತ.

ನಾಪೋಕ್ಲು ಶಾಲಾ ವಿದ್ಯಾರ್ಥಿ ವಸತಿಗೃಹ

'ಕೊಡಗು' ಪತ್ರಿಕೆಯಲ್ಲಿ ನಾಪೋಕ್ಲು ಶಾಲಾ ವಿದ್ಯಾರ್ಥಿ ವಸತಿಗೃಹದ ಪಾರುಪತ್ಯೆಗಾರರ ಮೇಲೆ ಬರೆದ ಪತ್ರವನ್ನು ಓದಿದೆವು. ಇದನ್ನು ಯಾರು ಬರೆದರೊ ತಿಳಿಯದು. ಆದರೆ ಬರೆದದ್ದು ಸಾಧಾರಣ ಸತ್ಯವೆಂದೇ ಹೇಳಬೇಕಾಗಿದೆ. ಏಕೆಂದರೆ ಪಾರುಪತ್ಯೆಗಾರರ ಕಿರುಬಾಳಿಕೆ ಕರಿಣಾತ್ಮಕ ಹೇಳಿಬಿಟ್ಟರೆ ಅವರು ಮಾಡುವ ಕೆಲಸ ಪೂರ್ತಿ ಹೇಳಿದಂತೆ ಆಗುವುದಿಲ್ಲ

ಅವರು ಮಾಡುವ ಕೆಲಸ ಬೇರೆ ಯಾರೂ ಮಾಡಲಿಕ್ಕಿಲ್ಲವೆಂದೇ ಹೇಳಬಹುದು. ವಾಡಿಕೆಯಂತೆ ಬೋರ್ಡಿಂಗಿನಲ್ಲಿ ಯಾರೂ ಇರಲು ಒಪ್ಪುವುದಿಲ್ಲ ಯಾಕೆಂದರೆ ಮಕ್ಕಳನ್ನು, ವಿದ್ಯಾರ್ಥಿಕಾರಿಗಳಷ್ಟೆ ತೃಪ್ತಿ ಪಡಿಸಲು ಸಾಧ್ಯವಾಗುವುದಿಲ್ಲ. ಆದರೆ ಇವರು ದಿನದ ೨೪ ಗಂಟೆಗಳೂ ಮಕ್ಕಳೊಡನೇ ಇದ್ದು ಪ್ರತಿಯೊಬ್ಬನ ಮೂಡುವ ಪ್ರಶ್ನೆ ಕೇಡು ಹಿಡಿದು ತಿದ್ದಿ ಅವರ ತಂದೆ ತಾಯಂದಿರಿಗೆ ತೀರಿ ಮಕ್ಕಳನ್ನು ಒಳ್ಳೆ ರೀತಿಗೆ ತರಲು ಪ್ರಯತ್ನಿಸುತ್ತಾರೆ. ಅಲ್ಲದೆ ಅವರು ಸಾಧಾರಣ ೧೫೫ ದಿನಗಳ ಗೊಮ್ಮೆ ಸಹ ಹಬ್ಬಕ್ಕೆ ಹೋಗುವುದಿಲ್ಲ. ದಿನಪೂರ ತಿಂಡಿಗೆ ಇರುವ ಸಾಮಾನುಗಳನ್ನು ಕೊಳ್ಳುವುದು, ಅವುಗಳನ್ನು ಬೇಗ ಹಾಕಿ ಇಟ್ಟುಕೊಳ್ಳುವುದು ಆ ಸಮಯಕ್ಕೆ ಸರಿಯಾಗಿ ಅವುಗಳನ್ನು ಅಡಿಗೆಯವನಿಗೆ ಕೊಡುವುದು. ಹೆಚ್ಚು ಕಡಿಮೆಯಾಗದಂತೆ ನೋಡಿಕೊಳ್ಳುವುದು, ಮಕ್ಕಳ ಹೊತೆಯಲ್ಲೇ ಊಟಮಾಡುವುದು ಅವರು ಚಲ್ಲಿ ಹಾಳುಮಾಡದಂತೆ ನೋಡಿಕೊಳ್ಳುವುದು, ಅವರ ಜೊತೆಯಲ್ಲೇ ಓದುವುದು ಮಗೇರೆ ಕೆಲಸಗಳನ್ನು ಮಾಡುತ್ತಾರೆ. ಬೇರೆ ಕಡೆ ಪಾರುಪತ್ಯೆಗಾರರೂ ಪ್ರಿಫೆಂಟ್ ಮಾಸ್ಟರು ಮಾಡುವ ಕೆಲಸಗಳಿಗಿಂತ ಹೆಚ್ಚು. ಇವರು ಒಬ್ಬರೇ ಮಾಡುತ್ತಾರೆ. ಆದುದರಿಂದ ಆ ವಸತಿಗೃಹದಲ್ಲಿರುವ ತಿಂಡಿ ಮತ್ತು ಕಡಿಮೆ ಖರ್ಚು ಬೇರೆ ಎಲ್ಲಿಯೂ ಇಲ್ಲವೆಂದು ಖಂಡಿತಾ ಹೇಳಬಹುದು.

ಇಷ್ಟೆಲ್ಲಾ ಕೆಲಸ ಮಾಡಿದರೂ ಸಹ ಅವರು ಕಾಸಿಸ ಪರಿಹಾರ ತೆಗೆದುಕೊಳ್ಳುವುದಿಲ್ಲ ಹೀಗೆ ಯಾರು ಮಾಡಿಯಾರೆಂದು ಕೇಳಬೇಕಾಗಿದೆ. ಹಿಂದಿನ ಭಾಗ ಬರೆದವರು ಅದಕ್ಕೆ ಜವಾಬು ಕೊಡಬೇಕಾಗಿದೆ.

ಹೀಗೆ ಮಾಡಿದರೂ ಮಕ್ಕಳ ಪ್ರಯೋಜನಕ್ಕಲ್ಲದೆ ತನ್ನ ಸ್ವಾರ್ಥಕ್ಕಾಗಿ ಯಾರಾದರೂ ಮಾಡುತ್ತಾರೋ ಎಂಬುದನ್ನು ಯೋಚಿಸಬೇಕಾಗಿದೆ. ಎಲ್ಲರಲ್ಲಿಯೂ ಏನಾದರೂ ತಪ್ಪುಗಳಿರಬಹುದು ಆದರೆ ಅವರ ಒಳ್ಳೆ ವಿಷಯ ಏನೂ ಹೇಳದೆ ಬರೆ ತಪ್ಪನ್ನೇ ಎತ್ತಿ ಬರೆಯುವುದು ಎಂದೂ ಸರಿಯಲ್ಲ.

'ಅಧಿವಾಸಿ'

ನಾಪೋಕ್ಲಿಗೆ 'ಕೊಡಗು' ಪತ್ರಿಕೆಯ ವಿಜೆಂಟರು

ಶ್ರೀ ಚೋಕಿರ ಮೊಣ್ಣಪ್ಪನವರು

ಕೊಡಗು

ತಾ. ೭-೯-೧೯೪೧ನೇ ಶುಕ್ರವಾರ

ಉಮೇದುವಾರರ ಆಯ್ಕೆ.

ಸಾರ್ವತ್ರಿಕ ಚುನಾವಣೆಯು ಬರುವ ಜನವರಿ ತಿಂಗಳಲ್ಲಿ ನಡೆಯಬಹುದು. ಆ ಚುನಾವಣೆಗೆ ನಿಶ್ಚಿತವಾ ಉಮೇದುವಾರರು ತಮ್ಮ ಪ್ರಾತಿನಿಧ್ಯವನ್ನು ತಮಗೆ ಸಂಬಂಧಿಸಿದ ಪ್ರಾಂತೀಯ ಕಾಂಗ್ರೆಸ್ ಖಜೇರಿಗೆ ತಾ. ೧೫ ರೊಳಗೆ ಕಳುಹಿಸಬೇಕಾಗಿದೆ. ಪತ್ರಿಕೆಗಳನ್ನು ಓದುತ್ತಿರುವವರಿಗೆ ಕಾಂಗ್ರೆಸ್ ಟಿಕೇಟು ಯಾವ ರೀತಿ ಮಾರಾಟವಾಗುತ್ತಿದೆಯೆಂಬುದರ ಅರಿವಾಗಿರಬಹುದು. ಕಪ್ಪು ಸಂತೆಯ ವ್ಯಾಪಾರಿಯೊಬ್ಬರು ಕಾಂಗ್ರೆಸ್ ಚುನಾವಣಾ ನಿಧಿಗೆ ಐದು ಲಕ್ಷ ಹಣ ಕೊಟ್ಟು ಪಾರ್ಲಿಮೆಂಟಿಗೆ ಕಾಂಗ್ರೆಸ್ಸಿನ ಹೆಸರಿನಲ್ಲಿ ನಿಲ್ಲುವ ಆನು ದೇಡಿರುವರೆಂದೆ! ಬ್ರಿಟಿಷ್ ಕಾಲದ 'ಡ್ಯೂಕ್ ಹೊರ್ಸ್‌ಗೂರ್' ಒಬ್ಬನು ಕಾಂಗ್ರೆಸ್ ನಿಧಿಗೆ ಒಂದು ಲಕ್ಷ ಕೊಟ್ಟು ಪಾರ್ಲಿಮೆಂಟಿನ ಉಮೇದುವಾರಿಕೆ ಅಪೇಕ್ಷಿಸಿರುವನಂತೆ 'ಡ್ಯೂಕ್ ಹೊರ್ಸ್‌ಗೂರ್'ರ ಪುಗ ಸಂ.೦೦೦ ಕೊಟ್ಟ ಪ್ರಾಂತೀಕ ಶಾಸನ ಸಭೆಯ ಸ್ಥಳ ಕೇಳಿರುವನಂತೆ! ಈ ವಾರ್ತೆಗಳು ನಿಜವಾದರೆ ಕಾಂಗ್ರೆಸು ಹೂವ ರೀತಿ ಕೆಳನುಟ್ಟಿಕ್ಕಿಳಿದಿದೆಯೆಂಬುದನ್ನು ಬೇರೆ ಹೇಳಲಾ ಅವಶ್ಯಕತೆ ಇಲ್ಲ. ಈ ಪೀಠಿಯಲ್ಲಿ ಪ್ರ. ಜಾಪ್ರಭುತ್ವತ್ವವಿಲ್ಲ. ಇಲ್ಲಿ ತತ್ವಸಿದ್ಧಾಂತಗಳಿಗೆಡೆಯಿಲ್ಲ. ಈ ಬಂಗಾರವ ನೀತಿಯಿಂದ ಕಾಂಗ್ರೆಸ್ ಟಿಕೇಟನ್ನು ಕೊಡುವ ಸಂಸ್ಥೆಯು, ಹೆಚ್ಚಾಗಿ ಕಾಂಗ್ರೆಸಿಲ್ಲಿ ಸಂಬಿಕೆ ಇರುವ ಸಾಮಾನ್ಯ ಜನತೆಯಿಂದ ದೂರವಿಸ್ಸ ಮೂಡುತ್ತಿದೆಯೆಂದರೆ ಅತ್ಯುಕ್ತಿಯಾಗದು. ಇಷ್ಟು ಕೊಡಗಿನ ಹೊರಗಿನ ಒಂದು ಉದಾಹರಣೆಯಾದರೂ ಕಾಂಗ್ರೆಸ್ ಸಂಸ್ಥೆಯಲ್ಲಿ ದುಡ್ಡಿರುವವರಿಗೇ ಸ್ಥಾನವೆಂಬುದನ್ನು ಇಲ್ಲಿತ್ತು ನೀತಿಯಾ ಸ್ಪಷ್ಟಪಡಿಸುತ್ತ ತೆ. ಕಾಂಗ್ರೆಸ್‌ವತಿಯಿಂದ ಪ್ರಾಂತೀಕ ಸಭೆಗೆ ಉಮೇದುವಾರರಾಗಲಿಚ್ಛಿಸುವವರೇ ನೇವಕ ಪತ್ರದೊಡನೆ ರೂ. ೧೫೦|- ಶುಲ್ಕ ಹಾಗೂ ೨೦೦|- ಪ್ರಚಾರ ಧನ ಕೊಡಬೇಕೆಂದು ನಿಯಮ ಗೂಡಿರುವಹಾದರೂ ಪ್ರಜಾ ತತ್ವಕ್ಕೆ ವಿರುದ್ಧವಾದುದು! ಇಷ್ಟು ಹಣ ಕೊಡಲಾರದ ವ್ಯಕ್ತಿಯು ಅಪ್ಪಿತ್ತೇ ಅತ್ಯುತ್ತಮ ಕಾಂಗ್ರೆಸ್ಸಿಗನಾಗಿರಲೀ, ಎತ್ತೇ ಜನಹಿತ ಕೆಲಸಗಾರನಾಗಿರಲೀ ಆತನಿಗೆ ಕಾಂಗ್ರೆಸ್ ಉಮೇದುವಾರಿಕೆಯಾಗುವ ಅರ್ಹತೆ ಇಲ್ಲವೆಂದಾಯಿತು. ಳೆಪ್ಪಸಂತೆ, ತಾಳಿಬಡಕತನದಿಂದ ಪಿ ಧಿಪ್ಪಗಳಿಸಿದವರೂ, ಖಾದಿ ಟೊಪ್ಪಿಹಾಕಿ ಜನಸೇವಕರೆನ್ನಿಸುವವರೂ ಕಾಂಗ್ರೆಸ್ ಟಿಕೇಟು ಪಡೆಯಲು ಶಕ್ತರಾಗುವರೇ ವಿನಾ ಪುಡ್ಡಿಲ್ಲದ ವಿಸ್ವಾರ್ಥ ಸೇವಕರಲ್ಲ. ೩೦ ಧಾ ಜನರಿಂದ ರಚಿಸಲಾಗುವ ಶಾಸನ ಸಭೆಯಲ್ಲಿ ಯಾವ ಪ್ರಜಾಪ್ರಭುತ್ವ ತತ್ವ ಜಾರಿಯಲ್ಲಿ ಬಂದೀತು? ಅಂಥಾ ಹುಡ್ಡಿನ ಕಳಪೆಯಲ್ಲಿ ರಚಿಸಲಾದ ಸಭೆಯಿಂದ ಬಡ ರೈತನ ಹಿತವೇತಾದೀತು? ಕಾಂಗ್ರೆಸು ಬಂಡವಳ ದಾರರ ಸಂಸ್ಥೆಯೇಂಬ ಒಂದು ಹೊತು ಹಲವೆಡೆಯಿಂದ ಕೇಳಿಬರುತ್ತಿದೆ ಇಂದಿನ ಅದರ ಈ ನೀತಿಯು ಆ ಮಾತನ್ನು ಸಮರ್ಥಿಸುವಂತಿದೆ! ಏನೇ ಆದರೂ ಕಾಂಗ್ರೆಸು ನಿಜವಾದ ಜನಸೇವಕರನ್ನೂ, ಕಾಂಗ್ರೆಸ್ ತತ್ವದಲ್ಲಿ ವಿಶ್ವಾಸವಿರುವವರನ್ನೂ ಆರಿಸಿ ದೇಶದ ಚಿತವನ್ನು ಕಾಯಲಿ.

ದಿವಂಗತ ಪುಷ್ಪಣ್ಣನವರು.

ಕೊಡಗು ಪ್ರತ್ಯೇಕ ಪತ್ತದ ಪಮಂಹಾಳುಗಳೂ, ಕೊಡಗು ಸಹಕಾರ ಬ್ಯಾಂಕಿನ ಪ್ರೈಕೆಕ್ಟರರೂ, ಕೊಡಗು ಕಂಪೆನಿಯ ಪ್ರೈಕೆಕ್ಟರರೂ, ಮತ್ತು ಸಹಕಾರ ಚಳವಳದ ಒಬ್ಬ ನುರಿತ ಕಾರ್ಯಕರ್ತರೂ ಆಗಿದ್ದ ಶನಿವಾರಸಂತೆಯ ಶ್ರೀ. ಎಚ್. ತಿಂ. ಪುಷ್ಪಣ್ಣನವರು ತಾರೀಕು ೨ ರಲ್ಲಿ ಮಂದಿ ಕೇರಿ ಆಸ್ಪತ್ರೆಯಲ್ಲಿ ಶಿವಾಧೀನರಾದರು. ತ್ರೀಯುತರ ಅಕಾಲ ಮರಣವು ಹಲವು ದಿನಗಳಿಂದ ಚೆನ್ನಾಗಿಯಿದ್ದರೂ ಅದನ್ನು ಲೆಕ್ಕಿಸದೆ ತಮ್ಮ ಕಡೆಯ ಉಸಿರಿನ ತನಕ ಸಾರ್ವಜನಿಕ ಸೇವೆ ಮಾಡಿದ್ದಾರೆ ಅವರು ಇತ್ತೀಚೆಗೆ ರತಪ್ಯರ್ಯತ್ತದಿಂದ ಶನಿವಾರ ಸಂತೆಯಲ್ಲಿ ತೆರೆಸಿದ ಭವ್ಯವಾಗ ಸಹಕಾರ ಭವನವು ಅವರ ಕರ್ತೃತ್ವಶಕ್ತಿಗೆ ಕಳಷ ಪ್ರಾಯವಾಗಿದೆ. ತ್ರೀಯುತರು, ಕೊಡಗು ಜಿಲ್ಲಾ ಬೋರ್ಡಿನ ಹಾಗೂ ಶಾಸನ ಸಭೆಯ ಸದಸ್ಯರಾಗಿಯೂ ಕೆಲಸ ಮಾಡಿದವರು. ಇವರ ನಿಧನದಿಂದ ಕೊಡಗಿಗೆ ತುಂಬಾ ಹಾನಿಯಾಗಿದೆ. ಕೊಡಗು ಪ್ರತ್ಯೇಕ ಪತ್ತವು ಒಬ್ಬ ಯೋಗ್ಯ ಕಾರ್ಯಕರ್ತನನ್ನೂ, ಕೊಡಗಿನ ಸಹಕಾರ ಚಳವಳವು ಜ್ಞಾನಿಷ್ಠ ಸಹಕಾರಿಯೊಬ್ಬ ಪಪ್ಪೂ ಕಳಕೊಂಡವು. ಇವರ ಆತ್ಮಕ್ಕೆ ಚಿರಂತನ ಶಾಂತಿಯನ್ನೂ ಇವರ ಕುಟುಂಬಕ್ಕೆ ದುಃಖಪರಿಹಾರಶಕ್ತಿಯನ್ನೂ ಭಗವಂತನು ಕೊಡಲೆಂದು ಪ್ರಾರ್ಥಿಸುವೆವು.

ವರ್ತಮಾನ.

ಕೊಡವ ವಿದ್ಯಾನಿಧಿಯ ವಾರ್ಷಿಕ ಮಹಾಸಭೆಯು ತಾ. ೧೬-೯-೪೧ ರಲ್ಲಿ ಬೆಳಿಗ್ಗೆ ೧೧ ಗಂಟೆಗೆ ಮಡಿಕೇರಿ ಕೊಡವ ಸಮಾಜ ಕಟ್ಟಡದಲ್ಲಿ ನಡೆಯುವದು.

ಮಡಿಕೇರಿ ಮಿಡಲ್ ಸ್ಕೂಲಿನಲ್ಲಿ ಶರಬೇತು ಹೊಂದುತ್ತಿದ್ದ ಶ್ರೀ. ಚೆಕ್ಕೆರ ಗಣಪತಿಯವರಿಗೆ ಆ ಶಾಲೆಯ ಪತ್ರಿಕೆಯ ವಾರ್ಷಿಕ ಸಂಚಿಕೆಯಲ್ಲಿ ಗಣಿಗನೇ ಸಾಲಿನ ಉತ್ತಮವಾದ ಚಿತ್ರಕಥೆಗಾಗಿ ಒಂದು ಚಿನ್ನದ ಮೆಡಲನ್ನು ವೆಟರ್ನರಿ ಅಸೋಸಿಯೇಷನ್ ಸಂಘದವರು ಕೊಟ್ಟಿರುವರು.

ಕೇಂದ್ರದಿಂದ ಲಭ್ಯವಾಗುವ ಪ್ರಾಂತಗಳಿಂದ ದೇಶಾಡಿನಿನ ಪಿನ್ಸ್ ಆಫ್ ವೇಲ್ಸ್ ವಿಲಿಟರಿ ಕಾಲೇಜಿನಲ್ಲಿ ವ್ಯಾಸಂಗ ಮಾಡುವ ಇಬ್ಬರು ಯೋಗ್ಯ ವಿದ್ಯಾರ್ಥಿಗಳಿಗೆ ಹಾರ್ಷಿಕ ೧೫೦೦ ರೂಪಾಯಿಗಳಿಗೆ ವಿಂಗಡ ಎರಡು ವಿದ್ಯಾರ್ಥಿವೇತನಗಳನ್ನು ಪ್ರತಿ ವರ್ಷ ಕೊಡಲಾಗುವದೆಂದೂ ಹೆಚ್ಚಿನ ಮಾಹಿತಿಗೆ ಅಹೂ ಪ್ರಾಂತಗಳ ಚೀಫ್ ಕಮಿಷನರಿಗೆ ಬರೆದುಕೊಳ್ಳಬೇಕೆಂದೂ ತಿಳಿಸುತ್ತಾರೆ.

ಮಹಾತ್ಮಾ ಗಾಂಧಿಯವರ ಜೀವರು ಮತ್ತು ಚಿತ್ರಗಳನ್ನು 'ಟ್ರೇಡ್ ಮಾರ್ಕ್' ಗಳಾಗಿ ಇಟ್ಟುಗೊಳ್ಳಲೇ ಬೇರೆ ವ್ಯಾಪಾರದ ಕಾರ ಣಗಳಿಗಾಗಿ ಉಪಯೋಗಿಸುವದು ೧೯೦೦ ಎಂಬ್ಲೆಮ್ಸ್ ಮತ್ತು ನೇಮ್ಸ್ ಆಕ್ಟಿಗೆ ವಿರೋಧವಿದ್ದು ಸರಕಾರವು ಆ ಬಗ್ಗೆ ಕ್ರಮ ಕೈಗೊಳ್ಳಬಹುದಾದರೂ ಸಾರ್ವಜನಿಕರು ರಾಜ್ಯಪಿತನ ಹೆಸರಿನ ದುರುಪಯೋಗದ ಬಗ್ಗೆ ಸರಕಾರವು ಕಾರ್ಯಕ್ರಮ ಕೈಕೊಳ್ಳುವ ಅನುಮಾನದ ಸಾರ್ವಜನಿಕರು ಸಹಕರಿಸಬೇಕಾಗಿಯೂ ಹಾಗೆ ರಾಷ್ಟ್ರಪಿತನ ಹೆಸರನ್ನು ದುರುಪಯೋಗಗೊಳಿಸುವವರ ಹೆಸರನ್ನು ಸರಕಾರದ ಅವಗಾಹನೆಗೆ ತರಬೇಕಾಗಿಯೂ ಕೇಳಿಕೊಂಡಿದೆ.

ಅಮಿಲ ಕೊಡಗು ನಾಪ ಜನಿಕರಿಗಾಗಿ ಹಾತ್ಮಾನಿನ ಶ್ರೀ. ಎಚ್. ಬಿ. ಪಿದ್ದೈಯ್ಯನವರು ಇಟ್ಟ ಹಾಕಿ ಪಂದ್ಯಾವಳಿಯ ಟ್ಟಿಲಿನ ಈ ವರ್ಷದ ಪಂದ್ಯಾವಳಿಯನ್ನು ತಾ. ೨೪-೯-೪೧ ರಿಂದ ಪಡೆಗೊಂಡುವುದು.

ಅಮೇರಿಕಾದ ಸಂಘರ್ಷಕ್ಕೆ ವ್ಯಸಾಯ ಕ್ರಮವನ್ನು ನೋಡಲು ಅಮೇರಿಕಾ ಸರಕಾರದವರು ಭಾರತದಿಂದ ಸುಮಾರು ೪೦ ಜನರನ್ನು ಅಮೇರಿಕಾಕ್ಕೆ ಆಮ್ಹಾನಿಸಿರುವರೆಂದೂ, ಅವರ ಪೈಕಿ ಶ್ರೀ ಅಪ್ಪಾರಂಡ ತಿಮ್ಮಯ್ಯನವರೊಬ್ಬರೆಂದೂ ಇವರು ಈ ತಿಂಗಳ ೨೦ ರ ಸುಮಾರು ಮೂರು ತಿಂಗಳಗಳ ವರೆಗೆಂದೂ ತಿಳಿದು ಬಂದಿದೆ.

ಕೊಡಗು ಸರಕಾರಿ ಕಾಲೇಜಿನ ಕರ್ನಾಟಕ ಸಂಘದ ಉದ್ಘಾಟನಾ ಸಮಾರಂಭದ ಸಂದರ್ಭದಲ್ಲಿ ಶ್ರೀ. ಬಿ ಎಸ್. ಕುಶಾಲಪ್ಪನವರ ಅಧ್ಯಕ್ಷತೆಯಲ್ಲಿ ನಡಂಗಳಾದ ಸರ್ವೋದಯ ಪತ್ರಿಕೆಯ ಸಂಪಾದಕರಾದ ಶ್ರೀ. ಎನ್. ಎಸ್. ಕಿಲ್ಲೆಯವರು 'ಮಹಾಭಾರತದ ವೀರರು' ವಿಷಯವಾಗಿ ಭಾಷಣ ಮಾಡಿದರು.

ಜೈಲಿನಿಂದ ತಪ್ಪಿಸಿಕೊಂಡು ಓಡಿ ಹೋಗಿದ್ದ ಕಣಿಯೂರ ಚಂದ ಎಂಬವನನ್ನು ಕಾನೂರು ಗ್ರಾಮದಲ್ಲಿ ಕೆಲವು ಪೂಪಿಳೆಗಳು ಹಿಡಿದು ಪೊಲೀಸರ ಸ್ವಾಧೀನಕ್ಕೆ ಕೊಟ್ಟಿರುವರೆಂದು ತಿಳಿಯಬರುತ್ತದೆ.

ಮಡಿಕೇರಿ ಮುನ್ಸಿಪಾಲಿಟಿಯಲ್ಲಿ ದೊಡ್ಡಿಕೇರಿಯಾಗಿದ್ದ ತಿಮ್ಮಯ್ಯನೆಂಬುವನನ್ನು ದೊಡ್ಡಿಗೆ ಬಂದಿದ್ದ ಶ್ರೀ. ಕೊಕ್ಕಲೆರ ಗಣಪತಿಯವರ ಹಸುಗಳನ್ನು ಮೂಡಿದನೆಂಬ ತಕ್ಕೀರಿನ ಮೇಲೆ ದೊಡ್ಡಿಕೇರಿಯರನ್ನು ದಕ್ಕಗಿರಿ ಮಾಡಿ ವಿಚಾರಣೆ ನಡೆಯುತ್ತಿದೆ.

ಸೆಂಟ್ರಲ್ ಎಕ್ಸೈಸ್ ಇಲಾಖೆಯ ಸುಪರಿಂಟೆಂಡೆಂಟರ ಮಡಿಕೇರಿ ಖಚೇರಿಯನ್ನು ತಾರೀಕು ೧-೯-೪೧ ರಿಂದ ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕಿನ ಸಿಲ್ವರ್ ಜ್ಯುಬಿಲಿ ಕಟ್ಟಡಕ್ಕೆ ವರ್ಗಾಯಿಸಿರುವರು.

ಸಾರ್ವಜನಿಕ ಸಭೆಗಳು.

ಕಾರ್ಯಕ್ರಮ

ತಾ ೨೩ನೇ ಗುರುವಾರ ಶಾಗುಂದಕಲ್ಲಿ ಶ್ರೀ ಪಟ್ಟಮಾಡ ಪೊನ್ನಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆ ನಡೆಯುತ್ತು. ಶ್ರೀ ಪಿ. ಐ. ಬೆಳ್ಯಪ್ಪನವರು, ದಿ. ಪುಷ್ಪಣ್ಣನವರ ಗುಣಾಕಥನ ಮಾಡಿ ಅವರ ದೇಶ ಸೇವೆಯನ್ನು ವರ್ಣಿಸಿದನಂತರ ಮೇಲಿನ ರೀತಿಯ ಸಂತಾಪ ತರಾವು ಪಾಸಾಯಿತು.

೨-೧೦-೪೧ ರೊಳಗೆ ಆಂಧ್ರ ಸ್ವಾಂತವಾಗಬೇಕೆಂದು ಆಗಸ್ಟಾಸ ಹೂಡಿ ಉಪವಾಸದ ೩೨ನೆಯ ದಿನದಲ್ಲಿ ಕಾಲಿಟ್ಟಿರುವ ಆಂಧ್ರ ಪ್ರದೇಶ ಧುರೀಣರಾದ ಸ್ವಾಮಿ ಸೀತಾರಾಮಯ್ಯ ಅತಿ ಆರಕ್ಕರಾಗಿ ಸೊರಗಿದ್ದಾರೆಂದು ವೈದ್ಯರ ಪ್ರಕಟಣೆ ಲಿಂಗಟಿನೆ. ಆವರನ್ನು ಪರೀಕ್ಷಿಸಿದ ಡಾಕ್ಟರರು ಹೆದರಲು ಕಾರಣವಿಲ್ಲೆಂದು ಅಭಿಪ್ರಾಯಪಡಿಸಿದ್ದಾರೆ. ಆದರೆ ಅವರ ಅನುಯಾಯಿಗಳಿಕೊಬ್ಬಿಕ ಪರಿಸ್ಥಿತಿಯು ಚಿಂತಾಜನಕವಿದ್ದು ರಕ್ಕದ ಒತ್ತಡವು ಹೆಚ್ಚಾಗಿದೆ.

ಶ್ರೀ ಪಿ. ಐ. ಬೆಳ್ಯಪ್ಪನವರು ಇಂಡಿಯಾ ಸಚಿವರಾದವರು ಕೊಡಗಿಗೆ ಜವಾಬ್ದಾರಿ ಸರಕಾರವನ್ನು ಕೊಡಲು ಮಾಡಿದ ತೀರ್ಮಾನವನ್ನು ವಿವರಿಸಿ ಭಾಷಣ ಮಾಡಿದರು. ಇದಕ್ಕೆ ಒತ್ತಾಸೆಯಾಗಿ ಶ್ರೀ ದೇಂಗೋಡಿ ಸಂಬ್ಬಯ್ಯನವರು ಮತ್ತು ಕುಟ್ಟೇಟೀರ ತಿಮ್ಮಯ್ಯನವರು ಮಾತಾಡಿದ ನಂತರ ಕೆಳಗಿನ ತರಾವು ಪಾಸಾಯಿತು.

"ಕೊಡಗಿಗೆ ಜವಾಬ್ದಾರಿ ಸರಕಾರವನ್ನು ಕೊಡಲು ಒಪ್ಪಿದ ಕೇಂದ್ರ ಸರಕಾರದ ಏರ್ಪಾಡು ಕೊಡಗಿನ ಜನರಿಗೆ ತುಂಬಾ ತೃಪ್ತಿಯನ್ನು ಉಂಟುಮಾಡಿದೆ ಇದಕ್ಕಾಗಿ ಈ ಸಭೆಯು ಕೇಂದ್ರ ಸರಕಾರಕ್ಕೆ ಹೃತ್ಪೂರ್ವಕ ವಂದಿಸುತ್ತದೆ."

ಹುದಿಕೇರಿ

ತಾ ೩ನೇ ಸೋಮವಾರ ಹುದಿಕೇರಿಯಲ್ಲಿ ಒಂದು ಸಾರ್ವಜನಿಕ ವಿಷಯಂಗಳ ನಡೆದು ಇಂಡಿಯಾ ಸರಕಾರಕ್ಕೆ ಕೃತಜ್ಞತೆಯನ್ನು ಸೂಚಿಸುವ ತರಾವು ಪಾಸಾಯಿತು.

ಸಂತಾಪ ಸೂಚಕ ಸಭೆ

ಕೊಡಗು ಪತ್ರೇಕ ಪತ್ತದ ಏಳುಂಗೊಂದು ಈ ತಾ. ೨೪ರಲ್ಲಿ ಶ್ರೀ. ಪಿ ಐ ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ವೀರಾಜಪೇಟೆಯಲ್ಲಿ ನಡೆದು ಅಧ್ಯಕ್ಷರು ಆ ದಿನೆ ಸ್ವರ್ಗಸ್ಥರಾದ ಶನಿವಾರಸಂತೆಯ ಶ್ರೀ ಪುಷ್ಪಣ್ಣನವರ ಜೀವನ ಕಥೆಯನ್ನೂ ದೇಶ ಸೇವೆಯನ್ನೂ ವಿವರಿಸಿ ಅವರ ಏಧಿಧನದಿಂದ ದೇಶಕ್ಕುಂಟಾದ ನಷ್ಟವನ್ನು ವಿವರಿಸಿದರು. ನಂತರ ಈ ಕೆಳಗಿನ ಸಂತಾಪ ತರಾವನ್ನು ಎರಡು ನಿಮಿಷ ಎದ್ದು ನಿಂತು ಅಂಗೀಕರಿಸಲಾಯಿತು.

'ಕೊಡಗನ್ನು ಪ್ರತ್ಯೇಕ ಇಟ್ಟುಕೊಡು ಸುಧಾರಣೆ ಪಡೆಯಬೇಕೆಂದು ದೀರ್ಘಕಾಲದಿಂದ ಶ್ರಮಿಸುತ್ತಿದ್ದ ಶ್ರೀ ಎಚ್ಚ್ ಎಂ. ಪುಷ್ಪಣ್ಣನವರ ಅಕಾಲ ಮರಣದಿಂದ ಕೊಡಗು ದೇಶಕ್ಕೆ ತುಂಬಾ ಪಪ್ಪ ಉಂಟಾಗಿದೆಯೆಂದೂ ಅವರ ನಿಧನಕ್ಕೆ ಈ ಸಭೆಯು ಸಂತಾಪವಪ್ಪನ್ನು ಸೂಚಿಸಿ ಅವರ ಆತ್ಮಕ್ಕೆ ಶಾಂತಿಯನ್ನೂ, ಅವರ ಕುಟುಂಬಕ್ಕೆ ದುಃಖ ಸಹಿಸಾ ಶಕ್ತಿಯನ್ನೂ ಭಗವಂತನು ಕೊಡಲೆಂದೂ ಪ್ರಾರ್ಥಿಸುತ್ತದೆ '

ವೀರಾಜಪೇಟೆ.

ಈ ತಾ. ೫ನೇ ಬುಧವಾರ ವೀರಾಜಪೇಟೆಯಾಡಿನವರ ಸಾರ್ವಜನಿಕ ಸಭೆಯೊಂದು ರೀಡಿಂಗ್ ರೂಮಿನ ಎವರುಗಡೆ ಶ್ರೀ ಬಿ. ಎಂ. ಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಪಿ. ಐ ಬೆಳ್ಯಪ್ಪನವರು, ದಿ. ಪುಷ್ಪಣ್ಣನವರ ಗುಣಾಕಥನ ಮಾಡಿ ಅವರ ದೇಶ ಸೇವೆಯನ್ನು ವರ್ಣಿಸಿದನಂತರ ಮೇಲಿನ ರೀತಿಯ ಸಂತಾಪ ತರಾವು ಪಾಸಾಯಿತು.

॥ ಕೊಡಗಿಗೆ ಸುಧಾರಣೆ ॥

ಶ್ರೀ ದೇಶಬಂಧು ಗುಪ್ತರ ವಾದ.

ತಾರೀಕು ೧೦-೮-೧೯೫೦ರ 'ಕೊಡಗು' ಪತ್ರಿಕೆಯು ಸಂಪಾದಕೀಯ ಲೇಖನದ ಕಡೆ ವಸ್ತು ದೃಷ್ಟಿ ನೆಡೆಯಲ್ಪಟ್ಟಿದೆ. ಆ ಲೇಖನದಲ್ಲಿ ಕೊಡಗಿಗೆ ಸುಧಾರಣೆ ಹೊರೆಯಲು ಪಾರ್ಲಿಮೆಂಟ್ ಸದಸ್ಯರಾಗಿ ಶ್ರೀ. ಸಿ ಎಂ. ಪೂಣಚ್ಚನವರು ಏನೂ ಸಹಾಯ ಮಾಡಿಲ್ಲ; ಬದಲು ಸುಧಾರಣೆಯು ಇತರ ಜನರ ಪ್ರಯತ್ನದಿಂದ ದೊರೆತದ್ದು ಎಂದು ಮುಂತಾಗಿ ಹೇಳಲಾಗಿದೆ. 'ಸಿ' ಭಾಗದ ಸಭೆಯು ನಾಲ್ಕು ಆರಂಭದಿಂದಲೇ ಘಟನಾ ಸಭೆಯು ಸದಸ್ಯನಾದ ನಾನು 'ಕೊಡಗು' ಪತ್ರಿಕೆಯ ಸಂಪಾದಕೀಯದ ಈ ಅಭಿಪ್ರಾಯಕ್ಕೆ ಬಲವತ್ತರವಾಗಿ ಆಕ್ಷೇಪಿಸುತ್ತೇನೆ.

ಕೊಡಗಿನ ಸಾರ್ವಜನಿಕರ ಮುಂದೆ ನಾನು ಈ ಕೆಳಗಿನ ವಿಷಯಗಳನ್ನಿಡಲು ಆಶಿಸುತ್ತೇನೆ. ಕೇಂದ್ರದಿಂದ ಚಳಿಪ್ಪಡುವ ಈ ಭಾಗಗಳ ಆಡಳಿತ ಘಟನೆಯು ಬದಲಾವಣೆಯು ಬಗ್ಗೆ ರಾಜ್ಯಘಟನಾ ಸಭೆಯಲ್ಲಿ ಚೆರ್ಚೆ, ಕೊಡಗಿಗೆ ಹುತ್ತು ಅಪಮೂರ್ದ ಪ್ರತಿನಿಧಿಗಳಾದ ನಾವು ಮುಂಜಾಗ್ರತೆ ಹೋರಾಟ ನಡೆಸಬೇಕಿತ್ತು. ಹಂಡಿತ ಜವಾಹರಲಾಲರ ಅಧ್ಯಕ್ಷತೆಯಲ್ಲಿ ನೇಮಕವಾದ ಮೂದರಿ ಒಕ್ಕೂಟ ಘಟನಾ ಸಮಿತಿಯು ಚೀಫ್ ಕಮಿಷನರ್ ಪ್ರಾಂತಗಳ ಆಡಳಿತವು ೧೯೫೨ ನೇ ಅಕ್ಟೋಬರ್‌ಗೂ ನಡೆಯುವಹೆದೆ ನಿರ್ಧಾರವನ್ನು ಮಾಡಿದಂದಿನಿಂದಲೇ ಈ ಹೋರಾಟ ಪ್ರಾರಂಭವಾಯಿತು. ಈ ನಿರ್ಧಾರವನ್ನು ಹಿಂದೂದೇಶವು ಪಡೆದ ಸ್ವಾತಂತ್ರ್ಯದ ಪೂರ್ಣ ಸಹಕಾರವೆಂದೇ ನಮಗೆನಿಸಿತು. ಆದ್ದರಿಂದ ಒಂದು ಪಕ್ಷಸಂಸ್ಥೆಯಾಗಿರುವ ಚೆಪೆನಾಸಮಿತಿಯಲ್ಲಿ ಸೂಚರು ಜನರಿರುವ ನಾವು ಪ್ರತಿ ಮೊಂಜನ ಸಹಾನುಭೂತಿಯನ್ನು ಪಡೆಯಲು ಯತ್ನಿಸಬೇಕಾಗಿ ಬಂತು. ಕಡೆಗೆ ಚೀಫ್ ಕಮಿಷನರ್ ಪ್ರಾಂತಗಳ ಆಡಳಿತ ರಚನೆಯ ಬಗ್ಗೆ ಪರಿಶೀಲಿಸಲು ಪ್ರತ್ಯೇಕ ಸಮಿತಿಯೊಂದನ್ನು ಶಾ. ಪಟ್ಟಾಭಿ ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ನೇಮಿಸುವಂತೆ ಮಾಡಲು ಸಮರ್ಥರಾದೆವು. ನಾವು ಮೂರು ಜನರೂ ಈ ಸಮಿತಿಯ ಸದಸ್ಯರಾಗಿದ್ದೆವು. ಅನೇಕ ಪರಿಶೀಲನೆ ಮತ್ತು ಚರ್ಚೆಯ ತಂತರ ನಾವು ಒಮ್ಮತದ ವರದಿಯೊಂದನ್ನು ಒಪ್ಪಿಸಿದೆವು. ಇದೇ ನಂತರ ರಾಜ್ಯಘಟನೆಯ ೨೪೦ ನೇ ಸೆಕ್ಷನಿಗೆ ತಳಹದಿಯಾಯಿತು.

ರಾಜ್ಯಘಟನೆಯಲ್ಲಿ ಈ ನಿಬಂಧನೆಯು ಅಳವಡಿಸಲ್ಪಟ್ಟ ನಂತರ ಈ ನಿಬಂಧನೆಯನ್ನು ಇತರ ಚೀಫ್ ಕಮಿಷನರ್ ಪ್ರಾಂತಗಳಿಗೆ ವಿಸ್ತರಿಸುವ ಸಂದರ್ಭ ಬಂದಿತು. ಆದ್ಯಕ್ಷವಹಿಸಿದ್ದ ಚೀಫ್ ಕಮಿಷನರ್ ಪ್ರಾಂತಗಳ ಸಂಖ್ಯೆಯು ಹೆಚ್ಚಾಗಿ ರಾಜ್ಯಘಟನಾ ಸಭೆಯಲ್ಲಿದ್ದ ಪಕ್ಷ ಸಂಖ್ಯೆಯು ಇದರಿಂದ ಗಾಢ್ಯ ವಿಸಿತು. ಇದು ತಮಗೆ ಶಕ್ತಿಯನ್ನು ಕೊಟ್ಟಹಾಗೆ ನವ್ಯ ಪ್ರಾಂತಗಳು ಬಲಗೊಂಡಿತು. ಆದರೆ ತಮ್ಮ ಬೇಡಿಕೆಗಳು ಸಂಬಂಧಿಸಿದ ಅಧಿಕಾರಿಗಳಿಂದ ಸರಿಯಾಗಿ ಪರಿಶೀಲಿಸಲ್ಪಡುತ್ತಿರಲಿಲ್ಲ. ಆದ್ದರಿಂದ 'ಸಿ' ಸಂಸ್ಥಾನಗಳಿಗೆ ಸೇರಿದ ಪಕ್ಷಸ್ಥರಾದ ನಾವು ಒಂದು ಪಕ್ಷ ಸೇರಿದ 'ಸಿ' ಪ್ರಾಂತಗಳಿಗೆ ಪ್ರಜಾಪ್ರಭುತ್ವದ ಬದ್ಧರಿ ಆಡಳಿತ ಕ್ರಮವನ್ನು ಕೊಡಬೇಕೆಂಬ ನನ್ನ ಒಮ್ಮತದ ಬೇಡಿಕೆಯನ್ನು ಮುಂದಿಟ್ಟೆವು.

೧೯೫೦ ನೇ ಜನವರಿ ಪ್ರತಿನಿಧಿ ಸಂಸದೆಯು ಪಾರ್ಲಿಮೆಂಟಿನಲ್ಲಿ ಬಂದಾಗ ಕೆಂದ್ರ ಸರಕಾರವು 'ಸಿ' ಸಂಸ್ಥಾನಗಳಲ್ಲಿ ರಾಜ್ಯಘಟನೆಯು ತಿಳಿಂ ನೇ ನಿಬಂಧನೆಯನ್ನು ಹೇರಲಿಗೆ ತರುವದಿಲ್ಲವೆಂದೂ ಅವುಗಳಿಗೆ ಶಾಸನ ಸಭೆಯನ್ನು ಕೊಟ್ಟು ಲೀನಿಲ್ ಲಭ್ ಸ್ವೀಟಿಗೆ ಶಾಸನ ಸಭೆಯಿಂದ ವ್ಯಕ್ತಿ ನಿಧಿಯನ್ನು ಆಯಸುವದಿಲ್ಲವೆಂದೂ ಸ್ಪಷ್ಟ ಪಡಿಸಿದಾಗ ಸ್ಥಾಪಕ ಹೋರಾಟ ಪ್ರಾರಂಭವಾಯಿತು. ಒಮ್ಮತದಿಂದ ಈ ಮಸೂದೆಗೆ ವಿರುದ್ಧವಾಗಿ ಹೋರಾಡಿ ಈ ಎಲ್ಲಾ ಯೋಜನೆಯನ್ನು ಬದಲಾಯಿಸಲು ಪ್ರಾರ್ಥನ ಮತದಾನ ಕರ್ತವ್ಯದಂತೆ ರಚಿತವಾದ ಜುನಾಯಿತ ಪ್ರತಿನಿಧಿಗಳ ಗುಂಪನ್ನು ರಚಿಸಿದಂತೆ ಸರಕಾರವನ್ನು ಒಪ್ಪಿಸಿದೆವು. ಇಂಥಾ ಚಾರಿತ್ರಿಕ ಗುಂಪನ್ನು ಸಾಧ್ಯವಾದರೆ ಅಲ್ಪಸ್ವಲ್ಪ ಶಾಸನ ಸಭೆಗಳಾಗಿ ಮಾರ್ಪಡಿಸಬಹುದೆಂದು ಸರಕಾರ ಸೂಚಿಸಿತು. 'ಕೊಡಗು' ಸಂಪಾದಕರು ಮೂಲ ಮಸೂದೆಯನ್ನೂ ಅದನ ಚರ್ಚೆಯ ಸಮಯದಲ್ಲಿ ಶ್ರೀ. ಪೂಣಚ್ಚನವರು ಆಡಿದ ವಾಕ್ಯಗಳನ್ನೂ ಓದಬೇಕಿತ್ತು. ಇದರ ನಂತರ ಅನೇಕ ಪಕ್ಷಸ್ಥರು 'ಸಿ' ಭಾಗದ ಸಂಸ್ಥಾನಗಳಿಗೆ ಪ್ರತಿನಿಧಿಸಾಬ್ಬರಿ ಜೋಪಾಸನೆಯ ಆಡಳಿತ ಕೊಡಬೇಕೆಂಬ ಠರಾವು ಕಳುಹಿಸಿದರು. ಈ ವರ್ಷದ ಬಜೆಟ್ ಸಭೆಯ ಠರಾವುಗಳ ಬಗ್ಗೆ ಪಟ್ಟಿಯನ್ನು 'ಕೊಡಗು' ಸಂಪಾದಕರು ನೋಡಿದ್ದಾರೋ ಎಂದು ನನಗೆ ಅನುಮಾನವಾಗುತ್ತದೆ. ಲಾಟ್ರಿ ಕೆರೆಯಾಗ ಅಜವಿರಿನ ನವ್ಯ ಸ್ಥೈರಿಕರ ಠರಾವಿನ ಪ್ರಥಮ ಸ್ಥಾನ ಪಡೆದು ಚರ್ಚೆಯಲ್ಲಬ್ಬಿತ್ತು. ಆ ಕಾಲಕ್ಕೆ ಕೇಂದ್ರ ಸರಕಾರವು 'ಸಿ' ಭಾಗಗಳಿಗೆ ಸುಧಾರಣೆಯನ್ನು ಕೊಡುವ ಮಸೂದೆಯೊಂದನ್ನು ತರಲಾಗುವುದೆಂಬ ಭರವಸೆಯನ್ನು ಕೊಟ್ಟಿತು.

ಈ ಭರವಸೆಯ ಪ್ರಕಾರ ಹೊರಬಂದ ಮಸೂದೆಯು ನವ್ಯ ಊಹನೆಗೆ ಸರಿ ಯಾಗಿರಲಿಲ್ಲ. ಆದರಿಂದ ಪುನಃ ಸಮಗೆ ಯೋರಾಡಬೇಕಾಗಿ ಬಂತು. 'ಸಿ' ಭಾಗದ ಪಾರ್ಲಿಮೆಂಟ್ ಸದಸ್ಯರೊಡನೆ ಸಮಾಲೋಚನೆ ನಡೆಸಿದ ನಂತರ ಮದರಾಸು, ಕೂರ್ಗ, ಶ್ರೀಪುರ, ಕಚ್ ಈ ಮೂರು ಗಡಿ ಸಂಸ್ಥಾನಗಳನ್ನು ಬಿಟ್ಟು ಉಳಿದ ಎಲ್ಲಾ 'ಸಿ' ಸಂಸ್ಥಾನಗಳಿಗೆ ರಾಜ್ಯಘಟನೆಯ ೨೪೦ ನೇ ನಿಬಂಧನೆಯಂತೆ ಪೂರ್ಣ ಸುಧಾರಣೆ ಕೊಡಲಾಗುವದೆಂದು ಈಗ ಸಾರಲ್ಪಟ್ಟಿದೆ.

'ಸಿ' ಪ್ರಾಂತಗಳಲ್ಲಿರುವ ಒಟ್ಟು ವಿನಮ್ರ ಆಡಳಿತವನ್ನು ಬದಲಾಯಿಸಿ ಸುಧಾರಣೆ ಕೊಡಲು ಶಾಸನ ಸಭೆಗಳಲ್ಲಿ ಆದ ಅವಿನಾರ್ಯವಾದ ವಿಳಂಬ ಮತ್ತು ವಿವಿಧ ಅಂತಸ್ತುಗಳನ್ನೊಳಗಿನ ಸಾರ್ವಜನಿಕರಿಗೆ ಪರಿಚಯಮಾಡುವ ದೃಷ್ಟಿಯಿಂದ ಮೇಲಿನ ವಿವರಣೆಯನ್ನು ಕೊಟ್ಟಿದಾಗಿದೆ. ಪಾರ್ಲಿಮೆಂಟಿನಲ್ಲಿ ಇಷ್ಟೆಲ್ಲ ವಿಳಂಬ ವಿರೋಧಗಳಾದರೂ 'ಸಿ' ಪ್ರಾಂತಗಳ ಪರ ಸ್ಯರು ಒಮ್ಮತದಿಂದ ಯಾವಾಗಲೂ ವರ್ತಿಸಿದ್ದಾರೆಂದು ಹೇಳಲು ಸಂತೋಷಪಡುತ್ತೇನೆ. ಹಿಂದೂದೇಶದ ವಿವಿಧ ಸಮಸ್ಯೆಗಳಿರುವ ವಿವಿಧ ಭಾಗಗಳಿಂದ ಬಂದರೂ ನಾವು ಒಗ್ಗಟ್ಟಿನಿಂದ ವರ್ತಿಸಿದ ಕಾರಣ ಕೇಂದ್ರ ಸರಕಾರವು ನಮ್ಮ ಕೇಳಿಕೆಗಳನ್ನು ಒಪ್ಪಲೇಬೇಕಾಯಿತು. ಪ್ರಾರಂಭದಿಂದಲೂ ಶ್ರೀ. ಪೂಣಚ್ಚನವರು ಈ ಕಾರ್ಯಕಲಾಪಗಳಲ್ಲಿ ಗೌರವ ಭಾಗವಹಿಸಿರುವರು. 'ಕೊಡಗು' ಪತ್ರಿಕೆಯು ಸಂಪಾದಕೀಯ ತೀಖ್ಷ್ಣವಾಗಿರುವ ಅನ್ಯಾಯದ ದೋಷಾರೋಪಣೆಯು ಕಡಿಗೇಡಿತನದ್ದಾಗಿದೆ.

ಕೊಡಗಿನ ಮಟ್ಟಿಗೆ ಹೇಳುವದಾದರೆ ವೈಕ್ತಿಗತವಾಗಿ ನನಗೆ ತಿಳಿದಿರುವಂತೆ ೧೯೪೭ ರ ಪ್ರಾರಂಭದಲ್ಲಿ ಕೊಡಗು ಶಾಸನ ಸಭೆಯಲ್ಲಿ ಕೊಡಗಿಗೆ ಜವಾಬ್ದಾರಿ ಸರಕಾರ ಬೇಕೆಂಬ ಠರಾವು ಒಮ್ಮತದಿಂದ ಪಾಸಾದ ಕಾರ್ಯಕ್ಕೆ ಕೊಡಗಿನ ಬೇಡಿಕೆಗೆ ಗೌರವ ಬೆಂಬಲ ದೊರೆತಂತಾಯಿತು. ಆ ಠರಾವಿನ ನಂತರ ಸರಕಾರದ ವರ್ತನೆಯು ಬಹು ಮಟ್ಟಿಗೆ ಬದಲಾವಣೆದಲ್ಲದೆ ಕೊಡಗಿನ ಜವಾಬ್ದಾರಿ ಸರಕಾರದ ಬೇಡಿಕೆಯು ಬಲಗೊಂಡಿತ್ತು.

'ಕೊಡಗು' ಪತ್ರಿಕೆಯು ಸಂಪಾದಕರಾ ಶ್ರೀ. ಪಿ. ವಿ. ಬೆಳ್ಳಪ್ಪನವರ ಅಗಾಧಿನ ಪೆಳ್ಳಿ ಸಂದರ್ಶನದ ಕಾರಣ ಅವರನ್ನು ಪರಿಚಯವಾಗುವ ಅನುದೊರೆಸಿದೆ ಕೊಡಗಿನ ಬೇಡಿಕೆಯನ್ನು ಶ್ರೀ. ಪೂಣಚ್ಚನವರು ಯೋಗ್ಯರೀತಿಯಿಂದ ಮುಂಬಿಟ್ಟರುವೆದೂ ನಾನು ವಿಶೇಷ ಭಾರಿ ಕೊಡಗಿನ ಹೋರಾಟವನ್ನು ಇಷ್ಟೊಂದರ ಜಯಪ್ರದವಾಗಿ ನಡೆಸುತ್ತಿರುವಶ್ರೀ ಪೂಣಚ್ಚನವರ ಮೇಲಿಪ ಆನ್ಯಾಯದ ದೋಷಾರೋಪಣೆಗಳನ್ನೊಳಗೊಂಗ ಲೇಖನವನ್ನು ಓದಿ ಇವರಿಗೆ ಆಶ್ಚರ್ಯವಾಯಿತು. ವಿಜಪರಿಸ್ಥಿತಿ ಹೇಗಿದೆಯೆಂಬುದನ್ನು ಕೊಡಗಿನ ಜನರು ತಿಳಿಯಬೇಕೆಂದು ನಾನು ಇಚ್ಛಿಸುತ್ತೇನೆ. ಚುನಾವಣೆಯು ಹತ್ತಿರ ಬರುತ್ತಿರುವ ಕಾರಣ ಚುನಾವಣಾ ಪ್ರವಾಡ ಮತ್ತು ಶತ್ರುರಹಿತ ಪ್ರಚಾರಗಳು ನಡೆಯುವವು. ಶ್ರೀ. ಬೆಳ್ಳಪ್ಪನವರು ಹಿರಿಯ ಪತ್ರಿಕೋದ್ಯೋಗಿಯಾಗಿ ಮೇಲ್ಬಟ್ಟವನ್ನು ಅಳವಿಸಿಕೊಳ್ಳುವರಾಗಿ ಆಶಿಸುತ್ತೇನೆ.

ದೇಶಬಂಧು ಗುಪ್ತ.

≡ ಕೊಡಗಿಗೆ ಸುಧಾರಣೆ ≡

ಶ್ರೀ ದೇಶಬಂಧು ಗುಪ್ತರ ವಾದಕ್ಕೆ ಉತ್ತರ.

ಈ ವಿಚಾರವನ್ನು ಇಂತಿಂತು ನಾವು ಆಗಷ್ಟ್ ತಿಂಗಳಲ್ಲಿ ಪ್ರಕಟಿಸಿದ ನಮ್ಮ ಲೇಖನದ ಮೇಲೆ, ಪಾರ್ಲಿಮೆಂಟಿನಲ್ಲಿ ಹೆಚ್ಚಿ ಪ್ರಾಂತದ ಪ್ರತಿನಿಧಿಯಾದ ಶ್ರೀ ದೇಶ ಬಂಧುಗುಪ್ತರವರು ಮೂಡಿರುವ ಟೀಕೆಯನ್ನು ಇನ್ನೊಂದು ಪಕ್ಷ ಪ್ರಕಟಿಸಲಾಗಿದೆ. ಈ ಟೀಕೆಯೊದರೂ ಶ್ರೀಗುಪ್ತರವರು ತಾನಾಗಿ ಮಾಡಿದ್ದಲ್ಲವೆಂದೂ, ಇದಕ್ಕೆ ಪಾರ್ಲಿಮೆಂಟಿನಲ್ಲಿ ಕೊಡಗಿನ ಪ್ರತಿನಿಧಿಯಾದ ಶ್ರೀ ಸಿ ಎಂ. ಪೂಣಚ್ಚನವರೇ ಕಾರಣವೆಂದೂ ಸ್ಪಷ್ಟವಾಗುತ್ತದೆ. ಏಕೆಂದರೆ ಡಿಲ್ಲಿಸ್ಥರಾದ ಶ್ರೀಗುಪ್ತರವರಿಗೆ 'ಕೊಡಗು' ಪತ್ರಿಕೆಯು ಹೋಗುತ್ತಿರುವುದಿಲ್ಲ. ಇದು ಅವರಿಗೆ ಸಿಕ್ಕಿದರೂ ಅವರಿಗೆ ಕನ್ನಡವನ್ನು ಗೊತ್ತಿರುವುದಿಲ್ಲ. ಅಲ್ಲದೆ ಕೊಡಗಿನ ಭವಿಷ್ಯತ್ತಿನ ವಿಚಾರ ಇಲ್ಲಿಯ ಜನರ ಅಭಿಪ್ರಾಯ ಹೇಗಿದೆಯೆಂಬುದು ಇವರಿಗೆ ಸ್ಪಷ್ಟವಾಗಿ ಗೊತ್ತಿದೆಯೆಂದು ಹೇಳಲಾಗುವುದಿಲ್ಲ. ಇವಗ ಲೇಖನದ ಉದ್ದಿಶ್ಯವು ಶ್ರೀ ಪೂಣಚ್ಚನವರನ್ನು ಮುಂಬರುವ ಚುನಾವಣೆಯ ದೃಷ್ಟಿಯಿಂದ ಕೊಡಗಿನ ಜನತೆಯ ಮುಂದೆ ಪ್ರಕಂಠಿಸುವುದಾಗಿದೆಯೆಂದರೆ ತಪ್ಪಾಗಲಾರದು. ಆದ್ದರಿಂದ ಈ ಲೇಖನವು ಶ್ರೀ ಪೂಣಚ್ಚನವರ ವೈಕ್ತಿಕತೆಯಿಂದ ಬರೆಯಿಸಲ್ಪಟ್ಟಿತೆಯೆಂಬ ಊಹಿಸಿದರೆ ತಪ್ಪಾಗಲಾರದು.

ಶ್ರೀ ಗುಪ್ತರವರ ವಿಷಯಗಳನ್ನು ವಿವರಿಸುವ ಮುಂಚೆಪವಾಗಿ ಶ್ರೀ ಪೂಣಚ್ಚನವರು ಈವರೆಗಿನ ರೀತಿಯಲ್ಲಿ ರಾಜ್ಯಘಟನಾ ಸಭೆಗೆ ನಂತರ ಪಾರ್ಲಿಮೆಂಟ್ ಸಭೆಗೆ ಆರಿಸಲ್ಪಟ್ಟಿದ್ದರೆಂಬುದನ್ನು ಸ್ವಲ್ಪ ಸ್ಮರಿಸಿಕೊಳ್ಳಬೇಕಾಗಿದೆ. ಕಾಂಗ್ರೆಸ್ ವರ್ತಿಂಗ್ ಕಮಿಟಿಯು ಬ್ರಿಟಿಷ್ ಸರಕಾರವು ಸೂಚಿಸಿದ ರಾಜ್ಯಘಟನಾ ಸಭೆಯು ವಿಸರ್ಜನೆಯನ್ನು ಒಪ್ಪುವ ಮುಂಚಿತವಾಗಿಯೇ ಕೊಡಗು ಕಾನ್ಸಿಲಿನಲ್ಲಿ ಇಲ್ಲಿಯ ಪ್ರತಿನಿಧಿಯ ಸಭೆಯ ಪ್ರಕೊಡುವುದಿಲ್ಲವೆಂದೂ ಹೇಳಿದ ಚುನಾವಣೆ ನಡೆಯದೇ ಹೋಯಿತು. ಕೊಡಗು ಕಾಂಗ್ರೆಸು ಸಂಸ್ಥೆಯಲ್ಲೂ ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್ಲಿನಲ್ಲೂ ಕೊಡಗಿನ ಭವಿಷ್ಯತ್ತಿನ ವಿಚಾರದಲ್ಲಿ ಬೇರೆ ಬೇರೆ ಭಿಪ್ರಾಯಗಳೆಳೆದ್ದವು. ಒಂದು ಪಕ್ಷದವರು ಕೊಡಗನ್ನು ಪ್ರತ್ಯೇಕವಾಗಿಯೇ ಇಟ್ಟು ಕೊಂಡು ಜವಾಬ್ದಾರಿ ಸರಕಾರ ಸಡೆಯ ಬೇಕೆಂದೂ ಇನ್ನೊಂದು ಪಕ್ಷದವರು ಕೊಡಗನ್ನು ನೆರೆಯ ಮೈಸೂರು ಪ್ರಾಂತ್ಯಕ್ಕೆ ತಥವಾ ಕರ್ನಾಟಕ ಪ್ರಾಂತ್ಯಕ್ಕೆ ಸಂಯೋಜಿಸಬೇಕೆಂದೂ ವಾದಿಸುತ್ತಿದ್ದರು. ಶ್ರೀ ಪೂಣಚ್ಚನವರು ಸಂಯೋಜನಾ ಪಕ್ಷಕ್ಕೆ ಸೇರಿದವರಾಗಿದ್ದರು. ಕೊಡಗು ಜಿಲ್ಲಾ ಕಾಂಗ್ರೆಸು ಸಮಿತಿಯ ಬೇಲಾಧಿಕಾರಿಗಳಾದ ಕರ್ನಾಟಕ ಪ್ರಾಂತೀಯ ಕಾಂಗ್ರೆಸುಸಮಿತಿಯವರು ಸಂಯೋಜನಾ ಕಕ್ಷವನ್ನು ತುಂಬಾ ಪುಷ್ಟೀಕರಿಸುತ್ತಿದ್ದುದೇ ಮಾತ್ರವಲ್ಲದೆ ಇದನ್ನು ಕೊಡಗು ಕಾಂಗ್ರೆಸ್ಸಿನವರೆ ಮೇಲೆ ಒತ್ತಾಯ ಪಡಿಸಲು ಪ್ರಯತ್ನಿಸುತ್ತಿದ್ದರು. ರಾಜ್ಯಘಟನಾ ಸಭೆಗೆ ಕೊಡಗಿನ ಪ್ರತಿನಿಧಿಯನ್ನು ಆರಿಸುವ ಸಂದರ್ಭದಲ್ಲಿ ಕರ್ನಾಟಕ ಪ್ರಾಂತೀಯ ಕಾಂಗ್ರೆಸು ಕಮಿಟಿಯು ಅಧ್ಯಕ್ಷರನ್ನು ಕರೆಸಿಕೊಂಡು ಇವರ ಸಹಾಯದಿಂದ ಕಾನ್ಸಿಲಿನ ಸಂಯೋಜನಾ ಪಕ್ಷದವರು ತಮಗಿದ್ದ ಚಿಕ್ಕ ಬಹುಮತವನ್ನು ಉಪಯೋಗಿಸಿ ಪ್ರತ್ಯೇಕವಾದ ಪಕ್ಷದವರ ರಾಜಿಪ್ರಯತ್ನಗಳನ್ನು ಲೆಕ್ಕಿಸದೆ ಶ್ರೀ ಪೂಣಚ್ಚನವರನ್ನು ರಾಜ್ಯಘಟನಾ ಸಭೆಗೆ ಆರಿಸಿಕೊಂಡರು. ಆಗ್ಗೆ ಪ್ರತ್ಯೇಕವಾದಿಗಳು ಕಾನ್ಸಿಲಿನಲ್ಲಾದ ಈ ಚುನಾವಣೆಯ ಫಲಿತಾಂಶವನ್ನು ವಹಿಸಲಿಲ್ಲ. ಹಾಗೆ ಆರಿಸಲ್ಪಟ್ಟಾಗ ಶ್ರೀ ಪೂಣಚ್ಚನವರು ಕೊಡಗಿನ ಭವಿಷ್ಯತ್ತಿನ ವಿಚಾರವಾಗಿ ತಮ್ಮ ಸ್ವಂತ ಅಭಿಪ್ರಾಯವನ್ನು ರಾಜ್ಯಘಟನಾ ಸಭೆಯ ಪ್ರಕೊಡುವುದಿಲ್ಲವೆಂದೂ ಹೇಳಿದ

ವರ ಅಭಿಪ್ರಾಯದಂತೆ ತೆಗೆದು ಆಡುಮಾತಿನ ಅಭಿಪ್ರಾಯದಂತೆ ತಾನು ವರ್ತಿಸುವೆನೆಂದು ಕೌನ್ಸಿಲರು ಸಭೆಯಲ್ಲಿ ಭಾಷಣಮಾಡುತ್ತಿದ್ದರು. ರಾಜ್ಯಪುನರ್ನಾ ಸಭೆಯು ಕಾರ್ಯಕಲಾಪಗಳು ಮುಂದುವರಿಯುತ್ತಾ ಕೊಡಗಿನ ವಿಚಾರವಾಗಿ ಏನೊಂದು ತೀರ್ಮಾನಕ್ಕೆ ಬಾರದೆ ಇರುವ ಹೇತೆಯಲ್ಲಿ ಶ್ರೀ ಪೂಣಚ್ಚನವರು ಹೇಶದ ಅಭಿಪ್ರಾಯವನ್ನೇನು ತೆಗೆಯುವ ಪ್ರಯತ್ನವನ್ನು ಕೂಡಲೇ ಇಲ್ಲ. ಸಂಯೋಜನವಾದಿಯೂದ ಇವರ ಹರ್ಷನೆಯಿಂದ ಶ್ಯಪ್ಯರಾಗದ ಪ್ರತ್ಯೇಕ ಪಕ್ಷದವರು ದೇಶದಲ್ಲಿ ಕೊಡಗನ್ನು ಪ್ರತ್ಯೇಕ ಇಟ್ಟು ಸುಧಾರಣೆ ಕೊಡಬೇಕೆಂದು ಚಳವಳ ಪಡಿಸುತ್ತಾ, ತಮ್ಮ ಪ್ರತಿನಿಧಿಗಳನ್ನು ದೆಲ್ಲಿಗೆ ಕಳುಹಿಸಿ ಸಮ್ಮಂದಪಟ್ಟ ಅಧಿಕಾರಿಗಳನ್ನು ಕಂಡು ತಮ್ಮ ಉದ್ದಿಶ್ಯವನ್ನು ನೆರವೇರಿಸಿಕೊಳ್ಳಲು ಪ್ರಯತ್ನ ಪಟ್ಟರು. ಆಗ್ಗೆ ರಾಜ್ಯಪುನರ್ನಾ ಸಭೆಯ ಅಧ್ಯಕ್ಷರು ಏಳು ಮೆಂಬರುಗಳಿಂದ ಕೂಡಿದ ಎಡ್‌ಹಾಕ್‌ಸಮಿತಿಯೊಂದನ್ನು ಏರ್ಪಡಿಸಿ ಜೋಫ್ ಕಮಿಷನರ್ ಪ್ರಾಂತ್ಯಗಳಿಗೆ ಸುಧಾರಣಾಯೋಜನೆಯನ್ನು ನೂಡಲು ನೇಮಿಸಿದರು. ಪ್ರತ್ಯೇಕ ಪಕ್ಷದ ಪ್ರತಿನಿಧಿಗಳು ಈ ಸಮಿತಿಯ ಸದಸ್ಯರನ್ನು ಭೇಟಿಮಾಡಿ ತಮ್ಮ ಉದ್ದಿಶ್ಯವನ್ನು ಅವರಲ್ಲಿ ಒತ್ತಿ ತಿಳಿಸಿದರು. ಈ ಸಮಿತಿಯವರು ಶ್ರೀ ಗುಪ್ತರವರು ಹೇಳಿದಂತೆ ಒಪ್ಪತದ ಶಿಫಾರಸ್ಸನ್ನು ಅಂದರೆ ಒಂದು ರೀತಿಯ ಜವಾಬ್ದಾರಿ ಸರಕಾರವನ್ನು ಕೊಡುವಂತೆ ಶಿಫಾರಸು ಮಾಡಿದ್ದು ನಿಜ ಆದರೆ ಆಜಮಿರ ದ ಪ್ರತಿನಿಧಿ ಶ್ರೀ ಭಾರ್ಗವರವರು ಮತ್ತು ಶ್ರೀ ಪೂಣಚ್ಚನವರು ತಮ್ಮದೊಂದು ಹೆಚ್ಚಿನ ಟಪ್ಪಣಿಯೊಂದನ್ನು ಸೇರಿಸಿ ಆಜಮಿರ್ ಮತ್ತು ಕೊಡಗನ್ನು ನೆರೆಯ ಆ ಶ್ರಿತ ಸಂಸ್ಥಾನದೊಂದಿಗೆ ಸಂಯೋಜನೆ ಮಾಡುವ ಆನ ವನ್ನು ಘಟನೆಯಲ್ಲಿ ಕಲ್ಪಿಸಬೇಕೆಂದು ಸೂಚಿಸಿದ್ದರು. ಇದರಿಂದ ಇವರ ಉದ್ದಿಶ್ಯವು ಒಡೆದು ಕಾಣುತಿತ್ತು. ನಂತರ ಚೀಫ್ ಕಮಿಷನರ್ ಪ್ರಾಂತ್ಯಗಳಿಗೆ ಸುಧಾರಣೆ ಕೊಡಬೇಕೆಂಬ ಶ್ರೀ ಭಾರ್ಗವರವರ ಶರಾವನ್ನು ಪಾರ್ಲಿಮೆಂಟಿನಲ್ಲಿ ಚರ್ಚಿಸಿದಾಗ ಸಂಸ್ಥಾನಗಳ ಮಂತ್ರಿಯೂ ಶ್ರೀ ಗೋಪಾಲಸ್ವಾಮಿ ಅಯ್ಯಂಗಾರವರು ಈ ಟಪ್ಪಣಿಯನ್ನು ಎತ್ತಿತೋರಿಸಿ ಆಗ್ಗೆ ಶ್ರೀ ಭಾರ್ಗವರವರು ಸಂಯೋಜನೆಯ ಸಮರ್ಥಕರಾಗಿದ್ದರೆಂದು ತೋರಿಸಿಕೊಟ್ಟರು. ಈ ನೂತು ಶ್ರೀ ಪೂಣಚ್ಚನವರಿಗೂ ಸಲ್ಲುತ್ತದಲ್ಲವೇ?

ರಾಜ್ಯಪುನರ್ನಾ ಸಭೆಯು ಕಾರಣಾಂತರಗಳಿಂದ ಎಡ್‌ಹಾಕ್ ಸಮಿತಿಯ ಶಿಫಾರಸುಗಳನ್ನು ರಾಜ್ಯಪುನರ್ನಯಲ್ಲಿ ಸೇರಿಸದೆ ಈ ವಿಚಾರದ ತೀರ್ಮಾನವನ್ನು ಪಾರ್ಲಿಮೆಂಟ್ ಸಭೆಗೆ ಬಿಟ್ಟಿತು. ಇದರಿಂದ ಕೊಡಗಿನ ಜನರು ಅತ್ಯಪ್ತಿಗೊಂಡು ಕೊಡಗಿಗೆ ಇತರ ಪ್ರಾಂತ್ಯಗಳಂತೆಯೇ ಸುಧಾರಣೆ ಕೊಡಬೇಕೆಂದು ಚಳವಳ ಹೂಡಿದರು. ಈ ಬಗ್ಗೆ ಪ್ರತ್ಯೇಕ ಪಕ್ಷದವರ ಹೇತೇಪಹಣೆಯಿಂದ ಸಾರ್ವಜನಿಕ ಸಭೆಗಳನ್ನು ನಡೆಸಿ ಶರಾವುಗಳನ್ನು ಪಾಸು ಮಾಡಿದುದಲ್ಲದೆ ಇಂಡಿಯಾ ಸರಕಾರಕ್ಕೆ ನೆನೋರಿಯಲ್‌ಗಳನ್ನು ಕಳುಹಿಸಿದರು. ಮತ್ತು ನಿಯೋಗೋಷ್ಟಿಗಳನ್ನು ಕೂಡ ದೆಲ್ಲಿಗೆ ಹೋಗುವಂತೆ ಮಾಡಿದರು. ಚೀಫ್‌ಕಮಿಷನರ್ ಪ್ರಾಂತಗಳ ಸ್ಥಿತಿಯು ಒಂದಕ್ಕೊಂದು ಬೇರೆಯಾಗಿದೆ. ದೆಲ್ಲಿಯು ಕೇಂದ್ರ ಸರಕಾರದ ಮುಖ್ಯ ಪಟ್ಟಣವಾದ್ದರಿಂದ ಅದಕ್ಕೆ ಸಂಪೂರ್ಣ ಜವಾಬ್ದಾರಿ ಸರಕಾರ ಕೊಡಲು ಇಂಡಿಯಾಸರ ಕಾರವು ಹಿಂಜರಿಯುತಿತ್ತು. ಆಜಮಿರ್ ದಲ್ಲಿ ಸರಕಾರದ ಉಪ್ಪತ್ತಿಯು ಬಹು ಕಡಿಮೆಯಾಗಿ ಖರ್ಚಿಗೆ ಸಾಲದ್ದರಿಂದ ಅಲ್ಲಿಗೂ ಸುಧಾರಣೆಕೊಡಲು ಕಷ್ಟವಾಯಿತು. ಆದರೆ ಕೊಡಗಿನ ಸ್ಥಿತಿಯು ಇವೆರಡಕ್ಕಿಂತಲೂ ಉತ್ತಮವಾಗಿದ್ದು ಇಲ್ಲಿ ಉಳಿವರಿ ಬಜೆಟ್ಟಿದ್ದು ಹಣ ಕಾಸಿನ ಮಟ್ಟಿಗೆ ಕೇಂದ್ರ ಸರಕಾರಕ್ಕೆ ಹೊರೆಯಾಗಿಲ್ಲದೆ ೫೫ ವರ್ಷಗಳಿಂದ ಲೆಜಿಸ್ಲೇಟಿವ್ ಕೌನ್ಸಿಲಿನ ಅನುಭವ ಪಡೆದು ಸುಧಾರಣೆ ಹೊಂದಲು ಯೋಗ್ಯವಾಗಿತ್ತು. ಶ್ರೀ. ಪೂಣಚ್ಚನವರು ಈ ವಿಚಾರವನ್ನು ರಾಜ್ಯಪುನರ್ನಾ ಸಭೆಯು ಮುಂದಿಟ್ಟು ಸಮ್ಮಂಧಪಟ್ಟ ಅಧಿಕಾರಿಗಳಿಗೆ ಮುಂದಿಟ್ಟುಮಾಡಿದ್ದೇ ಆದರೆ ಕೊಡಗಿಗೆ ಆಗಲೇ ಮಂತ್ರಿ ಮಂಡಲಿಯು ದೊರೆಯುತ್ತಿತ್ತೆಂದು ಕೊಡಗಿನ ಜನರಿಗೆ ತೋರಿತು. ಇದು ಆಲ್ಲದೆ ಒಂದೆರಡು ಸಾರಿ ಚೀಫ್ ಕಮಿಷನರ್ ಪ್ರಾಂತ್ಯಗಳ ವಿಚಾರ ಪಾರ್ಲಿಮೆಂಟ್ ಸಭೆಯಲ್ಲಿ ಚರ್ಚೆ ನಡೆದಾಗ ಶ್ರೀ ಪೂಣಚ್ಚನವರು ಹಾಜರಾಗಿದ್ದರೆಂದು ತಿಳಿಯಬಹುದು. ಇಂತಹ ಸಮಯದಲ್ಲಿ ಕೊಡಗಿನ ವಿಚಾರ ಪಾರ್ಲಿಮೆಂಟ್ ಸಭೆಯಲ್ಲಿ ಒತ್ತಿ ಹೇಳುವುದರ ಬದಲು ಇವರು ಟೀ ಕಮಿಟಿಯು ವಿಟಂಗಿಗೆ ಕಲ್ಕತ್ತೆಗೆ ಹೋಗಿದ್ದರೆಂದು ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಇದೆಲ್ಲ ನೋಡಿದ ಕೊಡಗಿನ ಜನರು ಇವರು ಕೊಡಗಿನ ನಿಜವಾದ ಪ್ರತಿನಿಧಿಯಲ್ಲವೆಂದು ಸಾರ್ವಜನಿಕ ವಿಟಂಗ್‌ಗಳಲ್ಲಿ ನಡೆಸಿ ಶರಾವುಗಳನ್ನು ಮಾಡಿ ಪಾರ್ಲಿಮೆಂಟು ಸಭೆಗೂ, ಇಂಡಿಯಾ ಸರಕಾರಕ್ಕೂ ತಿಳಿಸುತ್ತಾ ಬಂದರು. ಇಷ್ಟರಲ್ಲಿ ಈ ವರ್ಷದ ಪ್ರಾರಂಭದಲ್ಲಿ ಅಂದರೆ ಫೆಬ್ರವರಿಯಲ್ಲಿ 'ಸಿ' ಧಾಗ ಸಂಸ್ಥಾನಗಳ 'ಕಸ್ಟೋಸನ್'ನು ಶ್ರೀ. ಗುಪ್ತರವರ ಮುಂದಾಳುತನದಲ್ಲಿ ದೆಲ್ಲಿಯು ಕಡೆಸಲ್ಪಟ್ಟಕ್ಕು ಚೀಫ್ ಕಮಿಷನರ್ ಪ್ರಾಂತ್ಯಗಳ ಸಂಯೋಜನೆ ಮಾತನ್ನು ಬಿಟ್ಟು ಸಂಪೂರ್ಣ ಜವಾಬ್ದಾರಿ ಸರಕಾರ ಕೊಡಬೇಕೆಂಬ ಶರಾವನ್ನು ಚರ್ಚಿಸಿದಾಗ್ಗೆ ಶ್ರೀ ಪೂಣಚ್ಚನವರು ಕೊಡಗಿನಲ್ಲಿ ಉಗಿರುವ ಕೌನ್ಸಿಲು ಮತ್ತು ಸರಕಾರವನ್ನು ಖಂಡಿಸಿ ಮಾತಾಡಿ ಈ ತರದ ಸುಧಾರಣೆಯನ್ನು ಬೇರೆ ಪ್ರಾಂತ್ಯದವರು ಕೇಳದೆಯಿರಿ ಎಂದು ಅವರು ಹೇಳಿದ್ದಲ್ಲದೆ ಕೊಡಗಿನ ಉತ್ತಮ ಆರ್ಥಿಕ ಸ್ಥಿತಿ ಮತ್ತು ಇಲ್ಲಿಯ ಜನರಿಗಿರುವ ಕೌನ್ಸಿಲಿನ ಅನುಭವ ಮೊದಲಾದ ಕೊಡಗಿನ ಸಧಾರಣೆಗಿರುವ ಹೆಚ್ಚಿನ ಯೋಗ್ಯತೆಯನ್ನು ಎತ್ತಿ ಮಾತಾಡಿದಲ್ಲಿವೆಂಬುದು ಅವರ ಭಾಷಣವನ್ನು ಈ ಪತ್ರಿಕೆಯಲ್ಲಿ ಓದಿದವರಿಗೆ ಗೊತ್ತಾಗಿದೆ. ಈ ವಿಚಾರ ಅಲ್ಲಿ ಒತ್ತಿ ಸ್ಪಷ್ಟವಾಗಿ ಹೇಳಿದ್ದಾದರೂ ಪ್ರತ್ಯೇಕವಾದಿಗಳ ಪ್ರತಿನಿಧಿಗಳು-

ಈ ಕಸ್ಟೋಸ್‌ಪನ್ನನ ತೀರ್ಮಾನದಂತೆಯೇ ಶ್ರೀ ಭಾರ್ಗವರವರ ರಾಜ್ಯಪುನರ್ನಾ ಪಾರ್ಲಿಮೆಂಟಿನ ಜಟ್ಟಿಟ್ ವಿಟಂಗಿನಲ್ಲಿ ಚರ್ಚೆಗೆ ಬಂತು. ಈ ಸಮ್ಮಂದ ಶ್ರೀ ಗುಪ್ತರವರು ಪುನ್ಮಿಸಿರುವಂತೆ 'ಕೊಡಗು' ಪತ್ರಿಕೆಯ ಸಂಪಾದಕರು ಪಾರ್ಲಿಮೆಂಟು ಮೆಂಬರುಗಳ 'ಇನಾ' ಅಫಿಸಿಯಲ್' ರ ರಾಯಭಾರಿಗಳ ಜಿದನೆಯ ಪಟ್ಟಿಯನ್ನು ನೋಡಿರುವರು; ಮಾತ್ರವಲ್ಲದೆ ಈ ಸಮ್ಮಂಧ ಮೆಂಬರುಗಳು ಪಾರ್ಲಿಮೆಂಟಿನಲ್ಲಿ ಮಾಡಿದ ಭಾಷಣವನ್ನು ಕೇಳಿಯೇ ಪಾರ್ಲಿಮೆಂಟ್ ಸಭೆಯಲ್ಲಿ ಹಾಜರಿದ್ದ ಮಂತ್ರಿ ಶ್ರೀ ಗಾಡ್ಗಿಲ್‌ರವರು ಗೃಹಮಂತ್ರಿಯು ಪರವಾಗಿ ಉತ್ತರವಿಯುತ್ತಾ- 'ಶ್ರೀ ಪೂಣಚ್ಚನವರ ಭಾಷಣವನ್ನು ಕೇಳಿ ಕೊಡಗನ್ನು ಕೂಡಲೇ ವೈಕೂರು ಯಾ ಮಂಡ್ಯಾಸಿಗೆ ಸಂಯೋಜಿಸಬೇಕೆಂದು ಅವರು ಹೇಳಿಲ್ಲ ಹಲವರಿಗೆ ಮಂದಟ್ಟು ಮಾಡಿದ್ದಾರೆಂದು ನನಗನ್ನಿಸುತ್ತದೆ' ಎಂಬುದಾಗಿ ಹೇಳಿದರು! ಈ ಸ್ಪಷ್ಟವಾದ ಹೇಳಿಕೆಯ ನಂತರ ಶ್ರೀ ಪೂಣಚ್ಚನವರು ತಾನು ಸಂಯೋಜನೆಯ ವಿಚಾರ ಪ್ರಯತ್ನಿಸಲಿಲ್ಲವೆಂದರೆ ಇಲ್ಲಿಯ ಜನರು ಹೇಗೆ ನಂಬುವರು? ಆದೂ ಆಲ್ಲದೆ ೧೯೪೯ ನೇ ಇಸವಿ ನವೆಂಬರ್ ತಿಂಗಳಲ್ಲಿ ಗೃಹ ಮಂತ್ರಿಯರಾಗಿದ್ದ ಸರ್‌ದಾರ್ ಪಟೇಲರವರು ಕೊಡಗಿನ ೯ ಪ್ರತಿನಿಧಿಗಳನ್ನು ದೆಲ್ಲಿಗೆ ಕರೆಸಿಕೊಂಡು ಶ್ರೀ ಮೆನನ್‌ರವರ ಅಧ್ಯಕ್ಷತೆಯಲ್ಲಿ ಚರ್ಚಿಸಿದ್ದಾಗ್ಗೆ ಶ್ರೀ ಪೂಣಚ್ಚನವರು ಸಂಯೋಜನಾ ಪಕ್ಷದ ಮುಂದಾಳಾಗಿ ಚಿಕ್ಕ ಪ್ರಾಂತ್ಯವಾದ ಕೊಡಗಿನ ಆದಾಯವು ಬಹು ಕಡಿಮೆಯೂಗಿಹೆ ಎಂದೂ ಆದಕ್ಕೆ ತನ್ನ ಕಾಲಮೇಲೆ ನಿಲ್ಲಲು ಸಾಧ್ಯವಿಲ್ಲವೆಂದೂ ಇದನ್ನು ಬೇರೆ ಪ್ರಾಂತ್ಯಗಳೊಡನೆ ಸಂಯೋಜನೆ ಮಾಡಲೇ ಬೇಕಾಗುವುದೆಂದೂ ಹೇಳಿದ ಮಾತುಗಳನ್ನು ಕೊಡಗಿನ ಜನರು ಮರೆಯಲಾರರು. ಇದರೊಂದಿಗೆ ಜೂನ್ ತಿಂಗಳಲ್ಲಿ ಪಾರ್ಲಿಮೆಂಟಿನ ಜಟ್ಟಿಟ್ ವಿಟಂಗು ಮುಗಿದ ಕೂಡಲೇ ಜೋಫ್ ಕಮಿಷನರ್ ಪ್ರಾಂತ್ಯಗಳ ಪ್ರತಿನಿಧಿಗಳು ಡಾ. ಪಟ್ಟಾಭಿಯವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಭೋಪಾಲ್, ಆಜಮಿರ ಮತ್ತು ಕೊಡಗನ್ನು ಕೂಡಲೇ ದೊಡ್ಡ ಪ್ರಾಂತ್ಯಗಳೊಡನೆ ಸಂಯೋಜನೆ ಮಾಡಿ ಬಿಡಬೇಕೆಂದು ಒಮ್ಮತದಿಂದ ತೀರ್ಮಾನಿಸಿ ಇಂಡಿಯಾ ಸರಕಾರಕ್ಕೂ ಕಾಂಗ್ರೆಸ್ ವರ್ಕಿಂಗ್ ಕಮಿಟಿಗೂ ಈ ತೀರ್ಮಾನವನ್ನು ಕಳಿಸಿದ್ದು ಇಲ್ಲಿಯ ಜನರಿಗೆ ಪತ್ರಿಕೆಗಳ ಮೂಲಕ ಗೊತ್ತಾಗಿದೆ. ಈ ರೀತಿ ಪೂಣಚ್ಚನವರು ತಾವು ಮೊದಲು ಕೊಟ್ಟಿದ್ದ ಭರವಸೆಯಂತೆ ಜನರ ಅಭಿಪ್ರಾಯವನ್ನು ತೆಗೆಯಲು ಯಾವುದೊಂದು ಪ್ರಯತ್ನ ಮಾಡದೆ ಸಂಯೋಜನೆಗೆ ಒಳಗಿಂದೊಳಗೆ ಮಾಡುತ್ತಿದ್ದ ಪ್ರಯತ್ನಗಳನ್ನು ಇಲ್ಲಿಯ ಜನರು ಅರಿತುಕೊಂಡೇ ಕೊಡಗಿನ ಭವಿಷ್ಯತ್ತಿಗೆ ಅಪಾಯ ಬರುವದೆಂಬ ಸಂದರ್ಭಗಳಲ್ಲಿ ಜನರು ಎಚ್ಚೆತ್ತು ಪ್ರತ್ಯೇಕ ಪಕ್ಷದ ಕೆಲಸಗಾರರ ಸಹಾಯದಿಂದ ಕೊಡಗನ್ನು ಪ್ರತ್ಯೇಕ ಇಟ್ಟುಕೊಳ್ಳಬೇಕೆಂದು ಬಲವಾಗಿ ಚಳವಳವನ್ನು ನಡೆಸಿದ್ದಾಗಿದೆ.

ಶ್ರೀಗುಪ್ತರವರು ದೆಲ್ಲಿಯ ಸುಧಾರಣೆಗಾಗಿ ಬಹುವಾಗಿ ಪ್ರಯತ್ನಿಸಿರುವರೆಂಬುದು ಇಲ್ಲಿಯ ಜನರಿಗೆ ಗೊತ್ತಾಗಿದೆ. ಇವರ ಶ್ರಮದ ಹೆತ್ತರಲ್ಲಿ ಒಂದು ಭಾಗದಷ್ಟು ಶ್ರೀ ಪೂಣಚ್ಚನವರು ಮಾಡಿದ್ದರೆ ಕೊಡಗಿಗೆ ರಾಜ್ಯಪುನರ್ನಾ ಸಭೆಯಲ್ಲಿ ಎಂದೋ ಸುಧಾರಣೆ ದೊರೆತು ಹೋಗುತಿತ್ತು. ಶ್ರೀ ಗುಪ್ತರವರು ಕೊಡಗು ಸಂಬಾಧಕರೆಂದಿಗೆ ದೆಲ್ಲಿಯಲ್ಲಿ ಪೂಣಚ್ಚನವರ ವಿಚಾರ ಮಾತಾಡಿದಾಗ್ಗೆ ಅವರು ಸಂಯೋಜನಾವಾದಿಗಳಾದ ಕಾರಣ ಕೊಡಗಿನ ಸುಧಾರಣೆಗೆ ಹೆಚ್ಚಿನ ಪ್ರಯತ್ನ ಮಾಡಲಾರರೆಂದೂ ಅದ್ದರಿಂದಲೇ ತಾನು ಆಗಿಂದಾಗ್ಗೆ ದೆಲ್ಲಿಗೆ ಬಂದು ಸಮ್ಮಂಧಪಟ್ಟ ಅಧಿಕಾರಿಗಳ ಮತ್ತು ಪ್ರಮುಖರ ಸಹಾಯವಪ್ಪನ್ನು ಕೋರುತ್ತಿರುವದಾಗಿಹೆಯೆಂದೂ ಕೇಳಿದ್ದನ್ನು ಶ್ರೀ ಗುಪ್ತರವರು ಮರೆತಿರಲಿಕ್ಕಿಲ್ಲವಾಗಿ ನಂಜಳಾಗಿದೆ ಹೇಗೂ ಕೊಡಗಿನ ಜನರ ಅಭಿಪ್ರಾಯ ಮತ್ತು ಇಲ್ಲಿಯ ರಾಜಕೀಯ ಚಳವಳದ ಹೆಚ್ಚಿನವೂಹಿತ ಇಲ್ಲದ ಶ್ರೀಗುಪ್ತರವರು ಕೊಡಗಿನ ಸಂಪಾದಕರ ಕರ್ತವ್ಯದ ವಿಚಾರ ಬೋಧನೆಯನ್ನು ಕೊಡುವ ಅವಶ್ಯಕತೆಯಿಲ್ಲ ಪಾರ್ಲಿಮೆಂಟಿನಲ್ಲಿ ಕೊಡಗಿನ ಪ್ರತಿನಿಧಿಯೂದ ಶ್ರೀ ಪೂಣಚ್ಚನವರು ಅಲ್ಲಿ ಮಾಡಿದ ಕಲಸಗಳನ್ನು ತಾನು ಪ್ರತಿನಿಧಿಸುವ ಜನರಿಗೆಆಗಾಗ್ಗೆ ತಿಳಿಸಬೇಕಾದ್ದು ಅವರ ಕರ್ತವ್ಯವಾಗಿತ್ತು. ಅದರ ಬದಲು. ಇಂದು ಅವರು ಶ್ರೀ ಗುಪ್ತರವರ ಸರ್ಟಿಫಿಕೇಟಿನ್ನು ಜನರ ಮುಂದಿಡುವಂಥಾ ಪರಿಸ್ಥಿತಿಯನ್ನು ಕಲ್ಪಿಸಿಕೊಳ್ಳಬೇಕಿತ್ತೆ?

— ಸಂಪಾದಕ

ಮೂರಾಟಕ್ಕೆದೆ.

ಸೋಮವಾರಪೇಟೆನಾಡು ತಾಲೂಕು ಗ್ರಾಮದಲ್ಲಿ, ಸರ್ಕಾರಿ ರಸ್ತೆಗೆ ೬ ಫರ್ಲಾಂಗು ದೂರದಲ್ಲಿರುವ, ಫಲಭರಿತ ಜೀನ್ನಾಗಿ ಬಿಡುತ್ತಿರುವ ಈ ವರ್ಷ ೮ ಖಂಡಿ ಕಾಫಿ ಅಂದಾಜು ಇರುವ ಉತ್ತಮ ದರ್ಜೆಯ ಕಾಫಿ ತೋಟ ೮ ಎಕ್ರೆ, ಉತ್ತಮ ಸ್ಥಿತಿಯಲ್ಲಿರುವ ೭ ಎಕ್ರೆ ಹೊಸ ಕಾಫಿ ತೋಟ ಜುವ್ವ ದಶ ಎಕ್ರೆ ಕಾಫಿ ತೋಟ ಒಳ್ಳೆಯ ನೀರಾವರಿ ೧೫ ಎಕ್ರೆ ಭೂಮಿ (ಸಾಗಾಗುತ್ತಿದೆ) ೧೫೦೦ ಕಿತ್ತಳೆ ಮರಗಳೂ ೫ ವರ್ಷ ಪ್ರಾಯದ ೫೦೦ ಕಿತ್ತಳೆ ಗಿಡಗಳೂ ಸೇರಿ ವರ್ಷಕ್ಕೆ ರೂ. ೩೫೦೦ ಗುತ್ತಿಗೆ ಬರುವ ಕಿತ್ತಳೆ ತೋಟ, ವರ್ಷಕ್ಕೆ ೧೫೦ ಮಣ ಫಲ ಬರುವ ಅಂದಾಜು ೬೦೦ ಮೆಣಸಿನ ಹಂಬು, ಹುಲ್ಲುಗಾವಲು ೫ ಎಕ್ರೆ ಮೂರಾಟಕ್ಕಿದೆ. ಸಮೀಪ ಸರ್ಕಾರಿ ವೈದ್ಯಾರಿ ಜಾಗ ತಂಬಾ ಇದ್ದು ಮಡಿಕೇರಿ ಸೋಮವಾರಪೇಟೆ ರಸ್ತೆ ೫೦ ನೇ ಮೈಲಿನ ಸಮೀಪ ಹಾರಂಗಿ ರಸ್ತೆಯಲ್ಲಿ ಆಸ್ತಿ ಇದೆ. ಕೊಳ್ಳುವ ಇರಾದೆ ಇರುವವರು ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು. ಕ್ರಯ ರೂ. ೬೦,೦೦೦/-. ವರ್ಷಕ್ಕೆ ೧೫,೦೦೦ ರೂಪಾಯಿ ಉತ್ಪತ್ತಿ. ಯಾಗುವ ಆಸ್ತಿ.

ಎಸ್. ಕೆ. ಕೃಷ್ಣಮೂರ್ತಿ,
ಕಾಜೂರು, ಬೇಳೂರು ಪೋಸ್ಟ್,
ಉತ್ತರ ಕೊಡಗು.

ಸರ್ವೋದಯ ಸಮಾಜದ ದೃಷ್ಟಿ

ಲೇ:—ಶ್ರೀ ಬಿ. ಡಿ. ಗಣಪತಿ.

ಪ್ರೇಮದ ಆದರ್ಶ

ಒಂದು ಮನೆಯಲ್ಲಿ ತಾಯಿ ಮತ್ತು ಮಗ ಇಬ್ಬರೇ ಇದ್ದಾರೆ. ಮನೆಯಲ್ಲಿ ಉಟಕ್ಕೇ ತೊಂದರೆಯಾಗಿದೆ ಮನೆಯಲ್ಲಿ ಕೇವಲ ಒಂದು ರೊಟ್ಟಿ ಇದೆ ತಾಯಿಗೂ ಮಗುವಿಗೂ ಇಬ್ಬರಿಗೂ ಹಸಿವಾಗಿದೆ. ತಾಯಿ ರೊಟ್ಟಿಯನ್ನು ಮಗುವಿಗೆ ಕೊಡುತ್ತಾಳೆ. ತಾನು ಉಪವಾಸವಿದ್ದರೂ ಶಕ್ತಿ ಇರುವ ತನಕ ಮಗುವನ್ನು ಸಾಕುವುದಿಂದಿಲ್ಲ ಪ್ರಯತ್ನಿಸುತ್ತಾಳೆ. ತಾಯಿಯು ಮಗುವಿಗಿಂತಾ ಶಕ್ತಿ ಇರುವವಳು. ಇನ್ನು ಹುಟ್ಟಿರುವ ಮಗುವಿಗೆ ಕೊಡದೆ ತಾನೇ ರೊಟ್ಟಿಯನ್ನು ತಿನ್ನಬಹುದು. ಆದರೆ ಆ ಹಾಗೆ ಮಾಡಲಾರಳು. ಮಗುವಿನ ನಿರ್ಬಲತೆಯು ಮಗುವನ್ನು ಆಕರ್ಷಿಸುತ್ತದೆ. ಇದೇ ತಕ್ಷಣ ಮನುಷ್ಯ ಸಮಾಜದಲ್ಲಿ ಕಾರ್ಯರಂಗಕ್ಕಿಳಿಯುವುದಾದರೆ ನಿರ್ಬಲರಾದ ಬಡವರಿಗಾಗಿ ಧನಿಕರೂ, ವಿದ್ಯಾವಂತರೂ, ಮಾನಸಿಕ ಹಾಗೂ ಶಾರೀರಿಕ ಶಕ್ತಿ ಇಲ್ಲದವರಿಗಾಗಿ ಆ ಶಕ್ತಿ ಇರುವವರೂ ದುಡಿಯಬೇಕಾಗುವದು. ತಾಯಿ ಮಗುವನ್ನು ರಕ್ಷಿಸುವಾಗ, ಪೋಷಿಸುವಾಗ, ಆಗ ಅವರ ಕೇವೆ ಮಾಡುವಾಗ ಹೆಮ್ಮೆಯ ಭಾವವು ಅಲ್ಲಿಲ್ಲ. ಎಲ್ಲಾ ಸೇವೆಗಾಗಿ, ನಿಷ್ಕಾಮ ಸೇವೆಯಿಂದ ದೊರೆಯುವ ಆ ಆತ್ಮಸಂತೋಷಕ್ಕಾಗಿ. ಸೇವೆಯಲ್ಲಿರುವಾಗ ಸಾಧಕ ಭಾವಗಳನ್ನು ತಾಗಿ ನೋಡುವ ಆ ಅನುಭವಕ್ಕಾಗಿ! ಮತೆಯೇ ಈ ಆರ್ಶವನ್ನು ಮುಂದಿಟ್ಟುಕೊಂಡು ಆ ರೀತಿಯಲ್ಲಿ ಶಕ್ತಿವಂತರು ನಿರ್ಬಲರನ್ನೂ, ಧನ ಸ್ಥರು ಬಡವರನ್ನೂ, ಜ್ಞಾನಿಗಳು ಅವಿದ್ಯಾವಂತರನ್ನೂ ಮೇಲೆತ್ತಲಿಚ್ಛಿಸಿದರೆ ಅದೇ ಉದಾತ್ತವಾದ ಸರ್ವೋದಯ ಮಾರ್ಗ.

ನನ್ನ ಇಂದಿನ ಸಮಾಜದಲ್ಲಿರುವ ಕೆಲವು ವಿಚಾರಗಳನ್ನು ತೆಗೆದುಕೊಂಡು ಸರ್ವೋದಯ ತತ್ವದಂತೆ ಅವುಗಳ ಸುಧಾರಣೆ ಹೇಗಾಗಬೇಕೆಂದು ಪರಿಶೀಲಿಸುವಾ.

ದುಡಿಯುವ ಮತ್ತು ದುಡಿಸಿಕೊಳ್ಳುವವ.

ಪ್ರಪಂಚದ ಇಂದಿನ ಹಲವು ಸಮಸ್ಯೆಗಳಿಗೆ ಇವರಿಬ್ಬರೊಳಗಿನ ಸಂಬಂಧವೇ ಮುಖ್ಯ ಕಾರಣವೂ, ಸೌಮ್ಯಪೂರ್ಣವೂ ಆಗಿಲ್ಲದಿರುವುದೇ ಕಾರಣ ಇಂದಿನ ಪರಿಸ್ಥಿತಿಯಲ್ಲಿ ಹರ್ತರರಲ್ಲಿ ಅವಿಶ್ವಾಸವು ತುಂಬಿ ಒಬ್ಬರ ಮೇಲೆ ಮತ್ತೊಬ್ಬರು ಸಂಚು ಮಾಡುವದನ್ನೇ ಗುರಿಯನ್ನಾಗಿಟ್ಟುಕೊಂಡು ವರ್ತಿಸುವ ಸ್ಥಿತಿಯಾಗಿದೆ. ಕೆಲವು ಮಾಡುವವನು ಸಾಕಷ್ಟು ಕೆಲಸ ಮಾಡಿದೆ ವೇತನ ಹೊಡೆಯುಬೇಕೆಂದು ಬಯಸುತ್ತಿದೆ, ಕೆಲಸ ಮಾಡಿಸುವವನು ಕಡಿಮೆ ವೇತನ ಕೊಟ್ಟು ತುಂಬಾ ದುಡಿಸಿಕೊಳ್ಳಬೇಕೆಂದು ಬಯಸುವನು. ಈ ಪರಸ್ಪರ ದೋಷದೃಷ್ಟಿ ಬದಲಾಗಬೇಕು. ಕೆಲಸ ಮಾಡಿಸುವವನಲ್ಲಿಯೂ, ಕೆಲಸ ಮಾಡುವವನಲ್ಲಿಯೂ ಬೇಧವಿಲ್ಲ; ಒಬ್ಬನೇ ಧನಿಕ ಮತ್ತೊಬ್ಬನು ಬಡವನಲ್ಲ; ಇಲ್ಲವೇ ಒಬ್ಬನು ದುಡಿಯದೂನ ಮತ್ತೊಬ್ಬನು ಸೇವಕನಲ್ಲ ಒಬ್ಬನು ಮೇಲು ಮತ್ತೊಬ್ಬನು ಕೀಳಲ್ಲ ಒಬ್ಬನೆನ್ನಿಸಿ ಹೊಣೆಯೂ ಬಂಡವಾಳವಿದ್ದರೆ ಇನ್ನೊಬ್ಬನಲ್ಲಿ ಶ್ರಮಿಸುವ ಶಕ್ತಿಯು ಆ ಬಂಡವಳವಿದೆ. ಆದ್ದರಿಂದ ದುಡಿಸಿಕೊಳ್ಳುವವನು ದುಡಿಯುವವನ ಹಿತಾಹಿತಗಳನ್ನು ನೋಡಬೇಕು. ದುಡಿಸಿಕೊಳ್ಳುವವನಿಂದ ತಾನು ಪಡೆಯುವ ಸೌಕರ್ಯಕ್ಕೆ ಪ್ರತಿಯಾಗಿ ದುಡಿಯುವವನು ನ್ಯಾಯ ದೃಷ್ಟಿಯಿಂದ ಶ್ರಮಿಸಬೇಕು. ದುಡಿಯುವವನು ದಿನಕ್ಕೆ ಐದು ರೂಪಾಯಿಗಳ ಕೆಲಸ ಮಾಡಿದರೂ ದುಡಿಸಿಕೊಳ್ಳುವವನು ಒಂದು ರೂಪಾಯಿಯು ವೇತನ ಕೊಟ್ಟರೆ ದುಡಿಯುವವನನ್ನು ಸುಲಿಗೆ ಮಾಡಿದಂತಾಗುವದು. ದುಡಿಸಿಕೊಳ್ಳುವವನಿಂದ ಒಂದು ರೂಪಾಯಿ ವೇತನ ಪಡೆದು ಕೇವಲ ಎಟ್ಟಾಣೆಗನ್ನುರೂಪವಾಗಿ ದುಡಿದರೆ ದುಡಿಯುವವನನ್ನು ದುಡಿಸುವವನೇ ಸುಲಿಗೆ ಮಾಡಿದಂತಾಗುವದು. ದುಡಿಯುವವನು ಅಪಾರ ಲಾಭ ಪಡೆಯುತ್ತಿದ್ದರೆ ದುಡಿಯುವವನು ತನ್ನ ಅನುಕೂಲತೆಗೆ ಪಾಲು ಬೇಡುವದು ಅದಕ್ಕಾಗಿ ಮುಷ್ಕರ ಹೂಡುವದು ಅಪರಾಧವಾಗದು. ಆದರೆ ಲಾಭವಿಲ್ಲದೆ ಶ್ರಮ ಯಂತ್ರ ಸಾಮಗ್ರಿಗಳನ್ನೇ ದೊರಸುಗೊಳಿಸುವದು ದುಡಿಸಿಕೊಳ್ಳುವವನಿಗೆ ಅಸಾಧ್ಯವಾಗಿರುವಾಗ ಹೆಚ್ಚಿನ ಬೇಡಿಕೆಗಳನ್ನು ಮುಂದಿಡುವದೂ, ಮುಷ್ಕರ ಹೂಡುವದೂ ಧರ್ಮವಾಗದು. ದುಡಿಸುವವನ ಹಾಗೂ ದುಡಿಯುವವರೊಳಗಿನ ಈ ರೀತಿಯ ಸೌಹಾರ್ದಭಾವವೇ ಸರ್ವೋದಯದ ಗುರಿ. ಶಕ್ತಿ, ನೀತಿಗಳ ತಳಹದಿಯಲ್ಲಿ ನಿಂತ ಈ ಮಾರ್ಗವೇ ರಾಷ್ಟ್ರದ ಪ್ರಗತಿಗೂ ಜನತೆಯ ಸೌಖ್ಯಕ್ಕೂ ತಳಹದಿ. ಏಕೆಂದರೆ ಒಬ್ಬರನ್ನು ಮತ್ತೊಬ್ಬರು ಸುಲಿಗೆ ಮಾಡಿ ಯಾ ಒಬ್ಬರನ್ನೊಬ್ಬರು ಶಿಕ್ಷಿಸಿ ಯಾ ಮೇಲೆ ಇಲ್ಲದೇ ಬಲಾತ್ಕಾರದ ಮಾರ್ಗದಿಂದ ಕೆಲಸ ಮಾಡಿಸಲಾಗುವದಿಲ್ಲ.

ಹೇರ ಸೈನಿಕ

ಹಿಂಸೆಯನ್ನು ನಾವು ಯಾವಾಗಲೂ ವಿರೋಧಿಸುತ್ತೇವೆ ರಕ್ತ ಚೆಲ್ಲುವವರನ್ನು ರಕ್ಷಸರೆನ್ನುತ್ತೇವೆ. ಆದರೆ ಸೈನಿಕನೆನ್ನುವವನ ವ್ಯಾಮುಖ್ಯ ಕೆಲಸ ಇನ್ನೊಬ್ಬನ ರಕ್ತ ಚೆಲ್ಲುವದೇ ಆಗಿದೆ. ಆತನು ಹಿಂಸಾತ್ಮಕ ವೃತ್ತಿಯವನಾದರೂ ಆತನನ್ನು ಮೆಚ್ಚುತ್ತೇವೆ. ವೀರನೆನ್ನುತ್ತೇವೆ. ಗೌರವಿಸುತ್ತೇವೆ. ಏಕೆ? ಸೈನಿಕನು ಯಾವ ದೇಶಕ್ಕಾಗಿ ತನ್ನ ದೇಶಕ್ಕಾಗಿ ಪ್ರಾಣ ಕೊಡಲು ತಯಾರಿದ್ದಾನೆ. ತನ್ನ ಸ್ವಾರ್ಥ ಸುಖ, ಕಲ್ಯಾಣಗಳನ್ನು ಬದಿಗೊತ್ತಿ ರಣರಂಗಕ್ಕೆ ನಡೆಯಲು ತಯಾರಾದಾನೆ. ಈ ತ್ಯಾಗಕ್ಕಾಗಿ ಅತನಿಗೆ ಗೌರವ. ಅತನು ನೀತಿ ನಡತೆ ಇಲ್ಲದವನಿರಬಹುದು. ಹೊಟ್ಟೆಯ ಪಾಡಿಗಾಗಿ ಆ ವೃತ್ತಿಯನ್ನೆನು ಸುಸಿಂಬಹುದು. ಅದರೂ ಕರೆ ಬಂದಾಗ ಈ ಜಗತ್ತಿನ ಭೋಗ ಭಾಗ್ಯಗಳನ್ನು ಬಿಟ್ಟು, ಪ್ರಾಣದ ಮಮತೆಯನ್ನು ಕೊರೆದು ಹೋರಾಡುವ ಆತನ ಆತುನೋವೃತ್ತಿಗಾಗಿ ಕೊಂಡಾಡುವೆವು ಹಿಂಸಾ ಮಾರ್ಗದ ಈ ಸೈನಿಕನ ತ್ಯಾಗಕ್ಕಾಗಿ ಆತನ ವೇತನ್ಯೆಂ ಮಕ್ಕಾಗಿ ನಾವು ಆತನನ್ನು ಕೊಂಡಾಡುತ್ತಿರುವಾಗ ಅಹಿಂಸಾ ಮಾರ್ಗದ ಸೈನಿಕನ ಪ್ರತಿಗೆ ಏನೆ ಇರದು. ಇನ್ನೊಬ್ಬರ ಸುಲಿಗೆ ಮಾಡದೆ ತನ್ನ ದುಡಿಮೆಯ ಬಲದಲ್ಲಿ ಜೀವಿಸಿ, ಸತ್ಯ ನೀತಿ ನಡತೆಯಲ್ಲಿ ಬದುಕುವ ವ್ಯಕ್ತಿವಂದನಾರ್ಹನು ಆತನು ಇನ್ನೊಬ್ಬನ ಕೊಲೆ ಮಾಡಲಾರನು ಆ ವಕ್ಕೆ ಬೆದ್ರಾಗ ತನ್ನ ಪ್ರಾಣವನ್ನರ್ಪಿಸಲು ತಯಾರಿರುವನು. ಇನ್ನೊಬ್ಬರ ದಯಾಕ್ಷಿಣ್ಯಕ್ಕಾಗಿ ತಾನೂ ಪರಿತಪಿಸುವನು. ಇತರರಿಗೆ ನೆರವಾಗುವದೇ ಜೀವನದ ಗುರಿ ಎನ್ನುವನು. ಇಂಥಾ ದೇಶ ಸೈನಿಕರ ತಂಡವೇ ಸರ್ವೋದಯದ ಗುರಿ. ಮಹಾತ್ಮಾಗಾಂಧಿಯವರಂಥಾ ದೇಶ ಸೈನಿಕರಲ್ಲಿ ನಿರ್ಮಿಸುವ ಸಾಧನೆಯೇ ಇದು ನೂರಿನ ಯುದ್ಧಾನಂತರಗಳ ವರೆಗೆ ಅಂಥಾ ಒಬ್ಬ ಸೈನಿಕನನ್ನು ತಯಾರಿಸುವದು ಸರ್ವೋದಯ ಚಳವಳಿಗೆ ಸಾಧ್ಯವಿಲ್ಲದಿರಬಹುದು. ಆದರೆ ಆ ಪ್ರಯತ್ನವೇ ಶುದ್ಧಿಯ ಮಾರ್ಗ. ಕಬ್ಬಿಣವನ್ನೆವಾಗಲಾರದಾದರೂ ಸತತ ಪ್ರಯೋಗ ಘರ್ಷಣೆಗಳಿಂದ ಅಂಟ್ಕಿ ಕೊಳ್ಳುವುದಾದರೂ ತೊಳೆದುಕೊಂಡು ಪರಿಶುದ್ಧವಾಗಲಿಲ್ಲವೇ?

ಸೇವಾ ಮಾರ್ಗ.

ನಮ್ಮ ಸಮಾಜದಲ್ಲಿ ವಕೀಲರು, ವೈದ್ಯರು, ಅಧಿಕಾರಿಗಳು, ವ್ಯಾಪಾರಿಗಳು ಮೊದಲಾದವರು ಇದ್ದಾರೆ ಪ್ರತಿಯೊಬ್ಬನು ಕೈಗೊಂಡಿರುವ ಆಯಾ ಉದ್ಯಮಗಳು ಅವರವರ ಜೀವನ ವಾರ್ಗವೆಂದು ಹೇಳಬೇಕಾಗಿದೆ ಇದರಲ್ಲಿ ಕಷ್ಟಿಷ್ಟ. ಈ ಜೀವನ ಮಾರ್ಗವೇ ಸೇವಾ ಮಾರ್ಗವೂ ಹೌದೆಂದೂ, ನ್ಯಾಯ ಸಮ್ಮತ ರೀತಿಯಿಂದ ತನ್ನ ಜೀವನಕ್ಕೆ ಬೇಕಾದುದನ್ನು ಹೊಂದಿಕೊಂಡು ಅದಕ್ಕೆ ಅನುರೂಪವಾದ ಸೇವೆಯನ್ನು ಪ್ರತಿಯೊಬ್ಬನು ಪಲ್ಲಿಸಬೇಕೆಂಬುದೇ ಸರ್ವೋದಯದ ಆಸೆ. ಈ ಜೀವನ ಮಾರ್ಗವೇ ಸೇವಾ ಮಾರ್ಗವೆಂಬುವುದನ್ನು ಬಿಟ್ಟು ಅನ್ಯಾಯ ಲಂಚಕ್ಕೂ ಬೇರಾವುದಕ್ಕೋ ವರ್ತಿಸಿದರೆ ಆಗಲೂ ಸರ್ವನಾಶವಾಗದಿರದು. ವಕೀಲನು ದುಡ್ಡಿನ ಆಸೆಯಿಂದ ಅನ್ಯಾಯವನ್ನು ನ್ಯಾಯವೆಂದು ಸಮರ್ಥಿಸಿದರೆ ಆತನು ತನ್ನ ವೃತ್ತಿಯ ನೈತಿಕಾಚಾರ ಮಾಡಿದಂತೆ! ನ್ಯಾಯಾಧೀಶನು ಲಂಚಕ್ಕೊ ಬೇರಾವುದಕ್ಕೋ ವರ್ತಿಸಿದರೆ ನ್ಯಾಯವನ್ನು ಅನ್ಯಾಯವೆಂದು ಸಾರಿದರೆ ಅದು ಅನೀತಿಯೆನಿಸದೇ? ಅಧಿಕಾರಿಯು ಜನರ ಸೇವಕನಾಗದೆ ಅವರು ಸುಲಿಗೆದಾರನಾಗಿ ಅಧಿಕಾರ ಚಲಾಯಿಸಿದರೆ, ವೈದ್ಯನು ರೋಗಿಯನ್ನು ತನ್ನ ಸಂಪತ್ತಿನ ಸಾಧನವಾಗಿ ಉಪಯೋಗಿಸಿ ಆತನನ್ನು ನರಳಿಸಿದರೆ ಅದು ನಿಜಕ್ಕೂ ನೈತಿಕ ಭ್ರಷ್ಟಾಚಾರವೆನಿಸುವದು.

ವ್ಯಾಪಾರಿಗೆ ಇಂದು ಸಮಾಜದಲ್ಲಿ ಯಾವ ಗೌರವವಿಲ್ಲ ನಮ್ಮ ಸಮಾಜವು ಇಂದು ದುಡ್ಡಿನ ಸುತ್ತಲೇ ಜೀವನ ವಾಹಿಂಥಾ ವಿಷಯಲೆಂದು ಭಾವಿಸಿದ್ದರೂ, ದುಡ್ಡಿರುವನನ್ನೇ ದೊಡ್ಡವನೆಂಬ ಆಳತೆಗೋಲಾಗಿ ಹಿಡಿದು ವರ್ತಿಸುತ್ತಿದ್ದರೂ ನ್ಯಾಯ ನೀತಿಗೆ ತಿಲಾಂಜಲಿ ಬಿಟ್ಟಿರುವ ಅನೇಕ ಉದಾಹರಣೆಗಳನ್ನು ಕೊಡಬಲ್ಲೆ. ನಮ್ಮ ಸಮಾಜವು ವ್ಯಾಪಾರಿಗೆ ಇಂದು ಹೆಚ್ಚಿನ ಗೌರವ ಕೊಡುತ್ತಿಲ್ಲ. ಆದರಲ್ಲಾ ವ್ಯಾಪಾರವೆಂಬ ಉದ್ಯಮವನ್ನು ಸ್ವಾರ್ಥಲಾಭದ ಹಾಗೂ ದುಡ್ಡಿಗಳಸುವ ಮಾರ್ಗವಾಗಿ ಉಪಯೋಗಿಸಿಕೊಂಡು ಕೆಳ ದೃ ಮಾರಾಟ, ಅಳತೆ ಬಡಿಕತನಗಳಿಗೆ ಬಲಿಬಿದ್ದವರನ್ನು ದೇಶ ದ್ರೋಹಿಗಳೆಂದು ಪರಿಗಣಿಸುತ್ತದೆ. ವ್ಯಾಪಾರಿಯು ಯಾವಾಗಲೂ ಸ್ವಾರ್ಥತೆಯಿಂದ ದುಡಿಯುವನೆಂದು ಸ್ವಯಂ ಸಿದ್ಧವಾಗಿದೆ. ಆತನಲ್ಲಿ ಮಾನವತೆಯು ಲುಪ್ತವಾಗಿ ಹೋಗಿದೆ. ನಿಮ್ಮಿಂದ ಆತನಿಗೆ ಲಾಭವಿದ್ದರೆ ಮಾತ್ರ ಆತನಲ್ಲಿ ಸ್ನೇಹದ ಮಾತು ಹಾಗೂ ಪ್ರಾಪಂಚಿಕವರ್ತನೆಯನ್ನು ನೀವು ಕಾಣಬಹುದು. ಇಲ್ಲದಿದ್ದರೆ ಮಾತು ಕೂಡ ಆಡದು. ಆತನಿಗೆ ಸ್ನೇಹಿತ, ಬಂಧು ಬಳಗವೆಂದು ಕೂಡ ಇಲ್ಲ. ಆತನ ಗುರಿ ಹಣಗಳಿಸುವದು. ಅದಕ್ಕಾಗಿ ಅಣ್ಣ ತಮ್ಮಂದಿಯರನ್ನು ಆತನು ಸುಲಿಗೆ ಮಾಡಲು ಹಿಂಜರಿಯನು.

'ಕೊಟ್ಟವ್ವ ಕನಗೆ ಬೈಜಿಟ್ಟವ್ವ ಪರರಿಗೆ' ಎಂಬ ಸರ್ವಜ್ಞನ ವಚನದಂತೆ ಜಗತ್ತಿನ ಜೀವ ಜೀವಾಳ ತ್ಯಾಗದಲ್ಲಿದೆಯೆಂಬುದನ್ನು ಸರ್ವೋದಯ ಸಾರುತ್ತಿದೆ ಇನ್ನೊಬ್ಬನನ್ನು ತನ್ನಂತೆ ಕಂಡು ಅತನ ಹಿತವೇ ತನ್ನ ಹಿತವೆಂದು ಸಾಧಿಸಲೆತ್ನಿಸುವ ಮಾರ್ಗವೇ ಸರ್ವೋದಯದ ಮಾರ್ಗ. ಆಲ್ಲಿ ಮೇಲು ಕೀಳಲ್ಲ; ಧನಿಕ ಬಡವರಿಲ್ಲ; ಗರ್ವ ಅಹಂಕಾರಗಳಿಲ್ಲ. ಪರಸ್ಪರ ಪ್ರೇಮ ಆನುಬಂಧದಿಂದ ಬಂಧಿಸಲ್ಪಟ್ಟ ಆ ಸಮಾಜದಲ್ಲಿ ಸರ್ವರೂ ಸರ್ವರಿಗಾಗಿ ದುಡಿಯುವವರೇ ಸರ್ವರ ಹಿತದಲ್ಲಿ ತನ್ನ ಹಿತವೂ ಅಡಗಿದೆಯೆಂಬ ಭಾವವಿರುವವರು. ಹೊಡಗು ಮಂಗಳ ಗುರಿಯಾಗಿರುವಾಗ ಕಾಫಿ ತೋಟಗಳಿಗೆ ಹಣಗಳಿಸಿಕೊಡುವ ಇತರರಿಗೆ ಸೇರಿಸಿ ಹಿಂದೆ ಕಾಫಿ ಒರುವಂತೆ ಮಾಡಿದ್ದಾ ಕೆನಿಸಿದವನು ಇತರರ ಹಿತ ಚಿಂತನೆಯನ್ನು ಮೊದಲು ಮಾಡಬೇಕು ತನ್ನ ಮಗುವನ್ನು ರಕ್ಷಿಸಲು ಪ್ರಾಣವನ್ನು ಲೆಕ್ಕಿಸದ ಮಾತೆಯಂತೆ ತನ್ನ ಹಿನಾದಲ್ಲಿರುವವರಿಗಾಗಿ, ನೆರೆಯವರಿಗಾಗಿ ಅಷ್ಟು ತೀವ್ರತೆಯ ಉತ್ಸಾಹವನ್ನು ತಾಳಿರಬೇಕು ನಾವು ಜಾತೀಯತೆಯನ್ನು ನೋಡಿದರೆ ಕನ್ನಿಷ್ಟವರ್ಗದ ಪ್ರಾಣ ರಕ್ಷಣೆಗಾಗಿ ತನ್ನ ಪ್ರಾಣ ತೀರ್ಥ ಬಾಬರನು ತ್ಯಾಗವನ್ನು ನೆನೆದು ಸ್ಫೂರ್ತಿಯನ್ನು ಪಡೆಯುತ್ತೇವೆ. ದೇಶಕ್ಕಾಗಿ ಪ್ರಾಣ ತ್ಯಾಗ ಭಗತ್ ಸಿಂಗ್, ನೇತಾಜಿ ಮೊದಲಾದವರನ್ನು ನೆನೆಸಿ ಪುಳಕಿತಗುತ್ತೇವೆ. ಇಡೀ ಮಾನವಕುಟುಂಬಕ್ಕಾಗಿ, ಒಲಿಚರವಸ್ತು ಸಿಕ್ಕರಕ್ಕಾಗಿ ತನ್ನ ಕಾತರತೆಯನ್ನು ತೋರಿ ಅನ್ಯಾಯಕ್ಕೊಳಗಾದ ಹಿತಕ್ಕಾಗಿ ತನ್ನ ವನ್ನು ಶೋಷಿ ವಿನಿಯೋಗಿಸಿದ್ದಾ ಕ್ರಿಸ್ತ ಬುದ್ಧನ ಹಾತ್ಮಾಗಾಂಧಿಗಳಾದಿಯಾಗಿ ನ್ಮ ಪೂರ್ವಜರ ಪಟ್ಟಿಯೇ ಆದಿಯಾಗಿದೆ. ಆದ್ದರಿಂದ ಪ್ರಪಂಚದಲ್ಲಿ ವಿವಿಧ ಅಂತರ್ಯುದ್ಧಗಳ ಮೇಲೆ ವಿಜಯಲ ಸ್ಫೋನುಮೇ ಸರ್ವೋದಯದ ಗುರಿ. ಸರ್ವೋದಯದ ಆದರ್ಶವನ್ನು ನೋಡಿ ಇದು ಆಗದ ಕಾರ್ಯವೆಂದು ಯಾರಿಗೂ ಜಿಗುಪ್ಸೆ ಪಡದಿರಲಿ ನಮ್ಮ ಗುರಿಯನ್ನು ಮುಟ್ಟಲಿಲ್ಲವೆ ಮಾಡಿದರೂ ಈ ಪರಸ್ಪರ ಬಿಕ್ಕಟ್ಟಿನ ಕಾಲಕ್ಕೆ ನಮಗಾಗಿ ಸಾಧ್ಯವಾದಷ್ಟು ಮಟ್ಟಿಗೆ ಪರಿಹಾರವನ್ನಾದರೂ ಪಡೆಯಲಿಬಹುದು. ಈ ಪ್ರಯತ್ನವನ್ನು ಬಿಟ್ಟು ಮಾನವನ ಜೀವನಕ್ಕೆ ಬೇರೆ ಆರ್ಥ ಇರಲಾರದು.

— —

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಿಗಳು ಮತ್ತು ಎಲ್ಲಾ ಪರಿಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245ರ ವರೆಗೆ.
2. 12ನೇ ನಂಬರಿನ ಒಂಟಿ ಹೊಳವಿನ ಕೋವಿ ಕ್ರಯ ರೂ. 320-0-0
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott)
4. 12ನೇ ನಂಬರಿನ ಜೋಡು ಕೊಳವಿನ ಕೋವಿ (Spanish make)
5. .32 ಪಿಸ್ತೂಲು ಮತ್ತು ರಿವಾಲ್ವರುಗಳ ಕೋಟಿಗಳು ಸಹ ದೊರೆಯುತ್ತವೆ.
6. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೆಮಾಡುವ ಪಂಪುಗಳು (Spraying Pumps)
7. ¾" ½" ¾" ¾" ¼" ಕಬ್ಬಿಣದ ಸಲಾಕೆಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಿಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

52-52

ದಿ ಪ್ರೊಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮುಖ್ಯ ಆಫೀಸು:-ಹೊಸ ಡೆಲ್ಲಿ.

52-19 ಸ್ಥಾಪಿಸಿದ ವೈಲೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮಲಖಾನ್. ಡಾ|| ಎಂ. ಎ ಅನ್ಸಾರಿ.

Transacts:--LIFE, FIRE, MOTOR and MARINE.

ಬ್ರಾಂಚ್ ಸೆಕ್ರೆಟರಿ,
ಪಂಪನಕಟ್ಟಾ, ಮಂಗಳೂರು.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ.ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಖಲಗು	ರೂ.	1,99,400.
ಕ್ಷೇಮನಿಧಿ	ರೂ.	69,000.
ಇತರ ನಿಧಿಗಳು	ರೂ.	36,000.

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದ

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯೂ ಹ್ಯಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರೆನಿಟಿ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಕೆ. ಪಿ. ಅಪ್ಪಯ್ಯ, M. L. C.
ಜಂ. ಕಾರ್ಯದರ್ಶಿ, ಪ್ರೆಸಿಡೆಂಟ್ ಮತ್ತು ಮ್ಯಾನೇಜರ್.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

ಅಮೇರಿಕೆಯಲ್ಲಿ
ಮಹಿಳೆಯರ ಪಾತ್ರ

೧೭೫೫ ವರ್ಷಗಳಿಂದ ಸ್ವತಂತ್ರ ರಾಷ್ಟ್ರವಾಗಿ ವಿರಾಜಿಸುತ್ತಿರುವ ಅಮೇರಿಕದ ರಾಷ್ಟ್ರೀಯ ಜೀವನದಲ್ಲಿ ಮಹಿಳೆಯರು ಇಂದು ಪ್ರಮುಖ ಪಾತ್ರ ವಹಿಸಿದ್ದಾರೆ. ಸದ್ಯದಲ್ಲಿಯೇ ಅಮೇರಿಕೆಯ ಮಹಿಳೆಯರು ತಮ್ಮ ಹಕ್ಕು-ಬಾಧ್ಯತೆಗಳನ್ನು ಗಳಿಸಿದ ದಿನದ ವಾರ್ಷಿಕೋತ್ಸವವನ್ನು ನೆರವೇರಿಸುವರು.

೧೯೨೦ ನೇ ಇಸ್ವಿ ಆಗಸ್ಟ್ ೨೬ ನೇ ತಾರೀಖಿನ ದಿನ ಅಮೇರಿಕೆಯ ರಾಜ್ಯಾಂಗಕ್ಕೆ ೧೯ ನೇ ತಿದ್ದುಪಡಿಯನ್ನು ಮಾಡಲಾಯಿತು. ಆ ತಿದ್ದುಪಡಿಯ ಪ್ರಕಾರ ಅಮೇರಿಕೆಯ ಎಲ್ಲಾ ವಯಸ್ಸಿಗೆ ಬಂದ ಮಹಿಳೆಯರಿಗೆ ಮತಾಧಿಕಾರ ಕೊಡಲು ನಿರ್ಧರಿಸಲಾಯಿತು.

ಸ್ತ್ರೀಯರಿಗೆ ಮತಾಧಿಕಾರ ಕೊಡುವ ಹಕ್ಕು ಕ್ರಮೇಣ ಹೋರಾಟದ ಫಲವಾಗಿ ಸ್ಥಾಪಿಸಲಾಯಿತು. ಹಳೆಯ ಕಂದಾಚಾರದ ಫಲವಾಗಿ ಇದ್ದ ಪದ್ಧತಿಯ ದೆಸೆಯಿಂದ ಸ್ತ್ರೀಯರು, ರಾಜಕಾರಣದಲ್ಲಿ, ಆರ್ಥಿಕ ಜೀವನದಲ್ಲಿ ಮತ್ತು ವೃತ್ತಿಯನ್ನೆಲ್ಲಂಬಿಸುವುದರಲ್ಲಿ ಅವಕಾಶವಿರಲಿಲ್ಲ. ಅಮೇರಿಕೆಯ ಮಹಿಳೆಯರ ಸತತ ಹೋರಾಟದ ಫಲವಾಗಿ ಈ ಹಕ್ಕುಗಳು ಸ್ಥಾಪಿಸಲ್ಪಟ್ಟವು. ಬರೀ ಮತಾಧಿಕಾರವೇಕೆಂಬ ಉದ್ದೇಶದಿಂದ ಅಮೇರಿಕೆಯ ಮಹಿಳೆಯರು ಈ ಹೋರಾಟ ಪ್ರಾರಂಭಿಸಲಿಲ್ಲ. ಸಮಾಜದಲ್ಲಿ ಪುರುಷರೊಂದಿಗೆ ಸಮಾನ ಸ್ಥಾನವೇಕೆಂಬ ಛಲ ಉದ್ದೇಶದಿಂದ ಅ ಚಳುವಳಿಯನ್ನು ಹೂಡಿದ್ದರು. ಶತಮಾನಗಳಿಂದ ಗಂಡಳರೇ ಮಾಡಿಕೊಂಡು ಬರುತ್ತಿದ್ದ ಕೆಲಸಗಳನ್ನು ಹೆಂಗಸರು ಮಾಡಬಲ್ಲರು ಎಂಬ ಸಿದ್ಧಾಂತಕ್ಕೆ ಬರಲು ಬಲು ಕಷ್ಟವಾಯಿತು. ಮೊದ ಮೊದಲು ಈ ಚಳುವಳಿಗೆ ಜಯಸಿಕ್ಕಿದಿದ್ದರೂ ಪ್ರಯತ್ನಗಳು ನಡೆಯುತ್ತಲೇ ಇದ್ದವು.

ಮೇಲೆ ಮೇಲೆ ಮಹಿಳೆಯರಿಗೆ ಮತಾಧಿಕಾರವೇಕೆಂಬ ಚಳುವಳಿಯು ಜೋರಿನಿಂದ ನಡೆಯುತ್ತಿದ್ದರೂ ನಿಜಕ್ಕೂ ಸ್ತ್ರೀಯರು ಗಂಡಸರೊಂದಿಗೆ ಜೊತೆಯಾಗಿ ವ್ಯಾಪಾರ ಮಾಡಲು, ವೃತ್ತಿಯನ್ನು ಕೈಗೊಳ್ಳಲು, ಗೌರವಯುತವಾದ ವಿವಿಧ ವಿನೋದಾವಳಿಗಳಲ್ಲಿ ಭಾಗ ವಹಿಸಲು, ಚಳುವಳಿ ನಡೆಯುತ್ತಿತ್ತು.

ಉತ್ತರ ಅಮೇರಿಕೆಯಲ್ಲಿ ಕಂದಾಚಾರ ಪದ್ಧತಿಗೆ ವಿರುದ್ಧವಾಗಿ ನಡೆಯುವುದು ತುಂಬಾ ಕಷ್ಟವಾಗಿದ್ದರೂ, ಅಲ್ಲಿಯ ನಿತ್ಯ ಜೀವನ ನಡೆಸಲು ಹೆಂಗಸರು, ಗಂಡಸರು ಜೊತೆ ಜೊತೆಯಾಗಿಯೇ ಕೆಲಸ ಮಾಡಬೇಕಾಗಿತ್ತು. ಈ ಪರಸ್ಪರ ಸಹಕಾರವೇ ಕ್ರಮೇಣ ಕಂದಾಚಾರ ಪದ್ಧತಿಯನ್ನು ಕಿತ್ತೊಗೆಯಿತು.

೧೯೨೦ ನೇ ಇಸ್ವಿಯ ವೇಳೆಗೆ ರಾಷ್ಟ್ರಾದ್ಯಂತವಾಗಿ ಮಹಿಳೆಯರಿಗೆ ಮತದಾನ ಅಧಿಕಾರ ಕೊಡಲಾಗಿದ್ದರೂ ೧೯೪೪ ರಲ್ಲಿ ಮೊದಲೇ ಗುಜ್ಜಗಾಡಿದ ಸಂಸ್ಥಾನವಾದ ವರ್ಜೀನಿಯಾದಲ್ಲಿ ಈ ಹಕ್ಕು ಸ್ಥಾಪಿಸಲ್ಪಟ್ಟಿತ್ತು. ಬರಬರುತ್ತಾ ಇತರೆ ಸಂಸ್ಥಾನಗಳಲ್ಲಿಯೂ ಈ ಹಕ್ಕು ಸ್ಥಾಪಿಸಲ್ಪಟ್ಟಿತು.

ರಾಜ್ಯಾಂಗಕ್ಕೆ ೧೯ ನೇ ತಿದ್ದುಪಡಿಯಾದ ನಂತರ ಮಹಿಳೆಯರು ರಾಜಕೀಯದಲ್ಲಿ ಹೆಚ್ಚು ಭಾಗ ವಹಿಸಲು ಪ್ರಾರಂಭಿಸಿದರು. ಮೊದಲು, ಸ್ಥಳೀಯ ಸಂಸ್ಥೆಗಳಲ್ಲಿ ಭಾಗವಹಿಸುತ್ತಿದ್ದು, ೧೯೧೫ ರಲ್ಲಿ ಅಮೇರಿಕೆಯ ಪ್ರತಿನಿಧಿ ಸಭೆಯಾದ ಕಾಂಗ್ರೆಸಿಗೆ ಪ್ರಥಮವಾಗಿ ಒಬ್ಬ ಮಹಿಳೆಯು ಆರಿಸಲ್ಪಟ್ಟಳು. ಇಂದು ಅಮೇರಿಕೆಯ ಪ್ರತಿನಿಧಿ ಸಭೆಯಾದ ಕಳಮನೆಯಲ್ಲಿ ೯ ಮಹಿಳೆಯರೂ, ಮೇಲ್ಮನೆಯಲ್ಲಿ ಒಬ್ಬರೂ ಇರುವರು.

ಉಳಿದ ಸಂಸ್ಥಾನಗಳ ಪೈಕಿ ೪೦ ಸಂಸ್ಥಾನಗಳ ಕಾನೂನು ಸಭೆಗಳಲ್ಲಿ ಪ್ರತಿಷ್ಠಿತ ಮಹಿಳಾ ಸದಸ್ಯರಿದ್ದಾರೆ. ೧೯೫೦ ರಲ್ಲಿ ಕೇವಲ ೨೯ ಜನ ಮಹಿಳೆಯರು ಮಾತ್ರವಿದ್ದರು.

ಸರಕಾರದ ಆಡಳಿತ ಶಾಖೆಗಳಾದ ನ್ಯಾಯಾಂಗ ವತ್ತು ಕಾರ್ಯಾಂಗದಲ್ಲಿ ಇಂದು ಅಮೇರಿಕೆಯ ಮಹಿಳೆಯರು ಕೆಲಸ ಹೆಚ್ಚಾಗಿ ಕೆಲಸದಲ್ಲಿದ್ದಾರೆ. ಹೆಚ್ಚು ಗೌರವ ಸ್ಥಾನವಾದ ನ್ಯಾಯಾಧೀಶ ಪದವಿಯು, ಸ್ಥಳೀಯ ಸಂಸ್ಥಾನದ ಮತ್ತು ಸಂಯುಕ್ತ ಸರಕಾರಗಳಲ್ಲಿ ಕೊಡಲ್ಪಡುತ್ತಿದೆ. ಇತ್ತೀಚೆಗೆ ಪ್ರಮುಖ ಮಹಿಳೆಯರು ರಾಯಭಾರಿಗಳಾಗಿ, ಮಂತ್ರಿ ಮಂಡಳದ ಪ್ರಮುಖ ಅಧಿಕಾರಿಗಳಾಗಿ ಕೆಲಸ ಮಾಡಿ ಪ್ರಶಂಸೆ ಪಡೆದಿದ್ದಾರೆ. ಇಂದು ಅಮೇರಿಕೆಯ ಸಂಯುಕ್ತ ಸರಕಾರದಲ್ಲಿ ಶ್ರೇಷ್ಠ ೨೫ ರಷ್ಟು ಮಹಿಳೆಯರು ಕೆಲಸ ದಲ್ಲಿದ್ದಾರೆ.

ಸಂಯುಕ್ತ ಸರಕಾರದಲ್ಲಿದ್ದಂತೆ, ಸಂಸ್ಥಾನಗಳಲ್ಲಿಯೂ ಕೂಡ ಸ್ತ್ರೀಯರ ಪ್ರಾಬಲ್ಯ ಹೆಚ್ಚಾಗಿದೆ. ಚಳುವಳಿ ಪ್ರಾರಂಭವಾದ ಶತಮಾನದ ನಂತರ ಅಮೇರಿಕೆಯು ವಾಣಿಕ ಜೀವನದಲ್ಲಿ, ವೃತ್ತಿಗಳಲ್ಲಿ, ಶಾಲೆ ಕಾಲೇಜುಗಳಲ್ಲಿ, ಪ್ರಯೋಗಾಲಯ ಶಾಖೆಗಳಲ್ಲಿಯೂ ಲಕ್ಷಾಂತರ ಮಹಿಳೆಯರು ಕೆಲಸ ಮಾಡುತ್ತಿರುವುದನ್ನು ಇಂದು ನೋಡಬಹುದು.

ಇಂದಿನ ಮಹಿಳಾ ನಾಯಕರಿಗೆ, ಸ್ತ್ರೀಯರ ಅಭಿವೃದ್ಧಿಯ ಬಗ್ಗೆ ತೃಪ್ತಿಯುಂಟಾಗದಿದ್ದರೂ, ಇನ್ನೂ ಹೆಚ್ಚಿನ ಸಾಲಭ್ಯಗಳು ಬೇಕೆಂದು ಹೇಳುತ್ತಿದ್ದಾರೆ.

ಅಮೇರಿಕೆಯ ಅಧ್ಯಕ್ಷಪದವಿಗೆ ಎಂದು ಒಬ್ಬ ಮಹಿಳೆಯು ಬಂದು ಆ ಪದವಿಯನ್ನು ಅಲಂಕರಿಸುವರೋ ಅಂದು ಮಹಿಳೆಯರ ಆಸೆಗಳು ಸಂಪೂರ್ಣವಾಗಿ ನೆರವೇರಿದಂತಾಗುವವು. ಅಲ್ಲಿಯ ವರೆಗೆ ಮಹಿಳೆಯರ ಮೇಲ್ಮೆಗಾಗಿ ಚಳುವಳಿ ಪಡೆಯುತ್ತಲೇ ಇರುತ್ತವೆಂದು ಅವರ ನಾಯಕರು ಹೇಳುತ್ತಾರೆ. ಇಂದಿನ ವರೆಗೆ ಅಮೇರಿಕೆಯಲ್ಲಿ ಮಹಿಳೆಯರು ತಮ್ಮ ಗುರಿಯನ್ನು ಬಹು ಮಟ್ಟಿಗೆ ಮುಟ್ಟಿದ್ದಾರೆಂದು ಹೇಳಬಹುದು.

Licence No. 60,
Licenced to Post without Prepayment

Reg. No. M. 1228.
'KODAGU' MERCARA, (Coorg).

ಕೊಡಗು

ಸಂವಾದಕರು—ಪಿ. ವಿ. ಬೆಳ್ಯಪ್ಪಸಪರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೩೦ ತಾರೀಕು ೧೦-೮-೧೯೪೭ನೇ ಶುಕ್ರವಾರ ಸಂಚಿಕೆ ೧೧

ವಾರ್ತೆಗಳು

ಉತ್ತರ ಪ್ರದೇಶದ ವಿದ್ಯಾಮಂತ್ರಿ ಶ್ರೀ. ಸಂಪೂರ್ಣಾನಂದ್ ಮತ್ತು ಕಾಂಗ್ರೆಸ್ ಅಧ್ಯಕ್ಷ ಶ್ರೀ. ಪುರುಷೋತ್ತಮ ದಾಸ್ ಟಂಡನ್ ಅವರ ಸಹಿಗಳನ್ನು ಫೋರ್ಜರಿ ಸಹಿಮಾಡಿದನೆಂಬ ಆಪಾದನೆ ಮೇಲೆ ಒಬ್ಬ ಯುವಕನಿಗೆ ಇಪ್ಪತ್ತು ನಾಲ್ಕು ವರ್ಷ ಕಠಿಣ ಶಿಕ್ಷೆ ವಿಧಿಸಲಾಗಿದೆ. ಈ ರೀತಿ ಫೋರ್ಜರಿ ಮಾಡಿ ಆವನು ಅನೇಕ ಸಹಕಾರಿ ಬ್ಯಾಂಕುಗಳಿಂದ ಸುಮಾರು ನೂರಾಯಿಗಳನ್ನು ತೆಗೆಯಿಸಿದ್ದನೆಂದು ಆತನ ಮೇಲೆ ಆಪಾದಿಸಲಾಗಿತ್ತು.

ಕೊರಿಯದಲ್ಲಿ ಕಳೆದ ಜುಲೈ ೩೩ ರವರೆಗೆ ಸಾವುನೋವುಗಳಿಗೀಡಾದ ಮತ್ತು ಸೆರೆಯಾದ ಕಮ್ಯೂನಿಸ್ಟರ ಸಂಖ್ಯೆ ೧೫೨೮೮೮ ಎಂಬುದಾಗಿ ಅಮೇರಿಕನ್ ಸೈನ್ಯ ಅಂದಾಜು ಮಾಡಿದೆ. ಇದರಲ್ಲಿ ೧೫೬೫೭೬೬ ಮಂದಿ ಪ್ರಸಂಚಸಂಸ್ಥೆ ಸೈನ್ಯಗಳು ಸೆರೆಯಾಗಿದ್ದಾರೆ. ಚೀನೀಯರಿಗಾಗಿರುವ ಸೈನಿಕ ನಷ್ಟ ೬೧೧೨೬೬.

ಭಾರತದ ಎಲ್ಲಾ ಭಾಗಗಳಲ್ಲೂ ೧೯೪೮ರ ಜನವರಿ ಮೊದಲನೆ ವಾರದಲ್ಲಿ ಚುನಾವಣೆಗಳು ಆರಂಭವಾಗಿ ನೂರು ವಾರಗಳಲ್ಲಿ ಮುಕ್ತಾಯಗೊಳ್ಳುವುದೆಂದು ಕೇಂದ್ರ ಚುನಾವಣಾ ಕಮಿಷನರ್ ಶ್ರೀ ಸುಕುಮಾರಸೇನ್ ಹೇಳಿದ್ದಾರೆ. ಹಿಮಾಚಲ ಪ್ರದೇಶ ಮತ್ತು ಪಂಜಾಬ್ ಮತ್ತು ಉತ್ತರ ಪ್ರದೇಶಗಳ ಪರ್ವತ ಸೀಮೆಯಲ್ಲಿ ಮಾತ್ರ ಲಕ್ಷೋಬರ್ ತಿಂಗಳಲ್ಲಿ ಚುನಾವಣೆ ನಡೆಯುವುದು ಈ ಬಗ್ಗೆ ಪಾರ್ಲಿಮೆಂಟಿನ ಶಾಶ್ವತ್ಯಾಲದ ಅಧಿವೇಶನದಲ್ಲಿ ರಾಷ್ಟ್ರಪತಿ ಭಾಷಣ ಮಾಡುವರು. ಪ್ರಾಂತೀಯ ಸರ್ಕಾರಗಳು ಜನವರಿ ತಿಂಗಳಲ್ಲಿ ತಮಗೆ ಅನುಕೂಲವಾದ ತಾರೀಕುಗಳನ್ನು ಸೂಚಿಸಬೇಕಾಗಿ ಸೂಚಿಸಲಾಗಿದೆ

ಕೇಂದ್ರ ಮಂತ್ರಿಮಂಡಲದಿಂದ ಹೊರಗೆ ಹೋಗುತ್ತಿರುವ ಶ್ರೀ ಕಿಡ್ವಾಯಿಯವರು ಸರ್ಕಾರಕ್ಕೆ ಸಾಲ ಸಾವಿರ ರೂ. ಗಳ ಬಿಲ್ಲು ಕೊಡಬೇಕಾಗಿದೆಯಂತೆ. ಸರ್ಕಾರಿ ಕೆಲಸಗಳಲ್ಲದೆ ಇವರ ಖಾಸಗಿ ಕೆಲಸಗಳಿಗಾಗಿ ಮಾಡಿರುವ ವಿಮಾನದ ವೆಚ್ಚವಿದೆಂದು, ಆಡಿಟರ ಜನರಲರವರಿಂದ ಆಕ್ಷೇಪ ಬಂದು ಇವರು ತೆಗೆದುಕೊಂಡಿರುವ ಪ್ರಯಾಣದ ಭತ್ತೆಯಿಂದ ಇತ್ತು ಹಣವನ್ನು ಹಿಂದಿರುಗಿಸಬೇಕೆಂದು ಸಂರಕ್ಷಣಾ ಖಾತೆಯವರು ಕಿಡ್ವಾಯಿಯವರ ಹೆಸರಿನಲ್ಲಿ ಬಿಲ್ ಮಾಡಿರುವರಂತೆ

ಪಾರ್ಲಿಮೆಂಟ್ ಗೃಹದಲ್ಲಿ ಸದಸ್ಯರ ಭಾಷಣಗಳು ನಿಚ್ಚಳವಾಗಿ ಕೇಳಬೇಕೆಂಬ ಉದ್ದೇಶದಿಂದ ಹೊಸ ಪದ್ಧತಿಯ ಧ್ವನಿಯಂತ್ರವನ್ನು ಸ್ಥಾಪಿಸಲಾಗಿದೆ. ಈಗ ಸದಸ್ಯರು ತಮ್ಮ ಸ್ಥಾನಬಿಟ್ಟು ಧ್ವನಿವಾಹಕ ಯಂತ್ರದ ಹತ್ತಿರ ಹೋಗಿ ಗಟ್ಟಿಯಾಗಿ ಒದರುವ ಕ್ರಮ ತಪ್ಪಿತು. ಸಣ್ಣ ಧ್ವನಿಯುಳ್ಳವರು ಚೀರಿ ಮಾತಾಡಬೇಕಿಲ್ಲ. ಸದಸ್ಯರು ತಮ್ಮ ಸ್ಥಳಗಳಲ್ಲಿಯೇ ಎದ್ದು ನಿಂತು ಮಾತನಾಡಬಹುದು. ೧೫೫ ಪೌಂಡು ಅಂತರದೊಳಗೆ ಮಾತನಾಡುವ ಸದಸ್ಯರ ಧ್ವನಿಯನ್ನು ಗ್ರಹಿಸುವ ವಿಚಾರಮಾಡಲಾಗಿದೆ. ಒಟ್ಟು ಇದಕ್ಕಾಗಿ ೧೧ ಲಕ್ಷ ರೂಪಾಯಿ ವೆಚ್ಚ ಮಾಡಲಾಗಿದೆ.

ವಾರ್ತೆಗಳು.

ಮುಂದಿನ ಅಕ್ಟೋಬರದಿಂದ ಖಟ್ಟಿಯ ಬೆಲೆಯಲ್ಲಿ ಇನ್ನೂ ಕಡಿತ ಮಾಡಲಾಗುವುದೆಂದು ವಾಣಿಜ್ಯ ಹಾಗೂ ಉದ್ಯಮ ಮಂತ್ರಿ ಶ್ರೀ ಪಟೆಕೃಷ್ಣ ವೈಹಕಾರರು ಹೇಳಿದರು. ಆರಂಭ ಪೂರ್ವಕೆಯಾಗಿ ಹೆಚ್ಚಿರುವುದರಿಂದ ರಾಷ್ಟ್ರದಲ್ಲಿ ಖಟ್ಟಿಯ ಪರಿಸ್ಥಿತಿಯೂ ಸಧಾರಿಸಿದೆಯೆಂದು ಅವರು ಪತ್ರಿಕಾ ಕರ್ತಾರಿಗೆ ಹೇಳಿದರು.

ಇದೇ ತಿಂಗಳು ದಿನಾಂಕ ೧೬ ರಿಂದ ೩೧ (ಸಹಿತ) ದಿನ ಕಾಂಗ್ರೆಸ್ ಅಧ್ಯಕ್ಷರಾದ ಬಾಬು ಪುರುಷೋತ್ತಮದಾಸ ಟಂಡನ್ನವರು ಕರ್ನಾಟಕ ಪ್ರದೇಶದಲ್ಲಿ ಪ್ರವಾಸ ಮಾಡುವರೆಂದು ಗೊತ್ತಾಗಿದೆ.

ಕೇಂದ್ರ ಸರ್ಕಾರದ ಸಂಪರ್ಕ ಮಂತ್ರಿಗಳಾದ ಶ್ರೀ ರಫಿ ಅಹಮ್ಮದ್ ಕಿಡ್ವಾಯಿಯವರು ಕೃಷಿ ಮಂತ್ರಿ ಪದವಿಗೆ ರಾ. ೩ ರಲ್ಲಿ ರಾಜೀನಾಮೆ ಸಲ್ಲಿಸಿದರು. ಈ ರಾಜೀನಾಮೆಯನ್ನು ರಾಷ್ಟ್ರಾಧ್ಯಕ್ಷರು ಒಪ್ಪಿ ಕೊಂಡರು. ತಾ ೨೮ ಮಧ್ಯಾಹ್ನದಿಂದಲೇ ಇವರನ್ನು ಮಂತ್ರಿ ಪದವಿಯಿಂದ ತೆಗೆದುಹಾಕಿದಂತೆ ಭಾವಿಸಿಡೆ ಈ ಬಗ್ಗೆ ಸರ್ಕಾರದ ಒಂದು ಪ್ರಕಟನೆಯೂ ಹೊರಟಿಲ್ಲ.

ಧನ ವಿನಿಮಯವನ್ನು ತೋರಿಸಿರುವುದರಿಂದ ಕಾಶ್ಮೀರಿಗಳು ಅಂಜುವರೇಬಿ ತಿಳಿಯಕಳ್ಳಿದ್ದಾರೆ ಪಾಕಿಸ್ತಾನ ಮುಖ್ಯಮಂತ್ರಿ ಮುಹ್ಮ ಅವರ ಗೆಳೆಯರು ಮೊಹಾರ್ದ ಸ್ವರ್ಗದಲ್ಲಿದ್ದಾರೆಂದು ಕಾಶ್ಮೀರ ಉಪಪ್ರಧಾನ ಮಂತ್ರಿ ಬಕ್ಷಿ ಗುಲಾಮ ಮಹಮ್ಮದರವರು ಹೇಳಿಹರು.

ರಾಜಕೀಯ ಪೆಕ್ಷಗಳ ಚುನಾವಣೆ ಚಿಹ್ನೆಗಳು.

ಮುಂಬರುವ ಸಾರ್ವತ್ರಿಕ ಚುನಾವಣೆಗಳಲ್ಲಿ ಭಾಗವಹಿಸುವ ರಾಜಕೀಯ ಪಕ್ಷಗಳ ಚಿಹ್ನೆಗಳು ಕಳಗಿನಂತಿರಬೇಕೆಂದು ಚುನಾವಣಾ ಮಂಡಳವು ನರ್ಧರಿಸಿದೆ.

೧) ಫಾರ್ವರ್ಡ್ ಬ್ಲಾಕ್ (ಮಾರ್ಕಿಸ್ಟ್ ಗುಂಪು) ನಿಂತಿರುವ ಸೀಳು.

೨) ಫಾರ್ವರ್ಡ್ ಬ್ಲಾಕ್ (ರುಯಿಕರ ಗುಂಪು) ಮೂಸುವ ಹಕ್ಕಿ.

೩) ಹಿಂದುಮಹಾ ಸಭಾ-ಕುದುರೆ ಹಾಗೂ ಸವಾರ.

೪) ಪ್ರಜಾಪಕ್ಷ-ಗುಡಿಸಲು.

೫) ರಾಮರಾಜ್ಯ ಪರಿಷತ್ತು -ಉದಯ ಸೂರ್ಯ.

೬) ಹಿಂದುಳಿದ ವರ್ಗ ಸಂಘ- ಅನೆ.

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸು ಹಾಗೂ ಸಮಾಜವಾದಿ ಪಕ್ಷಗಳ ಚಿಹ್ನೆಗಳ ಬಗ್ಗೆ ಇನ್ನೂ ನಿರ್ಣಯವಾಗಿಲ್ಲ.

ಕಮ್ಯೂನಿಸ್ಟ ಪಕ್ಷದ ಸಂಚಿಗೆ ಹಾಗೂ ಕುಡುಗೋಲು ಬಗ್ಗೆ ಇನ್ನು ವಿಚಾರ ನಡೆದಿದೆ.

ಶಾಸನ ಸಭೆಗಾಗಲಿ ಪಾರ್ಲಿಮೆಂಟಿಗಾಗಲಿ ಪ್ರತಿಯೊಂದು ಪಕ್ಷವು ಹಿಂದೇ ಚಿಹ್ನೆವನ್ನು ಉಪಯೋಗಿಸಬೇಕಾಗಿರುವುದು.

ಹಿಂದುಳಿದ ವರ್ಗದ ಹುರಿಯಾಳುಗಳ ಚಿಹ್ನೆದ ಸುತ್ತಲೂ ದಪ್ಪ ವರ್ತುಲ ಹಾಕಲಾಗುವದು. ರಾಜ್ಯದಲ್ಲಿ ಯಾವದೊಂದು ಪಕ್ಷವು ಹುರಿಯಾಳುಗಳನ್ನು ನಿಲ್ಲಿಸಿರದಿದ್ದಲ್ಲಿ ಆ ಚಿಹ್ನೆವನ್ನು ಸ್ಥಾನಿಕ ಪಕ್ಷವಾಗಲಿ ವ್ಯಕ್ತಿಯಾಗಲಿ ಉಪಯೋಗಿಸಬಹುದು.

ಚೀಫ್ ಕಮಿಷನರ್ ಪ್ರಾಂತಗಳಿಗೆ ಜವಾಬ್ದಾರಿ ಸರಕಾರ.

ಚುನಾವಣೆಯ ನಂತರ ಮಂತ್ರಿ ಮಂಡಳದ ರಚನೆ.

ಕೇಂದ್ರ ಶಾಸನ ಸಭೆಯು ಕಳೆದ ಸಾರಿ ಕೂಡಿದ್ದಾಗ ಚೀಫ್ ಕಮಿಷನರ್ ಪ್ರಾಂತಗಳಿಗೆ ಸಧಾರಣೆಯನ್ನು ಕೊಡುವ ಸೂಚನೆಯು ಅದರ ಮುಂದೆ ಬಂದಿತ್ತು. ಆದರೆ ಆ ಸೂಚನೆಯಲ್ಲಿ ಸೂಚಿತವಾದ ಸಧಾರಣೆಗಳ ಆ ಭಾಗಗಳ ಜನರ ಆಶಭರವಸೆಗಳನ್ನು ಸಫಲಪಡಿಸಿಲ್ಲವೆಂದೂ ಆದ್ದರಿಂದ ಸೂಚನೆಯಲ್ಲಿ ಬದಲಾವಣೆ ಅವಶ್ಯವೆಂದೂ ತೋರಿಬಂದುದರಿಂದ ಸೂಚನೆಯನ್ನು ಮುಂದರಿಸಿ ಆದರಲ್ಲಿ ಅವಶ್ಯವಾದ ತಿದ್ದುಪಡಿ ಮಾಡಲು ಅನುಕಾಶಕೊಡಲಾಯಿತು. ಈಗ ಆ ಸೂಚನೆಯಲ್ಲಿ ಸೂಚಿತವಾದ ತಿದ್ದುಪಡಿ ವಿಚಾರಗಳು ಪ್ರಕಟವಾಗಿವೆ ಈ ತಿದ್ದುಪಡಿಯು ಶಾಸನ ಸಭೆಯು ಈಗ ಕೂಡಿರುವ ಅಧಿವೇಶನದಲ್ಲಿ ಚರ್ಚೆಗೆ ಬರಲಿದೆ.

ಈಗ ಪ್ರಕಟವಾಗಿರುವ ಇಂಡಿಯಾ ಸರಕಾರದ ಗೃಹ ಇಲಾಖೆಯು ಹೇಳಿಕೆಯು ಈ ರೀತಿ ಇದೆ. 'ಶಾಸನ ಸಭೆಯು ಮುಂದಿರುವ ಸಿ' ಭಾಗದ ಪ್ರಾಂತಗಳ ಸೂಚನೆಯು ಮೇರೆ ಎಲ್ಲಿಲ್ಲಿ ಸಾಧ್ಯವೋ ಅಲ್ಲಿ ಜವಾಬ್ದಾರಿ ಸರಕಾರ ಹಾಗೂ ವಿಶಾಲ ರೀತಿಯ ಕ್ಷೇತ್ರವು ಸ್ವಾಯತ್ತತೆಯು ಜನರಿಗೆ ದೊರೆಯುವಂತೆ ಸೂಚನೆಯನ್ನು ಪುನರ್ಘಟಿಸಿದೆ. ಈಗ ಸೂಚಿತವಾಗಿರುವ ತಿದ್ದುಪಡಿಗಳ ಮೇರೆ ಎ ಮತ್ತು ಬಿ ಭಾಗದ ಪ್ರಾಂತಗಳ ಚುನಾವಣೆಯ ಜೊತೆಗೆಯಲ್ಲೇ ಈ ಸಂಸ್ಥಾನಗಳಲ್ಲೂ ಚುನಾವಣೆಯಾದ ಮೇಲೆ ಹಿಮಾಚಲ ಪ್ರದೇಶ, ವಿದ್ಯಾಪ್ರದೇಶ, ಕೂಡಗು, ಅಜಮೀರ್, ಡೆಲ್ಲಿ ಮತ್ತು ಬೋವಾಲಗಳು ಶಾಸನ ಸಭೆಗಳನ್ನು ಪಡೆಯುವವಲ್ಲದೆ ಸಭೆಗೆ ಜವಾಬ್ದಾರರಾದ ಮಂತ್ರಿಗಳನ್ನೂ ಪಡೆಯುವವು.

ಚೀಫ್ ಕಮಿಷನರುಗಳ ಪ್ರಾಂತಗಳ ಕೇಂದ್ರ ಶಾಸನ ಸಭಾ ಪ್ರತಿನಿಧಿಗಳ ಒಂದು ವಿಟೆಂಗು ನಡೆಸಿ ಅವರ ಅಭಿಪ್ರಾಯವನ್ನ ತೆಗೆದುಕೊಂಡೇ ಕೇಂದ್ರ ಸರಕಾರವು ಮಸೂದೆಯಲ್ಲಿ ಈ ತಿದ್ದುಪಡಿಗಳನ್ನು ಸೂಡಿರುವದು. ಈ ವಿಟೆಂಗಿಗೆ ಮುಖ್ಯ ಮಂತ್ರಿಯವರು, ಗೃಹಸಚಿವರೂ ಹಾಜರಿದ್ದರು.

ಈ ಹೊಸ ವಿಧಾನದಿನಂತೆ ಈ ಸಂಸ್ಥಾನಗಳಲ್ಲಿರುವ ಚೀಫ್ ಕಮಿಷನರುಗಳ ನಿಲುವೆಯ ಬಗ್ಗೆ ಕೇಂದ್ರ ಸರಕಾರದ ಈ ಹೇಳಿಕೆಯು ಹೀಗೆ ಹೇಳುತ್ತದೆ. 'ಚೀಫ್ ಕಮಿಷನರ ಅಧಿಕಾರವು ಯಾವುದೇ ವಿಚಾರದ ತೀರ್ಮಾನವನ್ನು ಮಂತ್ರಿಗಳಿಗೆ ಪುನರ್ವಿಮರ್ಶೆ ಬಗ್ಗೆ ಹಿಂದಕ್ಕೆ ಕಳುಹಿಸುವ ಅಥವಾ ಯಾವದೇ ವಿಚಾರವನ್ನು ಕೇಂದ್ರ ಸರಕಾರಕ್ಕೆ ಕಳುಹಿಸುವ ಮಟ್ಟಿಗೆ ಸೀಮಿತವಾಗಿರುವದು.

ಡೆಲ್ಲಿ ಪ್ರಾಂತದ ಬಗ್ಗೆ ಅದು ಕೇಂದ್ರ ಸರಕಾರದ ಸ್ಥಾನವಾಗಿದ್ದು ಅಲ್ಲಿ ಕೇಂದ್ರ ಸರಕಾರಕ್ಕೆ ಹೆಚ್ಚಿನ ಅಳಕ್ಕೆ ಇರುವ ಕಾರಣ ಚೀಫ್ ಕಮಿಷನರ ಅಧಿಕಾರವು ಹೆಚ್ಚು ನಿರ್ಣಯಾತ್ಮಕವಾಗಿರುವದು. ದಳಕ ವರ್ಗದವರಿಗೆ ಅವಶ್ಯನಿರುವಲ್ಲಿ ವಿಶೇಷ ಪ್ರತಿನಿಧಿತ್ವ ಕೊಡಲಾಗುವದು.

ಪ್ರತಿ ಸಂಸ್ಥಾನದ ಶಾಸನ ಸಭೆಗೂ ಅದಂದೇ ಸ್ವೀಕರಿಸಿದ್ದು ಶಾಸನ ಸಭಾ ಕಾರ್ಯವು ಎಲ್ಲಾ ವಿಚಾರಗಳಿಗೂ ಅನ್ವಯಿಸುವಷ್ಟಾಲೆ ಎ ಮತ್ತು ಬಿ ಭಾಗದ ಸಂಸ್ಥಾನಗಳ ಕರ್ತಾರೆಂಟ್ ಪಟ್ಟಿಯಲ್ಲಿರುವ ವಿಚಾರಗಳಿಗೂ ಅನ್ವಯಿಸುವದು. ಕೇಂದ್ರ ಶಾಸನ ಸಭೆಗೆ ಇವುಗಳ ಮೇಲೆ ಕರ್ತಾರೆಂಟ್ ಹತೋಟೆ ಇರುವದು.

ಚೀಫ್ ಕಮಿಷನರುಗಳ ವಿಶೇಷ ಅಧಿಕಾರಗಳ ಬಗ್ಗೆ ತಿದ್ದುಪಡಿಯು ಹೀಗೆ ಹೇಳುತ್ತದೆ. 'ಹಣದ ಬಿಲ್ಲುಗಳು, ಜ್ಯುಡಿಶಿಯಲ್ ಕಮಿಷನರ ಕೋರ್ಟಿಗೆ ಸಂಬಂಧಿಸಿದ ಮತ್ತು ಪಬ್ಲಿಕ್ ಸರ್ವಿಸ್ ಕಮಿಷನಿಗೆ ಸಂಬಂಧಿಸಿದ ಬಿಲ್ಲುಗಳ ಬಗ್ಗೆ ಮಾತ್ರ ಚೀಫ್ ಕಮಿಷನರ ಸೆಂಕ್ಷನ್ ಬೇಕಾಗುವದು.'

ಈ ವಾರದ ಕಥೆ

ಆದರ್ಶ

ಲೇ:—ಶ್ರೀ ಕೆ. ಬಿ. ನಾಚಪ್ಪ, ಅಧ್ಯಾಪಕ, ಹಾಕೂರುಶಾಲೆ.

ದೈವ ಸೃಷ್ಟಿಯಲ್ಲಿನ ಅಚೇತನ ಹಾಗೂ ಸಚೇತನ ವಸ್ತುಗಳನ್ನೆ ನಾವು ಸ್ಥಾವರ, ಜಂಗಮವೆನ್ನುವ ರೂಢಿಯೂ ಇದೆ. ಅಂಥವುಗಳಲ್ಲಿ ಸಚೇತನದ ಸುಸ್ವರೂಪಿಯಾದ ಮಾನವನೇ ಶ್ರೇಷ್ಠನು ಬುದ್ಧಿಯ ಶಿಖರವಳಿತಿಯಿಂದ ಶಾಡಿಕ ಮಾನುಷ ಜನ್ಮವು ಸ್ವಾಮಿಯೂಗಲು ಶಕ್ತನೇ ಆದರೂ ಒಮ್ಮೊಮ್ಮೆ ಪ್ರಾಕ್ತನ ಕೃತ್ಯದಿಂದಾಗಿ ಅದೇ ಮಾನವನು ಆಸೆಯ ಪಾಶಕ್ಕೆ ಸಿಲುಕಿ ಈಶನನ್ನು ಲೇಶವಾದರೂ ನೆನೆಯದೆ, ಕೇವಲ ಕ್ಷುಪ್ರಪಾಪೆಯನ್ನು ಅಡಗಿಸುವುದೇ ಜೀವನದ ಧ್ಯೇಯವೆಂದು ಬಯಸಿ, ಚಂಚಲ ಚಿತ್ತನಾಗಿ ವಿಂಜುಷ ಆಸೆಯಿಂದ ಶಾಶ್ವತವಾಗಲೂ ಬಹುದು. ಅಂದಮೇಲೆ, ಅತ್ಮ ಸಂಯಮನೆ, ಆತ್ಮವಿಶ್ವಾಸ, ಆತ್ಮತೃಪ್ತಿಯಿಂದ ಕೂಡಿದ ಸರಳ ಜೀವಿಗಳ ಸಂಖ್ಯೆಯಾದರೂ ಪ್ರಪಂಚದಲ್ಲಿ ತೀರಾವಿರಳ. ಸಾಮಾನ್ಯತೆಯಾಗಿ ಸಮೂಹದ ಅಪರಿಚಿತನೊಬ್ಬನನ್ನು ಯಾರು ಎಂದು ಪ್ರಶ್ನಿಸಲಭಿಪ್ರಾಯದಲ್ಲಿ ತಿಳಿಯಬಹುದಾದರೂ, ಅವನು ಹೇಗೆ ಎಂದು ಶೀಘ್ರವಾಗಿ ಅವಲೋಕಿಸಿ ತಿಳಿಯುವುದು ಕಷ್ಟವಾಗಿದೆ. ಆದರೆ ಈ ಕಥೆಗೆ ಶಿರೋನಾಮೆಯಿರುವುದೆತ್ತ ಅದರ್ಶ ವ್ಯಾಯನಾದ ದಿನಮಣಿಯು ಜಡತಾಸಾಮ್ರಾಜ್ಯಕ್ಕೆ ಹೇಗೆ ತನ್ನ ಗುಣವನ್ನು ಪ್ರದರ್ಶನ ನೂಡಿದನೆಂಬುದೇ ಈ ಕಥೆಯ ಬಾಹ್ಯಾರ್ಥವಾಗಿದೆ.

ಕಭ್ಯಗೃಹಕ್ಕೆ ಸುಬ್ರಾಯನು ಶ್ರೀಮಂಗಲದ ನೆತಿಯಾಗಿರುವನು. ತನ್ನ ಶ್ರಿರುವ ಹಣದ ಮುಟ್ಟಳ್ಳಿಕೆ ಮಿಗಿಲಾಗಿ ಗುಣದ ಮುಟ್ಟವನ್ನು ಬೆಳೆಸಿ, ದಕ್ಷತೆಯಿಂದ ಕೂಡಿರುವ ಆ ವ್ಯಕ್ತಿ ಆ ಊರ ಜನರಿಗೆ ತುಂಗಾಳೆಯನ್ನು ಬೀಸಿ, ಶೀತಿಯನ್ನು ಮೂಡುವ ವೃಕ್ಷದಂತಿದ್ದನು. ಶುದ್ಧ ಲಕ್ಷಣದಿಂದ ಕೂಡಿ ಪರಿಶುದ್ಧ ಆತ್ಮದ ಪ್ರಭಾವವುಳ್ಳ ಆ ವ್ಯಕ್ತಿ ಊರ ಜನರೆಲ್ಲರಿಂದಲೂ ತನ್ನ ಉದಾತ್ತ ಪ್ರತಿಭೆಯನ್ನು ಪುನರುಕ್ತಿಗೊಳಿಸುತ್ತಿದ್ದನು. ಹಾಲಿಗೆ ಸಕ್ಕರೆ ಬೆರೆತಾಗ ಅದರ ಸವಿ ಹೆಚ್ಚುವಂತೆ, ಅತನ ಪಾಲಿಗೆ ದೊರೆತ ಅಕ್ಷರಿಯ ಪತಿಯಿಂದಾಗಿ ಪ್ರತಿಯೊಬ್ಬರಿಂದಲೂ ಅತನು ಪ್ರಶಸ್ತಿಪಡೆಯುವಂತಿದ್ದನು. ಪತಿಯ ಮೇಲ್ಮೈಗೆ ಪತಿಯೂ ಕಾರಣಕೆಂಬುದನ್ನು ಆಕೆ ಎತ್ತಿ ತೋರಿಸುತ್ತಿದ್ದಳು!

ಈ ರೀತಿಯಾದ ಪತಿಪತಿಯರು ಊರ ಜನರಿಗಾಗಿ ಉತ್ತಮ ಕೃತಿಯನ್ನು ಮಾಡುತ್ತಾ ಮನೆಗೆ ಬಂದವರಿಗೆ ನೈಜವಾದ ಅತಿಥಿ ಸತ್ಕಾರವನ್ನು ನೀಡುತ್ತಾ, ಅತಿಥಿ ಸತ್ಕಾರವೇ ಮನೆಯ ಪ್ರಭಾವಕ್ಕೆ (The Glory of the home is hospitality) ನೇರವಾದ ಕಾರಣವೆಂಬುದನ್ನು ಪ್ರತ್ಯಕ್ಷ ನೂಡಿ ಪ್ರದರ್ಶಿಸುತ್ತಿದ್ದರು. ನೈಜವಾದ ಧಾರ್ಮಿಕ ವೃತ್ತಿಯಲ್ಲಿ ನಿರತನಾಗಿದ್ದ ಸುಬ್ರಾಯನಿಗೆ ಆನೇಕ ವರ್ಷಗಳಿಂದ ಮಕ್ಕಳಿಲ್ಲದಿದ್ದು ತನ್ನ ನಲುವತ್ತೈದನೆಯ ವಯಸ್ಸಿನಲ್ಲಿ ಹುಟ್ಟಿದ ಕುವರನಿಂದಾಗಿ, ಗುಡಿಯನಿಗೆ ನೂಡಿಕ್ಕಿ ದೊರೆತ ದಕ್ಕಿಂತಲೂ ಹೆಚ್ಚಾಗಿ ಸಂತೋಷ ಉಂಟಾಗಲು ಪರಮಾತ್ಮನಿಗೆ ಯಾವ ಕಾಣಿಕೆಯನ್ನು ಕೊಡಬೆಂದು ಅತಂದರ್ಭದಲ್ಲಿ ಮನಸ್ಸು ತಳಮಳಗೊಂಡಿತು. ಕೂಡಲೆ ಪರಮಾತ್ಮನು ಕಾಣಿಕೆಯೆಂದು ಎಣಿಕೆ ಮಾಡಲು ಕ್ಷಿತಿರುವ ವ್ಯಕ್ತಿಯಲ್ಲವೆಂದು ಅರಿತು, ತಾನು ಮಾಡಿದ ಜನಸೇವೆಯೇ ಜನಾರ್ದನನ ಸೇವೆಯಾಗಿ ಪರಿಣತಿಸಿತೆಂದು ನೆನೆಸಿ, ಅಂದಿನಿಂದ ಮಕ್ಕಳ್ಳನ್ನು ಉತ್ತಮ ಕೃತಿಗಾಗಿ ಹೆಣಗಾಡಲು ಉದ್ಯುಕ್ತನಾದನು.

ಕುವರನು ರವಿವಾರ ಜನಿಸಿದುದರಿಂದಾಗಿ ರವಿಕುಮಾರ ಎಂದು ನಾಮಕರಣ ಮಾಡಲಾಯಿತು. ನಾಗುವನ ದೈಹಿಕ ಸೌಂದರ್ಯದಿಂದ ಹೊರಹೊಮ್ಮುತ್ತಲಿದ್ದ ಪ್ರಭೆಯಿಂದಾಗಿ ದಿನವೂ ಜಯ ಎಂಬಂತೆ ಆ ಕುಟುಂಬವು ಕಲಲಮಣಿಯೂಗಿ ಮೆರೆಯುತಿಬಹುದೆಂದು ಯಾರೂ ಊಹಿಸಬಹುದಾಗಿತ್ತು! ಶೈಶವ ಪ್ರಾಯದಲ್ಲೆ ಜ್ಞಾನಕಾಂತಿಯಿಂದಾಗಿ ಹೊತೊರೆಯಂತ್ತಲಿದ್ದ ದಿನವಣಿಯು, ತನ್ನ ತಂದೆ ತಾಯಿಯರಿಗೆ ಚೂಡಾಮಣಿಯಂತಿದ್ದು ಬೀಳಿಕೆಯ ಪ್ರಾರಂಭಸೋಪಾನಗಳಿಂದ ಬಾಲ್ಯ ಕೌಮಾರ್ಯ ತಾರುಣ್ಯಗಳನ್ನು ಎಲ್ಲಾ ಅವಸ್ಥೆಗಳಲ್ಲಿ ವ್ಯವಸ್ಥಿತವಾಗಿ ವಿದ್ಯಾರ್ಜನೆಯಲ್ಲಿ ಉಚ್ಚಸ್ಥಾನಗಳಲ್ಲಿ ಬಂದು ತನ್ನ ಹದಿನೆಂಟನೆಯ ವಯಸಿನಲ್ಲಿ ಬಿ. ಎ. ಪರೀಕ್ಷೆ ಪಾಸುಮಾಡಿಕೊಂಡನು. ಹುದ್ದೆಗಾಗಿ ಶ್ರಮಿಸಿ ಕಲಿತ ವಿದ್ಯೆಯು ದಿನಮಣಿಯದಲ್ಲ ವ್ಯರ್ಥ ಶಿಕ್ಷಣದ ನೈಜವಾದ ಪ್ರಾಥಮಿಕೆಯು ಅವನಲ್ಲಿ ಕಾಣಬರುತ್ತಿದೆ. ತನಗಿಂತ ಕೂಡಿನ ವಿದ್ಯೆ ಇರುವವರು ಅಜ್ಞಾನಿಗಳೆಂದು ಅಲ್ಲಗಳೆಯುವ ಅಭಿಪ್ರಾಯ ಅವನಲ್ಲಿರಲಿಲ್ಲ. ಪ್ರತಿಯೊಬ್ಬನಿಗೂ ಒಂದಲ್ಲ ಒಂದು ವಿಧದ ವೈಶಿಷ್ಟ್ಯ ಯಾ ಕಲೆಯನ್ನು ಪರಮಾತ್ಮನು ಕರುಣಿಸಿರುವನೆಂಬಲೂ, ಅವುಗಳಲ್ಲಿ ಅಧಿಕ ಸಂಖ್ಯೆಯವು ಪರಿಸ್ಥಿತಿಯ ಕೊರತೆಯಿಂದಾಗಿ ಪ್ರಕಾಶಕ್ಕೆ ಬಾರದೆ ಹಿಂದೆ ಕುಂಟುತ್ತ ನಿಲ್ಲುವೆಂತಾಗುವುದೆಂದು ಅತನಿಗೆ ತಿಳಿದಿದೆ.

ಆಧುನಿಕ ರೀತಿ ನೀತಿಗಳನ್ನು ಅವಲೋಕಿಸಿ ಅವನಿಗೊಂದು ತೆರನಾದ ಭೀತಿಯೇ ಆಗಿ, ತನ್ನ ಗೆಳೆಯ ವೃಂದದವರು ತಮ್ಮ ನೈಜ ಸಂಸ್ಕೃತಿಯನ್ನು ಮರೆತು ವರ್ತಿಸುತ್ತಿರುವುದನ್ನು ನೋಡಿ ವಿಸ್ಮಯಗೊಳ್ಳುತ್ತಿದ್ದನು. ಮುಂದೆ ಊರ ಜನರ ನೇರವಾದ ಕಷ್ಟವನ್ನರಿತು ಅದನ್ನು ಪರಿಹರಿಸುವುದು, ತನ್ನ ತಾಯಿ ತಂದೆಯರ ಸೇವೆಯಲ್ಲಿ ನಿರತನಾಗಿ ಗೃಹ ಜಟುವಟಿಯನ್ನು ನಡೆಸುತ್ತಲಿರುವಂತೆ ನಿರ್ಧರಿಸಿಕೊಂಡನು.

ದಿನಮಣಿಯು ಬಂಧುವರ್ಗದವರೆಲ್ಲರೂ ಕಡು ಬಡವರಾಗಿರಲೂ, ಇಂದಿನವರಂತೆ ಎಲ್ಲದರಲ್ಲಿಯೂ ಸಹಾಯ ಮಟ್ಟವನ್ನೆ ನಿರೀಕ್ಷಿಸಿ, ಕೆಳಮಟ್ಟದಲ್ಲಿಳುವವರನ್ನು ತುಚ್ಛೀಕರಿಸಿ ಅಟ್ಟಹಾಸದಿಂದ ಮೆರೆಯುವ ಅದೊಂದು ಕೆಟ್ಟ ಭಾವನೆ ಅವನಲ್ಲಿರಲಿಲ್ಲ. ಅವನ ಹೃದಯದಲ್ಲಿ ಎಲ್ಲರಿಗೂ ಒಂದೇ ತೆರನಾದ ಸ್ಥಾನವಿತ್ತು. ಯಾವ ಶ್ರೀಮಂತಿಕೆಯೂ ದೊಡ್ಡವರಲ್ಲಿ ಪೂಜ್ಯಬುದ್ಧಿ, ಕೆಳಗಿನವರಲ್ಲಿ ದಯೆ, ಮೇಲ್ಮೇರಾವರ ವಿಶಯದಲ್ಲಿ ಸಂತೋಷ ಪರಿಪೂರ್ಣವಾದವರಲ್ಲಿ ಮೈತ್ರಿ ಪುಣ್ಯವಂತರಲ್ಲಿ ವೆಚ್ಚಿಗೆ ಇರಬೇಕೆಂಬ ಸಾರ್ವಕಾಲಿಕವಾದೋ ಆದರ್ಶ ನೇರವಾಗಿ ಹಿಂಬಾಲಿಕ ತ್ತಿದ್ದನು. ವಿಜ್ಞಾನಿಗಳು ಹೊಸ ಹೊಸ ಸಂಶೋಧನೆಗಳನ್ನು ಕಂಡುಹಿಡಿಯುವುದರಿಂದ ಆಗುವ ಹಿತಕ್ಕಿಂತ ವೈಯಕ್ತಿಕವಾಗಿ ಅಂತರಿಕ ಪರಿಶೋಧನೆಯ ಪ್ರತಿ ಕ್ಷಣವಲ್ಲೂ, ನಡೆದು ಆತ್ಮ ವಿಶ್ವಾಸ, ಆತ್ಮಗೌರವವನ್ನು ಸಂಪಾದಿಸುವುದೇ ಉದಾತ್ತ ಸಂಶೋಧನೆಯೆಂದೆ ನಿಸಿ, ಅಂತೆಯೇ ಆವೇ ಸಲುಗಳಲ್ಲಿ ತನ್ನನ್ನು ನಾ, ಚಿನ್ಮಯನನ್ನು ತನ್ನ ಪ್ರತಿಯೊಂದು ಕೃತ್ಯಗಳಲ್ಲಿ ನಿತ್ಯ ಶೃತಿಗೊಳಿಸಿದ್ದನು. ಪ್ರಾಮಾಣಿಕತೆ ಸರಳತೆಯಲ್ಲೂ, ಬೀಳಿಸನು ಯ ವಲ್ಲೂ ಇದೇ ಪ್ರಕಾರವನ್ನು ಕರಿತು ಮಾತನಾಡುತ್ತಲಿದ್ದನು. ಅಧ್ಯಾಪಕರೊಬ್ಬರು ಅವನ ಪುಸ್ತಕಕ್ಕೆ ಬರೆದ (Autograph) ದಲ್ಲಿ ಈ ಸಾಲನ್ನು ಬರೆದು (Keep good aim and fight with heart and soul and it will be His duty to make you happy) ನಮ್ಮ ಹಿರಿಯರೂ ಶೋಭರು ತನ್ನ ಜೀವಿತವೆಲ್ಲವನ್ನೂ ತನ್ನ ಮನಸ್ಸಿನ ನೈಜರೂಪವನ್ನು ತಿಳಿಸಲೆತ್ನಿಸಿದಂತೆ ದಿನಮಣಿಯು ಉದಾತ್ತ ಭಾವನೆಗಳಿಂದಲೂ, ಆತ್ಮ ಪರಿಶುದ್ಧತೆಯಿಂದಲೂ ಎಳ್ಳರ ಪ್ರೀತಿ ಆದರಗಳಿಂದ ತಾನೂ ಸಂತೋಷಗೊಳ್ಳುತ್ತಿದ್ದನು. ದಿನಮಣಿಯು ನೈಪ್ಪಿಕಶ್ರದ್ಧಾಭಕ್ತಿಯಲ್ಲೂ, ಸೂಕ್ಷ್ಮ ಪದಾರ್ಥ ವರ್ಜಕನೂ, ಆಗಿದ್ದರಿಂದ ಅವನ ದೈಹಿಕ ಶಕ್ತಿಯು ಚೆನ್ನಾಗಿದ್ದು, ಮಾನಸಿಕ ಶಕ್ತಿಯು ದೈಹಿಕ ಸ್ಥಿತಿಯನ್ನು ಅವಲಂಬಿಸಿಕೊಂಡಿದೆಯೆಂಬುದನ್ನು ಎತ್ತಿ ತೋರಿಸುತ್ತಿತ್ತು.

ದಯೂ ಗುಣವು ಪರಲೋಕಕ್ಕೆ ಸಾಧನವೆಂದೂ, ದಯಾ ರಹಿತ ಶಕ್ತಿಯು ಕ್ರೂರಾಚರಣದುದೆಂದೂ ಅವನಿಗೆ ತಿಳಿದಿತ್ತು. ಅಂತೆಯೇ ತನ್ನ ಊರಲ್ಲಿ ದಟ್ಟಣದಲ್ಲಿ ಮನೆಗಳಿರುವವರಿಗೆ ದಯೆ ತೋರಿಸಿ, ಅವರಲ್ಲಿ ಧೈರ್ಯವನ್ನು ಹುಟ್ಟಿಸಿ ಜೀತರಾಸಿಕೊಳ್ಳುವಂತೆ ಮೊದಲು ಹಾತೊರೆಯುತ್ತಿದ್ದನು. ಹೆಸರಿಗನುಗುಣವಾದ ಧೃತಿ ಹಾಗೂ ಕೃತಿ ಇರಬೇಕೆಂಬಂತೆ ಅತನ ಉತ್ಕಟ ಕೃತಿ ನೆರೆ ಊರಲ್ಲೆಲ್ಲಾ ಪಸರಿಸಿದೆ. ದಿನಮಣಿಯು ಆ ಊರಿಗೆ ಕೋಟೆಯಂತಿರುವನು ಆ ಊರ ಜನರ ಆಜ್ಞಾವರ್ತಿಯೆಂಬ ಕತ್ತಿಯನ್ನು ದುತ್ತ ಅಲೋಚನೆಗಳೆಂಬ ನಂಜನ್ನು ಪರಿಹರಿಸುತ್ತಿರುವನು.

ದಿನಮಣಿಯು ಸ್ಥಿರ ಪ್ರಯತ್ನದವನೂ ಆಹುದು. ಸ್ಥಿರ ಪ್ರಯತ್ನದ ಕುರಿತು ತನ್ನ ಹಿನ್ನೆಲೆಯಾಗಿ ತಾನು ಓದಿದ ಚಾರಿತ್ರಿಕ ಕಥೆಗಳನ್ನೆ ಸಂಕೇತವಾಗಿಟ್ಟುಕೊಂಡಿದ್ದನು. ಅವುಗಳಲ್ಲಿ ಗ್ರೀಸ್ ದೇಶದ ದಿವಂಗತ ಫೈಸ್ ಎಂಬವನು ವಾಗ್ದಿಯಂಗೆ ದೇಶಿಂದ ಉದ್ದೇಶದಿಂದ ಮಾತನಾಡುವಾಗಲೆಲ್ಲಿ ಬಾಯಲ್ಲಿ ಬೆಣಚು ಕಲ್ಲನ್ನು ಹಾಕಿಕೊಂಡು ಅತುವ ಅಭ್ಯಾಸವನ್ನು ಬಹು ಕಾಲ ಮಾಡಿ ತೊನೆಗೆ ತನ್ನ ನೆಕ್ಕನ್ನು ಹೋಗಲಾಡಿಸಿಕೊಂಡನಂತೆ. ಅದೇ ರೀತಿಯಲ್ಲಿ ಇನ್ನೊಂದು ಕೊರತೆಯೂ ಇತ್ತು. ಅತನ ಧ್ವನಿಯು ಅತಿ ನಿರ್ಬಲವೂ ಕೀಚಲೂ ಆಗಿತ್ತು. ಅದಕ್ಕಾಗಿ ಸಮುದ್ರ ತೀರಕ್ಕೆ ಹೋಗಿ ಅಲೆಗಳ ಘೋಷಕ್ಕಿಂತ ಜೋರಾಗಿ ಎತ್ತರವಾಗಿ ಪ್ರಸಂಗವೂ ಬಂದಾಗ ತನ್ನ ಧ್ವನಿಯನ್ನೂ ತಿದ್ದಿಕೊಂಡು ಗ್ರೀಸ್ ದೇಶದಲ್ಲೆಲ್ಲಾ ಅಗ್ರಗಣ್ಯ ವಾಗ್ಮಿ ಹೊರಹೊಮ್ಮಿದಂತೆ ಅಂತೆಯೇ ದಿನಮಣಿಯು ಸ್ಥಿರ ಪ್ರಯತ್ನದ ಫಲವಾಗಿ ತನ್ನ ಇಂದ್ರಿಯ ಹಾಗೂ ಮನಸ್ಸನ್ನು ಹಿಡಿತದಲ್ಲಿಟ್ಟು ಆಸೆ ಆಕಾಂಕ್ಷೆಗಳನ್ನು ತೊರೆದು ಆದರ್ಶ ಮೂರ್ತಿಯಾಗಿ ಮೆರೆಯುತ್ತಿರುವನು.

ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ।
ಸ ಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ

ಎಂಬ ಗೀತೆಯ ನಾಡಿಯಂತೆ ಜ್ಞಾನಿಗಳು ಯಾ ದೇಶದ ನಾಯಿಂಡಿಗರು ಸನ್ಮಾರ್ಗದಲ್ಲಿ ನಡೆದರೆ ಉಳಿದವರೂ ತನ್ಮಾರ್ಗವನ್ನೆ ತಿದ್ದಿಕೊಂಡು ತಾವೂ ಸನ್ಮಾರ್ಗವನ್ನು ಹಿಡಿವಂತೆ ದಿನಮಣಿಯು ತನ್ನ ಆದರ್ಶತನದಿಂದ ಆ ಊರ ಜನರು ಸನ್ಮಾರ್ಗವಲಂಗಳಾಗಿ ಮೆರೆಯುತ್ತಿರುವರು. ತಂದೆ ಸುಬ್ರಾಯ ತಾಯಿ ಸುಶೀಲಮ್ಮ ಇವರಲ್ಲಿ ನಿಶ್ಚಲ ಭಕ್ತಿ, ಹಾಗೂ ಪ್ರೇಮದಿಂದ ಕೂಡಿದ ಅವರೀರ್ವರ ಸೇವೆಯಲ್ಲಿ ದಿನಮಣಿಯು ಸುಖದಿಂದಾಗಿ ರಾರಾಜಿಸುತ್ತಿರುವನು. ಈ ತೆರನಾದ ಆದರ್ಶ ಜೀವನಕ್ಕೆಳೆ-ದಲ್ಲವೇ ಭವಿಷ್ಯ ಭಾರತವು ಜೀವತಳೆಯಲು ಅನುವಾಗುವುದು?

TENDER FOR PEPPER ON VINES

'Tenders are invited BY POST for the sale of pepper crop for the year 1951/52 of Athur Estate, Suntikoppa, Coorg. Interested persons or parties may write to the below address. Tender applications will be opened on the 15th August 1951 at 10. A. M. at the office of the Athur Estate. Successful bidders will have to deposit 1/3rd of the value on the spot. Mark envelops 'TENDER.'

Manager,
ATHUR ESTATE
Suntikoppa, P. O. Coorg.

ಒಳ್ಳೆ ಮೆಣಸು ಮೂರಾಟಕ್ಕಿದೆ.

ಕೊಡಗು, ಸುಂಟಿಕೊಪ್ಪದ ಅತ್ಯುತ್ತಮ ತೋಟದಲ್ಲಿರುವ ೧೯೫೧-೫೨ನೇ ಸಾಲಿನ ಒಳ್ಳೆಮೆಣಸು ಫಲವನ್ನು ಮೂರುವರೆ ಪೋಸ್ಟ್ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ ಆಸಕ್ತ ವ್ಯಕ್ತಿಗಳು ಯಾ ಪಾರ್ಟಿಗಳು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು. ಟೆಂಡರ್ ಅರ್ಜಿಗಳನ್ನು ತಾರೀಖು ೧೫-೮-೫೧ರಲ್ಲಿ ಬೆಳಿಗ್ಗೆ ೧೦ ಗಂಟೆಗೆ ಆತ್ತೂರು ತೋಟದ ಆಫೀಸಿನಲ್ಲಿ ತೆರೆಯಲಾಗುವುದು. ಜಯಶೀಲ ಬಿಡ್ಡುದಾರರು ಬೆಲೆಯ ಮೂರನೆಲ್ಲಂದು ಅಂಶವನ್ನು ಆಲ್ಲೇ ಠೇವಣಾತಿ ಇಡಬೇಕಾಗುವುದು. ಅರ್ಜಿ ಕಳುಹಿಸುವವರು ಲಕೋಟೆಯ ಮೇಲೆ 'ಟೆಂಡರ್' ಎಂದು ಬರೆಯಬೇಕು.

Manager,
ATHUR ESTATE
Suntikoppa, P. O. Coorg.

ಹಾವು ಕಚ್ಚಿದಾಗ ಅನುಸರಿಸಬೇಕಾದ ಪ್ರಥಮ ಚಿಕಿತ್ಸೆ

[ಸರ್ಕಾರ್ಯ ಇಲಾಖೆಯಿಂದ]

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ಕೊ ಡಲಾಗುವುದು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

82-51

॥ ಇಂದಿನ ಸೋವಿಯೆಟ್ ಪ್ರಜಾಪ್ರಭುತ್ವ ॥

ಲೇ:—ಶ್ರೀ ಕೆ. ಬಿ. ಐಯ್ಯಪ್ಪ, ಬಿ. ಎ, ಬಿ. ಟಿ, ನಾಪೋಕ್ಲು.

ಪ್ರಜಾಪ್ರತಿನಿಧಿಗಳೂ ಆಳ್ವಿಕೆಯೂ ಇರುವ ಸರಕಾರವು ಪ್ರಜಾಪ್ರಭುತ್ವವಾದರೂ, ಒಂದೊಂದು ರಾಷ್ಟ್ರದಲ್ಲಿ ಒಂದೊಂದು ವಿಧದ ಪ್ರಜಾಪ್ರಭುತ್ವವಿದೆ ಸಂಯುಕ್ತ ಅಮೇರಿಕದ ಪ್ರಜಾ ಸರಕಾರವು, ಬ್ರಿಟನ್ನಿಂತಿಲ್ಲ. ಹಿಟ್ಲರೀಕೃತ ರಷ್ಯದ ಜನಸರಕಾರವು ಮತ್ತೊಂದು ರೀತಿಯದಾಗಿದೆ.

ಹಿಂದಿನ ಕಾಲದಲ್ಲಿ, ನಿರಂಕುಶ ಹಾಗೂ ಅಧಿಕಾರರೂಢರಿಂದ ರಷ್ಯಾದ ರಾಜವಂಶವರು, ರಷ್ಯದಲ್ಲಿ ತಡೆಯಲಸಾಧ್ಯವಾದ ದಬ್ಬಳಿಕೆಯನ್ನು ನಡೆಸುತ್ತಿದ್ದರು. ಗಂಡಬರಾದ ಪ್ರಜೆಗಳಿಗೆ ಯಾವ ರೀತಿಯ ಸುಖಸೌಲಭ್ಯಗಳಾಗಲಿ, ರಾಷ್ಟ್ರವಹಿವಾಟುಗಳಾಗಲಿ ಇರಲಿಲ್ಲ. ಪ್ರಜೆಗಳ ದುಡಿಮೆಯ ಪ್ರತಿಫಲವನ್ನೆಲ್ಲಾ ಅರಸುಮನೆತನದವರೇ ಅನುಭವಿಸುತ್ತಾ, ಸುಖಲೋಲ ರಾಗಿಯೂ, ಭೋಗಿಗಳಾಗಿಯೂ ಕಾಲಹರಣಮಾಡುತ್ತಿದ್ದರು. ವ್ಯಕ್ತಿ ಸ್ವಾತಂತ್ರ್ಯವೆಂಬುದು ಲವಲೇಶವೂ ಇರಲಿಲ್ಲ.

ಈ ಒರಟು ದಬ್ಬಳಿಕೆಯನ್ನು ತಡೆಯಲಾರದೆ, ೧೯೧೭ ರಲ್ಲಿ, ಪ್ರಚಂಡ ಪ್ರಜಾಕ್ರಾಂತಿಯೊಂದು ತಲೆದೋರಿ, ರುಶ್ಯಾ ವಂಶವು ಅಳಿಯಿತು, ಅಡಳಿತ ಹೊಣೆಗಾರಿಕೆ ಸಾಮಾನ್ಯ ಜನರ ಹೆಗಲ ಮೇಲೆ ಬಿತ್ತು. ಆನೇಕಾನೇಕ ರಾಜಕೀಯ ಬದಲಾವಣೆಗಳಾದವು. ಮಜೂರರ ಮತ್ತು ರೈತರ ಸರ್ವಾಧಿಕಾರವಾದೀ ಯೂ ಸರ್ವತಾವಾದಿ ಸರಕಾರದ ರಚನೆಯೂಯಿತು. ಹಲವು ಆರ್ಥಿಕಾಭಿವೃದ್ಧಿ ಯೋಜನೆಗಳ ಮುಖೇನ ಸರ್ವಪ್ರಜೆಗಳ ಸರ್ವೋತೋಮುಖವಾದ ಉದ್ಧಾರವಾಗಿಹೊಡಗಿ, ಸಕಲ ಕಷ್ಟಪರಂಪರೆಗಳು ತೊಳೆಯಲಾದವು ಲೆನಿನ್, ಟ್ರಾಟ್ಸ್ಕಿ ಮತ್ತು ಸ್ಟೇಲಿನ್ ಮೊದಲಾದ ಕ್ರಾಂತಿವೀರರು, ಉತ್ತಮ ರೀತಿಯ ಆಡಳಿತ ವ್ಯವಸ್ಥೆಯಾಗ್ಗು ಶಂಕೊಡ್ಡಿ, ಪ್ರಜಾಸೇವಕರೆನಿಸಿದರು.

ಇಂದಿನ ರಷ್ಯವು ೧೫ ಸಮಾನ ಅಧಿಕಾರವುಳ್ಳ ಪ್ರಾಂತ್ಯಗಳ ಒಂದು ಫೆಡರಲ್ ಒಕ್ಕೂಟವಾಗಿದೆ. ಈ ಪ್ರಾಂತ್ಯಗಳೆಲ್ಲಾ ಹಕ್ಕು, ಅಧಿಕಾರಗಳಲ್ಲಿ ಸರಿಸಮಾನವಾಗಿವೆ. ರಷ್ಯಾ, ಉಕ್ರೈನಿಯಾ, ಬೈಲೋರಷ್ಯಾ, ಉಜಬೆಗ್, ಕಜಾಕ್, ಜೋರ್ಜಿಯಾ, ಅರ್ಮೇನಿಯಾ, ತರ್ಕಮೆನಿಯಾ, ಈಸ್ಟೋನಿಯಾ ಮತ್ತು ಕಾರೋ-ಫಿನ್ನಿಸ್-ಇವೇ ೧೫ ಪ್ರಧಾನ ಪ್ರಾಂತ್ಯಗಳು. ಈ ಪ್ರಾಂತ್ಯಗಳಲ್ಲಿರುವ ಬಹು ಸಂಖ್ಯಾತರೆಲ್ಲಾ ಬೇರೆ ಬೇರೆ ಜನಾಂಗದವರಾಗಿದ್ದು, ಭಾಷಾವಾರು ಪ್ರಾಂತರಚನೆಯಾದಂತೆ ವಿಂಗಡಿಸಲ್ಪಟ್ಟಿದೆ. ಇವಲ್ಲದೆ ಇತರ ಜನಾಂಗಗಳು, ತಮ್ಮ ತಮ್ಮ ಕೋಮುವಾರು ಸಂಘಗಳನ್ನು ಸ್ಥಾಪಿಸಿ, ಕೇಂದ್ರ ಸರಕಾರದ ಅಡಳಿತಕ್ಕೊಳಪಟ್ಟು, ಸ್ವತಂತ್ರ ಪ್ರಾಂತಸರಕಾರವನ್ನು ರಚಿಸಿಕೊಂಡಿರುತ್ತಾರೆ.

ಮೇಲೆ ಪ್ರಸ್ತಾಪಿಸಿರುವ ಈ ಪ್ರಾಂತ್ಯಗಳೆಲ್ಲಾ ಸಾರ್ವಭೌಮ ಒಕ್ಕೂಟವಾದ ಒಕ್ಕೂಟದಿಂದ ಸಂಘಟನೆಯಾಗಿ ಒಂದು ಅನಾಗರಿಕ ಪ್ರಜೆಗಳ ಆಳ್ವಿಕೆಯಿಂದ ಸ್ವತಂತ್ರವಾಗಿ ಸ್ವಯಂ ಸ್ವತಂತ್ರ ಜಿಲ್ಲೆಗಳಾಗಿ ಸಂಘಟಿಸಲ್ಪಟ್ಟಿವೆ. ಈ ೧೫ ಪ್ರಾಂತ್ಯಗಳಲ್ಲಿ ಸಂಘಟಿಸಿ, ರಚಿಸಿದ ರಾಷ್ಟ್ರಘಟನೆಗೆ ಸಾರವಾಗಿ, ರಷ್ಯದ ಕೇಂದ್ರ ಸರಕಾರವು ಸಿದ್ಧಾಣವಾಗಿದೆ. ಈ ರಾಷ್ಟ್ರಘಟನೆಗೆ, 'ಸ್ಟೇಲಿನ್ ರಾಜ್ಯಾಂಗ ಬಂಧನ' ಎಂದು ಪ್ರಜೆಗಳು ನಾಮಕರಣಮಾಡಿ, ತಮ್ಮ ರಾಷ್ಟ್ರನಾಯಕಗೆ ದೊಡ್ಡ ಮಟ್ಟಿಗೆ ಗೌರವ ಸಲ್ಲಿಸಿದ್ದಾರೆ.

ಕೇಂದ್ರ ಸರಕಾರದ ಅಡಳಿತವು 'ಸುಪ್ರೀಮ ಸೋವಿಯಟ್' (ಪ್ರಧಾನ ಸೋವಿಯಟ್ ಸಭೆ) ಎಂಬ ಪ್ರಜಾಪ್ರತಿನಿಧಿಗಳ ಸಭೆಯಿಂದ ನಿರ್ವಹಿಸಲ್ಪಡುತ್ತದೆ ಈ ಸಭೆಯ ಸದಸ್ಯರಿಗೆ ಡಿಪ್ಯುಟಿ ಎಂಬ ಹೆಸರಿದೆ. ಇವರನ್ನು ಪ್ರಜೆಗಳೇ ಚುನಾಯಿಸುತ್ತಾರೆ. ಸಕಲ ಅಡಳಿತ ಶಾಸನಗಳನ್ನು ತಯಾರುಮಾಡುವ ಅಧಿಕಾರ ಈ ಸಭೆಗಿದೆ. ಅಧ್ಯಕ್ಷನನ್ನೂ, ಮಂತ್ರಿಮಂಡಲವನ್ನೂ ಆವತ್ತು ಪ್ರಧಾನ ನ್ಯಾಯಾಧಿಶರನ್ನು ಚುನಾಯಿಸುವುದು ಈ ಸಭೆಯೇ ಈ ಕೇಂದ್ರ ಸರಕಾರದ ವ್ಯವಸ್ಥೆಯಂತೆ, ಪ್ರತಿಯೊಂದು ಪ್ರಾಂತ್ಯದಲ್ಲಿ ಶಾಸನ ಸಭೆಯೂ, ಅಧ್ಯಕ್ಷನೂ, ಮಂತ್ರಿಮಂಡಲಗಳೂ ಮತ್ತು ಕನಿಷ್ಠ ನ್ಯಾಯಾಲಯಗಳೂ ಇವೆ. ರಕ್ಷಣೆ, ನಾಣ್ಯ ಜಲಾವಣೆ, ಸಂಚಾರ ವಿಷಾರಣೆಗಳು, ಆರ್ಥಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿ ಇವುಗಳೆಲ್ಲಾ ಸಂಪೂರ್ಣವಾಗಿ ಕೇಂದ್ರ ಸರಕಾರದ ಸ್ವಾಧೀನದಲ್ಲಿವೆ. ದೊಡ್ಡ ದೊಡ್ಡ ಕೈಗಾರಿಕಾ ಉದ್ಯಮಗಳು ಸಹ ಕೇಂದ್ರದ ಅಡಳಿತದಲ್ಲಿವೆ ಆದರೆ ಕೆಲವು ಇಲಾಖೆಗಳು ಪ್ರಾಂತ ಸರಕಾರದ ಸ್ವತಂತ್ರ ಅಡಳಿತಕ್ಕೊಳಪಟ್ಟಿವೆ.

ಕೇಂದ್ರ ಅಥವಾ ಪ್ರಾಂತ ಸರಕಾರ ಕ್ಕಾಗಲೀ, ನಾಡು ಯಾ ಗ್ರಾಮ ಸಭೆಗಳಿಗಾಗಲೀ, ಸಿಟಿ, ಯಾ ಡಿಸ್ಟ್ರಿಕ್ಟ್ ಬೋರ್ಡು ಸ್ಥಳೀಯ ಸಭೆಗಳಿಗಾಗಲೀ, ಸರಿಸಮಾನ ಗೌರವತೆಯಾನ್ನ ಪದ್ಧತಿಯಂತೆ ಪ್ರತಿನಿಧಿಗಳನ್ನು ಚುನಾಯಿಸಲಾಗುವುದು. ೧೮ ವಯಸ್ಸು ಮೇಲ್ಪಟ್ಟ—ಯಾವ ಜಾತಿ, ವಂಶ, ಕುಲದವನೇ ಆಗಲೀ, ಸ್ತ್ರೀಯಾಗಲಿ, ಪುರುಷನಾಗಲಿ, ವಿದ್ಯಾವಂತನೇ ಆಗಲಿ ನಿರಕ್ಷರ ಕುಕ್ಷಿಯಾಗಿರಲಿ, (ನಿರಕ್ಷರತೆಯು ಈಗ ಇಲ್ಲವೆಂಬುದಾಗಿ ಹೇಳಬಹುದು)—ಸರ್ವರಿಗೂ ಮತಾಧಿಕಾರ ಇದೆ. ಹುಚ್ಚರಿಗೂ, ಕೊಲೆಗಡುಕರಿಗೂ, ರಾಜ್ಯದ್ರೋಹಿಗಳೆಂದು ಶಿಕ್ಷೆ ಅನುಭವಿಸುತ್ತಿರುವವರಿಗೂ ಮಾತ್ರ ಇಲ್ಲ.

ಸೋವಿಯಟ್ ಸಭೆಗಳಲ್ಲಿ, ಮಜೂರರು, ರೈತರೂ ಬಾಹುಳ್ಯರಾಗಿರುವರು. ಕಾಸನ ಸಭೆಗಳಲ್ಲಿ, ಕೇಂದ್ರ ಹಾಗೂ ಪ್ರಾಂತ ಶಾಸನಸಭೆಗಳಲ್ಲಿ, ಕಮ್ಯುನಿಸ್ಟ್ ಪಕ್ಷದ ಸದಸ್ಯರೂ, ಉಳಿದ ಕಾಂಗ್ರೆಸ್ಸಿನಲ್ಲಿ ಕೆಲವು ಸ್ವತಂತ್ರವಾದಿಗಳೂ ಇದ್ದು, ಕಮ್ಯುನಿಸ್ಟ್ ಪಕ್ಷದವರೂ, ಬೆಲ್ಶೆವಿಕ್ ಪಕ್ಷದವರೂ, ರೈಲುಗಳಲ್ಲಿ ಕೆಲಸ ಮಾಡುವವರೂ, ಹತ್ತಿ ಗೋಧಿ ಬೆಳೆಯುವವರೂ, ಅಧ್ಯಾಪಕರೂ, ವೈದ್ಯರೂ ಪ್ರತಿನಿಧಿಗಳಾಗಿ ಚುನಾಯಿಸಲ್ಪಡಬಹುದಾಗಿದೆ ಕಳೆದ ಪರ್ಷ ನಡೆದ ಚುನಾವಣೆಯಲ್ಲಿ, ಕೇಂದ್ರ ಶಾಸನ ಸಭೆಗೆ, ಅಂದರೆ 'ಸುಪ್ರೀಮ್ ಸೋವಿಯಟ್' ಗೆ, ಆಗಿಲ ಕಾಲೂಗಾರಿಗೂ, ಬಿಳಿ ರೈತರಿಗೂ ಸ್ಥಳ ದೊರೆಯಿತ ಇವಂ ಪೈಕಿ ೩೮೦ ಬರೀ ಸ್ತ್ರೀಯರು ಪ್ರಾಸ್ಕೋವಿನ ಅಂಜಲಿನ ಎಂಬ ಉಕ್ರೇನ್ ದೇಶದ ಸ್ತ್ರೀಯೊಬ್ಬಳು ತನ್ನ ೧೭ನೇ ವಯಸ್ಸಿನಲ್ಲಿ ಬೆಳೆಕೊಯ್ಯುವ ಯಂತ್ರ ಸಂಚಾಲಕಳಾಗಿ, ಗಾಷಿರ ಸ್ಟಿ ಸ್ಟಿಯರಿಂಗ್ ಟ್ರಾಕ್ಟರ್ ಬ್ರಿಗೇಡ್' ಒಂದನ್ನು ಸ್ಥಾಪಿಸಿದಳು. ಈಗ 'ಸುಪ್ರೀಮ್ ಸೋವಿಯಟ್'ನ ಉಪಾಧ್ಯಕ್ಷಸ್ಥಾನಿಯಾಗಿ ಸ್ಟೇಲಿನ್ ಪದಕಳಿ ದೊರೆತಿದೆ ರಷ್ಯದ ಪ್ರಜೆಗಳೆಲ್ಲರೂ, ಸ್ಟೇಲಿನನ್ನು ತಮ್ಮ ಪ್ರತಿನಿಧಿಯೆಂದೂ ಕರೆಯುತ್ತಾರೆ ಕೇಂದ್ರ ಮತ್ತು ಪ್ರಾಂತಸರಕಾರಗಳ, ಮಂತ್ರಿ ಅನೇಕ ಸ್ಥಳದಲ್ಲಿ ಅಡಳಿತ ಸಂಸ್ಥೆಗಳ ಪ್ರತಿನಿಧಿಯಾಗಿ ಸ್ಟೇಲಿನನ್ನು ಪ್ರಜೆಗಳು ನೇಮಿಸಿರುತ್ತಾರೆ.

ಸುಪ್ರೀಮ್ ಸೋವಿಯಟ್ ಅಡಳಿತ ಮಂಡಳಿಯ ಅಧ್ಯಕ್ಷನಾಗಿ, ಯಸ್. ಎಂ. ಫಿವರ್‌ಸಿನಿಕ್ ಎಂಬವನು ಇದ್ದಾನೆ. ಈತನು ಸಾಮಾನ್ಯಕೂಲಿಗಾರನಾಗಿದ್ದು, ನಂತರ ಮಜೂರ ಸಂಸ್ಥೆಗಳ ಮುಂದಾಳಾಗಿ ಉಚ್ಚ ಪದವಿಗೇರಿದನ. ಇಡೀ ಕೇಂದ್ರ ಸರಕಾರದ ಕಾರ್ಯನಿರ್ವಾಹಕ ಸಭೆಗೆ ಮಂತ್ರಿಮಂಡಳಿಯೆಂದು (ಕೌನ್ಸಿಲ್ ಆಫ್ ಮಿನಿಸ್ಟರ್ಸ್) ಎಂದು ಹೆಸರು. ಸಕಲ ಅಡಳಿತ ಸುವ್ಯವಸ್ಥೆಯನ್ನು ರಾಷ್ಟ್ರ ರಕ್ಷಣೆಯನ್ನು, ಪ್ರಜೆಗಳ ಹಕ್ಕುಭಾಧ್ಯತೆಗಳ ಭದ್ರತೆಯನ್ನು, ಪರರಾಷ್ಟ್ರಘೋರಣೆಯನ್ನು ನೋಡುತ್ತಿರುವುದು ಈ ಮಂತ್ರಿಗಳ ಸಭೆಯಾಗಿದೆ. ರಾಷ್ಟ್ರದ ಆರ್ಥಿಕ ಯೋಜನೆಯನ್ನೂ, ವಾರ್ಷಿಕ ಆಯವ್ಯಯ ಲೆಕ್ಕವನ್ನು ತಯಾರಿಸಿ, ರೂಢೀಕರಿಸುವುದೂ ಈ ಮಂತ್ರಿಗಳೆ. ಇವರು ಕೇಂದ್ರ ಶಾಸನ ಭವನಕ್ಕೆ ಸಂಪೂರ್ಣ ಜವಾಬ್ದಾರರಾಗಿರುತ್ತಾರೆ.

ಈ ರೀತಿ ಸೋವಿಯಟ್ ಪ್ರಜಾ ಸರಕಾರವು ರೈತರಿಂದಲೂ, ಕಾರ್ಮಿಕರಿಂದಲೂ ನಡೆಸಲ್ಪಟ್ಟ ಪ್ರಜೆಗಳಿಗೆ ಅಚ್ಚುಮೆಚ್ಚಿನ, ಹಿತಕರವಾದ ಸರಕಾರವಾಗಿದೆ. ಪ್ರಜಾಸದಸ್ಯರೆಲ್ಲಾ ಜನರ ಸೇವೆ ಮಾಡಿ ಸುಖಸೌಕರ್ಯಗಳನ್ನು ಒದಗಿಸಬೇಕು. ಓಟು ಕೊಟ್ಟು, ಶಾಸನ ಸಭೆಯಲ್ಲಿ ಸ್ಥಾನ ಪಡೆದ ನಂತರ ಪ್ರಜೆಗಳಿಗೆ ಅಹಿತವನ್ನು ಬಯಸಿ, ಸ್ವಾರ್ಥತೆಯಿಂದ ಕೆಲಸ ಮಾಡಿದರೆ, ಅವನನ್ನು ಖಡ್ಡಾಯವಾಗಿ ಅಧಿಕಾರದಿಂದ ತಳ್ಳಿ ಹಾಕುತ್ತಾರೆ ಸಮ್ಮತಿಸುವ ಹಾಗೆ, ಚುನಾವಣೆ ಹೊಂದಿ, ಪ್ರಜೆಗಳನ್ನು ವರೆಸು ಅಧಿಕಾರ ದರ್ಪದಿಂದ ಮೆರೆಯ ಬಯಸಿಗೆ ಅರ್ಧಾಗಳಿಗೆಯೂ ಸಹ ಗೌರವ ಸಿಕ್ಕದು.

ಈ ಪ್ರಜಾ ಸರಕಾರದ ತತ್ವವನ್ನು, 'ಲೋಕ್ಯಮಿಯಂ' ಎಂದಾಗಲೀ, ಸಮತಾವಾದ, ಅಥವಾ ಸಮಾಜವಾದವೆಂದಾಗಲೀ ಇರಿಯಬಹುದು. ಯಾವ ರಾಜಕೀಯ ತತ್ವವೇ ಆಗಿರಲಿ, ತತ್ವವು ತತ್ವಪಥವನ್ನು ಕ್ರಮಿಸಿ ಕಾರ್ಯರೂಪಕ್ಕೆ ಬರುವುದೆನ್ನುವುದನ್ನು ಪ್ರಜೆಗಳು ದಿವಸನಿತ್ಯವೂ ಗಮನಿಸುವರು ಪ್ರತಿಯೊಬ್ಬ ವ್ಯಕ್ತಿಗೆ, ಯೋಗ್ಯ ವೇತನ, ಆಹಾರ ಮತ್ತು ಪೂರಣವಸ್ತ್ರಗಳಿಕೆಗೆ ಸಾಕಷ್ಟು ಒಟ್ಟಿಗಿರಬೇಕು. ರಾಜಕೀಯ ತತ್ವ ಆವಶ್ಯಕವೇ ಬೇಕಿಲ್ಲ. ಮೂರನೆಯಾಗಿ ಜನಸಿ, ನ್ಯಾಯಗಳಂತೆ ಜೀವಿಸಲು ಆತನು ಇಚ್ಛಿಸುವುದಿಲ್ಲ, ನೈಕ್ಯ ಸ್ವಾತಂತ್ರ್ಯ ಒಂದು ದಾರ್ಢ್ಯತ್ವದಿಂದ ವಿಮೋಚನೆಯಾದರೂ, ಸಂಪೂರ್ಣ ಆರ್ಥಿಕ ಸ್ವಾತಂತ್ರ್ಯ ಬರಬೇಕು. ಯಾವ ಸರಕಾರವು ಇದನ್ನು ಸಾಧಿಸುತ್ತದೋ, ಅದೇ ಸರಕಾರ ಆತನ ಹೃದಯದ ಅಂಧಾಭಿಮಾನಿ ರಷ್ಯದಲ್ಲಿ ಇಂದು ಪ್ರತಿಯೊಬ್ಬನಿಗೆ ಸಾಕಷ್ಟು ಒಟ್ಟಿ, ಆಹಾರ, ವಸತಿ ದೊರಕಿರುವುದರಿಂದ, ಅದು ಅತ್ಯಂತ ಪ್ರಬಲ ರಾಷ್ಟ್ರವಾಗಿದೆ.

ಇಷ್ಟಿಯೂ ಹೇಳುವಷ್ಟು ಸೊಗಸು ಎಲ್ಲಿ ರೀತಿಯಲ್ಲಿಯೂ ಇಲ್ಲ. ವ್ಯಕ್ತಿ ಸ್ವಾತಂತ್ರ್ಯ ಎಲ್ಲಾ ಸಂದರ್ಭಗಳಲ್ಲಿ ಇಲ್ಲ. ಜವಾಬ್ದಾರಿ ಸರಕಾರವೆಂದರೂ, ಪ್ರಜಾಪ್ರತಿನಿಧಿಗಳ ದಬ್ಬಳಿಕೆ ಅಲ್ಲಲ್ಲಿ ನಡೆಯುತ್ತಿದೆ ರಾಷ್ಟ್ರಕ್ಕೆ ಅಲ್ಪ ವಿರೋಧ ಬಯಸಿದವರಿಗೆ ಹಲವು ಸಂದರ್ಭಗಳಲ್ಲಿ ವಿಚಾರಣೆ ಇಲ್ಲದ್ದೆ ಕಠಿಣ ಶಿಕ್ಷೆಯನ್ನು ಜೀವಾವಧಿ ಶಿಕ್ಷೆಯನ್ನು ವಿಧಿಸಲಾಗುತ್ತಿದೆ. ಹಲವು ವಾಸ್ತವ ರಾಜಕೀಯ ಪಟುಗಳು, ನಡಿವ ರೀತಿ, ಕಟ್ಟಿಣದ ಪದವಿಯ ಮಟ್ಟಿಯಲ್ಲಿ ನಡೆಯುವುದೆಲ್ಲಾ ಸರಿಯಾಗಿ ಖಚಿತವಾಗುವುದಿಲ್ಲ. ಇದೆಲ್ಲಾ ಅವರ ದುರ್ದೈವವೆಂದಿರಬಹುದು. ಆದರೆ ಪ್ರಜೆಗಳು ಮಾತ್ರ ಆತ್ಯಕ್ಷೇಮದಲ್ಲಿದ್ದಾರೆಂದು ಹೇಳಬಹುದು. ವೈಗಳಿಗೆ ಎಡೆಯಿಲ್ಲ ಎನ್ನಬಹುದು.

ಇತ್ತೀಚೆಗೆ ದಕ್ಷಿಣ ರಷ್ಯದಲ್ಲಿ ಕಾರ್ಮಿಕರು ಮತ್ತು ರೈತರ ಚಳವಳಿ ಆರಂಭಿಸಿದೆ. ಈಗಿನ ಸರಕಾರ ಅಡಳಿತ ಕ್ರಮಗಳಲ್ಲಿ ಅಲ್ಪ ಸ್ವಲ್ಪ ಬದಲಾವಣೆ ಆಗಬೇಕೆಂಬ ಹಂಬಲ ಜನರಲ್ಲಿ ಮೂಡುತ್ತಿದೆ. ಈಗ ತಾನೆ ಜಾರಿಗೆ ತರುತ್ತಿರುವ ಕೆಲವು ಜಮೀನು ಮತ್ತು ಔದ್ಯೋಗಿಕ ಕಾಯಿದೆಗಳು ಅತೀ ಒಂಟಿಯಾಗಿರುವುದೇ ಇದಕ್ಕೆ ಕಾರಣ. ಇದು ಹಾಗಿರಲಿ, 'ದೂರದ ಬೆಟ್ಟ ನುಣ್ಣಗೆ' ಎಂದು ಹಲವರು ಹೇಳುತ್ತಾರೆ. ಇದು ನಿಜವಿರಲಿಕ್ಕೂ ಸಾಕು, ನಿಜವಿಲ್ಲದಿರಲಿಕ್ಕೂ ಸಾಕು. ಇದು ಏನೇ ಆಗಿರಲಿ; ಪರರಾಷ್ಟ್ರಗಳಿಗೆ ಅತೀ ಕಡಿಮೆ ದಾಂದಲ್ಲಿ ಬೇಕಾದಷ್ಟು ಆಹಾರ ರವ್ಯ ಮಾಡಲು ಸಮರ್ಥವಾಗಿರುವ ಈ ದೇಶದಲ್ಲಿ, ಪ್ರಜಾಪ್ರಭುತ್ವವು ಸಾಕಷ್ಟು ಉತ್ತಮ ರೀತಿಯಲ್ಲಿ ಸಾಗುತ್ತಿದೆ ಎಂದು ನಾವು ಭಾವಿಸಬೇಕಾಗಿದೆ.

ಕೊ ಡ ಗು

ತಾ. ೩೧-೮-೧೯೫೧ನೇ ಶುಕ್ರವಾರ

ಸುಧಾರಣಾ ಮಸೂದೆ.

'ಸಿ' ಸಂಸ್ಥಾನಗಳಿಗೆ ಸುಧಾರಣೆ ಕೊಡಬೇಕೆಂಬ ಮಸೂದೆಯ ಚರ್ಚೆಯು ಪಾರ್ಲಿಮೆಂಟಿನಲ್ಲಿ ತಾ. ೨೫ರಿಂದ ನಡೆಯಿತು. ಈ ಮಸೂದೆಗೆ ಕೆಲವು ತಿದ್ದುಪಡಿಗಳು ಸೂಚಿಸಲ್ಪಟ್ಟರೂ ಕಡೆಗೆ ಯಾವುದೇ ತಿದ್ದುಪಡಿ ಇಲ್ಲದೆ ಮಸೂದೆಯು ತಾರೀಖು ೨೭ರಲ್ಲಿ ಪಾಸಾಯಿತು. ಈ ಮಸೂದೆಯು 'ಸಿ' ಭಾಗದ ಸ್ಥಾಂತಗಳಿಗೆ ಚುನಾವಣೆಯ ನಂತರ ಜವಾಬ್ದಾರಿ ಸರಕಾರವು ಹೊರೆಯುವಷ್ಟು. ಮಸೂದೆಯು ಪಾರ್ಲಿಮೆಂಟಿನಲ್ಲಿ ಚರ್ಚಿಸಲ್ಪಟ್ಟಾಗ ಕೊಡಗಿನ ವಿಚಾರದಲ್ಲಿ ಕೇಂದ್ರ ಮಂತ್ರಿಗಳು ಸವಿಸ್ತಾರ ಪ್ರಕಟಿಸಿದರು. ಮಸೂದೆಯನ್ನು ಸಭೆಯು ಮುಂಬಿಟ್ಟ ಶ್ರೀ. ಗೋಪಾಲಸ್ವಾಮಿ ಐಯ್ಯಂಗಾರ್ ಅವರು ಬಹುಮತೀಯರು ಸಂಯೋಜನೆಗೆ ಒಪ್ಪುವರೋ ಎಂದು ನಿಶ್ಚಿತ ಹೇಳಲಾಗುವದಿಲ್ಲ. ಕೊಡಗಿನ ಸ್ಥಿತಿಯೂ ಹಾಗೆಯೇ. ಕೊಡಗಿನ ಸುಟ್ಟಿಗೆ ಆದನ್ನು ಈಗಿರುವಂತೆ ಇಡಲು ಅಜಮಿರಿಕ್ಕೆ ಇಷ್ಟವಿಲ್ಲ ಬೇರೆ ಕಾರಣಗಳು ಇರಬಹುದು. ಜಿಲ್ಲೆಯ ಜನರು ಸಂಯೋಜನೆಯನ್ನು ಸಂಬಂಧಿಸಿದ ಜನರು ನಿಶ್ಚಯಿಸಬೇಕು' ಎಂದು ಹೇಳಿದರು. ಕೊಡಗಿನ ಭವಿಷ್ಯವು ಕೊಡಗಿನ ಜನರ ಕೈಯಲ್ಲಿದೆ ಎಂಬುದನ್ನು ಅವರು ಈ ಮಾತುಗಳಿಂದ ಸ್ಪಷ್ಟಪಡಿಸಿದರು.

ಮಸೂದೆಯ ಚರ್ಚೆಗೆ ಉತ್ತರ ಕೊಡುವಾಗ ಶ್ರೀ. ಸಿಂಹಾಸನ ಬಿ ಎ (ಆನರ್ಸ್) ಇವರನ್ನು ಕೊಡಗಿಗೆ ಕಾರ್ಯದರ್ಶಿಯಾಗಿ ನೇಮಿಸಿರುವುದಾಗಿ ಪ್ರಕಟಿಸಿದರು. ಮಸೂದೆಯ ಚರ್ಚೆಗೆ ಉತ್ತರ ಕೊಡುವಾಗ ಶ್ರೀ. ಸಿಂಹಾಸನ ಬಿ ಎ (ಆನರ್ಸ್) ಇವರನ್ನು ಕೊಡಗಿಗೆ ಕಾರ್ಯದರ್ಶಿಯಾಗಿ ನೇಮಿಸಿರುವುದಾಗಿ ಪ್ರಕಟಿಸಿದರು. ಮಸೂದೆಯ ಚರ್ಚೆಗೆ ಉತ್ತರ ಕೊಡುವಾಗ ಶ್ರೀ. ಸಿಂಹಾಸನ ಬಿ ಎ (ಆನರ್ಸ್) ಇವರನ್ನು ಕೊಡಗಿಗೆ ಕಾರ್ಯದರ್ಶಿಯಾಗಿ ನೇಮಿಸಿರುವುದಾಗಿ ಪ್ರಕಟಿಸಿದರು.

ಓದುಗರ ಓಲೆಗಳು

ಅಡಿಗೆಯಿದ್ದರೂ ಮಿಸೆ ಮಣ್ಣಾಗಲಿಲ್ಲ

ಅಯ್ಯಾ ಜನ್ಮ ಭೂಮಿ ಸಂಪಾದಕರಿ, ನಿಮ್ಮ ಕಳೆದ ಸಂಚಿಕೆಯ, ಕೊಡಗಿನ ಭವಿಷ್ಯತ್ತನ್ನ ಕುರಿತು ಬರೆದ ಅಗ್ರಲೇಖನವನ್ನು ಓದಿ ಸಂತೋಷಪಟ್ಟೆ. ನಿಮ್ಮ ಪತ್ರಿಕೆಯು ಹಲವು ವರ್ಷಗಳಿಂದ ಆಪೇಕ್ಷಿಸಿದಂತೆ ಒಳ್ಳೆಯ ಸಂಪಾದಕೀಯ ಲೇಖನವನ್ನು ಬರೆದದಕ್ಕೆ ನಿಮ್ಮನ್ನ ತುಂಬಾ ವಂದಿಸಬೇಕಾಗಿದೆ.

ಆದರೆ ನಿನ್ನೆ ಮೆನ್ನೆಯಿಂದ ನೀವೂ ಮತ್ತು ನಿಮ್ಮ ಪತ್ರಿಕಾ ಬಳಗದವರೂ ಕೊಡಗನ್ನು ವೈರೂಪಗೆ ಸೇರಿಸಬೇಕೆಂದು ಪ್ರಚಾರ ಮಾಡುತ್ತಿದ್ದಾಗ ಬಂದು, ಈಗ ಶ್ರೀ ಸಿ. ಪೂಣಚ್ಚನವರ ಪರಾಜಯದಿಂದ ಕೊಡಗಿಗೆ ಸುಧಾರಣೆ ಸಿಕ್ಕಿದೆ ಅವರ ಪ್ಲಸ್ ಬೇರೆಯವರು ಪಾರ್ಲಿಮೆಂಟ್ ಮೆಂಬರಿಂಗಿದ್ದರೆ ಸಿಕ್ಕುತ್ತಿರಲಿಲ್ಲ ಎಂಬರ್ಥದ ಸಂಪಾದಕೀಯ ಅಗ್ರಲೇಖನವನ್ನು ಬರೆದು ಈಗಾಗಲೆ ಜನರನ್ನು ಮರುಳುಗೊಳಿಸುವಂತೆ ಕಾಣುತ್ತಿದೆ. ಇನ್ನಾದರೂ ಈ ಕಟ್ಟಲ ವರ್ತನೆಯನ್ನ ದಯವಿಟ್ಟು ಬಿಟ್ಟು ದೇಶದ ಕಲ್ಯಾಣಕ್ಕಾಗಿ ದುಡಿಯಬೇಕೆಂದು ಕಾಂಗ್ರೆಸ್ಸಿಗರಿಗೆ ಪೊನ್ನಂಪೇಟೆ ನಾಡಿನವರ ಪರವಾಗಿ ನಿಮ್ಮನ್ನ ಕೇಳಿಕೊಳ್ಳುತ್ತೇನೆ. ನಿನ್ನೆ ಮೊನ್ನೆಯವರೆಗೆ ನೆಹರೂರಿಗೆ ಕೊಡಗು ಸೇರಬೇಕೆಂದು ಬೊಬ್ಬೆ ಹಾಕುತ್ತಿದ್ದ ನಿಮ್ಮ ಪಾರ್ಟಿ ಈಗ ಎಲ್ಲಿ ಹೋಯಿತು? ಶ್ರೀ ಬಿ ಪಿ ಬೆಳ್ಯಪ್ಪನವರು ಸ್ವಾರ್ಥಿಗಳಾದರೆ ಅವರ ಲೇಖನಗಳೆಂದಲೂ, ಕೊಡಗು ಪತ್ರಿಕೆಯು ಅವರುಚ್ಚಾರದಿಂದಲೂ ದೇಶಕ್ಕೆ ಕೆಡುಕು ಮಾಡುತ್ತಾರೆಂದು ಬರೆಯಬೇಡಿ. ನಿಮ್ಮ ಪತ್ರಿಕೆಯಲ್ಲಿ ಹೆಚ್ಚಾಗಿ ನ್ಯಾಯಕ್ಕೆ ಸೂಸನೆಯೇ ಹೊರತಾಗಿ ದ್ವೇಷಕ್ಕೆ ಕಲ್ಯಾಣವಾಗುವ ಒಕ್ಕಣೆಯು ಪ್ರಬಂಧಗಳು ಕಾಣುವುದಿಲ್ಲ ಎಂದು ಬರೆಯಬೇಡಿ. ನಿಮ್ಮ ಪತ್ರಿಕೆಯಲ್ಲಿ ಹೆಚ್ಚಾಗಿ

ಕೊಡಗಿನಲ್ಲಿ ಶಾಂತಿ ಜೀವನಕ್ಕೆ ಎಡೆಯು ಟ್ಟವೆಂಬ ವಾದಿಸಿದರೆಂದು ಕೇಳಿದಾಯಿತು. ಅಸಂದರ್ಭ ದೇಶದ ಉದ್ವಗಲ ಕ್ಕೂ ಕೊಡಗನ್ನು ಮೈಸೂರಿಗೆ ಸೇರಿಸಿ ಆ ಯಿತೆಂದು ಭಯಂಕರದ ಆಪಪ್ರಚಾರವು ಪಡಿಸಿದ್ದು ನೋಡಿದೆವು. ಮೂರನೆಯ ದಾಗಿ ೧೯೨೧ ಇವರಿ ಸುರುವಿನಲ್ಲಿ ಪಾರ್ಲಿಮೆಂಟಿಕ್ಷಲ್ಲಿ ಶ್ರೀ ಸಿ. ಎಂ. ಪೂಣಚ್ಚ ನವರ ಹೇಳಿಕೆಯನ್ನು ಸೂಚಿಸಿ ಶ್ರೀ ಎಸ್. ಜಿ. ಅಯ್ಯಂಗಾರ ವರ್ತು ಗ್ರಾಡ್ ಗಿಲ್ ಮಂತ್ರಿಯವರು ಹೇಳಿದ ಮಾತಿನಂ ದ ಕೊಡಗೂ ಸಹ ಶ್ರೀ ಪೂಣಚ್ಚನವರು ಕೊಟ್ಟ ಅಭಿಪ್ರಾಯದ ಮೇರೆ, ಇಂದೋ ನಾಳೆಯೊಳಗಾ ನೆರೆ ಪ್ರಾಂತ್ಯಕ್ಕೆ ಸೇರಿ ಹೋಗುವುದೆಂಬ ಹೇಳಿಕೆಯು ಪೇಪರ್‌ಗ ಳಲ್ಲಿ ಓದಿ ತಿಳಿದದ್ದಾಯಿತು. ಆದರೆ ಆ ಪತ್ರಿಯುದ್ದಲ್ಲಾ ದೇಶಿಯರು ಸಮ್ಮನಿರದೆ ದೇಶದ ಪ್ರತ್ಯೇಕತ್ವಕ್ಕೆ ಹಾನಿ ಬರದಂತೆ ಜಳವಳಿಕೆಯನ್ನು ಹೊಡಿದರು. ಇನ್ನೊಂದು ವಿಷಯ ಹೇಳುವುದಾದರೆ ಕಳೆದ ೩೦ ಗಳಲ್ಲಿ ಬೆಂಗಳೂರಿನಲ್ಲಿ ನಡೆದ ಎ. ಐ. ಸಿ. ಸಿ. ವಿಷಿಂಗಿನಲ್ಲಾ ಕೊಡಗನ್ನು ಮೈಸೂರಿಗೆ ಸೇರಿಸುವ ತೀರ್ಮಾಗುವುದೆಂದು ಸಂಯೋಜನ ಪಕ್ಷದವರು ಅಶಿಸಿದ್ದರೂ ಅದು ನೆರವೇರಲಿಲ್ಲ. ಇಂಥಾ ಎಲ್ಲಾ ಸಂದರ್ಭದಲ್ಲೂ ಶ್ರೀ ಸಿ. ಎಂ. ಪೂಣಚ್ಚನವರು ದೇಶಿಯರ ಅಭಿಪ್ರಾಯದಂತೆ ನಡೆಯುವೆನೆಂದು ಕೌನ್ಸಿಲ್‌ನಲ್ಲಿ ಹೇಳಿಕೆಯನ್ನು ಕೊಟ್ಟದ್ದರೂ, ಇತ್ತೀವರೆಗೆ ಸಂಯೋಜನಾವಾವಕ್ಕೆ ಬೇಕಾದ ಸಹಾಯ ಸಲಹೆಗಳನ್ನು ನೀಡುತ್ತಿದ್ದುದು ಎಲ್ಲರಿಗೂ ಮಂದಟ್ಟಾದ ವಿಷಯವೇ ಸರಿ. ಆದರೂ ದೇಶಾಭಿಮಾನಿಗಳು ಶ್ರೀ ಪಿ ಏ ಬೆಳ್ಳಪ್ಪನವರ ಮುಂದಾಳುತನದಲ್ಲಿ ನಾಲ್ಕು ಐದು ವರ್ಷಗಳಿಂದ ಎದೆ ಗುಂದದೆ ದೇಶದ ಪ್ರತ್ಯೇಕತ್ವವನ್ನು ಉಳಿಸಿ ಸುಧಾರಣೆಯನ್ನು ಪಡೆಯಲು ಹೋರಾಡಿದ್ದನ್ನು ನಾವು ನೋಡಿದೆವು. ಇದಕ್ಕೆ ಬೇಷಲವಾಗಿ ಮಹಾಜನರು ಬಿಕ್ಕಟ್ಟಿನ ಸಮಯದಲ್ಲೆಲ್ಲಾ ತಮ್ಮ ಅಭಿಪ್ರಾಯಗಳನ್ನು ಪತ್ರಗಳ ಮೂಲಕವೂ, ತಂತಿಗಳ ಮೂಲಕವೂ ಕೇಂದ್ರ ಸರಕಾರಕ್ಕೆ ವ್ಯಕ್ತಪಡಿಸುತ್ತಿದ್ದರು. ತತ್ಪರಿಣಾಮವಾಗಿ ಯೂರೂ ನೆನೆಸದ ಸಮಯದಲ್ಲಿ ಪಕ್ಕನೆ ನಡುಕತ್ತಲ್ಲಲ್ಲಿ ದಿವ್ಯವಾದ ಬೆಳಕು ತೋರಿದಂತೆ ಕೊಡಗಿಗೂ ಸುಧಾರಣೆಯ ಮಹಾದೆಯು ಹೊರ ಬಿದ್ದುದು ದೇಶದಲ್ಲಿ ಶಾಂತಿಯನ್ನೂ ತೃಪ್ತಿಯನ್ನೂ ಉಂಟು ಮಾಡಿದೆ. ಇದಕ್ಕೆ ಕೇಂದ್ರ ಸರಕಾರದ ಮಂತ್ರಿಯರ್ಗವನ್ನು ವಂದಿಸುವುದು ನಮ್ಮ ಅದ್ಯ ಕರ್ತವ್ಯವಾಗಿದೆ. ಅಂದಿನಿಂದ ವಾತಾವರಣವೇ ಅ ದಲಾದಂತೆ ತೋರುತ್ತಿದೆ. ಇನ್ನಾದರೂ ಪ್ರತ್ಯೇಕ ಪಕ್ಷದ ಮುಂದಾಳುಗಳನ್ನು ತಿರುಳ್ಳಲ್ಲದ ಮಾತುಗಳಿಂದ ಟೀಕಿಸಿ, ಪದೆ ಪಡೆಯುವ ಅವಶ್ಯತ್ವ ನಿಲ್ಲುವುದೇ?

ಇತ್ತೆಯು ಕೆಲವು ಮುಂಗಿಯಲ್ಲಿಲ್ಲ. ಮುಂದಿನ ಚುನಾವಣೆ ಮತ್ತು ಜವಾಬ್ದಾರಿ ಸರಕಾರವನ್ನು ಪಡೆಸುವ ಜವಾಬ್ದಾರಿ ಅವಕಾಗಿದೆ. ಈ ವಿಷಯಕ್ಕೆ ಕಳೆದ ಜಳವಳಿಕೆಯಲ್ಲಿ ಆಕ ವಿಷಯಗಳನ್ನು ಓದುಗರು ಚೆನ್ನಾಗಿ ಜ್ಞಾಪಕಕ್ಕೆ ತಂದುಕೊಂಡು ವರ್ತಿಸಿದ್ದೆ ದೊದರೆ ಯಾವುದೊಂದು ಕಷ್ಟ ವಲ್ಲವೆಂದೇ ಕಾಣುತ್ತದೆ. ಬೆಕ್ಕು, ಸನ್ಯಾಸಿ ಆದಂತೆ ವೇಶ ಹಾಕಿಕೊಂಡು ನಾನೂ ಜವಬ್ದಾರಿ ಸರಕಾರಬೇಕೆಂದು ವಾದಿಸಿದವನ ಮಿಕ್ಕದ್ದಿದ್ದರೆ ಸುಧಾರಣೆಯನ್ನು ಪಡೆದ ನೆರೆ ಪ್ರಾಂತ್ಯಕ್ಕೆ ಆದರೂ ಸೇರಿಕೊಳ್ಳುವ ಯೂ, ಈಗ ಪ್ರತ್ಯೇಕ ಸಂಯೋಜನೆ ಎಂಬ ವಾದವು ಅಂತ್ಯವಾಯಿತು. ಇನ್ನು ನಮ್ಮಂಥಹ ವೇಧಾವಿಗಳನ್ನು ಓಟುಕೊಟ್ಟು ಲೆಜಿಸ್ಲೇಟಿವ್ ಎಸೆಂಬ್ಲಿಗೂ, ಪಾರ್ಲಿಮೆಂಟಿಗೂ ಚುನಾಯಿಸಿದರೆ ಕೊಡಗು ದೇಶವು ಚಿರಂಜೀವಿಯಾಗಿ ನಿಲ್ಲುವದೆಂದು ಹೇಳುವ ಪ್ರಚಾರಕ್ಕೆ ಓಟರುಗಳು ಮರುಳಾಗಬಾರದೆಂದೂ. ಇಂಥಾ ವೇಶ ಧಾರಿಗಳನ್ನು ಸರಿಯಾಗಿ ಗುರ್ತಿಸಿ ನಿಜವಾದ ಪ್ರತ್ಯೇಕ ಪಕ್ಷದ ಮುಖಂಡರುಗಳನ್ನು ಈ ಸರ್ತಿ ಆರಿಸಿ ಜವಾಬ್ದಾರಿ ಮಂತ್ರಿ ಮಂಡಳದ ಸರಕಾರವನ್ನು ರಚಿಸಿ ದೇಶದ ಕಲ್ಯಾಣವನ್ನು ಬಯಸುವುದು ಪ್ರತಿಯೊಬ್ಬ ಓಟರನ ಮುಖ್ಯ ಕರ್ತವ್ಯ.

ಈ ಬರುವ ಚುನಾವಣೆಯು ೧೯೨೩ ಜನವರಿ ತಿಂಗಳಲ್ಲಾ ನಡುಗಿಯುವುದು. ಆದರೆ ಓಟರುಗಳು ಈ ಮೊದಲು ಶಿವಾರಿನ ಕೌನ್ಸಿಲಿಗೆ ಓಟು ಕೊಡುವ ಹಾಗೆ ಉದಾಸೀನವನ್ನು ತೋರಿಸದೆ, ನಿಜವಾದ ಜವಾಬ್ದಾರಿ ಮಂತ್ರಿ ಮಂಡಳಕ್ಕೆ ಆರಿಸುವುದೆಂಬುದನ್ನು ತಿಳಿದು ಓಟನ್ನು ಕೊಡುವಂತವರಾಗಿಬೇಕು. ಈ ಸಂದರ್ಭದಲ್ಲಾ ತೀಕ್ಷ್ಣ ಬುದ್ಧಿಯನ್ನು ಉಪಯೋಗಿಸಿ ಪ್ರತ್ಯೇಕವಾದಿಯರನ್ನೇ ಆರಿಸದಿದ್ದರೆ ಇಪ್ಪತ್ತವರ್ಷ ಕಷ್ಟಪಟ್ಟೆವೆಲ್ಲವೂ ವ್ಯರ್ಥವಾಗಿ ಕೊಡಗೂ ದೇಶವು ಅಳಿದು ಹೋಗುವುದರಲ್ಲಿ ಸಂಶಯವಿಲ್ಲ.

ದೇಶಪ್ರೇಮಿ.

ಕಾಂಗ್ರೇಸ್ ಶ್ರೀಮಂತರೆ ಒಂದು ಅಂಗಡಿಯೇ?

ಅಯ್ಯೋ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ರೇ-ತಾ. ೨೯-೮-೨೫ರ 'ಜನ್ಮಭೂವಿ' ಪತ್ರಿಕೆಯಲ್ಲಾ ತಾವು ಪ್ರಕಟಿಸಿದ ಪ್ರಕಟಣೆಯು ಬಹು ವಿಚಾರ ಮಾಡತಕ್ಕದ್ದಾಗಿರುತ್ತದೆ. ತಾವು ತಾ. ೫-೯-೨೫ರ ಒಳಗೆ ಹುಬ್ಬಳ್ಳಿ ಪ್ರದೇಶ ಕಾಂಗ್ರೆಸ್ ಸಮಿತಿಗೆ ಮುಂಬರುವ ಚುನಾವಣೆಗೆ ಕಾಂಗ್ರೆಸ್‌ವ ತಿಯಿಂದ ಕೊಡಗು ಕೌನ್ಸಿಲಿಗೆ ನಿಲ್ಲುವ ವ್ಯಕ್ತಿ ರೂ. ೧೦೦ ಮತ್ತು ರೂ. ೨೦೦, ಕೇಂದ್ರ ಶಾಸನ ಸಭೆಗೆ ನಿಲ್ಲುವ ವ್ಯಕ್ತಿ ರೂ. ೨೫೦ ಮತ್ತು ೫೦೦ ಹಣ ಸಮೇತ ಅರ್ಜಿ ಕಳುಹಿಸಿರತಕ್ಕದೆಂದು ಪ್ರಕಟಿಸಿರುವಿರಿ. ಮೊದಲನೆಯದಾಗಿ ತಮ್ಮ ಪ್ರಳಯಕ್ಕೆ ತಾ. ೨೯-೮-೨೫ಕ್ಕೆ ಜನ್ಮಭೂವಿ ಪತ್ರಿಕೆಯಲ್ಲಾ ಆಗಿದೆ. ಈ ಪತ್ರಿಕೆಯು ಜಿಂದಾದಾರರಿಗೆ ಮಟ್ಟುವಾಗ್ಗೆ ಒಂದಾವಾರ ಆಗುವುದೂ ಇದೆ. ಮತ್ತು ಇದನ್ನು ಕಾಂಗ್ರೆಸ್ ಉಮೇದುವಾರಿಕೆಗೆ ನಿಲ್ಲುವವರು ಓದುತ್ತಾರೊ ಎಂಬ ಭರವಸೆ ನಿಮಗಿದೆಯೇ? ತಾವು ಇಷ್ಟು ಸಣ್ಣ ಅವಧಿಯೊಳಗೆ ಈ ದೊಡ್ಡ ಕೆಲಸವನ್ನು ಪಡೆಸಲು ದೇಶದ ಎಲ್ಲಾ ಕಾಂಗ್ರೆಸ್ ಉಮೇದುವಾರರಿಗೆ ಸಾಧ್ಯವಿದೆ ಎಂದು ನಂಬಿ ಪ್ರಕಟಿಸಿರುವಿರಾ? ಯೂ ಪ್ರಕಟಣೆ ಯಾದರೆ ಸರಿ ಎಂದು ಪ್ರಕಟಿಸಿರುವಿರಾ? ಅಥವಾ ಇಂಥಾ ಅವಸರದ ಪ್ರಕಟಣೆಯಿಂದ ಕೇವಲ ಕೆಲವು ಮಂದಿಗಳಿಗೆ ಮಾತ್ರ ಲಾಭವಾದರೂ ಸಾಕೆಂದು ಪ್ರಕಟಿಸಿರುವಿರಾ? ಒಂದು ಸಮಯ ಮೆಂಬರುತನಕ್ಕೆ ಚುನಾಯಿ ಸಿದನಂತರ ಇಷ್ಟು ಕೊಡಬೇಕೆಂದು ತಿರ್ಮಾನಿಸಿದ್ದರೂ ಒಂದು ಅರ್ಥವೇ ಬೇರೆ ಇತ್ತು. ಅರಿಸುವರೋ ಬಿಡುವರೋ ಅದು ತಿಳಿಯದು. ದಕ್ಷಿಣೆ ಮುಂದೆ ಪ್ರಸಾದ ನಂತರ! ಎಂಥಾ ಕಾಂಗ್ರೆಸ್!! ರೂ. ೩೦೦ ಮತ್ತು ೬೫೦ ಪ್ರತಿಯೊಬ್ಬ ಉಮೇದುವಾರನಾಗಿ ನಿಲ್ಲುವ ವ್ಯಕ್ತಿಯು ಕೊಟ್ಟದ್ದಾದರೆ ಅಶನ ಅರ್ಜಿ ತಿರಸ್ಕರಿಸಲ್ಪಟ್ಟರೆ ಅದು ಹಿಂದೆ ಬರುವುದೇ ಯೂ ಆದರ ಎಷ್ಟಂಶ ತಿಳಿಯುವುದೆಂದೂ ಪ್ರಕಟಿಸಲಿಲ್ಲ. ರೂ. ೧೦೦! ಮತ್ತು ೬೫೦! ಶಲ್ಯವೆಂದು ಪ್ರಕಟಿಸಿದ್ದೀರಿ. ಇಂದರೆ ಈ ಹಣದಿಂದ ಯೂರ ಸೇವೆ ಸಲ್ಲಿಸುವುದು. ರೂ. ೨೦೦ ಮತ್ತು ೬೦೦, ಪ್ರಚಾರಕ್ಕೆಂದು ಹೇಳುತ್ತೀರಿ. ಯೂರ ಪ್ರಚಾರ? ಇಷ್ಟು ಹಣ ಕಟ್ಟಿ ಸಮ್ಮನೆ ಕೂತರೆ ತಾವು ಮೆಂಬರುತನ ಕೊಡಿಸಿಕೊಡುವಿರಾ? ಅಥವಾ ಇನ್ನು ಹಣ ಬೇಕಾಗಬಹುದೇ? ಕೇವಲ ಮೂರು ನಾಲ್ಕು ದಿನಗಳೊಳಗೆ ಗೊತ್ತಾದವರಿಗೆ ಗೊತ್ತಾಯಿತು ಇಲ್ಲದವರಿಗೆ ಇಲ್ಲ. ಮೊತ್ತವಲ್ಲ ರೂಪಾಯಿಯನ್ನು 'ಏಕ್ ದಮ್' ಎಳ್ಳಿನ ತರಬೇಕಾ? ತಾವು ಯೂರನ್ನು ಕೇಳಿ ಈ ರೀತಿ ತೀರ್ಮಾನಿಸಿದಿರಿ; ಯೂ ಕರ್ನಾಟಕ ಪ್ರದೇಶ ಸಮಿತಿಯಿದರೂ ತಮ್ಮನ್ನು ಕೇಳಿತೇ? ಪ್ರಜಾ ಜವಾಬ್ದಾರಿ ಸರಕಾರವಂತೆ; ವ್ಯೋಷ್ಠ ಮತದಾನ ಪದ್ಧತಿಯಂತೆ! ಇಂಥಾ ಸಂದರ್ಭದಲ್ಲಿ ಈ ಅವಸರದ ಮತ್ತು ವ್ಯಾಪಾರ ಕಷ್ಟಬಿನ ಪದಸ್ಥತನಕ್ಕೆ ಬಂಡವಾಳಗಾರರಿಗೇನೇ ಹೊರತು ಕಾಂಗ್ರೆಸ್ಸಿನಲ್ಲಿ ದುಡಿದ ಬಡ ಪಾಯಿಗಳಿಗೆ ಸ್ಥಾನವಿಲ್ಲ. ಇದೇ ಬಡ ಜನರ ಉದ್ಧಾರದ ಪವಿತ್ರ ಕಾಂಗ್ರೆಸು. ದುಡ್ಡಿನ ಬಸಿಯನ ವ್ಯಾಪಾರದ ಕಾಂಗ್ರೆಸು. ಒಡನೆ ಈ ರೀತಿಯ ಸುಲಿಗೆಯನ್ನು ರದ್ದುಮಾಡಿ ಕೇವಲ ಏನೂ ಹಣವಿಲ್ಲದ ದೇಶಕ್ಕೋಸರ ಕೆಲಸ ಮಾಡಿದ ತ್ಯಾಗಿಗೂ ಸಹ ಈ ಪ್ರಜಾ ಜವಾಬ್ದಾರಿ ಸರಕಾರವ ಪ್ರಾಥಮತದಾನದ ಪದ್ಧತಿಯು ತನ್ನ ನಿಸ್ವಾರ್ಥ ಸೇವೆಗೆ ದಾರಿ ಮಾಡಿ ಕೊಡುವಂತೆ ತಾವು ಯೂ ತಮ್ಮ ನೇಲಿನವರು ನಿರ್ಧರಿಸದಿದ್ದಲ್ಲಿ ಈ ತರಹದ ತಮ್ಮ ಕಾಂಗ್ರೆಸ್ಸಿನ ಧೋರಣೆಯನ್ನು ಖಂಡಿಸಿ, ಇಂಥಾ ಧೋರಣೆಯು ಕಾಂಗ್ರೆಸನ್ನು ಪದೆ ಪದೆಯುವ ಕಾರ್ಯ ಕ್ರಮವನ್ನು ಕೈಕೊಳ್ಳಲು ಕಾಂಗ್ರೆಸ್ಸೇ ಖಾರಿ ಕಲ್ಪಿಸಿಕೊಟ್ಟಂತಾಗುವುದೆಂಬುದನ್ನು ತಾವು ಒಡನೇ ತಿರುಚಿ ತಮ್ಮ ಇಂಥಾ ಭಂಡಾಚಾರಕ್ಕಾಹಿ ಪುಷ್ಟಿ ಅವಸರದ ಪ್ರಕಟಣೆಯನ್ನು ರದ್ದು ಮಾಡಿಸಬೇಕಾಗಿ ನನ್ನ ಸಲಹೆ.

ಡಾ ಪಿ ಕೆ. ನಂಜುಂಡೇಶ್ವರ.
ತಾ. ೨೯-೮-೨೫. ವ. ಡಿಕೇರಿ.

ವಿನಂತಿ.

ಶ್ರೀಮೂಲ ಕಾವೇರಮ್ಮನವರ ದೇವಸ್ಥಾನವು ಹಿಂದುಸ್ಥಾನದಲ್ಲಿ ಪವಿತ್ರವಾದ ಪುಣ್ಯಕ್ಷೇತ್ರವಾಗಿದೆ.

ಪದರಿ ದೇವಸ್ಥಾನಕ್ಕೆ ಜಾತ್ರೆ ಸಮಯದಲ್ಲು ನಾನಾಕಡೆಯಿಂದ ಬಂದ ಯಾತ್ರಿಕರಿಗೆ ಪುರಾತನಕಾಲದಿಂದಲೂ ಕೊಡುಕ್ಕಾಬಂದ ಧರ್ಮಛಡಿ ಅಕ್ಕಿಯಂ ಕಳೆದ ಜಾತ್ರೆಯಲ್ಲು ಈಗಿನ ಕಾಲವಸ್ತಯ ಬಿಕ್ಕಟ್ಟಿನಲ್ಲು ಹಣಾ ಅಭಾವದಿಂದ ಪಡಿ ಕೊಡದೆ ಬಾಕಿಯೂದ ಸಂಗತಿ ಇಡೀ ಕೊಡಗಿನವರಿಗೆ ವ್ಯಸನಕರವಾಗಿದೆ.

ಈ ವರ್ಷ ಈ ಬಿಕ್ಕಟ್ಟನ್ನು ಹೋಗಲಾಡಿಸಬೇಕಾಗಿ ಪೂರ್ವದಂತೆ ಧರ್ಮಧಾಯ ವಸೂಲಾತಿಗಾಗಿ ವಿಜಯಟೆಯು ಬೇಕಾಗಿ ಮುಜರಾಯಿ ಇಲಾಖೆಯವರು ಕೇಳಿಕೊಂಡಾಗ್ಗೆ ಸರಿಯೂದ ವಿಜಯಟೆರು ದೊರಕದೆ ಬಾಕಿಯೂಗಿದೆ.

ಆದ್ದರಿಂದ ಕಾವೇರಿಮಾತೆಯು ಹೆಸರಿನಲ್ಲು ಭಕ್ತರು ಸ್ವಂತವಾಗಿಯೂಗಲೀ, ಅಯೋಯನಾಡಿನವರಿಂದಾಗಲೀ, ಇನ್ನಿತರ ಪ್ರತಿಗ್ರಾಮದ ಸೊಸೈಟಿ ಮೂಲಕವಾಗಲೀ ಧನ ಸಹಯಿಸಿಟ್ಟು ಕೊಡಗು ದೇಶದ ಹೆಸರು ಉಳಿಸಿ ಶ್ರೀಮೂಲ ಕಾವೇರಮ್ಮನವರ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ ಕೋರುವ.

ಪಿ ಎ. ಚಂಗಪ್ಪ,
ಪ್ರೆಸಿಡೆಂಟ್,
ಮುಜ್ರಾಯಿ ಇಲಾಖೆ

ದಿ ಟ್ರೊಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮುಖ್ಯ ಖಚೇರಿ:-ಹೊಸ ದೆಲ್ಲಿ.

52-18 ಸ್ಥಾಪಿಸಿದ ಪೈಕೆಳ್ಕರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್

ಹಕೀಮ್ ಅಜಮಲಖಾನ್. ಡಾ|| ಎಂ. ಎ ಅನ್ಸಾರಿ.

Transacts:--LIFE, FIRE, MOTOR and MARINE.

ಬ್ರಾಂಚ್ ಸೆಕ್ರೆಟರಿ,

ಹಂಪನಕಟ್ಟಾ, ಮಂಗಳೂರು.

ಕೊಡಗು ಏಕೆ ಪ್ರತ್ಯೇಕವಿರಬೇಕು?

ಕೊಡಗು ರಾಜಕೀಯದಲ್ಲಿ ವಿಶಾಲದೃಷ್ಟಿ ಹಾಗೂ ಉದಾತ್ತ ಗುರಿಯ ಅವಶ್ಯಕತೆ.

ಲೇ:—ಶ್ರೀ ಬಿ. ಡಿ ಗಣಪತಿ.

ನಾನೂ ಒಬ್ಬ ಪ್ರತ್ಯೇಕವಾದಿ. ಕೊಡಗು ಪ್ರತ್ಯೇಕವಿದ್ದು ಅಗರ್ಭನಾಡಾಗಿ ಜನಜೀವನಕ್ಕೆ ತಂಪಿನ ಶಾಂತಿಯ ತವ ಗುಮನೆಯೊಗಬೇಕೆಂದು ಬಯಸುವವನು. ಆದರೆ ಕೊಡಗು ಪ್ರತ್ಯೇಕನಿರಬೇಕೆಂಗು ಹೋರಾಡುತಿ ರುವವರಲ್ಲಿ ಕೆಲವರಿಗೆ ನಾನೇ ವಿಜವಾಗಿಯೂ ಪ್ರತ್ಯೇಕವಾದಿಯೇ ಎಂಬ ಅನುಮಾನವಿದೆ. ನಾನೂ ಪ್ರತ್ಯೇಕವಾದಿಗಳಲ್ಲಿ ಹಲವರನ್ನು ಕೊಡಗು ಏಕೆ ಪ್ರತ್ಯೇಕವಿರಬೇಕೆಂದು ಕೇಳಿದ್ದೇನೆ ಅವರಲ್ಲಿ ಕೆಲವರು 'ಕೊಡಗು' ಕೊಡವರನು. ಅದನ್ನು ಉಳಿಸಿಕೊಳ್ಳುವದು ಕೊಡವರ ಕರ್ತವ್ಯ. ಕೊಡವರಿಗೆ ಕೊಡಬ್ಬ್ಬರಿಂದ ಜಮ್ಮೆ ಜಮೀನ್ದಾರ್, ಕೋವಿಕತ್ತಿ ವೊನಲಾದುವನ್ನು ಉಳಿಸಿಕೊಳ್ಳಬೇಕಾದರೆ ಕೊಡಗು ಪ್ರತ್ಯೇಕ ಇರಲೇಬೇಕು' ಎಂದಾಗ ನಾನು ತಬೂಸೆರೂಡಿ ನಗಾಡಿದೆ. ಮತ್ತೆ ಕೆಲವರು, 'ಕೊಡಗಿನವರಾದ ನಾವು ಪ ಬಿಗರಾಗಿರುವೆವು ಇಲ್ಲಿ ಬೇಕಾದ್ದ ಬೆಳೆಯುತ್ತದೆ ಹಲವು ಕೈಂದರೆಗಳ ಬೆಂ ಪ್ಪಾಂತದಲ್ಲಿ ಬಂದರೂ ಇಲ್ಲಿ ಅನ್ನ ಕ್ಕೆ ತೊಂದರೆ ಬಂದಿಲ್ಲ ಇಲ್ಲಿ ಶಾಂತಿ ಇದೆ, ಸೌಮ್ಯವಿದೆ' ಎಂದಾಗ ಈ ಸ್ವಾರ್ಥ ಸಾಧು, ಅನಂದಗಳಿಗಾಗಿ ಪ್ರತ್ಯೇಕ ಇರಬೇಕೇ ಎಂದು ಕುತ್ಸಿತ ದೃಷ್ಟಿಯಿಂದ ಪ್ರತಿ ಸಿದ್ದಿದೆ ಮತ್ತೆ ಕೆಲವರು, 'ಕೊಡಗಿನ ಜನತೆಗೆ ಬುದ್ಧಿಯೇನು ಕಡಿಮೆ ಇಲ್ಲ; ತಮ್ಮನ್ನು ತಾವು ಆಳಿಕೊಳ್ಳುವ ಯೋಗ್ಯತೆ ಅನರಿದೆ. ಹಾಗಿರುವಾಗ ಮಂತ್ರಿ ಮಂಡಲವನ್ನು ರಚಿಸಿಕೊಂಡು ಕಮಗೆ ಬೇಕಾದಂತೆ ಆಡಳಿತ ನಡೆಸಬಹುದು. ಇದರಿಂದ ಕೊಡಗಿನ ನಿರುದ್ಯೋಗ ನಿವಾರಣೆಯಾಗುವದು. ಪ್ರತಂತ್ರ ಆಡಳಿತಕ್ಕೆ ಕೊಡಗಿನಲ್ಲಿ ಹಣವಿದೆ ಸಂಪತ್ತನ್ನು ಹೆಚ್ಚಿಸಿಕೊಳ್ಳುವ ಅವಕಾಶವಿದೆ. ಅದ್ದರಿಂದ ಶತವರ್ಷಗಳಂತ ಪ್ರತ್ಯೇಕವಿರುವ ದೇಶ ಹೀಗೆಯೇ ಇರಲಿ' ಎಂದು ಹೇಳುವದನ್ನು ಕೇಳಿ ತೃಪ್ತನಾಗದೆ ವಾದ ಹೂಡಿದ್ದಿದೆ. ಕೊಡಗನ್ನು ಪ್ರತ್ಯೇಕವಿರಿಸಿಕೊಳ್ಳಬೇಕೆನ್ನುವವರ ಈ ವಾದಗಳಲ್ಲಿ ತಾನು ಧಾನಿಯಾಗಿ ಆರಲೆಲ್ಲಿಬ್ಬಣಾಗದೆ ನನ್ನದೇ ಪ್ರತ್ಯೇಕ ಒಂದು ಅಭಿಪ್ರಾಯವನ್ನಿಟ್ಟುಕೊಂಡಿರುವ ಕಾರಣ ಅನೇಕ ಪ್ರತ್ಯೇಕವಾದಿಗಳು ನನ್ನ ಪ್ರತ್ಯೇಕವಾದದ ಬಗ್ಗೆ ಸಂಶಯ ದೃಷ್ಟಿಯಿಂದಿದ್ದಾರೆ. ಕೊಡಗಿನ ಭವಿಷ್ಯದ ವಿಚಾರದಲ್ಲಿ ನನ್ನ ನಿಲುವಿನ್ನು ನಿರ್ಣಯಿಸಲಿ ರಲ್ಲಿ ನಾನು ಬರೆದ 'ಕೊಡಗಿನ ಭವಿಷ್ಯ' ವೆಂಬ ಪುಸ್ತಕದಲ್ಲಿ ವಿವರಿಸಿದ್ದೆ. ಆದರೆ ಇಂದಿನ ಸಂದರ್ಭದಲ್ಲಿ ಪುನಹ ಆ ವಿಚಾರ ಸ್ಪಷ್ಟಪಡಿಸುವ ಅವಶ್ಯಕತೆ ಕೋರಿದ ಕಾರಣ ಈ ಲೇಖನ ಬರೆಯಲಾಗಿದೆ

ಸ್ಪಷ್ಟವಾಗಿ ಹೇಳುವದಾದರೆ ಕೊಡಗಿನ ಪ್ರತ್ಯೇಕವಾದಿಗಳು ಕೊಡಗನ್ನು ಪ್ರತ್ಯೇಕವಿಟ್ಟುಕೊಳ್ಳಲು ಮುಂದು ತೊಡುವ ಹಲವು ಕಾರಣಗಳು ತೆಳ್ಳ ದೃಷ್ಟಿಯಲ್ಲಿ ಸಮರ್ಥನೀಯವಾದವುಗಳಲ್ಲ. ಕೊಡಗು ಅ ಕೀಯ ಕಾಲದಿಂದಲೇ ಪ್ರತ್ಯೇಕವಿದ್ದಿತು ಆದ್ದರಿಂದ ಇಂದೂ ಪ್ರತ್ಯೇಕವಿರಬೇಕೆಂಬುದೂ ಒಂದು ಕಾರಣವಾಗದೂ. ಅಂದಿನ ಜಗತ್ತಿಗೂ ಇಂದಿನದಕ್ಕೂ ಅಜಗಜಾಂತರ ವ್ಯತ್ಯಾಸವಿದೆ ಆಂದು ಪಾಳೆಯದಾರರ ಆಡಳಿತವಿತ್ತೆಂದು ಇಂದೂ ಆದನ್ನು ಆಡಿಸುವದು ಹೇಗೆ ಅಕಮ್ಮಕವೋ ಆದೇ ರೀತಿಯಲಿ ಇಡೀ ಜಗತ್ತು ಒಂದಾಗಿ ಒಂದೇ ಸರಕಾರದಡಿಯಲ್ಲಿ ಬರಬೇಕೆನ್ನುತಿರುವಾಗ, ಹಿಂದೂದೇಶದ ಹಿರಿದಾದ ಸಂಪ್ರಾಗರೂ ಹೆಸರಿಲ್ಲದೆ ಕಗಣಿ ಹೋಗುತ್ತಿರುವಾಗ ಒಂದು ಉದಾತ್ತ ಗುರಿಗಾಗಿ ಅಲ್ಲದೆ ಇಹದ್ ಭಾರತದಲ್ಲಿ ಕೊಡಗು ಪ್ರತ್ಯೇಕವಿರುವದು ಸಾಧ್ಯವೂ ಇಲ್ಲ; ಇರುವದೂ ಹಿತಕರವೂ ಅಲ್ಲ. ಮತ್ತೆ ಕೊಡಗಿನ ಜನ್ಮ, ಜಪಿಗಿರು, ಕೋವಿತ್ರಾಕಿಗಳ ಎತಾದ ಹಳೆಯ ಸಂಪ್ರದಾಯದ ಕಿರಿಚಾಟಗಳು. ಇಂದಿನ ಜನತಾಯುಗದಲ್ಲಿ ಅವು ಅಸಬದ್ಧವಾದವುಗಳು. ದೇಶದ ಸ್ಪತಿಯೊಬ್ಬ ವ್ಯಕ್ತಿಗೂ ಸರಿಸಮಾನತೆಯಿಂದ, ಬದುಕಿಬಾಳುವ ಹಕ್ಕಿದೆಯೆಂಬ ತತ್ವವನ್ನು ರಾಜ್ಯಘಟನೆಯಲ್ಲಿ ಒಪ್ಪಿದ ನಾವು ಕೆಲವರಿಗೆ ಜನ್ಮ, ಕೆಲವರಿಗೆ ಆರ್ಜಿಂದ ವಿಶಾಯಿತಿ ಇವುಗಳನ್ನು ಆಶಿಸುವದು ಹೇಗೆ? ಎಂದೋ ಒಂದು ಕಾಲದಲ್ಲಿ ಯಾವುದೋ ಒಂದು ಕಾರಣದಿಂದ ಈ ರಿಯಾಯಿತಿಗಳು ಕೊಡಲ್ಪಟ್ಟಿದ್ದರೆ ಇಂದು 'ಸರ್ವರೂ ಸಮಾನ' ರೆಂಬ ಜನತಾಯುಗದಲ್ಲಿ ಈ ವಿಭಿನ್ನತೆ ಇರಬೇಕೆಂಬುದು ಯೋಗ್ಯವಾಗಿಲಾರದು. ಭರತಖಂಡದ ಸ್ವಾತಂತ್ರ್ಯಕ್ಕಾಗಿ ಕಾರಕಮ್ಮವಿಲ್ಲದೆ ಭೂಮಿ ಇರುವವನೂ, ಇಲ್ಲದವನೂ, ಜನ್ಮದವನೂ ಸಾಗಿನವನೂ ಹೋರಾಡಿದ್ದಾನೆ 'ಸರ್ವರಿಗೆ ಸಮಾನ ಅವಕಾಶ, ಸರ್ವರಿಗೆ ಸರಿವಾಲ್ಯ, ಸರ್ವರಿಗೆ ಸಮಬಾಳು' ಎಂದು ಅಂದು ಫೈತಷಿಯ ಭುಜಕ್ಕೆ ಭುಜ ಕೊಟ್ಟು ಹೋರಾಡಿದವರು ಇಂದು ಸ್ವಾತಂತ್ರ್ಯ ಬಂದಾಗ ಈ ತಾರತಮ್ಯವನ್ನಿರಬೇಕೆನ್ನುವದು ಸ್ವಾರ್ಥ ಸಂಕೀರ್ಣತೆಯೂಗುವದು. ಯಾವ ದೇಶವೂ ಒಂದು ಕೋಮಿನವರ ಹಕ್ಕಿನದಲ್ಲ ಪ್ರತಿ ದೇಶವೂ ಆ ದೇಶದ ನಿವಾಸಿಗಳೆಲ್ಲರದ್ದು. 'ಕೊಡಗೂ ಕೊಡವರದ್ದು' ಎಷ್ಟೆನ ಕಾಲ ಕಳೆಯಿತು. ಇಂದು ಜಾತ್ಯಾತೀತ ಭರತಖಂಡದ ಪ್ರತಿ ಪ್ರಜೆಯೂ ಪ್ರತಿಭಾಗದ ಹಕ್ಕುದಾರನು.

ಕೊಡಗಿನವರು ಹೊಟ್ಟೆ ಕಂಬ ಉಂಡು, ವೈಕಂಬ ಉಟ್ಟು ಸುಖಿಗಳಾಗಿದ್ದಾರೆ. ಇಲ್ಲಿಯ ದೇಶದಲ್ಲಿ ಬೇಕಾಷ್ಟ ಸಂಪತ್ತಿದೆ. ಆದ್ದರಿಂದ ಕೊಡಗು ಪ್ರತ್ಯೇಕವಿದ್ದರೆ ನನಗೆ ಸುಖ ಶಾಂತಿ ಇದೆ ಎನ್ನುವ ವಾದವೂ ಸ್ವಾರ್ಥತೆಯ ಪರಾಧಿಯಿಂದಿದು. ಪ್ರತಿಯೊಬ್ಬ ವ್ಯಕ್ತಿಗೂ ಜೀವನಾವಶ್ಯಕವಾದ ವಸ್ತುಗಳು ಕನಿಷ್ಠ ವಿ.ತಿಯಲ್ಲಿ ಬೇಕು. ನೆರೆಯವನು ಉದರವಾಸ ಬೀಳುತ್ತಿರುವಾಗ ನಾವು ಹೊಟ್ಟೆ ತುಂಬ ಉಂಡು ತೇಗುವದು ಮಾನ್ಯವಲ್ಲ; ಆದೇ ಅನ್ನವನ್ನು ಹಂದಿಕೋಳಿಗಳಿಗೂ ಹಾಕುವದು ಅಪರಾಧವೆನಿಸುವದು. ಕೊಡಗಿನವರಾದ ನಾವು ಈ ರೀತಿಯೇ ಪ್ರತ್ಯೇಕವಿದ್ದು ಸುಖಿಗಳಾಗಿರುವೆವೇನೋ ನಿಜ. ಆದರೆ ಇನ್ನೊಬ್ಬರೊಡನೆ ಹಂಚಿಕೊಳ್ಳಲಾರದ ಸ್ವಾರ್ಥ ಸುಖವು ನಿಜವಾದ ಸುಖವೆನಿಸದು. ಆದ್ದರಿಂದ ನೆರೆಯವರು ಕಷ್ಟದಲ್ಲಿರುವಾಗ ನಾವು ಸುಕ್ಕು ಬೀಲಿಹಾಕಿಕೊಂಡು ಇದು ನನ್ನ ದೇದು ತಾದಿಗಿಸಿಕೊಳ್ಳುವ ನೀತಿ ಸಮಂಜಸವಲ್ಲ. ಇದೊಂದು ರೀತಿಯ ಬಂಡ ವಳವಾದವಾಗುವದು. ಈ ಸ್ವಾರ್ಥ ಸೌಖ್ಯ ಸುಖಗಳಿಗಾಗಿ ಪ್ರತ್ಯೇಕತೆ ಎನ್ನುವ ದಾದರೆ ಆ ಪ್ರತ್ಯೇಕತೆ ಪ್ರಶಂಸಾರ್ಹವಾದುದಲ್ಲ. ಮತ್ತೆ ಕೊಡಗಿನವರ ಸಂಸ್ಕೃತಿ ಭಾರತೀಯ ಸಂಸ್ಕೃತಿಗಿಂತಾ ಬೆನ್ನವಾದುದೇನಲ್ಲ ಸಂಪ್ರದಾಯಪ್ರಿಯ ಸಂಸ್ಕೃತಿಯೂಗಲಾರದು. ಭರತಖಂಡದ ಯಾವುದೇ ಜನಾಂಗ ಯಾವ ಮೂಲೆಯಲ್ಲೇ ಇರಲಿ ಪ್ರತಿಯೊಂದರ ದಮನಿಯಲ್ಲಿ ಭಾರತೀಯ ಸಂಸ್ಕೃತಿಯೇ ಚಲಿಸುತ್ತಿದೆ. ಸಮಗ್ರವೂ, ವಿಶಾಲವೂ ಆದ ಭಾರತೀಯ ಸಂಸ್ಕೃತಿಯೊಂದಲ್ಲದೆ ಭಾರತದಲ್ಲಿ ಭಿನ್ನಸಂಸ್ಕೃತಿಯೆಲ್ಲಿ?

ಕೊಡಗು ಪ್ರತ್ಯೇಕವಿದ್ದರೆ ನಿರುದ್ಯೋಗದ ನಿವಾರಣೆಯೂಗುವದು. ಕೆಲವರು ಮಂತ್ರಿಗಳಾಗಬಹುದು. ಹಲವರು ಸರಕಾರಿ ನೌಕರಿ ಪಡೆಯಬಹುದು ಎನ್ನುವ ವಾದವೂ ಸಮಂಜಸವಲ್ಲ. ನಾಲ್ಕಾರು ನೌಕರಿಗಳಿಗಾಗಿ ಕೊಡಗು ಪ್ರತ್ಯೇಕವಿರಲು ಸಾಧ್ಯವಿಲ್ಲ. ಮತ್ತೆ ನಿರುದ್ಯೋಗ ನಿವಾರಣೆಯಾಗುವ ಸರಕಾರಿ ನೌಕರಿಯಿಂದ ನಿವಾರಿಸುವದು ತಿರುಳಿಲ್ಲದ ಮಾತು. ದೇಶದ ಪಧವೀಧರರಿಗೆಲ್ಲ ಯಾವ ಸರಕಾರ ನೌಕರಿ ಕೊಟ್ಟೀತು? ನಿರುದ್ಯೋಗ ನಿವಾರಣೆಗೆ ಬೇರೆ ಕೈಗಾರಿಕೆ, ಉದ್ಯಮಗಳ ವ್ಯವಸ್ಥೆಯಾಗಬೇಕಲ್ಲದೆ ಸರಕಾರಿ ನೌಕರಿಯಿಂದ ನಿರುದ್ಯೋಗ ನಿವಾರಣೆಯೂಗದು.

ಕೊಡಗು ಪ್ರತ್ಯೇಕವಿದ್ದು ದಕ್ಷರೀತಿಯ ಆಡಳಿತವನ್ನು ನಡೆಸಿ ಕೊಡಗಿನ ಜನರ ಅಭಿವೃದ್ಧಿಯಾಗುವದು ಸಾಧ್ಯವಿದೆ. ಆದ್ದರಿಂದ ಕೊಡಗಿನಲ್ಲಿ ಅಕಾಶ ಪಡಾರ್ಥ, ಸಂಪತ್ತನ್ನು ಹೆಚ್ಚಿಸಿ ನೆರೆಯವರಿಗೆ ಹೆಚ್ಚಿನ ಪರಿವಾಣದಲ್ಲಿ ಸಹಾಯಮಾಡುವದು ಸಾಧ್ಯವಿದೆ. ಆದೃಷ್ಟಿಯಿಂದ ಕೊಡಗು ಪ್ರತ್ಯೇಕವಿರಬೇಕೆನ್ನುವ ವಾದದಲ್ಲಿ ತಿರುಳಿದೆ. ಅದು ಒಪ್ಪತಕ್ಕಂಥಾ ಮಾತೆ. ಆದರೆ ಕೊಡಗಿನಲ್ಲಿ ಅಂಥಾ ದಕ್ಷ ಆಡಳಿತ ನಡೆಸುವ ಸಾಧ್ಯತೆಗಳೇನು ಎಂಬುದನ್ನೆ ವಿಚಾರಿಸಬೇಕಿದೆ. ಕೊಡಗಿನ ಜನರು ಹೊರಗಿನವರಿಗಿಂತಾ ಜಾಸ್ತಿಯಲ್ಲಿ, ಆಡಳಿತ ದಕ್ಷತೆಯಲ್ಲಿ ಕಡಿಮೆಯಲ್ಲ ಎಂಬ ವಾದವನ್ನು ಒಪ್ಪಬಹುದಾದರೂ ಇಂದಿನ ಆಡಳಿತ ರಚನೆಯಲ್ಲಿ ಕೊಡಗಿನ ಚಿಕ್ಕತನವೇ ಆಡಳಿತರಥದ ಚಕ್ರ ಹುಡಿಮಾಡಲು ಕಾರಣವಾಗಬಹುದು. ಕೊಡಗಿನ ಏಳು ಜನ ಪ್ರತಿನಿಧಿಗಳಿರುವ ಶಾಸನ ಸಭೆಯಲ್ಲಿ, ಪರಸ್ಪರ ಹೊಂದ್ದಾಡಿಕೊಳ್ಳುವ ಸಮಬಲದ ಎರಡು ಪಕ್ಷಗಳಿರುವ ಸಂದರ್ಭದಲ್ಲಿ ಸ್ಥಿರವಾದ ಹಾಗೂ ದಕ್ಷವಾದ ಮಂತ್ರಿಮಂಡಳದ ರಚನೆಯು ಕಷ್ಟಸಾಧ್ಯವೆಂದು ತೋರಿ ಬಾರದಿರದು. ಒಂದು ವೇಳೆ ಪಕ್ಷಗಳೆನ್ನುವವರು ದೊರೆಕರೂ ಹಿಂದೂದೇಶದ ಇತರ ಪ್ರಾಂತ್ಯಗಳಲ್ಲಾದಂತೆ ಜನ ಪೋಷಕರಾಗಬೇಕಾದವರು ನರ ಭಕ್ಷಕರಾದರೆ ಗತಿ ಏನು? ಕೊಡಗಿನ ಪ್ರಸ್ತುತ ಎರಡು ರಾಜಕೀಯ ಪಕ್ಷಗಳ ಕಾರ್ಯಕಲಾಪ, ನೀತಿ ನೈಪುಣ್ಯಗಳನ್ನು ಪರೀಕ್ಷಿಸಿ ತಿಳಿದವರು ಈ ಪಕ್ಷಗಳಲ್ಲಿ ಸ್ವಾರ್ಥಕ್ಕೆ ಅಸಿಪಡದ, ಅನೀತಿಯ ಮಾರ್ಗಗಳಿಗೆ ಬಲಿ ಬೀಳದ ಆಡಳಿತಗಾರರು ದೊರೆಯುವ ಬಂಬದ ಸಾಹಸದ ನಾತೀ ಕಾಣಿ.

ಆದ್ದರಿಂದ ಕೊಡಗನ್ನು ಪ್ರತ್ಯೇಕವಿಟ್ಟು ದಕ್ಷರೀತಿಯ ಆಡಳಿತದಿಂದ ಇಲ್ಲಿಯ ಸಂಪತ್ತನ್ನು ಹೆಚ್ಚಿಸಿ ಹೊರಗಿನವರಿಗೆ ಹೆಚ್ಚಿನ ಪರಿವಾಣದಲ್ಲಿ ನೆರವಾಗಬಲ್ಲೆವು ಎಂಬ ಒಂದು ದೃಷ್ಟಿಯಿಂದ ದೇಶೀಯರು ಪ್ರಯತ್ನಿಸುವದಾದರೆ ಕೊಡಗಿನ ಪ್ರತ್ಯೇಕತೆಗೆ ಅರ್ಥವಿದೆ ಹಾಗೂ ಸಾರ್ಥಕ್ಯವಿದೆ ಬೇರೆ ಎಲ್ಲಾವಾದಗಳೂ ಸ್ವಾರ್ಥ, ಸಂಕೀರ್ಣತೆಯೊಳಗದಸಿವೆ. ಕೊಡಗಿನಲ್ಲಿ ಉತ್ತಮ ಆಡಳಿತ ನಡೆಸಿ ಅ ಮೂಲಕ ಭರತ ಖಂಡದ ಹಿತಕ್ಕೂ, ಉತ್ಕರ್ಷಕ್ಕೂ ಸಹಾಯಕವಾಗುವ ರೀತಿಯ ಆಡಳಿತವು ಪ್ರತ್ಯೇಕ ಕೊಡಗಿನಲ್ಲಿ ಸದ್ಯದ ಆಡಳಿತ ವಿರ್ವಾಡಿನಂತೆ ಸಾಧ್ಯವಿಲ್ಲ. ರಾಗಿನ ವಿರ್ವಾಡಿನಂತೆ ಆಡಳಿತ ರಂಗವು ಶಾಶ್ವತ ಕಣವಾಗಿ ಇಂದಿನ ನಿರಂಕುಶ ಆಡಳಿತದಲ್ಲಿ ಪೇಶದಲ್ಲಿರುವ ಕ್ರಾಂತಿ ಪ್ರಗತಿಗಳೂ ಕೂಡ ಮುಂದಿಕ ಜನ ಪ್ರತಿನಿಧಿಗಳ ಆಡಳಿತದಲ್ಲಿ ಅವರ ರಾಜಕೀಯ ಹೋರಾಟದ ಪರಿಣಾಮವಾಗಿ ಇಲ್ಲದಾಗಲೂ ಬಹುದು. ಹಾಗಾದರೆ ಮಾಡುವದೇನು?

ಕೊಡಗಿನ ರಾಜಕೀಯದಲ್ಲಿ ವಿಶಾಲ ದೃಷ್ಟಿ ಹಾಗೂ ಉದಾತ್ತ ಗುರಿಯ ಸಮನೇಶವಾಗಬೇಕು ಬೃಹದ್ಭಾರತಕ್ಕೆ ಘನತರವಾದ ಸೇವೆಯನ್ನು ಸಲ್ಲಿಸುವ ಮಾರ್ಗವನ್ನು ಕೊಡಗು ಕೈಕೊಳ್ಳುವದಾದರೆ ಅದರ ಪ್ರತ್ಯೇಕತೆಯು ಪ್ರಶಂಸನಾರ್ಹವೂ, ಸೂಕ್ಷ್ಯವೂ ಎನಿಸುವದು. ಆದ್ದರಿಂದ ಕೊಡಗಿನಲ್ಲಿ ದಕ್ಷ ಆಡಳಿತ ನಡೆಯು ಬೇಕಾದರೆ ಅಧಿಕಾರ ಕೇಂದ್ರೀಕೃತ ಇಂದಿನ ಆಡಳಿತ ಕ್ರಮದ ಬದಲು ವಿಕೇಂದ್ರೀಕೃತ ಆಡಳಿತ ರಚನೆ ಇಲ್ಲಿ ಜಾರಿಗೆ ಬರಬೇಕು. ಕೊಡಗಿನ ರಾಜಕೀಯವನ್ನು ಇಂದಿನ ಅಧಿಕಾರ ಲಾಲಸೆಯ ಸ್ವಾರ್ಥ ಸಾಧನೆಯು, ಕೋಮು ವಾದ ಹಾಗೂ ಸಂಕೀರ್ಣವಾದದ ಕೆಸರಿನಿಂದ ಮೇಲೆತ್ತಿ ನಿಲ್ಲಿಸಬೇಕು. ನೀತಿ, ನಡತೆ, ಘನತೆ, ಸೇವಾಬುದ್ಧಿ ಇವುಗಳ ತಳಹದಿಯಲ್ಲಿ ಅರ್ಥಾತ್ ಅಹಿಂಸಾ ಮತ್ತು ಸತ್ಯ ಇವುಗಳ ಮೇಲೆ ನಿಲ್ಲಿಸಲ್ಪಡದ ಯಾವ ರಾಜಕೀಯವೂ, ಯಾವ ತತ್ವ ಪ್ರಣಾಳಿಯೂ ಯಶಸ್ವಿಯೂಗದು. ರಾಜಕೀಯ

ವು ರಸಭರಿತ ವಾತಿನ ಮಲ್ಲಶಕ್ತಿಯಲ್ಲೂ ಛಲವಿಶಾಖೆಯು ಕರಾಳಹಿಡಿತದಲ್ಲೂ ಕಲುಷಿತವಾಗದೆ ಪರಿಶುಭ್ರವಾಗಿರಬೇಕಾದರೆ ಸೇವಾಕಾಂಕ್ಷೆಗಳು, ಉದಾತ್ತ ಗುರಿಯನಿಟ್ಟು ಜಗತ್ತಿನ ಜನರೆಲ್ಲ ರಹಿತಕ್ಕಾಗಿ ದುಡಿಯುವ ಚರಮಗುರಿಯನ್ನಿಟ್ಟ ಕಾರ್ಯಪ್ರವೃತ್ತರಾಗಬೇಕು. ಜಾಗೆ ಮಾಡುವ ವಿಕ ಪಥವೆಂದರೆ ಸರ್ವೋದಯ ವರ್ಗ. ಕೊಡಗು ಪ್ರತ್ಯೇಕ ಇರಬೇಕಾದುದು ಇದರ ಸಾಧನೆಗಾಗಿ ಈ ಸಾಧನೆಯಲ್ಲಿ ಜಯದೊರೆತರೂ, ದೊರೆಯದಿದ್ದರೂ ಕೊಡಗು ಜಗತ್ತಿನ ಶಾಂತಿಗಾಗಿ, ಭಾರತದ ಏಕೀಕರಣಕ್ಕಾಗಿ ಪ್ರಯತ್ನಿಸಿದ ಕೀರ್ತಿಯನ್ನು ಪಡೆಯುದಿರದು.

ನೆಹರೂ-ಟಾಂಡನರೊಳಗೆ ಘರ್ಷಣೆ.

ಭಾರತದ ಮುಖ್ಯ ಮಂತ್ರಿ ನೆಹ್ರೂರವರ ರಾಜನಾಮೆಯ ಪ್ರಕರಣವು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಿಂದ ಪರಿಹರಿಸಲಾಗದೆ ಎ. ಐ. ಸಿ. ಸಿ ಯನ್ನೇ ಕರೆಯುವ ಪ್ರಸಂಗ ಬಂದದ್ದಕ್ಕೆ ನಿಜವಾಗಿ ವಿಷಾದಿಸಬೇಕಾಗಿದೆ. ನೆಹ್ರೂ ಟಾಂಡನ್ನರನ್ನೇ ಮಾತುಕತೆಗೆ ಬಿಡಬೇಕೆಂಬ ಸಮಿತಿಯ ಪ್ರಯತ್ನವು ಅವರೊಳಗೆ ನಡೆಸಿದ ಮಾತುಕತೆಗಳಿಂದ ಫಲಕಾರಿಯಾಗಲಿಲ್ಲ ಅಧ್ಯಕ್ಷ ಟಾಂಡನ್ನರು ಕಾರ್ಯಕಾರೀ ಸಮಿತಿಯ ಪುನರ್ಘಟನೆಯನ್ನು ಒಪ್ಪಲು ಸಿದ್ಧರಿಲ್ಲ. ಟಾಂಡನ್ನರೂ ಅವರ ಸಹ ಕಾರ್ಯಕರ್ತರೂ ನೆಹ್ರೂರವರ ಸೂಚನೆಗಳನ್ನು ಘಟನಾತ್ಮಕವಾದ ತೊಡಕನ್ನು ಮುಂದೆ ಮಾಡಿ ವಿಫಲಗೊಳಿಸುವ ಹಟ ಹಿಡಿದದ್ದರಿಂದ ನೆಹ್ರೂರವರು ಸಮಿತಿಯೊಡನೆ ಕಾರ್ಯ ನಡೆಸುವದು ಕಷ್ಟಸಾಧ್ಯವಾಗಿದೆ. ಕಾಂಗ್ರೆಸಿನಲ್ಲಿರುವ ಬಿಕ್ಕಟ್ಟನ್ನು ಹೋಗಲಾಡಿಸಿ ಐಕ್ಯಸಾಧನೆಗಾಗಿ ಶ್ರೀ ಟಾಂಡನ್ನರು ತಾತ್ಕಾಲಿಕವಾಗಿ ಹೇಳುವಂತಹ ಸೂಚನೆಗಳಿಂದ ಬಿಕ್ಕಟ್ಟು ಅಪರಿಹಾರ್ಯವಾಗಿರುತ್ತದೆ. ಪರ್ಯಾಯ ಪರಿಸ್ಥಿತಿಯಲ್ಲಿ ಕೊಂಚ ವಿಶಾಲ ಧೋರಣೆಯನ್ನು ವಹಿಸಬೇಕೆನ್ನುವದು ನೆಹ್ರೂರವರ ತಾಪ. ಟಾಂಡನ್ನರೂ ಅವರ ಅನುಯಾಯಿಗಳೂ ಅದಕ್ಕೆ ಸಿದ್ಧರಿಲ್ಲ. ಈ ವ್ಯವಾದ ಮತಭೇದವಿರುವ ಅಂಶಗಳಾವುವೆಂಬುದು ಬೆಳಕಿಗೆ ಬರದೆ ಹೋದರೂ ಪಾಕಿಸ್ತಾನ ಸಂಬಂಧ, ಪಂಚವಾರ್ಷಿಕ ಯೋಜನೆ, ಪ್ರಾಂತಿಕ ಕಾಂಗ್ರೆಸ್ ಸಮಿತಿಗಳ ಹಾಗೂ ಪ್ರಾಂತಿಕ ಸರಕಾರದಲ್ಲಿಯ ಮತಭೇದ ಮುಂತಾದ ವಿಚಾರಗಳಲ್ಲಿ ನೆಹ್ರೂ ತಳೆದ ತಾತ್ವಿಕವಾದ ಧೋರಣೆಗೆ ಟಾಂಡನ್ನರು ಘಟನಾತ್ಮಕವಾಗಿ ವಿರುದ್ಧ ಭಾವನೆಯನ್ನು ತಾಳಿದ್ದಾರೆ. ಈ ಸಂದರ್ಭದಲ್ಲಿ ನೆಹ್ರೂರವರು ಕಾರ್ಯಸಮಿತಿಯಲ್ಲುಳಿಯುವುದು ಶಕ್ಯವಿಲ್ಲ. ನೆಹ್ರೂರವರನ್ನು ಬಿಟ್ಟು ಟಾಂಡನ್ನರ ಆ ದೇಶಕಂತೆ ಕಾಂಗ್ರೆಸು ಉಳಿಯಲಾರದು. ಅಲ್ಲದೆ ಟಾಂಡನ್ನರ ಜಾತೀಯತೆಯ ಸಂಕ ಚಿತ ಭಾವನೆ ನೆಹ್ರೂರವರ ವಿಶಾಲ ಧೋರಣೆಯ ಕಾರ್ಯಕ್ರಮಕ್ಕೆ ವಿಘಾತಕವಾಗಿದೆ. ಪಾಕಿಸ್ತಾನ ಧೋರಣೆಯಲ್ಲಿ ಭಾರತ ತಳೆಯುತ್ತಿರುವ ಸಾವಧಾನ ಧೋರಣೆಗೆ ಟಾಂಡನ್ ಪಕ್ಷದವರು ಅನುಕೂಲರಾಗಿ ಬ್ಲವೆಂಬುದು ವಿದಿತ ವಿಚಾರವೇ. ಪಾಕಿಸ್ತಾನದ ತಿರುಬೊಟ್ಟಿಗೆ ಸರಿಯಾಗಿ ಭಾರತವು ಪ್ರತಿಭಟನೆ ಕೈಗೊಂಡರೆ ಭಾರತವು ಈ ವರೆಗೆ ತಾನು ಜಾಗತಿಕ ರಂಗದಲ್ಲಿ ಗಳಿಸಿರುವಂತಹ ಬಂಡ ಸಾಂಸ್ಕೃತಿಕ ನೈತಿಕ ಮಹತ್ವಿಕೆಯನ್ನು ಸಂಪೂರ್ಣ ಕಳೆದುಕೊಳ್ಳುತ್ತದೆ. ಅಷ್ಟು ಮಾತ್ರವೇ ಅಲ್ಲ, ಕಾಂಗ್ರೆಸ್ಸಿನ ಮೂಲಭೂತ ತತ್ವಕ್ಕೇನೇ ಧಕ್ಕೆ ಬರುವ ಸಂಭವವಿದೆ. ಅರ್ಧ ಶತಮಾನದಿಂದ ನಡೆದುಕೊಂಡು ಬಂದ ಒಂದು ವಿಶಿಷ್ಟ ಸಂಪ್ರದಾಯವನ್ನೇ ಮರೆಯುಬೇಕಾಗುತ್ತದೆ. ನೆಹ್ರೂರವರು ಆ ವಿಶಿಷ್ಟ ಸಂಪ್ರದಾಯಕ್ಕೆ ಅಂಟಿಕೊಂಡಿರುವವರು. ಸಂಕುಚಿತತೆಗೆ ಜಾತೀಯತೆಗೆ ಅವರು ತಲೆ ಬಾಗುವಂತಿಲ್ಲ. ಅಂತಲೇ ಟಾಂಡನ್ನರೂ ಅವರ ಅನುಯಾಯಿಗಳೂ ಕಾಂಗ್ರೆಸಿನೊಳಗೆ ಐಕ್ಯಸಾಧಿಸುವಲ್ಲಿ ನೆಹ್ರೂರವರಿಗೆ ಅನುಕೂಲರಾಗುವುದು ಶಕ್ಯವಿಲ್ಲ ರಾಫಿ ಅಹಮ್ಮದ್ ಕಿಡ್ವಾಯಿಯವರ ರಾಜನಾಮೆಯ ಪ್ರಕರಣದಲ್ಲಿ ನೆಹ್ರೂರವರಿಗೆ ಟಾಂಡನ್ನರು ತಳೆದ ಧೋರಣೆಯಿಂದ ವಿಷಾದವಾಗಿದೆ. ರಾಫಿಯವರನ್ನು ತಿರುಗಿ ಮಂತ್ರಿಪದಕ್ಕೆತೆಗೆದುಕೊಂಡಿದ್ದರ ವಿಚಾರದಲ್ಲಿ ಟಾಂಡನ್ನರು ಸ್ಪಷ್ಟೀಕರಣ ಕೇಳಿದ್ದು ಘಟನಾ ರೀತಿಯಲ್ಲಿ ಸರಿ. ಆದರೆ ಕಾಂಗ್ರೆಸಿನಲ್ಲಿ ಐಕ್ಯಸಾಧಿಸಿ ಸದ್ಯದ ಪರಿಸ್ಥಿತಿಯನ್ನು ಎದುರಿಸುವ ನೆಹ್ರೂರವರ ವಿಶಾಲ ಧೋರಣೆಗೆ ವಿರುದ್ಧವಾದುದು! ಅಂತೆಯೇ ನೆಹ್ರೂರವರು ರಾಫಿಯವರು ಅಧ್ಯಕ್ಷರ ಪರವಾಗಿ ಕೈಗೊಂಡ ಟೀಕೆಯನ್ನು ಪ್ರತ್ಯಕ್ಷವಾಗಿ ಪ್ರತಿಭಟಿಸಬೇಕಾಯಿತು! ಕೃಪಲಾನಿ ಹಾಗೂ ಅವರ ಮಿತ್ರರು ಕಾಂಗ್ರೆಸ್ಸನ್ನು ತೃಜಿಸುವದಕ್ಕೆ ಟಾಂಡನ್ನರ ಇದೇ ಬಗೆಯ ಧೋರಣೆ ಕಾರಣವಾಯಿತು. ಕೃಪಲಾನಿ, ರಾಫಿಯವರು ಈ ಕಾರ್ಯಕಾರೀ ಸಮಿತಿಯೊಂದಿಗೆ ನೆಹ್ರೂರವರು ಯಾವ ಸುಧಾರಣೆಯ ಮಾರ್ಗವನ್ನೂ ಹುಡುಕಲಾರರು—ಅದು ಶಕ್ಯವೂ ಇಲ್ಲ ಎಂದದ್ದು ಪ್ರಸ್ಪಷ್ಟವೇ ಆಗಿದೆ.

ನೆಹ್ರೂರವರೇ ಕಾಂಗ್ರೆಸ್ಸಿನ ಸಾರಥಿತ್ವವನ್ನು ವಹಿಸಿಕೊಳ್ಳಬೇಕೆಂದು ದೇಶ ಬಯಸುತ್ತಿದೆ. ಅದರಿಂದ ಕಾಂಗ್ರೆಸ್ಸಿನಲ್ಲಿ ಐಕ್ಯವೂ, ದೇಶದಲ್ಲಿ ಶಾಂತಿ ಸಮೃದ್ಧಾನಗಳೂ ಉಂಟಾಗಬಹುದು. ಟಾಂಡನ್ನರ ಹಟವೂರೈಸಿದಂದ ನೆಹ್ರೂರವರ ಉತ್ಕೃಷ್ಟ ಕಾರ್ಯಗಳಿಗೆ ಸಹಜವಾಗಿಯೂ ಧಕ್ಕೆಯೊಗುತ್ತದೆ. ಟಾಂಡನ್ನರು ಕರ್ನಾಟಕ ಸಂಚಾರ ಕೈಗೊಳ್ಳುವ ಮೊದಲು ಮೀರತ್ ಸಮಾವೇಶದಲ್ಲಿ, 'ನಾನು ಕೆಲವೊಂದು ತತ್ವಗಳನ್ನು ನಿಷ್ಠುರವಾಗಿ ಅನುಸರಿಸುತ್ತಿದ್ದೇನೆ ಪಕ್ಷಕ್ಕೆ ಕರ್ತವ್ಯವೇ. ಪ್ರಧಾನ, ಸ್ವಧರ್ಮ ಪರಿಪಾಲನೆ ಮುಖ್ಯ ಎಂದು ಹೇಳುವದನ್ನು ಲಕ್ಷಿಸಿದರೆ ಅವರಲ್ಲಿಯೂ ನೆಹ್ರೂರಲ್ಲಿಯೂ ಉಂಟಾಗಿರುವ ಮತಭೇದಗಳು ಅಪರಿಹಾರ್ಯವೆಂದು ಸ್ಪಷ್ಟವಾಗಿದೆ?

ಸೆಪ್ಟಂಬರ್ ೩-೪ ರಂದು ದೆಹ್ಲಿಯಲ್ಲಿ ನಡೆಯಲಿರುವ ಎ. ಐ. ಸಿ. ಸಿ. ಅಧಿವೇಶನವು ಈ ಮಹತ್ವದ ವಿಚಾರವನ್ನು ಹೇಗೆ ನಿರ್ಣಯಿಸುವದೋ ಕುತೂಹಲದಿಂದ ನೋಡಬೇಕಾಗಿದೆ. ಟಾಂಡನ್ನರೂ ಸಮಿತಿಯ ಸದಸ್ಯರೂ ರಾಜನಾಮೆಯನ್ನಿತ್ತು ನೆಹ್ರೂರವರಿಗೇನೆ ಆ ಪಟ್ಟವನ್ನು ಕಟ್ಟಿ ಅವರಿಗೆ ಬೇಕಾದವರನ್ನು ಆರಿಸಿಕೊಳ್ಳುವಂತೆ ಮಾಡಿಕೊಂಡುವದು ಯೋಗ್ಯವೇ ಆಗಿದೆ. ನೆಹ್ರೂರವರು ಟಾಂಡನ್ನರು ರಾಜಿಯನ್ನಿತ್ತರೆ ತಾನು ಕಾಂಗ್ರೆಸಿನ ಅಧ್ಯಕ್ಷನಾಗಲಾರೆನೆನ್ನುತ್ತಿರುವರೆ. ಕಾರ್ಯಕಾರಿ ಸಮಿತಿಯಲ್ಲಿ ಪುನರ್ಘಟನೆಯೂ, ಟಾಂಡನ್ನರ ಧೋರಣೆಯಲ್ಲಿ ಬದಲಾವಣೆಯೂ ಅವರಿಗೆ ಬೇಕಾಗಿದೆ. ನೆಹ್ರೂರವರು ಅಧಿಕಾರವನ್ನು ವಹಿಸಿಕೊಳ್ಳುವದಾದರೆ ನಾವು ರಾಜಿಯನ್ನೀಯಲು ಸಿದ್ಧರಿದ್ದೇವೆ; ಅವರಿ ಪುನರ್ಘಟನೆ ಶಕ್ಯವಿಲ್ಲವೆಂದು ಟಾಂಡನ್ ಸ್ಪಷ್ಟೀಕರಿಸಿರುವರು. ಆದುದರಿಂದ ಎ. ಐ. ಸಿ. ಸಿ. ಗೆ ಇರುವ ಮುಖ್ಯ ದಾರಿಗಳೆರಡು: ಒಂದೋ ನೆಹ್ರೂರವರ ರಾಜಿನಾಮೆಯನ್ನು ಸ್ವೀಕರಿಸಿ ಟಾಂಡನ್ನರ ಆದೇಶದಂತೆ ನಡೆಯುವುದು. ಇನ್ನೊಂದು, ಟಾಂಡನ್ನರನ್ನೂ ಅವರ ಅನುಯಾಯಿಗಳನ್ನೂ ರಾಜಿಯೀಯುವಂತೆ ಕೇಳಿಕೊಂಡು ನೆಹ್ರೂರವರು ಕಾಂಗ್ರೆಸಿನ ಸಾರಥಿತ್ವವನ್ನು ವಹಿಸಿಕೊಳ್ಳುವಂತೆ ನೆಹ್ರೂರವರ ಮನವೊಲಿಸುವುದು. ಟಾಂಡನ್ನರು ತನ್ನ ಧೋರಣೆಯನ್ನು ಸ್ವಲ್ಪವೂ ಬದಲಾಯಿ ಸದೆ ಖಡ್ಡಾಯವಾಗಿ ಅದು ಆಚರಣೆಯಲ್ಲಿ ಬಂದೇ ತೀರಬೇಕೆಂದು ಆಶಿಸಿದ್ದರಿಂದ ಉಭಯತರಲ್ಲೂ ಒಮ್ಮತವುಂಟೀತೆಂದು ಭಾವಿಸುವುದು ಕಷ್ಟವೇ. ದೇಶದಲ್ಲುಂಟಾಗಿರುವ ಕಲುಷಿತ ವಾತಾವರಣವನ್ನು ತಿಳಿಯಾಗಿಸುವುದಕ್ಕೆ ನೆಹ್ರೂರವರೊಬ್ಬರೇ ಸಮರ್ಥರೆಂಬುದು ಲೋಕಕ್ಕೆ ತಿಳಿದಿದೆ. ಆದ ಮೇಲೆ ದೆಹ್ಲಿಯ ಅ. ಭಾ. ಕಾಂಗ್ರೆಸ್ ಅಧಿವೇಶನ ಅದೇ ಮಾರ್ಗವನ್ನನುಸರಿಸೀತೆಂಬ ನಾವು ಊಹಿಸಬಹುದೇ?

'ನವಯುಗ'

ದಿ ಬಾಂಬೆ ಮ್ಯೂಚುಯಲ್ ಲೈಫ್ ಅಷ್ಯೂರೆನ್ಸ್ ಸೊಸೈಟಿ ಲಿಮಿಟೆಡ್.

12-8 [ಸ್ಥಾಪಿತ 1871]

ಭಾರತದಲ್ಲಿನ ಅತ್ಯಂತ ಹಳೆಯ ವಿಮಾ ಸಂಸ್ಥೆ.

ಉತ್ಸಾಹಶಾಲಿ ಯುವಕರಿಗೆ ಸಂಬಳ ಯೂ ಕಮಿಶನ್ ಮೇಲೆ ಪ್ರತಿನಿಧಿಗಳಾಗಲು ಅವಕಾಶವಿದೆ.

ವಿವರಗಳಿಗೆ:—ದಿ ಬ್ರಾಂಚ್ ಸೆಕ್ರೆಟರಿ,
172-173, ನರಸಿಂಹರಾಜರೋಡು, ಬೆಂಗಳೂರು 2.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರ್ಡ್. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,99,400
ಕ್ಷೇಮನಿಧಿ	ರೂ.	59,000.
ಇತರ ನಿಧಿಗಳು	ರೂ.	36,000.

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದ

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ಪಗಡಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಜಿಲ್ಲೆಯ ಜಾಫ್ತಿಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರೆಸರಿಟಿ ಮತ್ತು ಬಾರ್ಡರ್ ಇನ್ಷೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಬಿ. ಪಿ. ಅಪ್ಪಯ್ಯ, M. L. C.
ಜಿ. ಕಾರ್ಯದರ್ಶಿ. ಪ್ರೆಸಿಡೆಂಟ್ ಮತ್ತು ಮ್ಯಾನೇಜ್.

Edited, Printed and Published by P. I. Bellappa at 'Kodagu' Press, Mercara, for 'Kodagu' Ltd.

Licence No. 60.
licenced to Post without Prepayment

Reg. No. M. 1880.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ವಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5–0–0.

ಸಂಪುಟ ೩೦ | ತಾರೀಖು ೨೧–೯–೧೯೫೦ನೇ ಗುರುವಾರ | ಸಂಚಿಕೆ ೧೭

'ನೀವು ಪ್ರತಿನಿಧಿಯಾಗಿದ್ದರೆ....?'

ಲೇ:—ಶ್ರೀ ಬಿ. ಡಿ. ಗಣಪತಿ.

ಕಳೆದ ವಾರ ನಾನು ಬರೆದಿದ್ದ "ನಾವೂ, ನಮ್ಮ ಪ್ರತಿನಿಧಿಗಳೂ" ಎಂಬ ಲೇಖನವನ್ನು ಓದಿದ ಕೌನ್ಸಿಲು ಮೆಂಬರೊಬ್ಬರು ಪೋನ್ಮೆಯಾಗಿ ನನ್ನೊಡನೆ ಮಾತನಾಡುತ್ತಾ "ನೀವು ಪತ್ರಿಕೆಗಳಲ್ಲಿ ಬರೆಯುವಷ್ಟು ಕಾರ್ಯಾತ್ಮಕ ಕೆಲಸ ಸುಲಭವಾಗಿಲ್ಲ. ಜನರಿಂದ ಆರಿಸಲ್ಪಟ್ಟ ಪ್ರತಿನಿಧಿಗಳು ಜನರ ಸಂಪರ್ಕವನ್ನು ಇಟ್ಟು ಕೊಳ್ಳದೆ ಅವರನ್ನು ಮರೆತುಬಿಡುತ್ತಾರೆ. ಮತ್ತೆ ಜನರ ಹತ್ತಿರ ಹೋಗುವುದು ಇನ್ನೊಂದು ಚುನಾವಣೆಯು ಬಂದಾಗಲೇ ಎಂಬ ನಿಮ್ಮ ವಾದದಲ್ಲಿ ಸತ್ಯವಿರಬಹುದಾದರೂ ಯಾವ ಪ್ರತಿನಿಧಿಯೂ ಅನ್ಯಥಾ ಮಾಡಲು ಶಕ್ತನು. ತಾಸನ ಸಭೆಯ ಸದಸ್ಯನಾಗಿ ಆರಿಸಲ್ಪಟ್ಟಾಕ್ಷಣ ವರ್ಷದ ೩೬೫ ದಿನವೂ ಊರೂರು ಸುತ್ತಿ ಮತದಾರರ ಸೇವೆಯನ್ನು ಮಾಡಲು ಯಾರಿಗೂ ಸಾಧ್ಯವಿಲ್ಲ. ಕೌನ್ಸಿಲು ಸದಸ್ಯತನವೆಂದರೆ ಹೊಟ್ಟೆಗೆ ಅನ್ನ ದೊರೆಯುವ ಮಾರ್ಗವೇನಲ್ಲ. ಧರ್ಮಾರ್ಥವಾಗಿ ಮಾಡುವ ಈ ಕೆಲಸವು ಯಾರಿಂದಲೂ ಸಾಗುವದು ಅಷ್ಟಕಷ್ಟೆ. ಇಂದು ಪತ್ರಿಕೆಯಲ್ಲಿ ನಮ್ಮ ಕರ್ತವ್ಯಪ್ರ ವಿಚಾರ ಉದ್ದ ಬರೆಯುವ ನೀವೂ ಕೂಡ ಜನಪ್ರತಿನಿಧಿಗೂ ಆರಿಸಲ್ಪಟ್ಟರೆ ಮಾಡುವಿರೆ" ಎಂದು ಹೇಳಿದರು. ನಾನು ಜನಪ್ರತಿನಿಧಿಯಾದವನ ಕರ್ತವ್ಯವನ್ನು ವಿವರಿಸಿದ್ದೆ. ಅವರೂ ಏನೇನೋ ವಿರೋಧ ಹೇಳಿದರು. ಆ ವಿಚಾರವನ್ನೇ ವಾಚಕರೊಡನೆ ಪ್ರಸ್ತಾಪಿಸುವದು ಈ ಲೇಖನದ ಕಾರ್ಯ.

ಜನರ ಪ್ರತಿನಿಧಿಯೊಗುವ ಆಸೆಯು ತೀವ್ರ ಹೆಸರಿಗಾಗಿ ಇರದೆ ಜನತೆಯ ಸೇವೆಗಾಗಿ ಇರಬೇಕೆಂದು ನಾನು ಕಳೆದ ವಾರ ಬರೆದಿದ್ದೆ. ಜನತೆಯ ಸೇವೆಯೆನ್ನು ಹೃತ್ಪರ್ವಕವಾಗಿ ಮಾಡುವದು ತನಗೆ ಸಾಧ್ಯವಿಲ್ಲ. ಇದರಿಂದ ಹೊಟ್ಟೆಗೆ ಅನ್ನ ಒದಗುವದಿಲ್ಲವೆನ್ನುವವರು ಪ್ರತಿನಿಧಿಯಾಗದಿರುವುದು ಒಳಿತು. ಜನರು ಒಬ್ಬ ಪ್ರತಿನಿಧಿಗೆ ಮತವಿತ್ತು ಅವನನ್ನು ಆರಿಸಿದ್ದರ ಅರ್ಥವಾದರೂ ಏನು? ಸಾಮಾನ್ಯವಾಗಿ ಜನತೆಯ ಹಿತದ ಬೇಡಿಕೆಗಳನ್ನು, ಸರಕಾರದ ಆಡಳಿತದ ತಿಯನು ತಿಳಿಸಿಕೊಳ್ಳಲಾರದು. ತಮಗೆ ಬೇಕಾದ ಸಹಾಯವನ್ನು ಪಡೆಯಲು ಜನತೆ ಜಿ.ಬ್ಲ ಸರಕಾರದ ಮುಂದೆ ನಿಂತು ಕೇಳಲಾರದು. ಆದ್ದರಿಂದ ಜನತೆಯು ಆಸೆ ಭರವಸೆಗಳನ್ನು ಸರಕಾರಕ್ಕೆ ತಿಳಿಸಲು ಜನತೆ ತನ್ನುಷ್ಟೆ ಒಬ್ಬರನ್ನು ಪ್ರತಿನಿಧಿಯಾಗಿ ಆರಿಸುತ್ತದೆ. ಆ ಪ್ರತಿನಿಧಿ ತನ್ನನ್ನು ಆರಿಸಿದವರ ಮುಂದಾಳಲ್ಲ; ಬದಲು ಆವರ ಸೇವೆಗಾಗಿ ಕಂಕಣಬದ್ಧನಾದ ಸೇವಕ. ಜನರು ತಮ್ಮೆಲ್ಲರ ವಿಶ್ವಾಸ ಭರವಸೆಗಳನ್ನು ಆತನ ಮೇಲಿರಿಸಿ ಆತನನ್ನು ಪ್ರತಿನಿಧಿಯೆಂದು ಆರಿಸಿರುವುದರಿಂದ ಆತನು ಪ್ರತಿನಿಧಿಸುವ ಜನರ ಅಭಿವ್ಯಾಯನ್ನೇ ಆತನು ಪ್ರತಿಬಿಂಬಿಸಬೇಕು. ಹಾಗೆನ್ನುವಾಗ ಜನರ ಕೂಗನ್ನು ಸರಕಾರದ ಮುಂದಿಡುವದೊಂದೇ ಆತನ ಕರ್ತವ್ಯವಲ್ಲ. ಇಂದು ಪ್ರಾಥಮಿಕ ಮತದಾನ ಪದ್ಧತಿಯು ಜಾರಿಯಲ್ಲಿ ಬಂದಿದೆಯೊದರೂ ಮತ ಕೊಡುವವರೆಲ್ಲ ತಮಗೆ ಇಂಥಾದ್ದೇ ಬೇಕು; ಸರಕಾರ ಈ ರೀತಿ ಕಾರ್ಯ ಮಾಡಬೇಕು. ದೇಶದ ಭವಿಷ್ಯ ಈ ರೀತಿ ಆಗಬೇಕೆಂದು ನಿರ್ಣಯಿಸುವಷ್ಟು ಶಕ್ತರಲ್ಲ. ಆದ್ದರಿಂದ ಪ್ರತಿನಿಧಿಗಳಾಗುವವರು ಜನಜಾಗೃತಿಯ ಮಹಾ ಕೆಲಸವನ್ನು ಮಾಡಬೇಕು. ಜನತೆಗೆ ಇಂದು ಬಂದಿರುವ ಓಟಿನ ಹಕ್ಕು, ಅದನ್ನು ತಪ್ಪದೆ ಚಲಾಯಿಸಬೇಕಾದ ಅವಶ್ಯಕತೆಗಳನ್ನು ಮನವರಿಕೆ ಮಾಡಿಕೊಡಬೇಕು. ಅದೇ ಆಕ್ಷಣ ಸರಕಾರದ ಆಡಳಿತ ಧೋರಣೆ, ಅದರ ಕಾರ್ಯಕ್ರಮಗಳನ್ನು ವಿವರಿಸಿ ಆ ಧೋರಣೆ ನೀತಿಗಳು ಜನಹಿತಕ್ಕೆ ವಿರುದ್ಧವಾಗಿದ್ದರೆ ಜನಾಭಿಪ್ರಾಯವನ್ನೆ ಜಾಗೃತಗೊಳಿಸಿ ಸರಕಾರವನ್ನು ಯೋಗ್ಯ ಪಥದಲ್ಲಿ ನಡೆಸುವ ಹೊಣೆಗಾರಿಕೆಯನ್ನು ಹೊರಬೇಕು. ಇಂಥಾ ಜವಾಬ್ದಾರಿಯನ್ನು ಹೊರಬೇಕಾದವನು "ತಿದೇನು ಹೊಟ್ಟೆಗೆ ಅನ್ನ ಹಾಕುವ ವರ್ಗವಲ್ಲ" ಎಂದೂ, ಅದ್ದರಿಂದ ವಿರಾತುವಿದ್ದಾಗ ಸಾಧ್ಯವಾದಷ್ಟು ಮಾಡುವೆನೆನ್ನುವದಾದರೆ ಆತನ, ಜನತೆಯು ಆತನ ಮೇಲಿರಿಸಿದ ವಿಶ್ವಾಸದ ದುರುಪಯೋಗ ಮಾಡಿದಂತಾಗುವುದು. ಗೌರವಾರ್ಥವಾಗಿ ಮಾಡುವ ಕೆಲಸಗಳ ಜೊತೆಗೆ ಜವಾಬ್ದಾರಿಯುತ ಕೆಲಸವನ್ನು ಮಾಡಿದರೆ ಹೆಚ್ಚಿನ ಪ್ರಶ್ನೆಯುದಿಸಲಾರದು. ಆದರೆ ಸಾರ್ವಜನಿಕ ಗೌರವದ ಕೆಲಸ ಹಾಗಲ್ಲ. ಅದರ ಜವಾಬ್ದಾರಿಗೆ ವಿಷಯವಿಲ್ಲ. 'ಈ ಕೆಲಸದಿಂದ ತನಗೆ ಯಾವ ಪ್ರತಿಫಲವೂ ಇಲ್ಲ ಆದ್ದರಿಂದ ನನ್ನ ಮನಸ್ಸಿನ ಇಚ್ಛೆಯಂತೆ ಸಾಧ್ಯವಿದ್ದಾಗ ಕೆಲಸ ಮಾಡುವೆನು' ಎನ್ನಲಾಗುವುದಿಲ್ಲ. ಆ ರೀತಿಯ ಮನಸ್ಸಿನಿಂದ ಸಾರ್ವಜನಿಕ ಜವಾಬ್ದಾರಿ ವಹಿಸುವವರು ಅಹಿತವನ್ನೆ ಮಾಡಿದಂತಾಗುತ್ತದೆ. ಹಾಗೆನ್ನುವಾಗ ೩೬೫ ದಿನವೂ ಜನತೆಯ ಹಿತಕ್ಕಾಗಿ ತನ್ನನ್ನು ಮರೆತು ದುಡಿಯುತ್ತಿರಬೇಕೆಂಬ ಅರ್ಥವಲ್ಲ. ಅಂಧಾ ಗಾಂಧಿಗಳು ದೊರೆಯುವುದು ಜನತೆಯ ಭಾಗ್ಯ. ಆ ರೀತಿಯ ತ್ಯಾಗ ಮತ್ತು ಸೇವೆ ಎಲ್ಲರಿಗೂ ಸಾಧ್ಯವಿಲ್ಲ. ಆಹರೆ ತಾನು ಜನತೆಗೆ ಭಾರವಾಗಿರದೆ ಅವಂಗೆ ಅಹಿತವನ್ನುಮಾಡದೆ, ಜನ ನಾಯಕನಾಗಿ ತಾನು ಹೊತ್ತಿರುವ ಜವಾಬ್ದಾರಿಯನ್ನು ನ್ಯಾಯಸಮರ್ಪಕವಾಗಿ ನಿರ್ವಹಿಸುವುದು ಬಹುಜನರಿಗೆ ಸಾಧ್ಯವಿದೆ. ಈ ಸಾಧ್ಯತೆ ಇರುವವರೇ ಜವಾಬ್ದಾರಿ ವಹಿಸಿದರೆ ಹಿತವಾಗುವುದು.

ಸ್ವಾತ್ಯಂತರ ಭಾರತ ಅಚಲ ವಿಶ್ವಾಸನೇ ಮಹಾತ್ಮಗಾಂಧಿಯವರಿಗೆ ಭೀಮ ಬಲವನ್ನು ಕೊಟ್ಟು ಬ್ರಿಟಿಷರ ಶಕ್ತಿಯನ್ನು ಮಣಿಯಿತು. ಲಕ್ಷಾಂತರ ಜನರ ಅವಿಶ್ವಾಸವೇ ಜವಾಹರರನ್ನೂ ಜಗತ್ಪ್ರಸಿದ್ಧ ನ್ಯಾಯಕರಾಗಿ ಎತ್ತಿ ನಿಲ್ಲಿಸಿದ ಜನತೆಯ ವಿಶ್ವಾಸ, ಸಹಬಾಯಿಗಳೇ ಮುಂದಾಳುಗಳ ಕಾರ್ಯಶಕ್ತಿಯೇ ದಿನ್ನ ಕೇಂದ್ರಗಳು. ಹತ್ತು ಸಾವಿರ ಜನರ ಮತವನ್ನು ನ್ಯಾಯ ರೀತಿಯಿಂದ ಪಡೆದು ಆರಿಸಲ್ಪಡುವ ಒಬ್ಬ ಪ್ರತಿನಿಧಿಯಲ್ಲಿ ಅಷ್ಟೆಂದು ಜನರ ಶಕ್ತಿ ಕೇಂದ್ರೀಕೃತವಾಗಿದೆ. ಅತನ ಮೂಡಿಗೆ ಅಸ್ಥೈರ್ಯ ಬೆಲೆ ಇದೆ. ಇಷ್ಟೊಂದು ಮಹಾಶಕ್ತಿ ಸಂಪನ್ನವಾಗಿರುವ ಪ್ರತಿನಿಧಿಯು ತನ್ನಲ್ಲಿ ಕೇಂದ್ರೀಕೃತವಾಗಿರುವ ಈ ಶಕ್ತಿಯನ್ನು ತನ್ನ ಶಕ್ತಿಗೆ ಕಾರಣರಾದವರ ಹಿತಕ್ಕಾಗಿ ಉಪಯೋಗಿಸದೆ ತನ್ನ ಸ್ವಾರ್ಥಸಾಧನೆಗಾಗಿ, ಬೊಳ್ಳುಗೊರವದ ವಿಷಂಬನೆಗಾಗಿ ಉಪಯೋಗಿಸಿಕೊಂಡರೆ ಅದು ದೇಶದ್ರೋಹವಾಗುವದು. ನಾಡಿನ ಜನರ ಪ್ರತಿ ಗುಡಿಸಲಿಗೆ ದೇಶಕಾಗಲ್ಲ ಆ ಶಕ್ತಿಯನ್ನು ನಾಡಿನ ಪ್ರತಿ ಗುಡಿಸಲಿಗೆ ಬೆಂಕಿ ಹಚ್ಚಲು ಉಪಯೋಗಿಸಿದಂತಾಗುವದು. ಇಂಥಾ ಉದಾತ್ತವಾದ ಶಕ್ತವನ್ನ ಹೇಳುವದು ಸುಲಭ ಹೌದು. ಆದರಂತೆ ಆಚರಿಸುವದು ಬಹು ಪ್ರಯಾಸಕಾಗಿದೆ. ಎಲ್ಲಾ ವ್ಯಕ್ತಿಗಳು ಒಂದೇ ರೀತಿಯವರಲ್ಲ. ಚುನಾಯಿತಪ್ರತಿನಿಧಿಯ ಎಲ್ಲಾ ಪ್ರತಿನಿಧಿಗಳೂ ಒಂದೇ ಯೋಗ್ಯತೆ, ಛಲತೆಯವರಲ್ಲ. ಹಲವರಲ್ಲಿ ಹಲವು ರೀತಿಯ ದೌರ್ಬಲ್ಯಗಳಿರುತ್ತವೆ. ಅನನ್ಯ ಪ್ರಯತ್ನವಾಡಿದರೂ ತಾರ್ಯಕ್ಕೆಗೂಡದಿರುವ ಪರಿಸ್ಥಿತಿ ಇರುತ್ತದೆ. ಇವೆಲ್ಲವನ್ನು ಸಂಪಡಿಸಿ ಜಯದ ಗುರಿಯನ್ನು ತಲಪುವದು ಪ್ರತಿಯೊಬ್ಬನ ಕೈಯಲ್ಲಿದ್ದಿರೂ, ನಿಸ್ವಾರ್ಥಭಾವನೆಯಿಂದ ಆ ಗುರಿಗಾಗಿ ದುಡಿಯುವದು ಪ್ರತಿಯೊಬ್ಬನ ಕೈಯಲ್ಲಿದೆ. ಆರಿಸಲ್ಪಡುವ ಪ್ರತಿನಿಧಿಗಳಲ್ಲಿ ಈ ಸೇವಾಭಾವನೆ ಇದ್ದರೆ ಅವರು ಜನರೊಡನೆ ವಿಶ್ವಾಸರಾಗದಿರರು. ಚುನಾವಣಾ ಕಾಲಕ್ಕೆ ಮಾತ್ರ ಮತದಾರರ ಬಳಿ ಸುಳಿಯುವ ಪ್ರತಿನಿಧಿಗಳಿಗೆ ಮತದಾರರು ಬೆಲೆ ಕೊಡುವದಿಲ್ಲ. ಕೌನ್ಸಿಲು ಮೆಂಬರನ ಹೊಟ್ಟೆಗೆ ಅನ್ನ ಹಾಕಲಾರದೆಂಬ ವ್ಯಾಪಾರದೃಷ್ಟಿಯಿಂದ ತಾವು ಹೊತ್ತ ಜವಾಬ್ದಾರಿಯನ್ನು ನೋಡಿರು.

ಇಷ್ಟು ಹೇಳಿದರೆ ತನ್ನ ಮೂಲ ಕೌನ್ಸಿಲ್ ಸ್ನೇಹಿತರಿಗೆ ಉತ್ತರಕೊಟ್ಟಂತಾಗಲಿಲ್ಲ. 'ನೀವು ಪ್ರತಿನಿಧಿಯಾಗಿದ್ದರೆ ಏನು ಮಾಡುತ್ತಿದ್ದಿರಿ?' ಎಂಬ ಅವರ ಪ್ರಶ್ನೆ ಉಳಿದೇ ಇದೆ. ಇದಕ್ಕೆ ನಾನೇನು ಮಾಡುತ್ತಿದ್ದೆ ಎಂದು ಖಚಿತವಾಗಿ ಹೇಳುವದು ತೀರಾ ವೈಕ್ತಿಗತವಾಗುವದರಿಂದ ಚುನಾಯಿತರಾದ ಜನಪ್ರತಿನಿಧಿಗಳು ಮುಂದಾದರೂ ಏನು ಮಾಡಬೇಕೆಂಬುದನ್ನು ಬರೆಯುವೆನು.

ಚುನಾವಣೆಯ ಫಲಿತಾಂಶವು ಪ್ರಕಟವಾದಂದಿನಿಂದ ಆಯಲ್ಪಟ್ಟ ಪ್ರತಿನಿಧಿಯ ಜವಾಬ್ದಾರಿಯು ಪ್ರಾರಂಭವಾಗುವದು. ಪ್ರತಿನಿಧಿಯು ಪ್ರಥಮವಾಗಿ ತನ್ನ ಕ್ಷೇತ್ರದ ಪೂರ್ಣ ಮಾಹಿತಿಯನ್ನು ಮೂಡಿಕೊಳ್ಳಬೇಕು. ಪ್ರತಿ ಗ್ರಾಮದ ದಿಂದ ಪ್ರತಿನಿಧಿಯ ಸರಕಾರಕ್ಕೆ ಕಂದಾಯ ಮಂತ್ರಿಯರ ಆದಾಯ ಎಷ್ಟು ಹೋಗುತ್ತದೆ. ಸರಕಾರದಿಂದ ಗ್ರಾಮಗಳ ಹಿತಕ್ಕಾಗಿ ಎಷ್ಟು ಖರ್ಚಾಗುತ್ತಿದೆ. ಜನರ ಜೀವನ ಮಟ್ಟ ಹೇಗಿದೆ? ಯಾವ ಯಾವ ಅನುಕೂಲತೆಗಳು ಜನರಿಗೆ ಅತ್ಯಾವಶ್ಯಕವಾಗಿದೆ ಎಂಬೀ ವಿಚಾರಗಳ ಅಭ್ಯಾಸಮಾಡಬೇಕು. ಈ ಅಭ್ಯಾಸವು ದೂರದ ಮಂಡಿಕೇರಿಯಲ್ಲಿದ್ದು ಇಲ್ಲವೇ ಯಾವುದಾದರೂ ಪೇಟೆಯಲ್ಲೇ ಕೂತುಕೊಂಡು ಸರಕಾರದ ಬಜೆಟ್ ಲೆಕ್ಕಗಳನ್ನು ನೋಡಿಕೊಳ್ಳುವದರಿಂದ ಆಗಲಾರದು. ಚುನಾಯಿತ ಪ್ರತಿನಿಧಿಯು ಚುನಾವಣೆಯ ನಂತರ ಪ್ರತಿ ಗ್ರಾಮಗಳಿಗೆ ಹೋಗಬೇಕು. ಜನರೆಲ್ಲರನ್ನೂ ಸೇರಿಸಬೇಕು ಅವರ ಕಷ್ಟಕಾರ್ಪಣ್ಯಗಳನ್ನು ಕೇಳಬೇಕು. ಅವರಿಗೆ ಅಗತ್ಯವಿರುವ ಅನುಕೂಲತೆಗಳೇನೆಂದು ಪರೀಲಿಸಬೇಕು. ಪ್ರತಿ ಗ್ರಾಮಗಳೂ ತನಗೆ ಸಲಹೆಕೊಡಲು ಸಮರ್ಥರಾದ ನಾಲ್ಕಾರು ಜನರ ಒಂದು ಸಮಿತಿಯನ್ನು ಆರಿಸಬೇಕು. ಹೀಗೆ ಪ್ರತಿ ಗ್ರಾಮಗಳಲ್ಲಿ ಮಾತಿದ ನಂತರ ಈ ಗ್ರಾಮಸಮಿತಿಯಿಂದ ಆರಿಸಲ್ಪಟ್ಟ ಒಬ್ಬೊಬ್ಬ ಪ್ರತಿನಿಧಿಯೊಡನೆ ಕೂಡಿದ ಒಂದು ಕೇಂದ್ರ ಸಮಿತಿಯನ್ನು ಮಾಡಿಕೊಳ್ಳಬೇಕು. ಈ ಸಮಿತಿಯೇ ಚುನಾಯಿತ ಪ್ರತಿನಿಧಿಗೆ ಆ ಕ್ಷೇತ್ರದ ಸಲಹಾ ಮಂಡಳಿಯಾಗುವದು.

ಯಾವ ಸರಕಾರವೇ ಆಡಳಿತದಲ್ಲಿರಲಿ, ಯಾರೇ ಪ್ರತಿನಿಧಿಯಾಗಿ ಆರಿಸಲ್ಪಡಲಿ ಗ್ರಾಮ ಜನರ ಸರ್ವ ಬೇಡಿಕೆಗಳನ್ನು ಒಂದೇ ಬಾರಿಗೆ ಸಲ್ಲಿಸುವ ಶಕ್ತಿ ಯಾವ ಸರಕಾರಕ್ಕೂ ಇರದು. ಆದ್ದರಿಂದ ಜನರಿಂದ ಆರಿಸಲ್ಪಟ್ಟ ಪ್ರತಿನಿಧಿಯು ತನ್ನ ಸಲಹಾ ಸಮಿತಿಯೊಡಗೂಡಿ ತಾನು ಪ್ರತಿನಿಧಿಸುವ ಭಾಗದಲ್ಲಿ ಆಗಬೇಕಾದ ಜನಹಿತ ಕೆಲಸಗಳನ್ನು ವಿವೇಚಿಸಿ ಅವುಗಳ ಸ್ವಾಮ್ಯಕ್ಕೆ ಸರಿಯಾಗಿ ಅವುಗಳನ್ನು ಒಂದರ ನಂತರ ಒಂದು ಜಾರಿಯಲ್ಲಿ ಬರುವಂತೆ ಸರಕಾರಕ್ಕೆ ಬಲವಂತ ಪಡಿಸಬೇಕು ಪ್ರತಿ ಸಾತಿನಿಂದ ಸರಕಾರದ ಬೊಕ್ಕಸಕ್ಕೆ ಹೋಗುವ ಬಹುಜನರ ದೆವರಿನ ಹಣವು ಬಹುಜನರ ಹಿತಕ್ಕಾಗಿ ಅಹರ್ನಿಯ ಭಾಗಗಳಲ್ಲಿ ಖರ್ಚಾಗುವಂತೆ ನೋಡುವದು ಕರ್ತವ್ಯ. ಹಾಗೆನ್ನುವಾಗ ಒಂದು ತಪ್ಪು ಧರ್ಮವಾಗಬಹುದು. ಒಬ್ಬ ಕೋಟ್ಯಾಧೀಶನಿಂದ ಸರಕಾರಕ್ಕೆ ಒಂದು ಲಕ್ಷವು ಕರವಾಗಿ ಬರುತ್ತಿದ್ದರೆ ಆ ಒಂದು ಲಕ್ಷವು ಪರಿಮಿತವಾಗಿ ಆತನಿಗೆ ಸರಕಾರದಿಂದ ಅನುಕೂಲತೆ ದೊರೆಯಬೇಕೆನ್ನುವದು ಹಾಸ್ಯಾಸ್ಪದ. ವ್ಯತ್ಯಯಗಬೇಕಾದ ಆ ವಿಷಯ ನೀರಿರುವ ಶಮುದ್ರ, ಕೊಳಗಳಿಂದಲೇ ಹಣ್ಣಾಗಿ ಹೋದರೂ ಮಳೆ ಬೇಕಾಗಿ ಪಕ್ಷಪಾತವಿಲ್ಲದೆ ಸಮುದ್ರ, ಗುಡ್ಡ

ಜೆಟ್ಟಿಗಳ ಮೇಲೆ ಬೀಳುವಂತೆ ಧನಾಢ್ಯ ರಿಂದ ಹೆಚ್ಚಿನ ಕರ ವೂಸೂಲ್ಮಾಡಿದರೂ ಅದು ಸರ್ವರ ಹಿತಕ್ಕಾಗಿ ವಿನಿಯೋಗವಾಗುವಂತೆ ನೋಡಬೇಕು. ಈ ರೀತಿಯ ವ್ಯವಸ್ಥೆಯನ್ನು ಮಾಡಿಕೊಂಡು ಪ್ರತಿನಿಧಿಯು ಕೆಲಸ ಮಾಡಬೇಕು. ಹೀಗೆ ಮಾಡಿದಕ್ಕೆ ಪ್ರತಿನಿಧಿಯು ನಾಡಿನ ಜನತೆಯು ಅಸೆ ಭರವಸೆಗಳ ಪ್ರತಿಬಿಂಬವಾಗುವುದಲ್ಲದೆ ಆತನ ಮಾತಿಗೆ ನಾಡಿನ ಜನತೆಯು ವಿಧೇಯ ಕೃತ ಮಹಾ ಶಕ್ತಿ ಇರುವುದು. ಅಂಥಾ ವ್ಯಕ್ತಿಯ ಮಾತಿಗೆ ಸರಕಾರವು ತಿರಬಾಗ ಲೇದೇಕಾಗುವದು.

ಕೊಡಗಿನ ಶಾಸನ ಸಭಾ ಚರಿತ್ರೆಯಲ್ಲಿ ಈ ರೀತಿಯು ಒಂದು ಕ್ರಾಂತಿ ಆಗಬೇಕು. ಓಬೀರಾಯನ ಕಾಲದ ಅಲೂಕಾರದ ಸದಸ್ಯರಿಂದ ಜನ ಹಿತ ಆಗಲಾರದು. ಜನತೆಯು ಆದ್ರಿಂದ ವಿನೇಷನೆ ಮಾಡಬೇಕು. ತಮ್ಮ ಸೇವೆಯನ್ನು ಯೋಗ್ಯ ರೀತಿ ಮಾಡಬಲ್ಲವರನ್ನು ಹೆಕ್ಕಿ ಶಾಸನ ಸಭೆಗೆ ಕಳಹಿಸಬೇಕು. ಏಕೆಂದರೆ ಮುಂಬರುವ ಜುಜಾವಣೆಯು ಕೇವಲ ನಿಶ್ಚಿತ ಕೆಲವು ಜನರ ಕಾರ್ಯಕ್ರಮವನ್ನಲ್ಲ ಪ್ರೌಢರಾದ ಕೊಡಗಿನ ೬೫,೦೨೦ ಜನತ ಅಭಿಮತವನ್ನು ಪ್ರತಿಬಿಂಬಿಸುವ ಪ್ರತಿನಿಧಿ ಸಭೆಯ ರಚನಾ ಕಾರ್ಯ. ಆದ್ರಿಂದ ಶಾಸನ ಸಭೆಯು ನಿಜವಾದ ಜನ ಪ್ರತಿನಿಧಿಗಳ ಸಭೆಯಾಗುವಂತೆ ಮಾಡುವದು ಪ್ರತಿಯೊಬ್ಬನ ಕರ್ತವ್ಯ.

॥ ಶ್ರೀಮದ್ಭಗವದ್ಗೀತಾ ॥

— ಮರಣವು ಮಹಾ ನಿದ್ರೆ —

[ಶ್ರೀ ಕಾವೇರಿ ಆಶ್ರಮ ಇವರಿಂದ]

(ಆರನೇ ಅಧ್ಯಾಯ)

ಹುಟ್ಟುವುದು ಸಾಯುವುದಕ್ಕಾಗಿ, ಹುಟ್ಟಿ, ಸಾಯುವುದರ ಮಧ್ಯೆ ಸ್ವಲ್ಪ ಕಾಲ ಬದುಕುತ್ತೇವೆ. ಇದಕ್ಕೆ 'ಈ ಜನ್ಮ' ವೆಂದೆನ್ನುತ್ತೇವೆ. ಈ ಜನ್ಮವಲ್ಲಿ ಕಷ್ಟಪಡುತ್ತಾ ಇರುವಾಗ ಸತ್ತುಹೋದರೆ ಅವನು ಸುಖ ಯಾವಾಗ ಪಡೆಯುವುದು? ಶಾಶ್ವತ ಹೇಳುತ್ತದೆ, ಅವನಿಗೆ ಒಂದೇ ಜನ್ಮವಲ್ಲ, ಅನೇಕ ಜನ್ಮವಿದೆಯೆಂದು. ಹಿಂದಿನ ಜನ್ಮದ ಸಂಸ್ಕಾರದ ಫಲವನ್ನು ಈ ಜನ್ಮದಲ್ಲಿ ಅನುಭವಿಸುತ್ತೇವೆ. ಈಗ ನಾವು ಯಾವುದನ್ನು ಅಧ್ಯಾಸಮಾಡುತ್ತೇವೋ ಮುಂದೆ ಕಾಲಾನುಕಾಲಕ್ಕೆ ಅದರಲ್ಲಿ ಪ್ರವೀಣರಾಗುತ್ತೇವೆ. ಸದಾ ದೇವರ ಧ್ಯಾನದಲ್ಲಿ ನಿರತರಾಗಿರುವವನು ಈ ಜನ್ಮದಲ್ಲಿ ಹೇವನನ್ನು ಕಾಣದಿದ್ದರೆ ಮುಂಪೆ ಎಂದಾದರೂ ಒಂದು ದಿನ ಕಂಡೇ ಕಾಣುತ್ತಾನೆ. ಯಾವುದಕ್ಕೂ ನಿರಂತರ ಸತತ ಶ್ರಮಬೇಕು. ಆಗಲೇ ಯಾವುದೂ ಸಾಧ್ಯ.

ಇಷ್ಟೆಲ್ಲಾ ಕೇಳಿತ್ತಿರುವಾಗ ಅರ್ಜುನನಿಗೆ ಒಂದು ಸಂಶಯ ಬರುತ್ತದೆ. ಹೇ 'ಭಗವಾನ್', ನಾನು ಸ್ವಲ್ಪ ದಿವಸ ಇದ್ದು ಸಾಯುವವನು. ಭಗವಂತಪ್ರ ದರ್ಶನ ಹೊಂದಲು ಪ್ರಯತ್ನಿಸುತ್ತಿರುವಾಗ ನಾಳೆಯೇ ಸತ್ತರೆ ಪ್ರಶ್ನ ಪ್ರಯತ್ನವೆಲ್ಲಾ ವಿಫಲವಾಗುವುದೆ?' ಎಂದು. ಅದಕ್ಕೆ ಭಗವಂತನು ಸೂಕ್ಷ್ಮವಾದ ಉತ್ತರ ಕೊಡುತ್ತಾನೆ. 'ಎಲೈ ಅರ್ಜುನ ಶುಭ ಕಾರ್ಯಗಳಲ್ಲಿ ತೊಡಗಿದವನಿಗೆ ಎಂದಿಗೂ ದುರ್ಗತಿ ಇಲ್ಲ. ಆದರೆ ಒಳ್ಳೆಯ ಫಲವನ್ನು ಅವನು ಮುಂದಕ್ಕೆ ಹೊಂದಿಯೆ ಹೊಂದುತ್ತಾನೆ. ಈ ಜನ್ಮದ ಪ್ರಯತ್ನವು ಮುಂದಿನ ಜನ್ಮದಲ್ಲಿ ಮುಂದುವರಿಯುತ್ತದೆ. ಕಡೆಗೆ ಎಂದಾದರೂ ಒಂದು ದಿನ ಪೂರ್ಣ ಸಫಲತೆ ಹೊಂದುತ್ತಾನೆ,' ಎಂದು ಹೇಳಿದನು. ಋಣಿಷ್ಯನ ಯಾತ್ರೆಯು ಈ ಮರಣ ದಿಂದಲೇ ಮುಗಿದು ಹೋಗಲಿಲ್ಲ. ಪ್ರತಿ ಜನ್ಮದ ಸಂಸ್ಕಾರವೆಲ್ಲಾ ಮುಂದಿನ ಜನ್ಮಕ್ಕೆ ಅವನಿಗೆ ಸಿಕ್ಕುತ್ತದೆ ಅದರಿಂದಲೇ 'ಮರಣವೆಂದರೆ ನಿದ್ರೆ' ಎನ್ನುತ್ತಾರೆ. ಪ್ರತಿ ದಿನವೂ ನಾವು ಕೆಲವು ಗಂಟೆಗಳ ಕಾಲ ನಿದ್ರಿಸುತ್ತೇವೆ ಹಾಗೆಯೇ ಎಚ್ಚರವಾಗುತ್ತೇವೆ. ಇದು ಸ್ವಭಾವಿಕ. ನಿದ್ರೆ ಮಾಡುತೇವೆಂದು ನಾವು ನ್ಯಸನಪಡುವುದಿಲ್ಲ. ನಿದ್ರೆ ಬಾರದಿದ್ದರೆ ಗಾಬರಿಗೊಳ್ಳುತ್ತೇವೆ. ಹಾಗೆಯೇ ಮರಣವು ಸಹ. ಮರಣ ಹೊಂದಿ ಈ ಜನ್ಮವನ್ನು ತಳೆದು ಮುಂದಿನ ಜನ್ಮವನ್ನೆತ್ತುತ್ತೇವೆ, ಅದುದರಿಂದ ಮರಣವೆಂದರೆ ಏಕೆ ಹೆದರಬೇಕು? ನಿದ್ರೆಯಂತೆಯೇ ಮರಣವೂ ಒಂದು ಸ್ವಭಾವಿಕವಾದ ನಡತ್ತು ಅಪಶ್ಯತಾನ ಒಂದು ಘಟನೆ. ಇದಕ್ಕಾಗಿ ಸಕ್ಕರೆ ವ್ಯಸನಪಡಬೇಕಾದದ್ದೇನೂ ಇಲ್ಲ. ಸತ್ತು ಪುನಃ ಹುಟ್ಟುತ್ತಾನೆ. ಇದೇ ಪುನರ್ಜನ್ಮ. ಮನುಷ್ಯನು ಹೊಸಬನೇನೂ ಅಲ್ಲ. ಹಳೆಯವನೇ ಹೊಸ ರೂಪಿನಲ್ಲಿರುತ್ತಾನೆ. ಮುಂದಿನ ಜೀವಮಾನವು ಹಿಂದಿನ ಜೀವಮಾನದ ಆಧಾರವನ್ನೇ ಹೊಂದಿಕೊಂಡಿರುತ್ತದೆ. ಹಳೆಯ ಸಂಸ್ಕಾರವು ಅವಶ್ಯಕತೆಯನ್ನು ಮುಂದಕ್ಕೆ ಒಯ್ಯುತ್ತದೆ. ನಮ್ಮ ಇಂದಿನ ಜನ್ಮವು ಹಿಂದಿನ ಜನ್ಮದ ಸಂಸ್ಕಾರದ ಆಧಾರದಿಂದ ಆಗಿದೆ. ನಾವು ಅದರ ಆಧಾರದಲ್ಲಿ ನೂತನ ಇಂದಿನ ಜನ್ಮದ ಸಂಸ್ಕಾರವನ್ನು ಮೂರ್ತಿಸಿಕೊಳ್ಳುತ್ತಿದ್ದೇವೆ. ಅದುಹರಿಂದ 'ಜೀವನ ಅಶಾವ ಇಾಳ' ಎಂದಕೆ ಸಂಸ್ಕಾರ ಸಂಚಯವೆಂದು ಕೆಲಪರು ಹೇಳುತ್ತಾರೆ. ಹುಟ್ಟಿದಂದಿನಿಂದ ಸಾಯುವ ವರೆಗೆ ಮನುಷ್ಯನ ನಾನಾ ವಿಧ ಕಾರ್ಯಗಳೆಲ್ಲಾ ಅವಜ್ಞ ಸಂಸ್ಕಾರವನ್ನು ಬೆಳಿಸುತ್ತದೆ. ನಾವು ಎಷ್ಟೊ ವಿಧ ಕಾರ್ಯಗಳಲ್ಲಿ ತೊಡಗುತ್ತೇವೆ. ಮಾತನಾಡುವುದು, ನೋಡುವುದು, ಕೇಳುವುದು, ಊಟಮಾಡುವುದು, ಪ್ರಪ್ರ ಕಾಣುವುದು, ಜಗಳವಾಡುವುದು, ಓದುವುದು ಹೀಗೆ ನಾನಾ ಕ್ರಿಯೆಗಳು ನಮ್ಮಿಂದಾಗುತ್ತವೆ. ಈ ರೀತಿಯ ಎಲ್ಲಾ ಕೆಲಸಗಳು ಮನುಷ್ಯನ ಸಂಸ್ಕಾರವನ್ನು ಬದಲಾಯಿಸುತ್ತಾ ಬರುತ್ತವೆ. ಒಳ್ಳೆಯ ಕೆಲಸಗಳೇ ಹೆಚ್ಚಾಗಿದ್ದರೆ ಒಳ್ಳೆಯ ಸಂಸ್ಕಾರ. ಕೆಟ್ಟದೇ ಹೆಚ್ಚಾದರೆ ಕೆಟ್ಟ ಸಂಸ್ಕಾರ. ಸಂಸ್ಕಾರವು ಒಂದೆರಡು ದಿನಗಳಲ್ಲಿ ಬದಲಾಯಿಸಲಾರದು. ಅನೇಕ ವರ್ಷಗಳು ಬೇಕಾದೀತು, ಒಂದು ಜನ್ಮವೇ ಬೇಕಾದೀತು. ಮನುಷ್ಯನ ಸಂಸ್ಕಾರವು ಬೆಳೆಯುತ್ತಾ ಬರುವುದಕ್ಕೆ ವ್ಯಾಪಾರದ ಒಂದು ಉದಾಹರಣೆ ಕೊಡಬಹುದು. ವ್ಯಾಪಾರಸ್ತನು ಎಷ್ಟೋ ಸಾವಿರ ರೂಪಾಯಿಗಳನ್ನು ಕೊಡುತ್ತಾನೆ, ತೆಗೆದುಕೊಳ್ಳುತ್ತಾನೆ ಇದರ ಲೆಕ್ಕವನ್ನು ಪ್ರತಿದಿನವು ಬರೆದಿಟ್ಟು, ವರ್ಷದ ಕೊನೆಯಲ್ಲಿ ಜಮೂ ಖರ್ಚು ತೆಗೆದು ಕಡೆಗೆ ಇಷ್ಟು ಸಾವಿರ ರೂಪಾಯಿ 'ಲಾಭ' ಎಂದಾಗಲೀ ಅಥವಾ 'ನಷ್ಟ' ಎಂದಾಗಲೀ ಲೆಕ್ಕ ಬರೆಯುತ್ತಾನೆ ಆವನ ವರ್ಷದ ಇದೇ ಲೇವಾದೇವಿಯ ಫಲವು ಎಷ್ಟೋ 'ಲಾಭ ಅಥವಾ ನಷ್ಟ' ಎಂದು ಬರುತ್ತದೆ ಹಾಗೆಯೇ ಮನುಷ್ಯನ ಜೀವಮಾನದಲ್ಲಿ ಎಷ್ಟೋ ಕ್ರಿಯೆಗಳು ನಡೆದ 'ಒಳ್ಳೆಯ ಸಂಸ್ಕಾರ' ಅಥವಾ 'ಕೆಟ್ಟ ಸಂಸ್ಕಾರ' ಎಂದು ಉಳಿಯುತ್ತದೆ. ಇವನ ಮರಣ ಕಾಲದಲ್ಲಿ ಇದೇ ಅವನ ಆಸ್ತಿ. ಇದನ್ನು ತೆಗೆದು ಕೊಂಡು, ಇವನು ತನ್ನ ಜೀವನ ವ್ಯಾಪಾರವನ್ನು ಇನ್ನೊಂದು ಜನ್ಮವನ್ನೆತ್ತಿ ಮುಂದುವರಿಸುತ್ತಾನೆ. ನಾವು ಪ್ರತೀ ದಿನವೂ ಡೈರಿ ಬರೆಯುವ ಅಭ್ಯಾಸವನ್ನು ಇಟ್ಟಿದ್ದರೆ ದಿನವೂ ಬರೆಯುವದೇನನ್ನು? ಆ ದಿನದಲ್ಲಿ ನಮ್ಮ ಜೀವಮಾನದಲ್ಲಿ ನಡೆದ ೩-೪ ಮುಖ್ಯ ವಿಷಯಗಳನ್ನು ಬರೆಯುತ್ತೇವೆ. ಹೀಗೆ ೨೪ ಗಂಟೆಗಳಲ್ಲಿ ನಡೆದ ಕ್ರಿಯೆಗಳಲ್ಲಿ ೩-೪ ವಿಷಯಗಳು ಮುಖ್ಯವಾದವು. ವಾರದ ಕೊನೆಯಲ್ಲಿ ನಮ್ಮ ಡೈರಿಯನ್ನು ನೋಡಿ, ಈ ವಾರದಲ್ಲಿ ನನ್ನ ಜೀವನದಲ್ಲಿ ನಡೆದ ಮುಖ್ಯ ವಿಷಯವೇನು ಎಂದು ನೋಡಿದರೆ ೩-೪ ಮುಖ್ಯ ವಿಷಯಗಳು ಆಗಿರುತ್ತವೆ. ತಿಂಗಳನ ಕೊನೆಯಲ್ಲಿ ನಮ್ಮ ಡೈರಿಯನ್ನು ನೋಡಿ, ಈ ತಿಂಗಳಲ್ಲಿ ಆದ ಮುಖ್ಯ ವಿಷಯಗಳೇನು ಎಂದು ನೋಡಿದರೆ ೩-೪ ಅಂಶಗಳು ನಮಗೆ ಕಾಣುತ್ತವೆ. ಹೀಗೆಯೇ ಪ್ರತಿ ವರ್ಷದ ಕೊನೆಯಲ್ಲಿ ನನ್ನ ಡೈರಿಯನ್ನು ನೋಡಿ ಮುಖ್ಯವಾದದ್ದೇನೆಂದು ನೋಡಿದರೆ ಆಗಲೂ ೩-೪ ವಿಷಯಗಳು ನಮಗೆ ಸ್ಪಷ್ಟವಾಗಿ ತೋರುತ್ತದೆ. ಕಡೆಗೆ ಜೀವಮಾನದ ಅಂತ್ಯದ ದಿನದಲ್ಲಿ ನಮ್ಮ ಇಡೀ ಜೀವಮಾನದಲ್ಲಿ ಆದ ಮುಖ್ಯ ವಿಷಯವೇನೆಂದು ನಾವು ಸ್ಮರಣೆಗೆ ತಂದುಕೊಂಡರೆ ಅದೇ ಮುಖ್ಯವಾದ ಕೆಲವು ಅಂಶಗಳು ನಮ್ಮ ಕಣ್ಣೆದುರಿಗೆ ಬರುತ್ತವೆ ಈ ಜೀವನದ ಕಡೆಗಳಿಗೆಯಲ್ಲಿ ಕಾಣುವ ಮುಖ್ಯ ವಿಷಯವೇ ನಮ್ಮ ಸಂಸ್ಕಾರ. ಕಡೆಯ ಗಳಿಗೆಯಲ್ಲಿ ಪ್ರತಿ ಮನುಷ್ಯನು ಇದನ್ನು ನೆನೆದೇ ನೆನೆಯುತ್ತಾನೆ. ಯಾವಾಗಲೂ ದೇವರ ಧ್ಯಾನದಲ್ಲಿಯೇ ಇರುವವನು ಕಡೆಯ ಗಳಿಗೆಯಲ್ಲಿ ದೇವರ ಹೆಸರನ್ನು ಹೇಳುತ್ತಾ ಅವನನ್ನೆ ಧ್ಯಾನಿಸುತ್ತಾನೆ. ಮರಣದ ಸಮಯದಲ್ಲಿ ಮಗನ ಚಿಂತೆಯಾದರೆ ಇವನ ಸಂಸ್ಕಾರವೆಲ್ಲಾ ಮಗನ ಮೇಲಿನ ಮೋಹವೇ ಆಯಿತು. ತಿನ್ನುವ ಯೋಜನೆಯಾದರೆ ಅದೇ ಅವನ ಸಂಸ್ಕಾರ. ಆದುದರಿಂದಲೇ ಗೀತೆಯಲ್ಲಿ 'ಸಾಯುವಾಗ ಯಾವನು ನನ್ನನ್ನು ಸ್ಮರಿಸುತ್ತಾನೋ ಅವನು ನನ್ನನ್ನು ಹೊಂದುತ್ತಾನೆ.' ಎಂದು ಭಗವಂತನು ಹೇಳಿದ್ದಾನೆ. ಮರಣ ಕಾಲದಲ್ಲಿ ಭಗವಂತನ ಚಿಂತೆ ಮಾಡಿದರಾಯಿತೆಂದು ಕೂತರಾಗದು. ಅವನ ಚಿಂತೆಯ ಕಾಲಕ್ಕೆ ಹೇಗೆ ಬಂದೀತು? ಇಡೀ ಜನ್ಮವನ್ನು ಅವನ ಚಿಂತೆಯಲ್ಲಿ ಕಳೆದಿದ್ದರೆ ತಾನೇ ಮರಣ ಕಾಲದಲ್ಲಿ ಅವನ ಚಿಂತೆ ಬಂದೀತು ಇಲ್ಲದಿದ್ದರೆ ಅವನ ಚಿಂತೆ ಖಂಡಿತ ಬರುವುದಿಲ್ಲ. ನಮ್ಮ ಜೀವಮಾನದಲ್ಲಿ ನಾವು ಹೂವುದರ ವೇಲೆ ಚಿಂತೆ ಮಾಡುತ್ತೇವೋ ಅದರ ಚಿಂತೆ ಮಾತ್ರ ಆ ಕಾಲದಲ್ಲಿ ನನಗೆ ಬರುತ್ತದೆ. ಇದು ಖಂಡಿತವಾದ ವಿಷಯ. ಮೊದಲು ಸಾಧ್ಯವಾದ ದುರ್ವರ್ತನೆಗಳನ್ನೆಲ್ಲಾ ಮಾಡಿ ಸಾಯುವಾಗ ದೇವರ ಹೆಸರನ್ನು ಹೇಳಿಬಿಟ್ಟರೆ ಮೋಕ್ಷಗಳಿಸುತ್ತೇನೆಂದು ಹೇಳುವ ಮಾತು ಆಗದು. ಪುರಣ ಕಾಲದಲ್ಲಿ ಅವನಿಗೆ ಮಂಕು ಕವಿದೀತು ಬುದ್ಧಿ ಶೂನ್ಯವಾದೀತು. ನಾಲಗೆ ಸತ್ತುಹೋದೀತು. ಕಣ್ಣು ಕಾಣದೆ, ಕಿವಿ ಕೇಳದೆ ಹೋದೀತು ಆಗ ಯಾವ ಚಿಂತೆ ಮಾಡಿಯಾನು? ಇಂಹದನು ಮುಂದೆ ದೊಡ್ಡ ಅಂಧಕಾರದಲ್ಲಿ ಬಿದ್ದಾನು. ಅವನ ಜೀವನ ವ್ಯರ್ಥವಾಗಿ ಹೋದೀತು ಜೀವನದಲ್ಲಿ ಶತತ ಪೂ ಪರಮಾತ್ಮನ ಧ್ಯಾನದಲ್ಲಿ ತೊಡಗಿದ್ದರೆನೆ ಅಂತ್ಯಕಾಲದಲ್ಲಿಯೂ ಅವನಿಗೆ ಭಗವಂತನ ಸ್ಮರಣೆ ಬಂದೀತು. ಅಂತಹನನಿಗೆ ಮಾತ್ರ ಮುಕ್ತಿ ದೊರಕುತ್ತದೆ ಸತತ್ಯಯ್ನದಲ್ಲಿ ತೊಡಗಿದವನು ಮುಂದಿನ ಜನ್ಮದಲ್ಲಿಯೂ ಸಹ ತನ್ನ ಕೃಷಿಯನ್ನು ಮುಂದುವರಿಸುತ್ತಾನೆ ಶ್ರೀಹ್ಲಾದನ ಕಥೆ ಇದಕ್ಕೆ ನಿದರ್ಶನವಾಗಿದೆ ಪೂರ್ವಜನ್ಮದ ಸಂಸ್ಕಾರವು ಅವನಿಗೆ ತುಂಬಾ ಸಹಾಯಕವಾಯಿತು. ತಾಯಿ ಗರ್ಭದಲ್ಲಿರುವಾಗಲೇ ಅವನಿಗೆ ನಾರದಮುನಿಯು ಉಪದೇಶ ಸಿಕ್ಕಿತು. ಹುಟ್ಟಿದಂದಿನಿಂದ ಹರಿಭಕ್ತನಾದನು. ತಂದೆಯು ಎಷ್ಟು ಮಾದಾಂಧನಾದರೂ ಮಗನಿಗೆ ಲೇಶಮಾತ್ರವೂ ತಂದೆಯ ಗುಣಗಳು ಬರಲಿಲ್ಲ. ತಂದೆ ತಾಯಿಗಳ ಗುಣವೇ ಮಕ್ಕಳಿಗೂ ಬರುತ್ತದೆಂಬ ಮಾತು ಸ್ವಲ್ಪ ಮಟ್ಟಿಗೆ ನಿಜವಾದರೂ ಪೂರ್ವ ಸಂಸ್ಕಾರ ಬಲವು ಮಹತ್ತರವಾಗಿದ್ದರೆ ಇತರ ಸನ್ನಿವೇಶಗಳು ಮನುಷ್ಯನನ್ನು ಹೆಚ್ಚು ಬದಲಾಯಿಸಲಾರವು.

ಭಾಗವತದಲ್ಲಿ ಅಜಾಮಿಳನ ಕಥೆ ಇದೆ. ಅವನ ಮರಣ ಕಾಲದಲ್ಲಿ 'ನಾರಾಯಣ' ಎಂದು ಹೆಸರು ಉಚ್ಚಾರಮಾಡಿದ್ದರಿಂದ ಅವನಿಗೆ ಮೋಕ್ಷ ಸಿಕ್ಕಿತೆಂದು ಹೇಳಿದೆ. ಅವನ ಜೀವನ ಚರಿತ್ರೆಯನ್ನೆಲ್ಲಾ ಪೂರ್ಣವಾಗಿ ಓದಿದರೆ ಮಾತ್ರ ಇದರ ಅರ್ಥ ನಮಗೆ ಪೂರ್ಣವಾಗಿ ತಿಳಿಯುತ್ತದೆ. ಕರ್ಮ ಭೂಮಿನಾಗಿ, ಕಾವ ವಾಶದಲ್ಲಿ ಸಿಕ್ಕಿ ಬಿದ್ದು ಮತಿಗೆಟ್ಟಿದ್ದನಾದರೂ ಮರಣ ಕಾಲದಲ್ಲಿ ನಾರಾಯಣನ ಹೆಸರು ಇವನ ಬಾಯಲ್ಲಿ ಬಂದಿತೆಂದರೆ ಆಶ್ಚರ್ಯವಾದೀತು. ಇವನು ತನ್ನ ಜೀವನದ ಒಂದು ಕಾಲದಲ್ಲಿ ಮತಿಗೆಟ್ಟವನಾಗಿ, ಅನೇಕ ಪಾಪಕಾರ್ಯಗಳನ್ನು ಮಾಡಿದನು. ಆದರೂ ಸಹ ಇವನ ಹಿಂದಿನ ಸಂಸ್ಕಾರವು ಇವನನ್ನು ಉದ್ಧಾರ ಮಾಡಿತು. ಅಜಾಮಿಳನು ಶ್ರೇಷ್ಠ ಬ್ರಾಹ್ಮಣವಂಶದಲ್ಲಿ ಹುಟ್ಟಿ ಧರ್ಮನಿಷ್ಠನಾಗಿದ್ದನು. ಪರಮ ಜ್ಞಾನಿಯೂ ಆಗಿದ್ದನು. ಆದರೆ ಒಂದೂ ದಿನ ದೈವವಶಾತ್ ಒಬ್ಬ ನೀಚ ಹೆಣ್ಣಿನ ಮೋಹಪಾಶಕ್ಕೆ ಸಿಕ್ಕಿ ಇವನ ಅಧಃಪತನವೇ ಆಯಿತು. ಜಾತಿಧ್ವಸ್ತನಾಗಿ ಅವಳ ಜೊತೆಯಲ್ಲಿಯೇ ಅನೇಕ ವರ್ಷಗಳ ಕಾಲ ದುರ್ವರ್ತನೆಯಲ್ಲಿಯೇ ಇದ್ದನು. ಇ

ಶ್ರೀ ಸಿ. ಎಂ. ಪೂಣಚ್ಚನವರೂ-ಅವರ ರಾಜಕೀಯವೂ.

ಲೇ:—'ಕೊಡಿಗಿನ ಕುವರ'

ತಾರೀಕು ೭-೮-೫೧ರಂದು 'ಕೊಡಗು' ಪತ್ರಿಕೆಯಲ್ಲಿ ಕೇಂದ್ರ ಪಾರ್ಲಿಮೆಂಟಿನಲ್ಲಿ ಕೊಡಗಿನ ಪ್ರತಿನಿಧಿ ಶ್ರೀ ಸಿ. ಎಂ. ಪೂಣಚ್ಚನವರು ಕೊಡಗಿಗಾಗಿ ಮಾಡಿದ ಕೆಲಸ, ಕೊಡಗಿನ ರಾಜಕಾರಣಕ್ಕೆ ಇವರು ಪ್ರಯತ್ನಗಳನ್ನು ವಿವರಿಸುವ ಲೇಖನವೊಂದು ಗುಚ್ಛದ ಪತ್ರಿಕೆಯನ್ನು ಓದಿ ನನಗೆ ಆಶ್ಚರ್ಯವಾಯಿತು. ನಮ್ಮ ಪ್ರತಿನಿಧಿಯೂದ ಶ್ರೀ ಪೂಣಚ್ಚನವರ ಕಾರ್ಯಕಲಾಪದ ವಿಚಾರ ನನಗೇನೂ ತಿಳಿದಿರಲಾರದು. ಆದುದರಿಂದ ದೇಶಬಂಧು ಗುಚ್ಛರು ನನಗೆ ನಮ್ಮ ಪ್ರತಿನಿಧಿಯು ಖರೀದು ಮಾಡಲೆತ್ನಿಸಿದ್ದಾರೆ. ಇವರು ಯಾವುದೇ ದೃಷ್ಟಿಯಿಂದ ಈ ಪತ್ರವನ್ನು ಬರೆದಿದ್ದರೂ ಆ ಪೂಚಾಗೆ ಕೊಡಗಿನವರು ಹೆಚ್ಚು ಪ್ರಾಶಸ್ತ್ಯ ಕೊಡಲಾರರು. ಬದಲಾಗಿ ನಮ್ಮ ಪ್ರತಿನಿಧಿಯೂದ ಶ್ರೀ ಪೂಣಚ್ಚನವರು ಈ ಐದಾರು ವರ್ಷಗಳಲ್ಲಿ ನಮ್ಮ ಹಿತಸಾಧನೆ ಹೇಗೆ ಮಾಡಿರ ಬಹುದೆಂಬುದನ್ನು ಪರಿಶೀಲಿಸ ಬೇಕು. ಒಂದು ಲೇಖನ ಬರೆಯುವಾಗ ಒಬ್ಬ ವ್ಯಕ್ತಿಯ ವಿಚಾರ ಎತ್ತಿ ಬರೆಯುವುದು ಯೋಗ್ಯವಲ್ಲವೆಂಬುದು ನನಗೆ ಗೊತ್ತು. ಆದರೆ ಸಾರ್ವಜನಿಕ ರಂಗದಲ್ಲಿ ದುಡಿಯುವವರ ಸಾರ್ವಜನಿಕ ಕಾರ್ಯಕಲಾಪಗಳ ವಿಚಾರ ಬಹಿರಂಗವಾಗಿ ಪ್ರಶಂಸಿಸುವ ಮತ್ತು ತೀಕ್ಷ್ಣವಾಗಿ ಹಕ್ಕು ಪ್ರತಿಯೊಬ್ಬ ನಾಗರಿಕನಿಗಿದೆ.

ಶ್ರೀ ಸಿ. ಎಂ. ಪೂಣಚ್ಚನವರು ರಾಜ್ಯ ಪುನರ್ ಘಟನಾ ಸಭೆಗೆ ಆರಿಸಲ್ಪಟ್ಟಾಗ ದೇಶದಲ್ಲಿ ಹಲವರು ಅವರ ಆಯ್ಕೆಯು ಸಮರ್ಪಕವಲ್ಲವೆಂದು ಚಳವಳಿಬ್ಬಿಸಿದ್ದರು. ಕೆಲವರ ಜೆಲ್ಲಿಮು ಸರಿಗೂ ದೂರು ಕೊಟ್ಟಿದ್ದರು. ಅಂದಿನ ಆ ಚಳವಳದ ಕಾಲಕ್ಕೆ ನಾನು ಆ ಪ್ರಯತ್ನವನ್ನು ನಿಷೇಧಿಸಿದವನು. ಏಕೆಂದರೆ ರಾಜ್ಯಪುನರ್ ಘಟನಾ ಸಭೆಗೆ ಕೊಡಗಿನಿಂದ ಯಾರು ಆರಿಸಲ್ಪಟ್ಟರೂ ತಮ್ಮ ಹಿಂದಿನ ಒಪ್ಪಿದ ಪಕ್ಷದವರೇ ಆಗುವುದರಿಂದ ಪೂಣಚ್ಚನವರ ಆಯ್ಕೆಯ ನೈತಿಕ ಸ್ಥಿತಿಯೇ ಬರುತ್ತಿತ್ತು. ಆದರೆ ಪೂಣಚ್ಚನವರು ಶಾಸನ ಸಭೆಯಲ್ಲಿ ಸ್ವತಂತ್ರವಾಗಿ ತನ್ನ ಹೆಸರಾಸ್ಪದವಾದ ಸರ್ವಾನುಮತದಿಂದ ಮೇಲಾ ಜವರ ಆಯ್ಕೆಗೆ ವಿರೋಧ ಮಾಡುವುದಿಲ್ಲವೆಂದು ಸ್ಪಷ್ಟವಾಗಿ ನಾನು ಹೇಳಿದ್ದೆನು. ಕೊಡಗಿನ ಭವಿಷ್ಯದ ನಿರ್ಣಯಕ್ಕೆ ತಾವು ಕೇಂದ್ರ ಸರಕಾರಕ್ಕೆ ಯಾವುದೇ ಅಭಿಪ್ರಾಯವನ್ನು ವ್ಯಕ್ತಿಗತವಾಗಿ ಕೊಡುವುದಿಲ್ಲವೆಂದೂ ಕೊಡಗಿನ ಭವಿಷ್ಯ ನಿರ್ಣಯವು ಕೊಡಗಿನ ಜನರ ಅಭಿಪ್ರಾಯದ ತೆಗೆದೇ ಆಗಬೇಕೆಂದು ಹೇಳುವೆನೆಂದೂ ಅವರು ಭರವಸೆ ಕೊಟ್ಟಿದ್ದರು. ಅವರು ಈ ಭರವಸೆಯಂತೆ ನಡೆದಿರುವರೋ ಎಂಬುದನ್ನು ಪರಿಶೀಲಿಸಿ ನಾವು ನಿರ್ಣಯಕ್ಕೆ ಬರುವುದು ಯುಕ್ತವಲ್ಲವೆಂದು ಗುಚ್ಛರವರು ಬರೆದರೆಂದು ಪೂಣಚ್ಚನವರನ್ನು ಎತ್ತಿ ಹಿಡಿಯುವುದು ಗಲೀ, ವಿರೋಧಿಸುವುದು ಗಲೀ ನನಗೆ ತಕ್ಕ ವಾದುದಾಗಲೀ ಸರಿಯಲ್ಲ.

ನಮ್ಮ ಪ್ರತಿನಿಧಿಯೂದ ಶ್ರೀ ಪೂಣಚ್ಚನವರು ಈ ಕಳೆದ ಆರು ವರ್ಷಗಳಲ್ಲಿ ತಾನು ಡೆಲ್ಲಿಯಲ್ಲಿ ಮಾಡಿದ ಕಾರ್ಯಕಲಾಪಗಳನ್ನು ಅವರನ್ನು ಚುನಾಯಿಸಿದವರಾದ ನಮ್ಮ ಮುಂದಿಡಲಿಲ್ಲ. ೧೯೪೮ರಲ್ಲಿ ಜೋಷ್ ಕಮಿಷನರ್ ಪ್ರಾಂತಗಳಿಗೆ ಎಡ್‌ವೈಸರಿ ಸಮಿತಿಯೊಂದನ್ನು ರಚಿಸಿದಾಗ ಆ ಸಮಿತಿಯು ಮಾಡಿದ ಶಿಫಾರಸಿನ ವಿಚಾರ ಅವರು ಬರೆದ ಲೇಖನ ಮತ್ತು ನಂತರ ಕಳೆದ ನಾಲ್ಕೈ ವರ್ಷಗಳಲ್ಲಿ ಒಮ್ಮೆ ಕೂಡ ಅವರು ಮಾಡಿದ ಭಾಷಣ ಮಾತ್ರ ಸ್ಮರಣಪಥಕ್ಕೆ ಬಾರಲಿಲ್ಲ. ಹಲವಾರು ಪತ್ರಿಕೆಗಳನ್ನು ನಾನು ಓದಿದ್ದೇನೆ ಪೂಣಚ್ಚನವರು ನಮ್ಮ ಪ್ರತಿನಿಧಿಯಾಗಿ ಕೇಂದ್ರಸಚಿವರಾಗಿದ್ದು ಅವರು ಕೊಡಗಿಗೆ ಸಂಬಂಧಿಸಿದ ವಿಚಾರ ದಲ್ಲಿಯೂ ಭಾರತಕ್ಕೆ ಸಂಬಂಧಿಸಿದ ಇತರ ವಿಚಾರಗಳಲ್ಲಿಯೂ ಭಾಗವಹಿಸಿದ್ದಾರೆ. ಆದ್ದರಿಂದ ಇವರು ಕೊಡಗಿನ ಬಗ್ಗೆ ಮಾಡಿದ ಕೆಲಸ ಮತ್ತು ಕೇಂದ್ರದಲ್ಲಿರುವವರ ಅಭಿಪ್ರಾಯ ಇವುಗಳನ್ನು ನಮಗೆ ಆಗಿಂದಾಗ್ಗೆ ತಿಳಿಸುವುದು ಕರ್ತವ್ಯವಿತ್ತು. ಇದೇ ಅಲ್ಲ; ಕೊಡಗಿನವರ ಅಕ್ಕರೆ ಕೇವಲ ಕೊಡಗಿಗಷ್ಟೇ ಅಲ್ಲ ಹಿಂದಿರುವಾಗ ಕೊಡಗಿನ ಪ್ರತಿನಿಧಿಯು ಆಗಿದಾಗ್ಗೆ ಭಾರತ ಸರಕಾರದ ಮುಂದಿದ್ದ ಮಹಾ ಸಮಸ್ಯೆಗಳ ವಿಚಾರ ನಮಗೆ ಅರುವಿಕೆ ಕೊಡಬೇಕಿತ್ತು. ಆದರೆ ಅವರು ಇದಾವುದನ್ನೂ ಮಾಡದ್ದರಿಂದ ಕೊಡಗಿನವರಾದ ನಾವು ಕತ್ತಲಲ್ಲಿ ಜೀವಿಸುವಂತಿದೆ. ಇವರು ಆಗಾಗ್ಗೆ ಬಂದು ಕೊಡಗಿನಲ್ಲಿ ಭಾಷಣಗಳನ್ನು ಏರ್ಪಡಿಸುವುದು ಪ್ರಯೋಜನವಾದರೂ ಸ್ಥಳೀಯ ಪತ್ರಿಕೆಗಳಲ್ಲಿ ಆಗಾಗ ಬರೆಯಬಹುದಿತ್ತು. ಇದಕ್ಕಾಗಿ ತಿಂಗಳಾ ಪಶ್ಚಾತ್ತಾಪಪಟ್ಟನು. ಇದರಿಂದ ಪುನಃ ಮನಸ್ತಾಪಗಳಾಗುತ್ತದೆ.

ಪೂಣಚ್ಚನವರು ಕೊಡಗಿನವರಿಗೆ ಕೊಟ್ಟ ಭರವಸೆಯನ್ನು ಪಾಲಿಸಿದರೇ? ಜೋಷ್ ಕಮಿಷನರ್ ಪ್ರಾಂತಗಳ ಎಡ್‌ವೈಸರಿ ಸಮಿತಿಯ ಸದಸ್ಯರಾಗಿ ಇವರು ಸಲ್ಲಿಸಿದ ಶಿಫಾರಸ್ಸಿನಲ್ಲಿ ಇಂದಲ್ಲ ನಾಳೆ ಕೊಡಗು ಬೇರೆ ಪ್ರಾಂತದೊಡನೆ ವಿಲೀನ ಗೊಳ್ಳಬೇಕಿರುವುದರಿಂದ ಆದಕ್ಕೆ ರಾಜ್ಯ ಪುನರ್ ಘಟನೆಯಲ್ಲಿ ಆನು ಮಾಡಬೇಕೆಂದು ಸೂಚಿಸಿರುವರು. ಕೊಡಗಿನ ಭವಿಷ್ಯದ ಬಗ್ಗೆ ಜನರ ಅಭಿಪ್ರಾಯವು ತೆಗೆಯುವಂತೆ ಕಳೆದ ವೆನೆಂದೂ ತನ್ನ ಸ್ವಂತ ಅಭಿಪ್ರಾಯವನ್ನು ಕೇಂದ್ರಕ್ಕೆ ಹೇಳಿದ ಪೂಣಚ್ಚನವರು ಈ ಅಭಿಪ್ರಾಯವನ್ನು ಕೊಡಲು ಕಾರಣ ವೇನು? ಇವರು ಕೊಡಗಿನ ಜನರ ಅಭಿಮತ ತೆರಿದಿರಬಹುದೇ? ಹಾಗಾಗಿ ತೆಗೆಯಲ, ಯಾವ ಸ್ಥಳಕ್ಕೆ ಹೋಗಿದ್ದಾರೆ?

ಮತ್ತೆ ಕೊಡಗಿನ ವಿಚಾರ ಕೇಂದ್ರ ಸಭೆಯಲ್ಲಿ ಚರ್ಚೆಗೆ ಬಂದಾಗ ಹಲವು ಸದಸ್ಯರು ಕೊಡಗನ್ನು ನೇರೆ ಪ್ರಾಂತದೊಡನೆ ವಿಲೀನಗೊಳಿಸಬೇಕೆಂದು ಕೂಗಿದಾಗ ಇವರು ಯಾವುದೇ ನಿರ್ಣಯವಾಗಬೇಕಾದರೆ ಕೊಡಗಿನ ಜನಾಭಿಪ್ರಾಯವನ್ನು ತೆಗೆದು ಮಾಡುವುದೊಳಿತೆಂದು ಎಲ್ಲರೂ ಸೂಚಿಸಿರುವರೇ? ಶಾಸನ ಸಭೆಯಲ್ಲಿ ಗೋಪಾಲಸ್ವಾಮಿ ಅಯ್ಯಂಗಾರರು ಕೊಡಗು ಇದ್ದಲ್ಲಿ ನಾಳೆ ಬೇರೆ ಪ್ರಾಂತದೊಡನೆ ವಿಲೀನವಾಗಬೇಕಾಗಬಹುದೆಂದು ಹೇಳಿದಾಗ, ಅದನ್ನು ವಿರೋಧಿಸಿ ಅದು ಅಲ್ಲಿಯ ಜನರ ನಿರ್ಧಾರದಂತೆ ಆಗಬೇಕೆಂದು ಇವರು ವಿಕೆ ಹೆ ಲಿಲ್ಲ? ಇವರು ಕೊಡಗಿನ ಜನರಿಗೆ ಕೊಟ್ಟ ಭರವಸೆಯನ್ನು ಯಾವ ರೀತಿ ಪಾಲಿಸಿದ್ದಾರೆ? ಆಂಧ್ರ ಪ್ರಾಂತ ಕೇಂದ್ರ ಶಾಸನ ಸಭೆಯಲ್ಲಿ ಪ್ರಾತಿನಿಧ್ಯವೇಕೆಂದು ತಿಳಿದಾಗ ನೋಬಲ್ ಪ್ರಾಂತ ಕೊಡಗಿನವರಿಗೆ ಸಭೆ ನಡೆಸಿ ಕೂಲವಾಗಿ ಯಾವುದೂ ಇವರು ಜನಾಭಿಪ್ರಾಯ ವನ್ನು ತಿಳಿದಿದ್ದೇ? ಕೊಡಗಿನ ಭವಿಷ್ಯದ ವಿಚಾರದಲ್ಲಿ ವ್ಯಕ್ತಿಗತ ಅಭಿಪ್ರಾಯವನ್ನು ಕೊಡಲಂತೆಂದೆ ಇವರು ಕೊಡಗಿನ ಭವಿಷ್ಯವನ್ನು ಕೇಂದ್ರ ಸರಕಾರವೇ ಜನರನ್ನು ಕೇಳದೆ ತೀರ್ಮಾನಿಸಿ ಬಿಡಬೇಕೆಂದು ಒತ್ತಾಯ ಮಾಡಿಲ್ಲವೇ? ಕಾ. ೧೬-೩-೫೧ರಲ್ಲಿ ಇವರು ಮಾಡಿದ ಭಾಷಣದಲ್ಲಿ ಸ್ಪಷ್ಟವಿಲ್ಲವೇ? ಕೊಡಗಿನ ಭವಿಷ್ಯದ ವಿಚಾರದಲ್ಲಿ ಭಿನ್ನಾಭಿಪ್ರಾಯವಿದ್ದರೆ ಅದು ಕೇಂದ್ರ ಸರಕಾರವು ನಿರ್ದಿಷ್ಟವಾದ ತೀರ್ಮಾನವನ್ನು ಕೊಡದ ಕಾರಣ ವೆಂದು ಇವರು ಹೇಳಲಿಲ್ಲವೇ? ಹಾಗಿರುವಾಗ ಜನತಾ ಅಭಿಪ್ರಾಯದಂತೆ ಭವಿಷ್ಯ ನಿರ್ಣಯ ವಾಗಬೇಕೆನ್ನುವ ಇವರ ಭರವಸೆ ಎಲ್ಲಿ?

ಮತ್ತೆ ಇವರು ಕೊಡಗಿನ ಸುಧಾರಣೆಗಾಗಿ ಪ್ರಯತ್ನಿಸಿದ್ದಾರೆ. ಆವರಿಂದಾಗಿಯೇ ಸುಧಾರಣೆ ಬಂತೆಂಬ ಪ್ರಚಾರ ನಡೆಯುತ್ತಿದೆ. ಇದಕ್ಕೆ ಗುಪ್ತಾರವರ ಶಿಫಾರಸ್ಸು ಪತ್ರವನ್ನು ಜನರ ಮುಂದಿರಿಸಿದ್ದಾರೆ. ಕೊಡಗಿನ ಜನರಿಗೆ ಗುಪ್ತಾರವರ ಶಿಫಾರಸ್ಸಿನ ಪತ್ರದ ಅಗತ್ಯವೇನಿದೆ? ಕೊಡಗಿನ ಜನರಿಗೆ ತಮ್ಮ ಪ್ರತಿನಿಧಿಯು ನೂತನ ನೇಲೆ ವಿಶ್ವಾಸವಿಲ್ಲವೆಂದು ಪೂಣಚ್ಚನವರು ಬಗೆದರೆ ಈ ಪತ್ರ ಬರೆಸಿದ ಸಿ ಅದಕ್ಕೆ ವಿಷಾದ ಪಡಬೇಕಿದೆ. ತಾನು ಮಾಡಿದ ಕೆಲಸ ಕಾರ್ಯಗಳನ್ನು ವಿವರಿಸಿ ಕೊಡಗಿನ ಜನತೆಯನ್ನು ತೃಪ್ತಿ ಪಡಿಸುವ ಕೆಲಸ ಪೂಣಚ್ಚನವರದು. ಅದಕ್ಕೆ ಬೇಕಾದ ಯೋಗ್ಯತೆ ಅವರಲ್ಲಿದೆ. ಹೀಗಿದ್ದೂ ಗುಪ್ತಾರವರ ಸರ್ಟಿಫಿಕೇಟು ತೋರಿಸುವ ಅವರ ನೀತಿ ಪ್ರಶಂಸನಾರ್ಹವಾಗಿಲ್ಲ. ಜನತೆ ತನ್ನ ಮೂತನ್ನು ನಂಬಲಿ ಕ್ಕಿಲ್ಲವೆಂಬ ಸಂಶಯ ಅವರಿಗೆ ಬಂದಿದ್ದಲ್ಲಿ ಅದು ಕೊಡಗಿನ ಜನತೆಯ ತಪ್ಪಲ್ಲ. ಬಲಲು ಶ್ರೀ ಪೂಣಚ್ಚನವರ ಕರ್ತವ್ಯಚ್ಯುತಿಯ ಫಲಾಭಾವ.

ಪೂಣಚ್ಚನವರು ಪಾರ್ಲಿಮೆಂಟಿನಲ್ಲಿ ಮಾಡಿದ ಭಾಷಣವನ್ನು ಕೇಳಿ ಮಂತ್ರಿಗಳಾಗಲೀ ಪೂಣಚ್ಚನವರು ತಮ್ಮ ಭಾಷಣದಿಂದ ಕೊಡಗಿನವರೀಕ್ಷಿಸುವ ಅವಶ್ಯಕತೆಯನ್ನು ಶ್ರುತಪಡಿಸಿರುವರೆಂದಿದ್ದರೇ ಮತ್ತೆ ಪೂಣಚ್ಚನವರು ತಾನು ಹಾಗೆ ಹೇಳಲಿಲ್ಲವೆಂದರು. ಅವರಿಗೆ ಮೂಕಾಡಲು ದೊರೆತಿದ್ದ ಹತ್ತು ನಿಮಿಷಗಳಲ್ಲಿ ಕೊಡಗಿಗೆ ಸಂಪೂರ್ಣ ಜವಾಬ್ದಾರಿ ಸರಕಾರ ಬೇಕು ಎಂದು ಹೇಳಲು ತೊಂದರೆ ಇರಲಿಲ್ಲ. ಬಲಲು ಅವರು ಹೇಳಲಿಲ್ಲ. ಆದರೆ ಥಿಸಣವಿ ವಿಚಾರ 'ಫ್ರೀ ಇಂಡಿಯಾ' ಎಂಬ ಪತ್ರಿಕೆಯ ಡೆಲ್ಲಿ ಪ್ರತಿನಿಧಿಯು ಆ ಪತ್ರಿಕೆಯ ತಾ. ೯-೯-೫೧ರ ಸಂಚಿಕೆಯಲ್ಲಿ ಬರೆಯುತ್ತಾ "ಭೋಪಾಲ್ ಮತ್ತು ಕೊಡಗಿನ ಪ್ರತಿನಿಧಿಗಳು ನೆರೆಯ ಪ್ರಾಂತದೊಡನೆ ವಿಲೀನೀಕರಣಕ್ಕೆ ತೀವ್ರವಾಗಿ ವಾದಿಸಿದ್ದಲ್ಲದೆ (ಸುಧಾರಣೆ) ಮಸೂದೆಯ ಒಳಗೆ ಒಂದಿಷ್ಟೂ ತಪ್ಪುರಾಗಿಲ್ಲ" (Bhopal and Coorg, whose spokesmen vigourously put forward the plea of merger with the neighbouring State, were least satisfied with the bill) ಎಂದಿದ್ದಾರೆ ಶ್ರೀ ಪೂಣಚ್ಚನವರು ತಾನು ಕೊಡಗಿನ ವಿಲೀನೀಕರಣದ ವಿಚಾರ ಮಾತ್ರ ಹಿರುಪದಲ್ಲಿವೆನ್ನುವದಾದರೆ ಮೇಲಿನಂತೆ ಅಭಿಪ್ರಾಯವನ್ನು ವ್ಯಕ್ತಪಡಿಸಿದ ಗಾಧ್ಯಲ್ಲವಾಗಲೂ ಯಾ ಪತ್ರಿಕಾ ಪ್ರತಿನಿಧಿಗೂ ಬಹುಶಃ ಪೂಣಚ್ಚನವರ ಇಂಗ್ಲಿಷ್ ಅರ್ಥವಾಗಿರಲಾರದೆನ್ನೋಣವೇ?

ನ್ಯಾಯ, ನೀತಿ, ಸತ್ಯಗಳ ತಳಹದಿಯಲ್ಲಿ ರಾಜಕೀಯವನ್ನು ಅನುಸರಿಸುವವರು ಶ್ರೀ ಪೂಣಚ್ಚನವರಂಗಲೀ ಯಾ ನೆಹರೂವರಂಗಲೀ ಆದಕ್ಕೆ ತಕ್ಕ ಪುರಸ್ಕಾರವನ್ನು ಇಂದಲ್ಲ ನಾಳೆ ಕೊಡಲೇ ಬೇಕಾಗುವುದು.

ಕೃತಜ್ಞತಾ ವಂದನೆ.

ತಾ. 2-9-51ರಲ್ಲಿ ನಿಧನರಾದ ಕಮಲಮ್ಮನಾದ ನನ್ನ ಪತಿ ಮತ್ತು ನನ್ನ ಅಣ್ಣಂದಿರಾದ ಹೆಚ್. ಎಂ. ಪುಟ್ಟಣ್ಣನವರ ವಿಯೋಗ ಕಾಲದಲ್ಲಿ ಪತ್ರಮುಖತಃ ಬಂದೂ ಮತ್ತು ಪತ್ರಗಳ ಮೂಲಕವೂ ನನ್ನ ದುಃಖದಲ್ಲಿ ಭಾಗಿಗಳಾದ ಬಂಧು ಮಿತ್ರರುಗಳಿಗೆ ಸ್ವತ್ಕೈಕ ಧನ್ಯವಾದ ತಿಳಿಸಲು ಅಸಾಧ್ಯವಾದ ಕಾರಣ ಈ ಮೂಲಕ ಅವರೆಲ್ಲರಿಗೂ ನನ್ನ ಹೃತ್ಪೂರ್ವಕ ವಂದನೆಗಳನ್ನು ಅರ್ಪಿಸುತ್ತೇನೆ.

ಪತ್ನಿ ಕಮಲಮ್ಮ ಮತ್ತು
ಹೆಚ್. ಎಂ. ಶಾಂತವೀರಪ್ಪ
ಸಹೋದರರು.

ವನಿಗೆ ಮರಣ ಕಾಲವು ಸಂಭವಿಸುತ್ತಾ ಬಂದಿತು. ಕಡೆಯ ಕಾಲದಲ್ಲಿ ಇವನಿಗೆ ಜ್ಞಾನೋದಯವಾಯಿತು. ತನ್ನ ಹಿಂದಿನ ಸ್ಥಿತಿಯನ್ನು ನೆನಪಿಗೆ ತಂದಿತು. ಅಷ್ಟು ಪವಿತ್ರ ಜೀವನವನ್ನು ನಡೆಸುತ್ತಿದ್ದ ತಾನು ಕಾವು-ಪೀಡಿತನಾಗಿ ಆದರ ಪಾಶಕ್ಕೆ ಕಟ್ಟುಬಿದ್ದು ಹೀನಸ್ಥಿತಿಗೆ ಬಂದುದು ಇವನಿಗೆ ಗೊತ್ತಾಯಿತು. ತನ್ನ ತಪ್ಪು ತನಗೆ ಕಡೆಯ ಕಾಲದಲ್ಲಿ ಅರಿವಾಯಿತು. ಇದಕ್ಕಾಗಿ ತಿಂಬಾ ಪಶ್ಚಾತ್ತಾಪಪಟ್ಟನು. ಇದರಿಂದ ಪುನಃ ಮನಸ್ತಾಪವಾಯಿತು. ಕಡೆ ಕಾಲಕ್ಕೆ ಇವನಿಗೆ ದೇವರ ಸ್ಮರಣೆಯಾಯಿತು. ಇದು ಇವನ ಹಿಂದಿನ ಸಂಸ್ಕಾರದಿಂದಲೇ ಆದದ್ದು. ಆದುದರಿಂದ ಕಡೆ ಕಾಲದಲ್ಲಿ ಎಲ್ಲರೂ ದೇವರ ಹೆಸರು ಹೇಳಿ ಮೋಕ್ಷಗಳಿಸಬಹುದೆಂಬ ಭರವಸೆಯಿಂದ ಹೊರೂ ಇರುವ ಹಾಗಿಲ್ಲ. ತನ್ನ ಸಂಸ್ಕಾರವು ಒಳ್ಳೆಯದಾಗಿರಬೇಕು.

ಕೊಡಗು

ತಾ. ೫೧-೯-೧೯೫೧ರಂದೇ ಕಂಠ್ಯಪ್ರಕಾರ

ಹೊಸ ಕಾಂಗ್ರೆಸ್ ಕಾರ್ಯಕಾರಿ ಮಂಡಲಿ.

ಕಾಂಗ್ರೆಸ್ ಪ್ರೆಸಿಡೆಂಟರಾಗಿರುವ ಪಂಡಿತ ಜವಾಹರ್‌ಲಾಲ್ ನೆಹರೂರವರು ತಮ್ಮ ಕಾರ್ಯಕಾರಿ ಮಂಡಲಿಯ ಹೆಸರನ್ನು ಪ್ರಕಟಿಸಿರುವರು. ಶ್ರೀಗಳಾದ ಮೌಲಾನಾ ಆಝಾದ್, ಟಾಂಡನ್, ವಲ್ಲಭಭಾಯ್, ಮುಂತಾಜಿ ದೇಸಾಯಿ, (ಖಜಾಂಚಿ) ಕಾಮರಾಜನಾಡಾರ್, ಶಂಕರ್‌ರಾವ್‌ದೇವ್, ಸಂಜೀವರೆಡ್ಡಿ, ಸಭಾಧ್ಯಕ್ಷಣಾಧಿಕಾರಿ, ಪ್ರಕಾಶಮ್‌ಗಾರ್ ಕೈರನ್, ಬಿ ಎಸ್. ಹೀದಿ. ಗುಲ್ಜಾರಿಲಾಲ್‌ನಂದ, ಮೊರಾರ್ಜಿ ದೇಸಾಯಿ, ಶ್ರೀಮತಿ ಲಕ್ಷ್ಮಿ ಮೆನನ್, ಶ್ರೀಮತಿ ಅಮೃತ್ ಕೌರ್, ಬಾಬು ಜಗಜೀವನ್ ರಾಮ್, ಶ್ರೀಮತಿ ಇಂದಿರಾ ಗಾಂಧಿ, ಲಾಲಬಹದೂರ್ ಶಾಸ್ತ್ರಿ ಮತ್ತು ಯು. ಶ್ರೀನಿವಾಸಮಲ್ಯ (ಕಡೆಯ ಇಬ್ಬರೂ ಕಾರ್ಯದರ್ಶಿಗಳು.) ಇವರುಗಳು. ಕಮಿಟಿಯಲ್ಲಿ ೧೫ ಮಂದಿ ಸದಸ್ಯರಿದ್ದಾರೆ. ಇನ್ನೂ ಐದು ಸ್ಥಾನಗಳನ್ನು ತುಂಬಲು ಬಾಕಿ ಇದೆ. ಕೆಲವು ಪ್ರಾಂತೀಯ ಕಾಂಗ್ರೆಸ್ ಸಮಿತಿಗಳಿಗೂ, ಮಹಿಳೆಯರಿಗೂ ಪ್ರತಿನಿಧ್ಯಕೊಡುವ ದೃಷ್ಟಿಯಿಂದ ಈ ಸ್ಥಳಗಳನ್ನು ತೆರವು ಇಡಲಾಗಿದೆ.

ನೆಹರೂರವರ ಈ ಹೊಸ ಕಾರ್ಯಕಾರಿ ಮಂಡಲಿಯಲ್ಲಿ ಬದಲಾವಣೆ ಇದ್ದರೂ ದೇಶವು ನಿರೀಕ್ಷಿಸಿದ್ದ ಕ್ರಾಂತಿಕಾರಕ ಬದಲಾವಣೆಗಳು ಕೋಲಾಹಲ ಬರುವದಿಲ್ಲ. ಶ್ರೀ ಶಂಕರರಾವ್ ದೇವ್, ಕಾಮರಾಜ ನಾಡರ್, ಪುರುಷೋತ್ತಮದಾಸ್ ಟಾಂಡನ್, ಸಂಜೀವರೆಡ್ಡಿ, ಮೊದಲಾದವರ ಸೇವೆಕವು ಹೊಸ ಪಥವನ್ನೇನೂ ತೋರುವಂತಿಲ್ಲ. ಕರ್ನಾಟಕದ ನಿಜಲಿಂಗಪ್ಪನವರ ಬದಲು ಶ್ರೀ ಶ್ರೀನಿವಾಸಮಲ್ಯರವರನ್ನು ಆರಿಸಿದ್ದು ಈ ಭಾಗದ ಈ ವರೆಗಿನ ಕಾಂಗ್ರೆಸ್ ನೀತಿಯ ಬಗ್ಗೆ ಹೆಚ್ಚಿನ ವ್ಯತ್ಯಾಸಕ್ಕೆ ಕಾರಣವಾಗದು.

ಮುಂಬರುವ ಚುನಾವಣೆಯ ದೃಷ್ಟಿಯಿಂದ ಇಂದು ಸಾರಾಲ್ಟ್ಟ ಹೆಸರುಗಳು ಸೂಕ್ತವೂ ಯೋಗ್ಯವೂ ಆಗಿದ್ದರೂ ಕಾಂಗ್ರೆಸ್ಸನ್ನು ಶುದ್ಧೀಕರಿಸಿ ಬಲಗೊಳಿಸುವ ದೃಷ್ಟಿಯಿಂದ ಆಗಬೇಕಿದ್ದ, ದೇಶವು ಬಯಸಿದ್ದ ಬದಲಾವಣೆ ಆಗಿಲ್ಲವೆನ್ನಬಹುದು. ಹೇಗೂ ಮುಂದೆ ಏನು ಹೆಸರೇಗಳು ಪ್ರಕಟವಾಗಲಿವೆ. ನೆಹರೂರವರು ದೂರದೃಷ್ಟಿಯಿಂದ ಯೋಗ್ಯರನ್ನು ಈ ಸ್ಥಳಗಳಿಗೆ ಆರಿಸಿ ಕಾರ್ಯಕಾರಿ ಮಂಡಲಿಯ ಕೊಳಕು ಕಂಬಿಯ ಕಾಂಗ್ರೆಸ್ ಸಂಸ್ಥೆಯನ್ನು ಪರಿಶುದ್ಧಗೊಳಿಸಿ, ಉನ್ನತ ಮಟ್ಟಕ್ಕೆ ತರಲು ಶಕ್ತವಾಗುವಂತೆ ಮಾಡುವರಾಗಿ ಆಶಿಸಲಾಗಿದೆ

ವರ್ತಮಾನ.

ಕಳೆದ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಮೈಸೂರಿನಲ್ಲಿ ಪ್ರೌಢ ಮತ್ತು ಮಾಧ್ಯಮಿಕ ಶಾಲೆಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗಾಗಿ ನಡೆಸಿದ ಕ್ರೀಡೆ ಮತ್ತು ಕುಣಿತಗಳಲ್ಲಿ ಮೈಸೂರಿನ ಗರ್ಲ್ ಶಿಪರ್ಡ್ ಕಾನ್ವೆಂಟಿನ ಕುಮಾರಿ ಕೋತಿರ ಟಿಟ್ಟು ಉತ್ತಪ್ಪನವರು ಹೈಸ್ಕೂಲಿನ ಛಾಂಪಿಯನ್‌ಷಿಪನ್ನೂ ಮತ್ತು ಕುಮಾರಿ ಕೊಡಂದೆರ ಸುಜ್ಜು ಕಾರ್ಯಪ್ಪನವರು ಮಿಡಲ್ ಸ್ಕೂಲಿನ ಛಾಂಪಿಯನ್‌ಷಿಪನ್ನೂ ಪಡೆದಿರುವರು.

ಪೊನ್ನಂಪೇಟೆ ಶ್ರೀರಾಮಕೃಷ್ಣ ಧರ್ಮ ಆಸ್ಪತ್ರೆಗೆ ರೂ. ೨೫೦ ಮತ್ತು ಆದರ ಮೇಲೆ ಧನ ಸಹಾಯ ಮಾಡಿದವರಿಗೆ ಆ ಹಣದ ನೇಲೆ ಆದಾಯ ತೆರಿಗೆ ಹಾಕಲಾಗುವದಿಲ್ಲವೆಂದು ಕೇಂದ್ರ ಸರಕಾರವು ವಿನಾಯಿತಿ ಕೊಟ್ಟಿರುವದಾಗಿಯೂ ಸಾರ್ವಜನಿಕರು ಈ ಧರ್ಮ ಆಸ್ಪತ್ರೆಗೆ ಶುಂಬಾ ಸಹಾಯ ಮಾಡಬೇಕಾಗಿಯೂ ಸ್ವಾಮಿ ವಿಶ್ವಂಭರಾನಂದಜೀಯವರು ಅಳಲು ಮಾಡಿತ್ತಾರೆ.

ಕೂಡಿಗೆ ವ್ಯವಸಾಯ ಕ್ಷೇತ್ರದ ದಿನಾಚರಣೆಯು ಸೆಪ್ಟಂಬರ್ ತಾ. ೨೨ನೇ ಶನಿವಾರ ಬೆಳಿಗ್ಗೆ ೧೦ ಗಂಟೆಯಿಂದ ಸಾಯಂಕಾಲ ೫ ಗಂಟೆಯ ವರೆಗೆ ಕೂಡಿಗೆ ನ್ಯಮಸಾಯ ಕ್ಷೇತ್ರದಲ್ಲಿ ಕೊಡಗು ಚೇಂಬರ್ ಕಮರ್ಸ್ ಮತ್ತು ಕೃಷಿಕ ಸಮಾಜದ ಕಛೇರಿಯಲ್ಲಿ ಜರಗುವುದು. ಈ ದಿನಾಚರಣೆಯ ದಿನ ಎಲ್ಲಾ ತರದ ಬೆಳೆಗಳ, ತರಕಾರಿ ಮತ್ತು ಹಣ್ಣು ಹಂಪಲುಗಳ ಪ್ರದರ್ಶನವೂ ಸಹ ನಡೆಯುವುದು.

ಜಾಲಹಳ್ಳಿಯಲ್ಲಿರುವ ಕೊಡವರು ತಾ. ೯-೯-೫೧ ರಲ್ಲಿ ಹೇಸರಂಗಟ್ಟೆ ಎಂಬಲ್ಲಿ ಕೈಲ್ ಮುಹೂರ್ತ ಹಬ್ಬವನ್ನು ಆಚರಿಸಿ, ಆಟೋಟಗಳ ಸ್ಪರ್ಧೆ ನಡೆಸಿ, ಸಂತ್ತಲಿನ ಬಡ ಬಗ್ಗರಿಗೆ ಅನ್ನದಾನ ಮಾಡಿದರು. ನಂತರ ಶ್ರೀ. ಮಾಡೆರ ಐಯ್ಯಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ಬಹುಮಾನ ವಿತರಣೆ ಮತ್ತು ಭಾಷಣಗಳಾದವು.

ಮಂಗಳೂರಿನ ಕೊಡಗು ಸಂಘವು ಅಲೆನ್ ಫೆರ್ನಾಂಡಿಸ್ ಸ್ಮಾರಕ ಹಾಕಿ ಪಂದ್ಯಾಟವನ್ನು ಅಕ್ಟೋಬರ್ ಎರಡನೇ ವಾರದಲ್ಲಿ ನಡೆಸುವದೆಂದೂ ಕೊಡಗಿನಿಂದ ಟೀಮುಗಳನ್ನು ಆಹ್ವಾನಿಸಿರುವರೆಂದೂ ತಿಳಿಯಬಂದಿದೆ.

ತಾ. ೧೧-೯-೫೧ ರಲ್ಲಿ ಕಂಜಿಲಗೇರಿ ಗ್ರಾಮದ ಮಂಕ್ಕಾಟಿರ ಕುಟುಂಬಸ್ಥರು ಅಲ್ಲಿಯ ಭಗವತಿ ದೇವಸ್ಥಾನದಲ್ಲಿ ಶ್ರೀ. ಎಂ. ಗಣಪತಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಕೊಡಗಿಗೆ ಪ್ರಜಾಜವಾಬ್ದಾರಿ ಸರಕಾರ ದೊರೆತದಕ್ಕೆ ಕೇಂದ್ರ ಸರಕಾರವನ್ನು ವಂದಿಸುವ ಠರಾವು ಮಾಡಿದರು.

ಪೂನದ ಕೊಡವ ಸಭೆಯು ತಾ. ೨-೯-೫೧ ರಲ್ಲಿ ಗಣೇಶಕೆಂಡ್ ಎಂಬಲ್ಲಿ ಕೈಲ್‌ಪೊಳ್ದ್ ಹಬ್ಬವನ್ನು ಆಟೋಟ ಸ್ಪರ್ಧೆಗಳಿಂದ ಆಚರಿಸಿತು.

ತಾ. ೨೪-೯-೫೧ಕ್ಕೆ ಇಟ್ಟಿದ್ದ ಹಾತೂರಿನ ಶ್ರೀ ಎಜ್. ಬಿ. ಸಿದ್ದಯ್ಯನವರ ಬಟ್ಟೆನ ಹಾಕಿ ಪಂದ್ಯಾಟವು ತಾ. ೪-೧೦-೫೧ನೇ ಸೋಮವಾರದಿಂದ ಪ್ರಾರಂಭವಾಗುವುದೆಂದೂ, ಆದರ ಟ್ರೈಲ್ಸ್ ಡ್ರಾ ಮಾಡುವಿಕೆಯು ತಾ. ೩೦-೯-೫೧ ರಲ್ಲಿ ನಡೆಯುವದೆಂದೂ ತಿಳಿಯುತ್ತೇವೆ.

ವೀರಾಜಪೇಟೆ ಕೊಡವ ಸಮಾಜದ ವಾರ್ಷಿಕ ಮಹಾಸಭೆಯು ತಾ. ೩೦-೯-೫೧ನೇ ಆದಿತ್ಯವಾರ ದಿನ ಮಹಿಳಾ ಸಮಾಜದ ಕಟ್ಟಡದಲ್ಲಿ ನಡೆಯುತ್ತದೆ ಆಟ ಓಟಗಳ ಸ್ಪರ್ಧೆಯೂ ಊಟದ ವ್ಯವಸ್ಥೆಯೂ ಸಹ ಇದೆ.

ಸಂಯೋಜನಾ ಪಕ್ಷದೊಳಗೆ ಘರ್ಷಣೆ.

ತಾ. ೧೦-೯-೫೧ ರಲ್ಲಿ ಗೋಣಿಕೊಪ್ಪಲ್ಲಿ ಸಂಯೋಜನೆ ವಾರ್ಟಿಯವರು ನಡೆಸಿದ ವಿಚಾರಗಿನ ಸಾರಂಶ.

ಕಾರ್ಯಕ್ರಮವು ಪಟ್ಟಿಯ ನ್ನು ಅನುಸರಿಸಿ ಅಧ್ಯಕ್ಷರಾದ ಶ್ರೀ ಕೊಳ್ಳಿಮಾಡ ಕರುಂಬಯ್ಯನವರು ತಮ್ಮ ಸ್ವಾಗತ ಭಾಷಣ ಮಾಡಿ ಶ್ರೀ. ಸಿ. ಎಂ. ಪೂಣಚ್ಚನವರು ಪಾರ್ಲಿಮೆಂಟಿನಲ್ಲಿಯ ಕಾರ್ಯಕಲಾಪಗಳನ್ನು ವಿವರಿಸುವಂತೆ ಕೇಳಿಕೊಂಡರು.

ಶ್ರೀ. ಪೂಣಚ್ಚನವರು ಹಿಂದೂಸ್ಥಾನದಲ್ಲಿ ಕಂಪನಿ ಸರಕಾರವು ಸ್ಥಾಪಿತವಾದಲ್ಲಿಂದ ೧೯೪೭ರ ವರೆಗೆ ದೇಶದಲ್ಲಿ ನಡೆದ ವಿಷಯಗಳನ್ನೂ, ನಂತರ ಸ್ವಾತಂತ್ರ್ಯ ದೊರೆಯಲು ಮಾಡಿದ ಸಹಾಯಕಾರ್ಯಗಳನ್ನೂ ವಿವರಿಸಿದರು. ದೊಡ್ಡ ರಾಜ್ಯಗಳಿಗೆ ಸುಧಾರಣೆ ದೊರಕಿದರೂ ಸಿ. ಸ್ಟೇಟ್‌ಗಳಿಗೆ ನಿಕ್ಕಾಸು ಕಾರಣ ಅಧಿಕ ಪ್ರತಿನಿಧಿಗಳು ಹೋರಾಡಿದುದರ ವಿಷಯ ಒಂದು ಕಾಲುಗಂಟೆ ವರೆಗೆ ವಿವರಿಸಿದರು. ಸಿ. ಸ್ಟೇಟ್‌ಗಳನ್ನಲ್ಲನ ಕಾಂಗ್ರೆಸಿಗರು ಹೋರಾಟದಿಂದ ಕೊಡಗಿಗೆ ಪ್ರಜಾಜವಾಬ್ದಾರಿ ಸರಕಾರ ದೊರಕಿದೆ. ಕೊಡಗಿನ ಕಾಂಗ್ರೆಸಿಗರು ಇನ್ನು ಮುಂದೆ ಏನು ಮಾಡಬೇಕೆಂದು ನಿರ್ಧರಿಸಬೇಕಾಗಿದೆ. ಕಾಂಗ್ರೆಸು ಕೊಟ್ಟಂತ ಈ ಸರಕಾರವನ್ನು ಜಯಪ್ರದವಾಗಿ ನಡೆಸಲು ಪ್ರತಿ ಕ್ಷೇತ್ರದಲ್ಲಿಯೂ ಕೊಡಗ ಕಾಂಗ್ರೆಸಿನ ಹುರಿಯಾಳನ್ನು ನಿಲ್ಲಿಸಿ ಜಯಪಡೆದು ಅಡಳಿತವನ್ನು ಸುಗಮವಾಗಿ ನಡಿಸಬೇಕಾಗಿದೆಯೆಂದು ವಿವರಿಸಿದರು.

ಈ ಸಮಯದಲ್ಲಿ ಶ್ರೀಗಳಾದ ಕೆ. ಮಲ್ಲಪ್ಪನವರು, ಎನ್. ಸೋಮಣ್ಣನವರು, ಸಿ. ಮಂದಣ್ಣನವರು ಇವರ ಮೂರು ನಾಲ್ಕು ಸ್ನೇಹಿತರೊಡನೆ ಸಭೆಗೆ ದಯಮಾಡಿಸಿದರು.

ನೆಹರು ಸರಕಾರದ ಮೇಲೆ ಈ ಸಭೆಗೆ ಪೂರ್ಣ ವಿಶ್ವಾಸವಿದೆ ಎಂಬ ಠರಾವು ಸರ್ವಸಮ್ಮತದಿಂದ ಮಂಜೂರಾಯಿತು.

ಮುಂಬರುವ ಜನಾವಣೆಗೆ ಕೊಡಗಿನ ಕಾಂಗ್ರೆಸು ಪರ ಉಮೇದುವಾರರ ಅರ್ಜಿಯನ್ನು ಕೊಡಲು ಕ್ಷೇತ್ರ ನಿರ್ಣಯವಾಗದ್ದರಿಂದ ಇನ್ನೂ ಹೆಚ್ಚಿನ ಸಮಯವನ್ನು ಕೊಡಬೇಕೆಂದು ಎ. ಜಿ. ಸಿ ಸಿಯನ್ನು ಕೆ. ಪಿ. ಸಿ. ಸಿ. ಯ ಮೂಲಕ ಕೇಳಿಕೊಳ್ಳಬೇಕೆಂದು ಠರಾವು ಮಂಜೂರಾಯಿತು.

ಕೊಡಗಿಗೆ ಪ್ರಜಾ ಜವಾಬ್ದಾರಿ ಸರಕಾರ ಕೊಟ್ಟ ಇಂಡಿಯಾ ಸರಕಾರಕ್ಕೆ ಈ ಸಭೆಯು ವಂದನೆಯನ್ನು ಅರ್ಪಿಸತಕ್ಕದೆ ಎಂಬ ಠರಾವನ್ನು ಅಧ್ಯಕ್ಷರು ಸೂಚಿಸಿದರು. ಮೇ. ಪೂಣಚ್ಚನವರು ಅನುಮೋದಿಸಿದರು.

ಡಾ. ನಂಜುಂಡೇಶ್ವರರವರು ಈ ಠರಾವನ್ನು ವಿರೋಧಿಸುತ್ತಾ ಮಾತಾಡಿದುದರ ಸಾರಾಂಶ:-ಆದಿಯಿಂದಲೂ ನಾವೆಲ್ಲರೂ ಸಂಯೋಜನಾದಿಗಳು. ಆದಕ್ಕಾಗಿಯೇ ದೇಶದಲ್ಲಿ ಮತ್ರವಲ್ಲದೆ ಜಿಲ್ಲೆಯ ವರೆಗೆ ಹೋರಾಡಿದ್ದೇವೆ. ನಾವು ಕೇಳಿದ್ದೇನು? ದೊರೆತಿದ್ದೇನು? ಕೇಳಿದ್ದನ್ನು ಕೇಂದ್ರ ಸರಕಾರವು ಕೊಡಲಿಲ್ಲ. ಬೇಡದ್ದನ್ನು ಕೊಟ್ಟಿದೆ. ಕೊಟ್ಟರುವುದಾದರೂ 'ಎ' ಸ್ಟೇಟ್ಸ್‌ಗಳ ಸುಧಾರಣೆಗೆ ಸರಿಯೂ ಗಿರುವುದಿಲ್ಲ. ಇಂಥಾ ದ್ದನ್ನು ಕೊಟ್ಟದ್ದಕ್ಕೆ ವಂದಿಸುವದೇ? ಕೊಟ್ಟದ್ದಾರೂ ಏನು? ಸೊಗಸಾದಬಂಡಿ, ಬಂಡಿಯನ್ನು ಎಳೆಯುವ ಕುದುರೆಯೂದ ರೋ ಕುಂಟು. ಇಂಥಾ ಕುಂಟು ಕುದುರೆಯು ಸೊಗಸಾದ ಬಂಡಿಯನ್ನು ಎಳೆಯುವುದು ಹೇಗೆ? ಪ್ರತ್ಯೇಕವಾದಿಗಳು ರಸ್ತೆಯ ಬಾಜನಲ್ಲಿ ನಂತೆ ಮೊದಲ್ಲಿ ನಾಲ್ಕೂರು ಜನರು ಇರುವಲ್ಲಿ ವಂದನೆಗಳನ್ನು ಅರ್ಪಿಸುತ್ತಾ ಹೋಗಿರುತ್ತಾರೆ. ಹೀಗೆ ಅರ್ಪಿಸುವಾಗ ಶನಿವಾರಸಂತೆಯಲ್ಲಿ ಸಂಯೋಜನಾವಾದಿಯೂದ ಶ್ರೀ ಮೂರ್ತಿಯವರು ವಿರೋಧಿಸಿದ್ದಾರೆ ಅದೇ ಪ್ರಾಂತಿಯವರು ಈ ಸಭೆಯಲ್ಲಿದ್ದಾರೆ. ಅವರ ಮಂದೆ ಇಂಥಾ ವಂದನೆಗಳನ್ನು ಅರ್ಪಿಸಿದರೆ ಅವರಿಗೆ ಅವಮಾರ್ಯಾದೆ ಮಾಡಿದಂತೆ ಆಗುವುದಿಲ್ಲವೇ ಎಂದರು.

ಈ ಮಾತುಗಳನ್ನು ಅನ ಸೋದಿಸುತ್ತಾ ಡಾ. ಅಶ್ರಣನವರು ಈ ರೀತಿ ಹೇಳಿದರು. ಕರ್ನಾಟಕವು ವಿಶೀಕರಣಕ್ಕಾಗಿ ಮೊದಲಿನಿಂದಲೇ ಹೆಣಗಾಡುತ್ತಿದ್ದೆವು. ಆ ಹೋರಾಟದ ಗರಿಮೆನ್ನು ನಾವಿನ್ನೂ ವರೆಗೆ ಸುಮ್ಮನಿರಲು ಸಾಧ್ಯವಿಲ್ಲ. ಕೊಡಗಿನ ಆರ್ಥಿಕ ಸ್ಥಿತಿಯು ತೃಪ್ತಿಕರವಲ್ಲ. ಬಜೆಟ್ಟಿನಲ್ಲಿ ತೋರಿಸಿದ ಹಣವನ್ನು ಖರ್ಚು ಮಾಡಿದೆ ಇದ್ದದರಿಂದ ಸ್ವಲ್ಪ ಉಳಿಕೆಯು ಕಂಡುಬರುತ್ತದೆ. ಈ ಉಳಿಕೆಯು ಒಂದೆರಡು ವರ್ಷಗಳಲ್ಲಿ ಖರ್ಚಾಗಬಹುದು. ನಂತರ ಬಡವರ ಮೇಲೆ ಹೆಚ್ಚಿನ ಕಂದಾಯ ಹೇರದೆ ಬಜೆಟ್ಟನ್ನು ಸಮತ್ಟಲು ಸಾಧ್ಯವಿಲ್ಲ. ನಾಳೆ ನಡಿದಾಗಿ ಕರ್ನಾಟಕದೊಳಗೆ ಸೇರಲೇಬೇಕ. ಇಂಥಾ ಸ್ಥಿತಿಯಲ್ಲಿರುವ ಕೊಡಗಿಗೆ ಜವಾಬ್ದಾರಿ ಸರಕಾರ ಕೊಟ್ಟುದಕ್ಕೆ ಆರ್ಥವಿಲ್ಲ. ಆದ್ದರಿಂದ ಠರಾವನ್ನು ವಿರೋಧಿಸುತ್ತೇನೆ. ಅಲ್ಲದೆ ಇನ್ನೂ ಒಂದೆರಡು ವಿಷಯ ಹೇಳಬಯಸುತ್ತೇನೆ.

ಈ ಠರಾವಿನ ವಿಷಯ ಚರ್ಚೆ ಆದ ನಂತರ ಆ ವಿಷಯಗಳನ್ನು ಹೇಳಲು ಅನುಮತಿ ಕೊಡುತ್ತೇನೆಂದು ಅಧ್ಯಕ್ಷರು ಅಂದರು.

ಮೇ. ಮಲ್ಲಪ್ಪನವರು ವಿರೋಧಿಸಿದುದರ ತಾತ್ಪರ್ಯ:-ಇಂಡಿಯಾ ಸರಕಾರಕ್ಕೆ ವಂದನೆಯನ್ನು ಅರ್ಪಿಸತಕ್ಕ ವಿಷಯವನ್ನು ಕಾರ್ಯಕ್ರಮ ಪಟ್ಟಿಯಲ್ಲಿಟ್ಟುದೇ ಸರಿಯಿಲ್ಲ. ಮತ್ತೂ ಆರ್ಥವೂ ಇಲ್ಲ. ಇಂಡಿಯಾ ಸರಕಾರವು ನಮಗೆ ಏನನ್ನೂ ಕೊಟ್ಟಿರುವುದಿಲ್ಲ ಏನೂ ಕೊಡದೆ ಇರುವ ಸರಕಾರವನ್ನು ವಂದಿಸುವುದು ಏಕೆ? ಕೊಡಗಿಗೆ ಜವಾಬ್ದಾರಿ ಸರಕಾರ ಕೊಟ್ಟದ್ದು ಪಾರ್ಲಿಮೆಂಟು. ಪಾರ್ಲಿಮೆಂಟಿಗೆ ವಂದಿಸುವುದರಲ್ಲಿ ಸ್ವಲ್ಪ ಆರ್ಥವಿದೆ. ಆದ್ದರಿಂದ ಈ ವಿಷಯವನ್ನು ಕಾರ್ಯಕ್ರಮ ಪಟ್ಟಿಯಿಂದ ವಜ ಮಾಡಬೇಕೆಂದು ನಾನು ಸೂಚಿಸುತ್ತೇನೆ.

ಮೇಲಿನ ಮೂವರಲ್ಲದೆ ಶ್ರೀಗಳಾದ ಎನ್. ಸೋಮಂಣ, ಕೃಷ್ಣಮೂರ್ತಿ, ಸಿ. ನಂಜಪ್ಪ ಮತ್ತು ಗೋಪಾಲದಾಸರು ಸಹ ಠರಾವನ್ನು ವಿರೋಧಿಸಿ ಮಾತಾಡಿದರು. ವಂದನೆಯನ್ನು ಅರ್ಪಿಸಲೇ ಬೇಕೆಂದು ಮೇಗಳಾದ ಕೊಂಗಾಂಡ ಗಣಪತಿಯವರು, ಮೊಡಿಮಾಡ ನಂಜುಂಡನವರು ಮತ್ತು ತತ್ತಮಯಂಗಡ ತಿಮ್ಮಯ್ಯನವರೆಂದರು.

ಸರಕಾರವೆಂದರೆ ಪಾರ್ಲಿಮೆಂಟು. ಪಾರ್ಲಿಮೆಂಟು ಅಂದರೆ ಸರಕಾರ. ಒಂದಕ್ಕೊಂದಕ್ಕೆ ಭೇಧವಿಲ್ಲ. ಇಂಡಿಯಾ ಸರಕಾರವೇ ನಮಗೆ ಜವಾಬ್ದಾರಿ ಸರಕಾರ ಕೊಟ್ಟದ್ದಾಗಿದೆ. ಶ್ರೀ. ನಂಜುಂಡೇಶ್ವರನವರು ಮತ್ತು ಡಾ ಆಶ್ರಣರವರು ವಿರೋಧಿಸುವದರ ಆರ್ಥವನ್ನಗಾಗುವುದಿಲ್ಲ. ಅವರ ಗುರಿಯು ಏನಿದೆಯೋ ನಾನು ಹೇಳಲಾರೆ. ಹೇಗೂ ಎಲ್ಲರೂ ಸಮಧಾನ ತೆಗೆದುಕೊಂಡು ಈ ಠರಾವನ್ನು

ಮಂಜೂರು ಮಾಡಬೇಕೆಂದು ಶ್ರೀ. ಪೂಣಚ್ಚನವರು ಕೇಳಿಕೊಂಡರು.

ವಿರೋಧ ಮಾಡಿದವರು ಶ್ರೀ. ಪೂಣಚ್ಚನವರ ಸಮೂಹಾನದ ಮಾತಿಗೆ ಒಪ್ಪಲಿಲ್ಲ ಇಂಥ ಬಿಕ್ಕಟ್ಟಿನ ಸಮಯದಲ್ಲಿ ಮೆ ಎನ್. ಸೋಮಣ್ಣನವರು ಈ ಕೆಳಗಿನ ಠರಾವನ್ನು ಸಭೆಯು ಮುಂದಿಟ್ಟರು. "ಬೇಜವಾಬ್ದಾರಿ ಸರಕಾರವನ್ನು ತೆಗೆದು ಹಾಕಿ ಜವಾಬ್ದಾರಿ ಸರಕಾರವನ್ನು ಕೊಟ್ಟದ್ದರು ಉದ್ಧಾರ್ಥ ಇಂಡಿಯಾ ಪಾರ್ಲಿಮೆಂಟಿಗೂ, ಶ್ರೀ ಚೆಪ್ಪುಡೀರ ಪೂಣಚ್ಚನವರಿಗೂ ವಂದನೆಯನ್ನು ಈ ಸಭೆಯು ಅರ್ಪಿಸುತ್ತದೆ" ಈ ಠರಾವು ಸರ್ವಸಮ್ಮತದಿಂದ ಪಾಸಾಯಿತು.

ಕೊಡಗಿಗೆ ಜವಾಬ್ದಾರಿ ಸರಕಾರ ದೊರೆತದ್ದಕ್ಕಾಗಿ ತತ್ಕಾಲ ದೊಡ್ಡ ಪ್ರಮಾಣದಲ್ಲಿ ಸಂತೋಷ ಸೂಚಕವಾಗಿ ಏನಾದರೂ ಮಾಡಬೇಕೆಂದು ಶ್ರೀ. ಸೋಮಣ್ಣನವರು ಸೂಚಿಸಿದರು.

ಯಾವಾಗ ಈ ವಿಷಯವನ್ನು ತೆಗೆದುಕೊಳ್ಳುವುದು ಎಂದು ಹೇಳಬೇಕು. ಆಲ್ಲವೆ ಇದನ್ನು ರಿಕಾರ್ಡಾಗಿ ಮಾಡಬೇಕೆಂದು ಡಾ. ಆರ್ಯಣ್ಣನವರು ಕೇಳಿಕೊಂಡರು.

ಚುನಾವಣೆಯು ಪ್ರಸಿದ್ಧ ಪತ್ರಿಕೆಯಲ್ಲಿ ನಮ್ಮ ಗುರಿಯನ್ನು ನಮೂದಿಸಿ, ಮತದಾರರಿಗೆ ತಿಳಿಸುವುದು ಎಂಬ ಠರಾವನ್ನು ಡಾ. ಆರ್ಯಣ್ಣನವರು ತಂದರು.

ಚುನಾವಣೆಗೆ ಈ ಠರಾವು ತೊಂದರೆಯನ್ನು ತರುವುದಲ್ಲದೆ ಈ ಪಂಗಡಕ್ಕೆ ಕಷ್ಟವಾದೀತು. ಆದ್ದರಿಂದ ನಮ್ಮ ಹಿತದೃಷ್ಟಿಯಿಂದ ಇದನ್ನು ಡಾಕ್ಟರರವರು ವಾಪಾಸು ತೆಗೆದುಕೊಳ್ಳಬೇಕೆಂದು ಶ್ರೀ. ಸೋಮಣ್ಣನವರು ಮತ್ತು ಕೆಲವರು ಕೇಳಿಕೊಂಡ ಮೇರೆ ವಾಪಾಸು ತೆಗೆದುಕೊಂಡರು.

ಕೊಡಗಿನಲ್ಲಿರುವ ಎರಡು ಪಂಗಡದವರನ್ನು ಒಂದುಗೂಡಿಸಲು ಒಂದು ಉಪಕಮಿಟಿಯನ್ನು ನೇಮಿಸಬೇಕು ಎಂಬ ಠರಾವನ್ನು ಡಾ. ಆರ್ಯಣ್ಣನವರು ತಂದರು.

ಈ ರಾಜಿಯು ಮಾತು ನಡೆಯೆನ್ನುವುದಿಲ್ಲ. ಶ್ರೀ. ಪಂಜ್ಯಂಡ ಬೆಳ್ಯಪ್ಪನವರು ಈ ದೇಶವನ್ನು ಸೂರ್ಯ ಚಂದ್ರರು ಇರುವವರೆಗೆ ಪ್ರತ್ಯೇಕವಾಗಿ ಇಡಬೇಕೆನ್ನುವವರು. ನಾವಾದರೋ ಸಮಯಪರಿತು ಸಂಯೋಜನೆ ಮಾಡಬೇಕೆನ್ನುವವರು. ಹೀಗಿರುವಲ್ಲಿ ರಾಜಿಯಾಗುವುದು ಹೇಗೆ? ಇದು ಕೃಷ್ಣ ಸಂಧಾನವಾಗುವುದು ಖಂಡಿತವೆಂದು ವಿವರಿಸಿದ ನಂತರ ವಾಪಾಸು ತೆಗೆದುಕೊಂಡರು.

ಮಾರುವರೆಗಂಟೆ ಮಾದುದರಿಂದ ಎಲ್ಲರೂ ಊಟಕ್ಕೆ ಎದ್ದರು. ಊಟಕ್ಕೆ ನಿಳುವ ಮೊದಲು ಅಧ್ಯಕ್ಷರು ಕಾಂಗ್ರೆಸಿನವರ ಚಂದಾವನ್ನು ಡಿಸೆಂಬರು ಒಳಗೆ ಕೊಡಬೇಕು. ಉಮೇದುವಾರರು ಈಗಲೇ ಕೊಡಬೇಕೆಂದು ಕೇಳಿಕೊಂಡರು.

ಊಟವಾದ ನಂತರ ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯವರ ಸಭೆ ಸೇರಿ ಉಮೇದುವಾರರನ್ನು ಕ್ಷೇತ್ರಕ್ಕನುಗುಣವಾಗಿ ನೇಮಿಸಿದರು.

ಹಾಜರಿದ್ದವ.

ಓದುಗರ ಓಲೆಗಳು

ಕೊಡಗಿನ ವ್ಯವಸಾಯ ಇಲಾಖೆಯವರಿಗೆ.

ನೀವು ಕೊಡಗಿನ ಜನರ ತಿಳುವಳಿಕೆಗಳ್ಗೆ ಕೊಯಮುತ್ತೂರು ಒಬ್ಬ ವ್ಯವಸಾಯಗಾರರ ಜಮೀ ಖರ್ಚಿನ ವಿಷಯವಾಗಿಯೂ, ಮತ್ತು ಭತ್ತ ಬೆಳೆಸಿದ ವಿಷಯವಾಗಿಯೂ ಪ್ರಕಟಿಸಿದ್ದು ಸರಿ. ಒಂದು ಎಕ್ರೆ ಭೂಮಿಗೆ ೬ ಗಾಡಿ ಭತ್ತ ಬೆಳೆಸಿದ್ದಾರೆಂದೂ ಅದರಿಂದ ನಿವ್ವಳ ಲಾಭ ಇಷ್ಟೆಂದೂ ಬರೆದದ್ದು ಸರಿ. ಆದರೆ ಈ ಕೆಳಗಿ ಪ್ರಶ್ನೆಗೆ ದಯಮಾಡಿ ಜವಾಬುಕೊಡಿ. ಅವರಿಗೆ ಎಷ್ಟು ಭೂಮಿ ಇರುವುದು? ನಾಲೆಪೈಲೋ ಮಳೆನೀರಿನಿಂದ ಬೆಳೆದದ್ದೋ? ಈ ಭತ್ತ ಬೆಳೆಸಿದ್ದು ಒಂದೇ ಬೆಳೆ ಬೆಳೆಸಿಯೋ, ಅಲ್ಲ—ಸಿ ಬೆಳೆಯಿಂದಲೋ? ಎಡನೆಯದಾಗಿ ನೀವು ನಿಮ್ಮ ಸಿಬ್ಬಂದಿಯನ್ನು ಇಟ್ಟುಕೊಂಡು ಕೊಡಗಿನಲ್ಲಿ ಎಷ್ಟು ವರ್ಷದಿಂದ ವ್ಯವಸಾಯ ಮಾಡುತಿದ್ದೀರಿ? ನಿಮಗೆ ಎಕ್ರೆಗೆ ಖರ್ಚೆಷ್ಟು? ಖರ್ಚು ಸೇರಿಸುವಾಗ ನಿಮ್ಮ ಡೈರೆಗಳ ಮೊದಲಾದ ಆಫೀಸರುಗಳ ಎಲ್ಲಾ ಖರ್ಚು ಸೇರಿಸಬೇಕು. ನೀವು ೧ ಎಕ್ರೆಗೆ ಸರಾಸರಿ ಬೆಳೆಸಿದ ಬೆಳೆ ಎಷ್ಟು? ಒಳ್ಳೆ ಜಮೀನಿರುವ ಒಬ್ಬ ರೈತನು ಬೆಳೆಸಿದ ಬೆಳೆ ಎಷ್ಟು? ನೀವು ಆಗ ಪೊನ್ನಂಪೇಟೆಯಲ್ಲಿಟ್ಟು ಖರ್ಚು ಮಾಡಿದ ಹಣ ಎಷ್ಟು? ನೀವು ಮಾಡುವ ಆರಂಭದ ಏಕ್ರೆ ಎಷ್ಟು, ನಿಮ್ಮ ಸಿಬ್ಬಂದಿ ಎಷ್ಟು? ನಿಮಗೆ ವ್ಯವಸಾಯಕ್ಕೆ ಇರುವ ಸೌಕರ್ಯ, ನೀರು ಸೇದಲಿಕ್ಕೆ ಇಂಜಿನು, ಗೊಬ್ಬರ, ಆಳು ಇದೆಲ್ಲಾ ಇದ್ದರೂ ನಿಮ್ಮ ಆದಂಬ ಆಗದೆ ಇರಲಿಕ್ಕೆ ಕಾರಣ ಏನು?

ಡಿ. ಪಿ. ಬಿದ್ದಯ್ಯ.

ಹರಿಜನ ಉಮೇದಾರರು.

ಮಂಜರುವ ಮಹಾ ಚುನಾವಣೆಗೆ ಕೊಡಗಿನಲ್ಲಿ ಹಿಂದುಳಿದವರಿಗೆಂದು ಆರು ಸ್ಥಳಗಳನ್ನು ಕೊಡಲಾಗಿದೆ ಎಂದು ತಿಳಿದೆನು ಆದರೆ ಕೊಡಗಿನಲ್ಲಿ ಹಿಂದುಳಿದವರಲ್ಲಿ ವಿದ್ಯಾವಂತರು ಕಡಿಮೆ ನಿಜ. ಆದರೆ ಏದು ಅಧವಾ ಎಸೇ ಕ್ಲಾಸನ್ನು ಓದಿದವರನ್ನೂ ಓದುಬಾಹ ಏನೂ ಗೊತ್ತಿಲ್ಲದ ಬರೇ ಒಂದು ಸೈನು ಹಾಕುವವರನ್ನೂ ಉಮೇದ್ವಾರಿಕೆಗೆ ನಿಲ್ಲಿಸುವ ವಾರ್ತೆ ಕೇಳಿದ್ದೇನೆ. ಹಿಂದುಳಿದ ಪಂಗಡದಲ್ಲಿ ಇದಕ್ಕಿಂತಾ ವಿದ್ಯಾವಂತರೂ ಯೋಗ್ಯರೂ ಬೊರೆಯಿತ್ತಾರೆ. ನಿಜವಾಗಿಯೂ ತಮ್ಮ ಸಮೂಹವು ಮುಂದೆ ಬರಬೇಕಾದರೆ ನಾವು ಆರಿಸುವ ವ್ಯಕ್ತಿಯು ಶ್ರುವಹಿಸಿ ಕೆಲಸ ನೂಡಬೇಕು? ಮೇಲೆ ಹೇಳಿದ ಉಮೇದ್ವಾರರು ಏನುಮಾಡಿಯಾರು? ಸರಕಾರದ ಹೇಳಿಕೆಗಳನ್ನೂ ಶಾಸನ ಸಭೆಯ ಕಾರ್ಯಕಲಾಪಗಳನ್ನೂ ತಿಳಿದುಕೊಳ್ಳವದೇ ಕಷ್ಟ. ಆದುದರಿಂದ ಕೊಡಗಿನ ಮಹಾಶಯರಲ್ಲಿಯೂ ಮತ್ತು ಹರಿಜನ ಬಂಧುಗಳಲ್ಲಿಯೂ ನಾನು ಕೇಳಿಕೊಳ್ಳುವುದೇನೆಂದರೆ ಕೇವಲ ಹಿಂದುಳಿದವರಲ್ಲಿ ಉಮೇದಾರನಾಗಿ ಬರುವಂತ ವ್ಯಕ್ತಿಯು, ಕಡಿಮೆ ಪಕ್ಷ ಎಂಟನೆ ತರಗತಿಯ ವರೆಗಾದರೂ ಓದಿರುವಂತೆ ನೋಡಬೇಕು. ಹಾಗೆ ಮಾಡದಿದ್ದರೆ ಪ್ರಯೋಜನವಿಲ್ಲ. ಉದಾಹರಣೆಗೆ ಮಡಿಕೇರಿಯ ಮುನಿಸಿಪಾಲಿಟಿ ಕೌನ್ಸಿಲಿಗೆ ಒಬ್ಬ ಹರಿಜನ ವ್ಯಕ್ತಿಯನ್ನು ಆರಿಸಿರುವರೆಂದು ತಿಳಿದೆ ಆ ವ್ಯಕ್ತಿಯು ಇದುವರೆಗೆ ಹರಿಜನರಿಗೆ ಬೇಕಾದ ಠರಾವನ್ನಾಗಲೀ ಯಾ ಯಾವ ಒಂದು ಮಾತನ್ನಾಗಲೀ ಆ ಸಭೆಯಲ್ಲಿ ಆಡಿರುವರೆ? ಅಥವಾ ಕೌನ್ಸಿಲ್ ಮೀಟಿಂಗಿಗೆ ಸಮಯಕ್ಕೆ ಸರಿಯಾಗಿ ಹಾಜರಿರುವರೇ? ಇದೇ ರೀತಿಯಲ್ಲಿ ನಮ್ಮ ರಾಜಸಭೆಗೆ ಆರಿಸಿಬರುವ ಉಮೇದ್ವಾರರು ಆದರೆ ಬಳಿತ ವರ್ಗದವರಿಗೆಂದು ಕೂಟ್ಟಸೀಟಿನಿಂದ ಪ್ರಯೋಜನವೇನು? ಆದುದರಿಂದ ಮುಂಬರುವ ಚುನಾವಣೆಯಲ್ಲಿ ವಿದ್ಯಾವಂತರೂ, ಸಂಗಣಶೀಲವಂತರೂ, ದಕ್ಷರೂ ಆದವರನ್ನು ಸೂಕ್ಷ್ಮ ಉಮೇದುವಾರರಾಗಿ ಆಂಶಯೇ ಕಾಗಿ ಕೇಳಿಕೊಳ್ಳುತ್ತೇನೆ.

ಹೆಚ್. ಪಿ. ಕಾಳಪ್ಪ.

ಕೊಡಗು ಜೀಫ್ ಕಮಿಷನರವರಲ್ಲಿ ವಿನಂತಿ.

ಮುಂಬರುವ ಜಿ.ನಾ.ಚುನಾವಣೆಗೆ ವಿಧ್ಯುಕ್ತವಾಗಿರುವ ಪೋಲಿಂಗ್ ಸ್ಟೇಷನ್ ಪಟ್ಟಿಯನ್ನು ನೋಡಿದೆನು. ಆದರಲ್ಲಿರುವಂತೆ ಕುಂದ, ಈಚೂರು ಗ್ರಾಮಗಳ ಓಟರುಗಳು ಹಾತೂರಿಗೆ ಓಟು ನೂಡಲಿಕ್ಕೆ ಹೋಗುವಂತೆ ವಿಧಿಸಿದೆ. ಇದು ಆ ಗ್ರಾಮದ ಓಟರುಗಳಿಗೆ ತೀರಾ ಅನಾನುಕೂಲವಾಗಿದೆ. ಈಚೂರು ಮತ್ತು ಮುಗುಟಗೇರಿ ಗ್ರಾಮಗಳ ಒಂದು ಮೂಲೆಯಿಂದ ಐದು ಮೈಲಿ ಹೋಗಿ ಓಟು ಮಾಡಲು ಅಲ್ಲಿನ ಹೆಂಗಸರು ಮತ್ತು ಮುದುಕರಿಗೆ ಪೂರಾ ತೊಂದರೆಯಾಗುತ್ತದೆ. ಕುಂದ ಸ್ಕೂಲನ್ನು ಮೈಲಿನ ಗ್ರಾಮಗಳಿಗೆ ಒಂದು ಬತ್ತ ಸೆಂಟರಾಗಿ ಸರ್ಕಾರದವರು ಮಾಡಿದ್ದಾರೆ. ಹಾಗೆಯೇ ಕುಂದಾ ಶಾಲೆಯನ್ನು ಒಂದು ಪೋಲಿಂಗ್ ಸ್ಟೇಷನಾಗಿ ಮಾಡಬೇಕಾಗಿ ಜೀಫ್ ಕಮೀಷನರಲ್ಲಿ ವಿನಂತಿಸುತ್ತೇನೆ.

ಕುಂದಾ ಗ್ರಾಮದವರು.

ಕೊಡಗಿನ ಸಂಯೋಜನಾವಾದಿಗಳಿಗೆ ಒಂದು ಸಲಹೆ

ಕೊಡಗಿನ ಜನರು ಭಾರತದ ಸ್ವತಂತ್ರ ರಂಗ್ರಾಮದಲ್ಲಿ ತಮ್ಮ ಹದ್ದು ಮೀರಿ ಸೇವೆಯನ್ನು ಸಲ್ಲಿಸಿದ್ದಾರು ನಮಗೆಲ್ಲರಿಗೂ ತಿಳಿದ ವಿಷಯವೇ ಆಗಿದೆ. ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿದ ಮೇಲೂ ಸಹ ಕಳೆದ ನಾಲ್ಕು ವರ್ಷಗಳಿಂದ ಕೊಡಗನ್ನು ಪ್ರತ್ಯೇಕವಾಗಿಟ್ಟುಕೊಳ್ಳಬೇಕೆಂದು ಮಾಡಿದ ಸಾಹಸವು ಒಂದುತರದಲ್ಲಿ ಪ್ರತ್ಯೇಕವಾದಿಗಳ ಅಹಿಂಸಾ ತತ್ವದ ಸಂಗ್ರಾಮವೇ ಆಗಿತ್ತು. ಹಾಗೂ ಹೀಗೂ ಕೊಡಗಿಗೆ ಪ್ರಜಾ ಜವಾಬ್ದಾರಿ ಸರ್ಕಾರವು ಕೊಡಲ್ಪಡುವುದೆಂದು ಮೊನ್ನೆ ತಾನೇ ಭಾರತದ ಅಧಿಕಾರ ವರ್ಗದ ಹಾಗೂ ಪಾರ್ಲಿಮೆಂಟಿನವರು ನಿರ್ಧರಿಸಿರುವುದು ಸ್ತುತ್ಯರ್ಹವಾಗಿದೆ. ಕೊಡಗಿನ ಸಂಯೋಜನಾವಾದಿಗಳು ಕೊಡಗು ಕೌನ್ಸಿಲಿನ ಹೊರಗೂ ಒಳಗೂ ಮತ್ತು ದಿ. ಸರ್ದಾರ್ ಪಟೇಲರ ಲ್ಲಿಯೂ ಸಹ ಎಸ್ಟೇ ಮೊರೆಯಿಟ್ಟರೂ, ಅವರ ಪ್ರಯತ್ನಗಳು ನಿಷ್ಫಲವಾದುದು ಕೊಡಗಿನ ಮತ್ತು ಕಾವೇರಿ ಮತ್ತೆಯ ಮತ್ತು ಕೊಡಗಿನ ಜನರ ಭಾಗ್ಯವೇ ಸರಿ.

ಸಂಯೋಜನಾವಾದಿಗಳು ತಮ್ಮ ಫಲವನ್ನು ಬಿಡದಿರಲಿ. ಆದರೆ ಮುಂದಿನ ಚುನಾವಣೆಯಲ್ಲಿ ಪ್ರತ್ಯೇಕವಾದಿಗಳಿಗೆ ಸ್ಥಳ ಬಿಟ್ಟು ಕೊಟ್ಟು, ಮುಂದಿನ ಐದು ವರ್ಷಗಳಲ್ಲಿ ಪ್ರತ್ಯೇಕವಾದಿಗಳಿಂದ ಸಾಧಿಸಲ್ಪಡಬಹುದಾದ ಆರ್ಥಿಕ, ನೈತಿಕ ಮತ್ತು ವ್ಯವಹಾರಿಕ ಅಭಿವೃದ್ಧಿಗಳನ್ನು ಮನಗಂಡು ಅವುಗಳಲ್ಲಿ ತೊಡಗಿರುವ ಜನತೆಗೆ ಹೆಚ್ಚು ಪ್ರಯೋಜನಗಳು ಲಭಿಸುವವೋ ಎಂಬುದನ್ನು ನೀವು ನೋಡಿ, ಪ್ರತ್ಯೇಕವಾದಿಗಳ ಲೋಪದೋಷಗಳನ್ನು ಕೊಡಗಿನ ಜನತೆಗೆ ಎತ್ತಿ ತೋರಿಸಿ ಕೊಡಗನ್ನು ಮುಂದಕ್ಕೆ ಪ್ರತ್ಯೇಕವಾಗಿಟ್ಟುಕೊಳ್ಳಲು ಸಾಧ್ಯವಿದೆಯೋ ಇಲ್ಲವೋ ಎಂಬುದನ್ನು ನೀವೂ ನಿಶ್ಚಯಿಸುವುದು ಸದ್ಯದ ಪರಿಸ್ಥಿತಿಯಲ್ಲಿ ಸಂಯೋಜನಾವಾದಿಗಳ ಕರ್ತವ್ಯವೆಂದು ನನಗನಿಸುತ್ತದೆ ಹೀಗೆ ಮಾಡಿದರೆ ಸಂಯೋಜನಾವಾದಿಗಳ ಸ್ವಾರ್ಥತ್ಯಾಗವನ್ನು ಕೊಡಗಿನ ಜನ ಮೆಚ್ಚಿ ಅವರಲ್ಲಿ ಕಚ್ಚಿನ ಪ್ರೇಮವುಂಟಾಗಿ ಪ್ರತ್ಯೇಕವಾದಿಗಳೂ ಸಾಯೋಜನಾವಾದಿಗಳೂ ಪರಸ್ಪರ ಸಮೀಪದಿಂದ ಕಲೆತು ಕೊಡಗು ಪ್ರಾಂತ್ಯಕ್ಕೂ ಭಾರತ ಮಾತೆಗೂ ಕೀರ್ತಿ ಲಭಿಸುವುದೆಂದು ನನಗನಿಸುತ್ತದೆ.

ಪೊನ್ನಂಪೇಟೆ ನಾಡಿನವ.

ಇದು ಸರಿಯೆ?

ಸೂಳೆಗೆ ಡಿ. ಡಿ. ಟಿ. ಸ್ಪೆ ಮಾಡುವುದು ಮಲೇರಿಯಾ ನಿರ್ಮೂಲಕರ ಕೆಲಸ. ಮಳೆಗಾಲದಲ್ಲಿ ಮಲೇರಿಯಾ ಸ್ಪೆಯರ್ ತೆಗೆದುಕೊಂಡು ಹೋಗಿ ತೆತ್ತಳೆಗಿಡಕ್ಕೆ ಸ್ಪೆ ಮಾಡಿದಲೆಂದು ನಮ್ಮೂರಿನಲ್ಲಿ ಟಾಂಟಾಂ ಆಯಿತು. ಇದು ನಿಜವಾದರೆ ಈ ಕೆಲಸಕ್ಕೆ ಕೊಡಗಿನ ವ್ಯವಸಾಯ ಇಲಾಖೆಯವರು ಇಲ್ಲವೆ? ಮಲೇರಿಯಾ ನಿರ್ಮೂಲಕರಿಗೆ ಮಳೆಗಾಲದಲ್ಲಿ ಕೆಲಸವಿಲ್ಲದಿದ್ದರೆ ಆ ಸಮಯದಲ್ಲಿ ಈ ರಿಗೆ ಬೇರೆ ಕೆಲಸದ ವಿಚಾರಿಸಿ ನೋಡಬಾರದೇ? ಸಂಬಂಧಪಟ್ಟ ಮೇಲಧಿಕಾರಿಗಳು ಗಮನಕ್ಕೆ ತೆಗೆದಿದ್ದಲ್ಲಿ ಈ ಇಲಾಖೆಯವರು ಮುಂಬರುವ ಕೊಡಗಿನ ಹುತ್ತರಿ ಹಬ್ಬಕ್ಕೆ ಈ ಸ್ಪೆಯರ್‌ನಲ್ಲಿ ಗೋಡೆಗೆ ಸುಣ್ಣ ಬಳಿಯಲಿಕ್ಕೆ ಸುರು ಮಾಡಬಹುದೇನೊ!

ಚಾಣಕ್ಯ.

Commissions in Armed Forces.

Applications are invited from Intermediates between 18 and 21 and Matriculates age 15 and 17½ for Commission in the Armed Forces. For full particulars apply to the nearest Recruiting Office.

3-1

'ಗೌರವ ಕೆಲಸಗಳೂ-ಜವಾಬ್ದಾರಿಕೆಯೂ.'

ಶ್ರೀ. ಪಿ. ಜೆ. ಐಯಪ್ಪನವರು ತಾ. ೧೪-೯-೫೧ರ ಕೊಡಗು ಪತ್ರಿಕೆಯಲ್ಲಿ ಮುಜ್ರಾಯಿ ಇಲಾಖೆಯ ಪ್ರೆಸಿಡೆಂಟರು ಮತ್ತು ಮೆಂಬರುಗಳ ಕಾರ್ಯವರ್ತನೆಗಳನ್ನು ಟೀಕಿಸಿ ಬರೆದ ಲೇಖನವನ್ನು ನೋಡಲಾಯಿತು. ಪತ್ರಿಕೆಯಲ್ಲಿ ಪ್ರೆಸಿಡೆಂಟರು ಅಕ್ಕಿ ಪಡಿಕೊಡಲಿಕ್ಕೆ ಕೊಡಗು ದೇಶದ ಭಕ್ತಾದಿಗಳು ಧನ ಅಥವಾ ಧಾನ್ಯ ಅವರವರ ಶಕ್ತಿಯೊನುಸಾರ ಕೊಡಬೇಕೆಂದು ಟೀಕಿಳಿಸಿಕೊಂಡ ವಿನಂತಿ ನೋಡಿ ಅವರಿಗೆ ಆಶ್ಚರ್ಯವಾಯಿತಂತೆ. ಪತ್ರಿಕೆಯಲ್ಲಿ ನೋಡಿದ ಮಾತ್ರಕ್ಕೆ ಜನರು ಕಳುಹಿಸಿಕೊಟ್ಟಾರೆಂದು ನಾವು ಗ್ರಹಿಸುವುದು ಶುದ್ಧ ಅವ್ಯವಹಾರವೆನ್ನುವರು. ಪತ್ರಿಕೆಗಳಲ್ಲಿ ಪ್ರಕಟಿಸುವ ಸಾಲದು. ಮೆಂಬರುಗಳು ಮುದ್ದಾಗಿ ಹೋಗಿ ಮನೆ ಮನೆ, ದೇಶದಲ್ಲೆಲ್ಲಾ ತಿರುಗಿದರೆ ಬೇಕಾದಷ್ಟು ಸಂಗ್ರಹವಾಗಬಹುದೆಂದು ಅವರು ಅಭಿಪ್ರಾಯಪಟ್ಟಿರುವರು. ಹೊತ್ತಿರುವ ಜವಾಬ್ದಾರಿ ಕೆಲಸಗಳನ್ನು ಪ್ರೆಸಿಡೆಂಟರೂ, ಕಮಿಟಿ ಮೆಂಬರುಗಳೂ ಮನಸಾಕ್ಷಿಯಾಗಿ ಲಾಭ ನಿರೀಕ್ಷಣೆಯಿಲ್ಲದೆ ನೂಡಿದುದಲ್ಲದೆ ಈಗ ಭಕ್ತಾಟನೆಗೆ ಬೇರೆ ಹೊರಡಬೇಕೆ? ಇವರೆಂಥಾದೆಯ ಮೇಲೆ ಭಕ್ತಿಯೂ, ಪ್ರೀತಿಯೂ ಇಲ್ಲವರು ವರ್ಷಕ್ಕೊಂದಾವರ್ತಿ ನಡೆಯುವ ಮಹಾಜಾತ್ರೆಗೆ ಜೂರೂ ಈ ಪ್ರೆಸಿಡೆಂಟರಿಗೆ ದಾನನೂಡಬೇಕು. ಕಾಫಿ ಪೇಪರ್‌ವಿಲ್ಸ್, ಕಾರ್ಗಿ ಇಂಡಸ್ಟ್ರೀಸ್, ಕಾರ್ಗಿ ಟ್ರಾನ್ಸ್‌ಪೋರ್ಟ್ ಮತ್ತು ಎಲೆಸ್ಟೇಟ್ ಮೊದಲಾದ ಅನೇಕ ಕೆಲಸಗಳಿಗೆ ಶ್ರೀಮಂತ್ಯನ್ನು ಸೃಷ್ಟಿಸಿ ವಿನಂತಿಸಿದುದಕ್ಕೆ ಜನರಿಂದ ಸಾವಿರಗಟ್ಟಿಲೆ ಹಣ ಶೇಖರಿಸಿದ್ದ ಶ್ರೀ. ಐಯ್ಯಪ್ಪನವರು ತಿಳಿದುದಿಲ್ಲವೇ? ಇದಕ್ಕೆ ಅವರಾಗಲೀ ಶ್ರೀಯುತ ದೊಡ್ಡವೀರಪ್ಪನವರಾಗಲೀ, ಬೇರೆ ಏಜಂಟರಾಗಲೀ ಮನೆ ಮನೆ ತಿರುಗಿದರೋ? ಭಕ್ತರೂ, ವೇದಾಂತಿಗಳೂ ಆಪ ಶ್ರೀ. ಐಯ್ಯಪ್ಪನವರೂ ಇನ್ನಿತರರೂ, ತಾವಾಗಲೀ ಏಜಂಟರುಗಳಂದಾಗಲೀ ಧನ ಧಾನ್ಯಗಳನ್ನು ಸಂಗ್ರಹಿಸಿ ಮುಜ್ರಾಯಿ ಇಲಾಖೆಯ ಮಗೆ ಕಳುಹಿಸಿಕೊಟ್ಟರೆ ಅವರು ಕೃತಜ್ಞರಾಗುವರು.

ಸರಕಾರವು ಕೆಲವು ಶೃದ್ಧೆಯಿಂದ ನಡೆಸುತ್ತಿರುವ ಹೋಟೆಲ್ ಅಥವಾ ಬೇರೆ ಪ್ರತಿಫಲ ದೊರಕಿಸಿಕೊಂಡ ಪ್ರೆಸಿಡೆಂಟರು ದೇವರ ಕಾರ್ಯವನ್ನೇಕೆ ಶೃದ್ಧೆಪಡಿಸಿ ಮಾಡಲಿಲ್ಲವೆಂದು ಪ್ರಶ್ನಿಸಿದರೆ ಅವರು ಮಾಡಿದ ಧರ್ಮಕಾರ್ಯದ ಫಲವಾಗಿ ಬಿಡುವು ದೊರೆತೀತು. ದೇವರ ಸೇವೆ ಮಾಡಿದುದಕ್ಕೆ ಅವರು ಯಾವ ಬಯದನ್ನೂ, ಕವಿಜನನ್ನೂ ಹಾರೈಸಿಲ್ಲ. ಬಹಳ ವರ್ಷಗಳ ಬಲೇ ಅವರು ದೇವರ ಮೇಲೆ ಭಕ್ತಿಯಿಂದ ದೇವರ ಸೇವೆ ಮಾಡುತ್ತಿರುವರೇ ಎನಹ ಪರಾನುಕೃಪೇಕ್ಷೆಗಾಗಲೀ ತನ್ನ ಭಂಡವಾಳವನ್ನು ಹೆಚ್ಚಿಸುವ ದಕ್ಕಾಗಲೀ ದುಡಿದಿಲ್ಲ. ಇನ್ನು ಆಶಿಸುವುದೂ ಇಲ್ಲ.

ಈಗಿನ ಮುಜ್ರಾಯಿ ಇಲಾಖೆಯನ್ನು ರಿಗೆ ಶೃದ್ಧೆ ಭಕ್ತಿ ಕಮ್ಮಿಯೆಂದೂ ಇಂಥಾ ಜವಾಬ್ದಾರಿಯ ಕೆಲಸವನ್ನು ಏತಕ್ಕೆ ವಹಿಸಿರುವರು? ಭಕ್ತಿ ಶೃದ್ಧೆಯಿರುವವರು ನಿರ್ವಹಿಸಲಿ ಎಂದಿರುವಿರಿ. ಕಮಿಟಿ ಮೆಂಬರುಗಳ ಚುನಾವಣೆಯು ಸ್ವೇಚ್ಛಾವರ್ತಿಯಾದುದಲ್ಲ. ಯಾರು ಇಚ್ಛಿಸಿದರೂ ಬರಬಹುದಾಗಿತ್ತು. ಪತ್ರಿಕೆಗಳ ಮೂಲಕ ದಿನ ಮತ್ತು ಸ್ಥಳ ಗೊತ್ತುಮಾಡಿ ಪ್ರಕಟಿಸಿ, ಚುನಾಯಿತರಾದ ಮೆಂಬರುಗಳೇ ಕಮಿಟಿಯಲ್ಲಿರುವುದು. ಇಷ್ಟಪಟ್ಟವರಿಗೆ ಲೇಖಕರೇ ಬರಬಹುದಾಗಿತ್ತು. ಇದೆಲ್ಲಾ ತಿಳಿದು ಸಹ ಲೇಖಕರು ಈ ರೀತಿ ಪುಟಕುಂಬಿಸಲು ಬರೆದದ್ದು ವಿಷಾದಕರವೇ. ಹಿಂಗೆ ಕಂಡಿಯವ ನೀಂಗೆ ಬೇಲಿಕಟ್ಟಿ, ಕಾನೂ ಕಂಡಿಯ ಪರರನ್ನೂ ಬಿಡ' ಎಂದಿರುವಿರಿ. ಬಹಿರಂಗ ಚುನಾವಣೆಗೆ ಯಾರು ಅಡ್ಡಿ ಬಂದರು! ದೇಶದವರಿಂದ ಚುನಾಯಿತರಾದ ಕಮಿಟಿ ಮೆಂಬರುಗಳೇ ಪ್ರೆಸಿಡೆಂಟರನ್ನು ಆರಿಸಿದರು. ಅವರೆಲ್ಲಾ ಹೊಸಬರಲ್ಲ. ೪-೧೦ ವರ್ಷಗಳಿಂದ ಪಾಳುಬಿದ್ದ ದೇವಾಲಯಗಳು ಎಷ್ಟು ಊರ್ಜಿತವಾಗಿವೆಯೆಂದು ನೆನಸಿಟ್ಟಿರಿ.

ಇಲಾಖೆಯ ಆಡಳಿತದಲ್ಲಿ ೭,೭೦೦ ಬಟ್ಟೆ ಭೂಮಿ ಗದ್ದೆಯಿಂದ ನೂರಕ್ಕೆ ೧೫ ಭಟ್ಟೆಯಂತೆ ಭತ್ತ ಸಿಕ್ಕಿದರೂ, ೭೫ ಗಾಡಿ ಬತ್ತ ಆಗುವುದೆಂದಿರುವಿರಿ. ಇರ್ಪು ಜಾಲೂರು ಮತ್ತು ಪಾಡಿದೇವಸ್ಥಾನಗಳ ಗದ್ದೆಗಳಲ್ಲಿ ಬರುವ ಬತ್ತ ಆಯಾಯ ಸ್ಥಳಗಳಿಗಲ್ಲದೆ ಕಾವೇರಿ, ಭಾಗಮಂಡಲ ತ್ರಿಕಾರೇಶ್ವರ, ಗದ್ದಿಗೆಗಳ ಉಪಯೋಗಕ್ಕೆ ಸಿಗದು. ಇದರಲ್ಲಿ ಕೆಲವು ಮೂಲಗೇಣಿಗಳು. ಕೆಲವು ಜೋಡಿ ಕಂದಾಯಗಳ ಗದ್ದೆ. ಸರಿಯಾಗಿ ಬೆಳೆ ಬೆಳೆದು ಬತ್ತ ಸಿಕ್ಕಿದರೆ ೨೪೦ ಬಟ್ಟೆ ಮಾತ್ರ ಸಿಗುತ್ತೆ. ಇದು ಮೇಲ್ಕಂಡ ದೇವಾಲಯಗಳಿಗೆ ಸಾಲದು. ಇದರ ಮೇಲೆ ಬೇಕಾದ ಬತ್ತವನ್ನು ಶುದ್ಧ ಕ್ರಯಕ್ಕೆ ತೆಗೆಯಬೇಕು ತರೀಜಮಿನಿಗೆ ಎಕ್ರೆಗೆ ಒಂದು ಸೇರು ಭತ್ತ ಮತ್ತು ಕಾಫಿ ತೋಟಕ್ಕೆ ಎಕ್ರೆಗೆ ಎರಡಕ್ಕೆ ಮೂರಂತೆ ವಸೂಲಿಮಾಡಿದರೆ ಕಮ್ಮಿ ಪಕ್ಷ ೧೦೦ ಗಾಡಿ ಭತ್ತವೂ ೭೦೦೦ ರೂ. ಗಳ ವಸೂಲಾಗುತ್ತೆಂದು ಗಾಳಿಗೋಪುರ ಕಟ್ಟುವಂತೆ ಶ್ರವ್ಯಾವಸ್ತೆಯ ಬಗ್ಗೆಯನ್ನು ವಿದ್ಯಾವಂತರಾದ ನೀವು ಬರೆದಿರುವುದು ಆಶ್ಚರ್ಯವೇ!

ಇಲಾಖೆಯ ಮೆಂಬರುಗಳ ಭಕ್ತಿಕಡಿಮೆಯೆಂದುದರಿಂದ ದೇಶಕ್ಕೆ ಮಳೆ ಇಲ್ಲವೆನ್ನುವಿರಿ. ದೇವರು, ನಿಮ್ಮ ನ್ಯಾಯರೀತಿಯು ಪುಕಾರ ಅವರನ್ನು ಪೂಸ್ರ ಏಕೆ ತಿಳ್ಸಿಸದೆ, ಇಡೀ ದೇಶವೇ ಹಾಹಾಕಾರ ಪಡುವಂತೆ ಮಾಡಿರುವರು? ಎಲ್ಲೂ ಸೂಚಿಸುವ ಮೊದಲೇ ಇಲಾಖೆಯ ಕೋರಿಕೆಯಂತೆ ಮಳೆ ಬೆಳೆ ಸರಿಯಾಗಿ ಬರುವಂತೆ ಪೂಜೆ ನಡಿಸುತ್ತಿರುವರು. ಮಳೆ ಬರುತ್ತಲೂ ಇದೆ.

ಶ್ರೀಯುತರ ೧೩-೭-೫೧ರ ಲೇಖನವನ್ನು ಓದಿ ಮಡಿಕೇರಿ ಓಂಕಾರೇಶ್ವರ ದೇವಸ್ಥಾನದ ಪೂಜಾರಿಗಳು ಸಂಬಳ ಹೆಚ್ಚಿಸಬೇಕೆಂದು ಮಾನ್ಯರ ಹಿಡಿದರು. ಧಾನ್ಯಗಳ ಬೆಲೆಯು ಗಗ್ಯಕ್ಕೆ ಏರಿದಂತೆ ಎಂದೆದಿಂದ ಅವರ ಸಂಬಳ ಏರಿಸಿ ಸಹ ತಮ್ಮ ಲೇಖನವನ್ನು ಓದಿ ದಿನ ಒಂದಕ್ಕೆ ಊಟವಲ್ಲದೆ ೧ ರೂಪಾಯಿ ಸಂಬಳ ಬೇಕೆಂದು ಹಠ ಹಿಡಿದು ಫಲಕಾರಿಯಾಗದೆ, ತಿಪ್ಪನೆ ಪುನಃ ಕೆಲಸಕ್ಕೆ ಬಂದರು. ಅದರಿಂದ ಸುಮ್ಮನೆ ದೇವಸ್ಥಾನದ ಆಗು ಹೋಗುಗಳನ್ನರಿಯದೆ, ಒರೆಯುವುದರ ಬದಲು ನೀವು ತಿಳಿಸಿದಂತೆ ನಿಮ್ಮ ಉದಾರ ಸಹಾಯವನ್ನು ಧನಧಾನ್ಯದ ಮೂಲಕ ದೇವರ ಸೇವೆಗೆ ಕೊಟ್ಟು, ನೀವು ಸೇವ್ಲಂಗ್ರಿಯಾಗಿ ಬೇರೆಯವರಿಂದಲೂ ಸಹಾಯಬರುವಂತೆ ಮಾಡಿದ್ದರೆ ನಿಮಗೆ ಚಿರ ಪುಣ್ಯಸಂಪಾದಿಸುತ್ತಿದ್ದೆವು. ಭಕ್ತಿಗೂ, ಶೃದ್ಧೆಗೂ ಆಳವಿದೆಯೇ? ಯಾರೂ ಯಾಚಿಸದೇ ಕೊಡಬಹುದು. ದಿವಂಗತ ಶ್ರೀ. ಕೊರವಂಡ ಮುತ್ತಣ್ಣನವರು, ಇನ್ನೂ ಅನೇಕರೂ ಬೇಕಾದಷ್ಟು ಹಣ ದೇವರ ಸೇವೆಗೆ ಹಾಕಿ ಅವರವರ ಹೆಸರನ್ನು ಅಚ್ಚಳಿಯದೆ ನೂಡಿಗುವಂತೆ. ಆಗಿನವರು ಸಹ ಕೊಡಲು ಮುಂಬಂದಿರುವರು.

ಮುಜ್ರಾಯಿ ಇಲಾಖೆಯವರು, ದೇಶಸ್ಥರ ಸಹಾಯವನ್ನು ಬರೀ ಪತ್ರಿಕೆಗಳಲ್ಲಿ ಕೋರಿದುದಲ್ಲದೆ ಪ್ರತಿ ಊರಿನ ಸಂಘಗಳಿಗೆ ಯಾವಿಯರ್ಸ್ ಪ್ರೆಸಿಡೆಂಟರ ಮೂಲಕ ಹತ್ತಪ್ರತಿಗಳನ್ನು ಹಂಚಿರುವರು. ಧನಧಾನ್ಯ ದೊರೆತಲ್ಲಿ ಪ್ರಿಂಟೆಡ್ ರಶೀತಿ ಕೊಡುವರು. ಈ ಮೊದಲಿಂದಲೇ ಧರ್ಮನಿಧಿ ಸಂಸ್ಥಕ್ಕಾಗಿ ವಿಜಂಟ್ರುಗಳನ್ನು ನೇಮಿಸಿ ಅವರ ಬಳಿ ಪ್ರೀಟೆಡ್ ರಶೀತಿ ಬುಕ್ಕುಗಳನ್ನು ಕೊಡಲಾಗಿದೆ. ಭಕ್ತ ತಿಜಾವಣಿಗಳು ತಮ್ಮ ಸಹಾಯವನ್ನು ಪಲ್ಲಿಸಿ ಶ್ರೀಕಾವೇರಿ ಮಾತೆಯ ಅತಿವಾರ್ಷದಕ್ಕೆ ಆಹ್ವಾರಾಗಬೇಕೆಂದು ವಿನಂತಿ.

ಪ್ರಕಟಣೆ.

ಶ್ರೀಮಾನ್ ಅಪ್ಪನೆರವಂಡ ನೂದಪ್ಪನವರು ಪಾರಾಣೆಯಲ್ಲಿ ಕಟ್ಟಿಸಿದ ಶಾಲಾ ಕಟ್ಟಡದ ವೆಚ್ಚವನ್ನೆಯೇ ಸಂಪೂರ್ಣ ಮಾಡುವ ಕೆಲಸಕ್ಕೆ ಕಂಟ್ರಾಕ್ಟುದಾರರು ಬೇಕಾಗಿದ್ದಾರೆ. ಟೆಂಡರು ಕೆಲಸದ ವಿವರವನ್ನು ಶಾಲಾ ಹೆಡ್‌ಮಾಸ್ಟರಿಂಗ ಮುದ್ದು ಬಂದು ತಾ. 15-10-51ರ ಒಳಗೆ ತಿಳಿದುಕೊಳ್ಳತಕ್ಕದ್ದು.

ಪಾರಾಣೆ ಶಾಲಾ
3-1 ಸಂಚಾಯಿತದಾರರು.
ತಾ. 18-9-51.

ನೋಟೀಸ್.

ಈ ಮೂಲಕ ಸರ್ವರಿಗೂ ತಿಳಿಯಪಡಿಸುವುದೇನೆಂದರೆ-

ತಾ. 30-8-51ರ 'ಕೊಡಗು' ಪತ್ರಿಕೆಯಲ್ಲಿ ಶ್ರೀ ಸಿ. ಎ ಪೊನ್ನಪ್ಪನವರು ಕೆಲವು ಆಸ್ತಿಗಳು ಮಾರಾಟಕ್ಕಿದೆಯೆಂದು ಪ್ರಕಟಿಸಿದ್ದು ಸರಿಯಷ್ಟೆ. ಆದರೆ ಸದರಿ ಆಸ್ತಿಗಳು ನಮಗಳ ಕುಟುಂಬ ಆಸ್ತಿಯಾಗಿರುವುದರಿಂದ ಅವುಗಳನ್ನು ಮಾರಾಟ ಮಾಡಲು ಅವರಿಗೆ ಯಾವ ಹಕ್ಕೂ ಇರುವುದಿಲ್ಲವೆಂದೂ, ಸದರಿ ಆಸ್ತಿಗಳನ್ನು ನಮ್ಮ ಒಪ್ಪಿಗೆ ಇಲ್ಲದೆ ಪಡಕೊಂಡವರು ಅದರಿಂದ ಉಂಟಾಗುವ ಸರ್ವ ನಷ್ಟ ಕಷ್ಟಕ್ಕೂ ಅವರೇ ಜವಾಬ್ದಾರರಾಗಬೇಕಾಗುತ್ತದೆಂದೂ ಈ ಮೂಲಕ ತಿಳಿಸಲಾಗಿದೆ.

ಕಲ್ಯೋಡು ಕುಟುಂಬಸ್ಥರ ಪರ,
ಚೆಪ್ಪುಡಿರ ಬಿ. ಕಾರ್ಯಪ್ಪ
18-9-51 ಮಾಯವ ಬಿ ಗ್ರಾಮ.
2-1

ಪ್ರಕಟಣಾ ಪತ್ರಿಕೆ.

ಉತ್ತರಕೊಡಗು ತಾಲೂಕು ಸೋಮವಾರಪೇಟೆ ನಾಡು ಬಿಳಿಗೇರಿ ಗ್ರಾಮದ ಬಾಚಿನಾಡಂಡ ಕುಶಾಲಪ್ಪ, ಮುತ್ತಣ್ಣ ಬಸಪ್ಪ, ಮೂಚಯ್ಯ ಬಿ. ಎಂ. ಪೂವಯ್ಯ ಬಿ. ಟಿ. ಕಟ್ಟಿಪ್ಪ, ಮಂಜಪ್ಪ, ಮಾದಪ್ಪ ಸಹ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ-ನಮ್ಮ ಬಾಚಿನಾಡಂಡ ಕಾಳಪ್ಪನ ಮಗ ಪೂವಯ್ಯನೆಂಬ ಪುತ್ರ ಸಂತಾನವಿಲ್ಲದೆ ದಿವಂಗತನಾದ್ದರಿಂದ ತನ್ನ ಹೆಸರಿನಲ್ಲಿ ಜಮ್ಮಾಬಂದಿ ನಡೆಯಲು ಬರುವ ಸ್ಥಿರ ಆಸ್ತಿಗಳನ್ನು ಶುದ್ಧ ಕ್ರಯಕ್ಕೆ ಮಾರಾಟ ಮಾಡಲು ಪೂರ್ವಜರಿಂದ ಬಂದ ಸ್ಥಿರ ಆಸ್ತಿಗಳು ನಮ್ಮ ಕುಟುಂಬದ ಏಕಾಭಿಪ್ರಾಯ ಆಸ್ತಿಯಾಗಿರುತ್ತದೆ. ಸದರಿಯವರ ಹೆಸರಿನಲ್ಲಿರುವ ಪೂರ್ವಿಕ ಸ್ಥಿರ ಜಂಗಮ ಸ್ವತ್ತಿಗೆ ಸಹ ನಾವು ಕುಟುಂಬಸ್ಥರೆಲ್ಲ ಹಕ್ಕುದಾರರಾಗಿರುತ್ತೇವೆ ಆದುದರಿಂದ ಯಾರಾದರೂ ಸದರಿಯವರ ಹೆಸರಿನಲ್ಲಿರುವ ಸ್ಥಿರ ಸ್ವತ್ತು ಗಳನ್ನು ಶುದ್ಧ ಕ್ರಯ, ಬೋಗ್ಯ, ವಸೈದಿಗೆ ತೆಗೆದುಕೊಳ್ಳಬಹುದು. ಹಾಗೇನಾದರೂ ನಮ್ಮ ಕುಟುಂಬದವರ ಒಪ್ಪಿಗೆ ಇಲ್ಲದೆ ಕ್ರಯಕ್ಕೆ ತೆಗೆದುಕೊಂಡರೆ ಅನ್ಯೆ ನಮಗಾಗುವ ಸರ್ವ ನಷ್ಟಕಷ್ಟಕ್ಕೂ ಸಹ ಕ್ರಯಕ್ಕೆ ತೆಗೆದುಕೊಂಡವರು ಜವಾಬ್ದಾರರಾಗಕ್ಕದ್ದು, ಎಂಬದಾಗಿ ಈ ಮೂಲಕ ತಿಳಿಯಪಡಿಸಿರುತ್ತೇವೆ.

ಬಳಗೇರಿ, ಕುಟುಂಬಸ್ಥರ ಪರ,
18-9-51 ಬಿ. ಕುಶಾಲಪ್ಪ.

ದಿ ಬಾಂಬೆ ಮ್ಯೂಚುಯಲ್ ಲೈಫ್ ಅಷ್ಯೂರೆನ್ಸ್ ಸೊಸೈಟಿ ಲಿಮಿಟೆಡ್.

12-11 [ಸ್ಥಾಪಿತ 1871]

ಭಾರತದಲ್ಲಿನ ಅತ್ಯಂತ ಹಳೆಯ ವಿಮಾ ಸಂಸ್ಥೆ.

ಉತ್ಸಾಹಶಾಲಿ ಯುವಕರಿಗೆ ಸಂಬಳ ಯೂ ಕಮಿಶನ್ ಮೇಲೆ ಪ್ರತಿನಿಧಿಗಳಾಗಲು ಅವಕಾಶವಿದೆ.

ವಿವರಗಳಿಗೆ:-ದಿ ಬ್ರಾಂಚ್ ಸೆಕ್ರೆಟರಿ,
172-173, ನರಸಿಂಹರಾಜರೋಡು, ಬೆಂಗಳೂರು 2.

ಕೊಡಗಿನಲ್ಲಿ ಕೈಗಾರಿಕೆಗಳ ಸಾಧ್ಯತೆ

ಲೇ:—ಶ್ರೀ .ಕೆ. ಬಿ ಐಯ್ಯಪ್ಪ, ಬಿ ಎ., ಬಿ ಟಿ, ನಾಪೋಕ್ಲು.

ಒಂದು ದೇಶದ ಸರ್ವತೋಮುಖವಾದ ಅಭಿವೃದ್ಧಿಯಾಗಬೇಕಾದರೆ, ಆ ದೇಶದ ಕೃಷಿ ಮತ್ತು ಕೈಗಾರಿಕೆಗಳು ಉತ್ಕೃಷ್ಟತೆಯ ಸ್ಥಿತಿಗೆ ಏರಬೇಕು. ಯಂತ್ರಿಕ ಕೈಗಾರಿಕೆಗಳಿಗಿಂತ ಗುಡಿಕೈಗಾರಿಕೆಗಳು ಪ್ರಗತಿ ಹೊಂದಿದರೆ ಸಾಮಾನ್ಯ ಪ್ರಜಾವೃಂದಕ್ಕೆ ಕ್ಷೇಮವಾಗುವುದು ತಮ್ಮ ಆವಶ್ಯಕತೆಗಳನ್ನು ತಾವೇ ಪೂರೈಸುವವರಾಗುವ ದರಿಂದ ದ್ವಿಮುಖ ಪ್ರಯೋಜನವಿದೆ. ತನುಗೆ ದೇಶಾದ ಸಾಮಾನುಗಳನ್ನು ಕೊಂಡುಕೊಳ್ಳಬೇಕಾಗಿಲ್ಲ. ಮತ್ತವಲ್ಲ ಉಳಿಕೆಯ ಸಮ ಮೂರಿ, ಬಂದ ಹಣವಲ್ಲಿ ಇತರ ಸಾಮಾನುಗಳನ್ನು ಪಡೆದು ಕೊಳ್ಳಬಹುದು. ಆದರೆ ಬೃಹ್ಯೋಗಿಕ ಪೈಪೋಟಿ ನಡೆಯುವ ಆಧುನಿಕ ವಿಜ್ಞಾನಾ ರಿತ್ಯಾ ಪ್ರಪಂಚದಲ್ಲಿ ಗುಡಿ ಕೈಗಾರಿಕೆಯೊಂದೇ ಇದ್ದರೆ ಸಾಲದು. ಯಂತ್ರದ ಮುಖೇನ ಸಹ ತಯಾರಾಗಬೇಕು ಇಲ್ಲದಿದ್ದರೆ ಅಂತಹ ದೇಶ ಕೇವಲ ಹಿಂದುಳಿಯಬೇಕಾಗುವುದು.

ಸ್ವತಂತ್ರ ಭಾರತ ಖಂಡದಲ್ಲಿ ಈಗೀಗ ಹಲವು ಕಾರ್ಖಾನೆ ಕೇಂದ್ರಗಳು ನಿರ್ಮಾಣವಾಗಿವೆ ಹಲವು ಪ್ರಾಂತ್ಯಗಳಲ್ಲಿ ನೂಲುವುದೇ ಮೊದಲಾದ ಗುಡಿ ಕೈಗಾರಿಕೆಗಳು ಅಭಿವೃದ್ಧಿಯಾಗುತ್ತಿವೆ. ಇದು ಸಾಲದು. ಪ್ರತಿ ಭಾಗದಲ್ಲಿ ಯಾವ್ಯಾವ ಕೈಗಾರಿಕೆ ಸ್ಥಾಪನೆಗೆ ಸಾಧ್ಯವಿದೆಯೋ, ಅವುಗಳನ್ನು ಪರಿಶೀಲಿಸಿ, ಪುರಜನರೂ ಸರ್ಕಾರದವರೂ ಒಮ್ಮನಸಿನಿಂದ ಕಾರ್ಯ ಪ್ರವೃತ್ತರಾಗಬೇಕು. ಈ ದ್ವಿಪಕ್ಷದವರು ಪರಸ್ಪರ ಒಗ್ಗಟ್ಟು, ಸಹಾಯ ಸೌಹಾರ್ದತೆಯಿಂದ ವ್ಯತ್ತಿ ಪ್ರಾರಂಭಿಸಿದ್ದೇ ಆದಲ್ಲಿ, ಆ ಉದ್ಯಮವು ಯಶಸ್ವಿಯಾಗುವುದರಲ್ಲಿ ಸಂಶಯವಿಲ್ಲ. ಸರ್ಕಾರದ ಮೇಲೆ ಪೂರ್ಣ ಹೊಣೆಗಾರಿಕೆಯನ್ನು ಹಾಕಿ, ಪ್ರಜೆಗಳು ತಪ್ಪೋನ್ಮತ್ತವನ್ನೆನುಕರಿಸಿದರೆ ದೇಶದ ಉನ್ನತಿಯಾಗದು. ಔದ್ಯೋಗಿಕ ಪ್ರಪಂಚದಲ್ಲಿ ಶಹ, ನಮ್ಮ ಸಹಕಾರವೆಂಬ ಮಮತೆ, ಪ್ರೀತಿಭಾವ ಸರ್ವರಲ್ಲಿ ನೆಲೆಗೊಂಡಿದರೆ ಸರಕಾರಕ್ಕೆ ಮಹತ್ತಾದ ಸಹಾಯವಾಗುತ್ತದೆ

ಪ್ರಕೃತಿ ಸೌಂದರ್ಯದ ತವರ್ಮನೆಯಾಗಿ, ಅರಣ್ಯ ಸಂಪತ್ತಿನ ಹೃದಯವಾಗಿರುವ ನಮ್ಮ ಈ ಕೊಡಗು ದೇಶದಲ್ಲಿ ಅನೇಕಾನೇಕ ಕೈಗಾರಿಕೆ ಉತ್ಪತ್ಯಗಳನ್ನು ಪುಟ್ಟ ರೀತಿಯಲ್ಲಿ ಸ್ಥಾಪಿಸಿ, ಮೂದರಿ ದೇಶವನ್ನಾಗಿ ಮಾಡಲು ತುಂಬಾ ಅನುಕೂಲವಿದೆ. ಅತಿವೃಷ್ಟಿಯೂ ಇಲ್ಲಿ ಸಾಕಷ್ಟು ಕಜ್ಜಾಯವನ್ನು ಬೆಳೆಯುತ್ತದೆ. ದುಡಿಮೆಗಾರರಿಗೆ ಸಾಕಷ್ಟು ಆಹಾರ ದೊರೆಯುತ್ತದೆ ಆದರೆ ಆಡಳಿತಗಾರರಲ್ಲಿ ಶ್ರಮಶಕ್ತಿಗಳಲ್ಲಿ ಬಲಿಷ್ಠವಾಪ ಒಗ್ಗಟ್ಟು ಇದ್ದರೆ, ಯಾವ ರೀತಿಯ ಕೈಗಾರಿಕಾ ಉದ್ಯಮವನ್ನಾದರೂ ಸ್ಥಾಪಿಸಬಹುದು. ಪ್ರಾರಂಭದ ಉತ್ಸಾಹವು ಅಂತ್ಯದ ವರೆಗೆ ಏಕ ರೀತಿಯಾಗಿದ್ದರೆ ಮಾತ್ರ ಸಾಕು.

ಮರಮುಟ್ಟುಗಳ ಕೈಗಾರಿಕೆ

ವನ ಸಂಪತ್ತಿಗೆ ಹೆಸರುವಾಸಿಯಾಗಿರುವ ಇಲ್ಲಿ ಇಚ್ಛಿಸಿದಾಗ ಮರ ಸಿಗುವುದಿಲ್ಲ ಹೌದು ಅತೀ ಸೋಜಿಗ ವಿಷಯವೇ ಸರಿ. ಇತ್ತಲಾಗಿ ಮರವ್ಯಾಪಾರವೊಂದು ಪ್ರಾರಂಭವಾಗಿ, ವನಗಳೆಲ್ಲಾ ನಾಶವಾಗುತ್ತಿವೆ ಮರ ಕಾಯ್ದುವ ಎರಡು ಯಾ ಮೂರು ಗಿರಣಿಗಳು ಇತ್ತೀ ಜೆ ಗೆ ಸ್ಥಾಪನೆಯಾದದ್ದು ಸಂತೋಷದ ವಿಷಯವೇ ಸರಿ. ಮರಮುಟ್ಟುಗಳನ್ನೆ ತಯಾರಿಸುವ ಒಂದು ದೊಡ್ಡ ವೃತ್ತಿ ಕಾರ್ಖಾನೆ ನಮ್ಮ ನೇರವಲ್ಲಿರಬಿರುವುದು ಬಹಳ ಶೋಚನೀಯ ವಿಷಯ. ಮರ ಸಾಮಾನುಗಳು ಬೇಕಾದರೆ ಪರ ದೇಶದಿಂದ ಪರಬೇಕಾಗುವುದು. ಬಡಗಿ ವೃತ್ತಿಯನ್ನು ಕಲಿತ ಸಾಕಷ್ಟು ದೊಡ್ಡ ಮನೆ ಸಾಮಾನುಗಳ ಅಂಗಡಿಯನ್ನು ತೆರೆಯಲು ತುಂಬಾ ಅನುಕೂಲ ಮತ್ತು ಅವಕಾಶ ಇದೆ. ಮತ್ತವಲ್ಲ ಮೂಲೀಕರಿಗೂ, ಜನರಿಗೂ ತುಂಬಾ ಪ್ರಯೋಜನಕಾರಿಯಾಗಿದೆ ಈಗೀಗ ಒಬ್ಬಿಬ್ಬರು ಮಡಿಕೇರಿಯಲ್ಲಿ ಈ ವೃತ್ತಿಯನ್ನು ಪ್ರಾರಂಭಿಸಿದ್ದಾರೆ. ಅವರ ವ್ಯಾಪಾರವೃದ್ಧಿ ಉತ್ಸಾಹವು, ಅಂತ್ಯದ ವರೆಗೂ ಇದ್ದು, ತಮ್ಮ ವೃತ್ತಿಯಲ್ಲಿ ಸಂಪೂರ್ಣ ನೈಪುಣ್ಯತೆಯನ್ನೂ, ಕಲಾ ಕೌಶಲ್ಯತೆಯನ್ನೂ ಪಡೆದು, ಜಲೋದಾದ ಹಾಗೂ ಬಲನಂತ ಸಾಮಾನುಗಳನ್ನು ರಚಿಸುವವರಾಗಬೇಕು. ಖರೀ ಹಣದ ಲಾಲಸೆಯಿಂದ ದುಡಿದರೆ ಸ್ಪಫಲ ಪುತ್ತು ಸಾರ್ವಜನಿಕ ಬೆಂಬಲ ಕಡಿಮೆಯಾಗದಿರದು.

ಬೆತ್ತ

ಧಾರಾಳವಾಗಿ ಇವರ ಕಚ್ಚಾ ನೂಲು ಇಲ್ಲಿ ದೊರೆಯುವುದರಿಂದ, ಇದರ ಸಾಧ್ಯತೆ ತುಂಬಾ ಇದೆ. ನಾಜೂಕಾದ ಹಾಗೂ ತಕ್ಕ ಪ್ರತಿಫಲ ಲಭಿಸುವ ದುಡಿಮೆಯಾಗಿದೆ. ಹಲವು ವರ್ಷಗಳ ಹಿಂದೆ ನಮ್ಮ ಹಲವು ಶಾಲೆಗಳಲ್ಲಿ ವಿದ್ಯಾರ್ಥಿಗಳು ಖಡ್ಡಾಯವಾಗಿ ಈ ಕೈಗಾರಿಕೆಯನ್ನು ಅಭ್ಯಾಸ ಮಾಡುತಿದ್ದರು. ಕುರ್ಚಿ, ಮೇಜು, ಪೆಟ್ಟಿಗೆ, ತೊಟ್ಟಿಲು, ಬುಟ್ಟಿ ಮತ್ತು ತಟ್ಟೆ ಇವೇ ನೊದಲಾದ ಸಾಮಾನುಗಳನ್ನು ತಯಾರಿಸಿ ಮೂರಿ ಹಣ ಗಳಿಸುತಿದ್ದರು. ಈಗ ಯಾವ ಶಾಲೆಯಲ್ಲಿಯೂ ಕಂಡು ಬರುವುದಿಲ್ಲ. ಇಷಸ್ಟೂ ಸರಿಯಾಗಿ ಕಲಿತ ಯಾ ವಿದ್ಯಾರ್ಥಿಯೂ ಶಾಲೆ ಬಿಟ್ಟನಂತರ ಇದನ್ನು ತನ್ನ ಪ್ರಧಾನ ಜೀವನ ವೃತ್ತಿಯಾಗಿ ಮುಂದುವರಿಸಲಿಲ್ಲ. ಪುನಃ ಇದನ್ನು ಶಾಲೆಯಲ್ಲಿ ಜಾರಿಗೆ ತರುವುದು ಬಹಳ ಒಳ್ಳೆಯದು. ಈಗಿನ ಕಚ್ಚಾ ಮತ್ತು ಕೈಗಾರಿಕೆ ವಾರವಲ್ಲಿ ಸೇರಿಲಾ ಸಾಕಷ್ಟು ಅವಕಾಶವಿದೆ. ಮೊತ್ತವಲ್ಲಿ ಖಾತೆಗೆ ಮಹನೀಯರು ಈ ವೃತ್ತಿ ಕೇಂದ್ರಗಳನ್ನು ಸ್ಥಾಪಿಸಬೇಕು. ನಮ್ಮ ದೇಶದ ಕೆಲವು ಭಾಗಗಳಲ್ಲಿ ಅಂದರೆ 'ಮದ್ರಿನಾಡಿನಲ್ಲಿ ಕುರುಬರು ಅತ್ಯುತ್ಕೃಷ್ಟವೂ ಬೆತ್ತದ ಸಾಮಾನುಗಳನ್ನೆತ್ತು ತಯಾರಿಸುತ್ತಾರೆ. ಆದರೆ ಇವರು ಬಹಳ ಪೈಗಳ್ಳರು. ಒಂದು ವಾರದಲ್ಲಿ ತಯಾರು ಮಾಡಬಹುದಾದ ಒಂದು ನಸ್ಸನ್ನು ಒಂದು ವರ್ಷದಲ್ಲಿ ಪೂರೈಸುವುದಿಲ್ಲ ಈ ಕೆಲಸಗಾರರನ್ನು ಹಿಡಿದು, ಅವರ ಕಲಾ ಕೌಶಲ್ಯದ ಮಹತ್ತರವಾದ ಪ್ರಯೋಜನ ಜನರಿಗೆ ಸಿಗುವಂತೆ, ಈ ಉದ್ಯಮದಲ್ಲಿ ಅಭಿರುಚಿ ಇರುವವರು ಮಾಡಿದರೆ ಸರ್ವರಿಗೂ ಪ್ರಯೋಜನವಾಗಬಹುದು.

ಕಾಗದ ತಯಾರಿಕೆ

ಈ ಉದ್ಯಮದ ಸಾಧ್ಯತೆ ಹಣದ ದೃಷ್ಟಿಯಿಂದ ಸುಲಭವಲ್ಲದಿದ್ದರೂ, ಸರ್ಕಾರದವರು ಮತ್ತು ಧನವಂತರು ಆಸಕ್ತಿ ವಹಿಸಿದರೆ ಅತಿ ಸುಲಭವಾಗಿದೆ. ಬೇಕಾದಷ್ಟು ಬಿದಿರು ಮತ್ತು ಕೆಲವು ವಿಧದ ಬೆಂಡಿನ ಮರಗಳು ಇಲ್ಲಿ ಬೆಳೆಯುವುದರಿಂದ ಮಿತಿಯಲ್ಲಿ ತಯಾರಿಕೆಗೆ ಅವಕಾಶವಿದೆ. ಈಗಿದರ ಬೆಲೆ ಏರುತ್ತಾ, ಅದರ ಅಭಾವವು ದಿನೇ ದಿನೇ ಅಧಿಕವಾಗುತ್ತಿದೆ. ಫ್ರೇಜರ್ ಪೇಟೆಯಲ್ಲಿ ಕಾರ್ಖಾನೆಯೊಂದು ಸ್ಥಾಪನೆಯಾದದ್ದು ತುಂಬಾ ಸಂತೋಷಕರ; ಆದರೆ ಆರಿಯಲು ಉತ್ಸಾಹ ಮತ್ತು ಕುತೂಹಲ ಈಗ ಗಾಳಿಯಲ್ಲಿ ತೂರಿ ಹೋಗುತ್ತಿರುವುದು ತುಂಬಾ ವಿಷಾದಕರ. ಧನ ಸಂಪಾದನೆ ಮಾತ್ರ ಮುಖ್ಯ ಸ್ಫೂರ್ತಿಯಾಗಿರಕೂಡದು ದೇಶದ ಆರ್ಥಿಕ ಕಲ್ಯಾಣವನ್ನು ಸ್ವಜೆಗಳ ಸುಖ ಸೌಕರ್ಯಗಳನ್ನು ಲಯಸಕ್ಕದ್ದು. ನಮ್ಮ ಇಡೀ ಭರತ ಖಂಡದ ಬಹು ಸಂಖ್ಯಾತ ಖಾಸಗೀ ಉದ್ಯಮಗಳ ಅಸ್ಥೆಯೆಲ್ಲಾ ಹೀಗೆಯೇ! ಆದ್ದರಿಂದಲೇ ರಾಷ್ಟ್ರೀಕರಣದ ನುಡಿ ಅಲ್ಲಲ್ಲಿ ಕೇಳಿ ಬರುತ್ತಿರುವುದು ಆದ್ದರಿಂದ ಕನಿಷ್ಠ ಪಕ್ಷಾಗೂ ವೀತಿಯುಳ್ಳ ರೀತಿಯಲ್ಲಿ ಈ ಉದ್ಯಮವನ್ನು ಅಭಿವೃದ್ಧಿಪಡಿಸಲು ಉತ್ಸಾಹಿಗಳು ತಲೆಯೆತ್ತಿದರೆ ಅತೀ ಪ್ರಯೋಜನಕರವಾಗಿದೆ.

ಮಡಿಕೆ ತಯಾರಿಕೆ

ನಮ್ಮ ಜನರಿಗೆ ಬೇಕಾದಷ್ಟು ಮಣ್ಣಿನ ಪಾತ್ರೆಗಳು ಇಲ್ಲಿನ ಜನರಿಂದಲೇ ತಯಾರಾಗುತ್ತಿದೆ ಎಂದರೆ ತಪ್ಪಾಗಲಾರದು ಗುಡಿ ಕೈಗಾರಿಕೆಯೋಪಾದಿಯಲ್ಲಿ ಇದು ಸಾಗುತ್ತಿದೆ ಆದರೆ ಒಂದು ನಿಯಮ ಇದರಲ್ಲಿ ತೋರುವುದಿಲ್ಲ ಇದನ್ನು ಶುಧ್ಧಾರಿಸಿ ವ್ಯವಸ್ಥಿತಗೊಳಿಸಬೇಕು. ಹಳ್ಳಿಗಳಲ್ಲಿ ಎಲ್ಲಾ ಸಮಯದಲ್ಲಿ ಪಾತ್ರೆಗಳು ದೊರೆಯುವುದಿಲ್ಲ. ಸಣ್ಣಾದ ಒಂದು ಹೆಂಚು ಕಾರ್ಖಾನೆಯನ್ನು ಸ್ಥಾಪಿಸಬಹುದು. ಸ್ಥಾಪಿಸಿದರೆ ಮೂಲಿಕರಿಗೆ ನಷ್ಟವಾಗಲಿಕ್ಕಿಲ್ಲ ಹಾಗೂ ಬೇಡಿಕೆಯನ್ನು ಪೂರೈಸಿದಂತಾಗುವುದು.

ಸಾಬೂನು

ಸೀಗೆಕಾಯಿಗೆ ಬೆಲೆ ಏರುತ್ತಿದೆ. ಈ ವ್ಯಾಪಾರವು ಭರದಿಂದ ನಮ್ಮ ದೇಶದಲ್ಲಿ ನಡೆಯುತ್ತಿದೆ. ಇನ್ನಿ ಕಾಡುಗಳಲ್ಲಿ ಬಿಟ್ಟಿ ನುಡಿ ದೊರುವ ಕೆಲವು ಕಾಯಿಗಳು ಬೆಳೆಯುತ್ತವೆ. ಈ ಕಚ್ಚಾ ವಸ್ತುಗಳನ್ನೆಲ್ಲಾ ಇಲ್ಲಿಯೇ ಶೇಕರಿಸಿ, ಸಿದ್ಧ ವಸ್ತುಗಳನ್ನು ತಯಾರು ಮಾಡುವ ವ್ಯವಸ್ಥೆ ಮಾಡಬಹುದಾಗಿದೆ. ಇದರಿಂದ ಖಂಡಿತವಾಗಿಯೂ, ತುಂಬಾ ಪ್ರಯೋಜನವಾದೀತೇ ವಿನಾ ನಪ್ಪವೆಂಟಾಗಲಿಕ್ಕಿಲ್ಲ ನಮ್ಮ ದೇಶೀಯರ ಉಪಯೋಗಕ್ಕೆ ಬೇಕಾದಷ್ಟು ಮತ್ತು ನೆರೆ ರಾಷ್ಟ್ರಗಳಿಗೆ ರವಾನಿಸುವಷ್ಟು ಸಾಬೂನನ್ನು ತಯಾರು ಮಾಡಬಹುದು.

ಎಣ್ಣೆ ಕಾಳುಗಳ ಸಂಗ್ರಹ

ನಮ್ಮ ಅರಣ್ಯಗಳಲ್ಲಿ ಅನೇಕಾಫೇಕ ಎಣ್ಣೆ ಕಾಳುಗಳು ದೊರೆಯುತ್ತವೆ. ಕೆಲವು ರೀತಿಯ ಎಣ್ಣೆಕಾಳುಗಳನ್ನು ಜನರು ಬೆಳೆಸುತ್ತಾರೆ ಹಿಂದಿನ ಕಾಲಕ್ಕೆ ನಮ್ಮ ಜನರು ಈ ಎಣ್ಣೆ ಕಾಳುಗಳನ್ನು ಶೇಕರಿಸಿ ಎಣ್ಣೆ ತೆಗೆದು ದೀಪಗಳನ್ನು ಉರಿಸುತ್ತಿದ್ದರು. ಆದರೆ ಬಂಡಿನಿಂದ ದೀಪದ ಬತ್ತಿಗಳನ್ನು ತಯಾರಿಸುತ್ತಿದ್ದರು. ನನ ನಾಗರೀಕತೆಯ ಪ್ರಭಾವವು ಈ ವೃತ್ತಿಯನ್ನು ನೂಯ ನೂಡಿದೆ. ಇದು ಹಳ್ಳಿ ಕಾಲದ ಗುಡಿ ಕೈಗಾರಿಕೆ ಎನ್ನಬಹುದು ಈಗ ಇದರ ಕಡೆಗೆ ಯಾರಾದರೂ ಗಮನಿಸಿದ್ದಾರೆ ಅನಾಗರಿಕನೆಂದೂ ಅತೀ ಗರಂಬನೆಂದೂ ತುಚ್ಛೀಕಾರ ನಾಡುವುದಿದೆ ಇದು ಶುದ್ಧ ಮೆಟಾಳತನ! ಇದರ ಲಾಭವನ್ನು ಪ್ರತಿಯೊಬ್ಬರೂ ಸಾಧ್ಯವಾದಷ್ಟು ಪಡೆಯಲು ಯತ್ನಿಸಬೇಕು. ಇದಕ್ಕೆ ಸರಕಾರದ ಸಹಾಯವಾಗಲೀ ಅಧಿಕವಾದ ದ್ರವ್ಯವಾಗಲೀ ಬೇಕಾಗಿಲ್ಲ.

ಜೇನು ಸಾಕುವುದು.

ಈ ಕೈಗಾರಿಕೆಗೆ ನಮ್ಮ ದೇಶದಲ್ಲಿ ಸಾಕಷ್ಟು ಪ್ರೋತ್ಸಾಹ ಇರುವುದು ತುಂಬಾ ಶ್ಲಾಘನೀಯವಾದದ್ದೇ. ಅಪಿಲ ಕೊಡಗು ಜೇನು ನೋಣ ಸಂಘವು ಈ ವೃತ್ತಿಯನ್ನು ಉತ್ತೇಜಿಸಿಕೊಳ್ಳುವುದರಲ್ಲಿಯೂ, ಜನರನ್ನು ಉತ್ಸಾಹಭರಿತರನ್ನಾಗಿ ಮಾಡುವದರಲ್ಲಿಯೂ ನಿರತವಾಗಿದೆ. 'ಕೊಡಗು ಜೇನು' ಎಂದು ಪರದೇಶಗಳಲ್ಲಿ ಥಾರಾಳವಾಗಿ ಮಾರಾಟವಾಗುತ್ತಿರುವುದು ನಮಗೆಲ್ಲಾರಿಗೂ ಹೆಮ್ಮೆಯ ವಿಷಯವೇ ಸರಿ ಮೊದಲೆಲ್ಲಾ ಕೆಲವು ಶಾಲೆಗಳಲ್ಲಿ ಇದನ್ನು ಉಪವೃತ್ತಿಯಾಗಿ ಕಲಿಸುತ್ತಿದ್ದರು. ಉದಾಹರಣೆಗಾಗಿ, ನಾಪೋಕ್ಲು ಶಾಲೆಯಲ್ಲಿ ಈ ವೃತ್ತಿಯನ್ನು ಪ್ರಾರಂಭಿಸಿ ತುಂಬಾ ಉತ್ಪತ್ತಿ ಸಹ ಬರುತ್ತಿತ್ತು. ಆದರೆ ಬರ ಬರುತ್ತಾ ಈಗ ಯಾವ ಶಾಲೆಯಲ್ಲಿಯೂ ಕೋರುವುದೇ ಇಲ್ಲ. ಕೆಲ ಶಾಲೆಗಳಲ್ಲಿ ಇದನ್ನು ಚೇತನಗೊಳಿಸುವುದು ತುಂಬಾ ಉತ್ತಮ. ವಿದ್ಯಾರ್ಥಿಗಳು ಕಲಿತಲೆ ಮನೆಯಲ್ಲಿ ಈ ಕ್ರಮವನ್ನನುಕರಿಸಿ, ತಮ್ಮ ಜೀವನೋಪಾಯವನ್ನಾಗಿ ಮುಂದುವರಿಸಲು ಎಡೆಯಿದೆ. ಜೇನು ಸಂಗ್ರಹ ಮಾಡುವುದು ತುಂಬಾ ಲಾಭಕರ ನಾನಾ ಪ್ರಯೋಜನಗಳಿಗೆ ಬರುವಂತಹ ವಸ್ತುವಿಗೆ ಈಗ ವಿಪರೀತ ಬೆಲೆ ಇದೆ. ಪ್ರತಿಯೊಬ್ಬನೂ ಈ ಉದ್ಯಮವನ್ನು ಗುಡಿ ಕೈಗಾರಿಕೆಯಂತೆ ಕೈಗೊಂಡರೆ ಅವನ ಆರ್ಥಿಕೋನ್ನತಿಯಾಗುವುದರಲ್ಲಿ ಸಂದೇಹವಿಲ್ಲ.

ನೂಲುವುದು

ನಮ್ಮ ದೇಶದ ಹನೆಯಂ ಹತ್ತಿ ಬೆಳೆಗೆ ಅಯೋಗ್ಯಕರ. ವೃಷ್ಟಿ ಕನಿಷ್ಠವಾಗಿರುವ ಸ್ಥಳಗಳಲ್ಲಿ ಬೆಳೆಬಹುದಾದರೂ ಅಷ್ಟು ಪ್ರಯೋಜನಕಾರಿಯಾಗಲಿಕ್ಕಿಲ್ಲ

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿಸಲಾಗಿತ್ತು.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಸೊಲಲಗು	ರೂ.	1,99,400.
ಸ್ಟೇಮನಿಧಿ	ರೂ.	59,000.
ಇತರ ನಿಧಿಗಳು	ರೂ.	36,000.

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದ

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದ ಲ್ಲದೆ ಚಿನ್ನ, ಬೆಳ್ಳಿ ನಗಗಳ ಅಡಿನ ಮೇಲೆ ಸಹ ಸಾಲ ಕೊಡಲಾಗುವುದು. ಹೆಚ್ಚಿ ದೂ ಡಾಕ್ಯ್ಮೆಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರೆನಟ್ ಮತ್ತು ವಾರ್ಡಸ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಅಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,
ಕೆ. ಪಿ. ಅಪ್ಪಯ್ಯ, ಬಿ. L. ಅ. ಪ್ರೆಸಿಡೆಂಟ್ ಮತ್ತು ಮ್ಯಾನೇಜರ್.

ದಿ ಟ್ರಾಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮುಖ್ಯ ಖಚೇರಿ:–ಹೊಸ ಡೆಲ್ಲಿ.

32-2i ಸ್ಥಾಪಿಸಿದ ಡೈರೆಕ್ಟರರು:

ಸಂಪಿಜೆ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮಲಖಾನ್. ಡಾ|| ಎಂ. ಎ. ಅನ್ಸಾರಿ.

Transacts:--LIFE, FIRE, MOTOR and MARINE.

ಬ್ರಾಂಚ್ ಸೆಕ್ರೆಟರಿ,
ಹಂಪನಕಟ್ಟಾ, ಮಂಗಳೂರು.

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಿಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245ರ ವರೆಗೆ.
2. 12ನೇ ನಂಬರಿನ ಒಂಟಿ ಹೊಳವಿನ ಕೋವಿ ಕ್ರಯ ರೂ. 320–0–0
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott)
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make)
5. .32 ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಿಗಳೂ ಸಹ ದೊರೆಯುತ್ತವೆ.
6. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇಮಾಡುವ ಪಂಪುಗಳು (Spraying Pumps)
7. ½" ¾" 1" 1½" 2" ಕಬ್ಬಿಣದ ಸಲಾಕೆಗಳು.

ಹೆಚ್ಚಿನ ಮಾಹಿತಿಯನ್ನು ಅಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಿಗಳಿಗೂ ಜಿಲ್ಲಾ ಮೇಜಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆಯಲಾಗುತ್ತದೆ ಎಂಬುದು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

32–2

Edited Printed and Published by P. I. Bellappa at 'KOdagu' Press, Mercara, for 'Kodagu' Ltd.

ಆದರೆ ನೆರೆ ದೇಶಗಳಿಂದ ಕಚ್ಚಾ ಹತ್ತಿಯನ್ನು ತಂದು, ನಮ್ಮಲ್ಲಿ ನೂತು ಬಟ್ಟೆ ತಯಾರು ಮಾಡುವ ಕೈಮಗ್ಗಗಳನ್ನು ಸ್ಥಾಪಿಸಲು ತಜ್ಞರು ಎಡೆಯಿದೆ. ತಕಲಿಗಳಲ್ಲಿ ನಂತರ ಚರಕಗಳಲ್ಲಿ ನೂಲುವುದನ್ನು ವಿದ್ಯಾರ್ಥಿಗಳಿಗೆ ಕಲಿಸುವುದು ಅತ್ಯುತ್ತಮ ವಿದ್ಯೆಯೆಂದು ನನ್ನ ಭಾವನೆಯಾಗಿದೆ. ಮಳೆಗಾಲದಿರುವಾಗ ಅಭ್ಯಸಿಸಿದರೆ ಪೈಲಿ ಮತ್ತು ಕೃಷಿ ಸರಿಯಾಗಿ ನಡಿಬಹುದು ತ್ತದೆ. ಹೆಚ್ಚಿನ ವ್ಯಾಕತ್ಯ ನವ್ಯ ಕಾಲೆಗಳಲ್ಲಿ ಕೊಡಲು ದುಸಾಧ್ಯವಾದರೂ, 'ಅಭ್ಯಸಿದ್ದಲ್ಲಿ ಮೂರ್ಗವಿದೆ' ಎನ್ನುವ ಹಾಗೆ, ಪ್ರಯತ್ನಿಸಿದರೆ ಸಫಲವಾಗುವುದು ಖಂಡಿತ.

ಬೆಲ್ಲ

ಬೈನೆ ಮರದಿಂದ ಬೆಲ್ಲವನ್ನು ತಯಾರು ಮಾಡುವುದು ಅತಿ ಪ್ರಯೋಜನಕಾರಿಯಾದ ಕೆಲಸವಾಗಿದೆ. ಕೊಡಗಿಗೆ ಬೇಕಾದ ಬೆಲ್ಲವನ್ನು ಇಲ್ಲಿಯೇ ತಯಾರು ಮಾಡಬಹುದಾಗಿದೆ. ಸೇಂದಿ ಅಂಗಡಿಗಳನ್ನು ನಿರ್ನಾಮಗೊಳಿಸಿ, ಪಂಥ್ಯಾನವನ್ನು ರದ್ದು ಮಾಡಿದರೆ, ಈ ಕೈಗಾರಿಕೆಯು ಯಶಸ್ವಿಯಾಗುವುದು. ಸರಕಾರದವರೇ ತುಂಬಾ ಶ್ರದ್ಧೆಯನ್ನೂ, ಮುತುವರ್ಜಿಯನ್ನೂ ತೋರಿಸಿದರೆ ಅತಿ ಉತ್ತಮ ರೀತಿಯಿಂದ ನಡೆಸಬಹುದು. ಬೆಲ್ಲದ ಕ್ವಾಲಿಟಿಯನ್ನು ಈ ಏರ್ಪಾಡಿನಿಂದ ಅಂತ್ಯಗೊಳಿಸಬಹುದು. ಕೈಕೇರಿಯಲ್ಲಿ ಪ್ರಾರಂಭವಾದ ಈ ಉದ್ಯಮವು ಕೊಡಗಿನ ಎಲ್ಲಾ ಭಾಗಗಳಲ್ಲಿ ಉಂಟಾಗಿ, ಇದಕ್ಕೆಲ್ಲಾ ಒಂದು ಕೇಂದ್ರ ಸ್ಥಳವನ್ನು ರಚಿಸಿ ಮೇಲ್ವಿಚಾರಣೆ ಮತ್ತು ಆಡಳಿತ ಸರಿಯಾಗಿ ನಡೆದರೆ ಖಂಡಿತವಾಗಿಯೂ ಜಯಪ್ರದವಾಗುತ್ತದೆ. ಆದರೆ ಪ್ರಾರಂಭದ ಆನಂದ ಮತ್ತು ಉತ್ಸಾಹ ಅಂತ್ಯದ ವರೆಗೆ ಇಲ್ಲದಿರುವುದೇ ದೊಡ್ಡದೊಂದು ಅಡಚಣೆಯಾಗಿದೆ. ಇದರಿಂದ ಸ್ವಂದ್ಪ ಪ್ರಯೋಜನ ಉಂಟಾಗುವುದು. ಮದ್ಯ ಸೇವನೆಯಿಂದ ಜನರು ಪಾರಾಗುವರು. ಸಾಕಷ್ಟು ಬೆಲ್ಲ ಕಡಿಮೆ ದರದಲ್ಲಿ ಜನರಿಗೆ ದೊರೆಯುವುದು. ಮದ್ಯಾಸು ಅಧಿಪತ್ಯದಲ್ಲಿ ಬೆಲ್ಲದ ಸೃಷ್ಟಿಯು, ಮದ್ಯಪಾನ ನಿಷೇಧದಿಂದ ಬಹಳ ಸುಧಾರಿಸಿದೆ.

ಕೃಷಿ ಪದಾರ್ಥವಾದ ಭತ್ತದ ಕೆಲವು ಗಿರಣಿಗಳು ನಮ್ಮಲ್ಲಿವೆ ಆದರೆ ಮೂಲಿಕರು ದೇಶೀಯರ ಹಿತವನ್ನು ಎಷ್ಟರ ಮಟ್ಟಿಗೆ ಬಯಸುತ್ತಿದ್ದಾರೊ ಏನಾಗಿ ತಿಳಿಯದು. ಕಾಫಿಗೆ ಹೆಸರುವಾಸಿಯಾದ ನವ್ಯ ದೇಶದಲ್ಲಿ ಕಾಫಿ ಪುಡಿ ಮಾಡುವ ಮತ್ತು ಮಾರಾಟ ಮಾಡುವ ವ್ಯವಹಾರುಗಳನ್ನು ತೋಟಗಳ ಮೂಲಿಕರು ಮಾಡಿದರೆ ಉತ್ತಮವಾಗಿದೆ. ನಮ್ಮ ದೇಶದ ಕಾಫಿಯನ್ನು ನೆರೆ ರಾಷ್ಟ್ರಗಳಿಗೆ ಕಳಿಹಿಸಿ, ನಂತರ ಕಾಫಿ ಪುಡಿಯನ್ನು ಪುನಃ ತರಿಸಿ ನಾವು ಉಪಯೋಗಿಸುವದರಲ್ಲಿ ನಷ್ಟವಿದೆ. ಚಾ ಗಿರಣಿಯೊಂದು ಹುದಿಕೇರಿಯ ಹತ್ತಿರ ಇದೆ. ಆದರೆ ಕೊಡಗಿನಲ್ಲಿ ಸಿದ್ಧವಾದ ಚಾವನ್ನು ಅದಿಷ್ಟು ವಾಂದಿ ಕುಡಿಯುವರ್ತ್ತಾರೆ? ಸ್ವಲ್ಪ ಮಟ್ಟಿಗಾದರೂ ಇದರ ವೊಂಟ ನಮ್ಮ ದೇಶದಲ್ಲಿ ಕಡಿಮೆ ಬೇಕು.

ಈ ಮೇಲೆ ವಿವರಿಸಿದ ಕೈಗಾರಿಕೆ ಉದ್ಯಮಗಳು ಪ್ರಾರಂಭಿಸಿ ಅಭಿವೃದ್ಧಿ ಯಾಗ್ಬೇಕಾದರೆ ಸರಕಾರದವರೂ, ಪ್ರಜೆಗಳೂ ಒಮ್ಮನಸ್ಸಿನಿಂದ ಸಹಕರಿಸಬೇಕು. ಜನರೂ ತಾವೇ ಮುಂದೆ ಬಂದು ರಚನಾತ್ಮಕ ಔದ್ಯೋಗಿಕ ಸಲಹೆಗಳನ್ನು ಸರಕಾರದವರಿಗೆ ಕೊಟ್ಟು ತಮ್ಮ ಅಚಲ ಮನೋ ಶ್ರದ್ಧೆಯನ್ನೂ ಶಾಶ್ವತವಾದ ಉತ್ಸಾಹವನ್ನೂ ತೋರಿಸಬೇಕು. ಉತ್ಸಾಹಿಗಳಿಗೆ ಸರಕಾರದವರು ಕನಿಷ್ಠ ಬಡ್ಡಿಯಲ್ಲಿ ಧನ ಸಹಾಯ ನೀಡಬೇಕು. ಧನವಂತ ಮಾಸಿಕ ವ್ಯಕ್ತಿಗಳು ಪುಟ್ಟ ರೀತಿಯಲ್ಲಿ ತಮ್ಮ ಮನೆಯಲ್ಲಿಯೂ ಗಿರಣಿಗಳಲ್ಲಿಯೂ ಗ್ರಾಮಗಳಲ್ಲಿಯೂ ಅಲ್ಲಿಯೂ ನಗರಗಳಲ್ಲಿಯೂ ಕೈಗಾರಿಕೆ ಕೇಂದ್ರಗಳನ್ನು ಸ್ಥಾಪಿಸಬೇಕು. ಔದ್ಯೋಗಿಕ ವೃತ್ತಿ ಶಾಲೆಯೊಂದು ಕೇಂದ್ರ ಸರಕಾರದ ನೇತೃತ್ವದಲ್ಲಿ ವೀರಾಜಪೇಟೆಯಲ್ಲಿ ಸ್ಥಾಪಿಸಿದ್ದು ಅತೀ ಶ್ಲಾಘನೀಯವಾದದ್ದು. ಆದರೆ ಒಂದು ಮಾತು. ವಿವಿಧ ಕೈಗಾರಿಕೆಗಳಲ್ಲಿ ತರಬೇತು ಹೊಂದುತ್ತಿರುವ ವಿದ್ಯಾರ್ಥಿಗಳಿಲ್ಲರೂ, ತಮ್ಮ ತರಬೇತು ಮುಗಿದ ನಂತರ ಅದೇ ವೃತ್ತಿಗಳನ್ನು ಕೈಗೊಳ್ಳಬೇಕು. ಸರಕಾರದವರು ಇವರಿಗೆ ಧನ ಸಹಾಯ ನೀಡಬೇಕು. ಅವರವರ ಗ್ರಾಮದ ಸಹಕಾರ ಸಂಘಗಳು ಸರ್ವ ಸಲಕರಣೆಗಳನ್ನು ಒದಗಿಸಬೇಕು. ಈ ಕೈಗಾರಿಕೆಗಳನ್ನೆಲ್ಲಾ ಅಭಿವೃದ್ಧಿ ಪಡಿಸಲು ಸಹಕಾರಿ ಸಂಘಗಳಿಗೆ ತುಂಬಾ ಸಾಧ್ಯವಿದೆ. ಮನೆಯಲ್ಲಿಯೂ ಗಿರಣಿಗಳಲ್ಲಿಯೂ ಗ್ರಾಮಸಂಘಗಳ ಮುಖಾಂತರವಾಗಲೀ ತರಬೇತು ಪಡೆದವರು ವೃತ್ತಿಕಾಲೆಗಳನ್ನು ಸ್ಥಾಪಿಸಬೇಕು. ಇದಕ್ಕೆ ಸರಕಾರದ ಔದ್ಯೋಗಿಕಾಭಿವೃದ್ಧಿ ತತ್ವವನ್ನು ಸಹಕಾರದ ಧ್ಯೇಯವನ್ನು ತಳಹದಿಯಾಗಿಟ್ಟುಕೊಂಡು ತಮ್ಮ ವೃತ್ತಿಯನ್ನು ಮುಂದುವರಿಸಿದರೆ ಅಯಾ ವೃತ್ತಿಗಳಿಗೂ ಮತ್ತು ದೇಶಕ್ಕೂ ಕಲ್ಯಾಣವಾಗುವುದು.

ಇದಲ್ಲದೆ, ತರಬೇತು ಮುಗಿದನಂತರ ಸುಮಾಸ್ತ ಉದ್ಯೋಗವನ್ನು ಕೈಗೊಂಡರೆ ಶುದ್ಧ ಭ್ರಮೆಯೇ ಸರಿ. ವೃತ್ತಿ ಶಾಲೆಗೆ ಸೇರುತ್ತಿರುವುದು ಬರೇ ತನೂಪೋಷಣಿಯೆಂದು ಯಾರೂ ಕಾಲಹರಣ ಮಾಡಲಿಕ್ಕೆಂದೂ ಯಾರೂ ಭಾವಿಸಕೂಡದು. ಸ್ವಾತಂತ್ರ್ಯವಿಜಿಯೆಂಗು ವರ್ಷಾನ ಮಧ್ಯದಲ್ಲಿ ಶಾಲೆಯನ್ನು ಬಿಟ್ಟು ಹೋಗುವುದು ಬುದ್ಧಿವಂತಿಕೆಯಲ್ಲ. ಈ ಕಲಾ ಶಾಲೆಗಳಲ್ಲಿ ತರಬೇತು ಹೊಂದುವವರೆಲ್ಲಾ ಸರಿಯಾಗಿ ಅಂಕಗೊಳಿಸಿ ತಮ್ಮ ಗುರಿಯನ್ನು ಸಾಧಿಸಿದ್ದೇ ಆದರೆ ನಮ್ಮ ಈ ಪುಟ್ಟ ಕೊಡಗಿನ ಕೈಗಾರಿಕೆಗಳು ಅಭಿವೃದ್ಧಿಯಾಗುವುದು ನಿರ್ಧಾರವಾದ ಮಾತು.

ಬೇಗನೆ ಕೊಡಗಿಗೆ ಹೆಚ್ಚಿನ ಹೊಸ ಗಾರಿಕೆ ಸರಕಾರ ಬರುವುದೆಂದು ತಿಳಿದು ಬಂದಿದೆ. ಪ್ರಜಾ ಪ್ರತಿನಿಧಿಗಳ ಸಂಖ್ಯೆ ಹೆಚ್ಚಾಗಿ ಅಶಕ್ತತವು ನಿರಂಕುಶತೆಯಿಂದ ದೂರವಾಗಿ ವಾಗ ಈ ಮೇಲಿನ ಕೈಗಾರಿಕೆಗಳನ್ನೆಲ್ಲಾ ಸಾಧ್ಯವಾದಷ್ಟು ಮಟ್ಟಿಗೆ ಅಭಿವೃದ್ಧಿಪಡಿಸಲು ತುಂಬಾ ಎಡೆಯಿದೆ.

Licence No. 60,
licenced to Post without Prepayment

Reg. No. M. 1333.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಬಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5–0–0.

ಸಂಪುಟ ೩೧ | ಜಂಬೀಕಳು ೨೬–೧೨–೧೯೫೦ನೇ ಶುಕ್ರವಾರ | ಸಂಚಿಕೆ ೧೯

ಹೈದರಾಬಾದಿನ ಸಮಸ್ಯೆ ಮತ್ತು ಭವಿತವ್ಯ.

ಹೈದರಾಬಾದ ಸಮಸ್ಯೆಯು ಇನ್ನೂ ಮುಂದಿವರಿಯುತ್ತಲೇ ಇರುತ್ತಾ ಜನರ ಲಕ್ಷವು ಅತ್ತ ವೇದಿಕ್ಕಲ್ಪಡುತ್ತಿದೆಯಲ್ಲದೆ, ಭಾರತೀಯರಿಗೆ ಪ ನಸಿನಲ್ಲಿ ಆ ಬಗ್ಗೆ ಒಂದು ವಿಚಿತ್ರ ಆಸ್ಥೆಯನ್ನು ಉತ್ಪನ್ನಮಾಡುತ್ತಲಿದೆ. ಬ್ರಿಟಿಷರಿಂ ಳಿಕೆಯ ಕಾಲದಲ್ಲಿ ಸಾರ್ವಭೌಮತ್ವವಾದೀ ಕೆಲವು ಮಂತ್ರಿಗಳಿಗೆ ಅದೊಂದು ತಲಹಬಿಯಿ ಸ್ಥಾನವಲಿತ್ತು. ಬ್ರಿಟಿಷ್ ಚಿಕ್ಕಮಾನ್ನು ಸಂರಕ್ಷಿಸುವ ಹಾಗೂ ಅದನ್ನು ಮುಂದುವರಿಸುವ ಕಾರ್ಯದಲ್ಲಿ ವೇರಿದ ದಾರಿ ಶಯೋಗವನ್ನು ಪಡಗಿಕೊಳ್ಳಲು ನಾಡಿನ ಕೆಂಡಿಸಲ್ಲಿ ಇದು ಮುಂದುವರಿಯುತ್ತಿತ್ತು. ಭಾರತದಲ್ಲಿ ಬ್ರಿಟಿಷ ಸಾಮ್ರಾಜ್ಯದ ಹುಟ್ಟಿಕೆ ಹೈದರಾಬಾದನೇ ಬೇಟಿಗೊಡಗಿತ್ತೆಂಬುದು ಸುಪ್ರಸಿದ್ಧವಾದ ಚರಿತ್ರೆ ಅಂಶವಲ್ಲವೆ. ಹೈದರಾಬಾದ ಆಡಳಿತಾಂಗದಲ್ಲಿ ಇದ್ದ ಬಿರುದು ಬಾವಲಿಗಳೂ, ವಿಶೇಷ ಸೌಲಭ್ಯ ಸವಲತ್ತುಗಳೂ ಇದಕ್ಕೆ ಸಾಕ್ಷಿ ನೀಡುತ್ತಿದ್ದವು.

ಭಾರತದ ಜ ತಂತ್ರ ರಾಜಕೀಯದಲ್ಲಿ ಮುಸ್ಲಿಂ ಲೀಗಿನ ಪೆನೆವರ್ನೆಯು ಬೇರುಗಳು ಹೈದರಾಬಾದಿನಲ್ಲಿ ಹುಟ್ಟಿ ಬೆಳೆದುವು ನಿಸಂಶಯವು ಪ್ರತ್ಯೇಕತ್ವಕ್ಕೆ, ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ವೇಗವನ್ನು ಹಿಮ್ಮೆಟ್ಟಿಸುವ ಪ್ರಯತ್ನಗಳೂ ಬೆಟ್ಟಿಂದಲೇ ನಡೆಯುತ್ತಿದ್ದವು. ಈ ಸರಣಾಮವಾಗಿ, ಭಾರತವು ಸ್ವತಂತ್ರವಾದ ಬಳಿಕ, ಹಾಗೂ ಜಾತೀಯ ತಳಹದಿಯ ಮೇಲೆ ದೇಶವು ಇಬ್ಬಾಗವಾದ ಬಳಿಕ, ಹೈದರಾಬಾದಲ್ಲಿ ಮುಸ್ಲಿಂ ಜಾತೀಯತೆಯು ನಗ್ನ ನೃತ್ಯವನ್ನು ನಡೆಸಿ ಹೈದರಾಬಾದವನ್ನು ಸ್ವತಂತ್ರ ಸಾರ್ವಭೌಮ ರಾಜ್ಯವನ್ನಾಗಿ ಮಾಡಲು ಪ್ರಯತ್ನಿಸಿತು. ಹೈದರಾಬಾದದಲ್ಲಿ ಆಗ ಅಧಿಕಾರ ಪೂಗೂ ಪಾಕಿಸ್ತಾನೀ ಒಲವಿನ ಜನತಾ ವಿಭಾಗಗಳು ಗಂಡಾಂತರ ಪರಿಸ್ಥಿತಿಯನ್ನು ತಂದೊಡ್ಡಿದವು. ಈ ಅಪಾಸ್ಥವನ್ನು ಸ್ವೀಕರಿಸಿ ಹೈದರಾಬಾದ ಸಂಸ್ಥಾನ ಕಾಂಗ್ರೆಸ್ಸು ಆವನ್ನ ಭಾರತದ ಒಂದು ಭಾಗವನ್ನಾಗಿ ಮಾಡಲು ತುಂಬಾ ಹೋರಾಡಿತು. ಈ ಹೋರಾಟವೇ ಪೊಲೀಸ ಕೃತಿಗಳಿದು ಕೊನೆಗೆ ಹೈದರಾಬಾದು ಭಾರತದ ಒಂದು ಭಾಗವಾಯಿತು.

ಪ್ರಕ್ಷುಬ್ಧ ಪರಿಸ್ಥಿತಿಯನ್ನು ಮನದಟ್ಟು ಹೈದರಾಬಾದದಲ್ಲಿ ಪೊಲೀಸ ಆಡಳಿತ

ಲೇ:–ಸ್ವಾಮಿ ರಮಾನಂದತೀರ್ಥ.

ತವು ಆರಂಭವಾಯಿತು. ಆಗಿನ ಆಸಾಮಾನ್ಯ ಪರಿಸ್ಥಿತಿಗೆ ಅದು ಬೇಕಾಗಿತ್ತು. ಪರಿಸ್ಥಿತಿ ಹಿಡಿತದಲ್ಲಿ ಬಂದು ಜಾತಾವರಣವು ಕಳಿಯಾಗಲು ಅವಕಾಶವಾಗಿತ್ತು ಎಂದು ಜನತೆ ಈ ಪೊಲೀಸರ ಆಡಳಿತದ ಕಡೆಗೆ ಅಭಿಪ್ರಾಯವನ್ನು ನೋಡುತ್ತಿತ್ತು. ಪೊಲೀಸ ಆಡಳಿತವಾದರೂ ಕನ್ನ ಸಾರ್ವಭೌಮದಿಂದ ಕರಿಸ್ಥಿತಿಯನ್ನು ಹಿಡಿತದಲ್ಲಿ ತಂದು ವಾತಾವರಣವನ್ನು ತಿಳಿಗೊಳಿಸಿದರು.

ಪೊಲೀಸ್ ಆಡಳಿತವು, ಏನೇ ಆಗಲಿ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ಅಸ್ತಿತ್ವದಲ್ಲಿದ್ದಾಗ ಪ್ರತಿಕೂಲಕರ ಆಡಳಿತ ನೆಡೆಸಿದ್ದವಾಗಿರುತ್ತದೆ. ಪ್ರಕ್ಷುಬ್ಧತೆ ತಿಳಿದು ವಾತಾವರಣವು ಸಹಜವಾದಾಗ ಆಡಳಿತಕ್ಕೆ ಅದು ಸ್ಥಾನಪಟ್ಟು ಕೊಡಬೇಕು. ಆದರೆ ಹೈದರಾಬಾದಲ್ಲಿ ಹಾಗೆ ಆಗಲಿಲ್ಲ. ಹದಿನೈದು ತಿಂಗಳುಗಳ ಮೇಲೆಯೂ ಪೊಲೀಸ್ ಆಡಳಿತವು ಸಾಗಿತು. ಈ ಕಾಲಾವಧಿದಲ್ಲಿ ಸಂಸ್ಥಾನದ ಜನತೆಯು ಜಗತ್ತಿನ ಇತರ ಜನತೆಯು ಜಗತ್ತಿನ ಸಮಸ್ಯೆಗಳ ಪರಿಹಾರ ಕಾರ್ಯವು ಅಪ್ಪಾಯಮಾನವಾಗಿ ಸ್ವಯಂ ನಡೆಯಲಿಲ್ಲ. ಶಾಂತಿ ಸುವ್ಯವಸ್ಥೆಗಳ ನಿರ್ಮಾಣವು ಕಷ್ಟಸ್ಪ ಸರಿಯಾಗಿ ಆಗಿದ್ದರೂ ಉಳಿದ ವಿಷಯಗಳ ಬಗ್ಗೆ ಎಷ್ಟು ಬೇಕಾದರೂ ಅಸ್ಪ ಗಮನವು ದೊರೆಯಲಿಲ್ಲ. ಆಗಿನ ಪೊಲೀಸ್ ಆಡಳಿತವು ವಿಲಕ್ಷಣ ರೀತಿಯಲ್ಲಾಗಿತ್ತೆಂದೂ ಜನತೆದು ಸಮಸ್ಯ ಜೀವನದ ಕಡೆಗೆ ಅದು ನೋಡದ ಪರಿಸ್ಥಿತಿಯಲ್ಲಿತ್ತೆಂದೂ ಈಗ ಹೇಳಬಹುದಾಗಿದೆ. ಜನತೆಯು ಸ್ಥಿತಿ ಹಿಂದೆ ಹೇಗಿತ್ತೋ ಹಾಗೆಯೇ ಉಳಿದಿರುವುದು. ಈ ಬಗ್ಗೆ ಯಾರನ್ನು ದೂಷಿಸಬೇಕು? ಎಂಬ ಪ್ರಶ್ನೆ ಏನಿಲ್ಲ. ಆದರೆ ಪೊಲೀಸ್ ಆಡಳಿತವು ಬೇಗನೆ ಮುಗಿದು ನಾಗರಿಕ ಆಡಳಿತಕ್ಕೆ ಅನುವು ದೊರೆಯ ಬೇಕಾಗಿತ್ತು. ಅಷ್ಟಾಗದ್ದರಿಂದ ಜನತೆಗೆ ಸೊಂದರೆಯೂಯಿತು. ಈ ಬಗ್ಗೆ ಅನೇಕ ರಮ ಭಿನ್ನಾಭಿಪ್ರಾಯವಿದ್ದರೂ ಹೈದರಾಬಾನದಲ್ಲಿಯ ಅನೇಕರು ಇದಮ್ಮೊಪ್ಪಿದ್ದಾರೆ.

ಪೊಲೀಸು ಆಡಳಿತವು ಕೊನೆಗೊಂಡು ನಾಗರಿಕ ಆಡಳಿತವು ಬಂದು ಹಲವು ತಿಂಗಳುಗಳಾದವು. ಆದರೆ ಸಂಪೂರ್ಣ ಜನವ್ಯಾಪ್ತಿಸಿದ್ಧವಾದ ಸರಕಾರವಾಗಲೀ, ವಾಣಿಜ್ಯ, ಉದ್ಯಮ ಪಿ. ಡಬ್ಲ್ಯೂ. ಡಿ. ಮೊದಲಾದ ಮಹತ್ವದ ಶಾಖೆಗಳು ಅಧಿಕೃತ ಗತ್ತಿಸಿಕೆ ಕಡೆಗೇ ಉಳಿದವು. ಈ ಅವ್ಯವಸ್ಥೆಯು ಸಾರ್ವತ್ರಿಕ ಆಯ್ಕೆಯ ನಂತರ ಸರ್ಕಾರಾಭಾಗಾಬಹುದು; ಜನಪ್ರತಿನಿಧಿಕ ಸರಕಾರವು ಆಡಳಿತವನ್ನು ನಡೆಯಿಸಬಹುದು.

ಈ ಮೊದಲು ಒಂದು ಮಿನಿಸಾಂಜಕ ಘಟನೆ ನಡೆಯಿತು. ಭಾರತ ಸರಕಾರ–ಹೈದರಾಬಾದ್ ಸರಕಾರಗಳ ಮಿಸ್ಟೆ 'ಸ್ಟ್ಯಾಂಡ್ ಸ್ಟಿಲ್' (ಶಾಂತಿ) ಒಪ್ಪಂದ ನಡೆದು ಅಂತಿಮಗೊಳ್ಳಬೇಕಾದ ಸಮಯ ವಷ. ಆಗ ನಾನು (ರಮಾನಂದ ತೀರ್ಥ) ಸರೆಮನೆಯಲ್ಲಿದ್ದೆ. ಆಗಿನ ಕಾಂಗ್ರೆಸ್ ಅಧ್ಯಕ್ಷನಾಗಿದ್ದೆ. ಲಾಯಕ ಅಲ್ಲ ಮಂತ್ರಿ ಮಂಡಳವು ನನ್ನೊಡನೆ ಮಾತುಕತೆ ನಡೆಸಿತ್ತು. ಅದರಲ್ಲಿ ಒಂದು ನಿಯಮವೆಂದರೆ ನಾನು ಒಪ್ಪುವುದು ಅವರಿಗೆ ಜೀವಕಾಗಿತ್ತು. ಭಾರತ ಪಾಕಿಸ್ತಾನಗಳ ಮುದ್ದಾದವಾದಲ್ಲಿ ಹೈದರಾಬಾದವು ತಟಸ್ಥವಾಗಿರಬೇಕು ಎಂಬುದೇ ಈ ನಿಯಮವಾಗಿತ್ತು. ಆದಕ್ಕೆ ನಾನು ಒಪ್ಪಲಿಲ್ಲ. ಮೊದಲು ಹೈದರಾಬಾದವು ಭಾರತದಲ್ಲಿ ಸೇರ್ಪಡೆಯಾಯಿಸಿಂದು ಘೋಷಿಸಬೇಕು. ಬಳಿಕ ಉಳಿದ ವಾಸುಗಳ ಚರ್ಚೆ ನಿರ್ಣಯಗಳು ನಡೆಯಬೇಕೆಂದು ಹೇಳಿದೆ. ಪರಿಣಾಮವಾಗಿ ಮಾತುಕತೆ ಅಲ್ಲಿಗೇ ನಿಂತು ಸರಕಾರವೆ ನನ್ನನ್ನು ಸರೆಮನೆಯಿಂದ ಮುಕ್ತಗೊಳಿಸಿದರೂ ಮಂಳಿ ಮತ್ತೆ ನಾನು ಸೆರೆಮನೆಯ ದಾರಿಯನ್ನು ಹಿಡಿಯಬೇಕಾಯಿತು.

ಚಿಕ್ಕ ಚಿಕ್ಕ ಮತ್ತು ದೊಡ್ಡ ಜಮೀನುದಾರರನ್ನೊಳಗೊಂಡ ತೆಲಂಗಣವು ಕಮ್ಯೂನಿಷ್ಟ ಆಂದೋಲನದ ಆಡಂಬೋಲವಾಗಿದೆ. ಕಳೆದ ಮೂರು ವರ್ಷಗಳಿಂದ ಅಲ್ಲಿ ಸಾಯುಧ ಹೋರಾಟ ನಡೆಯುತ್ತಿದ್ದ ಅಲ್ಲಿಯ ಜನತೆಗೂ ಸರಕಾರಕ್ಕೂ ಸಂಬಂಧವನ್ನೇ ಕಪ್ಪಿಸಿದಂತಾಗಿರುತ್ತದೆ. ಈ ಕಮ್ಯೂನಿಷ್ಟರ ಮುಂದಿನ ಯೋಚನೆಯೇನೋ ಅವರೇ ಅದನ್ನು ಹೇಳಬೇಕು. ಆದರೆ ಅಲ್ಲಿಯ ಭೂಸಮಸ್ಯೆ (ಇದೇ ಕಮ್ಯೂನಿಷ್ಟ ಆಂದೋಲನದ ಮೂಲಕಾರಣವೆಂದು ಹೇಳಲಾಗುತ್ತಿದೆ) ಪಾತ್ರ ಬಿಡಿಸಲ್ಪಡಬೇಕು. ಇದೊಂದು ತೆಲಂಗಣದ ಒಕ್ಕಲಿಗರನ್ನು 'ಇಂದೂಕ ಆಂದೋಲನ' ದಿಂದ ಬಿಡಿಸುವ ಮಾರ್ಗವಾಗಿರುತ್ತದೆ. ಈ ಬಗ್ಗೆ ಆಳವಾಗಿ ವಿಚಾರಿಸಿದವರು 'ಇದು ಜನರನ್ನೊಳಗೊಂಡ ಪ್ರತಿಯೊಂದು ಕುಟುಂಬಕ್ಕೆ ೧೦೦ ವಿಘದ ಖುಷ್ಕಿ, ೫೫ ವಿಘದ ಕರಿ ಹಂ ಭೂಮಿ ಎಲ್ಲಿಕ್ಕೂ ಹೆಚ್ಚೆಂದರೆ ಇರಬೇಕು. ಉಳಿದ ಭೂಮಿಯು ಒಕ್ಕಲಿಗರಲ್ಲಿ ಆನುಕೂಲ ಪದ್ಧತಿಯಿಂದ ವಿತರಣೆ ಮಾಡಲ್ಪಡಬೇಕೆಂದು ಹೇಳುತ್ತಿದ್ದಾರೆ. ಈ ಕಾರ್ಯವು ಕೂಡಲೇ ಕೈಗೊಳ್ಳಲ್ಪಡಬೇಕು. ಏಕೆಂದರೆ ಪ್ರಜಾಪ್ರಭುತ್ವ ಅಳಿಕಯ ಸಾಫಲ್ಯವು ಬಹು ಮಟ್ಟಿಗೆ ಇದನ್ನೇ ಅವಲಂಬಿಸಿರುತ್ತದೆ.

ಹೈದರಾಬಾದ ಸಮಸ್ಯೆಗಳಲ್ಲಿ ಇನ್ನೂ ಒಂದು ಮಹತ್ವದ ಸಮಸ್ಯೆಯು ಇನ್ನೂ ಬಿಡಿಸಲ್ಪಡದೆ ಉಳಿದಿರುತ್ತದೆ. ಹೈದರಾಬಾದ ಪ್ರದೇಶವು ಪ್ರಾದೇಶಿಕವಾಗಿ ಹಾಗೂ ವಿಳ ಪ್ರಭುತ್ವ ರೀತಿಯಲ್ಲಿ ವಿವಿಧ ಜನಾಂಗಗಳನ್ನು ಒನ್ಯೆಸರ್ಗಿಕವಾಗಿ ಕೂಡಿಸಿದ ಪ್ರದೇಶವಾಗಿರುತ್ತದೆ. ಭಾಷಾಸಂಗಣವಾಗಿ ಈ ಸಂಸ್ಥಾನವು ಕರ್ನಾಟಕ, ಆಂಧ್ರ, ಮಹಾರಾಷ್ಟ್ರ ಹೀಗೆ ಮೂರು ವಿಭಾಗಗಳಿಂದ ಕೂಡಿರುತ್ತದೆ. ಅವರವರ ಸಂಸ್ಕೃತಿ, ಭಾಷೆ, ಕಲೆ, ಪದ್ಧತಿಗಳೇ ಅವರವರ ಜೀವನದಿಸ ಜೀವನದಲ್ಲಿ ಕಂಡು ಬರುತ್ತವೆ. ಆದುದರಿಂದ ಈ ಭಾಗಗಳ ಸಂಸ್ಥಾನದ ಹೊರಗಿನ ಅಯಾ ಭಾಷೆಯ ಭಾಗಗಳೊಡನೆ ಸೇರ್ಪಡೆಯಾಗುವುದೇ ಒಳ್ಳೆಯದು. ಸೈದರಾಬಾದಿನ ಎಲ್ಲಾ ಜನತೆಯು, ರಾಜಕೀಯ ಪಕ್ಷ ಸಂಘಗಳ ಇವರೆ ಸಂಘದ ಸಂಸ್ಥೆಗಳ ಅಭಿಪ್ರಾಯವೂ ಇದೇ ಆಗಿದೆ. ಹೈದರಾಬಾದ ಕಾಂಗ್ರೆಸ್ ಬರಲಿರುವ ಪಹಾ ಆಯ್ಕೆಯಲ್ಲಿ ಇದೇ ಹೆಜ್ಜೆಯನ್ನು ಇಡಲಿದೆ. ಭಾಷಾನುಗುಣ ಸ್ವಾಂತ ರಚನೆಯ ಪ್ರಶ್ನೆಯೂ ಗಂಭೀರವಾಗಿ ಹೈದರಾಬಾದದ ವಿಕರಣೆಯೂ ಆಗಲೊಡನೆ ಸೇರಿದೆ. ಮಹಾ ಆಯ್ಕೆಯಾಗಿ ಕೂಡಲಿರುವ ಅಸೆಂಬ್ಲಿಯಲ್ಲಿ ಈ ಬಗ್ಗೆ ಒಂದು ನಿರ್ಣಯವಾಗಲಿದೆ. ಈ ಭಾಷಾವಾರು ಪ್ರಾಂತ ಪ್ರಶ್ನೆಯನ್ನು ಬಿಡಿಸುವ ಕಾರ್ಯವು ಕೇಂದ್ರದ ಕೈಯಲ್ಲಿದೆ. ಇದೊಂದಾಯತೆಂದರೆ ಆ ಬಳಿಕ 'ಹೈದರಾಬಾದ ಸಮಸ್ಯೆ' ಎಂಬುದೇ ಉಳಿಯಲಾರದು. ಈ ದಿನ ದೂರವಲ್ಲವೆಂದು ನಾವೆಲ್ಲರೂ ಆಶಿಸೋಣ.

ಜೈಹಿಂದ್ ಪತ್ರಿಕೆ.

ಪ್ರಕಟಣೆ.

ಶ್ರೀಮಾನ್ ಕಪ್ಪಡೆರವಂಡ ಮಾದಪ್ಪನವರು ಪಾಕಾಣೆಯಲ್ಲಿ ಕಟ್ಟಿಸಿದ ಶಾಲಾ ಕಟ್ಟಡದ ನೋಲ್ಡಿಯೆ ರಿಪೇರಿ ಮಾಡುವ ಕೆಲಸಕ್ಕೆ ಕಂಟ್ರಾಕ್ಟುದಾರರು ಬೇಕಾಗಿದ್ದಾರೆ. ಕಾಂಟ್ರಾಕ್ಟುದಾರರು ಕೆಲಸದ ವಿವರವನ್ನು ಶಾಲಾ ಹೆಡ್‌ಮಾಸ್ಟರಿಂದ ಖುದ್ದು ಬಂದು ತಾ. 15–10–51ರ ಒಳಗೆ ತಿಳಿದುಕೊಳ್ಳತಕ್ಕದ್ದು.

ಪಾರಾಜೆ ಶಾಲಾ
೫-3 ಪಂಚಾಯಿತಿದಾರರು.

ಶ್ರೀ ಕೆ. ಯಂ. ಮೊಗಪ್ಪನವರು,
"ಕೊಡಗು" ಏಜೆಂಟರು,
ಸೋಮವಾರಪೇಟೆ.

ಕಾಲ ಬಂದಾಗ.... ....!

ಮನುಷ್ಯನ ಯೋಗ್ಯತೆ ತಿಳಿಯುವ ಮೊ ಅನುಕೂಲ ವರಿಷ್ಠ ತಿಯಿರುವಾಗಲ್ಲ; ತೆಪ್ಪಗಿರಿಸಿದಾಗಿ ಬರುವ ನೆಹರೂರು ಕಾಪಥ್ರ ಯೋಗಗಳನ್ನ ಶಬಿಂಬಿಸುವಾಗ! ಬೇರೆಯವರಿಗೆ ಅದರ್ಕ–ಬುದ್ಧಿಮೂರ್ಗ ಹೇಳುವದು ಸುಲಭವೇ ನೇಹರೆದು. ಆದರೆ ತನ್ನ ಪಾಲಿಗೆ ಅದು ಅನುಸರಣೀಯವೆಂದು ತಿಳಿಯುವವರು ಕೆಲವೇ ಮಂದಿ! ಬ್ರಿಟಿಷರ ಆಡಳಿತವನ್ನ ಹೀತಾಯವಾಗಿ ದೂರಿದೆವು; ಅಹಾರಸಭಾವ ಅಂಚೆ ಗುಳಿತವ–ಕ ಕೃತಂತೆಗಳನ್ನು ಟೀಕಿಸಿದೆವು. ಅಂತಹ ಟೀಕೆ ಮಾಡಿದವರಲ್ಲಿ ನವ್ಮ ಪ್ರಧಾಥ ಮಂತ್ರಿ ಜವಾಹರಲಾಲರೂ ಮಖ್ಯರು. ಇಂದು ಅವರ ಕೈಯಲ್ಲಿ ರಾಷ್ಟ್ರದ ಆಡಳಿತ ವಿದೆ. ಆದರ ನಿಮಲೋಪಲಬ್ಧಕ್ಕಾಗಿ ಅವರು ಕೈಗೊಂಡ ಕಾರ್ಯದರ್ಶಕತೆಯನ್ನು ನಾವು ತ್ಸಾಘಿಸುವದಾದರೂ ಅಂತಹ ಡಾಷ್ಟ್ರ ಶಕ್ತಿಗಳು ದಿನಕಿಂದ ದಿನಕ್ಕೆ ಬೆಳೆಯುವುತ್ತಲೇ ಇರುವಹನ್ನು ಗಹುಘಿಸುದಿಲ್ಲ! ಇ ಹರ ಒಳಗುಟ್ಟು ಇಷ್ಟೆ! ಸ್ವಾತಂತ್ರ್ಯದ ಮುನ್ನ ಕಾಂಗ್ರೆಸಿಗರ ಪ್ರಭಸ್ಸ ದೇಶದ ಹಿತ ಡಾಗೂ ಅಭ್ಯುದಯದ ಕಡೆಗೇ ಇತ್ತು! ಅಧಿಕಾರ ಕೈಗೆ ಬಂದ ಮೇಲೆ ಅ ವಿಶಾಲದೃಷ್ಟಿ ಉಳಿಯುಲಿಲ್ಲ. ಸ್ವಾರ್ಥ ಸಾಧನೆಯಲ್ಲಿ ಮಗ್ನರಾದರು. ಅರ್ಥಾ ತ್ ತನ್ನ ನವ್ಮವರೇ ಅಧಿಕಾರದ ದಂರು ಪಯೋಗಪಡಿಸಿದರು. ಅಂತಲೇ ನೆಹ್ರೂ ಸರಕಾರ ನಾವು ಎಣಿಸಿದಷ್ಟು ಸುಪ್ರಶ್ರ ವಾಗಿ–ಯೋಗ್ಯತೀತಿಯಲ್ಲಿ ಫಡೆಯುಲಿಲ್ಲ! ಕಾತಿಯಂದಾಗಲೆಲ್ಲ ಸ್ವಾರ್ಥಸಾಧಿಸುವ ಜ ತೆ ಪಕ್ಷದ್ಲಿ ಬಹಳವಾಗಿದ್ದರಿಂದಲೇ ನೆ ಹ್ರೂ ಸ್ವತಃ ತನ್ನ ಪಭಭವನ್ನು ಪಾಲಿಸ ದಾಗಿಹ್ಹಾರೆ. ಕಾಲಬಂದಾಗ....ಬ್ಲಾ ಆದಲಾಯಿಸುವ ಬುದ್ಧಿ ಕಾಂಗ್ರೆಸ್ಸಿಗರ ಷ್ಟುಂಟಾದೀತೆಂದು ನೆಹ್ರೂ ಅಂದು ಅರಿ ಯದೇನೆ ‘ನಾನು ಅಧಿಕಾರಿಯಾಗಿದ್ದರೆ ಕ ೃತಂತೆ ಮಾಡುವವರನ್ನು ಗಲ್ಲಿಗೇರಿಸುತ್ತಿ ದ್ದೆ’ ಎಂದಿರಬೇಕು!

ಚುನಾವಣೆ ಕಾಲ ಹತ್ತಿರ ಹತ್ತಿರ ಬರುತ್ತಿರುವಾಗ ಹೊಂಯೊಳುಗಳು ತಮ್ಮ ಕೈ ಮೇಲಾಗುವದಕ್ಕೆ ಹೇಗೆ ವರ್ತಿಸುತ್ತಿದ್ದರೆಂಬದನ್ನು ಈ ವು ಕುಶಲ ಹಲ ವೇಕ ಉಕ್ತಿಪಡೆಯಲಾದ ಕೆಲಸವಿದು. ಕಾಂಗ್ರೆಸ್ಸೇತರ ಪಕ್ಷಗಳಿಗೆಂತೂ ಸ್ವಪಕ್ಷ ಪ್ರತಿ ಪಾದನೆಗಿಂತ ಪರಪಕ್ಷ ಖಂಡನೆಯೇ ಹೆ ಚ್ಚಾಗಿರುತ್ತದೆ! ಬೇರೆಯವರವನ್ನು ನೀದಿಸಿ ಯೇ–ಋಣಾತ್ಮಕವನ್ನು ಮರೆಮಾಚಿ ಅ ಕೆವ ಸರಕಾರವನ್ನು ಟೀಕಿಸಿಯೇ ಸ್ವಾ ರ್ಥಸಾಧಿಸಬೇಕೆಂಬ ಹಂಬಲ! ಇದನ್ನು ನಾವು ಚುನಾವಣಾ ಸ್ಟಂಟ್ ಎಂದರೂ ಎನ್ನಬಹುದೇನೊ! ಆದರೆ ಕಾಂಗ್ರೆಸ್ಸಿಗರ ತ್ಲೇ ಹಲವು ರೀತಿಯ ಮೇಲಾಟಗಳು ತ ಲೆಯಿಟ್ಟಿರುವದನ್ನು ನೋಡಬಹುದು. ಸಾಲ್ಕು ವರ್ಷಗಳಿಂದ ಜನತೆಗೆ ಕೇಡುಬ ಯಸಿದವರೂ, ದೇಶವನ್ನು ಅಲಕ್ಷಿಸಿದವ ರೂ, ಸ್ವಾರ್ಥಗಳಿಂದಿಂದ ಜನತೆಯೊ ಡನೆ ಬೆರೆಯುವವರೂ ಇಂದು ಅತ್ಯಂತ ಸೌ ಹಾರ್ದಭಾವ ತೋರಿಸಿದಾ ದೃಶ್ಯವನ್ನು ನೋಡುತ್ತಿದ್ದಾರೆ. ಮೊತ್ತದಲ್ಲಿ ಕಾಂಗ್ರೆ ಸಿನ ಟಿಕೆಟ್‌ಗಾಗಿ ಅಹರ್ನಿಶಿ ದುಡಿಯು ತ್ತಿರುವವರು ಸಾವಿರಾರು ಮಂದಿ! ಹೀಗಿರುವಾಗ ಜನಪ್ರತಿನಿಧಿಗಳಾಗಿದ್ದರೆ ಈ ಬಗೆಯ ಚಾಣಾ ಕ್ಷತಂತ್ರವನ್ನು ಹೂಡುತಿರಲಿಲ್ಲ. ತ ನ್ನ ಕರ್ತವ್ಯದಲ್ಲಿ ಅಕ್ಷಾನೂನಿಷತನ–ಜ ತಹಿತ ಕಾರ್ಯಗಳ ಲೋಪದೋಷವಿದ್ದರೆ–ತನ್ನ ನಿಲುಮೆಗೆ ಸಂಶಯ ಆಧಿಶ್ಚಿತತೆ ಸಹಜವಾಗಿಯೂ ತಲೆದೋರುತ್ತದೆ. ಅಂತಲೇ ಜನಾವಣಾ ಕಾಲದಲ್ಲಿ ಏನಕೇವ ಪ್ರಕಾರೇಣ ತನ್ನ ಕೈಮೇಲಾಗುವಷ್ಟ ಕ್ಕೆ ಯತ್ನಿಸುತ್ತಾನೆ. ಕಾಂಗ್ರೆಸ್ಸಿನ ಕತ್ತ ಆದರ್ಶಗಳು ಒತ್ತಟ್ಟಿಗೆ–ಇವನ ಕಾರ್ಯ ಒತ್ತಟ್ಟಿಗೆ ಆಗುವದುಂಟು! ಇಂತಹ ಸಂ ದರ್ಭದಲ್ಲಿ ತನ್ನ ದಿಗ್ವಿಜಯ ಪುಶ್ಚಿಯೊಂ ದೇ ಅವನ ತಲೆಯಲ್ಲಿ ನುಸ್ಸುತ್ತವೆಯೇ ಹೊರತು ಯ ಥಾರ್ಥವಾದ ಮಾರ್ಗವಲ್ಲ!

ಕಾಂಗ್ರೆಸ್ಸಿನ ಟಿಕೇಟನ್ನು ಪಡೆದು ಜನತೆಯ ಪ್ರತಿನಿಧಿಯಾಗಿ ನಿಲ್ಲುವುದಕ್ಕೆ ಹವಣಿಸುವುದೇಕೆ? ಕಾಂಗ್ರೆಸು ಅಧಿಕಾ ರದಲ್ಲಿರುವ ಸಕ್ಷ ಅದಕಲ್ಲಿ ತಾಪ ಮುಂ ದೆ ಬಂದರೆ ಮಂತ್ರಿಯಾಗಬಹುದೆಂಬ ದೂರ ದೃಷ್ಟಿಯೇ ಹೊರತು ತ್ಯಾಗಬುದ್ಧಿ ಯಲ್ಲ! ಕಾರಿಗ್ರೆಸ್ ಈಗಬೇಕೆಂದೇ ಇ ಷ್ಟರೆ—ಅಂತಹ ಹೊಂಯೊಳುಗಳು ಸ್ವಾ ರ್ಥದಿಂದ ದೂರಾಗಿದ್ದರೆ—ಕಾಂಗ್ರೆಸ್ಸಿನ ನಯಿಲ ತತ್ವಕ್ಕೆ ವಿರೋಧವಾದ ಮಾರ್ಗ ವನ್ನೇಕೆ ಹಿಡಿಯಬೇಕು? ಕಾಂಗ್ರೆಸು ಅಧಿಕಾರ—ಸ್ವಾರ್ಥ ಶೆಂಕುಚಿತಗಳಿಗಾಗಿ ರುವ ಸಂಸ್ಥೆಯಲ್ಲ! ಅರ್ಧ ಶತವರ್ಷದಿಂದ ಒಂದು ಉಚ್ಚ ಧ್ಯೇಯವನ್ನು ಆರಾಧಿಸು ತ್ತ ಲೋಕದ ಹಿತಕ್ಕಾಗಿ ಬದ್ಧಕಂಕಣವಾ ದ ಸಂಸ್ಥೆ! ಇಷ್ಟ ಇಡಿಯ ಸಂಸ್ಥೆಯು ಛಿದ್ರೀಕರಣ ಹಾಗೂ ಗೌರವನ್ನು ಕಾ ಪಾಡಿಕೊಳ್ಳಬೇಕು. ವ್ಯಕ್ತಿಯ ವಿಜಯ ಕ್ಕಾಗಿ ತತ್ವವನ್ನು ಮಂಡಿಯುವದು ಅನು ಚಿತ ಮಾರ್ಗ!

ಕಾಂಗ್ರೆಸ್ಸಿನ ಒಂದು ಸ್ಥಾನಕ್ಕೆ ಮೂ ರೋ ನಾಲ್ಕೋ ಆಯೋದಾರಿಕೆಯ ಅ ರ್ಜಿಗಳು ಬಂದಲ್ಲಿ ವ್ಯಕ್ತಿ ವ್ಯಕ್ತಿಗಳಲ್ಲಿ ವೈಲಾಟ ಪಡೆಯುವುದು ಸ್ವಾಭಾವಿಕ! ಇಂತಹ ಮೇಲಾಟಗಳಲ್ಲಿ ಒಬ ಹುರಿಯಾಳು ಇನ್ನೊಬ್ಬ ಹುರಿಯಾಳುವನ್ನು ಹಿಂದೂಡುವುದಕ್ಕೆ ಬಹಳ ಪ್ರಯತ್ನ ನಡೆಸುತ್ತಾನೆ. ಈಗೆ ಫಲಿತಾಂಶ ಹೊರಬೀಳುತ್ತದೆ. ಸ್ವಲ್ಪ ಪ್ರತಿಸ್ಪರ್ಧೆಗಳಿಂದ ಬಂಧಿಯು ಸುಲಭ ಕಷ್ಟಕ್ಕೆ ತೆಪ್ಪಗಿರಿ ತೆರುವ ಕಾರ್ಯ ಮಾಡಿಯುತ್ತದೆ. ಈ ಎಲ್ಲಿ ದೋಷಗಳು ದೈವಿಬವೆಂದು ಕಾಲ ಬೀದಾಗ....ಸ್ವಾರ್ಥ ಸಾಧಿಸುವ ಮನಸ್ಸು ಹೊಡುವದರಿಂದಲೇ ಎಂಬುದನ್ನು ನಾವು ಮರೆಯಬಾರದು! ಪಜ್ಞಾವಿಕ್ಕ ಪದ್ಧಾವನೆಗಳದ್ದಲ್ಲಿ ಈ ಗೊಂಡಲವೇಳದು. ಕಾಲ ಬಂದ ಹಾಗೆ ಕೋಲ ಕಟ್ಟುವದರ ದುಷ್ಪ ಪರಿಣಾಮ ವಿದು! ಚೆನಾಜಿಯ ಸ್ವರ್ಧೆಯ ಕಾಲದಲ್ಲಿ ಹುರಿಯಾಳುಗಳು ಸಂದರ್ಭಸಾಧ ಕರಾಗಿ ವರ್ತಿಸಿದರೂ ಅನಕೆ ಡಾಗ್ರತೆ ಯಿಂದ ತಮ್ಮ ನಿಲುವಿನ ಭದ್ರಗೊ ಳಿಸಿ ದೇಶದ ಕಲ್ಯಾಣವನ್ನು ಹಾಪೈಕ ಬೇಕು!

‘ಭವಿಷ್ಯ’

ಚಂದ್ರಾನ ಮತ್ತು ಕಂಪೆನಿ.

— ಪ್ರಕಟಣೆ. —

ಈ ಮೂಲಕ ಕೊಡಗು ಪ್ರಾಂತ್ಯದ ಪ್ರತಿ ಓರ್ವ ಟ್ಟೇರ್ ಜವುಳಿ ವ್ಯಾಪಾರಸ್ಥರಿಗೆ ತಿಳಿಯಪಡಿಸುವುದೇನೆಂದರೆ–ಈ ಕೆಳಗಿನ ಬೊಂಬಾಯಿ ಗಿರಣಿಯ ಸಮಯ ತಿಳಿಕ್ಕದ (Lapsed goods) ಬಟ್ಟೆಗಳನ್ನು ಪ್ರತಿಯೊ ಬ್ಬರಿಗೂ ಅವರವರಿಗೆ ಬೇಕಾದ ಬಟ್ಟೆಗಳನ್ನು ಬೇಕಾದಷ್ಟು ಕೊಡಲ್ಪಡುತ್ತವೆ. ಇಷ್ಟವಿದ್ದವರು ಕೆಳಗೆ ಕಾಣಿಸಿದ ಕಾರೀಕನಿಂದ ಹತ್ತು ದಿವಸಗಳೊಳಗೆ ಬಂದು ಪಡೆದುಕೊಳ್ಳಬಹುದು. ಹತ್ತು ದಿವಸಗಳ ನಂತರ ಇವುಗಳನ್ನು ಪ್ರಾಂತ್ಯದ ಹೊರಗಿನ ಜವುಳಿ ವ್ಯಾಪಾರಸ್ಥರಿಗೆ ಮಾರಲ್ಪಡುತ್ತವೆ.

Tax mark & No.	Name of the Mill	Variety	Exmill	Ps.
30 ಏಪ್ರಿಲ್ SM	ಕಟಾವು ಮಿಲ್ಸ್	... ವೈಲ್ (SF)	.... 1—7—1	54
30 „ SQ	„	.... „ (SF)	.... 1—5—4	29
38 „ 198	„	.... ಪ್ರಿಂಟು ಚೀಟು (F)	.... 1—8—7	7
6 „ 1286	ಸಂಚುರಿ ಮಿಲ್ಸ್	.... ಶರ್ಟಿಂಗ್ (F)	.... 1-14—8	5
54 „ 45005	ಶ್ರೀರಾಮ ಮಿಲ್ಸ್	.... ವೈಲ್ (SF)	.... 1—8—6	65
54 „ 50243	„	.... „ (SF)	.... 1—5—11	57
54 „ 50243	„	... ಪ್ರಿಂಟೆಡ್ ವೈಲ್ (SF)	.... 1—9—9	19
6 „ 1369	ಸಂಚುರಿ ಮಿಲ್ಸ್	.... ಮೇಟಿ ಶರ್ಟಿಂಗ್ (F)	.... 1—8—5	27
18 „ Lovely Spring ..	ದಿ ಇಂಡ್ಯಾ ಯುನೈಟೆಡ್ ಮಿಲ್ಸ್..	ಪ್ರಿಂಟೆಡ್ ವೈಲ್ (SF)	.... 1-10—7	15
59 „ 124	ಜೇಮ್ಸ್ ಸ್ಪಿನ್ಲೆ	.... ಮಲ್ಲ್ (SF)	.... 1—5—2	23
22 „ 167	„	.... „ (SF)	.... 1—4—9	28
47 „ 2654	ಪೈಯೊನೆಕ್ಸ್ ಮಿಲ್ಸ್	.... ಡೋರಿಯ (SF)	.... 1-10—9	44
16 „ 5220	ದಿ ಇಂಡ್ಯಾ ಯುನೈಟೆಡ್ ಮಿಲ್ಸ್..	ಮಲ್ಲ್ (SF)	.... 1—5—0	155
1 ಮೇ 1007	ಎಲೆಲ್ಫೊ ಮಿಲ್ಸ್	.... ಲೋಂಗ್ ಕ್ಲಾತ್ (M)	.... 1—7—5	82
32 „ 55	ಶ್ರೀರಾಮ ಮಿಲ್ಸ್	.... ಕೋರ್ (F)	.... 1—1—1	17
6 „ 3455	ಸಂಚುರಿ ಮಿಲ್ಸ್	.... ಪೊಪ್ಲಿನ್ (SF)	.... 2—6—2	139
6 „ 90000	„	.... ಟ್ವಿಲ್ಲ್ (F)	.... 1-13—8	37
6 „ 1525	„	.... ಶರ್ಟಿಂಗ್ (F)	.... 1-11—2	12
6 „ ಮೋತಿ ವೈಲ್....	„	.... ವೈಲ್ (SF)	.... 1-10—3	38
6 „ ಪರಮು ಸುಖ	„	.... 8 ವಾರು ಧೋತಿ (SF)	.. 14-15—6	152
3 ಜೂನ್ 7544	ಬೋಂಬೆ ಡಾಯಿಂಗ್ ಹಿ ಮೇ ನ್ಯುಫೆಕ್ಚರಿಂಗ್ ಕಂಪೆನಿ	.... ಮಲ್ಲ್ (F)	.... 0-13-11	50
30 ಜೂನ್ ಸುಮತ್ರ ವೈಲ್ ..	ಕಟಾವು ಮಿಲ್ಸ್	.... ಮಲ್ಲ್ (SF)	.... 1—3—8	120
31 „ ಮೆಡವಾಲಂ	ಕೊಹಿನೂರ್ ಮಿಲ್ಸ್	... ಬಿಳಿ ಪೊಪ್ಲಿನ್ (SF)	.... 2—5—4	60

ಮಡಿಕೇರಿ
ತಾರೀಕು 5-10-1951. }

ಚಂದ್ರಾನ ಮತ್ತು ಕಂಪೆನಿ.

ಹೃದಯ ಪರಿವರ್ತನೆಯೇ ನಿಜವಾದ ಗಾಂಧಿ ಜಯಂತಿ.

ಲೇ:—ಶ್ರೀ ಕಾಕಾ ಕಾಲೇಲ್ಕರ್.

ಭಾರತದ ಪ್ರತಿಯೊಂದು ಗೃಹ ಕೃತ್ಯವನ್ನು ನಡೆಸುತ್ತಾಳೆ. ಗಂಡನು ಯಾ ಇತರ ಪುರುಷರು ಹೆಚ್ಚು ಕಡಮೆ ಎಷ್ಟಾಗುತ್ತದೊ ಅಷ್ಟು ಮೂಡಿದ ಸಂಪಾದನೆಯಿಂದ ಸಂತುಷ್ಟಳಾಗಿರುತ್ತಾಳೆ. ತಾನೂ ಕಡಿಮೆಯಾಗಿ ಊಟ ಮಾಡಿದರೂ ಗಂಡನಿಗೆ ಬೇಕಾದಷ್ಟು ಊಟಕ್ಕೆ ಬಡಿಸುತ್ತಾಳೆ. ಗಂಡ ಹೇಗೆ ನಡೆಕೊಂಡರೂ ತಾನು ತಂನ ಶೀಲ ಮತ್ತು ಜವಾಬ್ದಾರಿಯಿಂದ ಹೇಗಿನಿವೇ. ಗಂಡನಿನ ಜವಾಬ್ದಾರಿ ಏನೂ ಇಲ್ಲ. ಇಷ್ಟು ಸದ್ಗುಣಗಳನ್ನು ನೋಡಿಯೂ ನಾವು ಹೆಂಗಸನ್ನು ಮನೆಯುಲ್ಲೇ ಇಡುತ್ತೇವೆ—ಪ್ಯಗಗಳಂತೆ-ವತ್ತೆ ಹೇಳುತ್ತೇವೆ, ಸ್ತ್ರೀಯೆಂದರೆ 'ದೇವಿ' ಎಂತ. ಗೋಮಾತೆಯ ಸ್ಥಿತಿ ಯಾವದಿದೆಯೋ ಅದೇ ಸ್ಥಿತಿ ಹೆಂಡತಿಯುದೂ ಆಗಿದೆ.

ಭಾರತದ ಸಂಕರೂ ಸಹ ಬಹಳ ಒಳ್ಳೆ ಜನರು. ಸಂತರು ಎಲ್ಲಾ ತರದಲ್ಲೋ ಗೃತಿ ಇದ್ದರೂ ಸಹ ಧನ ಸಂಪಾದನೆಗೆ ಹೊರಡುವದಿಲ್ಲ. ಜನರ ಸೇವೆಯಷ್ಟನ್ನು ತುಂಬಾ ಮಾಡುತ್ತಿರುತ್ತಾರೆ. ಜಪದಿಂದ ಅತ್ಯಲ್ಪ ವಸ್ತುಗಳಷ್ಟನ್ನು ತೆಗೆದುಕೊಳ್ಳುತ್ತಾರೆ. ತಮ್ಮ ತಪಸಿನಿಂದ ಸಮಾಜದ ಪುಣ್ಯವನ್ನು ಹೆಚ್ಚಿಸುತ್ತಾರೆ. ಯಾರಾದರೂ ಪಾಪ ಮಾಡಿದರೆ ಅಂಥವರು ಪಾಪವನ್ನು ತಮ್ಮ ಅತೀರ್ವಾದದಿಂದ ಹೋಗಲಾಡಿಸುತ್ತಾರೆ. ಒಂದು ಪೊಚ್ಚೆ ಎರಡು ಲಂಗೋಟಿಗಿಂತ ಹೆಚ್ಚೇನು ಅವರು ಕೇಳುವದಿಲ್ಲ. ಇಹಕ್ಕಿಂತ ಹೆಚ್ಚಿಗೆ ಬೆಟ್ಟರೂ ತೆಗೆದುಕೊಳ್ಳುವದಿಲ್ಲ. ಎಷ್ಟೂದೊರೂ ಗುಡಿಸಲಿಪಲ್ಲಿ ಬಿದ್ದಿರುತ್ತಾರೆ. ಇಂಥಾ ಸಂತರು ಜೀವಪಲ್ಲಿರುವಾಗ ಕಲವರು ಕಪಟಿಎಂದು ಭಾವಿಸಿ ಒಲೆಯಾಗಿ ತಿಕ್ಕಿ ನೋಡುತ್ತಿರುತ್ತಾರೆ ಳಾಳಿದವರು ಅಂಥಾ ಸಂತರು ಮೇಲೆ ಭಕ್ತಿತೋರಿಸುತ್ತಾರೆ. ಅಂಥ ಸಂತರು ಮೃತರಾದ ನಂತರ ಅಂಥಾ ಸಂತರಿಗೆ ದೇವಸ್ಥಾನ ಕಟ್ಟೆ ಪುಣ್ಯ ಸಂಪಾದನೆ ಮಾಡಲು ಪ್ರಯತ್ನ ಮಾಡುತ್ತಾರೆ. ತಪಸ್ಸು ಮಾಡುವ ಎಲ್ಲಾ ಜವಾಬ್ದಾರಿಯೂ ಇಂಥಾ ಸಂತರು, ತಪಸ್ಸಿಗಳ ಮೇಲೆಯೇ ಇದೆ. ನಾವು ಏಹಿಕ ವ್ಯವಹಾರದಲ್ಲಿ ಇದ್ದುಕೊಂಡು ಭೋಗ ವಿಲಾಸದಲ್ಲಿ ಮುಳುಗಿದರೂ ವಿನೂ ಅಡ್ಡಿ ಇಲ್ಲ. ಸಂತರ ಗುರು ಮಂತ್ರ ಉಪದೇಶ ಸಿಗೆದುಕೊಂಡರಾಯಿತು. ಅದನ್ನು ಜಪಿಸಿದರಾಯಿತು. ಮತ್ತು ಸಮಯ ಬಂದಾಗ ಗುರುವಿನ ಪಾದಕ್ಕೆ ನಮಸ್ಕರಿಸಿದರೆ ಆಯಿತು. ಇಷ್ಟು ನೂಡಿದರೆ ನಮ್ಮ ಕರ್ತವ್ಯ ಪೂರಾ ಮಾಡಿದಂತಾಯಿತು.

ಈ ತರದ ಆದರ್ಶ ಸೇವಕರನ್ನು ಪಡೆದು ತಮ್ಮ ಮೇಲೆ ಯಾವ ಜವಾಬ್ದಾರಿಯನ್ನು ಇಟ್ಟು ಕೊಳ್ಳದ ಸೇವಕರು ನಮ್ಮ ಸಮಾಜದಲ್ಲಿ ಇದ್ದಾರೆ. ಅವರು ದೇಶದ ಶ್ರೇಷ್ಠ ಮುಂದಾಳುಗಳು, ಅವರನ್ನು ನಾವು ರೈಲು ಗಾಡಿಯ ಇಂಜಿನ್ ರೈವರೆಂದು ಎಣಿಸುತ್ತೇನೆ. ಇಂಜಿನು ಪಡೆದ ಪ್ರವಾಸ ರಾತ್ರಿಯೆಲ್ಲಾ ಎಚ್ಚೆತ್ತುಕೊಂಡು ನಿರ್ಣಯಿಸಿದ ಸ್ಥಳಕ್ಕೆ ಗಾಡಿಯನ್ನು ಬಲಪಿಟುತ್ತಾನೆ. ಗಾಡಿಯಲ್ಲಿ ಕುಳಿತವರು ಯಾತ್ರಿಕರಿಗೆ ರಾತ್ರಿ ನಿದ್ರೆ ಕೆಡದೇ ಕೆಂದು ಇಲ್ಲ. ಅವರು ಮಿತಿಸುಗಿ ನಿದ್ರಿಸಬಹುದು ಅಪಘಾತ ಚಿಪರಂಗೆ ಆಪತ್ತಿರ ಜಹುದು. ಇಂಜಿನ ಡ್ರೈವರನ ಸಂಬಳ ಫಿಸ್ಟರ್ಸಿನಿಂಜಿನನ್ನು ಆಪತ್ತಿನ ಸಮಪರ್ಕಿಗೆ ಕೊಟ್ಟರಾಯಿತು. ಮಂದಿನ ಕೆಲಸವೆಲ್ಲಾ ಅವನದೆ.

ಮಹಾತ್ಮಾಗಾಂಧಿಯವರು ಸಂತರಾಗಿದ್ದರು ಮತ್ತು ದೇಶದ ಮುಖಂಡರಾಗಿದ್ದರು. ಅವರ ಮುಂದಾಳುತನದನ್ನು ನಾವು ಒಪ್ಪಿಕೊಂಡೆವು. ದೇಶದ ಮುಂದಾಳುತನವನ್ನು ಅವರಿಗೆ ಒಪ್ಪಿಸಿ ಬಿಟ್ಟಿವು. ಬಾಕಿ ಎಲ್ಲಾ ಕೆಲಸ ಅವರೇ ಗೊತ್ತು ಆದರೆ ಮಹಾತ್ಮರು ಹೇಳುತ್ತಾ ಬಂದರು. ಭಾರತವಾಸಿಗರೇ, ನೀವು ನಿಮ್ಮ ಜೀವನವನ್ನೆಲ್ಲ ಬದಲಾವಣೆ ಮಾಡಿಕೊಳ್ಳಬೇಕು. ಜೀವನವನ್ನು ಶುದ್ಧ ಪಡಿಸಿಕೊಳ್ಳಬೇಕು. ಅವರ ಮಾತಿನಲ್ಲಿ ಯಾರು ಪ್ರಭಾವಿತರಾದರೋ ಅಂಥವರು ಕೆಲವು ಮಟ್ಟಿಗೆ ಕೆಲವು ಸುಧಾರಣೆ ಮಾಡಿಕೊಂಡರು. ಆದರೆ ದೇಶದ ಹೆಚ್ಚಿನ ಜನರು ತಮ್ಮ ಭಾರತೀಯ ಸಂಸ್ಕೃತಿಯ ಸನಾತನ ರೀತಿಯನ್ನೇ ಅನುಸರಿಸುತ್ತಾ 'ಗಾಂಧೀಜೀ ಕೀ ಜಯ' ಎಂತ ಹೇಳುತ್ತಾ ದೇಶದ ಮುಂದಾಳ್ತನವನ್ನು ಗಾಂಧಿಯವರ ಶಿಷ್ಯನಿಗೆ ಒಪ್ಪಿಸಿ ಗಾಂಧಿಯವರ ಆತ್ಮ ಶುದ್ಧಿಯ ದೋಧನೆಯನ್ನು ಕಿವಿಯಿಂದ ಕೇಳುತ್ತಿದ್ದರೆಯೆ ತಮ್ಮ ಜೀವನವಲ್ಲಿ ನಿಜವಾದ ಬಹಲಾವಣೆ ಮಾಡಿಕೊಳ್ಳದೇ ಕೆಂತ ಅವರಿಗೆ ಗೊತ್ತಲೇ ಇಲ್ಲ.

ನಾವು ಅಹಿಂಸಾವಾದಿಗಳು, ಅಂದರೆ ಜನರ ಕೊಲೆ ಮಾಡುವದು ಮುಂತಾದ್ದು ನಮಗೆ ಬೇಡ. ನಾವು ಸೈನ್ಯಕ್ಕೆ ಸೇರುವುದಿಲ್ಲ ಯಾವಆಪಾಯಕ್ಕೂ ಗುರಿಯಾಗುವುದಿಲ್ಲ. ಆದರೆ ತಮ್ಮವ್ಯಕ್ತಿಗತ ರಾಗ ದ್ವೇಷಗಳನ್ನು ಸ್ವಲ್ಪವಾದರೂ ಬದಲಾಯಿಸಲು ತಯಾರಿಲ್ಲ.

ವಿಶೇಷ ಮತ್ತು ಜಮೀನಿನ ಸಂಬಂಧ ಮಾತು ಬಂದಾಗ ನಾವು ತಟಿಸ್ಥರಾಗಿರುತ್ತೇವೆ. ಯಜಮಾನ ತಯಾರಾ ಏನೂ ಮಾಡಿಕೊಳ್ಳುವುದಿಲ್ಲ. ದೂರ ಪಕ್ಷದ ನ್ಯಾಯವಿದೆ. ದೂರ ಪಕ್ಷದವನ ನ್ಯಾಯವಿದೆಯೆಂಬುದನ್ನು ವಿಚಾರಿಸುವ ಗೊಂದಲಕ್ಕೆ ನಾವು ಯಾರೆ ಬೀಳಬೇಕು. ಎಲ್ಲವೂ ಶಾಂತಿ ಮಕ್ಕ ಸಂಖದಿಂದ ನಡೆಯುತ್ತಿದ್ದರಾಯಿತು. ಪ್ರಪಂಚದ ಜಗಳವಲ್ಲಿ ನಾವು ಯಾರ ಪೈಹಾಕಬೇಕು. ಎನ್ನುತ್ತೇವೆ.

ಆದರೆ ಯಾವಾಗ ಪಾಕಿಸ್ತಾನದ ಪ್ರಶ್ನೆ ಬಂದಾಗ ನಮ್ಮ ಶಾಂತಿಕೇತು ಬೇರೆ ರೂಪವನ್ನು ತಳೆಯುತ್ತದೆ. ಪಾಕಿಸ್ತಾನವು ಅನ್ಯಾಯಕಾರಿಯೇ ಆಗಿದೆ. ಇದರಲ್ಲಿ ಸಂಶಯವಿಲ್ಲವೆನ್ನುತ್ತೇವೆ. ಆಗ್ರಹದಿಂದ ಆದಕ್ಕೆ ಸರಿಯಾದ ಪಾಠ ಕಲಿಸುತ್ತೇಕು. ಇದರಲ್ಲಿ ಏನು ತಪ್ಪು ಎನ್ನುತ್ತೇವೆ.

ವಿಶೇಷ, ಅನೇಕಾದ ವಿಷಯಗಳು ಹೀಗೆ ಇವೆ ಒಂದು ರೀತಿ, ಪಾಕಿಸ್ತಾನದ ವಿಷಯ ಬಂದಾಗ ಇನ್ನೊಂದು ರೀತಿ ಇದೇದ ಯಾಕೆಂತ ನನಗೆ ತಿಳಿಯುವುದಿಲ್ಲ.

ನಾವು ಪ್ರಜಾತಂತ್ರವನ್ನು ಹೊಗಳುತ್ತೇವೆ. ಪ್ರಾಪ್ತ ವಯಸ್ಕರೆಲ್ಲಾ ಮತದಾರರು ಮಾಡಿದೆ. ಯಾರು ದೊಡ್ಡವರಿಲ್ಲ, ಯಾರೂ ಸಣ್ಣವರಿಲ್ಲ. ಯಾರಿಗೂ ಹೆಚ್ಚಿನ ಅಧಿಕಾರವೇನೂ ಇಲ್ಲ. ಆದರೆ ಹಿಂದೂ ಸಮಾಜ ಸಂಘಟಿಸಿದ್ದು ಪಾಯವಲ್ಲಿ ವರ್ಣಾಸ್ಪವ್ಯಸ್ಥೆಯೇ ಮುಖ್ಯವಾದದ್ದಾಗಿದೆ. ಜಾತಿ ಭೇದದ ವೇಲಾಟಕೇಳು ಎಂಬ ಭಾವನೆಯು ತುಂಬಿದೆ, ಪ್ರತಿಯೊಬ್ಬ ಸ್ತ್ರೀಜಾತಿಯವರು ಶೂದ್ರಜಾತಿಯವರ ಮೇಲೆ ಒಂದೇ ಪ್ರಕಾರವಾಗಿ ತೋಕಣೆ ನಡಿಸುತ್ತಿದ್ದಾರೆ. ಹಿಂದೂ ಸಮಾಜವು ಬೇರೆ ಸಮಾಜಕ್ಕಿಂತ ಮೇಲೆ ಪೂರಾ ಸಮತೆಯ ವರ್ತನೆಯನ್ನು ನಡಿಸುತ್ತಿಲ್ಲ ಎಂತ ತೋರಿಸಿಕೊಟ್ಟರೂ ನಮ್ಮ ಶೋಷಣೆಗಳು ನಮಗೆ ತಿಳಿಯುವುದಿಲ್ಲ. ಈ ದೇಶದಲ್ಲಿ ಇರುವ ಅಹಿಂಸಾ ಜನರು ಹಿಂದುಗಳಲ್ಲಿ ಇರುವ ಬೇರೆಯಾರಿಗಿಂತಲೂ ಕಂಬ ಗುಣವನ್ನು ತಿಳಿದುಕೊಂಡ ನಂತರ ನಾವು ಎಷ್ಟು ದೊಡ್ಡ ಮನಸಿನವರೆಂತ ಹೇಳಿಕೊಂಡರೂ ನಮ್ಮ ಮೇಲೆ ನಂಬಿಕೆ ಹುಟ್ಟುವದಿಲ್ಲ. ಈ ಮಾತು ಚಿಕ್ಕದಾಗಿ ಕಾಣಬಹುದು ಆದರೆ ರಾಷ್ಟ್ರ ಸಂಘಟನೆಯಲ್ಲಿ ಈ ಗುಣವು ಬಹಳ ಬಲಹೀನತೆಯನ್ನುಂಟುಮಾಡಿ ಸಂಘಟನೆಯನ್ನು ಕೆಡಿಸುತ್ತದೆ.

ವಿಧಾನವಾಗಿ ನಮುಂದಿರುವಾಯಿ ನಿ. ರಾಷ್ಟ್ರದ ಸಾಮಾಜಿಕ ಸಂಘಟನೆಗೆ ಅಡ್ಡಿಯಾಗುವ ಈ ದೋಷಗಳನ್ನು ದೂರ ಮಾಡದೇಕಂಜ ಮೂಲ ಹಿಂದುಗಳಿಗೆ ಬೇರೆ ದಿಲ್ಲವೆದಿಲ್ಲ. ನಾವು ಏನು ಹೇಳುತ್ತೇವೆಂದರೆ—ಸಮಾಜದಲ್ಲಿ ಇರುವ ಪದ್ಧತಿಗಳನ್ನು ಹಿಂದೇ ನಾವು ಬಿಟ್ಟು ಬಿಡದೆ ನೈಜಾನವಾಗಿ ಮುಂದಿರಿಸಿ ಅಂದರೆ ಸುಧಾರಣೆಗಳನ್ನು ಸಿಧಾನಮಾಡಿ ಎಂತ—ನಮ್ಮ ಮುಖಂಡರಲ್ಲದೂ ಸಹಾಶಕ್ತಿ ಪ್ರವೃತ್ತಿ ಇಂದು ಹೋಗಿದೆ. ಸಮಾಜದಲ್ಲಿ ಇರುವ ದೋಷಗಳನ್ನು ಜನರಲ್ಲಿ ಒಂದು ಪ್ರಜಾಹಂಕೋಲನ ನಡೆಸಿ ಕೆತ್ತು ಹಾಕುವ ಬದಲು, ಪಾನಾನು ಮೂಲಕ ಸುಧಾರಣೆ ಮಾಡಲು ಪ್ರಯತ್ನಿಸುತ್ತಾರೆ. ಪಾಕಿಸ್ತಾನ ಸಹಾಯ ಕೇಳುವವರೂ ಸಹ ಜನರ ಮುಂದೆ ಹೋಗಿ ಮುಂದೆ ಬೋಧಿಸುತ್ತಿಲ್ಲ. ಪಾನಾನು ಮೂಲಕ ಸಹ ಸುಧಾರಣೆ ಮಾಡಬಾರದೆಕ್ಕೆನ್ನುವವರ ವಿಷಯ ಹೇಳುವದೇ ಬೇಡ. ಮುಳುಗುವ ದೋಣಿಯಲ್ಲಿ ಕುಂಬಳಕ್ಕಾಯಿ ನೀರನ್ನು ಸಿಧಾನವಾಗಿ ತೆಗೆಯುತ್ತಾ ಇದ್ದರೆ ದೋಣಿ ಉಳಿಯುವುದಿಲ್ಲ.

ಇದೇ ನಮ್ಮ ದೇಶದ ಸ್ಥಿತಿ. ಇಂಥಾ ಸ್ಥಿತಿಯಲ್ಲಿ ನಾವು ಗಾಂಧಿ ಜಯಂತಿಯನ್ನು ಆಚರಿಸುತ್ತಿದ್ದೇವೆ. ಗಾಂಧಿಯವರ ಜಯ ಜಯಕಾರ ಮಾಡಲು ನಾವು ಯಾರು? ಯಾವ ದಿನ ಗಾಂಧಿಯವರು ಅಸ್ಪೃಶ್ಯತಾ ನಿವಾರಣೆಗಾಗಿ ನಡತೆ ಜೀವನವನ್ನು ಜೂಜಿಗೆ ಹೊಡಿದರೋ ಆ ಕ್ಷಣ ಜೂವ ದಿನ ಹಿಂದೂ ಮುಸ್ಲಿಂ ಏಕತೆಗಾಗಿ ಸರ್ವ ಧರ್ಮ, ಸರ್ವ ಸಂಘವತ್ತು ಸರ್ವ ಜಾತಿಗಳ ಏಕತೆಯ ಸಲಾಲಿಗಾಗಿ ತಮ್ಮ ಪ್ರಾಣವನ್ನೇ ಕಳಕೊಂಡರೋ, ಸರ್ವಸ್ವವನ್ನೂ ಬಲಿದಾನ ಮಾಡಿದರೋ, ಆ ದಿನದೇ ಅವರ ಅಂತಿಮ ವತ್ತು ಪೂರ್ಣಾ ವಿಜಯವಾಯಿತು. ಇತಿಹಾಸವು ಅವರ ಜಯಪತನ್ನು ಸ್ವರ್ಣಾಕ್ಷರಗಳಲ್ಲಿ ಅಗಲೇ ಬರೆದು ಇಟ್ಟಿದೆ. ನಾವು ನಮ್ಮ ಹೃದಯದಲ್ಲಿ ಸತ್ಯ ಪ್ರೇಮ ಜೀವನದ ದೃಷ್ಟಿಯಲ್ಲಿ ಗಾಂಧಿ ತತ್ವದ ವಿಜಯ ನೋಡಿದರೆ ಮಾತ್ರ ನಾವು ಗಟ್ಟಿಯಾಗಿ 'ಗಾಂಧೀಜೀ ಕೀ ಜೈ' ಎಂತ ಹೇಳಲು ಅರ್ಹರಾಗುತ್ತೇವೆ.

ಇದ್ದಹಾಗಿದರೆ ನಾವು ದೃಷ್ಟಿಯನ್ನು ನಮ್ಮ ಒಳಗೇ ಹರಿಸಿ ನಮ್ಮ ಹೃದಯದಲ್ಲಿ ಎಷ್ಟು ಕಚ್ಚಡ, ಮೈಲಿಗೆ ತುಂಬಿದೆ ಎಂತ ನೋಡಬೇಕು. ಅಂಥಾ ಕೆಲಸವನ್ನು ಎಷ್ಟರ ವರೆಗೆ ನಾವು ಸುಟ್ಟು ಬಿಡುವುದಿಲ್ಲವೋ ಅಲ್ಲಿಯ ವರೆಗೆ ನಾವು ಗಾಂಧೀಜಿಯವರ ಕೊಲೆ ಮಾಡುತ್ತಿರುತ್ತೇವೆ.

ಹಿಂದೂಕೋಡ್ ಬಿಲ್ ಸಂಬಂಧವಾಗಿ ನಾನು ಹೇಳುವುದಿಲ್ಲ. ಗಾಂಧೀಜಿಯವರು ಎಷ್ಟು ಹಿಂಸಾ ಸಮಾಜ ಸುಧಾರಣೆ ಮಾಡಬೇಕೆಂದಿದ್ದರೋ ಅದರ ಅಲ್ಪ ಭಾಗ ಮಾತ್ರ ಈ ಬಿಲ್ಲಿನಲ್ಲಿ ಇದೆ. ಆದರಲ್ಲಿ ಇರುವ ಸುಧಾರಣೆಯಿಂದ ನಷ್ಟಗೆ ಸಂತೋಷವಿಲ್ಲ. ನಾವು ಗಾಂಧೀಜಿಯವರ ಮಾತು ಕೇಳಲಿಕ್ಕೆ ತಯಾರಿದ್ದರೆ ಹಿಂದೂ ಕೋಡ್ ಬಿಲ್‌ದಿಂತ ಬಹಳ ನಮುಂದುವರಿದ ಹೋಗಬೇಕು. ಯಾವಾಗ ಗಾಂಧಿಯವರು ತಮ್ಮ ಕೈದುಯದಲ್ಲಿ ಜಪ್ತ ತಾಳುತ್ತಾರೋ ಆವಾಗ ನಾವು ಗಾಂಧಿ ಜಯಂತಿ ನಡೆಸಲು ಅರ್ಹರಾಗುತ್ತೇವೆ.

ಶ್ರೀಮಂಗಲನಾಡು ಸಹಕಾರಿ ಬ್ಯಾಂಕು ಲಿಮಿಟೆಡ್, ಹುದಿಕೇರಿ.

ಬ್ಯಾಂಕಿನ ಬಡ್ಡಿಯ ದರವನ್ನು ಈ ಕೆಳಗಿನಂತೆ ಏರಿಸಲಾಗಿದೆ.

ಎಲ್ಲಾ ಡಿಪಾಜಿಟ್ಟುಗಳನ್ನು ಅಂಗೀಕರಿಸಲಾಗುತ್ತೆ.

೧ ವರ್ಷದ ನಿರಿಖು ಠೇವಣಾತಿಗೆ—		....	೨½%
೨ ವರ್ಷದ	—	....	೩%
೩ ,,	—	....	೩½%
೪ ,,	—	....	೪%
೫ ,,	—	....	೪½%
೫ ವರ್ಷದ ಮೇಲ್ಪಟ್ಟು ಡಿಪಾಜಿಟ್ಟಿಗೆ—		....	೫½%

ಹೆಚ್. ಸಿ. ನಂಜಪ್ಪ,
ಗೌ. ಕಾರ್ಯದರ್ಶಿ.

4-2

ಕೊಡಗು

ತಾ. ೫-೧೦-೧೯೫೧ನೇ ಶುಕ್ರವಾರ

ನೆಹರೂರವರ ಕರೆ.

ಪಂಡಿತ ಜವಾಹರಲಾಲರು ಕಾಂಗ್ರೆಸ್ ಅಧ್ಯಕ್ಷಪದವನ್ನು ನಹಿಸಿನಂದಿಂದ ಕಾಂಗ್ರೆಸ್ಸಿನ ಪುನರ್ರಚನೆ ಮತ್ತು ಐಕ್ಯತೆಗಾಗಿ ಶುಬಾ ಪ್ರಯತ್ನಿಸಕ್ತಿದ್ದಾರೆ. ಈ ದೃಷ್ಟಿಯಿಂದ ಅವರು ಕಾಂಗ್ರೆಸ್ಸಿಗರಿಗೆ ಅನೇಕ ಉಪಯುಕ್ತ ಸೂಚನೆಗಳನ್ನು ಮಾಡಿದ್ದಾರೆ. ಬಂಪು ಅಧಿಕಾರದಲ್ಲಿರುವ ಕಾಂಗ್ರೆಸ್ ಕಮಿಟಿಗಳನ್ನು ವಿಸರ್ಜಿಸಿ ಹೊಸದಾಗಿ ನೇಮಿಸಿ ಕಾಂಗ್ರೆಸ್ಸಿನಲ್ಲಿ ನವಚೇತನವನ್ನು ತುಂಬುವದು ಕಷ್ಟಾಲಕ್ಕೆ ಸಾಧ್ಯವಾಗುವಂತಿದೆ. ಈ ಶುದ್ಧೀಕರಣವು ಮುಂದೆ ಶುಸೂತ್ರವಾಗಿ ನಡೆಯಬೇಕಾಗಿದೆ. ಆದರೆ ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದುವಾರರನ್ನು ಆರಿಸುವ ವಿಚಾರದಲ್ಲಿ ಅವರು ಸ್ಪಷ್ಟ ಮಾರ್ಗದರ್ಶನವನ್ನು ತೋರಿಸಿದ್ದಾರೆ. ಭಾರತಕ್ಕೆ ಸ್ವಾತಂತ್ರ್ಯ ಬಂದೊಡನೆ ದೇಶದ ಆಡಳಿತವನ್ನು ಕಾಂಗ್ರೆಸಿಗರಿಗೆ ಒಪ್ಪಿಸಲಾಯಿತು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ತ್ಯಾಗ ಪೂರ್ಣ ಸರ್ವೆಸಿಫೀಟೊಂದು ವಿನಾ ಲಗ ಬೇರೆ ಯೋಚನೆ ಮಾಡದೆ ಕಾಂಗ್ರೆಸ್ಸಿಗರ ಕೈಗೆ ಆಡಳಿತ ಜವಾಬ್ದಾರಿ ಕೊಡಲ್ಪಟ್ಟಿತು. ಆದರೆ ಆ ಜವಾಬ್ದಾರಿಯನ್ನು ಹೊತ್ತ ಕಾಂಗ್ರೆಸಿಗರು ಸಾಲ್ಕು ವರ್ಷ ಯಾವ ರೀತಿ ಆಡಳಿತ ನಡೆಸಿದ್ದಾರೆ ಎಂಬುದು ಸರ್ವ ವಿದಿತವಾಗಿದೆ ಆದ್ದರಿಂದ ಕಾಂಗ್ರೆಸಿಗನೆಂಬುದು ಇಲ್ಲವೇ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತ್ಯಾಗ ಮಾಡಿದ್ದಾನೆಂಬುದು ಒಬ್ಬನನ್ನು ಆಡಳಿತಕ್ಕೆ ಅರ್ಹನೆಂದು ಮಾಡಲಾರದು. ದಕ್ಷನೂ, ಯೋಗ್ಯನೂ, ನಿಸ್ವಾರ್ಥಿಯೂ ಆದ ವ್ಯಕ್ತಿಯು ಕಾಂಗ್ರೆಸಿನ ಹೊರಗಿದ್ದರೂ ಅಂಥಾವನು ಆರಿಸಿ ಬರುವಂತೆ ನೋಡುವದು ಕಾಂಗ್ರೆಸಿನ ಕರ್ತವ್ಯವೆಂದು ನೆಹರೂರವರು ಹೇಳಿದ್ದಾರೆ. ಕಾಂಗ್ರೆಸ್ಸಿನ ಧ್ಯೇಯೋದ್ದೇಶಗಳು ಕಾಂಗ್ರೆಸ್ಸನ್ನು ಬಲಪಡಿಸಲಿರುವಂದಲ್ಲದೆ ಬೇರೆಲ್ಲ. ಆದ್ದರಿಂದ ಕಾಂಗ್ರೆಸ್ಸಿನಲ್ಲಿ ಐಕ್ಯತೆಯನ್ನು ಸಾಧಿಸಿ ಹೊಸ ಜನರನ್ನು ಸೇರಿಸಿ ಬಲಯುತ ಸಂಸ್ಥೆಯಾಗಿ ಕಟ್ಟುವ ಕಾರ್ಯದಲ್ಲಿ ಕೆಲವು ನಿಯಮಗಳನ್ನು ಉಲ್ಲಂಘಿಸಿದರೂ ಕಷ್ಟವಲ್ಲವೆಂಬುದು ನೆಹರೂರವರ ಅಭಿಪ್ರಾಯವಾಗಿದೆ. ಈ ಮಾತನ್ನೇ ಮಹಾತ್ಮಾ ಗಾಂಧಿಯವರು ಅಂದೊಮ್ಮೆ ಹೇಳಿದ್ದರು. ಸ್ವಾತಂತ್ರ್ಯ ಪೊರೈತ ನಂತರ ದೇಶದಲ್ಲಿ ಕಾಂಗ್ರೆಸ್ಸು ಪ್ರತಿಯೊಬ್ಬನೂ ಕಾಂಗ್ರೆಸ್ಸಿನ ಸದಸ್ಯನೆಂದು ಅವರು ಸಾರಿದ್ದರು. ಈ ಕಾರಣ ಕ್ಕಾಗಿಯೇ ಕಾಂಗ್ರೆಸ್ಸಿನ ಸಾಲ್ಯಾಗ್ಹಿ ಸದಸ್ಯತನವನ್ನೂ ವಜಾಮಾಡಲಾಗಿತ್ತು. ಆ ಮಾರ್ಗದಲ್ಲಿಯೇ ಇಂದು ಪಂಡಿತಜಿಯವರು ಅಲೋಚಿಸುವಂತಿದೆ. ಹೊಸಬ್ಬರೂ, ಪಕ್ಷದವರೂ, ನಿಸ್ವಾರ್ಥಿಗಳೂ ಕಾಂಗ್ರೆಸ್ಸಿನ ಪ್ರತಿಜ್ಞೆಗೆ ಸಹಿ ಹಾಕಿ ಇಂದು ಉಮೇದುವಾರರಾಗಬಹುದಾಗಿದೆ. ಕಾಂಗ್ರೆಸ್ಸಿಗರು ಅಂಥಾವರಿಗೆ ಅನು ಮಾಡಿಕೊಡಬೇಕೆಂದಿದೆ. ಇದು ದೇಶದ ಆಡಳಿತವನ್ನು ಯಶಸ್ವಿಯಾಗಿ ದಕ್ಷವಾಗಿ, ಜನಹಿತಕಾರಕವಾಗಿ ಕಟ್ಟಲಿರುವ ಏಕ ಮಾರ್ಗವಾಗಿದೆ. ಇದಕ್ಕಾಗಿ ಕಾಂಗ್ರೆಸ್ಸಿಗರು ತಮ್ಮ ಆಂತರಿಕ ಜಗಳಗಳನ್ನು ಮರೆತು ಐಕ್ಯರಾಗಬೇಕು. ಹೊಸ ಜನರನ್ನು ಆಹ್ವಾನಿಸಬೇಕು.

ಕೊಡಗಿನ ಕಾಂಗ್ರೆಸಿನಲ್ಲಿ ಹಲವು ಪಕ್ಷಗಳಿಂದ ಐಕ್ಯತೆ ಇಲ್ಲ. ಕಾಂಗ್ರೆಸು ಇಬ್ಬಾಗವಾಗಿ ಎರಡು ಪಕ್ಷಗಳು ಒಂದಕ್ಕೊಂದು ವಿರುದ್ಧವಾದ ರಾಜಕೀಯವನ್ನು ಅನುಸರಿಸಿ ಅದಕ್ಕನುಗುಣವಾಗಿ ದೇಶವೇ ಇಬ್ಬಾಗವಾಗಿದೆಯೆಪ್ಪಬಹುದು ಈ ಅನಿಷ್ಟಪರಿಸ್ಥಿತಿಯಿಂದಾಗಿ ಕೊಡಗಿನ ರಾಜಕೀಯ, ಸಾಮಾಜಿಕ ಹಾಗೂ ಇತರ ಕ್ಷೇತ್ರಗಳಲ್ಲಿ ಕೂಡ ಐಕ್ಯತೆ, ಸೌಹಾರ್ದತೆಗಳಿಲ್ಲದಾಗಿವೆ. ಪರಿಣಾಮವಾಗಿ ದೇಶಹಿತಕಾರಕವಾದ ಕೆಲಸಗಳಾಗುತ್ತಿಲ್ಲ. ಸರಕಾರವೆ ಕಚ್ಚಾಟವ ಎರಡು ಪಕ್ಷಗಳ ಮಧ್ಯದಲ್ಲಿ ಕಂಡಿಷ ಪಕ್ಷ ಕರ್ತವ್ಯಶೂನ್ಯತೆಗೆ ಈ ಪಕ್ಷಗಳನ್ನು ಪರಿ ಪ್ರಶ್ನೆ ಎತ್ತಿಕೆಟ್ಟಿತ್ತಾ ದಿನ ನೂಕುತ್ತಿದೆ. ಈ ಪರಿಸ್ಥಿತಿ ಪರಿಣಾಮ ಕೊಡಗಿನಲ್ಲಿ ಒಂದು ಐಕ್ಯರಂಗವೇರ್ಪಡಬೇಕೆಂಬ ಬಯಕೆ ಪ್ರತಿಯೊಬ್ಬನಲ್ಲಿದ್ದರೂ, ಪ್ರತಿ ವ್ಯಕ್ತಿಯೂ ತಪ್ಪು ಪಾಟೀಯು ತಪ್ಪಗಳಿಗೆ ಕಟ್ಟುಬಿದ್ದಿರುವ ಕಾರಣ ಈ ಅನಿಷ್ಟ ಸಂಕೀರ್ಣತೆಯನ್ನೊಪ್ಪಿದೆಯೂ ಜೀವದ ಹಿತದೃಷ್ಟಿಯಿಂದ ವಿಶಾಲಧೃಷ್ಟಿಯನ್ನಶ್ಲೇಷಿಸಿ ತಮಗೆ ಸೋಲಾದರೂ ಜೆಂತೆಯಿಲ್ಲ ದೇಶದ ಒಂತವಾಗಲೀ ಎಂಬ ಉದಾರನೆಯನ್ನನುಸರಿಸಿದಂತೆ ತೋರುವದಿಲ್ಲ. ಇಂಥಾ ಪರಿಸ್ಥಿತಿಯಲ್ಲಿ ನೆಹರೂರವರ ಕರೆ ಪ್ರತಿಯೊಬ್ಬನಿಗೆ ಪಥ ದರ್ಶಕವಾಗಿದೆ.

ಕೊಡಗಿನ ರಾಜಕೀಯ ಭವಿಷ್ಯದ ವಿಚಾರದಲ್ಲಿ ಕಾಂಗ್ರೆಸಿನವರೊಳಗೇನೇ ಭಿನ್ನಾಭಿಪ್ರಾಯಗಳಿವೆ. ಮುಂಬರುವ ಚುನಾವಣೆಯಲ್ಲಿ ಕೊಡಗಿಗೆ ಭವಿಷ್ಯ, ಚುನಾವಣಾ ನಿರ್ಣಾಯಕವಾಗಲಾರದೆಂದು ಕೆಲವರು ಹೇಳಿದರೂ ಜನತೆಯು ಈ ಪ್ರಶ್ನೆಯನ್ನು ಕೇಳಿಯೇ ಮತದಾನದ ರೆಂಬುಪರಲ್ಲಿ ಸಂಶಯವಿರಲಾರದು. ಆದ್ದರಿಂದ ಮುಂಬರುವ ಚುನಾವಣೆಯು ಭವಿಷ್ಯದ ನಿರ್ಣಯ ತತ್ವದ ವೇಲೆಯೇ ಆಗುವದು. ಹಾಗೆ ಆಗಬೇಕಾದುದೂ ಸಮಂಜಸವೇ. ಏಕೆಂದರೆ ಕೇಂದ್ರ ಪಾರ್ಲಿಮೆಂಟಿನಲ್ಲಿ ಗೃಹಮಂತ್ರಿಯವರು ಮೂತಾಹುತ್ತಾ ದೇಶದ ಭವಿಷ್ಯ ನಿರ್ಣಯದ ವಿಚಾರದಲ್ಲಿ ಮುಂದೆ ಜಳಕಿಯ ಅಭಿಪ್ರಾಯವನ್ನು ಸರಕಾರವು ಪ್ರತ್ಯೇಕವಾಗಿ ಪೆಗೆದುಬಾರದೆಂದೂ ಈ ಚುನಾವಣೆಯಲ್ಲಿ ಆರಿಸಿ ಬರುವ ಪ್ರತಿನಿಧಿಗಳ ಅಭಿಪ್ರಾಯದಂತೆಯೇ ಭವಿಷ್ಯ ನಿರ್ಣಯವಾಗಬೇಕೆಂದೂ ಸ್ಪಷ್ಟವಾಗಿ ಹೇಳಿದ್ದಾರೆ. ಹಾಗಿರುವಾಗ ಕೊಡಗಿನ ಭವಿಷ್ಯವು ಈ ಚುನಾವಣೆಯಲ್ಲಿ ಆರಿಸಿ ಬಂದ ಪ್ರತಿನಿಧಿಗಳ ಬಹುಮತ ನಿರ್ಣಯದಂತಾಗುವದು. ಹಾಗಿರುವಾಗ ಈ ಚುನಾವಣೆಯಲ್ಲಿ ಅ ವಿಚಾರವನ್ನು ಮತದಾರರ ಮುಂದೆ ಇಡದಿದ್ದರೆ ದ್ರೋಹಾತ್ಮಕವಾಗುವದು.

ಆದರೆ ಕೊಡಗು ಕಾಂಗ್ರೆಸ್ಸಿನಲ್ಲಿ ಈ ವಿಚಾರದಲ್ಲಿ ಭಿನ್ನಾಭಿಪ್ರಾಯವಿದ್ದು ಕೆಲವರು ವಿಲೀನೀಕರಣಕ್ಕೂ ಕೆಲವರು ಪ್ರತ್ಯೇಕತೆಗೂ ವಾದಿಸುವವರಿದ್ದಾರೆ. ಹಾಗಿರುವದರಿಂದ ಚುನಾವಣೆಗೆ ಕಾಂಗ್ರೆಸ್ ಉಮೇದುವಾರರನ್ನು ನಿಶ್ಚಿಸುವಾಗ ಗೊಂದಲವಾಗುವದು. ಯಾವದೇ ಒಂದೇ ಪಕ್ಷವನ್ನು ಕಾಂಗ್ರೆಸ್ ಅಧಿಕೃತ ಉಮೇದುವಾರರೆಂದು ನಿಶ್ಚಿಸಲಾಗದ. ಇಕ್ಕಟ್ಟಿನವರಿಗೂ ಸರಿ ಸ್ಥಾನ ಕೊಟ್ಟರೆ ಸಮಸ್ಯೆ ಪರಿಹಾರವಾಗದು. ಒಂದು ಪಕ್ಷವನ್ನು ಕಾಂಗ್ರೆಸ್ ಮತಿಯಿಂದ ನಿಶ್ಚಿಸಿದರೆ ಕಾಂಗ್ರೆಸ್ಸಿಗರೇ ಇದ ಪ್ರತಿಸ್ಪರ್ಧಿಗಳು ಕಾಂಗ್ರೆಸ್ಸಿಗೆ ವಿರುದ್ಧ ಹೋಗಾಡಬೇಕಾಗುವುದಲ್ಲದೆ ಕಾಂಗ್ರೆಸ್ಸನ್ನು ಟೀಕಿಸಬೇಕಾಗುವದು. ಇವರಿಂದ ಕಾಂಗ್ರೆಸ್ಸಿನಲ್ಲಿರುವ ಇಂದಿರುವ ಪಕ್ಷಗಳ ಮಧ್ಯ ಅಂತರವು ಇನ್ನೂ ಹೆಚ್ಚಾಗುವುದು. ಇದು ನೆಹರೂರವರ ಕರೆಗೆ ವಿರುದ್ಧವೂ ಆಗುವುದು. ಆದ್ದರಿಂದ ಕಾಂಗ್ರೆಸ್ಸಿನಲ್ಲಿ ಐಕ್ಯ ಸಾಧಿಸಿ ಕೊಡಗಿನ ಕಾಂಗ್ರೆಸ್ಸನ್ನು ಒಂದಾಗಿ ಕಟ್ಟಬೇಕಾದರೆ ಕಾಂಗ್ರೆಸ್ಸಿನ ಪಕ್ಷ ಆಧಿಕೃತ ಉಮೇದುವಾರರನ್ನು ನಿಲ್ಲಿಸದೆ ಎಲ್ಲರೂ ಅವರವರ ವ್ಯಕ್ತಿಗತ ಯೋಗ್ಯತೆಯ ಪ್ರಕಾರ ಚುನಾವಣೆಯಲ್ಲಿ ಸ್ವತಂತ್ರವಾಗಿ ಬಿಡಬೇಕು. ಹಾಗೆ ಮಾಡಿದರೆ ಕಾಂಗ್ರೆಸ್ಸಿಗರು ಕಾಂಗ್ರೆಸ್ಸಿಗರನ್ನು ಕಾಂಗ್ರೆಸ್ಸಿಗರಾಗಿ ಎದುರಿಸುವ ಪರಿಸ್ಥಿತಿಯು ತಪ್ಪುವದು. ಕಾಂಗ್ರೆಸ್ ಸಂಸ್ಥೆಯೂ ಚುನಾವಣಾ ಕಿರಿಕಿರಿಗೆ ಈಡಾಗದೆ ಭವಿಷ್ಯವನ್ನು ಕಾಪಾಡಿಕೊಳ್ಳಬಹುದು. ಎಂಬುದಾಗಿ ಇಂದಿರುವ ಸರಕಾರದ ಇಲೆಕ್ಷನ್ ಕಮಿಷನ್ ಅಧಿಕಾರಿಗಳು ಸ್ಥಳೀಯ ಸರಕಾರದವರಿಗೆ ತಿಳಿಸಿರುತ್ತಾರೆ.

ವರ್ತಮಾನ.

ತಾ. ೨ರಿಂದ ಇಂದಿನವರೆಗೆ ಮಡಿಕೇರಿಗೆ ೮ ಇಂಚು ೯೭ ಸೆಂಟು ಮಳೆಯಾಗಿದೆ. ಈ ವರೆಗೆ ಮಡಿಕೇರಿಗೆ ಒಟ್ಟಾಗಿ ೧೧೫ ಇಂಚು ೭೩ ಸೆಂಟು ಮಳೆಯಾಗಿದೆ. ತಿಳಿದ ವರ್ಷ ಇದೇ ಅವಧಿಯಲ್ಲಿ ೧೩೮ ಇಂಚು ೪೭ ಸೆಂಟು ಮಳೆಯಾಗಿತ್ತು.

ಮುಂಬರುವ ಚುನಾವಣೆಯಲ್ಲಿ ಕೊಡಗಿಗೆ ಕೇಂದ್ರ ಜನತಾ ಸಭೆ (ಪಾರ್ಲಿಮೆಂಟ್) ಯಲ್ಲಿ ಇರುವ ಒಂದೇ ಸ್ಥಳಕ್ಕೆ ಶ್ರೀ ಕೆ. ಟಿ. ಉತ್ತಪ್ಪನವರು ಕೊಡಗು ಪ್ರತ್ಯೇಕ ಪಕ್ಷದ ಪರವಾಗಿ ಕಾಂಗ್ರೆಸಿನ ಹೊರನಲ್ಲಿ ನಿಲ್ಲಲೂ ಉಮೇದುವಾರ ಪತ್ರಿಕೆಯನ್ನು ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಸಮಿತಿಯ ಮುಖಾಂತರ ಕಳುಹಿಸಿರುವರೆಂದೂ ಮತ್ತು ಸಂಯೋಜನಾ ಪಕ್ಷದ ಶ್ರೀ ಎನ್. ಸೋಮಣ್ಣನವರು ತಮ್ಮ ಉಮೇದುವಾರ ಪತ್ರಿಕೆಯನ್ನು ಕೆ. ಪಿ. ಸಿ. ಸಿ. ಮುಖಾಂತರ ಕಳುಹಿಸಿರುವರೆಂದೂ ತಿಳಿಯಬರುತ್ತದೆ.

ಭಾರತದಲ್ಲಿ ಬ್ರಿಟಿಷ್ ಹೈಕಮಿಷನರಾದ ಅರ್ಚಿಬಾಲ್ಡ್ ನೈ ಇವರ ಪ್ರತಿನಿಧಿಯಾಗಿ ಮಿ. ಕ್ಯಾಮಿಂಗ್ ಬ್ರೂಸ್ ಇವರು ದಕ್ಷಿಣ ಹಿಂದೂಸ್ಥಾನದಲ್ಲಿರುವ ಯೂರೋಪಿಯನರನ್ನು ಸಂದರ್ಶಿಸುತ್ತಾ ಕೊಡಗಿಗೆ ತಾ. ೧೨-೧೦-೫೧ರಲ್ಲಿ ಬಂದಿರುವರು. ಇವರು ಇಲ್ಲಿ ಒಂದೆರಡು ದಿನಗಳಿದ್ದು ಇಲ್ಲಿಯ ಯೂರೋಪಿಯನರನ್ನೂ ಅವರ ತೋಟಗಳನ್ನೂ ಸಂದರ್ಶಿಸುವರೆಂದು ವರ್ತಮಾನ.

ಮುಂಬರುವ ಚುನಾವಣೆಯಲ್ಲಿ ಉಮೇದುವಾರರು ಉಪಯೋಗಿಸಬೇಕಾದ ಚಿಹ್ನೆಗಳ ಪಟ್ಟಿಯಲ್ಲಿ, ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಪಕ್ಷವೆಂದು ಪ್ರಾಂತ್ಯದಲ್ಲಿ ನಿಶ್ಚಿತವಾಗಿರುವ ಪಕ್ಷದವರು ಆ ಪಟ್ಟಿಯಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿಗೆ ನಿರುಕಿಸಲ್ಪಟ್ಟ ಚಿಹ್ನೆಯನ್ನು ಮಾತ್ರ ಉಪಯೋಗಿಸಬೇಕಾಗುವದು. ಮೇಲೆ ಜೋಳಿಸಲಾದ ಪ್ರಾಂತ್ಯದ ಕಾಂಗ್ರೆಸ್ ಸಂಸ್ಥೆಯಿಂದ ನಿರ್ಧರಿಸಲ್ಪಡದ ಇತರ 'ಕಾಂಗ್ರೆಸ್' ಪಕ್ಷಕ್ಕೆ ಸೇರಿದ ಉಮೇದುವಾರರು ಚುನಾವಣೆಯ ನೇತ್ಯಾತ್ಮಕ ಪ್ರತ್ಯೇಕವಾಗಿ ಕಾಯ್ದಿಟ್ಟಿರುವ ಚಿಹ್ನೆಗಳ ಪಟ್ಟಿಯನ್ನು ಬಿಟ್ಟು ಇಲೆಕ್ಷನ್ ಕಮಿಷನರಿಂದ ನಿಶ್ಚಿತವಾದ ಚಿಹ್ನೆಗಳ ಪಟ್ಟಿಯಿಂದ ಯಾವುದೇ ಮೂರು ಚಿಹ್ನೆಗಳನ್ನು ಚುನಾಯಿಸಿಕೊಳ್ಳಬಹುದು. ಎಂಬುದಾಗಿ ಇಂದಿರುವ ಸರಕಾರದ ಇಲೆಕ್ಷನ್ ಕಮಿಷನ್ ಅಧಿಕಾರಿಗಳು ಸ್ಥಳೀಯ ಸರಕಾರದವರಿಗೆ ತಿಳಿಸಿರುತ್ತಾರೆ.

ಗಾಂಧೀಜಯಂತಿ.

ಹಾರೇಕುದಿನೇ ಅಕ್ಟೋಬರ್ ಮಾಗಳವಾರ ದಿನ ಪಂಡಿಠೇರಿ ನೆಂಟ್ಸಲ್ ಹೈಸ್ಕೂಲಿನ ಡಿಡೇಟಿಂಗ್ ಸೊಸೈಟಿಯ ಆಶ್ರಯದಲ್ಲಿ ಗಾಂಧೀಜಯಂತಿಯು ವಿಜ್ಯಂಭಣೆಯಿಂದ ನೆರವೇರಿಸಲ್ಪಟ್ಟಿತು. ಶ್ರೀ. ಹಂದ್ಯಂಡ ಬೆಳ್ಯಪ್ಪನವರು ಅಧ್ಯಕ್ಷರಾಗಿದ್ದರು. ವೇದಪಠನ, ಗೀತಾ-ವಚನ ಬೈಬಲ್ ಮತ್ತು ಕೊರಾನ್ ಪಠನಗಳು ನಡೆದುವು. ಅನೇಕ ಅಧ್ಯಾಪಕರೂ ಬಾಲಕ ಬಾಲಕಿಯರೂ ಪೂಜ್ಯ ಮಹಾತ್ಮರ ವಿಷಯ ಭಾಷಣಗಳನ್ನು ಮಾಡಿದರು. ಅಧ್ಯಕ್ಷರು ಧನ್ಯಾತ್ಮರಾದ ಮಹಾತ್ಮಾಗಾಂಧಿಯವರನ್ನು ವಿವಿಧ ದೃಷ್ಟಿಗಳಿಂದ ವಿಮರ್ಶಿಸಿ ಭಾರತದ ಭಾವೀ ಜನಾಂಗವಾದ ವಿದ್ಯಾರ್ಥಿಗಳು ಪೂಜ್ಯ ಬಾಪೂಜಿಯ ಭವ್ಯ ಕಶ್ಯಗಳನ್ನು ಪರಿಪಾಲಿಸಬೇಕೆಂದು ಭಾಷಣ ಮಾಡಿದರು. ರಾಮಭಜನೆ, ರಾಷ್ಟ್ರಗೀತೆಗಳ ಶಂಖನಾಯ ಜಯಘೋಷ ಪೂರ್ವಕವಾಗಿ ಸಭೆಯು ಮುಕ್ತಾಯವಾಯಿತು.

ಬೆಟ್ಟಗೇರಿಯಲ್ಲಿ ಶ್ರೀ. ನಾಯಿಡು ಪೆಳ್ಳಪ್ಪನವರ ಅಧ್ಯಕ್ಷತೆಯಲ್ಲಿ ಗಾಂಧಿಜಯಂತಿಯು ಆಚರಿಸಲ್ಪಟ್ಟಿತು.

॥ ದ ಸ ರಾ ಉ ತ್ಸ ವ ॥

ಈ ಸಲ ದಸರಾ ಉತ್ಸವ ಕಾಲದಲ್ಲಿ ಮೈಸೂರಿನಲ್ಲಿ ಕುದುರೆ ಜಾಜು ವಿಶೇಷವು ಪ್ರಾರಂಭವಾದುದು ವಿಶೇಷ. ಕಳೆದ ಹತ್ತು ವರ್ಷಗಳಿಂದ ಮೈಸೂರಿನಲ್ಲಿ ಕುದುರೆ ಜಾಜು ನಡೆಯುವುದೇ ನಿಂತು ಹೋಗಿತ್ತು. ಅದಕ್ಕೆ ಹಿಂದೆ ಜಾಜು ನಿಂತುಹೋಗಲು ಪ್ರಧಾನವಾಗಿ ನಡೆಯುತ್ತಿದ್ದ ದಸರಾ ಕಾಲದಲ್ಲಿ ಕೆಲವು ಹೊತ್ತು ಸಣ್ಣ ಜಾಜು ನಡೆಯುತ್ತಿದ್ದುದೇ ಕಾರಣವಾಗಿತ್ತು. ಇದೇ ಮೊದಲನೇ ಸಾರಿಯಾಗಿ ಧಾರವಾಡದ ಜಾಜು ದಸರಾ ಕಾಲದಲ್ಲಿ ಏರ್ಪಾಡಾಗಿದೆ.

ವಸ್ತು ಪ್ರದರ್ಶನ

ಪ್ರತಿವರ್ಷದಂತೆ ದಸರಾ ವಸ್ತು ಪ್ರದರ್ಶನವೂ ನಡೆಯುತ್ತಿದೆ. ಅದಕ್ಕಾಗಿ ವಸ್ತು ಪ್ರದರ್ಶನದ ಆವರಣದಲ್ಲಿಯೂ, ಮತ್ತು ಚಾಮುಂಡರಾಯರ ಕಟ್ಟೆ ಬೈದಾನದಲ್ಲಿಯೂ ಏರ್ಪಾಡುಗಳನ್ನು ಮಾಡಲಾಗುತ್ತಿದೆ.

ದಸರಾ ಹಿಂದೆ ಹೇಗಿತ್ತು?

ಈಗಿನ ಕಾಲದಲ್ಲಿ ದಸರಾ ಉತ್ಸವವನ್ನು ನೋಡುವವರಿಗೆ ಹಿಂದಿನ ಕಾಲದಲ್ಲಿ ಇದು ಹೇಗೆ ನಡೆಯುತ್ತಿದ್ದಿತೆಂಬುದು ಗೊತ್ತಿಲ್ಲದೆ ಇರಬಹುದು.

ಮೈಸೂರು ಅರಮನೆಯಲ್ಲಿ ಕಟ್ಟುನಿಟ್ಟಿನ ಕೈ ಮೀರಿ ದಸರಾ ದರ್ಬಾರು ಜಗನ್ಮೋಹನ ಮಂಟಪೆಯಲ್ಲಿ ನಡೆಯುತ್ತಿತ್ತು. ಈಗಿನ ಅರಮನೆ ಕಟ್ಟಡದ ಸುತ್ತಲೆ ಕೋಟೆಯಲ್ಲಿ ಅನೇಕ ಮನೆಗಳಿದ್ದು ಸದರಾತಿ ಉತ್ಸವಪ್ರಿಯರುಗಳ ಮಧ್ಯದೇ ಜರುಗುತ್ತಿತ್ತು. ಆಕರ್ಷಣೆ ಮುಂಜೆ 'ಫಿರಂಗಿ ಸೆ' ಎಂಬ ಕಟ್ಟಡ ಮತ್ತು ವಿದ್ಯುಚ್ಛಕ್ತಿ ಪರಿಜಾತ ನೂರಾವರ 'ಎಂಜಿನ್ ಹೌಸ್' ಇನ್ನಿವು

ಹೊಂಬತ್ತು ದಿವಸಗಳ ಬಾಲ!

ವಿಜಯ ದಶಮಿಯ ದಿನ ಜಂಬೂ ಸವಾರಿ ಮೆರವಣಿಗೆಯು ಕೋಟೆಯಿಂದ ನೇರವಾಗಿ ದೊಡ್ಡ ಪೇಟೆ ರಸ್ತೆ ಸುಂಕದ ವಾಗಿ. ಬೆಂಗಳೂರು ರಸ್ತೆಯ ಪಕ್ಕದಲ್ಲಿ ಕೋಲ್ಸ್ ಗಾರ್ಡನ್ ಬಳಿ ಇರುವ ಬನ್ನಿ ಮಂಟಪಕ್ಕೆ ಹೋಗುತ್ತಿತ್ತು. ರಾತ್ರಿ ನೆರವಣಿಗೆಗೆ ಅಗಿನ ಕಾಲವಾದ ವಿದ್ಯುಚ್ಛಕ್ತಿ ದೀಪಗಳಿಲ್ಲದ್ದಾರಿಂದ ಮೊಂಬತ್ತಿ ಹಚ್ಚಿದ ಲಾಂದ್ರಗಳನ್ನು ಕಟ್ಟಿದ್ದ ಗೋಡೆಗಳಿಗೆ ಸಿಗಿಸುತ್ತಿದ್ದರು.

ಮೆರವಣಿಗೆಯಲ್ಲಿ ಫೌಜು ನೋಡಲು ಹೆಳ್ಳಿಗಳಿಂದ ಬರುತ್ತಿದ್ದ ಸರಕು ಗಾಡಿಗಳನ್ನು, ಹಾಲಿ ಆರಮನೆ ಕಲ್ಲಿನ ಕಟ್ಟಿರುವ ಇದ್ದ ಭಾರಿ ಕೋಟೆಯಲ್ಲೂ ಮತ್ತು ದೊಡ್ಡ ಗೆರೆ ಸಕ್ಕದಲ್ಲಿ ಇದ್ದ ಶೋಪಿನಲ್ಲೂ ತಿಲ್ಲಿಸಿ ಅಲ್ಲಿಯೇ ಅಡಿಗೆ ಮಾಡಿಕೊಂಡು ಇರುತ್ತಿದ್ದರು.

ಜನಸಂದಣಿ ಪತ್ರೋಟಿಗೆ ಬಾತಿಪಟ್ಟೆ ದೊಡ್ಡಿತ!

ಆರಮನೆ ಮಂಡಿ ತಿಗುರುಪಷ್ಟ ವಿಶಾಲವಾದ ಬಯಲು ಜಾಗ ಆಗಿರಲಿಲ್ಲ ವಾಷ್ಟಕಿಂದ, ಉತ್ಸವ ನೋಡಲು ಸೇರುತ್ತಿದ್ದ ಅಗಾಧ ಜನಸಂದಣಿಯನ್ನು ಹತೋಟಿಯಲ್ಲಿಡಲು ಪೋಲೀಸರಿಗೆ ತುಂಬಾ ಪ್ರಯಾಸವಾಗುತ್ತಿತ್ತು. 'ಬಾತಿ ಪಟ್ಟೆ'ಯಿಂದ ಕೊಡೆಯಂತಿದ್ದ ಕಾಲವಿತ್ತೆಂದು ಹಿರಿಯರೊಬ್ಬರು ವಿವರಿಸಿದರು.

ಕೋಟೆಯೊಳಗೆ ಕೊಂಬರಿ ಮಿಠಾಯಿ

ಜನರಿಗೆ ಬೇಕಾದ ಸಣ್ಣ ಸಣ್ಣ ವ್ಯಾಪಾರಕ್ಕೆ ತೀರಿ ಮೊದಲು ತರಲಾಗಿತ್ತಿರಲು. ಕಲ್ಲಿನ ಮೇತೆ ಸುಂಟಿ ಬಲಗೆಯನ್ನಿಟ್ಟು ಕೊಂಡು ಬರಿ ಹಿಂದು ನಾಣ್ಯಗಳಿಗೆ ಸೀಮೆ ಬೆಣ್ಣೆ ಬಳ್ಳಿ ಸಿಟ್ಟಿಸಿಕೊಂಡು 'ತೆಂಡೂರಿ ಮಿಠಾಯಿ' ಎಂದು ಕೂಗುತ್ತಾ ಅನೇಕರು ಬರುತ್ತಿದ್ದರು. ಸೌತೆಕಾಯಿ ಹೂರು, ಕಡಲೆಕಾಯಿ, ಬೆಲ್ಲ ಎಲ್ಲವನ್ನೂ ಮೂರಿಟ್ಟಿಗೆ ತರುತ್ತಿದ್ದರು. ಈಗಿನ ಕಾಲದಲ್ಲಿ ಅಂತಹ ವ್ಯಾಪಾರದ್ದು ಕೋಟೆಯೊಳಗೆ ಬಿಸುವಿಲ್ಲ.

'ಬೈನಾಕ್ಯುಲರ್ ಬಿಸಿನೆಸ್'

ಬೈನಾಕ್ಯುಲರ್‌ಗೆ ಇಷ್ಟು ಬಾರಿ ಪರಿಜಯನ್ನೂ ಅಧವಾ ಗುರುತ್ವವನ್ನೂ ಕಟ್ಟಿಕೊಂಡು ಅದರ ಇಪ್ಪೆಗಿಂದು ಕುದಿಯಲ್ಲಿ ಕಾಫಿ ಬಳವಾಗಿ ಹಿಡಿದು ಕೊಂಡಿದ್ದ ಬೈನಾಕ್ಯುಲರ್ ವ್ಯಾಪಾರವು ಸಂಜೆಯ ಸಮಯದಲ್ಲಿ ಬಿಸಿಯಾಗಿ ಕಳುಕ್ಕೆ ಸಿಕಾಸಿನೆಕೆ ವ್ಯಾಪಾರ ನಡೆಯವರೂ ಈಗಲೂ ಇದ್ದಾರೆ.

ವ್ಯಾಪಾರಿಗಳ ಉತ್ಸಾಹ

ದಸರಾ ಉತ್ಸವಕ್ಕೆ ಮೈಸೂರಿನಲ್ಲಿ ವ್ಯಾಪಾರಿಗಳಿಗೆ ಒಳ್ಳೆ ಉತ್ಸಾಹ. ಟೌನ್ ಹಾಲ್ ಸುತ್ತ ಗಂಡಿ ಜಾಗವು ಬಿಡದೆ ಕರೆಕರೆ ಇಂದ ವ್ಯಾಪಾರಿಗಾರರು ಬಂದು ಸೇರುತ್ತಾರೆ. ಜೋಪಡಿಗಳನ್ನು ಹಾಕಿಕೊಂಡು, ಒಳಗಡೆ ನಾನಾರಕ್ಷೆಲೆ, ಆಯುಷ್ಕಾಲಿಧ ಕಡಿ, ದಕ್ಷಿಣತಾರ ಮುಂತಾದ ಅಪ್ಪಟ ಸಸ್ಯಗಳನ್ನು ಕೊಳ್ಳುವುದಕ್ಕಾಗಿ ಸಾವಿರಾರು ಜನರು ಬರುತ್ತಾರೆ. ಇನ್ನೆಷ್ಟೊಲ್ಲಿ ಕಡಲೆ ಪಟ್ಟೆಗಳು, ಬಣ್ಣ ಕಣ್ಣಿ, ಬಿಸ್ಕತ್ತುಗಳನ್ನು ಕಿಸ್ಕಿಗಪರನ್ನೂ ಅಲ್ಲಿ ನೋಡಬಹುದು.

ಅರೆಬೆಂದ ದೋಸೆ ಬಿಸಿನೀರಿನ ಕಾಫಿಗೆ ನುಗ್ಗಾಟ

ಹೋಟೆಲುಗಳ ವೈಖರಿಯನ್ನು ಬರೆಯಲು ಸಾಧ್ಯವೇ ಇಲ್ಲ. ಅರ್ಧ ಬೆಂದ ದೋಸೆ, ಇಡ್ಡಿಗಳನ್ನು, ಬಿಸಿನೀರಿನ ಕಾಫಿಗಳನ್ನು ದಪ್ಪೆಯಲು ಅತಿ ಎಷ್ಟು ನುಗ್ಗಾಟವಿರುತ್ತದೆ. ಆದೆಲ್ಲಾ ಅನುಭವಿಸಿದವರಿಗೇ ಗೊತ್ತು. ರೇಷನ್ ತಲ್ಲದೆ ಸುಮಾರು ಯಲಭವಾಗಿ ದೊರೆಯುತ್ತಿದ್ದ ಕಾಲದಲ್ಲೇ ಬಜೆಗೆ ಹೋಂಗೆಡೆಗಂತಿದ್ದ ದ್ದಾಗ ಯಾಗಿನ ಕಾಲದಲ್ಲಂತೂ ಹೇಳಲೇ ಬೇಕಾಗಿಲ್ಲ

ಬಾಡಿಗೆಗೆ ದರ್ಬಾರ್ ಡ್ರೆಸ್

ದಸರಾ ಬಂದಿತೆಂದರೆ ಕೆಲವು ಅಂಗಡಿಗಳ ಮುಂಜೆ 'ದರ್ಬಾರ್ ಡ್ರೆಸ್ ಬಾಡಿಗೆಗೆ' ಎಂಬ ಬೋರ್ಡುಗಳ್ಳಾ ಆದರಲ್ಲಿ ನಗು ಬರುವಂತಹ ಚಿತ್ರಗಳನ್ನೂ ನೋಡಬಹುದು. ನೋಡಲು ಅಂತಹ ಬೋರ್ಡುಗಳು ಕೆಲವು ಇವಳಿ ಅಂಗಡಿಗಳ ಮುಂದೆ ವಿಕ್ರಿ ಇರುತ್ತಿದ್ದವು. ಈಗ ಬೇವಿಂಗ್ ಸೆಲೂನುಗಳ ಮುಂದೂ ನೋಡಬಹುದು

ದರ್ಬಾರ್ ನೋಡಲು ಹೊರಗುವವರು ಆ ಉಡುಪಿಗಾಗಿ ಅಂಗಡಿಗಳ ಮುಂಜೆ ಕ್ಯೂ ನಿಲ್ಲುತ್ತಿರುವ ಅಂಗೀ ಜರಾಯಿಗಳನ್ನು ಹಾಕಿ ತಲೆಗೆ ಗುಲ್ಲಾಪಟ್ಟೆ ಆಂಟಿಸಿದ ಪೆಟ್ಟಾ ಇಟ್ಟ ಗಳಿಸುತ್ತಾರೆ. ಸಾಧಾರಣವಾಗಿ ದಪ್ಪಿನ ಭಾಗದಿಂದ ಬರುವ ಹೊಯ್ಸಳ ಕರ್ನಾಟಕ ರಾಜೇಂದ್ರ ದೇವನೋಟ್ಟಾ ಶಿವನಾಥ ಚೆಟ್ಟಿದೂರ್, ಕ್ಯಾಲಿಕಟ್ಟಿನ ಥಾಮನ್ ನಾಯರ್ ಮುಂತಾದವರು ಉಪಗಳನ್ನು ಹಾಕಿಕೊಂಡು ಹೋಗುವುದನ್ನು ಅನೇಕರು ನೋಡಬಹುದು.

ಪ್ರತಿ ಮನೆಯಲ್ಲೂ ಆತಿಥಿಗಳು

ದಸರಾ ಎಂದರೆ ಸಾಧಾರಣವಾಗಿ ಮೈಸೂರಿನಲ್ಲಿ ಪ್ರತಿಯೊಬ್ಬರ ಮನೆಗೂ ಆತಿಥಿಗಳು ಬಂದೇ ಬರುತ್ತಾರೆ. ಮೊದಲನೆಯವರಿಗೆ ಬೆಟ್ಟುವ ಜಾಕ್ಕೆ ಆಗೋಗುಂಟೆ ಇದ್ದು ಹೋಗುವರು. ಹಿಂದಿನ ಕಾಲದಲ್ಲಿ ಅತಿಥಿ ಸತ್ಕಾರವನ್ನು ನಂತೋಷದಿಂದ ಮಾಡಬಹುದಾಗಿತ್ತು. ಈಗ ಆಹಾರಾಭಾವ ಜೋರಾಗಿದ್ದು ರೇಷನ್ ಪದ್ಧತಿ ಬಿಗಿಯಾಗಿರುವುದರಿಂದ ಬೇವರೇ ಆತಿಥಿಗಳು ಬೇಡವಪ್ಪಾ ಎಂದು ಅನೇಕರು ಪ್ರಾರ್ಥಿಸುವುದೂ ಉಂಟು.

'ತಾಯಿನಾಡು'

ಚುನಾವಣೆ ವಾರ್ತೆಗಳು.

ಸ್ವತಂತ್ರ ಮತ್ತು ನ್ಯಾಯಬದ್ಧವಾದ ಚುನಾವಣೆಗೆ ಅವಕಾಶ ಕೊಡಿರಿ!

ಮುಂಬರುವ ಸಾರ್ವತ್ರಿಕ ಚುನಾವಣಾ ಕಾಲದಲ್ಲಿ ಯಾವ ಜೊತೆ ಸೊಪಡೆಯಲು ಎಂಬುದರ ಕುರಿತು ಸುದ್ದಿ ಪತ್ರಿಕೆಗಳ ಪ್ರಧಾನರು ಸುದ್ದಿಗಾರ ವರ್ಗದವರಲ್ಲಿ ಪ್ರಾರ್ಥನೆ ಮಾಡಿದ್ದಾರೆ. ಪ್ರತಿಯೊಂದು ಜಿಲ್ಲಾ ಕಲೆಕ್ಟರುಗಳಿಗೆ ಒಂದು ಪತ್ರವನ್ನು ಬರೆದಿದ್ದಾರೆ. ಆ ಪತ್ರದಲ್ಲಿ ಅವರು ಮುಂಬರುವ ಚುನಾವಣೆಯನ್ನು ಸ್ವತಂತ್ರವಾಗಿಯೂ ನ್ಯಾಯಬದ್ಧವಾಗಿಯೂ ನಡೆಸಲು ಸಹಕರಿಸಬೇಕೆಂದು ಕೋರಿದ್ದಾರೆ. ಈ ಪತ್ರವನ್ನು ಮುಖ್ಯ ಚುನಾವಣಾ ಅಧಿಕಾರಿಗಳಾದ ಶ್ರೀ ಸುಕುಮಾರ್ ಸೇನ್ ಅವರು ಕಳುಹಿಸಿದ್ದಾರೆ. ಅದರಲ್ಲಿ ಅವರು ಹೇಳಿರುವ ಕೆಲವು ಮುಖ್ಯ ಅಂಶಗಳು ಹೀಗಿವೆ:

ಮತದಾರರನ್ನು ವಾಹನಗಳಲ್ಲಿ ಕೊಂಡೊಯ್ಯಬಾರದು.

ಯಾವುದೇ ರಾಜಕೀಯ ಪಕ್ಷವು ಚುನಾವಣಾ ಕಾಲದಲ್ಲಿ ಮತದಾರರನ್ನು ಪೋಲಿಂಗ್ ಬೂತ್‌ಗಳಿಗೆ ವಾಹನಗಳಲ್ಲಿ ಕೊಂಡೊಯ್ಯಬಾರದು; ತೊಂದೊಯ್ದರೆ ಪೀಪಲ್ಸ್ ಆಕ್ಟ್ ಪ್ರಕಾರ ಶಿಕ್ಷೆಗೆ ಏನಂದ್ಯವಾಗಿ ರುತ್ತದೆ

ಅಮೃತ ಕೌರ್‌ರವರ ಉಮೇದ್ವಾರಿಕೆ ಕಾಯಿದೆಸೀರ

ಭಾರತದ ಆರೋಗ್ಯ ಮಂತ್ರಿ ರಾಜಕುಮಾರಿ ಅಮೃತ ಕೌರ್ ಇವರು ಮುಂಬರುವ ಸಾರ್ವತ್ರಿಕ ಚುನಾವಣೆಯಲ್ಲಿ ಪ್ರಜಾ ಪಕ್ಷಕ್ಕೆ ಹಿಮೋಚಲ ಪ್ರದೇಶದಿಂದ ಉಮೇದ್ವಾರಿಕೆ ಅರ್ಜಿ ಹಾಕಿದ್ದರು. ಉಮೇದ್ವಾರಿಕೆ ಪತ್ರದಲ್ಲಿ ಅವರು ಸೂಚಿಸಿದ ಒಂದು ಕಲಮು ಪೀಪಲ್ಸ್ ಆಕ್ಟ್‌ಗೆ ವಿರೋಧವೆಂದು ಪ್ರತಿ ಸ್ಪರ್ಧಿಗಳೊಬ್ಬರು ಆಕ್ಷೇಪವನ್ನು ಮುಂದೆ ತಂದಿದ್ದರು. ಇದೀಗ ರಿಟರ್ನಿಂಗ್ ಆಫೀಸರರು ರಾಜಕುಮಾರಿ ಅಮೃತ ಕೌರ್‌ರವರ ಉಮೇದ್ವಾರಿಕೆ ಕಾಯಿದೆಸೀರವಿದೆಯೆಂದು ಸಾರಿರುವರು. ಮಾಂಡಿ-ವ ಹಾಲು ಕಾನ್ಸ್‌ಟಿಟ್ಯೂಯೆನ್ಸಿಯಿಂದ ಕಾಂಗ್ರೆಸ್ ಉಮೇದ್ವಾರರಾಗಿ ರಾಜಕುಮಾರಿ ಅಮೃತ ಕೌರ್‌ರವರು ನಿಂತಿರುವರು.

ಗಾ ಸರಜೂರಿ ಉಮೇದ್ವಾರರಾಗಿ

ಗಾಂಧಿ ಕೊಲೆ ಹೊಕ್ಕನ್ಸಿಯು ವಿಚಾರಣೆಯಲ್ಲಿ ಪ್ರಧಾನ ವ್ಯಕ್ತಿಗಳಾಗಿದ್ದ ಡಾ ಡಿ ಎಸ್ ಪರಚೂರೆಯವರು ಮಧ್ಯಭಾರತ ಎಂಬಲ್ಲಿಗೆ ಮಹಾರಭೆಯ ಕಡೆಯ ಉಮೇದ್ವಾರರಾಗಿ ಚುನಾವಣೆ ಯಲ್ಲಿ ಪ್ರತಿಸ್ಪರ್ಧಿಯಲಿರುವರೆಂದು ತಿಳಿದುಬರುತ್ತದೆ

ಮೂವ್ಹಂಕರರಿಗೆ ಪ್ರತಿಸ್ಪರ್ಧಿಗಳಿಲ್ಲ.

ಭಾರತ ಪಾರ್ಲಿಮೆಂಟಿನ ಸ್ಪೀಕರರಾದ ಶ್ರೀ ಜಿ ವಿ ಮೂವ್ಹಂಕರರು ಅಹ್ಮದಾಬಾದ ಪೂರ್ವ ಕ್ಷೇತ್ರದಿಂದ ಇದಿವರೆಗೆ ಎರಡು ಸ್ಥಾನಗಳಲ್ಲಿ ಒಂದು ಸ್ಥಾನಕ್ಕೆ ಕಾಂಗ್ರೆಸ್ ಟಿಕೆಟಿನಲ್ಲಿ ಉಮೇದ್ವಾರರಾಗಿ ನಿಲ್ಲುತ್ತಿದ್ದಾರೆ. ಆದರೆ ಸ್ಥಾನಕ್ಕೆ ಯಾವುದೇ ರಾಜಕೀಯ ಪಕ್ಷದ ಯಾವುದೇ ಉಮೇದ್ವಾರರುಗಳ ಸ್ಪರ್ಧೆಯ ಘೋಷಣೆಯಾಗಿಲ್ಲ. ಈಚೆಬಾಕ್ತಾಗಿದೆ. ಶ್ರೀ ಮೂವ್ಹಂಕರರ ಪ್ರತಿಸ್ಪರ್ಧಿಯಾಗಿ ತಮ್ಮ ಕಡೆಯ ಉಮೇದ್ವಾರರನ್ನು ನಿಲ್ಲಿಸುವುದಿಲ್ಲವೆಂದು ಸೋಷಲಿಸ್ಟ್ ಪಕ್ಷವು ಈಗಾಗಲೇ ಪ್ರಕಟಿಸಿರುವುದು.

ನೆಹರೂಗಳು ಅಲ್ಲಹಾಬಾದಿಂದ ನಿಲ್ಲುವರೇ?

ಮುಂದಿನ ಸಾರ್ವತ್ರಿಕ ಚುನಾವಣೆಯಲ್ಲಿ ಪ್ರಜಾಭಿಪ್ರಾಯ ಹೀಯಾಳಿಂದ ಪ್ರಧಾನಿ ನೆಹರೂರವರು ಅಲ್ಲಹಾಬಾದಿಂದ ನಿಲ್ಲುವುದೆಂಬ ಸುದ್ದಿಯು ಹಿರಿಯಲ್ಲಿ ಕೇಳಿಬರುತ್ತಿದೆ. ಆದರೆ, ಅವರು ಈ ವರೆಗೆ ಕಾಂಗ್ರೆಸ್ ಟಿಕೆಟಿಗೆ ಅರ್ಜಿ ಮಾಡಿದುದಿಲ್ಲ.

ಚುನಾವಣೆಯು ಏರ್ಪಾಡಿಗೆ ೧೦ ಕೋಟಿಯಷ್ಟಾಗಬಹುದು.

ಮುಂಬರುವ ಭಾರತದ ಸಾರ್ವತ್ರಿಕ ಚುನಾವಣೆಗಳಿಗೆ ೨೩ ಲಕ್ಷ ಬೆಲೆಟ್ ಪೆಟ್ಟಿಗೆಗಳು ಉಪಯೋಗಿಸಲ್ಪಡುವವು. ಪ್ರತಿಯೊಂದು ಬೆಲೆಟ್ ಪೆಟ್ಟಿಗೆ ಸರಾಸರಿ ೬೦ ರೂಪಾಯಿಯ ಬೆಲ್ಲೆ ಇರಲಿವುದು. ಈ ಪೆಟ್ಟಿಗೆಗಳು ೨೦ ವರ್ಷಗಳ ವರೆಗೆ ಬಾಳಿಕೆ ಬರಬಹುದೆಂದು ಹೀಕ್ಷಿಸಲಾಗಿದೆ. ಚುನಾವಣೆಗೆ ಸರಾಸರಿ ೧೦ ಕೋಟಿ ರೂಪಾಯಿಯಷ್ಟು ವರ್ಚು ತಗಲಬಹುದೆಂದು ಅಂದಾಜುಮಾಡಲಾಗಿದೆ.

ಭಾಷಾವಾರು ಪ್ರಾಂತಗಳು.

ಲೇ:–ಶ್ರೀ ಕೋದಂಡರಾಯರು, ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ.

ಶಾಸ್ತ್ರವ ವಿಷಯಗಳು ಸರ್ಕಾರದ ಮೇಲೆ ಪರಿಣಾಮ ಬೀರಬಲ್ಲವೇ ಹೊರತು ಉಪವಾಸಗಳಲ್ಲವೆಂದು ಪ್ರಧಾನಿ ನೆಹರೂ ಹೇಳಿರುವುದು ಬಹಳ ಸಮಂಜಸವಾಗಿದೆ. ರಾಜಕೀಯ ಉಪವಾಸಗಳು ಪೂರ್ತಿಯಾಗಿ ನಿಂತುಹೋಗಬೇಕು. ಪ್ರಜಾಪ್ರಭುತ್ವ ಮತ್ತು ಉಪವಾಸಗಳು ಒಂದಾಗುವುದಿಲ್ಲ.

ಆದರೆ ಪಂ|| ನೆಹರೂರವರು 'ಭಾಷಾವಾರು ಪ್ರಾಂತ'ಗಳಿಗೆ ಒಪ್ಪಿಗೆಯಿತ್ತು ಆವುಗಳ ರಚನೆಗೆ ನಿರ್ದುಮಗಳನ್ನು ಸೂಚಿಸಿರುವುದು ವಿಷಾದಕರ ಸಂಗತಿ. ಈ ಗ್ರಹವಾದಿಗಳು ಅವಸರಪಟ್ಟಿ ಈ ನಿರ್ಧಾರಗಳಿಗೊಳಪಡಬಹುದಾ. ಇದರಿಂದ ಭಾರತ ಸಾಮ್ರಾಜ್ಯಾಕಾಶಾಸ್ತ್ರಗಳಲ್ಲಿ ಅಪಾರ ವಿಷಾದ ಕಥೆಯೇ ಮತ್ತೆ ಭಾರತದಲ್ಲಿ ಜರುಗಬಹುದು.

ಭಾರತದ ರಾಜ್ಯಾಂಗದಲ್ಲಿ 'ಸ್ಟೇಟ್ ಲಿಸ್ಟ್'ನಲ್ಲಿ ಹಟ್ಟ ಮೂಡಿರುವಂತಹ ನ್ಯಾಯ, ಶಿಸ್ತು, ವ್ಯವಸಾಯ ಮುಂತಾದ ವಿಷಯಗಳನ್ನು ನೋಡಿದಿಗಳ್ಳುವಂತಹ ಅಡಳಿತದ ಯೂನಿಟ್ಟುಗಳೇ ಪ್ರಾಂತಗಳು. ಪ್ರಾಯೋಗಿಕವಾಗಿ ಇವನ್ನೂ ಕೂಡಾ ಕೇಂದ್ರೀಕೃತವಲ್ಲದಿದ್ದರೂ, ಹೆಚ್ಚು ಹೆಚ್ಚು ಸುಸಂಘಟಿತವಾಗಿ ಮೂಡಲಬಗುತ್ತಿದೆ. ಒಂದು ಸಂಸ್ಥಾನದಲ್ಲಿನ ಪ್ರಜೆಗಳ ಮತ್ತು ಒಂದು ಭೂಪೈಮ ನಡುವಣ ಸಂಬಂಧವಾದರೂ ಸಹಜವಾಹುದಲ್ಲ. ಹಕ್ಷಿಣ ಆಫ್ರಿಕದಲ್ಲಿನಂತೆ ಸಾಮಾನ್ಯ ಮತ್ತ, ಜಾತಿ ಅಥವಾ ಜಾಜಾತಿ, ಗಂಡಸು ಹಥದಾ ಹೆಂಗಸು, ಗೋಧಿ ಅಥವಾ ಅಕ್ಕಿ, ಪೇಟೆ ಅಥವಾ ಟೋಪಿ, ವ್ಯವಸಾಯ ಅಥವಾ ಕೈಗಾರಿಕೆ, ಗದ್ಯ ಅಥವಾ ಪದ್ಯ, ವಿಜ್ಞಾನ ಅಥವಾ ಕಲೆ ಇವುಗಳ ಸಾಮಾನ್ಯತೆ ಮೇಲೆ ಒಂದು ಪ್ರಾಂತ ರಚಿಸಲ್ಪಡುವುದರಲ್ಲಿ ಎಷ್ಟು ನ್ಯಾಯವಿದೆಯೋ ಒಂದು ಸಾಮಾನ್ಯ ಭಾಷೆಯ ಮೇಲೆ ಅಡಳಿತ ಸಂಸ್ಥಾನ ರಚಿಸುವುದೂ ಅಷ್ಟೇ ನ್ಯಾಯವಾಗಿದೆ! ಮೇಲೆ ತಿಳಿಸಿದ ಪ್ರಥಮೆಯೊಂದು ವಿಷಯವೂ ಅನೇಕ ವ್ಯಕ್ತಿಗಳಿಗೆ ಸಾಮಾನ್ಯವಾದುದೇ ಆಗಿದೆ. ಅವುಗಳ ಅಭಿವೃದ್ಧಿಗೆ ವಿಶೇಷ ಸಂಸ್ಥೆಗಳು ಜಗತ್ಪ್ರಸಿದ್ಧವಾಹುದಾಗಿದೆ. ಒಂದು ಭಾಷೆಯ ಅಭಿವೃದ್ಧಿಗೆ ಒಂದು "ಸಾಹಿತ್ಯ ಅಕಾಡೆಮಿ" ಬೇಕಾಗಿರಬಹುದು. ಆದರೆ ಶಿಸ್ತು, ನ್ಯಾಯ, ಆಹಾರ ಮುಂತಾದ ವಿಷಯಗಳನ್ನು ನೋಡಿಕೊಳ್ಳುವ ಅಡಳಿತ ಪ್ರಾಂತ ಬೇಕಾಗಿಲ್ಲ.

ಭಾಷಾವಾರು ಪ್ರಾಂತಗಳಲ್ಲಿ ಭಾಷಾ ಜನರಿರುವುದರಿಂದಲೂ, ಅಡಳಿತಗಾರರು, ಜನರ ಪಡುವೆ ಸಮೀಪ ಸಂಬಂಧ ವಿರುವುದರಿಂದಲೂ, ಅಡಳಿತಗಾರರು, ಜನರ ಪಡುವೆ ಸಮೀಪ ಸಂಬಂಧವಿರುವದರಿಂದಲೂ, ಅವುಗಳಲ್ಲಿ ಪ್ರಜಾ ಪ್ರಭುತ್ವ ಹೆಚ್ಚು ಪರಿಣಾಮಕಾರಿಯಾಗುವುದೆಂದು ಹೇಳಲಾಗಿದೆ. ಆದರೆ ಕೇಂದ್ರ? ಪಾರ್ಲಿಮೆಂಟ್ ಸದಸ್ಯರಲ್ಲಿ ಸಾಮಾನ್ಯ ಭಾಷೆಯಿರದಿದ್ದರೆ ಕೇಂದ್ರವು ಪ್ರಾಂತಗಳಿಂದ ತ ಕೇಳೆಂದಾಯಿತು. ಆದರೆ ಕೇಂದ್ರದಲ್ಲಿನ ವಿಷಯಗಳ ಪಟ್ಟಿ 'ಸ್ಟೇಟ್-ಲಿಸ್ಟ್' ಗಿಂತ ಕೇಳಲ್ಲ. ಇದರ ಬದಲು ಪಾರ್ಲಿಮೆಂಟಿನ ಸದಸ್ಯರು ಒಂದೇ ಭಾಷೆಯಲ್ಲಿ ಮಾತನಾಡಿ ರಾಷ್ಟ್ರ ಭಾಷೆಯನ್ನು ಹೆಚ್ಚಾಗಿ ಭಾರತದ ಜನರು ಕಲಿತರೆ ಅವಶ್ಯ ಪ್ರಾಂತ ಶಾಸನ ಸಭೆಗಳಲ್ಲೂ ಉಪಯೋಗಿಸಬಹುದಲ್ಲವೇ? ಹೀಗೆ ಪೂರ್ತಿದರೆ ಭಾಷಾವಾರು ಪ್ರಾಂತಗಳ ವಿಶೇಷ ನ್ಯಾಯ ಮೂಡುವಾಗುವುದು.

ಬೆಲ್ಜಿಯಂ ಮತ್ತು ಸ್ವಿಟ್ಜರ್ಲೆಂಡ್ ಗಳಲ್ಲಿ ನಾನಾ ಭಾಷೆಗಳನ್ನೂ ಪ್ರಜಾಪ್ರಭುತ್ವ ಮತ್ತು ಸಂಸ್ಕೃತಿಗಳು ಉಳಿದು ಅಭಿವೃದ್ಧಿ ಹೊಂದಿದವು. ಆದರೆ ನಾನಾ ಭಾಷಾ ಸಂಸ್ಥಾನಗಳಿರುವ ಭಾರತದಲ್ಲಿ ಅವುಗಳಿಗೆ ಅವಕಾಶವಿದ ಪರಿಸ್ಥಿತಿ!

ಮುಂಬೈವಾಗಿ, ಭಾಷಾವಾರು ಪ್ರಾಂತಗಳು ಭಾರತದ ಒಕ್ಕೂಟಕ್ಕೆ ಅದರ ಶಾಂತಿ, ಏಳ್ಗೆಗಳಿಗೆ ಒಳ್ಳೆಯದರ ಬದಲು ಕೆಟ್ಟದನ್ನೇ ಮಾಡುವ ಸಂಭವನಿದೆ. ಎರಡು ಸಂದರ್ಭಗಳಿಂದಲೂ ತೊಂದರೆಯೇ ಹಾಜರೂ ಇದ್ದರೆ ಆ ಮೇಲೆ ಯೋಚಿಸುವುದಕ್ಕಿಂತ ಈಗಲೇ ಎಚ್ಚರಿಸುವುದು ಲೇಸು.

ರಾಜಾಜಿ ರಾಜೀನಾಮೆ.

ಭಾರತದ ಗೃಹ ಮಂತ್ರಿ ಶ್ರೀ. ಸಿ. ರಾಜಗೋಪಾಲಾಚಾರಿಯವರು ಅಕ್ಟೋಬರ್ ಅಂತ್ಯದಲ್ಲಿ ತಮ್ಮ ಅಧಿಕಾರದಿಂದ ನಿವೃತ್ತರಾಗುವರೆಂದು ಖಚಿತವಾಗಿ ತಿಳಿದುಬಂದಿದೆ.

ರಾಜಾಜಿಯವರು ಹೋದ ವರ್ಷ ಜುಲೈ ತಿಂಗಳಲ್ಲಿ ಕೇಂದ್ರ ಮಂತ್ರಿ ಮಂಡಲಕ್ಕೆ ಸೇರಿ, ಆ ವರ್ಷ ಡಿಸೆಂಬರ್ ತಿಂಗಳ ವರೆಗೂ ಪೋರ್ಟ್‌ಫೋಲಿಯೋ ಇಲ್ಲದ ಮಂತ್ರಿಗಳಾಗಿದ್ದರು. ಆನಂತರ ಅವರು ಹೋಂ ಮಂತ್ರಿಗಳಾದರು.

ಹೋದ ವರ್ಷ ಅಕ್ಟೋಬರ್ ತಿಂಗಳಲ್ಲೇ ಅವರು ರಾಜಕೀಯದಿಂದ ವಿರಮಿಸಬೇಕೆಂಬ ಆಸೆಯನ್ನು ವ್ಯಕ್ತಪಡಿಸಿದ್ದರು. ಆದರೆ, ಕಳೆದ ಡಿಸೆಂಬರ್‌ನಲ್ಲಿ ಸರ್ದಾರ್ ಪಟೇಲರು ನಿಧನರಾದುದರಿಂದ, ರಾಜಾಜಿಯವರನ್ನು ಬಿಟ್ಟು ಕೊಡಲು ಪ್ರಧಾನಿ ನೆಹ್ರೂರವರಿಗೆ ಸಾಧ್ಯವಾಗಲಿಲ್ಲ. ಮುಂದಿನ ವಾರ ಪಾರ್ಲಿಮೆಂಟಿನಲ್ಲಿ ಪಕ್ಷೇತರ ಸದಸ್ಯರ ಪ್ರಶ್ನೆಗಳಿಗೆ ಉತ್ತರ ಕೊಡುವ ಪ್ರಥಮ ಪ್ರಸಂಗವು ಪ್ರಾಪ್ತವಾದ ನಂತರ, ರಾಜಾಜಿಯವರು ಪಾರ್ಲಿಮೆಂಟಿನಲ್ಲಿ ಬೀಳ್ಕೊಡುವ ಭಾಷಣ ಮಾಡುವರು.

ದಿ ಟ್ರೈ ಮಿ ಕ ಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮುಖ್ಯ ಕಚೇರಿ:–ಹೊಸ ದೆಲ್ಲಿ.

52-23 ಸ್ಥಾಪಿಸಿದ ದೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್

ಹಕೀಮ್ ಅಜಮಲಖಾನ್. ಡಾ|| ಎಂ. ಎ. ಅನ್ಸಾರಿ.

Transacts:–LIFE, FIRE, MOTOR and MARINE.

ಬ್ರಾಂಚ್ ಸೆಕ್ರೆಟರಿ,

ಹಂಜನಕಟ್ಟಾ, ಮಂಗಳೂರು.

ಅಂಬೇಡ್ಕರ್ ರಾಜೀನಾಮೆ.

ಡಾ. ಅಂಬೇಡ್ಕರರು ತಾ. ೨೭ರಲ್ಲಿ ಪ್ರಧಾನಿ ಮಂತ್ರಿಗಳಿಗೆ ಪತ್ರ ಬರೆದು, ಪಾರ್ಲಿಮೆಂಟ್ ಅಧಿವೇಶನ ಮುಕ್ತಾಯವಾಗಿರುವುದನ್ನು ತಮ್ಮನ್ನು ಅಧಿಕಾರದಿಂದ ಬಿಟ್ಟುಕೊಡಬೇಕೆಂದು ಕೇಳಿಕೊಂಡರೆಂದು ಗೊತ್ತಾಗಿದೆ. ಡಾ. ಅಂಬೇಡ್ಕರರು ತಾವು ಜನಾಮೆ ಕೊಟ್ಟರುವುದು ಮುಖ್ಯವಾಗಿ ಆರೋಗ್ಯ ಕಾರಣಗಳಿಂದ. ಅಕ್ಟೋಬರ್ ಮಧ್ಯಭಾಗದಲ್ಲಿ ಅವರು ಬೊಂಬಾಯಿ ನಗರಿಗೆ ಹೋಗಿ ಒಂದಕ್ಕೆ ಸೇರಿಬಿಕಿತ್ಸೆ ಪಡೆಯುವರು. ಡಾ. ಅಂಬೇಡ್ಕರರು ಇನ್ನೂ ಮುಂದೆ ದೆಹಲಿಯಲ್ಲೇ ನೆಲೆಸಿ ಸುಪ್ರೀಂ ಕೋರ್ಟಿನಲ್ಲಿ ವಕೀಲರಾಗಿ ವೃತ್ತಿ ನಡೆಸಲು ಉದ್ದೇಶಿಸಿದ್ದಾರೆ. ಅವರು ಬರಲಿರುವ ಚುನಾವಣೆಗಳಲ್ಲಿ ಸ್ಪರ್ಧಿಸುವರು.

ಹೊಸ ಸಚಿವರಿಲ್ಲ.

ಕೇಂದ್ರ ಮಂತ್ರಿಮಂಡಲಕ್ಕೆ ಈಗ ಹೊಸ ಮಂತ್ರಿಗಳಾರನ್ನೂ ನೇಮಕವಾಡುವುದಿಲ್ಲವೆಂದು ಗೊತ್ತಾಗಿದೆ. ಆಹಾರ ಸಚಿವ ಮುನ್ಷಿಯವರೇ ನ್ಯಾಯಾಂಗ ಶಾಖೆಯನ್ನೂ ವಹಿಸಿಕೊಳ್ಳುವರೆಂದು ಗೊತ್ತಾಗಿದೆ.

ನೋಟೀಸಿಗೆ ಉತ್ತರ.

ತಾ. ೩೦-೮-೫೧ರ 'ಕೊಡಗು' ಪತ್ರಿಕೆಯಲ್ಲಿ ನಾನು ಪ್ರಕಟಿಸಿದ್ದ ಭೂಮಿ ಮೂರಾಟದ ವಿಚಾರದಲ್ಲಿ ಶ್ರೀ. ಸಿ. ಜಿ. ಕಾರ್ಯಪ್ಪನವರು ಕೊಟ್ಟ ನೋಟೀಸನ್ನು ನೋಡಿದೆನು. ನಾನು ಈ ಸ್ವತ್ತನ್ನು ಮೂರಾಟ ಮಾಡುವಾಗ ಬೇರೊಂದು ಹೊಸ ಆಸ್ತಿಯನ್ನು ತೆಗೆಯಲಿಕ್ಕಾಗಿಯಾದ ಕಾರಣ ಇದಕ್ಕೆ ಆತಂಕಪಡುವ ಹಳ್ಳು ಅವರಿಗಿರುವದಿಲ್ಲ. ನ್ಯಾಯವಲ್ಲದ ಅವರ ವಿರೋಧದಿಂದ ಉಂಟಾಗುವ ಕಷ್ಟನಷ್ಟಗಳಿಗೆ ಅವರೇ ಜವಾಬ್ದಾರರಾಗಿರಬೇಕೆಂದು ಈ ಮೂಲಕ ತಿಳಿಸುತ್ತೇನೆ.

ಜೆಪ್ಪುಡಿರ ಎ. ಪೊನ್ನಪ್ಪ,
ಪೊನ್ನಂಪೇಟೆ.

ಪ್ರಕಟಣೆ.

ಉತ್ತರ ಕೊಡಗು ಸೋಮವಾರಪೇಟೆ ನಾಡು ಬಿಳಿಗೇರಿ ಗ್ರಾಮದ ಬಾಚಿನಾಡಂಡ ಕುಶಾಲಪ್ಪನವರ ಮಗ ದೊಡ್ಡ ಪೂವಯ್ಯನಾದ ನಾನು, ತಾ ೧೯ ರಂದು 21-9-1951ರ "ಕೊಡಗು" ಪತ್ರಿಕೆಯಲ್ಲಿ ಬಾಚಿನಾಡು ಕುಶಾಲಪ್ಪ ವಗೈರೆ ಪ್ರಕಟಿಸಿರುವ ವಿಷಯಗಳನ್ನು ಓದಿದೆನು. ಆದರೆ ಈ ಜನರಿಗೆ ನನ್ನ ಸ್ಥಿರ ಚರ ಆಸ್ತಿಗಳ ಮೇಲೆ ಯಾವ ಹಕ್ಕು ಬಾಧ್ಯತೆಗಳಾಗಲೀ ಇರುವುದಿಲ್ಲ. ಇವರುಗಳು ನಾಚಕಾರ್ಯಕ್ಕಾಗಿ ದಿನಾಂಕೆಯಂದು ವಕೀಲ ವೈಯಾಜಿಯವರಿಗೆ ಕೊಡಬೇಕೆಂಬ ಇರಾದೆಯಿಂದ ಆ ನೋಟೀಸು ಪ್ರಕಟಿಸಿರುವುದಾಗಿದೆ. ಸ್ಥಿರ ಚರ ಆಸ್ತಿಗಳನ್ನ ಪರಾಧೀನ ಮಾಡಲು ಪವನೆ ಇರುವ ಹಕ್ಕನ್ನು ಆಟಂಕಿಸುವುದಕ್ಕೆ ಇವರುಗಳಿಗೆ ಯಾವ ಅಧಿಕಾರವೂ ಇರುವುದಿಲ್ಲ.

ಬಾಚಿನಾಡು ದೊಡ್ಡ ಪೂವಯ್ಯ.

ಕೊಡಗು ಸ್ವಾಂತೇಕ ಸಹಕಾರ ಬ್ಯಾಂಕು, ಲಿಮಿಟೆಡ್, ಮಡಿಕೇರಿ.

ತಾ. ೧–೧೦–೫೧.

ಪ್ರಕಟಣೆ.

'3½% Season Deposit'

'ಶೇಕಡ ೩½ರಂತೆ ಕಾಲಿಯೂನ 3½ ದರದ ಶೇವಣಾತಿ.

ಬ್ಯಾಂಕೇಕ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗಿನಲ್ಲಿ ಶೇಕಡ ಸಾಲಿಯೂನ ಮೂರವರೆ ಬಡ್ಡಿ ಸರದಲ್ಲಿ ಅಮ ತೆರನ ಅನವಧಿಯ ಶೇವಣಾತಿ (Season Deposit) ಗಳನ್ನಿಡಲು ಸದಸ್ಯರಿಗೂ ಹಾಗೂ ಸದಸ್ಯರೇತರಿಗೂ ತಾ ಹದಿನೈದನೆ (೧೫–೧೧–೫೧)ರ ವರೆಗೆ ಎಡೆಕೊಡಬಹುದೆಂದು ತೀರ್ಮಾನಿಸಲಾಗಿದೆ. ಈ ಸಂದರ್ಭವನ್ನು ಸರ್ವರೂ ಉಪಯೋಗಿಸಿಕೊಳ್ಳಬೇಕಾಗಿ ನೋರಲಾಗಿದೆ. ಕೆ. ಪಿ. ಅಪ್ಪಯ್ಯ.

ತಾ. ೧–೧೦–೫೧. ಪ್ರೆಸಿಡೆಂಟ್.

ಪ್ರಕಟಣಾ ಪತ್ರಿಕೆ.

ಉತ್ತರ ಕೊಡಗು ತಾಲೂಕಾ ಸೋಮವಾರಪೇಟೆ ನಾಡು ಬಿಳಿಗೇರಿ ಗ್ರಾಮದ ಬಾಚಿನಾಡಂಡ ಕುಶಾಲಪ್ಪ, ಮುಚ್ಚಣ್ಣಾಚಪ್ಪ, ಮೂಚಯ್ಯ, ಬಿ. ಎಂ. ಪೂವಯ್ಯ ಬಿ. ಕೆ. ಕುಟ್ಟಪ್ಪ, ಎಂ. ತಿಮ್ಮಪ್ಪ, ಮೊದಲಾದ ಸಹ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ–ನಮ್ಮ ಬಾಚಿನಾಡಂಡ ಕಾಳಪ್ಪನವರ ಮಗ ಪೂವಯ್ಯನವರ ಭೂತ್ರ ಸಂತಾನವಿಲ್ಲದ್ದರಿಂದ ತನ್ನ ಹೆಸರಲ್ಲಾ ಜವಾಬುದಿ ನಡೆದು ಬರುವ ಸ್ಥಿರ ಆಸ್ತಿಗಳನ್ನು ಶುದ್ಧ ಕ್ರಯಕ್ಕೆ ಮೂಂಟೆ ಮಾಡುವುದಾಗಿ ತಿಳಿಯುತ್ತೇವೆ. ಸಹಾ ಪೂವಯ್ಯನವರ ಹೆಸರಿನಲ್ಲಿರುವ ಪೂರ್ತಿ ಸ್ಥಿರ ಚರ ಸ್ವತ್ತುಗಳಿಗೆ ಸಹ ನಾವು ಕುಟುಂಬಸ್ಥರೆಲ್ಲ ಹಕ್ಕುದಾರರಾಗಿರುತ್ತೇವೆ. ಆದುದರಿಂದ ಯಾರಾದರೂ ಸದರಿಯವರ ಹೆಸರಲ್ಲಿರುವ ಸ್ಥಿರ ಸ್ವತ್ತುಗಳನ್ನು ಶುದ್ಧ ಕ್ರಯ, ಬೋಗ್ಯ, ವಗೈರೆಗೆ ತೆಗೆದುಕೊಳ್ಳಕೂಡದು. ಹಾಗೇನಾದರೂ ನಮ್ಮ ಕುಟುಂಬದವರ ಒಪ್ಪಿಗೆ ಇಲ್ಲದೆ ಕ್ರಯಕ್ಕೆ ತೆಗೆದುಕೊಂಡರೆ ಆಗ್ಗೆ ಶತಮಾನಗಾಗಲಿ ಸರ್ವ ಶಪ್ತಕಷ್ಟಕ್ಕೂ ಸಹ ಕ್ರಯಕ್ಕೆ ತೆಗೆದುಕೊಂಡವರು ಜಾಧ್ಯರಾಗಕ್ಕಿಲ್ಲ. ಎಂಬುದಾಗಿ ಈ ಮೂಲಕ ತಿಳಿಯಪಡಿಸುತ್ತೇವೆ.

ಕುಟುಂಬಸ್ಥರ ಪರ,
18-9-51. ಬಿ. ಕುಶಾಲಪ್ಪ.

3-3

ಓದುಗರ ಓಲೆಗಳು

ಮಲೇರಿಯೊ ಕಾಯಿಲೆ.

ಕಾ. 7–9–51ರ ಕೊಡಗು ಪತ್ರಿಕೆಯನ್ನು ಓದಿ ನೋಡಿದೆವು. ಅದರಲ್ಲಿ 'ರಾಜ' ಎಂಬವರು ನಾಪೋಕ್ಲಿನ ಮಲೇರಿಯೂ ಇನ್ಸ್‌ಪೆಕ್ಟರರ ವಿಚಾರ ಬರೆದ ಅಪಪ್ರಚಾರವನ್ನು ನೋಡಿದೆವು. ಇವನ್ನು ಬರೆದ 'ರಾಜ' ಎಂಬವರು ಯಾರು ಎಂದು ನಮಗೆ ತಿಳಿಯಲಾರದು. ಆದರೆ ಅವರು ಕನ್ನ ಜವಾಬ್ದಾರಿಕೆಯನ್ನು ತಿಳಿದು ಕೊಳ್ಳಲಾರದೆ ಇರುವ ವೈಪರ್ ಪ್ಯಕ್ತಿ ಯಾಗಿರಬಹುದೆಂದು ಯೋಚಿಸುತ್ತೇನೆ. ಅಪಪ್ರಚಾರಗಳು ವಾಡಿಕೆಯಲ್ಲಿವೆ. ಆ ವುಗಳನ್ನು ನೋಡುವಾಗ ಕೆಲವು ಸಲ್ಟಿಗೆಯೂ ವಿಚಾರಶವಿರಬೇಕು. ಆದರೆ 'ರಾಜ' ಎಂಬವರು ಬರೆದುದರಲ್ಲಿ ಎಳ್ಳಷ್ಟು ವಿಚಾರಾಂಶವಿಲ್ಲ. ಆದುದಾಕಾಣದ ಅದಕ್ಕೆ ಸಮ್ಮಂದ ಪಟ್ಟ ಅಧಿಕಾರಿಯು ಸರಿಯಾದ ಜವಾಬನ್ನು ಕೊಡಬಹುದಿತ್ತು. ಇದಕ್ಕಾಗಿ ಕಳೆದ ಪತ್ರಿಕೆಯನ್ನು ಪೂರ್ತಿಯಾಗಿ ಓದಿ ನೋಡಿದೆವು. ಯಾವುದೊಂದೂ ಜವಾಬು ಕಾಣಲಿಲ್ಲ. ಅವರು ಇದರ ಗೋಜಿಗೆ ರವಿಲ್ಲದೆ ಇರುವುದನ್ನು ತೋರುವಾಗ ಕರ್ತವ್ಯ ಶೀಲತೆಯೂ, ಮತ್ತು ವಿಶಾಲ ಬುದ್ಧಿಯೂ ಅವರಲ್ಲಿ ಧಾರಾಳವಾಗಿ ಇದೆ ಎಂದು ಜೆನ್ನಾಗಿ ಗೊತ್ತಾಗುತ್ತದೆ. ನಾಪೋಕ್ಲಿನಲ್ಲಿ ಮಲೇರಿಯೂ ಕಾಯಿಲೆಯು ಕವ್ಮಿ ಹೂಗಿಲ್ಲವೆಂದೂ ಯಾವ ಆಧಾರವ ಮೇಲೆ ಹೇಳಿದರೋ ನಾವು ತಿಳಿಯೆ. ಆಕರೆ ನಾಪೋಕ್ಲು ಪಾಡಿಯಲ್ಲಿ ಮಲೇರಿಯೂ ಪ್ರಭಾವು ಬಹಃ ಕವ್ಮಿ ಎಂದು ಇಲ್ಲಿಯ ಮೆಡಿಕಲ್ ಅಧಿಕಾರಿಯವರಿಂದ ತಿಳಿಯಬಹುದೇ ನೆ ಟೌನಿನಲ್ಲೂಽ, ಅದರ ಹೊರಲೇ ಉಳಿದಿರುವುದಿಲ್ಲ. ವ್ಯವಸಾಯ ಸಮುಯಾಯ ಲ್ಲಿ ಎಲ್ಲೆಲ್ಲೂ ಊರಪಡಿಯಂತೆ ಕಲೆದೋರುತ್ತಿದ್ದ ಈ ಕಾಯಿಲೆಯು ಈಗ ಬೇಕಷ್ಟು ವಿದರಷ್ಟಾದರೂ ಇದೆಯೇ ಎಂಬುದು ಸಂಕಪೂರ್ಣವಾಗಿದೆ. ಅಧಿಕಾರಿಯು ಮನೆಯು ಮೇಂಡೆ ಒಂದು ಕೆಸರು ಗುಂಡಿ ಇದೆ ಎಂದು ಹೇಳುತ್ತಾರೆ. ಅದಕ್ಕು ತೋಸಿಕೊಡುವುದೇ? ನಾವು ವಿಚಾರಿಸಿ ನೋಡಿದಲ್ಲಿ ಅವರ ಮನೆಯ ಮಂಡೆ ರಾಜಾಕಸ್ತೆ. ಅದರ ಆಚೆ ಪೊಲೀಸ ಲೈನು ಇರುತ್ತೆ. ಪೊಲೀಸ ಲೈನು ಎತ್ತರ ದಲ್ಲಿರುವುದರಿಂದ ಮಳೆ ಬೀಳುವ ಸಮಯದಲ್ಲಿ ಅಲ್ಲಿ ಬಿದ್ದ ಮಳೆನೀರು ಕೊಳೆತು ನೀರೊಡನೆ ಸೇರಿ ರಸ್ತೆಯ ಚರಂಡಿಗೆ ಬಂಸು ಬೀಳುತ್ತದೆ. ಆ ಜಾಗದಲ್ಲಿ ಕೆಲವು ಸಮಯ ಕೆಸರಾಗಿ ಇರುತ್ತೆ ನಂತ್ರ ಕೆಲವು ಹಂದಿಗಳು ಅಲ್ಲಿ ಇದ್ದು ಹೊರಳಾಡುವುದೂ ಉಂಟು. ಇದು ಸದಾ ಇರುವ ಸಂದರ್ಭವಲ್ಲ. ಇರುವುದಾದರೆ ಅವುಗಳ ಮೇಲೆ ಜವಾಬ್ದಾರಿಕೆ ಮಲೇರಿಯೂ ಅಧಿಕಾರಿಗಳಿಗೆ ಇಷ್ಟುವುದಿಲ್ಲ. ರಸ್ತೆಯ ಬದಿ ಚರಂಡಿಗಳನ್ನು ಸರಿಯಾಗಿ ಇಟ್ಟುಕೊಳ್ಳುವ ಜವಾಬ್ದಿಯು ದೇರೆ ಇದೆ. ಅಲ್ಲದೆ. ಹಂದಿಗಳು ಯಾವಾಗಲೂ ಬೀಳುವ ಕೆಸರು ಗುಂಡಿಯನ್ನು ಸೊಳ್ಳೆಯು ಹುಟ್ಟುಸ್ಥಳವೆಂದು ತಿಳಿದು ತಿಳಿಯದ 'ರಾಜ' ಎಂಬವರು ಮತ್ತು ಜೋಳುವುದಲ್ಲದೆ ಬೇರೆ ಯಾರೂ ಹೋಲಿಸಿಲ್ಲ ಕಡೆಯಾಗಿ ಅಧಿಕಾರಿಗಳು ದೇಹದ ಕೆಲಸಗಳನ್ನು ನೋಡುತ್ತಿರುವರೆಂದೂ ಅಪ್ಪತಾಪತ್ರಿಕೆಗಳ ನ್ನು ಜಿಗಬೇಕೆಂದೂ ಬರೆದಿರುತ್ತಾರೆ. ಇದು ಸ್ವಪ್ರಯೋಜನ ದೃಷ್ಟಿಯಿಂದ ಲೋ ಯಾ ಅಧಿಕಾರಿಗಳ ಹೆಸರನ್ನು ಅಪಪ್ರಚಾರಪಡಿಸಲಿಕ್ಕಾಗಿಯೋ ಎಂದು ತೋರುತ್ತದೆ. ಅವರು ಟೌನಿನಿಂದಲ್ಲಿ ಯೂ ರೊಟ್ಟರ ಗೋಜಿಗೂ ಹೋಗದೆ ಎಲ್ಲರೂಡ ನೆಯೂ ಸಮಭಾವದಿಂದ ವೀಕ್ಷಿಸುವಾಗಿ, ಕರ್ತವ್ಯಕ್ಕೆ ಉಚಿತ ಕಾರ್ಯಗಳಲ್ಲಿ ನಿರತರಾಗಿ ಸರ್ವರೂ ವೇಡ್ಯುವಂತೆ ಕೆಲಸ ಮಾಡುತ್ತಲಿದ್ದಾರೆ.

'ತಿಳಿದ ನಾಪೋಕ್ಲು ಟೌನು ಜಾಸಿ'

ಸಂಯೋಜನಾವಾದಿಗಳಲ್ಲಿ.

ಶಾನು ೧೯–೯–೫೧ರ 'ಜನ್ಮಭೂಮಿ' ಪತ್ರಿಕೆಯಲ್ಲಿ ಬರೆದ ಪಾತ್ಯಯಸ್ಥನ್ನು ಜೆನ್ನಾಗಿ ಓದಿದೆ. 'ಕೆಳಗೆ ಬಿದ್ದರೂ ಹೂಗ ಮೇಂತೆ' ಮತ್ತು 'ಗಟ್ಟಿಯಾದರೆ ರೊಟ್ಟಿ ತೆಳ್ಳಗಾದರೆ ದೋಸೆ' ಎಂಬ ತತ್ವವ ಶ್ನ ಜೆನ್ನಾಗಿ ಸಾಧಿಸಿದ್ದೀರಿ. ದೇರೆ ಒಂಭತ್ತು ಚೀಫ್ ಕಮಿಷನರ್ ಪ್ರಾಂತಗಳಲ್ಲಿ ಸಹ 'ಪ್ರತ್ಯೇಕವಾದಿಗಳ' ಹೋರಾಟವಿರಲಿಲ್ಲವೆಂದು ಹೇಗೆ ಹೇಳುತ್ತೀರಿ? ಅಲ್ಲಿಯ ಏಕೀಕರಣವಾದಿಗಳು ವಿಶಾದರೂ ಕಮಗೆ ತಿಳಿಸಿದರೋ? ಪ್ರತ್ಯೇಕವಾದದಲ್ಲಿ ತಂಬಿ ಇರುವವರೆಲ್ಲಾ ತಿಳಿಗೇಡಿಗಳೇ? ನಿವ್ಮ ಮಾತಿನೇ ನಿಮಗೆ ಕನ್ನಡಿಯಲ್ಲಿ ಕಾಣುವುದು. ಇನ್ನೊಬ್ಬರದಲ್ಲ. ಕೊಚ್ಚಿ-ತಿರುವಾಂಕೂರು ವಿಲಿನದ ಲಾಭ ನಷ್ಟ ಪತ್ರಿಕೆಯಲ್ಲಿ ಓದಿದ್ದಿರಾ? ದೊಡ್ಡ ವಿಷಯ ಚಿಕ್ಕ ವಿಷಯವನ್ನು ತೆಳ್ಳಿಸುತ್ತದೆ. ಸ್ವಾತಂತ್ರ್ಯ ಸಿಕ್ಕಿಯೂ ಬ್ರಿಟಿಷರ ಸೈನ್ಯಾಧಿಕಾರಿ ಹೊಗಳುತ್ತೀರಾ? ಭಾಷಾವಾರು ಪ್ರಾಂತರ ಚಿಚ್ಚೆ ಆಗಲೂ ಬಹುದು. ಆದರೆ ಕೊಡಗು ಪ್ರತ್ಯೇಕ ಇರಲೂ ಬಹುದು– ಇಲ್ಲ ಎನ್ನಲು ನೀವು ಏನು 'ಕಚ್' ಹೇಳುತ್ತೀರೋ? ನಿವ್ಮ ತಲ್ಲಿ ಏನೆಂದು ಕೇಳುತ್ತೀರೋ? ಒಂದೇ ಶಬ್ದದ ಉತ್ತರ 'ದೇಶ ದ್ರೋಹ' ನಿವ್ಮ ದೇಶವಕ್ಷ್ಮ, ನಿಮಗೇ ಆಳಲು ಸಾಧ್ಯವಿಲ್ಲದ್ದರಿಂದ ಇತರರಿಗೆ, ಮುಂದಕ್ಕೆ ಬರುವ ಅಪಾಧ್ಯಕ್ಕೆ ಮೂರಿ ಬಿಡುವಷ್ಟು, ಅಸ್ಟೆ! ನಿವ್ಮಂಥವರೇ ಕೊಡಗು ರಾಜರು ಆಳಿ ಹೋಗುವ ಕಾಲಕ್ಕೆ, ತಾವಾಗಿ ಸಿಕ್ಕಿದ ಸ್ವಾತಂತ್ರ್ಯವನ್ನು ಜಾಗೀರು–ಉಂಬಳಗಳ ವೊಡಿದವರು. ಶ್ರೀ ಸಿ. ಎಂ ಪೂಣಚ್ಚನವರು ಸಂಯೋಜನಾವಾದಿ ಮುಂದಾಳೆಂದು ನಿವ್ಮ ಬಾಷ್ಯಯಲ್ಲಿ ಬರೆದಿದ್ದೀರಿ. ಸತ್ಪ್ರಕೆಯಲ್ಲಿಯೂ, ಪಬ್ಲಿಕ್‌ನಲ್ಲಿಯೂ, ಜೆಲ್ಲಿ ಕಾನ್‌ಫರೆನ್ಸ್‌ನಲ್ಲಿಯೂ ತಾವು ಸಂಯೋಜನಾವಾದಿಯೆಂದು ಅವರು ಹೇಳಲ್ಲ. ಒಳಗೊಳಗೇ ಏಕೀಕರಣವಾದಿಗಳೊಂದಿಗೆ ಓಡಾಡುತ್ತಿದ್ದಾರೆ ಅಷ್ಟೆ. ಜೆಲ್ಲಿಯಲ್ಲಿ ಅವರು ಮೆನೆನ್ನಾರಿಗೆ ಕೊಟ್ಟ ಜವಾಬು ಗೊತ್ತಿದೆಯೇ? ಪ್ರತಿಯೊಬ್ಬ ಮುಂದಾಳಿಗೆ ಹಲವು ಜನ ಹಿಂದಾಳುಗಳು ಇದ್ದಾರೆ. ಶ್ರೀ ಬೆಳ್ಯಪ್ಪನವರು ಅವರ ಅಭಿಪ್ರಾಯ ಕೇಳದೆ, ಇಷ್ಟ ಬಂದ ಹಾಗೆ ಶ್ರೀ. ಸೋಮಣ್ಣ ಮತ್ತು ನಂಜಪ್ಪನವರು ಕೊಟ್ಟ ಹುಕುಂನಂತೆ ಕುಣಿದರೆ ಅದು ಮಂಡಿಕೇರಿ ಕಾರ್ಖಾನೆಗೆ ಕೊಡಗು ಎಜ್ಯುಕೇಷನ್ ಕಾಂಗ್ರೆಸು ಸಮಿತಿ, ಕೊಡಗಿನ ಜವರನ್ನು ಯೂ ಓಟರನ್ನು ಕೇಳದೆ, ದೇಶವನ್ನು ಸಂಯೋಜನೆ ನೂಡಬೇಕೆಂದು ತೀರ್ಮಾನಿಸಿ ಕೊಂಡು, ಅದನ್ನು ಡೆಲ್ಲಿಯವರೆಗೆ ಕೊಂಡು ಊವಿದಂತೆ ಆರಬಹುದು. ನಿವುಗೆ ಸಾಧ್ಯವಿದ್ದರೆ ಶ್ರೀ. ಬೆಳ್ಯಪ್ಪನವರಿಗೆ ರಾಜಕೀಯ ಪಾಠ ಹೇಳಿ ಕೊಡಿ. 'ನಮ್ಮ ಕಾಲೊಳು ನಾತ್ಕ ನಿಲ್ಲಾವದು ನವಗೆ ಹಿತಕರವಲ್ಲವೆ?' ಈ ಪದ್ಯ ಕೇಳಿದ್ದೀರಾ? ನಮ್ಮ ನೆಯವಳನ್ನು ಮದುವೆಯೆ ವೈಸೂರು, ಬೆಂಗಳೂರು, ಹುಬ್ಬಳ್ಳಿ ಮತ್ತು ಧಾರವಾಡದ ಬೆಡಗಿನ ಹೆಣ್ಣಿಗೆ ಮನಸೋತಿರಾ? 'ಹೂರದ ಬೆಟ್ಟ ನುಣ್ಣಗೆ' ಮರೆಯಬೇಡಿ! ಸದ್ಯದ ವಿಚಾರ ಬರೆಯಿರಿ. ಭವಿಷ್ಯ ಅಕ್ಷರಲಿ, ತಾಳಿ ಏನಾಗುವರೆಂದು ಹೇಳಲು ಸಾಧ್ಯವಿಲ್ಲ.

ಬರುವ ಚುನಾವಣೆಗೆ ನಿಂತ ಮೇಧಾವಿಗಳನ್ನೂ ಹುಸ್ಕು ಬಿಶ್ವಯೇವಂಕರನ್ನೂ ಒಟರುಗಳು ನೀವು ಕೊಡಗು ದೇಶದ ವಿಕೀಕರಣಕ್ಕೆ ಓಟು ಮಾಡುತ್ತೀರೋ ಯಾ ಪ್ರತ್ಯೇಕಕ್ಕೂ? ಎಂಬು ಸವಾಲು ಕೇಳಿಯೇ ಕೇಳುತ್ತಾರೆ. ಇಲ್ಲದಿದ್ದರೆ ದೇಶದ ಅಭಿಪ್ರಾಯವೇ ನಮ್ಮ ಅಭಿಪ್ರಾಯವೆಂದು ಕಳೆದ ಸಾರಿ ಓಟೀ ಪಡೆದು, ದ್ರೋಹ ಮಾಡಿದ ಪೂರ್ವ ಮಹನೀಯರಂತೆ ಆಗಬಹುದು.

'ಕೊಡಗು ಕಂಟಿಕ್ಟ್' ಮತ್ತು ಪ್ರಾಂತೀಕ ಸಹಕಾರಿ ಬ್ಯಾಂಕಿಕ್ಟ ಆಡಳಿತ ವಿಚಾರ ಬರೆದಿದ್ದೀರಿ. ಆದರೆ 'ಕೊಡಗು ಕಾಂಗ್ರೆಸ್' ಮತ್ತು ಕೆ. ಪಿ. ಸಿ. ಸಿಯ ವಿಚಾರ ಬರೆಯಲು ಹುರಿಸು ಕಿಟ್ಟಿರಾ

'ಯೋಗ್ಯರನ್ನು ಆರಿಸಿ ಕಳುಹಿಸುವವರು ಒಟರುಗಳು– ಪ್ರತ್ಯೇಕವಾದಿಗಳಲ್ಲ. ಜೆನ್ನಾಗಿ ತಿಳಿಯಿರಿ. ಪಾರ್ಟ ಸಂಗಡಗಳಲ್ಲದೇ ಓಟು ನಡೆಯುವ ದೇಶವೇ ಇಲ್ಲವೆಂದು ಕೇಳಿ ತಿಳಿದುಕೊಳ್ಳಿ. 'ದೇಶ ಸೇವೆ, ಊರ ಸೇವೆ, ಜನ ಸೇವೆ ಜನಾರ್ಧನ ಸೇವೆ' ಎಂದು ನ್ವಾರ್ಥಕ್ಕೆ ಇಳಿದು, ಹಳ್ಳಿಯವರಳ್ಳೂ ಬಡ ಶೈಕರನ್ನೂ ಅವರ ಕಷ್ಟವನ್ನೂ ಮರೆಸಿ, ಪಬ್ಲಿಸಿಟಿವಾಗಿ ಮೆಂಬರು ಮಹಾಶಯರುಗಳಷ್ಟೂ ಕೋವುವಾರು ಮಂಚುಖರುಗಳನ್ನೂ ಒಟ್ಟು ಓಟರು' ಸಹ ಈ ಚುನಾವಣೆಯಲ್ಲಿ ಗುರ್ತಿಸಿಕೊಳ್ಳಬೇಕು.

ಕಾಲೇಜಿಗಾಗಿ ನಡೆದ ಹೋರಾಟದ ಫಲಿತಾಂಶ ನೆನಪಿನಲ್ಲಿದೆಯೇ? ಮೈನ್ಸಂ ಪೇಜ್ ಮೈದಾನ ವಿಸ್ತರಣೆಗೆ ಮಡಿಕೇರಿಯಿಂದ ಕಾರಿನಲ್ಲಿ ಎಸ್ಟು ಮಾದಿದಾರಿಗಳು ಬಂದಿರಲಿಲ್ಲ? ಕೊಡಗಿನಲ್ಲಿ ಎರಡು ವರ್ಷದ ಹಿಂದೆಯೇ ಸರ್ಕಾರಿ ಕಾಲೇಜು ತೆರೆದು, ಬಡವರ ಮಕ್ಕಳು ಹೆಚ್ಚಿನ ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ

ಪದೇ ಪದೇ ಪತ್ರಿಕೆಯಲ್ಲಿ ಶ್ರೀ. ಬೆಳ್ಯಪ್ಪನವರಷ್ಟೆ ಹೀಯಾಳಿಸಿ ಬರೆಯುವದರಿಂದ 'ಪ್ರತ್ಯೇಕ ವಾದಕ್ಕೆ' ಹೆಚ್ಚು ಸಹಾಯವಾಗುತ್ತಿದೆ. ಅದರ ಬದಲು ಪತ್ರಿಕೆಯು ಆ ಸ್ಥಳದಲ್ಲಿ ದೇಶ, ವಿದೇಶದ ವಿಚಾರ ಬರೆಯೇ. ಅದರಿಂದ ಚುಂದಾದಾರರಿಗೂ ಓದುಗರಿಗೂ ಲಾಭವಾಗಲಿ.

'ಹೊಸ ಓಟರು'

ಗೋಣಿಕೊಪ್ಪಲು ಟೌನ್.

ಕೊಡಗು ದೇಶದಲ್ಲಿ ಸಂತೆಗೆ ಪ್ರಖ್ಯಾತಿ ಹೊಂದಿದ ಪಟ್ಟಣ, ಗೋಣಿಕೊಪ್ಪಲು ಎಂದರೆ ಕಪ್ಪಾಗಲಾರದು. ಈ ಪಟ್ಟಣವು ಮಲಬಾರು ಮತ್ತು ಮೈಸೂರು ಪ್ರಾಂತ್ಯಗಳಿಗೆವಧ್ಯ ಇದ್ದು, ಹೊರ ಪ್ರಾಂತ್ಯದಿಂದ ಇಲ್ಲಿಗೆ ಅಮದಾಗುವಷ್ಟು ಜನರು ವೈರಿ ಔಷಧಿಗಳುದೇರೆ ಯಾವ ಪಟ್ಟಣಕ್ಕೂ ಆಗುವುದಿಲ್ಲ. ಇದಲ್ಲದೆ ವನಗಳ ವ್ಯಾಪಾರವೂ ಸಹ ಈ ಸಂತೆಯಲ್ಲಿ ನಡೆಯುತ್ತದೆ ಎಂಬ ವಿಷಯವು ಕೊಡಗಿನಲ್ಲಿ ಯಾರಿಗೂ ತಿಳಿಯದ ವಿಚಾರವಲ್ಲ ಈ ಎಲ್ಲ ಕಾರಣಗಳಿಂದ ಈ ಸಂತೆಗೆ ಸೇರುವ ಜನ ಸಂಖ್ಯೆ, ನಡೆಯುವ ವ್ಯಾಪಾರ ವಹಿವಾಟು, ಓಡಾಡುತ್ತಿರುವ ಲಾರಿಗಳು, ಸಂತೆಗೆ ಬಂದು ಸೇರುವ ಎತ್ತಿನ ಗಾಡಿಗಳು ಮುಂತಾದ ಎಲ್ಲಾ ಜಿಜಾರಿವಷ್ಟು ಸ್ಥಳೀಯ ಡಿಸ್ಟ್ರಿಕ್ಟ್ ಬೋರ್ಡು ಅಧಿಕಾರಿಗಳಾಗಲೀ, ಸರಕಾರ ಉದ್ಯೋಗಸ್ಥರಾಗಲೀ ಸಂತೆ ಜರುಗುವ ದಿವಸವೇ ಬಂದು ರೂಪಾ ರೂಪು ನೋಡಿರಲೂ ಬಹುದು. ಮತ್ತು ಸಂತೆಯ ಅನುಭವ ಪಟ್ಟರಲೂ ಬಹುದು. ಈ ಪಟ್ಟಣದಲ್ಲಿ ಜರುಗುವ ಸಂತೆಯಿಂದ ಡಿಸ್ಟ್ರಿಕ್ಟ್ ಬೋರ್ಡಿಗೂ, ಸರಕಾರಕ್ಕೂ ವರ್ಷಂಪ್ರತಿ ಎಸ್ಟು ಆದಾಯ ಬರುತ್ತಿದೆ ಎಂಬ ವಿಚಾರ ಸಂಬಂಧಿಸಿ ಅಧಿಕಾರಿಗಳಿಗೆ ತಿಳಿದೇ ಇದೆ. ಇದಲ್ಲದೆ ಈ ಪಟ್ಟಣಕ್ಕಾಗಿ ಹಾಸು ಹೋಗುವಂತೆ ಸಾಧಾರಣ ೩೦ ಬಸ್ಸು ಲೈನುಗಳವರೆಮತ್ತು ಇಲ್ಲಿ ೫ ಅಕ್ಕಿ ಗಿರಣಿಗಳಿವೆ.

ಈ ಪಟ್ಟಣವು ವ್ಯಾಪಾರ ದೃಷ್ಟಿಯಿಂದ ಇಷ್ಟರ ಮಟ್ಟಿಗೆ ಮುಂದುವರಿದ್ದರೂ, ಇದಕ್ಕೆ ಸರಕಾರದಿಂದಾಗಲೀ, ಡಿ ಬೋರ್ಡಿನಿಂದಾಗಲೀ ಯಾವದೇ ರೀತಿಯ ಸಹಾಧಾರಣೆ ಇನ್ನೂ ದೊರೆಯಲಿಲ್ಲ ಎಂಬ ವಿಚಾರವು ಬಹಳ ಶೋಚನೀಯವಾದದ್ದು. ಕಳೆದ ವರ್ಷ ಹಜರತ್ ಬೇಫ್ ಕಮಿಷನರ್ ಸಾಹೇಬರದರು ಬೇಂಕ್ ತೆರೆಯುವ ಸವಾರಂಧಕ್ಕೆ ಗೋಣಿಕೊಪ್ಪಲಿಗೆ ದಯಮಾಡಿಸಿದ್ದಾಗ ಈ ಟೌನಿನ ಮೂರ್ಕಟ್ಟು ವಲ್ಲಿರುವ ಹುಲ್ಲಿನ ಗುಡಿಸಲುಗಳನ್ನೆಲ್ಲಾ ನೋಡಿ ವ್ಯಸಪಟ್ಟದ್ದಲ್ಲದೆ, ಈ ಪಟ್ಟಣಕ್ಕೆ ಸರಿಯಾದ ಸಾಧಾರಣೆ ಆದಷ್ಟು ಬೇಗನೆ ಆಗಬೇಕು. ಸದ್ಯಕ್ಕೆ 'ಸೋಪ್ಸೈಡ್' ವಿಂಡೋವನ್ನಾಗಲೀ ನೋಡಿಸಿ, ಅದರ ವಾಲಿಳಿ ಕೆಲಸ ಹೂಡಿಸಬೇಕೆಂದು ಹೇಳಿದರು. ಅದರ ಇದು ಕಳೆಸು, ಒಂದು ವರ್ಷವಾದರೂ ಈ ಪಟ್ಟಣದಲ್ಲಿ ಒಂದು ಪಂಚಾಯಿತ ಬೋರ್ಡಾಗಲೀ 'ನೋಟಿಫೈಡ್' ವಿರ್ಯವಾಗಲೀ ಕಡೆಗೆ ಒಂದು ಬಸ್ ಸ್ಟೇಂಡಾಗಲೀ ಈ ಪಟ್ಟಣದಲ್ಲಿ ಇಲ್ಲ. ಕಂದೆ, ತಾಯಿಗಳಲ್ಲದ ಕಬ್ಬಲಿಡು ಹಾಗೆ ಸಾಧಾರಣ ೩೦ ವರ್ಷಗಳ ಹಿಂದೆ ಈ ಟೌನ್ ಯಾವ ರೀತಿಯಲ್ಲಿತ್ತೊ, ಅದೇ ರೀತಿ ಇಂದು ಸಹ ಕಬ್ಬಲಿಯಾಗಿ ಮಲ್ಗಿಯಲ್ಲಿದೆ. ಬೇಸಿಗೆ ಕಾಲದಲ್ಲಿ ಎಂದಿನ

ಚುನಾವಣೆ ಮತ್ತು ರೈತರ ಕರ್ತವ್ಯ.

[ಲೇ:—ಶ್ರೀ ಮುಲಹಾಲ್ ಮೂಡಪ್ಪನವರು]

'ಜುನಾವಣೆ' ಅಥವಾ 'ಎಲೆಕ್ಷನ್' ಈ ಪದಗಳ ಶಬ್ದಾರ್ಥ ರೈತರಿಲ್ಲಿಗೂ ತಿಳಿಯದಿದ್ದರೂ ಪದಗಳು ಹೊಸವೇನಲ್ಲ. ಈಗ ೩೫ ವರ್ಷಗಳಿಂದಲೂ ಜುನಾವಣೆಯ ವಿಷಯವಾಗಿ ಸ್ವಲ್ಪ ಮಟ್ಟಿಗಾದರೂ ಜನರು ಪರಿಶ್ರಮ ಹೊಂದಿದವರಾಗಿದ್ದಾರೆ. ಈ ಪರಿಶ್ರಮ ಎಷ್ಟರಮಟ್ಟಿಗೆ ಎಂಬ ವಿಚಾರ ಪಪ್ಪು ತಿಳಿಯಲು ಸ್ವಲ್ಪ ಹಳ್ಳಿಗಾಡಿನಲ್ಲಿ ರೈತರ ಒಡಗೂಡಿ ಆಡಿ ನೋಡಿದರೆ ತಿಳಿಯುವುದು. ಅವರ ಎಲೆಕ್ಷನ್ ಪರಿಶ್ರಮ ಶುಂಬಾ ಶೋಚನೀಯವಾಗಿರುವುದೇ ಸರಿ. ಇಪ್ಪತ್ತನೇ ಶತಮಾನದ ಪ್ರಜಾಪ್ರಭುತ್ವ ಸರಿತೂಗಿಸಿಕೊಂಡು ನಡೆಯಬೇಕಾದರೆ ತಿಳಿವಳಿಕೆಯಿಂದ ಕೂಡಿದ ಜನರಿಂದ ಆರಿಸಲ್ಪಟ್ಟ ಪ್ರತಿನಿಧಿಗಳಿಂದ ದೇಶದ ಆಡಳಿತ ನಡೆದರೇನೆ ಆ ದೇಶ ಅನ್ಯೆಕ್ಯತೆ, ಅರಾಜಕತೆಯಿಂದ ರಹಿತವಾದ ದೇಶವಾಗಿ ಬಾಳಬಹುದೇ ಹೊರತು ತಿಳುವಳಿಕೆಯಿಲ್ಲದ ಜನರ ದೇಶದಲ್ಲಿ ಪ್ರಜಾಪ್ರಭುತ್ವಕ್ಕೆ ಧಕ್ಕೆ ಬರಲು ಹೆಚ್ಚಿನ ಅವಕಾಶ ಮತ್ತು ಶಾಂತಿ ಭಂಗವಾಗಲು ಕಾರಣವಾಗುವುದು. ಸರಿ. ಆದುದರಿಂದ ನನ್ನ ದೇಶಪ್ರಜೆ ಈಗ ಎಲೆಕ್ಷನ್ ವಿಚಾರವಾಗಿ ಒಂದು ದೊಡ್ಡ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪುರಸ್ಕಾರ ಮತ್ತು ಪ್ರೋತ್ಸಾಹ ಕೊಡಬೇಕಾಗಿದೆ.

ಮುಂಬರುವರಿದ ಮತ್ತು ನಾಲ್ಕು ವರ್ಷಗಳ ಹಿಂದೆ ನಮ್ಮನ್ನು ಆಳುತ್ತಿದ್ದ ದೇಶವಾದ ಇಂಗ್ಲೆಂಡಿನಲ್ಲಿ ಆ ದೇಶದ ಜನರು ಎಷ್ಟೇ ಶಾಲಾ ಕಾಲೇಜಿನ ವಿದ್ಯಾವಂತರಾದರೂ ಅದು ಸಾಲದೆಂದು ಎಲೆಕ್ಷನ್ ವಿದ್ಯಾಭ್ಯಾಸ ಅವಶ್ಯಕವೆಂದು ಅರಿತು ಬರ್ನಾರ್ಡ್ ಷಾ ಮುಂತಾದ ಸಹಸ್ರೀಯರು ಸಂಘೆಗಳನ್ನು ಏರ್ಪಡಿಸಿಕೊಂಡು ಜನಗಳಿಗೆ ತಿಳುವಳಿಕೆಕೊಟ್ಟು ದೇಶದ ಮೇಲ್ಮೈಗೆ ಕಾರಣರಾದರು. ಅಂಥ ಸಂಘೆಗಳು ಈಗ ಪಪ್ಪು ಕೇಶಗಳಲ್ಲಿ ಉದ್ಭವಿಸಿ, ಜನಗಳಿಗೆ ಅವಶ್ಯವಾದ ಜ್ಞಾನವನ್ನು ಕೊಟ್ಟು ದೇಶಪ್ಪ ಸರಿಯಾದ ಮಾರ್ಗದಲ್ಲಿ ಹೋಗುವುದಕ್ಕೆ ಅವಕಾಶ ಕಲ್ಪಿಸಬೇಕು, ಈ ಸರ್ಕಾರಿ ಕೆಲಸದಲ್ಲಿ ಭಾಗಿಯಾಗುವವರು ಸತ್ಪುರುಷರು, ಸ್ವಮೂಡಿಕರೂ ವಿಜ್ಞಾನಿಗಳು, ದೂರದರ್ಶಕರು ಆಗಿರಬೇಕು. ವ್ಯಾಪಾರಿಗಾರರಂತೆ ಅಥವಾ ರಾಜಕೀಯ ಪಟುಗಳಂತೆ ಯಾವ ಒಂದು ಲಾಭ ಅಪೇಕ್ಷೆ ಇಲ್ಲದೆ ದೇಶದ ಆಗುಹೋಗುಗಳಪ್ಪನ್ನು ಮತ್ತು ಯಾವುದೇ ಒಂದು ಪರಿಸ್ಥಿತಿಯನ್ನು ಒದಗಿದಾಗ ಅದನ್ನು ನಿವಾರಿಸುವ ಬಗೆಯನ್ನು ವಿಜ್ಞಾನಿಗಳಂತೆ ಕಂಡುಹಿಡಿಯಬಹುದಾದ ಜನಗಳಿಗೆ ತಿಳಿಯಪಡಿಸುವಂತವರಾಗಬೇಕು. ಹೀಗೆ ಬಂದ ಮಹಾ ಪುರುಷರ ಮಾತಿಗೆ ಪುರಸ್ಕಾರ ಅಥವಾ ಗೌರವ ಕೊಡುವುದು ಪ್ರತಿಯೊಬ್ಬ ಪ್ರಜೆಯ ಪ್ರಥಮ ಕರ್ತವ್ಯ.

ಚುನಾವಣೆ ಎಂಬರೇನು?

ಈ ಶಬ್ದದ ಸರಿಯಾದ ಅರ್ಥವಾಗಬೇಕಾದರೆ ಈ ಪದ ಯಾವ ಸನ್ನಿವೇಶಕ್ಕೆ ಬಂದಿತು ಎಂಬ ವಿಚಾರವನ್ನು ತಿಳಿದರೆ ಆದರ ಶಬ್ದಕೋಶ ಅರ್ಥವು ತಿಳಿಯುವುದು. ದೇಶ, ದೇಶಕ್ಕೆ ಒಬ್ಬ ರಾಜ, ರಾಜನ ಆಧೀನದಲ್ಲಿ ಒಂದು ಸರಕಾರ, ಈ ಸರಕಾರದ ಆಡಳಿತಕ್ಕೆ ಒಳಪಟ್ಟ ಪ್ರಜೆಗಳು ಎಂಬ ವಿಚಾರ ಪ್ರತಿಯೊಬ್ಬನಿಗೂ ತಿಳಿದ ವಿಷಯ. ಈ ಬಗೆಯ ಆಡಳಿತ ಬಹುಕಾಲದಿಂದಲೂ ನಡೆದುಕೊಂಡು ಬಂದುದಾಗಿದೆ. ಇಂದು ಆಡಳಿತದಲ್ಲಿ ರಾಜನ ಜ್ಞಾನ ಅಜ್ಞಾನದಂತೆ ರಾಜ್ಯಕ್ಕೆ ಮತ್ತು ಅರಾಜಕತೆ ದೇಶದಲ್ಲಿ ಆಗಿಂದಾಗ್ಗೆ ನಡೆದಿದೆ. ಆನಂತರ ವಿಷಯಲೋಪಸರಗಳಿಗೆ ಒಳಪಟ್ಟ ಈ ಸ್ವತಂತ್ರದಲ್ಲಿ ಅಜ್ಞಾನವೇ ಜಾಸ್ತಿಯಾದಾಗ ಜನಗಳು ಅತ್ಯಂತ ಕೆಪ್ಪನೆ ಪ್ರಜೆಗಳಿಗೆ ಒಳಪಟ್ಟು ಕಡೆಯಲಾರದೆ ರಾಜನ ಮತ್ತು ಸರಕಾರದ ಮೇಲೆ ದಂಗೆ ಎದ್ದು ಕನ್ಯಾಸ್ಥಿನ ಸತ್ಪ್ರಜೆಗಳ ಆಳ್ವಿಕೆಗೆ ಒಳಪಟ್ಟು ಪ್ರಜಾ ಸರಕಾರ ಅಥವಾ ಪ್ರಜಾ ಪ್ರಭುತ್ವವೆಂದುಕರೆಯಿಸಿಕೊಂಡರು. ಅಂತಹ ಸತ್ಪ್ರಜೆಗಳನ್ನು ಅಥವಾ ಪ್ರತಿನಿಧಿಗಳನ್ನು ಆರಿಸುವುದಕ್ಕೆ ಎಲೆಕ್ಷನ್ ಕಥವಾ ಜುನಾವಣೆ ಎಂದು ಹೆಸರು.

ಈ ಜುನಾವಣೆ ಎನ್ನುವ ಪದಕ್ಕೆ ಇನ್ನೊಂದು ಅರ್ಥವುಂಟು. ಈ ಅರ್ಥ ಮೊದಲನೆಯ ಅರ್ಥದೊಂದಿಗೆ ಹೊಂದಿಕೊಂಡಿದೆ. ಹೇಗೆಂದರೆ ಪ್ರಜೆಗಳು ತಮ್ಮ ಪ್ರತಿನಿಧಿಗಳನ್ನು ಜುನಾವಣೆಮಾಡಿಕೊಂಡ ಮೇಲೆ ಅವರು ಆರಿಸುವ ಪ್ರತಿನಿಧಿ ನಿಜವಾಗಿ ಸತ್ಯವಂತನೇ ವಿನಾ ಅವನು ಪಡೆಯುವ ನಾಡಿಯಂತೆ ಮಾರ್ಗ ಸರಿಯೋ ಅಥವಾ ತಪ್ಪೋ ಎನ್ನುವ ಅರಿವಾಗಬೇಕು. ಈ ಅರಿವು ಆಗಬೇಕಾದರೆ ಇಪ್ಪು ಸರಿ, ತಪ್ಪು ಎಂದು ಇತ್ಯರ್ಥ ಮಾಡುವ ಶಕ್ತಿ ಬೇಕು. ಇದಕ್ಕೇನೇ ಪ್ರತಿಯೊಬ್ಬರೂ ತನ್ನ ಕರ್ತವ್ಯವೆನ್ನು? ತನಗೂ ಪರರಿಗೂ ಇರುವ ಸಂಬಂಧವೇನು? ಮತ್ತು ತನ್ನ ದೇಶಕ್ಕೆ ತನ್ನ ಕರ್ತವ್ಯವೇನು? ಎಂಬುದನ್ನು ತಿಳಿಯುವುದಕ್ಕೆ ಎಲೆಕ್ಷನ್ ಅಥವಾ ಜುನಾವಣೆ ಎಂದು ಕರೆದುದು. ಒಟ್ಟಿನಲ್ಲಿ ಹೇಳುವುದಾದರೆ ತನ್ನ ಅರಿವು ತನಗಾಗಬೇಕು. ಇದಕ್ಕಾಗಿಯೇ ಈಗ್ಗೆ ಮವತ್ತೈದು ವರ್ಷಗಳಿಂದಲೂ ಮಹಾತ್ಮ ಗಾಂಧೀಜಿಯವರಂತಹ ಮಹಾತ್ಮರುಪದೇಶ ಸತತವಾಗಿ ದುಡಿದು ನಮ್ಮ ದೇಶಕ್ಕೆ ಸ್ವಾತಂತ್ರ್ಯ ಗಳಿಸಿಕೊಟ್ಟರು. ಈ ಸ್ವಾತಂತ್ರ್ಯ ಅಥವಾ ಸ್ವರಾಜ್ಯ ಶಾಶ್ವತವಾಗಬೇಕಾದರೆ ಪ್ರತಿಯೊಬ್ಬ ಮನುಷ್ಯನೂ ಈ ಎಲೆಕ್ಷನ್ ಎಂಬ ಪದದ ಅರ್ಥವನ್ನು ತಿಳಿದವನಾಗಬೇಕು. ಇಲ್ಲವಿದ್ದರೆ ಸ್ವರಾಜ್ಯ ಕ್ಷಣಿಕವಾದುದು.

ರಾಜಕೀಯತೆ.

ಹಾಗಾದರೆ ಪ್ರತಿಯೊಬ್ಬ ಪ್ರಜೆಯೂ ರಾಜಕಾರಣಿಯಾಗಬೇಕಾದರೆ ಹಳ್ಳಿ ಪ್ರಜೆಯಲ್ಲಿಯೂ ರಾಜಗುಣವಿರಬೇಕು ಆ ರಾಜಗುಣವೇನು? ಮರ್ಯಾದೆ, ಮನನ, ಗಂಭೀರ ಈ ಗುಣಗಳಿಗೆ ಒಳಪಟ್ಟವನಾಗಬೇಕು. ಈ ಗುಣಗಳು ಮನುಷ್ಯನಲ್ಲಿ ಉದ್ಭವಿಸಬೇಕಾದರೆ ತನ್ನ ಜೀವನವನ್ನು ನಿಶ್ಚಯಿಸುವ ಶಕ್ತಿ ಬೇಕು. ಅಂದರೆ ಯಾವನೊಬ್ಬನೂ ಪ್ರಜೆಗೆ ಅನ್ಯಾಯ ಮಾಡಿದಂತೆ ಬಂಡಿಮೇಲೆ ಮೂಡುವನೋ, ಅವನಿಗೆ ಈ ಗುಣಗಳು ಸಾಧ್ಯ. ಇಲ್ಲದಿದ್ದರೆ ಅವನು ಇನ್ನೊಬ್ಬನ ಆಧೀನದಲ್ಲೂ, ಸಂಕುಟಿದಿಂದಲೂ ಬಾಳಬೇಕಾಗುವುದು. ಇಂಥ ಬಾಳಿಗೇ ಅಸತ್ಯ ಬಾಳು ಎಂದು ಕರೆಯುವುದು. ಮತ್ತು ಇಂತಹ ಅಸತ್ಯದಿಂದಲೇ ದೇಶದಲ್ಲಿ ಅರಾಜಕತೆ ಉಂಟಾಗುವುದು. ಸತ್ಯವಂತರು ಬಾಳಬೇಕಾದರೆ ಅಂತಹ ಶಾಂತಿ ಇಗಬೇಕಾದರೆ ರಾಜಸತ್ಯವಂತರು ನಿರ್ಮಾಣವಾಗಬೇಕು. ಇದಕ್ಕೆ ಸಮಾಜ 'ಕೊಳಕು' ಅಥವಾ 'ಪೊಜ್ಜೆ' ಎಂದು ಕರೆಯುವುದು. ಈ ಸಮಾಜದ ಕೊಳಕನ್ನು ಕೊಂಗಲಾಡಿದಿದ್ದರೆ ಸಾಂಕ್ರಾಮಿಕ ರೋಗ ಶಾಶ್ವತ. ಅಂಥ ರೋಗ ಇದ್ದರೆ ಅದನ್ನು ನಿವಾರಿಸಲು ಧಾತ್ರಿ ರಂತೆ ಜ್ಞಾನವೇನೂ ಅಲ್ಲದ್ದು ಯಾವ ರೀತಿ ಪುನರ್ವ್ಯವಸ್ಥಿಸಬೇಕು, ಹೇಗೆ ವ್ಯವಸ್ಥೆಯಾದ ವ್ಯವಸಾಯದಿಂದ ರೈತನ ಏಳಿಗೆ ಎಷ್ಟರ ಮಟ್ಟಿಗೆ ಆಗುವುದು ಎಂಬ ವಿಚಾರವನ್ನು ತಿಳಿದ ಬೇಕು.

ಇಂದು ರೈತ ಅತಿ ಸುಖ ವಿಚಾರವನ್ನು ಒಗೆತಲೆಯಲ್ಲಿಟ್ಟುಕೊಂಡಿದ್ದಾನೆ. ಸ್ವಾತಂತ್ರ್ಯ ರೈತನಿಗೆ ಅನ್ವಯವಿಲ್ಲದ ದೇಶ ಯಾವುದಿಲ್ಲ. ನನ್ನ ದೇಶದಂತೆ ಮೃತಪ್ರಭುವು ಅನ್ಯದೇಶಕ್ಕೆ ಆಹಾರವನ್ನಾಗಿ ಪೂರೈಸಿ ಆದಾಯದ ಮುಕ್ಕಾಲು ಭಾಗವನ್ನು ಪರದೇಶಕ್ಕೆ ಕಳಿಸಿಕೊಡಬೇಕಾಗಿಲ್ಲ. ಹೀಗೆ ಸ್ವಾಧೀನವಾಗುವ ಹಣವನ್ನು ದೇಶದಲ್ಲಿ ಸದುಪಯೋಗವನ್ನಾದರೆ ಎಷ್ಟೋ ಅನುಕೂಲ. ಈ ಅನರ್ಥವನ್ನು ತಪ್ಪಿಸುವುದಕ್ಕೋಸ್ಕರ ನಮ್ಮ ದೇಶದ ಚುಕಾನ ಸರಕಾರ ಈ ನಾಲ್ಕು ವರ್ಷಗಳಿಂದಲೂ ಶತ ಪ್ರಯತ್ನಪಟ್ಟರೂ ಆಹಾರದಲ್ಲಿ ಸ್ವಯಂ ಪರಿಪೂರ್ಣತೆಯನ್ನು ತೆಗೆಯಲಾಗಿಲ್ಲ. ಸರಕಾರದವರು ಆಗಲೆ ಅಂಕಣಿಸಿದ್ದರೂ ಗಳನ್ನು ಈ ನಾಲ್ಕು ವರ್ಷಗಳಲ್ಲಿ ಆಹಾರಾಭಿವೃದ್ಧಿಗೆ ಖರ್ಚು ಮಾಡಿದ್ದಾರೆ. ಈ ಹಣವೆಲ್ಲಾ ಮನುಷ್ಯನ ಪ್ರಯೋಜನವಾಗಿದೆಯೇ ಹೊರತು ಯಾವ ಪ್ರಯೋಜನವೂ ಆಗಿಲ್ಲ. ಆದುದರಿಂದ ಇಂಥ ಅನ್ಯಾಯಗಳು ಇಂದಿನ ಪ್ರಜಾಪ್ರಭುತ್ವ ಆಗಲೆ ಬೆಳೆಯುವುದನ್ನು ಮಂದೆ ತಪ್ಪಿಸಿಕೊಂಡು ಸರಿಯಾದ ಮಾರ್ಗದಲ್ಲಿ ಯಾವ ಬಂದನ್ನು ತಿಳಿದು ಅಂಥ ಮಾರ್ಗದಲ್ಲಿ ಹೋಗಬೇಕು. ಈ ಕಾರ್ಯವನ್ನು ಮುಂದಿನ ಚುನಾವಣೆಯಲ್ಲಿ ನಡೆಸಲಹುದು.

ರೈತನ ಅಭಿವೃದ್ಧಿ.

ನನ್ನ ರೈತ ಅಭಿವೃದ್ಧಿ ಹೊಂದಲು ಅವಶ್ಯವುಂಟು. ಅಂದರೆ ಕಾನೂನು ಮುಂಜಾಗರೂಕತೆಯನ್ನುವುದಕ್ಕೆ ಇರುವ ಅಡಚಣೆಗಳನ್ನು ದೂರಮಾಡಿಕೊಳ್ಳಬೇಕು. ಇರುವ ಅಡಚಣೆಗಳು ಮನುಷ್ಯ ಪ್ರಯತ್ನಕ್ಕೆ ಮಿರಿದವೇನಲ್ಲ. ಈ ದೇಶದಲ್ಲಿ ಸೈರೆ ಬೆಳೆಯಲು ಬೇಕಾದ ಮಳೆ ಸಕಾಲಕ್ಕೆ ಬಾರದೆ ಎಷ್ಟೋ ಅನರ್ಥವುಂಟು. ಆದರೆ ಪ್ರಕೃತಿ ಹೊಳೆಗಳ ಕೂಡಲಲ್ಲಿ ಬೇಕಾದಷ್ಟು ನೀರನ್ನು ಒದಗಿಸಿದೆ. ಈ ಹೊಳೆಗಳಿಗೆ ಅಣಕಟ್ಟುಗಳನ್ನು ಕಟ್ಟಿ, ಕಾಲುವೆಗಳನ್ನು ತೆರುವಿ ನೀರು ಹಾಯಿಸಿಕೊಂಡು ಬೆಳೆಯನ್ನು ಬೆಳೆದರೆ ಆಹಾರಕ್ಕೆ ಎಲ್ಲಿಯ ಅಭಾವ? ಈ ವಿಷಯದಲ್ಲಿ ಯೂರೋ ಕಾಲ ಮುಖ್ಯತೆ ಕೊಡುವರೊ ಅಂಧವರನ್ನು ಜುನಾಯಿಸುವುದು ರೈತನ ಕರ್ತವ್ಯ. ಇಲ್ಲಿಗೆ ರೈತನ ಅಭಿವೃದ್ಧಿಯಲ್ಲಿ ಒಂದು ಘಟ್ಟ.

(ಜೇತನಾ.)

ಆರ್ಥಿಕ ವಿಚಾರ.

ಇವೆಲ್ಲಕ್ಕೂ ಹೆಚ್ಚಿನದಾದ ಕರ್ತವ್ಯ ಒಂದುಂಟು. ಅದು ದುಡಿಮೆಯ ಜ್ಞಾನ. ರೈತರಿಲ್ಲಿಗೂ ಒಂದೇ ದುಡಿಮೆ. ಅದು ವ್ಯವಸಾಯದ ಪುರೋಭಿವೃದ್ಧಿಯೇ ರೈತನ ಏಳಿಗೆಗೆ ಸಹಾಯಕ. ವ್ಯವಸಾಯ ಜೋಗಿರಬೇಕು, ವ್ಯವಸಾಯದಲ್ಲಿ ತಿಳಿದಿರುವ ಜ್ಞಾನವೇನೂ ಅಲ್ಪವು ಯಾವ ರೀತಿ ಪುನರ್ವ್ಯವಸ್ಥಿಸಬೇಕು, ಹೇಗೆ ವ್ಯವಸ್ಥೆಯಾದ ವ್ಯವಸಾಯದಿಂದ ರೈತನ ಏಳಿಗೆ ಎಷ್ಟರ ಮಟ್ಟಿಗೆ ಆಗುವುದು ಎಂಬ ವಿಚಾರವನ್ನು ತಿಳಿದ ಬೇಕು.

ಇಂದು ರೈತ ಅತಿ ಸುಖ ವಿಚಾರವನ್ನು ಒಗೆತಲೆಯಲ್ಲಿಟ್ಟುಕೊಂಡಿದ್ದಾನೆ. ಸ್ವಾತಂತ್ರ್ಯ ರೈತನಿಗೆ ಅನ್ವಯವಿಲ್ಲದ ದೇಶ ಯಾವುದಿಲ್ಲ. ನನ್ನ ದೇಶದಂತೆ ಮೃತಪ್ರಭುವು ಅನ್ಯದೇಶಕ್ಕೆ ಆಹಾರವನ್ನಾಗಿ ಪೂರೈಸಿ ಆದಾಯದ ಮುಕ್ಕಾಲು ಭಾಗವನ್ನು ಪರದೇಶಕ್ಕೆ ಕಳಿಸಿಕೊಡಬೇಕಾಗಿಲ್ಲ. ಹೀಗೆ ಸ್ವಾಧೀನವಾಗುವ ಹಣವನ್ನು ದೇಶದಲ್ಲಿ ಸದುಪಯೋಗವನ್ನಾದರೆ ಎಷ್ಟೋ ಅನುಕೂಲ. ಈ ಅನರ್ಥವನ್ನು ತಪ್ಪಿಸುವುದಕ್ಕೋಸ್ಕರ ನಮ್ಮ ದೇಶದ ಚುಕಾನ ಸರಕಾರ ಈ ನಾಲ್ಕು ವರ್ಷಗಳಿಂದಲೂ ಶತ ಪ್ರಯತ್ನಪಟ್ಟರೂ ಆಹಾರದಲ್ಲಿ ಸ್ವಯಂ ಪರಿಪೂರ್ಣತೆಯನ್ನು ತೆಗೆಯಲಾಗಿಲ್ಲ. ಸರಕಾರದವರು ಆಗಲೆ ಅಂಕಣಿಸಿದ್ದರೂ ಗಳನ್ನು ಈ ನಾಲ್ಕು ವರ್ಷಗಳಲ್ಲಿ ಆಹಾರಾಭಿವೃದ್ಧಿಗೆ ಖರ್ಚು ಮಾಡಿದ್ದಾರೆ. ಈ ಹಣವೆಲ್ಲಾ ಮನುಷ್ಯನ ಪ್ರಯೋಜನವಾಗಿದೆಯೇ ಹೊರತು ಯಾವ ಪ್ರಯೋಜನವೂ ಆಗಿಲ್ಲ. ಆದುದರಿಂದ ಇಂಥ ಅನ್ಯಾಯಗಳು ಇಂದಿನ ಪ್ರಜಾಪ್ರಭುತ್ವ ಆಗಲೆ ಬೆಳೆಯುವುದನ್ನು ಮುಂದೆ ತಪ್ಪಿಸಿಕೊಂಡು ಸರಿಯಾದ ಮಾರ್ಗದಲ್ಲಿ ಯಾವ ಬಂದನ್ನು ತಿಳಿದು ಅಂಥ ಮಾರ್ಗದಲ್ಲಿ ಹೋಗಬೇಕು. ಈ ಕಾರ್ಯವನ್ನು ಮುಂದಿನ ಚುನಾವಣೆಯಲ್ಲಿ ನಡೆಸಲಹುದು.

ಸಮಾಜದ ನಿರ್ಮಾಣೀಕರಣ.

ಸಮಾಜದ 'ಕೊಚ್ಚೆ' ಒಂದು ರೀತಿಯಲ್ಲಾ ಅದು ರಾಜಕೀಯದಲ್ಲಾದ ಕಾಲಿಡಬಲ್ಲದು ಹೇಗೆಂದರೆ ವ್ಯಾಪಾರಿಗಾರನು ಹೇಗೆ ತಮ್ಮ ಲಾಭಕ್ಕಾಗಿ ಜೇನಿನಂತೆ ರೋ ಹಾಗೆ ರಾಜಕೀಯದಲ್ಲಿಯೂ ಸ್ವಪ್ರಯೋಜನಕ್ಕಾಗಿ ಚಿಂತಿಸುವರು. ಹೀಗೆ ಚಿಂತಿಸುವವರಿಂದ ನಾನಾ ಅನಿಷ್ಟಗಳು. ಕೆಲವರು ತಮ್ಮ ಹೊಟ್ಟೆಪಾಡಿಗಾಗಿ, ಹಲವರು ಗ್ರಾಮ್ಯ ಸಂಪ್ರದಾಯಕ್ಕಾಗಿ, ಇನ್ನು ಕೆಲವರು ಅಧಿಕಾರಲಾಲಸೆಯಿಂದ ರಾಜಕೀಯ ರಂಗಕ್ಕೆ ಇಳಿಯುವುದುಂಟು. ಈ ಸ್ವಾರ್ಥಿಗಳಿಂದ ಬರುವ ರೋಗ ಬಹಳ ಕೆಟ್ಟದ್ದು. ಇಂಥ ರಾಜಕೀಯ 'ಕೊಚ್ಚೆ'ಗಳನ್ನು ಬಹಳ ಜಾಗರೂಕತೆಯಿಂದ ನಿವಾರಿಸಬೇಕು ಈ ಸ್ವಾರ್ಥಿಗಳು ತಮ್ಮ ಸ್ವಾರ್ಥಸಾಧನೆಗೆ ಯಾವ ಮಾರ್ಗವನ್ನಾದರೂ ಹಿಡಿಯಬಲ್ಲರು. ಇಂಥವರಿಂದಲೇ ಸಮಾಜದ ಕೊಚ್ಚೆ ಉಬ್ಬಿಸುವುದು.

ಈ ರಾಜಕೀಯ 'ಕೊಚ್ಚೆ'ಯನ್ನು ನಿವಾರಿಸುವುದೇ ಓಟುದಾರರ ಮುಖ್ಯ ಕರ್ತವ್ಯ. ಇಂದಿರಿ ಪ್ರಮಾಣಿಕರನ್ನು, ವಿಜ್ಞಾನಿಗಳನ್ನು ದೂರದರ್ಶಿಗಳನ್ನು ಆರಿಸಲಶಕ್ಯವಲ್ಲ.

ಇಷ್ಟು ಮಾತ್ರದಿಂದಲೇ ದೇಶದಲ್ಲಿ ಶಾಂತಿ ಲಭಿಸಲಾರದು. ಪ್ರಕೃತಿಯು ಅಥವಾ ದೈವವು ಮಾನವನಿಗೆ ಅಕಾಂತಿಗೆ ಕಾರಣವಾದ ರೋಗಾದಿಗಳನ್ನು ತಂದೊಡ್ಡುವುದು ಇಂಥ ರೋಗಾದಿಗಳ ಫಲಾರಣೋಪಾಯಗಳನ್ನು ತಿಳಿದುಕೊಳ್ಳುವುದು ಮತ್ತು ಬೇಕಾಗುವ ಸಲಕರಣೆಗಳನ್ನು ಒದಗಿಸಿಕೊಳ್ಳುವುದಕ್ಕೆ ತಕ್ಕ ವಿದ್ಯಾಗುಣ ಮಾಡಿಕೊಳ್ಳಬೇಕು. ಇದು ನಾವೂ ಹಿಂದೆ ತಿಳಿಸಿದಂತೆ ಮಳೆಯಿಂದ ರಾಜಕೀಯದಲ್ಲಿ ಹೆಚ್ಚಿನ ವ್ಯಾಮುಖ್ಯತೆಯುಂಟು. ರೈತರು ಈ ಕಡೆ ಹೆಚ್ಚು ಗಮನ ಕೊಡಬೇಕು. ತಮ್ಮ ಕನುಬೇ ಪ್ರಕೃತಿಯೊಂದಿಗೆ ಹೊಡೆದಾಡುವ ತೆಲಸವಾಗಿದೆ. ಮತ್ತು ರೈತನು ದಿನದಲ್ಲಿ ಬಹಳ ಕಾಲ ತನ್ನ ಕಾಲವನ್ನು ಹೊರಗಡೆ ಹಳ್ಳಿ ಬಿಸಿಲು ಮುಂತಾದುವುಗಳಲ್ಲಿ ಕಳೆಯುವುದರಿಂದ ಅವನು ರೋಗಗಳಿಗೆ ಹೆಚ್ಚಾಗಿ ಈಡಾಗುವನು. ಈ ರೋಗಗಳನ್ನು ಕಾಲದಲ್ಲಿ ನಿವಾರಿಸಿಕೊಳ್ಳದಿದ್ದರೆ, ಹೆಚ್ಚಿನ ಕಷ್ಟಕ್ಕೆ ಈಡಾಗಬೇಕಾಗುವುದು. ಆದುದರಿಂದ ಗ್ರಾಮ್ಯ ಸ್ವೈರ್ಯ ಮುಂತಾದ ವಿಷಯಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡುವ ಜನರನ್ನು ಆರಿಸಬೇಕು.

ವೀರಾಜಪೇಟೆ ಕೊಡವ ಸಮಾಜ.

ತಾ|| ೩೦-೯-೫೧ರಲ್ಲಿ ವೀರಾಜಪೇಟೆ ಕೊಡವ ಸಮಾಜದ ವಾರ್ಷಿಕ ಸಭೆ ಮುನಿಸಿಪಲ್ ಹಾಲಿನಲ್ಲಿ ನಡೆಯಿತು. ಸಮಾಜದ ಪ್ರಸಿಡೆಂಟರೂ ಆದ ಶ್ರೀ ಕೋದಾಂಡ ನಂಜಪ್ಪನವರು ಅಧ್ಯಕ್ಷರಾಗಿದ್ದರು. ಸಭ್ರಿ ದಿನ ಮಳೆಯಾದ್ದರಿಂದ ಆಟ ಓಟಗಳ ವಿವರಣೆನ್ನು ಸಂಬಂಧಿಸಿದವರಿಗೆ ತಿಳಿಸಲಾಗಿದೆ ಎಂಬುದನ್ನು ನಿವೇದಿಸಿದರು. ಪ್ರಾರ್ಥನೆಯಾದ ತರುವಾಯ ಕೆಲವರು ಭಾಷಣ ಮಾಡಿದರು. ಕಾರ್ಯಕಾರಿ ಮಂಡಳಿಯ ನೇಮಕವಾದ ನಂತರ ತರಾವುಗಳು ಚರ್ಚೆಯಾದಲ್ಲಾ ಕೊಡಗಿಗೆ ಮಂತ್ರಿಮಂಡಲ ಕೊಟ್ಟಿರುವ ಸ್ಥಳೀಯ ಸಂಸ್ಥೆಯ ಹಾಗು ಇಂಡಿಯಾ ಸರಕಾರವನ್ನು ವಂದಿಸುವಂತೆಯೂ, ಇಂಟರ್‌ನಲ್ ಸೆಟ್ಲ್‌ಮೆಂಟ್ ಕಂಟ್ರೋಲ್ ಮತ್ತು ರೇಶನ್ ಪದ್ಧತಿಯನ್ನು ತೆಗೆಯಾ ಮಾಡಬೇಕೆಂದು ಸ್ಥಳೀಯ ಸರಕಾರವನ್ನು ಕೇಳಿಕೊಳ್ಳುವಂತೆಯೂ, ಕೊಡಗಿನಲ್ಲಿ ಬತ್ತದ ಕೃಷಿಯು ಈಗಿನ ಪರಿಸ್ಥಿತಿಗಳಿಗೆ ಸರಿಯಾಗಿ ಗಾಡಿಗೆ ೨೫೫-೦-೦ ರೂಪಾಯಿ ಮಾಡಬೇಕೆಂದು ಸ್ಥಳೀಯ ಹಾಗು ಇಂಡಿಯಾ ಸರಕಾರವನ್ನು ಕೇಳಿಕೊಳ್ಳುವಂತೆಯೂ, ಕೊಡಗಿಗೆ ಚೀಫ್ ಕಮಿಷನರನ ಇತ್ತೀಚೆಗೆ ಹೊರಡಿಸಿರುವ ಸೆಲೆಕ್ಷನ್ ಉದ್ಯೋಗವನ್ನು ವಜಾ ಮಾಡಿ ಜನರ ಸರ್ವಿಸ್ ಮತ್ತು ಯೋಗ್ಯತೆ ಮೇರೆ ಉದ್ಯೋಗ ಕೊಡುವಂತೆ ಸ್ಥಳೀಯ ಸರಕಾರವನ್ನು ಕೇಳಿಕೊಳ್ಳುವಂತೆಯೂ, ಕೊಡಗಿಗೆ ವಿದ್ಯುಚ್ಛಕ್ತಿ ಬೆಳಕು ಬರುವಂತೆ ಏರ್ಪಾಡು ಒಡನೆ ಮಾಡಬೇಕಾಗಿ ಸ್ಥಳೀಯ ಸರಕಾರವನ್ನು ಕೇಳಿಕೊಳ್ಳುವಂತೆಯೂ ಈ ಸಭೆಯು ಸರ್ವ ಸಮ್ಮತ ದಾಗಿ ತೀರ್ಮಾನಗಳನ್ನು ಪಾಸು ಮಾಡಿತು. ಆಳ್ವಿಕೆ ವೀರಾಜಪೇಟೆ ಮುನ್ಸಿಪಲಿಟಿಯು ಮುನ್ಸಿಪಲಿಟಿ ಅಧಿಕಾರಿಗಳನ್ನು ತೀರಿಕೊಳ್ಳುವಂತೆ ತೀರ್ಮಾನಿಸಲಾಯಿತು. ಈ ಸಮಾಜಕ್ಕೆ ಆಗುವಷ್ಟು ದೇಗಣಿ ಕಟ್ಟಡ ವಿವಾಹಾದಿ ಮಾಡಬೇಕೆಂದು ತೀರ್ಮಾನಿಸಲಾಯಿತು. ಅಧ್ಯಕ್ಷರ ಭಾಷಣವಾದ ನಂತರ ವಂದನಾರ್ಪಣೆಯಿಂದ ಸಭೆಯು ಬರಕಾಸ್ತಾಯಿತು. ಊಟ ಉಪಚಾರವು ನಡೆಯಿತು.

ವಯಸ್ಕರ ಶಿಕ್ಷಣ.

ಕೊಡಗಿನಲ್ಲಿ ವಯಸ್ಕರ ಶಿಕ್ಷಣವನ್ನು ಪ್ರಚಾರ ಮಾಡುವ ಒಂದು ಯೋಜನೆಯನ್ನು ತಯಾರಿಸಿ ಕೇಂದ್ರ ಸರಕಾರಕ್ಕೆ ಕಳುಹಿಸಿದೆ. ಬಂದ ಕೂಡಲೆ ಈ ದೇಶದ ಭಾಷೆಯಲ್ಲಿಯೂ ಅದನ್ನು ಜಾರಿಗೆ ತರಲಾಗುವುದು.

ಈ ಮಧ್ಯೆ ನವಂಬರ್ ೧೫ನೇ ತಾರೀಕಿನಲ್ಲಿ ಇಡೀ ಹಿಂದೂದೇಶದಲ್ಲಿ 'ಸಮಾಜ ಶಿಕ್ಷಣವ ದಿನ'ವನ್ನಾಚರಿಸಲಾಗುವುದು. ಆ ದಿನ ಕೆಲವು ಸ್ಥಳಗಳಲ್ಲಿ ವಯಸ್ಕರ ಶಿಕ್ಷಣದ ಪ್ರಚಾರ ಕಾರ್ಯವನ್ನು ಕೈಕೊಳ್ಳಲಾಗುವುದು.

ವಯಸ್ಕರ ಶಿಕ್ಷಣದ ಆವಶ್ಯಕತೆಯು ವಿಷಯದಲ್ಲಿ ಯಾವ ದೇಶದಲ್ಲಿಯೂ ಭಿನ್ನಾಭಿಪ್ರಾಯವಿಲ್ಲ. ಸಮಾಜದ ಏಳಿಗೆಗೆ ಆರ್ಥಿಕ ಮತ್ತು ಸಾಮಾಜಿಕ ಉನ್ನತಿಗೆ ಕಳಹಿಯಿಂಗಿರುವುದು ಶಿಕ್ಷಣಹೊಂದಿದ ತಿಳಿವಳಿಕೆಯುಳ್ಳ ಜನತೆ. ದಿನ ದಿನಕ್ಕೂ ದೆಳೆಯುತ್ತಿರುವ ನಾನಾಮುಖವಾದ ದೃಷ್ಟಿಯ ಜ್ಞಾನವನ್ನು ಮೆತ್ತೊಬ್ಬರಿಂದ ತಿಳಿಯುವುದು ಅಸಾಧ್ಯವಾದ ಕೆಲಸ. ಆದ್ದರಿಂದ ಪ್ರತಿಯೊಬ್ಬನೂ ವಿದ್ಯಾವಂತನಾದರೆ ತನ್ನ ಮತ್ತು ಸಮಾಜದ ಉನ್ನತಿಗೆ ಬೇಕಾದ ಜ್ಞಾನವನ್ನು ಪುಸ್ತಕಗಳನ್ನು ಮತ್ತು ಪತ್ರಿಕೆಗಳನ್ನು ಓದುವುದರ ಮೂಲಕಾಂತರ ಪಡೆಯಬಹುದಾಗಿದೆ.

ನಿರಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡುವ ಈ ದೊಡ್ಡ ಕಾರ್ಯವನ್ನು ಸರಕಾರ ಕೈಕೊಂಡರೂ ದೇಶದ ಸುಧಾರಕರು, ವಿದ್ಯಾಭಿಮಾನಿಗಳ ಮತ್ತು ಅನೇಕ ಸಂಸ್ಥೆಗಳ ಸಹಾಯ ಮತ್ತು ಸಹಾನುಭೂತಿ ಇಲ್ಲದಿದ್ದರೆ ಈ ಕಾರ್ಯವು ಯಶಸ್ವಿಯಾಗಲಾರದು.

ಇಂದು ನಮ್ಮ ದೇಶದಲ್ಲಿ ನೂಡಲಿರುವ ರಚನಾತ್ಮಕ ಕೆಲಸಗಳಲ್ಲಿ ಓದುಬರಹ ಬಾರದವರಿಗೆ ವಿದ್ಯಾದಾನ ಮಾಡುವು ದೊಂದು ಪವಿತ್ರವಾದ ಕೆಲಸವಾಗಿದೆ.

ಆದ್ದರಿಂದ ಪ್ರತಿ ವಿದ್ಯಾವಂತರೂ ತಮ್ಮ ಬಿಡುವಿನಮಯದಲ್ಲಿ ವಿದ್ಯೆ ಇಲ್ಲದವರಿಗೆ ವಿದ್ಯಾದಾನ ನೂಡಬೇಕೆಂದೂ, ಕೊಡಗು ದೇಶದ ಎಲ್ಲಾ ವಂತಾಧಿಪತಿಗಳು ಈ ಕಡೆ ಗಮನಕೊಟ್ಟು ಹಲವರಿಗಾದರೂ ರಾತ್ರಿ ಶಾಲೆಗಳನ್ನೇರ್ಪಡಿಸಿ ವಿದ್ಯೆ ಕಲಿಸುವ ಏರ್ಪಾಡು ಮಾಡುವಂತೆಯೂ, ಕೋಟಗಳ ಮತ್ತು ಕಾರ್ಖಾನೆಯ ಮಾಲೀಕರು ತಮ್ಮ ಕೈಕೆಳಗಿರುವ ವಿದ್ಯೆ ಇಲ್ಲದ ಮಜೂರರಿಗೆ ವಿದ್ಯೆಕಲಿಸುವ ಹಂಜಿಕೆಯನ್ನೇರ್ಪಡಿಸುವಂತೆಯೂ (ಆಖಿಲಭಾರತದ ಸಮಾಜ ಶಿಕ್ಷಣದ ದಿನಾಚರಣೆಯ) ಸಂಬಂಧವಾಗಿ ಸರ್ವರಿಗೂ ವಿದ್ಯಾ ಇಲಾಖೆಯ ಅಧಿಕಾರಿಗಳು ಮನವಿಮಾಡಿಕೊಂಡಿದ್ದಾರೆ.

ಜಿಲ್ಲಾ ವಿದ್ಯಾಧಿಕಾರಿ.

ಎರಡನೆಯ ಕ್ಷಯರೋಗ ನಿವಾರಣೆಗೆ ಸಮ್ಮಂಧವಾದ ಸೀಲ್ ಮೂರಾಟದ ಯೋಜನೆ

1951ನೇ ಇಸವಿ ಆಕ್ಟೋಬರ್ 2ನೇ ತಾರೀಕಿನಿಂದ 1952ನೇ ಇಸವಿ ಜನವರಿ 26ನೇ ತಾರೀಕಿನ ವರೆಗೆ.

ವಿ ನ ಂ ತಿ.

ಎರಡನೆಯ ಕ್ಷಯರೋಗ ನಿವಾರಣೆ ನಮ್ಮಂಧವಾಗಿ ಸೀಲು ಮೂರುವ ಯೋಜನೆಯು ಮಹಾತ್ಮ ಗಾಂಧೀಜಿಯವರ ಜನ್ಮದಿನವಾದ 2ನೇ ಆಕ್ಟೋಬರ್ 1951ರಲ್ಲಿ ಪ್ರಾರಂಭಿಸಲಾಗಿದೆ. ಕೇಂದ್ರ ಸಂಸ್ಥೆಯವರು ಕೊಡಗಿನ ಎಲ್ಲಾ ಜನರಿಗೆ ಮೂರಾಟ ನೂಡಲು 1,76,000 ಸೀಲುಗಳನ್ನು ಈ ವರ್ಷ ತಯಾರಿಸಿಕೊಟ್ಟಿರುವರು.

ಪ್ರತಿಯೊಬ್ಬನೂ ಒಂದಾಣೆ ಕೊಟ್ಟು ಐದೊಂದು ಸೀಲುಗಳನ್ನು ಕೊಂಡುಕೊಳ್ಳುವುದರಿಂದ ಕೊಡಗಿನಲ್ಲಿ ಕ್ಷಯರೋಗ ನಿವಾರಣೆಗಾಗಿ ಎಷ್ಟು ಸಹಾಯವಾಗುತ್ತದೆಂಬದನ್ನು ನಾನು ಹೇಳುವುದು ಅನಾವಶ್ಯ.

ಗತ ವರ್ಷದಲ್ಲಿ ಸೀಲು ಮೂರಾಟದಿಂದ ರೂ. 7,050/- ಸಿಕ್ಕಿದೆ. ಇದರಿಂದ ರೂ. 6,000/-ವನ್ನು ಕೇಂದ್ರ ಸಭೆಯವರು ನಮಗೆ ಕೊಟ್ಟಿರುತ್ತಾರೆ. ಈ ಹಣದಿಂದ ಮತ್ತು ನಮ್ಮ ಸರಕಾರವು ಕೊಡುವ ರೂ. 4,000/-ದಿಂದ ಮಡಿಕೇರಿಯಲ್ಲಿ ಕ್ಷಯರೋಗಿಗಳ ವಸತಿಗಾಗಿ ಒಂದು ಆಸ್ಪತ್ರೆಯು ಕಟ್ಟಲ್ಪಡುವುದು. ಕೀಳ್ಪದಲ್ಲಿಯೇ ಒಬ್ಬ ಕ್ಷಯರೋಗದ ವಿಷಯದಲ್ಲಿ ಹೆಚ್ಚಿನ ಪ್ರವೀಣತೆಯುಸ್ಸನ್ನು ಹೊಂದಿದ ನೈಪುಣ್ಯನನ್ನು ನಮ್ಮ ಸರಕಾರವು ನೇಮಿಸುವುದು. ಈ ವಿಷಯದಲ್ಲಿ ನಾವು ಸಮಾಯ ಮಾಡಬೇಕಾಗಿ ನಾನು ಸ್ಥಳೀಯ ಸಂಸ್ಥೆಯ ಸಭಾಗಿ ನಿಮ್ಮನ್ನು ಕೇಳಿಕೊಳ್ಳುತ್ತೇನೆ. ನೀವು ಸೀಲುಗಳನ್ನು ಕೊಂಡುಕೊಳ್ಳುವುದಂಬಲೂ ಮತ್ತು ನಿಮ್ಮ ಸ್ನೇಹಿತರುಕೊಂಡುಕೊಳ್ಳುವಂತೆ ಮಾಡುವುದೆಂಬಲೂ ಈ ಸಹಾಯ ದೊರಕುತ್ತದೆ.

ಕಳೆದ ವರ್ಷ ಕೊಡಗಿನಲ್ಲಿ ಸುಮಾರು 300 ಕ್ಷಯ ರೋಗಿಗಳು ಇವ್ವರೆಂದು ಅವರ ಕಫದ ಪರೀಕ್ಷೆಯಿಂದ ತಿಳಿದು ಬಂದಿದೆ. ಮೇಲೆ ಹೇಳಿದ ಪ್ರಕಾರ ಕ್ಷಯರೋಗ ಕಂಡುಬಂದ ಪ್ರತಿಯೊಬ್ಬ ಕ್ಷಯರೋಗಿಯು ಕಡಿಮೆ ಪಕ್ಷ ಬೇರೆ ಐದು ಜನರಿಗೆ ತನ್ನ ರೋಗವನ್ನು ಕೊಡುತ್ತಾನೆಂದು ಸಿದ್ಧಾಂತವಾಗಿದೆ. ಈ ಪ್ರಕಾರ ಕೊಡಗಿನಲ್ಲಿ ಸಾಧಾರಣ 1,500 ಕ್ಷಯ ರೋಗಿಗಳಿರಬಹುದು. ಈ ಕ್ಷಯರೋಗಿಗಳಿಗೆ ಔಷಧೋಪಚಾರ ಮಾಡಲು ತಕ್ಕ ಆಸ್ಪತ್ರೆಗಳು ಮತ್ತು ಇನ್ನಿತರ ಸಾಧನಗಳು ಬೇಕಾಗಿವೆ. ಇವಕ್ಕೆಲ್ಲಾ ತುಂಬಾ ಹಣವು ಅವಶ್ಯ. ಆವ್ದರಿಂದ ನಮ್ಮ ದೇಶದಿಂದ ಕ್ಷಯರೋಗವನ್ನು ನಿರ್ಮೂಲಗೊಳಿಸಲು ಕೈಕೊಂಡಿರುವ ಯೋಜನೆಗಳಿಗೆ ಸಹಾಯ ಮಾಡುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ಇದಕ್ಕಾಗಿ ಕೇಂದ್ರ ಸಂಸ್ಥೆಯವರು ಕ್ಷಯರೋಗ ನಮ್ಮೂಧನಾವ ಸೀಲು ಮೂರಾಟ ಮೂಡುವ ಯೋಜನೆಯನ್ನು ಕೈಕೊಂಡಿರುವರು. ಕ್ಷಯರೋಗವು ನಮ್ಮ ದೇಶದಲ್ಲಿ ಎಷ್ಟರ ಮಟ್ಟಿಗೆ ಬೇರೂರಿಕೊಂಡಿದೆ ಏಂಬುವುದನ್ನು ಮತ್ತು ಅದನ್ನು ಬೇಗನೆ ನಿವಾರಿಸುವುದು ಅವಶ್ಯವೆಂಬುವುದನ್ನು ಸರ್ವರಿಗೆ ತಿಳಿಯುವಂತೆ ಮಾಡುವುದೇ ಈ ಯೋಜನೆಯ ಮುಖ್ಯ ಉದ್ದೇಶ. ಕ್ಷಯರೋಗದ ವಿಷಯದಲ್ಲಿ ನಮ್ಮ ದೇಶದ ಪರಿಸ್ಥಿತಿಯು ಭಯಾನಕವಾಗಿದೆ. ಈ ರೋಗವು ಇಂಡಿಯಾದೇಶದ ಐದು ಲಕ್ಷ ಜನರನ್ನು ವರ್ಷಂಪ್ರತಿ ಬಲಿತೆಗೆದುಕೊಳ್ಳುವುದೆಲ್ಲದೆ ಸಾಧಾರಣ 25 ಲಕ್ಷ ಜನರಿಗೆ ಅಂಟುವುದೆಂದು ತಿಳಿದುಬಂದಿದೆ. ಈ ಯೋಜನೆಯು ಕ್ಷಯರೋಗದ ಭಾವಪೆಯನ್ನು ಸರ್ವರಿಗೂ ತಿಳಿಯುವಂತೆ ಮಾಡುವುದಲ್ಲದೆ ಎಲ್ಲರೂ, ಇದನ್ನು ನಿವಾರಿಸಲು ಕೈಕೊಂಡಿರುವ ಸಂಸ್ಥೆಗಳಿಗೆ ಒಮ್ಮನಸ್ಸಿನಿಂದ ಸಹಾಯ ಮಾಡುವುದಕ್ಕೆ ಸಂದರ್ಭವನ್ನೊದಗಿಸಿಕೊಡುತ್ತದೆ.

ಕ್ಷಯರೋಗದಿಂದ ನರಳುತ್ತಿರುವ ನಮ್ಮ ಅಣ್ಣತಮ್ಮಂದಿಯರ ಆರ್ತ ಧ್ವನಿಯನ್ನು ನಾವು ಮರೆಯುವುದು ಬೇಡ. ಇವರನ್ನು ಈ ರೋಗದಿಂದ ಬಿಡುಗಡೆ ಮಾಡಲು ಸಹಾಯವು ಅವಶ್ಯ. ಈ ರೋಗವು ಅಕಸ್ಮಾತ್ತಾಗಿ ತಗಲುತ್ತದೆ. ಇದನ್ನು ಸುಲಭ ರೀತಿಯಿಂದ ನಿವಾರಿಸಿಕೊಳ್ಳಲು ಸಾಧ್ಯವಿಲ್ಲ. ಅನನೊಬ್ಬನೇ ಸಂಪಾದನೆಗಾರನಾಪತೆ ಅವನ ಕುಟುಂಬವೂ ಕೂಡ ಕಷ್ಟಕ್ಕೊಳಗಾಗುವುದು.

ಕ್ಷಯ ರೋಗವನ್ನು ಬರೇ ವೈದ್ಯರು ಮತ್ತು ಸರ್ಕಾರಗಳು ಇದಿರಿಸಿದರೆ ಸಾಲದು. ಸರ್ವರೂ ಇದನ್ನು ನಿರ್ಮೂಲ ಮಾಡಲು ಸಹಾಯವನ್ನು ನೀಡಬೇಕಾಗಿದೆ. ಈ ಸೀಲು ಮೂರಾಟ ಮಾಡುವ ಯೋಜನೆಯಲ್ಲಿ ಸಹಕಾರವ ತತ್ವವು ಒಳಗೊಂಡಿರುವುದರಿಂದ ಸರ್ವರೂ ಇದರಲ್ಲಿ ಭಾಗವಹಿಸಬಹುದು.

ಕ್ಷಯರೋಗ ನಿವಾರಣೆಗಾಗಿ ಕೆಲಸ ಮಾಡುವವರಿಗೆ ನಮ್ಮ ಸಹಾಯವನ್ನು ಕೊಡುವುದು ನಮ್ಮ ಮುಖ್ಯ ಕರ್ತವ್ಯ. ನಮ್ಮ ದೇಶದ ಪ್ರತಿಯೊಬ್ಬ ಗಂಡಸು ಮತ್ತು ಹೆಂಗಸು ಸೀಲನ್ನು ಕೊಂಡುಕೊಳ್ಳುವುದರಿಂದ ಹೆಚ್ಚಿನ ಸೇವೆಯನ್ನು ಸಲ್ಲಿಸಿದ ಹಾಗಾಗುತ್ತದೆ. ಜನರ ಒಳ್ಳೆಯ ಮನಸು ಮತ್ತು ಸಹಕಾರದಿಂದ ಎಲ್ಲವನ್ನೂ ಸಾಧಿಸಲು ಆಗುತ್ತವೆ. ಈ ವಿಷಯದಲ್ಲಿ ಈ ಕೆಲಸಗೆ ನಮ್ಮೂಸಿರುವ ಸಂದೇಶವನ್ನು ನಮ್ಮ ಚೀಫ್ ಕಮಿಶನರಾದ ಕರ್ನಲ್ ದಯಾಸಿಂಗ್ ಬೇಡಿಯವರು ಕೊಟ್ಟಿರುವರು.

"ಕಳೆದ ವರ್ಷ ಈ ಒಳ್ಳೆಯ ಕಾರ್ಯಕ್ಕೆ ನೀವು ನೂಡಿದ ಸಹಾಯಕ್ಕಾಗಿ ನಾನು ನಿಮಗೆ ತುಂಬಾ ಕೃತಜ್ಞನಾಗಿದ್ದೇನೆ. ಈ ರೋಗದಿಂದ ಪ್ರತಿ ವರ್ಷವೂ ತುಂಬಾ ಜನರು ಸಾಯುತ್ತಾರೆಂದೂ ಮತ್ತು ಅವರಿಂದ ಎಷ್ಟೋ ಮನೆಗಳು ನಿಷ್ಪ್ರಯೋಜಕವೂ ಸಹಾಯಶೂನ್ಯವೂ ಆಗುತ್ತದೆಂಬುದು ನೀವೆಲ್ಲಾ ತಿಳಿದ ಸಂಗತಿಯಾಗಿದೆ. ಆದ್ದರಿಂದ ಅದನ್ನು ಇದಿರಿಸಿ ನಮ್ಮ ಸಮಾಜದಿಂದ ಆವನ್ನು ನಿರ್ಮೂಲ ಮಾಡುವುದು ನಮ್ಮ ಕರ್ತವ್ಯವಾಗಿದೆ. ಕೊಡಗಿನಲ್ಲಿ ಈ ರೋಗವನ್ನು ನಿರ್ಮೂಲ ಮಾಡಲು ನೀವೆಲ್ಲರೂ ಉದಾರ ಮನಸಿನಿಂದ ತುಂಬಾ ಧನ ಸಹಾಯ ಮಾಡಿ ನಿಮ್ಮ ಸಹಾಯವನ್ನು ನೀಡುವಿರೆಂದು ನಾನುನಂಬಿದ್ದೇನೆ.

ಟಿ. ಬಿ. ಮೇದಪ್ಪ,
ಸಿವಿಲ್ ಸರ್ಜನ್ ಮತ್ತು ಕಾರ್ಯದರ್ಶಿ ಸ್ಥಳೀಯ ಸಂಸ್ಥೆ.

ಕೊ ಡ ಗು

ತಾ. ೨೬-೧೦-೧೯೪೧ನೇ ಶುಕ್ರವಾರ

ಪಾಕಿಸ್ಥಾನದ ನಷ್ಟ.

ಅಕಾರ ಮುಖ

ರಾವಲ್ಪಿಂಡಿಯಲ್ಲಿ ಸಾರ್ವಜನಿಕ ಸಭೆಯೊಂದರಲ್ಲಿ ಭಾಷಣ ಮಾಡುತ್ತಿದ್ದ ಪಾಕಿಸ್ಥಾನದ ಪ್ರಧಾನ ಮಂತ್ರಿ ಲಿಯಾಖತ್ ಅಲಿಖಾನರು ಕೊಲೆಗಡುಕನೊಬ್ಬನ ಗುಂಡಿಗೆ ತುತ್ತಾದರೆಂಬ ಹೃದಯವಿದ್ರಾವಕ ವಾರ್ತೆಯನ್ನು ವಿಷಾದದಿಂದ ಬರೆಯಬೇಕಾಗಿದೆ. ಪ್ರಮ್ಯ ನೇರೋಜ್ಯವಾದ ಪಾಕಿಸ್ಥಾನಕ್ಕೊದಗಿದ ಈ ದುರಂತದ ದಟಿಯಲ್ಲಿ ನಾವೂ ಪಾಲುಗಾರರು. ಲಿಯಾಖತರು ನಿಷ್ಪಾಕ್ಷಪಾತ ನೇತೃತ್ವದಿಂದ ಪಾಕಿಸ್ಥಾನವನ್ನು ಕಟ್ಟಿ ಬಲವಾದ ತಳಹದಿಯಲ್ಲಿ ನಿಲ್ಲಿಸಿದವರು. ರಾಜಕೀಯ ವೃಷ್ಟಿಯಲ್ಲಿ ಭಿನ್ನಭಾವಗಳಿದ್ದರೂ ವ್ಯಕ್ತಿಗತವಾಗಿ ಸೌಮ್ಯರೂ, ಗುಣಶಾಲಿಗಳೂ ಆಗಿದ್ದರು. ಅವರು ಸ್ವಾತಂತ್ರ್ಯ ದೊರೆಯುವ ಮೊದಲು ಕೊಡಗಿಗೂ ಬಂದಿದ್ದು ಮಡಿಕೇರಿ ಮತ್ತು ವೀರಾಜಪೇಟೆಗಳಲ್ಲಿ ಎರಡು ಭಾಷಣ ಮಾಡಿದ್ದರು. ಪಾಕಿಸ್ಥಾನದ ಆಂತರಿಕ ಆಡಳಿತದಲ್ಲಿ ಅವ್ಯವಸ್ಥೆಯೂ, ಅಶಾಂತಿಯೂ ಅಲ್ಲಲ್ಲಿ ತೋರಿ ಬಂದಿದ್ದರೂ, ಪಾಕಿಸ್ಥಾನದ ನಿಲುಮೆಯು ಹೆಲವು ವಿಚಾರಗಳಲ್ಲಿ ಭಾರತಕ್ಕೆ ಬದ್ಧ ವಿರುದ್ಧವಾಗಿದ್ದರೂ ಪಂಡಿತ ಜವಾಹರರು ಹೇಳಿದಂತೆ ಲಿಯಾಖತರು ಪಾಕಿಸ್ಥಾನದ ಉಗ್ರವಾದಿಗಳ ಕೈಮೇಲಾಗದಂತೆ ತಮ್ಮ ಸೌಮ್ಯ ಪ್ರಭಾವವನ್ನು ಬೀರಿದ್ದರು. ಅವರ ಈ ಅವಮಾನುಷ ಕೊಲೆಯು ಖಂಡನಾರ್ಹವಾದ್ದು.

ದುಷ್ಟ ಪರಂಪರೆ.

ಮುಸ್ಲಿಂ ಜಗತ್ತಿನಲ್ಲಿ ಈ ಕೊಲೆಗಡುಕ ಪ್ರವೃತ್ತಿಯು ಇಂದು ನಿನ್ನೆಯದಲ್ಲ. ರಾಜಕೀಯ ನ್ಯಾಯವನ್ನು ಕೊಲೆಯ ಸಹಾಯದಿಂದ ನಿರ್ಣಯಿಸಲೆತ್ನಿಸಿದ ದುಷ್ಟ ಪರಂಪರೆಯು ಮುಸ್ಲಿಂ ಜಗತ್ತಿನಲ್ಲಿ ಹೆಚ್ಚಾಗಿದೆ. ಖಾರ್ಜಿನಿನ ರಾಜ ಅಬ್ದುಲ್ಲಾರ ಕೊಲೆ, ಈರಾಣದ ಮುಖ್ಯ ಮಂತ್ರಿ ಅಲಿರಾಜ್ಮಾರಾರ ಕೊಲೆ, ಈಜಿಪ್ತಿನ ಮಂತ್ರಿಗಳ ಕೊಲೆ ಹೀಗೆ ಅನೇಕ ರಾಜಕೀಯ ಕೊಲೆಗಳ ನಿದರ್ಶನಗಳನ್ನು ಕೊಡಬಹುದು. ಈ ಪ್ರವೃತ್ತಿ ಇಂದಿನ ಜಗತ್ತಿನಲ್ಲಿ ಹೆಚ್ಚುತ್ತಿದೆ. ಬಾಲ್ಕಾದ ಮಂತ್ರಿ ಮಂಡಳದ ಸಮೂಹ ಕೊಲೆ, ಥರತಖಂಡದ ಭಾಗ್ಯವಿಧಾತ ಬಾಲ್ಕುವಿನ ದುರಂತ ಹತ್ಯೆ ಇವು ಕಣ್ಣಿಗೆ ಕಟ್ಟುದಂತಿವೆ. ಬಹುಮಟ್ಟಿಗೆ ಮಿಂಚುಹರಿದಿರುವೆ ಎಂದೂ, ಸುಸಂಸ್ಕೃತನೆಂದೂ ಹೇಳಿಕೊಳ್ಳುವ ನಾಗರಿಕ ಮಾನವನು ಈ ಹಿಂಸಾ ಮಾರ್ಗವನ್ನು ಇಂದೂ ಅನುಸರಿಸುತ್ತಿರುವುದು ನಾಚಿಕೆಗೇಡಿನದು.

ಪರಿಹಾರ ಮಾರ್ಗವಲ್ಲ.

'ಕತ್ತಿಯನ್ನೆತ್ತುವವನು ಕತ್ತಿಯಿಂದಲೇ ಹತನಾಗುವನು' ಎಂಬ ನಾಣ್ನುಡಿ ಈ ಸಂದರ್ಭದಲ್ಲಿ ಫಮನಿಗೆ ಜ್ಞಾಪಕಕ್ಕೆ ಬರುತ್ತದೆ. ಹಿಂಸೆಯು ಮಾನವನಿಗೆ ಹೇಳಿದ ಮಾರ್ಗವಲ್ಲ. ಕೆಲವು ದಿನಗಳ ಹಿಂದೆ ಕಾಶ್ಮೀರ ಸಮಸ್ಯೆಯ ವಿಚಾರದಲ್ಲಿ ಹಿಂದೂಸ್ಥಾನ-ಪಾಕಿಸ್ತಾನಗಳ ಸಂಬಂಧದಲ್ಲಿ ಶಾಂತಿ ನಿರೀಯುದ್ದದ ಮಾತು ಕೇಳಿಬರುತ್ತಿದ್ದಾಗ ಲಿಯಾಖತರು ತಮ್ಮ ಭದ್ರ ಮಾಟ್ಟಿಯನ್ನು ರಾಷ್ಟ್ರೀಯ ಸಂಕೇತವಾಗಿ ಪಾಕಿಸ್ತಾನಿಗಳಿಗೆ ಕೊಟ್ಟರು. ಈ ರೀತಿಯ ಹಿಂಸಾ ಪ್ರಯೋಗನೆಯು ಮಾರ್ಗವೇ ಇಂದಿನ ದುರಂತಕ್ಕೆ ಕಾರಣವೆನ್ನಬಹುದು. ಲಿಯಾಖತರ ಕೊಲೆಗಡುಕನು ಯಾರೇಂಬುದೂ, ಆತನ ಗುರಿ ಏನಿತ್ತೆಂಬುದೂ ಇನ್ನೂ ಸ್ಪಷ್ಟವಾಗಿಲ್ಲವಾದರೂ ಪಾಕಿಸ್ತಾನದಲ್ಲಿ ಎಲ್ಲವೂ ಸುಸೂತ್ರವಾಗಿ ನಡೆಯುತ್ತಿಲ್ಲ ನೆಂಬುದಕ್ಕೆ ಇದು ನಿದರ್ಶನವಾಗಿದೆ. ಹಿಂಸೆ, ಅಟೋಪದ ಪ್ರಚಾರಗಳು ಎಂದೂ ಸಮಸ್ಯೆಗಳ ಪರಿಹಾರ ಮಾರ್ಗಗಳಲ್ಲ. ಲಿಯಾಖತರ ಕೊಲೆಯು ಈ ವಿಚಾರದಲ್ಲಿ ನಿದರ್ಶನವಾಗಿದ್ದು ಇದು ಇತರರಿಗೆ ಮಾರ್ಗದರ್ಶನ ಮಾಡಲಿ.

ಜೀವನ ಮರಣ

ಜೀವನ ಮತ್ತು ಮರಣ ಇವೆರಡೂ ಒಂದೇ ನಾಣ್ಯದ ಎರಡು ಬದಿಗಳು. ಲಿಯಾಖತರು ೨೦ ಸಾವಿರ ಜನರ ಸಭೆಯಲ್ಲಿ ನೂಕನಾಡುತ್ತಿದ್ದಳು ಎಲ್ಲರೂ "ಲಿಯಾಖತ್ ಅಲೀ ಕೀ ಜೈ" ಎಂದು ಕೂಗುತ್ತಿದ್ದರು. ಲಿಯಾಖತರು ಪ್ರತಿಜ್ಞೆಗೆ ಫೆನತೆಗೆ ಅಲ್ಲಿ ಎಣೆ ಇರಲಿಲ್ಲ ಮರುಕ್ಷಣ ಕೊಲೆಗಡುಕನ ಗುಂಡು ಅವರನ್ನು ಆಹುತಿ ತೆಗೆದುಕೊಂಡಿತು 'ಲಿಯಾಖತ್ ಅಲಿ ಝಿಂದಾಬಾದ್' ಎಂದು ಕೂಗುತ್ತಿದ್ದ ಜನ ಸಮೂಹವು 'ಲಿಯಾಖತರ ಚರಿತಯು ವಾಗಲೀ' ಎಂದು ಕೂಗಬೇಕಾಯಿತು. ಜನುಕಾರದ ಆ ಕೂಗಿಗೂ, ಆರ್ತನಾದದ ಆ ಧ್ವನಿಗೂ ಎಷ್ಟೊಂದು ಸಾಮ್ಯ! ಜೀವನದ ಪ್ರತಿ ಜೆಜ್ಞೆಯಲ್ಲಿಯೂ ಮರಣ ವಿದೆ ಮರಣವು ಸವಿತ್ರವಾದುದು. ಅದರಲ್ಲೂ ದೇಶಕ್ಕಾಗಿ, ಬಹುಜನರ ಹಿತಕ್ಕಾಗಿ ದಹಿಯಾತ್ತಿದ್ದಾಗ ಪೊರೆತ ನುರಾಣವು ಉತ್ಕರ್ಷವಾದುದು ಹಾಗೆಂದಾಗ ಕೊಲೆಗಡುಕನ ಹೀನಕೃತ್ಯವು ಕ್ಷಮ್ಯಾರ್ಹವೆಂದು ಯಾರೂ ಭಾವಿಸದಿರಲಿ. ದೇಶಕ್ಕಾಗಿ ದುಡಿದು ಮರಣನನ್ನಾಲಿಂಗಿಸಿದ ಲಿಯಾಖತರ ಅತ್ಮಶಾಂತಿಗಾಗಿ ಅನನ್ಯತೆಯಿಂದ ನಾವು ಪ್ರಾರ್ಥಿಸುವೆವು. ಅವರ ಆದರ್ಶ ನಿಧನವು ಹಿಂಸಾಪಥದ ಕ್ಷುಲ್ಲತೆಯ ಬಗ್ಗೆ ಇತರರ ಕಣ್ಣನ್ನು ತೆರೆಯಲಿ.

ವರ್ತಮಾನ.

ತಾ. ೧೬-೧೦-೪೧ ರಲ್ಲಿ ಸೋನಾಪೇಟೆಯಲ್ಲಿ ಜನಾಬ್ ಅಬ್ದುಲ್ ಖಾದರ್ ಇವರ ಅಧ್ಯಕ್ಷತೆಯಲ್ಲಿ ಒಂದು ಸಭೆ ಸೇರಿ ಲಿಯಾಖತ್ ಅಲೀಖಾನರ ನಿಧನದ ಬಗ್ಗೆ ಸಂತಾಪ ಸೂಚಿಸಲಾಯಿತು.

ಮೈಸೂರು ದಸರಾ ಹಾಕಿ ಪಂದ್ಯಾವಳಿದಲ್ಲಿ ಮೈಸೂರಿನಲ್ಲಿರುವ ಕೊಡಗರ 'ಕೂರ್ಗ್ ಫ್ರೆಂಡ್ಸ್' ಟೀಮು ಭಾಗವಹಿಸಿ ಕಡೇ ಆಟದಲ್ಲಿ ಮೈಸೂರು ರೈಲ್ವೇ ಟೀಮನ್ನು ಸೋಲಿಸಿ ಕಪ್ಪನ್ನು ಗೆದ್ದರು. ಶ್ರೀ ವಂಡೇಪಂಡ ಬಿ. ಚಂಗಪ್ಪನವರು 'ಕೂರ್ಗ್ ಫ್ರೆಂಡ್ಸ್' ಟೀಮಿನ ಕೆಪ್ಟನರಾಗಿದ್ದರು.

ಶ್ರೀಕಾವೇರಿ ಆಶ್ರಮದಲ್ಲಿ ತಾವೀಕು ತಾ.೧೦-೧೦-೪೧ ರಲ್ಲಿ ಶ್ರೀ. ಕೆ. ಟಿ. ಉತ್ತಪ್ಪನವರ ಅಧ್ಯಕ್ಷತೆಯಲ್ಲಿ ಶ್ರೀಕಾವೇರಿ ತೀರ್ಥಪೂಜೆ ಮತ್ತು ಸಾರ್ವಜನಿಕ ಸಭೆ ನಡೆಯಿತು. ಶ್ರೀಗಳಾದ ಎಸ್. ಎಂ. ಅಚ್ಚಪ್ಪ ವಿ. ಎಸ್. ರಾವ್, ಕೃಷ್ಣ ಇವರುಗಳು ಭಾಷಣ ಮಾಡಿದರು. ಶ್ರೀ. ಬಿ. ಕೆ. ಸುಬ್ರಾಯರು 'ಜೀವಕ ಸಕೂಬಾಯಿ' ಎಂಬ ಹರಿಕಥೆ ಮಾಡಿದರು.

ವೀರಾಜಪೇಟೆ ಕೊಡವ ಸಮಾಜದ ಆಟೋಟಗಳ ಸ್ಪರ್ಧೆ ಮತ್ತು ವಿಶೇಷ ಮಹಾಸಭೆಯು ಜೈಹಿಂದ್ ಮೈದಾನದಲ್ಲಿ ತಾ. ೨೪-೧೦-೪೧ ಬೆಳಿಗ್ಗೆ ೮ ಗಂಟೆಗೆ ನಡೆಯುವುದು.

ಈ ಸರ್ಕಾರದ ಆಂತರ್ಕಾಲೇಜು ಹಾಕಿ ಪಂದ್ಯಾವಳಿಯು ಮಡಿಕೇರಿಯಲ್ಲಿ ಒಂದು ಕೇಂದ್ರವಾಗಿದ್ದು ನಡೆಸಿರುವ ಸರಕಾರಿ ಕಾಲೇಜು ಟೀಮು ಮಡಿಕೇರಿಯಲ್ಲಿ ತಾ. ೩೦ರಲ್ಲಿ ತಲಚೇರಿಯ ಬ್ರೆನ್ನೆನ್ ಕಾಲೇಜ್ ಟೀಮನ್ನೆದುರಿಸುವುದು. ಆದರಲ್ಲಿ ಗೆದ್ದವರು ತಾ. ೩೧ರಲ್ಲಿ ಮಂಗಳೂರು ಎಲೋಷಿಯಸ್ ಕಾಲೇಜ್ ಮತ್ತು ಗವರ್ನ್‌ಮೆಂಟ್ ಕಾಲೇಜು ಗಳೊಳಗೆ ಗೆದ್ದವರೊಡನೆಯೂ ಮಡಿಕೇರಿ ಪೇನ್ಸ್‌ಬಳಿಯ ಪೌಡ್ ನೈದಾನದಲ್ಲಿ ಆಡುವರು.

ಕೊಡಗಿನಲ್ಲಿ 'ಮಿಸ್ ಎ ವಿಲ್ಲ' ಜಿಲ್ಲೆಯದಲ್ಲಿ ಒಟ್ಟು ೧೧,೫೫೫ ಳ ಸೇರು ಅಕ್ಕಿಯೂ, ೨೪೧ ಸೇರು ರಾಗಿಯೂ ೧೫೫೦ ರೂಪಾಯಿಗಳೂ ಸಂಗ್ರಹವಾಗಿದ್ದು ಈ ವರೆಗೆ ೯,೬೦೦ ಸೇರು ಅಕ್ಕಿಯನ್ನು ಕಳುಹಿಸಲಾಗಿದೆ. ಕಳುಹಿಸುವ ಬಾಕಿ ರೂ. ೨೮೫-೧೬-೦ ಕಳೆದು ಬಾಕಿ ಹಣ ಕೈಯ್ಯಲ್ಲಿದೆಯೆಂದು ತಿಳಿಸುತ್ತಾರೆ.

ಹಿಂದೂಧರ್ಮದ ಮಜ್ಜು ಚಂತಾವಣಾ ಕವಿಯೊಪನಿಷತ್ತಾದ ಶ್ರೀ ಸಕ್ಕರಾಪುರ ಸೇನ್ಗುರವರು ತಾ. ೧೯ರಲ್ಲಿ ಮಡಿಕೇರಿಗೆ, ಬಂದು ತಾ. ೨೦ರಲ್ಲಿ ಹಾಕತ್ತೂರಿನಲ್ಲಿ ನಡೆದ ನೂಕ್ ಇಲೆಕ್ಷನ್'ನ್ನು ಪರಿಶೀಲಿಸಿದರು. ಮುಂಬರುವ ಚಂತಾವಣೆಯ ವಿಚಾರ ಸೂಕ್ತ ಸಲಹೆಗಳನ್ನಿತ್ತು ತಾ. ೨೧ರಲ್ಲಿ ವಾಪಾಸು ಹೋದರು.

ಈ ತಾ. ೨೦ರಿಂದ ಬರುವ ಫೆಬ್ರವರಿ ಆಖೈರ್ ವರೆಗೆ ಶ್ರೀ ಳಿಟ್ಟಂಡ ತಮ್ಮಯ್ಯನವರನ್ನು ಸ್ವಾಗತ ದರ್ಶಿಸಿ ವಿಶೇಷ ಮೋಜಿ ಸ್ಪೀಚರಾಗಿ ನೇಮಿಸಿರುವರು. ಇವರು ಮಡಿಕೇರಿ, ವೀರಾಜಪೇಟೆ, ಪೊನ್ನಂಪೇಟೆ ಮತ್ತು ಸೋಮವಾರಪೇಟೆಗಳಲ್ಲಿ ತಮ್ಮ ಕೋರ್ಟ್ ನಡೆಸುವರು.

೨ ರೂಪಾಯಿ, ೫ರೂಪಾಯಿ ಹೊಸ ನೋಟುಗಳು.

೨ ರೂಪಾಯಿ ಹಾಗೂ ೫ ರೂಪಾಯಿಗಳ ಹೊಸ ಮಾದರಿಯ ನೋಟುಗಳನ್ನು ಭಾರತ ರಿಜರ್ವ್ ಬ್ಯಾಂಕು ತೀರ್ಮಾನದಲ್ಲಿಯೇ ಪ್ರಸಿದ್ಧಿಪಡಿಸಿದೆ. ನೋಟಿನ ಬೆಲೆಯನ್ನು ಇಂಗ್ಲಿಷ್‌ನೊಂದಿಗೆ ಹಿಂದೀ ಅಕ್ಷರಗಳಲ್ಲಿಯೂ ಮುದ್ರಿಸಲಾಗುವುದು. ಅಲ್ಲದೆ ಹಿಂಬದಿಯಲ್ಲಿ ನೋಟಿನ ಬೆಲೆಯನ್ನು ಬಂಗಾಲಿ ಗುಜರಾತಿ ಕನ್ನಡ, ತಮಿಳು, ತೆಲಗು, ಉರ್ದು ಓರಿಯಾ ಅಕ್ಷರಗಳಲ್ಲಿಯೂ ಮುದ್ರಿಸಲಾಗುವುದು.

ನೆಪೆಲೊರವರ ಚುನಾವಣೆ ಸಂಚಾರ.

ಚುನಾವಣೆ ಪ್ರಚಾರಕ್ಕಾಗಿ ದೇಶದಾದ್ಯಂತ ಕಾಂಗ್ರೆಸ್ ಧ್ಯಕ್ಷ ಪಂಡಿತರೂ ರವರು ತೈಲೊಳ್ಳಿರುವ ಆರು ವಾರಗಳ ಪ್ರವಾಸದ ಕಾರ್ಯಕ್ರಮವನ್ನು ನಿರ್ಧರಿಸುವುದಕ್ಕಾಗಿ ಎ. ಐ. ಸಿ. ಸಿ ಯ ಪ್ರಧಾನ ಕಾರ್ಯದರ್ಶಿಗಳು ನಿನ್ನೆ ಬೆಳಗ್ಗೆ ಅಲಹಾಬಾದಿಗೆ ಹೊರಟರು. ಪಂಡಿತರು ಸಂಯುಕ್ತ ಪ್ರಾಂತ್ಯ, ಬಿಹಾರ, ಬಂಗಾಳ, ಮಧ್ಯ ಪ್ರಾಂತ್ಯ ಮತ್ತು ಬಾಂಬೆ ಪ್ರಾಂತ್ಯಗಳಲ್ಲಿ ಸಂಚರಿಸಿ ಭಾಷಣ ಮಾಡುವರು. ಪಂಡಿತರು ಮಾಡುವ ಭಾಷಣಗಳು ಸಾಮಾನ್ಯವಾಗಿ ಕಾಂಗ್ರೆಸ್ ಧ್ಯೇಯ ಮತ್ತು ಸಿದ್ಧಾಂತಗಳ ಬಗ್ಗೆ ಹಿಂದಿನಿಂದ ನಿರ್ಣಯಿಸಲಾಗುವುದು.

ಈ ಪಟ್ಟಿಯನ್ನು ಗೊನಿಯೂದಾಗಿ ತಯಾರಿಸಿದ ಕೇಂದ್ರ ಚುನಾವಣಾ ಮಂಡಳವು ಕೇಂದ್ರದ ಮುದ್ದಾಂ ಹಾಗೂ ಬಾನುಲಿ ಕಾರ್ಯಕ್ರಮಗಳ ಮಂತ್ರಿ ಶ್ರೀ. ಆರ್. ಆರ್. ದಿವಾಕರರಿಗೆ ಕೇಂದ್ರದ ಮೇಲ್ಮನೆ (ಕೌನ್ಸಿಲ್ ಆಫ್ ಸ್ಟೇಟ್) ಯ ಸ್ಥಳವನ್ನು ಕೊಡಬೇಕೆಂದು ಸದ್ಯದ ಪಾರ್ಲಿಮೆಂಟ್ ಸದಸ್ಯ ಶ್ರೀ. ಬಿ ಎನ್. ಮುನಿಸ್ವಾಮಿಯವರು ಮೈಂಬಯಿ ರಾಜ್ಯ ಮೇಲ್ಮನೆ (ಲೆಜಿಸ್ಲೇಟಿವ್ ಕೌನ್ಸಿಲ್) ಯ ಸ್ಥಳಕ್ಕೆ ಉಮೇದುವರಾಗಬೇಕೆಂದೂ ನಿರ್ಣಯಿಸಿದೆ. ಆರಿಸಲ್ಪಟ್ಟ ಹುರಿಯಾಳುಗಳಲ್ಲಿ ನಾಲ್ವರು ಸದ್ಯದ ಪಾರ್ಲಿಮೆಂಟಿನ ಸದಸ್ಯರಿದ್ದಾರೆ. ಹುರಿಯಾಳುಗಳ ಪಟ್ಟಿಯು ಈ ಕೆಳಗೆ ಕಾಣಿಸಿದಂತಿದೆ.

ಬಳ್ಳಾರಿ ಜಿಲ್ಲೆ

ಶ್ರೀ ಟಿ. ಸುಬ್ರಹ್ಮಣ್ಯಂ
ದ. ಕನ್ನಡ ಜಿಲ್ಲೆ (ಉತ್ತರ)

ಶ್ರೀ ಯು. ಶ್ರೀನಿವಾಸ ಮಲ್ಯ
ದ. ಕನ್ನಡ ಜಿಲ್ಲೆ (ದಕ್ಷಿಣ)

ಶ್ರೀ ಬಿ. ಶಿವರಾವ್
ಬೆಳಗಾವಿ ಜಿಲ್ಲೆ (ಉತ್ತರ)

ಶ್ರೀ ಬಿ. ಎನ್. ದಾತಾರ
ಬೆಳಗಾವಿ ಜಿಲ್ಲೆ (ದಕ್ಷಿಣ)

ಶ್ರೀ ಎಸ್. ನಿ. ಪಾಟೀಲ
ವಿಜಾಪುರ ಜಿಲ್ಲೆ (ಉತ್ತರ)

ಶ್ರೀ ಆರ್. ಜಿ. ದುಟೆ
ವಿಜಾಪುರ ಜಿಲ್ಲೆ (ದಕ್ಷಿಣ)

ಶ್ರೀ ಆರ್. ಬಿ. ಬಿದರಿ
ಧಾರವಾಡ ಜಿಲ್ಲೆ (ಉತ್ತರ)

ಶ್ರೀ ಡಿ. ಪಿ. ಕರಮರಕರ
ಧಾರವಾಡ ಜಿಲ್ಲೆ (ದಕ್ಷಿಣ)

ಶ್ರೀ ಟಿ. ಆರ್ ನೆಸ್ವಿ
ಉತ್ತರ ಕನ್ನಡ ಜಿಲ್ಲೆ

ಶ್ರೀ ಜೋಕೆಂ ಅಳ್ವಾ

ಮತದಾರರ ಕೇಳಿಕೆ

ಕೊಡಗಿನ ಮಂದಿನ ಕೌನ್ಸಿಲು ಚುನಾವಣೆಗೆ ಯಾವ ಪಾರ್ಟಿ ಪಂಗಡಗಳಾದರೂ ಕಣಕ್ಕೆ ಸ್ಪೆರ್ಧೆಯಿಂದ ಮೆಂಬರುಗಳನ್ನು ನಿಲ್ಲಿಸುವುದು ಪ್ರಜಾಸತ್ತೆಗೆ ವಿರುದ್ಧ ವೆಂತಲೂ, ಆಯಾ ಪಂಗಡಗಳು ಮೆಂಬರುಗಳ ಹೆಸರನ್ನು ಕೊಡುವ ನಮ್ಮೆ, ಆಯಾ ಪೋಲಿಂಗ್ ಸೆಂಟರುಗಳಲ್ಲಿ ವಿಟಿಂಗು ನಡೆಸಿ ಮತದಾರರ ಒಪ್ಪಿಗೆಯನ್ನು ಪಡೆದು ಚುನಾವಣೆ ಪಟ್ಟಿ ಅಹರಂಗ ಪಡಿಸಲಕ್ಕಿದ್ದಿಂದೂ ಈ ಮೂಲಕ ಕೇಳಿ ಕೊಳ್ಳುತ್ತೇನೆ. (ಮತದಾರ)

ಬಸ್ಸು ಪ್ರಯಾಣ

ಈ ಕಾ||ಗಾರಲ್ಲು, ತಾವು ಕಟ್ಟೆಕ್ಕೆ ಜಗದೀಶ್ವರ ಬಸ್ಸಿನಲ್ಲಿ ಬಂದೆ. ಅದು ಅರ್ಧ ಮಾರ್ಗಾಂತಿಗೆ ಹೋಗಿ ಅಲ್ಲಿಂದ ಹಿಂತಿರುಗಿ ಕಾವೇರಿ ಬಸ್ಸಿನೊಂದಿಗೇ ಕಟ್ಟೆಕ್ಕೆ ಜೊತೆ ಜೊತೆಯಲ್ಲಿ ಬಂತು. ಅದುದರಿಂದ ಬಸ್ಸು ಹತ್ತಿ ಪ್ರಯಾಣಿಕರಿಗೂ ಇಳಿಯುವವರಿಗೂ ಎಷ್ಟೊಂದು ತೊಂದರೆಯಾಯಿತು. ಇಂತಹ ಪರಿಸ್ಥಿತಿ ಹೀಗೆ ಮುಂದೆ ಬಸ್ಸು ಇರುವುದರಿಂದ ಪ್ರಯಾಣಿಕ್ಕೆ ಅಪಾಯಕ್ಕೆ ಅವಕಾಶ ಸಮಯಕ್ಕೆ ಅರಿಯಾಗಿ ತಲಪಲಕ್ಕಾರಿಂದ ಬಸ್ಸು ಇರಿದು ಹೆಚ್ಚಿಯಲ್ಲಿ ಸಂಜೆಗೆ ಹೋಗುವ ಪ್ರಯಾಣಿಕರಿಗೆ ಕತ್ತಲೆಯಲ್ಲಿ ಬಹಳ ತೊಂದರೆಯಾಯಿತು. ದಾರಿಮಧ್ಯೆ ಬೀಸಿಗರೇಟು ಚಿಕ್ಕಿಂಗ್, ಹೀಗೆ ಸಮಯ ವಿಜಾರಣೆ ಇದೆ.

ಶ್ರೀಮಂಗಲದಲ್ಲಿ, ಜಗದೀಶ ಬಸ್ಸಿಗೆ ಸಾಧಾರಣ ಇಪ್ಪತ್ತು ಚೀಲ ಹಿಂಡಿ ಗೋಬ್ಬರ ಟ್ರಾಪ್‌ಗೂ ಮತ್ತು ದೊಡ್ಡಿ ಸೀಟಿಗೂ ಒಂದೊಂದು ಚೀಲವನ್ನೂ ಮೂರು ಮೂರು ಜನರು ಹೊತ್ತ ತಂಬಿಸಿದರು. ಈ ಗೊಬ್ಬರ ಒಬ್ಬ ರಿಟಾಯರ್ಡ್ ಆಫೀಸರರ ತಾಫಿ ತೋಟಕ್ಕೆ ಎಂಬ ತಿಳಿಯಬಂತು. ಲಗ್ಗೇಜು ಚಾರ್ಜು ಕಂಪೆನಿಗೆ ಹೋಗದಿದ್ದರೂ ಪೊಟ್ಟಿಗೂ, ಹಾಲಿಗೂ ತಾಗುತ್ತದೆ ಎಂದು ಪ್ಯಾಸೆಂಜರುಗಳು ಪಿಸುಗುಟ್ಟುತಿದ್ದರು. ಬಸ್ಸಿನಲ್ಲಿ ತಂಬಾ ಪ್ರಯಾಣಿಕರಿದ್ದರು. ಫರ್ಸ್ಟ್‌ಕ್ಲಾಸ್ ಪಕ್ಷೀಪರಂಗೆ, ಸೆಕೆಂಡ್ ಕ್ಲಾಸು ಲೇಡಿಸಿಗೆ ಥರ್ಡ್ ಕ್ಲಾಸ್ ವ್ಯಾಪಾರಸ್ಥರಿಗೆ, ಪ್ಲಾಂಟರಿಗೆ ಮತ್ತು ಜಕ್ಕ ಆಫೀಸರಿಂಗೆ. ದೊಡ್ಡಿ ಕ್ಲಾಸು ಹೆಳ್ಳಯವರಿಗೂ, ಗದ್ದೆ ಉಳುಮವರಿಗೂ ಮತ್ತು ಮಜೂರರಿಗೆ. ಅಲ್ಲಯೂ ಗೊಬ್ಬರ ರಾಶಿ. ಹೀಗೆವ್ಯಾಸೆಂಜರ್ ಬಳ್ಳನ್ನು ಗೊಬ್ಬರ ಲಾರಿ ಮಾಡುವುನುಂದ ಪ್ರಯಾಣಿಕರಿಗೆ ಎಷ್ಟು ತೊಂದರೆ ಇದೆಎಂಬುದನ್ನು ದಯಾಳು ಡಿ. ಬಾಸ್. ಪಿ. ಅವರು ವಿಚಾರಿಸಿ ಮುಂದಕ್ಕೆ ಬಸ್ಸನ್ನು ಲಾರಿ ಮಾಡಲು ಹುಕುಂ ಕೊಡಕೂಡದೆಂಗಿ ಪ್ರಾರ್ಥನೆ.

ಸದಾ ದೊಡ್ಡಿ ಪ್ಯಾಸೆಂಜರ್.

ಸರ್ಕಾರದವರಲ್ಲು ವಿನಂತಿ.

ಕೊಡಗಿನಲ್ಲಿ ಅನೇಕ ಪರಾಬಿನ ಅಂಗಡಿಗಳು ಇದ್ದವು. ಸರ್ಕಾರದವರು ಮದ್ಯಪಾನ ನಿರೋಧ ವಿಷಯ ಗನುಸಕ್ಕೆ ತಂದು ಅಲ್ಲಲ್ಲಿ ಕೆಲವು ಪರಾಬು ಡಿಪೋಗಳನ್ನು ಇಟ್ಟಿರುವುದಾಗಿರುತ್ತದೆ. ಜನರು ಮುದ್ಯಪಾನವನ್ನು ಕಡಿಮೆ ಮಾಡುವು ದಕ್ಕಾಗಿ ರೇಷನ್ ಪದ್ಧತಿ ಮೇರೆ ಕೂಪನ್ ಕೊಟ್ಟು ಹಂಚುವುದಾಗಿರುತ್ತದೆ

ಓದುಗರ ಓಲೆಗಳು

ಡಿಪೋಗಳಲ್ಲಿ ಸರ್ಕಾರದವರು ಸಂಬಳ ಕೊಟ್ಟ ಒಬ್ಬರೇ ಮೇನೇಜರನ್ನೂ ಒಬ್ಬ ಗುಮಾಸ್ತನನ್ನೂ ನೇಮಿಸಿರುವುದಾಗಿ ಗೊತ್ತಾಯಿತು. ಕೊಡಗಿನಲ್ಲಿ ಕೌನ್ಸಿಲ್ ಚುನಾವಣೆಯು ೧೯೫೨ನೇ ಇಸವಿ ಜನವರಿ ತಿಂಗಳಲ್ಲಿ ನಡೆಯುವುದಾಗಿ ಎರ್ಪಾಟಿ ಇರುತ್ತದೆ. ಸಾರಾಯಿ ಡಿಪೋದ ಮೇನೇಜರು ಸರ್ಕಾರಿ ಉದ್ಯೋಗಸ್ಥರಾಗಿದ್ದು ಕೌನ್ಸಿಲ್ ಮೆಂಬರುಶನಕ್ಕೆ ನಿಲ್ಲಬಹುದೇ? ಯಾ ರಜೆಯನ್ನು ತೆಗೆದುಕೊಂಡು ನಿಲ್ಲಬಹುದೇ? ಇದು ಸರ್ಕಾರದ ತೀರ್ಮಾನಿಗೆ ಸಮಂಜಸವಾಗಿದೆಯೇ? ತಾವು ರಜೆ ತೆಗೆದುಕೊಂಡು ತಮ್ಮ ಹೆಸ್ಸನ್ನು ಅಲೆಸಕ್ಕೆ ನೇವ ಕ ಮಾಡಿರುತ್ತಾ. ಇದು ನ್ಯಾಯವೇ? ಒಬ್ಬರು ಈಗಾಗಲೇ ಕೌನ್ಸಿಲ್ ಮೆಂಬರುಶನಕ್ಕೆ ನಿಲ್ಲುವುದಾಗಿ ಯೂ ಜನಗೆ ಸಹಾಯ ಕೊಡಬೇಕಾಗಿ ಯೂ ನಾಡಿನ ಎಲ್ಲಾ ಪ್ರಜೆಗಳಲ್ಲು ಪ್ರಜ್ಞಾಪೂರ್ವಕ ಮಾಡುತ್ತಾ ಇದ್ದಾರೆ. ಅಲ್ಲದೆ ತಿಗಾಗಲೇ ನಡೆದ ಮೂರು ವಿಧಿಟಿಂಗಿನಲ್ಲು ಸಹ ಚುನಾವಣೆ ವಿಷಯ ಭಾಷಣ ಮಾಡಿರುತ್ತಾರೆ.

ಇವಳ ಅಂಣ ಸರಕಾರಿ ಉದ್ಯೋಗಸ್ಥರಾಗಿದ್ದು ರಜೆ ತೆಗೆದುಕೊಂಡು ತನ್ನನ್ನ ಪರವಾಗಿ ಕೌನ್ಸಿಲ್ ಚುನಾವಣೆ ವಿಷಯ ಪ್ರಚಾರ ಮಾಡುತ್ತಿರುತ್ತಾರೆ ಇದು ಸರ್ಕಾರಿ ಕಾನೂನಿಗೆ ವಿರೋಧ ವೆಂದು ನನ್ನ ಭಾವನೆ. ಚುನಾವಣೆಯ ಪ್ರಚಾರ ವಿಷಯ ಸರ್ಕಾರಿ ಉದ್ಯೋಗಸ್ಥರು ಕೈ ಹಾಕಬಾರದಾಗಿ ನಿಯಮ ವಿರುತ್ತದೆ. ಚುನಾವಣೆಯಲ್ಲಿ ನಿಲ್ಲಲು ಯಾ ಪ್ರಚಾರ ಮಾಡಲು ಇವರುಗಳಾ ತಮಗಳ ಉದ್ಯೋಗಕ್ಕೆ ರಾಜೀನಾಮೆ ಕೊಡಬೇಕಾಗಿ ಸರ್ಕಾರದವರು ಇವರುಗಳಿಗೆ ಶಿಕ್ಷಪಡಿಸಬೇಕಾಗಿಯೂ ಇವರು ಗಳು ಚಲ್ಲಾಪಿಲ್ಲಿ ಮಾಡಿದಲ್ಲು ಸರ್ಕಾರವು ಶಕ್ತ ಕ್ರಮ ತೆಗೆದುಕೊಳ್ಳಬೇಕಾಗಿಯೂ ಕೋರುವೆ. (ಮತದಾರ)

ಇದು ದರೋಡೆಯಲ್ಲವೇ?

ಕೊಡಗಿನ ನವಸಂಪತ್ತು ಹೆಸರಾದು ದು. ಸರಕಾರದ ಆದಾಯದ ಬಹುಭಾಗವು ಫಾರೆಸ್ಟಿನಿಂದ ಬರುತ್ತದೆ. ಅಂತೆ ಕೊಡಗು ಫಾರೆಸ್ಟ್ ಇಲಾಖೆಯವರು ಇದರ ಜೋಪಾದ ಬಗ್ಗೆ ಹೆಚ್ಚು ಸಿಗ ವಹಿಸಿದಂತೆ ತೋರುವುದಿಲ್ಲ. ಕಾಡುಗಳನ್ನು ಕಡಿದು ಮರ ಸೂಂಟಾ ಲೂಟಿ ತಡೆಯಿಲ್ಲದೆ ನಡೆಯುತ್ತಿದೆ. ಅದರ ಜೊತೆಯಲ್ಲಿ ಕೊಡಗಿನ ನವಸಂಪತ್ತಿನ ಸೂರೆ ಹೇಗೆ ಆಗುತ್ತಿದೆಯೆಂಬುದನ್ನ ಇಲ್ಲಿ ವಿವರಿಸುವೆ. ಪುನೆನಾಡಿನಿಂದ ಹಿಡಿದು ತಡಿಯಂಡಮೋಳ್ ಹೆಟ್ಟ, ಕರಿಕೆ, ಪಣಂಡ್ರೋಟ್, ಸೂಪಾಜೆಯ ಅಡವಿಮೆ ಬೆಟ್ಟ ಸಾಲು ಇದೆ. ಈ ವನಸಾಲಿನಿಂದ ಕೆರೆರಾಜ್ಯದವರು ಅಗಣಿತ ಬೆಲೆಯ ವಸ್ತುಗಳನ್ನು ಅಪಹರಿಸುತ್ತಿದ್ದಾರೆ. ಗೇಣಿ ಮರೆ ಕಾಡುಗಳಿಗೆ ಒಕ್ಕಾಗಿರುವ ಮಲಬಾರಿನ ನರು, ಸೀಗೆ, ಧೂಪ, ಮರ ಎಣ್ಣೆ, ಜೇನು ಬೆಕ್ಕ ಮೊದಲಾದುವನ್ನು ಲೂಟಿ ಮಾಡುತಿದ್ದಾರೆ. ಧೂಪದ ಮರಗಳನ್ನು ಎಣ್ಣೆ ಮರಗಳನ್ನು ಕಡಿದು ವಾರ ವಾರ ಈ ಅಮೂಲ್ಯ ವಸ್ತುಗಳನ್ನು ಸಂಗ್ರಹಿಸುತ್ತಾರೆ ಕಳೆದ ವರ್ಷ ಕಾಡು ಒಳೇ ಮೆಣಸನ್ನು ಸಂಗ್ರಹಿಸಿ ಮೂರಾಟ ಮಾಡಿದ್ದಿದೆ. ಹೀಗಾಗಿ ಗೇಣಿವರೆಲ್ಲಿ ಹರಾಜಿನಲ್ಲಿ ಪಡೆದ ವರಿಗೂ ನಷ್ಟವಾಗುತ್ತಿದೆ. ಆದ್ದರಿಂದ ಸಂಬಂಧಿಸಿದ ಅಧಿಕಾರಿಗಳು ಈ ವಿಚಾರದಲ್ಲಿ ಹೆಚ್ಚಿನ ಶಿಗ ವಹಿಸಬೇಕು.

ಎ ಪೂವಯ್ಯ.

ಅಲೂರು ಸಿದ್ದಾಪುರ ಶಾಲೆ

ಶನಿವಾರಸಂತೆ ಹೋಬಳಿ ರೀ ಜನರೇಪನ್ ವಿಸ್ತೃದ ಅಲೂರು ಸಿದ್ದಾಪುರ ಗ್ರಾಮದಲ್ಲಿ ಈಗ ಒಂದು ಶಾಲೆಯನ್ನು ಈ ವ್ಯಾಂಕ್ಷೆಯ ಜನರು ಸೇರಿ ಸ್ವಂತ ಖರ್ಚಿನಿಂದ ಶಾಲಾ ಕಟ್ಟಡವನ್ನು ಕಟ್ಟಿಸಿದ್ದಾರೆ. ಶಿಕ್ಷಣ ಇಲಾಖೆಯವರು ಸಹ ಒಬ್ಬ ಉಪಾಧ್ಯಾಹರನ್ನು ನೇಮಿಸಿ ಈ ಹಿಂದಿನಿಂದಲೂ ಶಾಲೆಯನ್ನು ನಡೆಸಿಕೊಂಡು ಬಂದಿವೆ. ಈ ಶಾಲೆಯನ್ನು ಸಂದರ್ಶಿಸಿದ ಶಾಲಾ ಇ ಎ ಜ್ಯಾಲೇಶರಲ್ ಆಫೀಸರೂ, ಡಿ.ಪಿ.ಐ ಸಹ ಸರ್‌ಪೈಪರೂ, ಅ. ಕಮಿಷ್ನರ್ ಸಾಹೇಬರೂ, ಮೆಡಿಕಲ್ ಆಫೀಸರೂ ಅಲ್ಲದೆ ಇತರ ಅಧಿಕಾರಿಗಳೂ ಸಹ ಇನ್ಸ್‌ಪೆಕ್ಷನ್ ನೋಟು ಬುಕ್ಕಿನಲ್ಲಿ ಶಾಲೆಯ ಏಳಿಗೆ ಮತ್ತು ವಿದ್ಯಾರ್ಥಿಗಳ ಸಂಖ್ಯೆಯ ವಿಷಯಗಳನ್ನು ಹೊಗಳಿರುವುದಲ್ಲದೆ ಈ ಶಾಲೆಯನ್ನು ಒಂದು ಗ್ರಾಂಟು ಶಾಲೆಯಾಗಿ ತೆಗೆದುಕೊಳ್ಳುವಂತೆ ಶಿಫಾರಸ್ಸು ಮಾಡಿರುತ್ತಾರೆ. ನಾವು ಈ ಶಾಲಾ ಕಟ್ಟಡ ಯತ್ಕಕ್ಕಾರು ನೇರ ಅಧಿಕಾರಿಗಳಿಗೆ ಪತ್ರದ ಮೂಲಕವೂ, ಖುದ್ದಾಗಿಯೂ, ನಮ್ಮ ● ಮಾಡಿಕೊಂಡರೂ ಈ ಏರಿಗೆ ಈ ಶಾಲೆಯನ್ನು ಗ್ರಾಂಟು ಶಾಲೆಯಾಗಿ ತೆಗೆದುಕೊಂಡಿಲ್ಲ. ಸುಮಾರು ಒಂದು ಸಾವಿರ ಜನರು ಇರುವ ಈ ವ್ಯಾಂಕ್ಷೆಯಲ್ಲಿ ಒಂದಾದರೂ ಪ್ರೌಢಶಾಲೆಯಿಲ್ಲ. ಈ ಶಾಲೆಯಲ್ಲಿ ೬೦ ವಿದ್ಯಾರ್ಥಿಗಳ ಸಂಖ್ಯೆ ಇದೆ. ಇದರಲ್ಲಿ ಸಾಧಾರಣ ೫೦ ರವರೆಗೆ ವಿದ್ಯಾರ್ಥಿಗಳು ಶಾಲಾ ಉಪಾಧ್ಯಾಯರ ಸಂಬಳ ಕೊಡಲು ಆಶಕ್ತರಾದ್ದರಿಂದ ತಿಂಗಳಿಗೆ ಬರುತ್ತಿಲ್ಲ ಕೂಡಲೇ ಈ ಶಾಲೆಯನ್ನು ಡಿ. ಬೋ. ಇಲ್ಲವೇ ಗ್ರಾಂಟು ಶಾಲೆಯಾಗಿ ತೆಗೆದುಕೊಂಡಲ್ಲಿ ೧೦೦-೧೨೦ ವಿದ್ಯಾರ್ಥಿಗಳ ಕಂಚ್ಯೆ ಏರುವುದು. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಒಡನೆ ಈ ಸ್ಥಿತಿ ಶಾಲೆಯ ಕಡೆಗೆ ಮನಸ್ಸಿಟ್ಟು ಈ ಶಾಲೆಯನ್ನು ಡಿಸ್ಟ್ರಿಕ್ಟ್ ಬೋರ್ಡ್ ಶಾಲೆಯಾಗಿ ತೆಗೆದುಕೊಳ್ಳುವರಾಗಿ ವಿನಂತಿಸುವ.

ಸೋಣಂಡ ಕಾಳಪ್ಪ.

ರೀಜನರೇಪನ್ ವಿಸ್ತೃದ ಬಸ್ ಲೈನು

ಕೊಡಗಿನಲ್ಲಿ ಶನಿವಾರಸಂತೆ ಹೋಬಳಿ ರೀ-ಜನರೇಶನ್ ವಿಸ್ತೃವು ಒಂದು ಅಂಡಮೊನ್. ಇಲ್ಲಿಗೆ ನಮ್ಮ ಈ ವ್ಯಾಂಕ್ಷೆದ ನಮ್ಮ ಜೊರಾಸ್ತ್ರಾಂಕ್ಷೆದ ಪವರೂ ನೂರಾರು ಜನರು ಸೇರಿ ಈಗ ೨ ವರ್ಷದ ಹಿಂದೆ ಒಂದು ಬಸ್ ಲೈನು ಬೇಕೆಂದು ಚೀಫ್ ಕಮಿಷನರ್ ಸಾಹೇಬರವರಿಗೆ ಅರ್ಜಿ ಬರಕೊಂಡಿದ್ದಲ್ಲದೆ ಸುಮಾರು ೧೦, ೧೫ ವರ್ಷಗಳಿಂದಲೂ ನಾವು ಈ ವ್ಯಾಂಕ್ಷೆದಲ್ಲಿ ಒಂದು ಬಸ್ ಲೈನು ಕೇಳುತ್ತಾ ದಾಗಿದೆ. ಕೊಡ್ಲಿಪೇಟೆಯಿಂದ, ಶನಿವಾರಸಂತೆ, ಆಲೂರು, ಬಾಣಾವರ, ಹೆಬ್ಬಾಲೆ ಮಾರ್ಗವಾಗಿ ಮಡಿಕೇರಿಗೆ ಒಂದಾ ನೆಟ್ಟಿಂಗು ರಸ್ತೆ ಇದೆ. ನಾವು ಬಸ್ಸು ಲೈನು ಕೇಳಿದ ಸಮಯದಲ್ಲಿ ೧೦-೫ ಮೈಲು ಮೆಟ್ಲಿಂಗ್ ಸರಿಪಡಿಸುವುದೂ ಮತ್ತು ಜಲ್ಲಿ ಒಡೆಯುವುದು ವಗೈರೆ ಕೆಲಸಗಳು ನಡೆಯುವಾಗ ಇಂದೋ ನಾಳೆಯೋ ಬಸ್ ಲೈನು ಬರಬಹುದೆಂಬ ಕ ತೂಹಲ ಇಲ್ಲಿಯವರಿಗೆ ಇತ್ತು. ಆದರೆ ಪ್ರಯೋಜನವಾಗಲಿಲ್ಲ. ಚೀಫ್ ಕಮಿಷನರ್ ಸಾಹೇಬರವರು ಈ ಸಾಲಿನ ಡಿಸೆಂಬರ್ ಮತ್ತು ಜನವರಿ ತಿಂಗಳ ಸಮಯದಲ್ಲಿ ಈ ವ್ಯಾಂಕ್ಷೆಯನ್ನ ಸಂದರ್ಶಿಸಿದ ಸಮಯದಲ್ಲಿ ಬಸ್ ಲೈನಿನ ವಿಷಯ ಮನವಿ ಮಾಡಿಕೊಂಡೆವು. ತಕ್ಷಣವಲ್ಲಿಯೇ ಬಸ್ ಲೈನಿನ ವಿಚಾರಣೆ ಮಾಡುವೆನೆಂಬ ಭರವಸೆ ಸಹ ಇತ್ತರು. ಈ ಮಾರ್ಗ ಯಾವುದೂ ಕಾರಣವಿದಿಲ್ಲ. ಈಗಲೇ ಸಂಬಂಧಪಟ್ಟ ಅಧಿಕಾರಿಗಳು ಈ ನಾಡಿನ ಸ್ಥಿತಿಗತಿಗಳನ್ನು ವ್ಯಾಪಾರ ವ್ಯವಹಾರಗಳಿಗೆ ಜನರು ಕೂಲಕಾಗಿ ಪಡನೆ ಬಸ್ ಲೈನು ತೆರೆಯವ ವಿಚಾರಣೆ ಇ ದಾದರೂ ಮಾಡುವರೇ?

ಈ ನಾಡಿನ ಪ್ರಯಾಣಿಕ.

ಇದು ಯಾರ ಭಾಗ್ಯ?

ನಿರಾಶ್ರಯರಾಗಿರುವುದೇ ಕಡೆಗೂ ದೊರೆತ ಬಡವನ ಭಾಗ್ಯ! ನಿರಕ್ಷರದಿಂದ ನಿತ್ಯ ವನ್ನು ಕಳೆಯುವುದು ಮತ್ತೊಂದು ಭಾಗ್ಯ! ಇವೆರಡು ಭಾಗ್ಯಗಳು ಬಡವನ ಬಾಳ್ವೆಯಲ್ಲಿ ನಿರಂತರ ನಿಂತಿರುವುದೇ ಬಡವನು ಬಡವನಾಗಲು ನೆಲಗಟ್ಟು.

ಬಡಜನತೆಯು ಹಿತವೇ ನವ್ಯ ನಿ ವೆಂದು ಹೇಳುವುದು ಸರಕಾರದ ಘೋಷಣೆ. ಒಡ ಜಪತೆಯನ್ನು ಹಿಡಿದೆತ್ತಿ ತಮ್ಮ ಸ್ವಾರ್ಥತೆಯನ್ನು ಗಳಸಿ, ರಾಜಕೀಯ ರಂಗದಲ್ಲಿ ಕುಣಿಯುವುದು ಜನರ ಪ್ರತಿನಿಧಿ, ದೇಶಸೇವಕನ ನೋಕಲ ಕರ್ತವ್ಯ. ಎಲ್ಲೂ ಬಾಹ್ಯವಾಗಿ ಬಡವನ ಏಳಿಗೆಗೆ ಬಹುವಾಗಿ ಪ್ರಾತಃಡುವರೇ. ಸರಕಾರವು ಬಡವರೋದ್ಧಾರವೇ ದೇಶದ ಅಭ್ಯುದಯವೆಂದು ಸಾರುತ್ತಿದೆ.

ದೇಶದಲ್ಲಿ ತಲೆದೋರಿರುವ ಆಹಾರಾಭಾವವನ್ನು ತಡೆಗಟ್ಟಿ ಸಂಘಸ್ಥಿನವನ್ನಾಗಿ ಮಾಡಲು ಮತ್ತು ಜನತೆಯ ಆರೋಗ್ಯವನ್ನು ಕಾಪಾಡಲು ಕೆಲವಾರು ಸಂಘ ಸಂಸ್ಥೆಗಳು ತಲೆಎತ್ತಿರುವು ಮತ್ತು ಇಗಲೂ ಸ್ಥಾಪನೆಯಾಗುತ್ತಲಿವೆ, ಎಂತೂ ಸಾಧನೆಯನ್ನು ಕಂಡಿತ, ಬಡವರ ಮೇಲೆ ಬಣ್ಣಗಟ್ಟಿ ಪ್ರಕಟಣೆಗಳು ಸಾರುತ್ತಿವೆ. ಎಲ್ಲಾ ಎದುರಿಗೆ ಬಡವನ ಹೆಸರಿನಲ್ಲಿಯೇ ಸಮ್ಮನ್ನು ಪ್ರದರ್ಶಿಸಿದೂ ಬೇಗಡೆಯಿಂದ ಕಮ್ಮ ಸ್ವಾರ್ಥಕ್ಕಾಗಿ ಬಡವನ ಮೇಲೆ ಕತ್ತಿಕಟ್ಟಿತ್ತಿರುವುದು ಎಲ್ಲೆಲ್ಲೂ ಕಂಡುಬರುತ್ತದೆ. ಉದ್ಯೋಗಸ್ಥರಿಗೆ ಬತನಾತಿಗರ ಸಂದರ್ಶನವೆಂದರೆ ಜೀರುಸ್ಲೆಯೊಗುವುದು. ಅವನ ಹಿತಾಪೇಕ್ಷೆಯಿಂದನ್ನರಿತು ವರ್ತಿಸದೆ, ಅವರ ಅಸೆಯನ್ನೂ ನೆರವೇರಿಸದೆ, ಬಡವರನ್ನು ಕಳೆಯುವುದು ನಿಜವೇ ದು ನಾವಿಲ್ಲಿ ಹೇಳಿದರೂ ನಂಬಲಾರರು. ಬಡಬಲ ಹೀನೆ ಬರೆವನಾಗಿರಿಂದು ನನ್ನ

ಪ್ಪು ಹುಡುಕಿ, ನನ್ನ ಮೇಲೆ ವಕ್ರದೃಷ್ಟಿ ಯಿಟ್ಟು ಬೀರದೇ ಇರಲಾರರೆನ್ನುವುದಕ್ಕೆ ಕೆಲವೆಗೆ ಈಗಾಗಲೇ ಹಲವು ನಿದರ್ಶನಗಳು ದೊರೆತ್ತಿವೆ.

ಹಿಂದೂಸ್ಥಾನದೇ ಆಹಾರಭಾವದಲ್ಲಿ ಸಿಲುಕಿ ಬೆಂದಹೋಗಿದೆ! ಆಹಾರದ ಆ ಭಾವವನ್ನು ಕುರಿತು 'ಹೆಚ್ಚು ಬೆಳೆಯಿರಿ' ಎಂಬ ಸ್ಕೀಮ್ ತೆರೆಯಲ್ಪಟ್ಟು ಸಾಧಿಸಿದ್ದೇನು? ಕಾಯುವೆಯೇ ಯೋಗ್ಯವಾಗಿದ್ದರೂ ನಿರ್ವಹಿಸುವವರು ಅಯೋಗ್ಯರಾದ ಮೇಲೆ, ನವುಗೆ ಅದರಿಂದ ದೊರಕುವ ಫಲ ತೀರಾಲೂ ಆಷ್ಟೆ! ವ್ಯವಸಾಯ ಇಲಾಖೆಯು 'ಹೆಚ್ಚು ಬೆಳೆಯಿರಿ' ಎಂಬುದಕ್ಕೆ 'ಕಂಪೋಷ್ಟು' ಸ್ಕೀಮ್ ತೆರೆದು ಅಷ್ಟು ಗೊಬ್ಬರ ಹುಕಿತು. ಆಲ್ಲೂ, ಇಲ್ಲೂ ಬೀದಿಗಳಲ್ಲೂ, ಸಂದಿಗಳಲ್ಲೂ ಪ್ರಕಟಣಾಪತ್ರಗಳೂ ಅಂಟಿಸಲ್ಪಟ್ಟವು. ಊರ ಹೊರಗಿನ ರಸ್ತೆಯ ಸಮೀಪ 'ಕಂಪೋಷ್ಟು' ಹೊಂಡವನ್ನು ತೋಡಿದರೂ ಹಲ ಕೆಲವು ಶ್ರೀಮಂತ ಬಂಧುಮಿತ್ರರಿಗೆ ಬಹುಮಾನ ಹಂಚಲ್ಪಟ್ಟಿತು. ಹೆಚ್ಚು ಬೆಳೆಯಿರಿ ಎಂಬುದು ಹೆಚ್ಚು ತಿಂದು ಬೆಳೆಯಿರಿ ಎನ್ನುವ ಮಟ್ಟಕ್ಕೆ ಇಳಿಯಿತು. ಆ ಸ 'ರೇಷನ್' ಕುಬ್ಬಳಿಸಿ ಮನೆಬಾಗಿಲಿಗೆ ಬಂದು ನಿಂತಿತು ಕಂಟ್ರೋಲು, ಬ್ಲಾಕ್ ಮಾರ್ಕೆಟ್, ಅಂಗಡಿಯ ಬಾಗಿಲ ಮುಂದೆ ಕಬ್ಬಿಣದ ಪರದೆಯಸ್ಥೆಯಿತು.. ಆದರೆ ಇದರಲ್ಲಿ ನೊಂದವರು, ಬೆಂದವರು ಯಾರು? ಬಡವರು. ಅದರಲ್ಲೂ ನಾಡಿನ ಬಡ ಜನತೆಯಲ್ಲವೆ? ನಾಡು ಎಂದಾಗ ಶ್ರೀಮಂತತನದ ಅಗರವೆ? ಅಥವಾ ನಾಡಿನಜೀವಿಗಳೆಲ್ಲಾ ಸ್ವಾವಲಂಭಿಗಳೆನ್ನುವುದೆ? ಇಲ್ಲ. ಕಂಡಿತವಾಗಿಯೂ ನಾಡಿನ ಪ್ರಸ್ತುತ ಸನುಯವು ಕಠೋರವಾಗಿದೆ. ಆಹಾರ ವಿಷಯದಲ್ಲಿಯೂ, ಜನಸು ಮೊದಲಾದ ದೈನಂದಿನ ಸಾಮಾನುಗಳಿಗೆ ಒಂದಕ್ಕೆರಡರಷ್ಟು ಕೊಟ್ಟು ಅಕ್ಕನ ಹಳ್ಳಿಯ ವಿಪರೀತ ಧಾರಣೆಯು ಜಿಲ್ಲರೆ ಅಂಗಡಿಯಿಂದ ಪಡೆಯುವನು. ಊರಿನಲ್ಲಿರುವ ಒಂದೆರಡು ಶ್ರೀಮಂತರನ್ನು ಬಿಟ್ಟು ಬಡ ಜನತೆಯು ಪರಿಸ್ಥಿತಿಯು ಅಸಹನೀಯವಾಗಿದೆ.

ಹಿಂದೊಮ್ಮೆ ಪತ್ರಿಕೆಯಲ್ಲಿ ನಾಡಿನಜೀವನಾಡಿ ಸಡಿಲವಾಗಿದೆಯೆ? ಎಂಬ ಪ್ರಾಮುಖ್ಯ ವಿಷಯವನ್ನು ಯೂರೋ ಖರೆದಿರುವುದನ್ನು ಓದಿ ನೋಡಿದೆ, ಆದರಲ್ಲಿ ಕೇವಲ ಕೆಲವು ವಿಷಯಗಳು ಮಾತ್ರ ಬರೆದಿದೆ ಎಂದು ನಾನು ಹೇಳಲೇಬೇಕಾಗಿದೆ. ಇಂದಿಗೆ ನಾಡಿನ ಏಳಿಗೆಗೆ ರೈತನ ನೆರವಿಗೆ ಪೆಚ್ಚಿಗೆ ಪ್ರಧಾನವಾದ ಸಂಸ್ಥೆ ಎಂದರೆ ರೆವಿನ್ಯೂ ಇಲಾಖೆ. ಇಂಥಾ ಪ್ರಯೋಜನದಾಯಕ ಇಲಾಖೆಯು ರೈತನಿಗೆ ಹೆಚ್ಚಿಗೆ ಪ್ರಯೋಜನವನ್ನೂ ಮಾಡದೆ, ಕರುಕಂದಾಯವನ್ನು ಹೆಚ್ಚಿಗೆ ವಸೂಲುಮಾಡುವ ದರಖ್ಷಿಯೇ ರಾಜಹರಣ ಮಾಡುತ್ತಿದ್ದಲ್ಲಿ ರೈತನ ಗತಿ ಏನಾಗಬೇಕು? ರೆವಿನ್ಯೂ ಇಲಾಖೆಯಿಂದ ಬಡವರಿಗೆ ಹಿತವಾಗುತ್ತಿಲ್ಲ. 'ಹೆಚ್ಚು ಬೆಳೆಯಿರಿ ಸೈಸಾರಿ ಸ್ಥಳಗಳನ್ನು ಕಾಯಸುದಾರರಿಗೆ ವಂಜೂರು ಮಾಡುವೆಂದು ಮೇಲ ಧಿಕಾರಿಗಳು ಹೇಳುತ್ತಿದ್ದಾರೆ. ಆದರೆ ಆ ಮಾತಿನ ಭರವಸೆಯೂಗಿ ರೆವಿನ್ಯೂ ಡಿಪಾರ್ಟ್‌ಮೆಂಟಿಗೆ ಅರ್ಜಿ ಮಾಡಿದ್ದಲ್ಲಿ ತಿರಸ್ಕಾರವಲ್ಲದೆ ಪುರಸ್ಕಾರವಿಲ್ಲ ಇಲ್ಲದಿದ್ದಲ್ಲಿ 'ಕೊರ'ಗಳೆಂಬ ಬಿಚ್ಚಿದ ಕಂತೆಯು ಸಾಧ್ಯವಾದಷ್ಟು ಕಾಡುವುದು ಇದರಲ್ಲಿಯೂ ವಿಚಾರಸ್ಸು ಹೊಂದಿದ 'ಪೇಪರು' ಅದೃಶ್ಯವಾಗುವುದು ಇದೆಯಂತೆ! ಇಷ್ಟರಲ್ಲಿ ಇದು ಪಾರುಪತ್ಯಗಾರದಿಂದ ಮೇಲಾಧಿಕಾರಿ ಗಳ ಭೇದಾರಕ್ಷಿಗೆ 'ಪ್ರಾಪರ್ ಚಾನಲ್' ಪ್ರಕಾರಹೋಗುವುದಂತೆ! 'ಕೊರ'ಗಳೆಂಬ ಭೀಕರ ಬಾಣಗಳ ಧನಸ್ಸುಧಾರಿ ತಾಲೋಕು ಸುಭೆದಾರರೆಂದು ಇತ್ಯೀಚಿಗೆ ಸಂಸ್ಥೆಯ ಒಳಗುಟ್ಟನ್ನು ತಿಳಿದ ನನ್ನಂತವನಿಗೆ ತಿಳಿಯಿತು. ಸುಭೆದಾರರೇ ರೆವಿನ್ಯೂ ಡಿಪಾರ್ಟ್‌ಮೆಂಟಿನ ಸೂತ್ರಧಾರರು. ಆದ್ದರಿಂದ ಸುಭೆದಾರರನ್ನು ಸಂದರ್ಶಿಸದಿದ್ದಲ್ಲಿ ಕಾರ್ಯಸಿದ್ಧಿಯಲ್ಲ ವೆಂದು ಮೊನ್ನೆ ಶತ್ರುಭೋಗರು ಸಹ ಒತ್ತಾಯಮಾಡಿದರು. ಈ ವಿಷಯಗಳನ್ನು ಸುನುಸ್ಯ ಸಾರ್ವಜನಿಕರಿಗೆ ತಿಳಿಯಲೋಸುಗ ಬರೆದಿರುವುದಾಗಿದೆ. ಇನ್ನು ಮುಂದಾದರೂ ರೆವಿನ್ಯೂ ಸಂಸ್ಥೆಯ ಬಗ್ಗೆ ಸಾಕಷ್ಟು ಸಾಕ್ಷ್ಯಗಳನ್ನು ಕೊಟ್ಟು ವಾದಿಸುವುದೇ ನನ್ನ ಈ ಪ್ರಥಮ ಲೇಖನದ ಉದ್ದೇಶವಾಗಿದೆ. ಹತ್ತು ವರ್ಷದಿಂದ 'ಪೆಂಡಿಂಗ್'ನಲ್ಲಿ ಕೊಳೆತ ಪೇಪರುಗಳೂ ಬೇಕಾಷ್ಟಿವೆ! 'ಹೆಚ್ಚು ಬೆಳೆಯಿರಿ' ಎಂದೆನ್ನುವುದು ಸರಕಾರ! ಜಾಗಕೊಡದಿರುವುದು ಸರಕಾರ! ಇದು ಯಾವ ನೀತಿ? ಈ ಸಂಸ್ಥೆಯ ಮೇಲಾಧಿಕಾರಿಗಳು ಕೆಳಗಿನ ನೌಕರರನ್ನು ವಿಚಾರಿಸುವುದಿಲ್ಲವೇ? ಅವರು ನ್ಯಾಯಪೂರ್ಣವಾಗಿ ವಿಚಾರಣೆ ಮಾಡುವುದಾದರೆ 'ರೆವಿನ್ಯೂ' ಸಂಸ್ಥೆಯ ವಿಷಯ ಕೂಗು ಕೇಳಿ ಬರುವುದಕ್ಕೆ ಅಷ್ಟದ ದೊರಕುತ್ತಿತ್ತೆ? ಈ ವಿಷಯವಾಗಿ ಕೌನ್ಸಿಲ್‌ನಲ್ಲಿ ಪ್ರಶ್ನೆ ನಡೆಯುವುದಿಲ್ಲವೆ? ಕೌನ್ಸಿಲ್ ಮೆಂಬರುಗಳಿಗೆ ಸವಾಲು ಕೇಳಲು ನಾಕು ಈಗಾಗಲೇ ತಯಾರಿಸಿದ ಪ್ರಶ್ನೆಯ ಸುರುಳಿಯನ್ನು ಕಂಡಿತವಾಗಿಯೂ ಕಳುಹಿಸುವೆನು ಇಲ್ಲದಿದ್ದರೆ ಹೆಚ್ಚು ಬೆಳೆಯನ್ನು ಎಲ್ಲಿ ಬೆಳೆಸುವುದೆಂದು ಹೇಳಲಿ? ಗೋಡೆಗಳ ಮೇಲೆ ಪ್ರಕಟಣಾಸಕ್ತಿಕೆಗಳ ಮೇಳೆಯೇ? ಅಥವಾ ನೃತ್ಯಪತ್ರಿಕೆಗಳ ಮೇಲೆ ಬೆಳೆಸುವುದೋ? ಅಧಿಕಾರಿಗಳು ಸಾರ್ವಜನಿಕ ಸಭೆಗಳಲ್ಲಿ ಮಾಡುವ ಭಾಷಣಗಳಿಂದಲೋ?

'ಮುಕುಂದ.'

ಪಾಕಿಸ್ತಾನದ ಮುಖ್ಯ ಮಂತ್ರಿ
ಲಿಯಾಖತ್ ಆಲಿಖಾನರ ಅಮಾನುಷ ಕೊಲೆ.

ಕಾರೀಕಳ ೧೬ರ ಮಧ್ಯಾಹ್ನ ಪಾಕಿಸ್ತಾನದ ಮುಖ್ಯ ಮಂತ್ರಿ ಲಿಯಾಖತ್ ಅಲಿಖಾನರನ್ನು ರಾವಲ್ಪಿಂಡಿಯಲ್ಲಿ ಗುಂಡಿಕ್ಕಿ ಕೊಲ್ಲಲಾಯಿತು. ಸ್ಥಾನಿಕ ಮುಸ್ಲಿಂ ಲೀಗಿನ ವತಿಯಿಂದ ಸೇರಿದ ಸಭೆಯಲ್ಲಿ ಲಿಯಾಖತ ಅಲಿಖಾನರು ಮಾತಾಡುತಿರಬೆಕ್ಕಿದ್ದರು. ಸುಮಾರು ಇಪ್ಪತ್ತು ಸಾವಿರ ಜನರು ಕೂಡಿದ್ದ ಸಭೆಗೆ ಲಿಯಾಖತ ಶರು ೩-೪ಗಂಟೆಗೆ ಆಗಮಿಸಿದರು. ಸ್ವಾಗತಪರ ಭಾಷಣಗಳು ನಡೆದ ನಂತರ ಲಿಯಾಖತರು ಸಭೆಯನ್ನುದ್ದೇಶಿಸಿ ಮಾತನಾಡಲು ಎದ್ದು ಕೆಲವೇ ಶಬ್ದಗಳನ್ನುಚ್ಚರಿಸಿದ್ದರು. ಅಷ್ಟರಲ್ಲಿಯೇ ಒಬ್ಬರ ಮೇಲೆ ಎಂಡು ಬಾರಿ ಗುಂಡುಗಳನ್ನು ಹಾರಿಸಲಾಯಿತು. ಗುಂಡು ಹಾರಿಸಿದವನ ಹೆಸರು ಸಯ್ಯದ ಅಕ್ಬರನೆಂದಿದ್ದು ಅವನು ಹೆಷ್ಕಾರಾದವನಿರುವನೆಂದು ತಿಳಿದು ಬಂದಿದೆ.

ಲಿಯಾಖತರ ಮೇಲೆ ಹಾರಿಸಿದ ಎರಡೂ ಗುಂಡುಗಳು ಎದೆಗೆ ತಗಲಿದ್ದು ಅವರನ್ನು ಒಬ್ಬೆಲೇ ಸಂಯುಕ್ತ ವಿಲಿಟರಿ ಆಸ್ಪತ್ರೆಗೆ ಸಾಗಿಸಲಾಯಿತು. ಅಲ್ಲಿ ಅವರಿಗೆ ರಕ್ತದಾನವನ್ನು ಮಾಡಿದರೂ ಏನೂ ಪ್ರಯೋಜನವಾಗಲಿಲ್ಲ ಅನಂತರ ಕೆಲವೇ ಹೊತ್ತಿನಲ್ಲಿ ಅವರು ತೀರಿಕೊಂಡರು. ಕೊಲೆಗಡುಕ ಸಯ್ಯದ್ ಅಕ್ಬರನನ್ನು ರಿವಾಲ್ವರ್ ಕೈಯ್ಯಲ್ಲಿದ್ದ ಹಾಗೆಯೇ ಜನರ ಗುಂಪು ಅಲ್ಲಯೇ ಕೊಂದುಬಿಟ್ಟಿತು.

ಲಿಯಾಖತರ ಹರಣದ ಸುದ್ದಿಯು ಕರಾಚಿಗೆ ಬಂದ ಕೂಡಲೇ ಪಾಕಿಸ್ತಾನಿಪ ಮಂತ್ರಿಮಂಡಲವು ಅವಸರದ ಸಭೆ ಸೇರಿತು. ಸಾರ್ವತ್ರಿಕ ಶೋಕಾಚರಣೆಯನ್ನು ೪೮ ದಿನಗಳ ವರೆಗೆ ಆಚರಿಸಲಾಗುವುದೆಂದು ತಿಳಿದು ಬಂದಿದೆ. ಪಾಕಿಸ್ತಾನದಲ್ಲಿ ೩ ದಿನಗಳ ಹಿಂದೆ ರಾಷ್ಟ್ರೀಯ ಬಾವುಟವನ್ನು ಅರ್ಧದ ವರೆಗೆ ಇಳಿಸಲಾಗಿತ್ತು.

" ಲಿಯಾಖತರ ಮೃತ ಶರೀರವನ್ನು ತಾ|| ೧೬ರ ರಾತ್ರಿ ಕರಾಚಿಗೆ ತಂದು ಮರು ದಿನ ಮಧ್ಯಾಹ್ನ ಅಂತ್ಯಕ್ರಿಯೆಯನ್ನು ನಡೆಯಿತು. ಅವರನ್ನು ಮಹಮ್ಮದಾಲಿ ಜಿನ್ನರವರ ಪಕ್ಕದಲ್ಲಿ ಸಂಸ್ಕಾರ ಮಾಡಲಾಯಿತು.

ಈಗ ಪಾಕಿಸ್ತಾನ ಮುಖ್ಯ ಮಂತ್ರಿಯಾಗಿ ಹಿಂದೆ ಗವರ್ನರ್ ಜನರಲ್ ಆಗಿದ್ದ ಜ|| ನಾಝಿಮುದ್ದೀಪರನ್ನು ನೇಮಿಸಲಾಗಿದೆ. ಗವರ್ನರ್ ಜನರಲ್ಲರಾಗಿ ಹಿಂದಿನ ಆರ್ಥಿಕ ಮಂತ್ರಿ ಗುಲಾಮ್ ಮಹಮ್ಮದರನ್ನು ನೇಮಿಸಲಾಗಿದೆ.

ವಿಧವೆಯಾದ ಬೇಗಂ ಲಿಯಾಖತ್ ಆಲಿಯವರಿಗೆ ಮಾಸಿಕ ೨೦೦೦/- ರೂ ವೇತನವನ್ನೂ, ಉತ್ತರು ಬಂಗ್ಲೆಯೊಂದನ್ನೂ ಪಾಕಿಸ್ತಾನ ಸರಕಾರ ಏರ್ಪಡಿಸಿದೆ ಹುಲ್ಲಬೆ ಅವರ ಇಬ್ಬರು ಮಕ್ಕಳ ವಿದ್ಯಾಭ್ಯಾಸದ ಜವಾಬ್ದಾರಿಯನ್ನೂ ಸರಕಾರ ವಹಿಸಿಕೊಂಡಿದೆ.

ಶ್ರೀ ಕೆ. ಯಂ. ಮೊಗಪ್ಪನವರು,
"ಕೊಡಗು" ಏಜೆಂಟರು,
ಸೋಮವಾರಪೇಟೆ.

ದಿ ಟ್ರಾಪಿಕಲ್
ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮುಖ್ಯ ಖಚೇರಿ:—ಹೊಸ್ಪೆಟೆಲ್ಲಿ.

52-25 ಸ್ಥಾಪಿಸಿದ ಪೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮಲಖಾನ್. ಡಾ|| ಎಂ. ಎ. ಅನ್ಸಾರಿ.

Transacts:--LIFE, FIRE, MOTOR and MARINE.

ಬ್ರಾಂಚ್ ಸೆಕ್ರೆಟರಿ,
ಹಂಪನಕಟ್ಟೆ, ಮಂಗಳೂರು.

ಶ್ರೀಮಂಗಲನಾಡು ಸಹಕಾರಿ ಬ್ಯಾಂಕು ಲಿಮಿಟೆಡ್, ಹುದಿಕೇರಿ.

ಬ್ಯಾಂಕಿನ ಬಡ್ಡಿಯ ದರವನ್ನು ಈ ಕೆಳಗಿನಂತೆ ನಿರಿಸಲಾಗಿದೆ.

ಎಲ್ಲಾ ಡಿಪಾಜಿಟ್ಟುಗಳನ್ನು ಅಂಗೀಕರಿಸಲಾಗುತ್ತೆ.

೧ ವರ್ಷದ ನಿರಖು ರೇವಣಾತಿಗೆ—	....	೨½%
೨ ವರ್ಷದ —	....	೩%
೩ ,, —	....	೩½%
೪ ,, —	....	೪%
೫ ,, —	....	೪½%
೫ ವರ್ಷದ ಮೇಲ್ಪಟ್ಟು ಡಿಪಾಜಿಟ್ಟಿಗೆ—	....	೫½%

ಹೆಚ್. ಸಿ. ನಂಜಪ್ಪ,
ಗೌ. ಕಾರ್ಯದರ್ಶಿ.

4-4

ಸೋಮವಾರಪೇಟೆ ನಾಡಿನ ಜನತೆಯಲ್ಲಿ ಒಂದು ವಿನಂತಿ.

ಹಲವಾರು ವರ್ಷಗಳಿಂದ ಕೊಡಗಿನ ಶಾಂಗ್ರೀಸ್ಲಿನಲ್ಲಿ ಎರಡು ಪಕ್ಷಗಳು ಉದ್ಭವಿಸಿರುವುದು ಎಲ್ಲರಿಗೂ ತಿಳಿದ ವಿಚಾರ. ಕೊಡಗನ್ನು ಎಂದಿನಂತೆ ಪ್ರತ್ಯೇಕವಿರಿಸಿ ನಮ್ಮ ದೇಶದ ಅಡಳಿತೆಯನ್ನು ನಾವೇ ನಿರ್ವಹಿಸಲು ಸಾಧ್ಯತೆಯಿದೆಯೆಂಬುದೊಂದು ತಂಡ. ಹಾಗೂ ಕೊಡಗನ್ನು ನೆರೆ ಪ್ರಾಂತಗಳಾದ ಮೈಸೂರು ಇಲ್ಲವೆ ಕರ್ನಾಟಕಕ್ಕೋ ಸಂಯೋಜಿಸಬೇಕೆಂಬ ಹವಣಿಕೆಯುಳ್ಳಿರುವ ಇನ್ನೊಂದು ಹಂಗಡ. ಹೀಗೆ ಪಕ್ಷ ಪ್ರತಿಪಕ್ಷಗಳ ನಡ್ವೆ ಕೊಡಗಿನ ಭವಿಷ್ಯವು ಬೃಹತ್ಪಮಸ್ಯೆಯಾಗಿ ನಮ್ಮ ಮುಂದೆ ನಿಂತಿತೆ. ಆದರೆ ಕೇಂದ್ರ ಸರಕಾರದವರು ನಮ್ಮ ದೇಶದ ಭವಿಷ್ಯತ್ತನ್ನು ನಿರ್ಧಾರ ಮಾಡುವ ಜೋನಿಯನ್ನು ನಮ್ಮ ದೇಶದ ಜನತೆಯ ಪಾಲಿಗೆ ಬಿಟ್ಟಿರುವುದು ಬಾಂಬಾ ಶ್ಲಾಘನೀಯ. ಅಂತಹ ನಿರ್ಧಾರ ಮಾಡುವ ಸುಸಂಧಿಯು ನಮಗೆಂದೂ ಕಾಣಿಸಿಲ್ಲ. ಚುನಾವಣೆಯಲ್ಲೆಂಬುದು ಜಪಸಾಮಾನ್ಯರಿಗೆ ತಿಳಿದ ವಿಷಯ.

ಕೊಡಗಿನಲ್ಲಿ ಎಲ್ಲಾ ವಿಧವಲ್ಲಿಯೂ ಯಾವ ಕೋಮಿನವರೇ ಇರಲಿ, ಹಿಂದುಳಿದ ಜನತೆಯೆಂದರೆ ಸೋಮವಾರಪೇಟೆ ನಾಡಿನವರು. ನಮ್ಮ ಸುತ್ತಲಿನ ವಿಶೇಷತೆಯಿಂದ ಇಗ ತಾನೆ ಸೋಮವಾರಪೇಟೆಯು ಪ್ರಿ ಒಂದು ಹೈಸ್ಕೂಲು ಸ್ಥಾಪನೆಯಾಗಿ ವಿದ್ಯೆಯಲ್ಲಿ ಕ್ರಮತೆ ನಾವು ಮುಂದಡಿಯಿಡುತ್ತಿದ್ದೇವೆ. ಆದರೂ ಸಹ ಇತರ ಜನಾಂಗದವರಂತೆ ಸರ್ವಾಖಾನಿನಲ್ಲಿ ಸರಿ ಸಮಾನತೆ ಪಡೆಯಬೇಕಾದರೆ ಈಗ ವಿಳಂಬವಿದೆ. ಜನತೆಯು ವಿದ್ಯಾ ಭಿವೃದ್ಧಿ ಇನ್ನೂ ಅನೇಕ ರೀತಿಯ ಶ್ರೇಯಸ್ಸಾಧನೆಗೆ ನಮ್ಮ ಮುಂದಿದೆ. ಜಪಸ್ಥಳಗಳ ತಕ್ಕ ಪರಿಹಾರೋಪಾಯವನ್ನು ಕಂಡು ಹಿಡಿಯುವುದು ನಮ್ಮ ಆದ್ಯ ಕರ್ತವ್ಯ ಸದ್ಯಸ್ಥಿತಿ ಇರುವ ಈ ಸಂಭೋದನಲ್ಲಿ ನಿರ್ದಾಕ್ಷಿಣ್ಯವಾಗಿ ಕುಟ್ಟು ಕುರುಡರಂತಿರುವ ನಮ್ಮ ಎಲ್ಲಾ ಜನತೆಯ ಮಧ್ಯೆ ಒಕ್ಕಣ್ಣನೆ ಎಂಬ ರಾಜನಂತೆ (among the blind one eyed is the King) ಹಲ ಕೆಲವು ದೂರಾಗ್ರಹಿಗಳು ಆತ್ಮಬಲ್ಲಿ ಮಾತ್ರ ಕೊಡಗನ್ನು ಮೈಸೂರಿಗೋ ಇಲ್ಲವೇ ಕರ್ನಾಟಕಕ್ಕೋ ಸೇರಿಸುವುದನ್ನೇ ತಮ್ಮ ಮುಖ್ಯ ಧ್ಯೇಯವನ್ನಾಗಿಟ್ಟು ಕೊರದ ಮೇಲಲ್ಕೆ ಪ್ರತ್ಯೇಕ ರಾದಿಗಳ ಸೋಗಿನಲ್ಲಿ ಊರೂರು ತಿರುಗಿ ನಾವೂ ಕೂಡ ಪ್ರತ್ಯೇಕವಾದಿಗಳು, ನಿಮ್ಮೆಲ್ಲರ ಪರ ನಿಮ್ಮ ಸಿಂಪಿಗೆಯ ನಿಳಿಗೆಗಾಗಿ ನುಡಿಯಲು ಬಿಂಕ ಕಟ್ಟಿದ್ದೇವೆ ಬಿವೇ ಮೊದಲಾಗಿ ಎನ್ನೂ ಆರಿಯದ ಜನತೆಗೆ ಬೋಧಿಸಿ ಅವರನ್ನು ವಂಚಿಸಲಾದ್ಯಕ್ಕಾಗಿರುವುದು ತುಂಬಾ ವಿಷಾದಕರ. ಕೊಡಗನ್ನು ಪ್ರತ್ಯೇಕವಿರಿಸುವುದರ ಇಲ್ಲವೇ ಬೇರೆ ಯಾವುದಾದರೂ ಪ್ರಾಂತಕ್ಕೆ ಪರೀಕರಿಸುವುದರ ಹಿತಾಹಿತ ಸಾಧಕ ಬಾಧಕಗಳನ್ನು ನಿಮ್ಮೆಲ್ಲರ ಮುಂದಿಡಬೇಕೆಂಬ ಕಾಂಕ್ಷೆಯಿಂದ ಈ ಲೇಖನವನ್ನು ಬರೆಯಬೇಕಾದ ಸಂದರ್ಭವೊದಗಿತು.

ಸರ್ವರಿಗೂ ವಿಪಥ ವಿಯಂತೆ ನಾವು ಎಲ್ಲಾ ಖ-ವಿನಲ್ಲಿಯೂ ಹಿಂದುಳಿದು ನಂಬಲಿಗುಂಪಾರಿನ ಜನತೆ ಈಗಿಗ ನಾವು ಧೃಡವಾಯ, ವಿದ್ಯೆ, ಶಿಚಿತ್ವ, ಆರೋಗ್ಯ ಪರಿವಾಲನೆ, ವಾಗ್ದಟುತ್ವ ಇವೇ ಮೊದಲಾದವುಗಳಲ್ಲಿ ತುಸುಮಟ್ಟಿಗೆ ಜೀವಂತಿಕೆಯುಳ್ಳಿದ್ದೇವೆ ಜನತೆಯನ್ನಿ ಶ್ರೀಮಂತರು, ವಿದ್ಯಾವಂತರು, ಲೌಕಿಕ ಪರಿಜ್ಞಾನವುಳ್ಳವರು ತೀರಾ ನೂರಕ್ಕೆ ಎರಡೂ ಕೂಡಾ ಇಲ್ಲ ಬಹುಶಃ ಇದ್ದರೂ ಒಡ ಜನತೆಯನ್ನು ಗದರಿಸಿ ಬೆದರಿಸಿ ಅಂಕುಶ ಮೂಲೆಗೊತ್ತಿ ಕೈ ಗೊಂಬೆಗಳನ್ನಾಗಿ ಇಂಡಿಕೊಂಡಿರುವರ್ತರೆ ಅಷ್ಟರ ಇವ. ನನಸುಗ ಇನ್ನಾದರೂ ನಾವು ಎಚ್ಚರಗೊಳ್ಳಬೇಕು. ಜಾಗೃತ ರಾಗಬೇಕು. ನಮ್ಮ ಹಿತಸಾಧನೆಯಾಗ ಬೇಕು, ಹೀಗಿರುತ್ತ ಪ್ರತ್ಯೇಕೀಕರಣವಿರಲಿ ಯಾವ ಪ್ರಗತಿವನ್ನೂ ಸಾಧಿಸಲಿಕ್ಕೆಂಬುದನ್ನು ನಾವು ಗಾಢವಾಗಿ ಯೋಚಿಸಬೇಕಿದೆ.

ಕೊಡಗು ಇಡೀ ಭಾರತದ ಒಂದು ಚಿಕ್ಕ ಸ್ಥಾನಂತೆ ಇಂದೀ ಭೂಪ್ರಪಂಚ ಪರಿಸ್ಥಿತಿಯಿಂದ ಅತ್ಯವಶ್ಯಕವಾಗಿರುವುದು ಎಲ್ಲರಿಗೂ ತಿಳಿದ ವಿಷಯ ದೂರಪ್ರದೇಶಗಳಿಂದ ಆಮದು ಪದಾರ್ಥಗಳನ್ನು ರಿಸಿ ರಾಜಿಯೊಗಿ ಅಮದು ನೂಪಿದರೂ ಕೂಡ ಜನರ ಹಸಿವಿನ ಪೂರ್ಣಾಕಾರವನ್ನೈಧಿಗಳಲು ಸಾಧ್ಯವಾಗಿಲ್ಲ. ಆ ಕಾರಣದಿಂದ ದೇಶದ ಎಲ್ಲೆಡೆಯಲ್ಲಿಯೂ ರೇಷನ್ ಕಟ್ಟಳೆಯನ್ನು ಅಮಲಿಗೆ ತಂದಿತು. ಕೊಡಗಿನ ಪೊರೆ ಪ್ರಾಂತಗಳಲ್ಲಿನ ಜನತೆಯು ಆಹಾರಕ್ಕಾಗಿ ಪಡುತಿರುವ ಕಷ್ಟ ಚಿಂತ. ಜನತೆಯಾಗಿದೆ. ಕೊಡಗು ರೇಷನ್ ಕಟ್ಟಳೆಗೊಳಪಟ್ಟಿದ್ದರೂ ಕೂಡ ಹೊರ ಪ್ರಾಂತದ ಹಾಗೆ ಆಹಾರಕ್ಕಾಗಿ ಪರಿತಾಪ ಅವಶ್ಯಕತೆ ಈ ತನಕ ಕಂಡು ಬಂದಿಲ್ಲ. ಆ ಬಾಬಿನಲ್ಲಿ ಕೊಡಗು ಬೇರೆ ಪ್ರಾಂತಗಳಿಗಿಂತ ನಿವ್ಮೆದಿಯಲ್ಲಿರೆಯೆಂದು ಹೇಳ ಬಹುದು.

ಆದಿಯಿಂದಲೂ ಕೊಡಗು ಪ್ರತ್ಯೇಕ ವಿದ್ದಂ ಕನ್ನ ಅದಳಿತೆಯನ್ನು ಸುಸೂತ್ರವಾಗಿ ನಿರ್ವಹಿಸಿಕೊಂಡು ಬಂದಿರುವಂಥ ಒಂದು ಹೆಚ್ಚ ಪ್ರಾಂತ್ಯ ಈ ಕಾರ್ಯ ನಿರ್ವಹಣೆಯಲ್ಲಿ ಲೋಪದೋಷಗಳಿದ್ದಿರಬಹುದು ಪಕ್ಷಪಾತ ನಡೆದಿರಬಹುದು. ಹೇಗಿದ್ದರೂ ಹೊರ ಪ್ರಾಂತಗಳ ಆಡಳಿತೆಯು ಸ್ವಿಸುತ್ತಿಂತ ಶ್ರೇಷ್ಠ ಪರಿಕಾರವು ಉನ್ನತ ಮಟ್ಟದಲ್ಲಿರೆಯೆಂಬುದು ನಿರ್ವಿವಾದ. ನುಬಂಧವ ಚುನಾವಣೆಯ ಪಂಕರ ನಮ್ಮ ಸರಕಾರದ ಆಡಳಿತೆಯ ಹಿಡಿ ತವೆಲ್ಲಾ ಜೀವಾಯಿತ ವೆಂಬರರ ಕೈಗೆ ಸಿಗುತ್ತೆ. ಆಗ ಕೊಡಗಿನ ಸರ್ಕಾರವು ಇಸ್ಪೂ ಸುಭದ್ರವಾಗಿ ಪುವರಿಗೆ ಲವಲೇಶ ವಾದರೂ ಸಂಶಯವಿಲ್ಲ. ಈ ತನಕ ಸರ ಕಾರದ ಆಡಳಿತದ ಜವಾಬ್ದಾರಿಯೆಲ್ಲಾ ಕೊಡಗಿನ ಮಟ್ಟಾಧಿಕಾರಿ ಚೀಫ್ ಕಮಿಷನರ ಕೈಯಲ್ಲಿತ್ತು. ಆದ ಪ್ರಯುಕ್ತ ಜವತೆಯ ಅಭ್ಯುದಯಕ್ಕೆ ಕೆಲವಾರು ಸಂರಭಗಳಲ್ಲಿ ಆಡಚಣೆಯಿತ್ತು. ಆದರೆ ಇನ್ನು ಮುಂದೆ ಅವುಗಳೆಲ್ಲಾ ನೂರುವಾಗಿ ಜನತೆಯು ಶ್ರೀಮಂತ್ಯಾಧಿಕೆಯು ಜನತೆಯಿಂದಲೇ ಪಡೆಯುವ ಅವಕಾಶ ನಮಗೆ ದೊರೆಯುತ್ತದೆ. ಹೀಗಿರುವಾಗ ನಾವು ಇರುಳು ಕಂಡ ಹೊಂಡಕ್ಕೆ ಹಗಲು ಜೆರಾ ತ್ತಾಗಿ ಹಾರುವ ಹುಂಬಲ ಮೂಡಿ ಆರ್ಥಾತ್ ನೈಸೂರಿಗೊ ಇಲ್ಲವೇ ಬೇರೆ ಯಾವು ದಾದರೂ ಪ್ರಾಂತಕ್ಕೂ ಸೇರುವ ಮನಸ್ಸು ಮಾಡಿದರೆ, ಪ್ರತ್ಯೇಕವೇ ಇದ್ದು ಮುಂದೆ ನಮಗೊದಗಬಹುದಾದ ಸೌಲಭ್ಯ ಸಲಕ ರಣೆಗಳನ್ನು ಕಳೆದುಕೊಂಡು ತಾಯಿಯಿ ಲ್ಲದ ತಬ್ಬಲಿಗಳಾಗದಂತೆ ಜಾಗರೂಕರಾ ಗಬೇಕೆಂದು ಒತ್ತಿ ಹೇಳಬೇಕಿದೆ. ಎಲ್ಲ ದೆ ನಮ್ಮ ಹಾಗೂ ನಮ್ಮ ಮುಂದಣ ಪೀಳಿಗೆಗೆ ಯ ಹಿತಸಾಧನೆಗೆ ಒಂದು ದೊಡ್ಡ ಆತಘಾತ ಮಾಡಿದಂತಾಗುತ್ತ ದೆಂಬುದನ್ನ ನೆನಪಿನಲ್ಲಿಡಬೇಕು. ಹೊರ ಪ್ರಾಂತರ ಜೆಳ್ಳಿಗಳ ಸ್ಥಿತಿಗತಿ, ಜಪಂ ಸಂಕಷ್ಟ, ಜಕಂತ ಪಿ ಪರಿಶ್ರಮ ಇವನ್ನೆಲ್ಲಾ ನೋಡಿದರೆ ಎಂತಹ ನೂರ್ಮನಿನಾಗರೂ ಕೂಡ ಆ ಪ್ರಾಂತಕ್ಕೆ ಗೊಡವೆಯೇ ನಮಗೆ ಬೇಡ, ನಮ್ಮ ಕೊಡಗು ಪ್ರತ್ಯೇಕವಿರುವುದೇ ಒಳಿತು ಎಂದೆನಿಸದಿರಲಾರದು.

ಕಡೆಯದಾಗಿ ಒಂದು ಮಾತು ನಮ್ಮ ಸೋಮವಾರಪೇಟೆ ನಾಡಿನ ಜನತೆಯವ ಕೊಂಬಿಪವರೇ ಇರಲಿ, ಸರಾಬಡವರು, ಅಂಧಶ್ರದ್ಧರು, ಅವಿದ್ಯಾವಂತರು. ಹೀಗಿರುತ್ತ ನಾವು ನಮ್ಮ ಕೊಡಗನ್ನು ಅವರಿವರ ಮಾತಿಗೆ ಮಣಿ ಳಾಗಿ ಬೇರೆ ಯಾವುದಾದರೂ ಪ್ರಾಂತಕ್ಕೆ ಸೇರಿಸುವ ಮನಸ್ಸು ಮಾಡಿದರೆ ಇಷ್ಟು ಯುಗ ಯುಗಾಂತರಕ್ಕೂ ನಾವು ಮುಂದುವರಿಯುವ ಸಂದರ್ಭ ಬಗುವುದಿಲ್ಲವೆಂಬುದನ್ನು ಖಂಡಿತಾ ಮರೆಯಬಾರದು. ಆ ಕಾರಣ ನೀವೆಲ್ಲ ಯಾವ ಕಾರಣಕ್ಕೆ ಒಪ್ಪುವಿರಿ? ಪ್ರತ್ಯೇಕೀಕರಣಕ್ಕೊ ಅಥವಾ ವಿಲೀನೀಕರಣಕ್ಕೊ? ತೀವೇ ಯೋಚಿಸಿ ನೋಡಿರಿ.

ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ನಾವು ವಿಚಾರಿಸಿ ನಮ್ಮ ದೇಶವು ಪ್ರತ್ಯೇಕವಿರಲೇಬೇಕೆಂದು ನಾವೆಲ್ಲಾ ಒಮ್ಮನಸ್ಸಿನಿಂದ ನಾವು ಅರಿಸುವ ಪ್ರತ್ಯೇಕ ವಾದಿ ಹುರಿಯಾಳುಗಳನ್ನು ನಮ್ಮ ಅ ಪಲ್ಪಾವಾದ ಓಟುಗಳಿಂದ ಪ್ರೊತ್ಸಾಹಿಸಿ ಆವರ ಮುಖೇನ ನಮ್ಮೆಲ್ಲರ ಶ್ರೇಯಸ್ಸಾ ಧನೆಗೆ ಪಡಿಯಲು ಅವಗಶಕಾಶ ಕೊಡಬೇಕಾಗಿ ವಿನಂತಿ ಇವರಿದಾರ್

ಕೊಡಗಿನ ರಾಜಕೀಯ ರಂಗಭೂಮಿ.

ಕೊಡಗು ಪ್ರತ್ಯೇಕವಿದ್ದ ಕನ್ನ ಆಸ್ತಿ ತ್ವವನ್ನು ಕಾಪಾಡಿಕೊಳ್ಳಬೇಕು ಎಂಬ ಸೋ ದರ ಬೇರೊಂದು ಮೃ ತಪ್ರಜೆಯನ್ನೆ ವಿಲಿನೀಕರಿಸಿಕೊಳ್ಳಲಾಗಿ ಪನ್ನ ಪಾಸರಾಗಿ ಳನ್ನು ಕಂಡಿಕೊಂಡು ಒಂದ ನ್ಲೆ ರಂಗ ಟೆಲೋಪಾಯಿ ನೈಪ್ಪಿತ್ತನನ್ನು ನೈಜಿಸಿ ತನ್ನ ಪೂರ್ಣ ಅಧಿಪತ್ಯವನ್ನು ಮಜ್ಜ ಗೂಡುವ ಹೆಕ್ಕುದಾರಿಗಾಗಿ ಸಕಲೆಂ ಡು ಬಾಳುವುದೇ ಲೇಸೆಂಬ ಎಂಬುದನ್ನು ಪ್ರಜ್ಞಾವಾನ್ವಿತೆ ವಿವೇಚಿಸಬೇಕಾಗಿದೆ ಭಾರತ ವಿವೇಚನೆಯ ಪ್ರ ಹೆಜ್ಜಾಗಿ ಈ ದೇಶದಲ್ಲಿ ಅಸ್ತಿತ್ವದಲ್ಲಿರುವ ಸಂಸ್ಥಾನಗಳು ಪ್ರಜಾಭಿಪ್ರಾಯಕ್ಕೆ ಬಾಲ್ಯತೆಗನ್ನ ಪ್ರಜಾಪ್ರಭುತ್ವದ ಕೋ ಮುವಾದ ನೈಸ್ಥಿರಿಯನ್ನು ಉರ್ಜಿಟ್ಟು ನ್ಮ ಕ್ತಿಗಳ ನೇತೃತ್ವದ ಪೀಠ ಯಾ ಅವರ ಯೆಗಳನ್ನು ಪೂರ್ತಿ ನೈಜಿಸಿ ನೀರದ ಪಿಳಿ ಗೆಯನ್ನು ಬುಡಸಿ, ಅವ್ಯ ನಿಶ್ಚಿತ ಅಭಿ ವ್ಯಾಯಕ್ಕೆ ಬರುವುದು ಖಚಿತವೊಬ್ಬ ಬೇ ಕಬಾಂಧವನ ಕರ್ತವ್ಯವೆಂದರೆ ಬರೇ ಪ್ರ ಚಾರವೆಂದಾಗಲಾರದು. ಆದರೆ ಇಂದಿ ನ ವಿಶ್ವದಲ್ಲಿ ನೀತಿ, ಧರ್ಮ, ನ್ಯಾಯಾಗಳ ನ್ನು ಮುಲೆಗೊತ್ತಿ ಕ್ಯಕ್ತಿಗಳ ನೋಲಿರು ವ ಸಂದನ್ನು ತೀರಿಸುವ ಭ್ರಾಂತಿಯಿಂದ ದೇಶವನ್ನು ಧಾರೆ ಎರೆದ ಉದಾಹರಣೆ ಗಳು ಬೇಕಾದಷ್ಟು ಇವೆ. ಆದರಲ್ಲಿ ನ ಮ್ಮ ದೇಶದ ಪೂರ್ವ ಚರಿತ್ರೆಯನ್ನು ಬೆಗೆ ದು ನೋಡಿದರೆ ಇಂಥಾದ್ದ ಅನೇಕ ಇವೆ. ಇಂಥಾ ಒಂದು ಭ್ರಮಣದಿಂದ ನಮ್ಮ ಪ್ರಾಂತ್ಯವೆ ಹೊರ ಬರಬೇಕಾದ ಒಂದು ನಿರ್ಧಾರವನ್ನು ನಮ್ಮ ಮುಂದಿನ ಚುನಾ ವಣೆಯಲ್ಲಿ ಪ್ರದರ್ಶಿಸಬೇಕಾಗಿದೆ ಆಗ ಮು ಖ್ಯವಾಗಿ ಮತದಾರರೇ ಮತ್ತು ಗಣ ರಾಗಿ ನಿಲ್ಲುವವರ ವರ್ತನೆ ಹೇಗಿರಬೇಕೆಂ ಬುದನ್ನು ಸ್ವಲ್ಪ ವಿವರಿಸಬೇಕಾಗಿದೆ

ಪದಸ್ಯರಾಗಿ ನಿಲ್ಲುವವರಲ್ಲಿ ಕೆಲವರು ತನ್ನ ನಿರ್ದಿಷ್ಟ ಅಭಿಪ್ರಾಯಗಳನ್ನು ದೇಶೀ ಯರ ಮುಂದಿಟ್ಟು ಪ್ರಜಾರ ಮಾಡ ವರು ಆಗ ಇನ್ನು ಕೆಲವರು ಭಿನ್ನಾಭಿಪ್ರಾಯ ಗಳನ್ನು ಪೇಳಿಕ್ಕ ಮತದಾರನ್ನು ಪಂಚಿ ಸುವುದು ಒಂದಾ ರೀತಿ. ಇಂದಿನ ಜುನಾ ವಣೆಯಲ್ಲಿ ಪ್ರಾಪ್ತ ನೇತದಾನಿಸಿದನರಲಿಂ ದ ಪೆಟ್ಟಿಗೆ ಮಟ್ಟಿಸಿದ ಮತದಾರರೇ ನಿರಕ್ಷರ ಕ ಕ್ಷಿಗಳಾಗಿರುವುದರಿಂದ ಅವರನ್ನು ಲಂ ಚಗಳಿಸಿದಿಂದಲೂ ಕಷ್ಟ ಪ್ರಚಾರಗಳಂ ದಲೂ ಕಾಪಾಡಿಕೊಳ್ಳಲಿರುವಷ್ಟೂ ಮತ್ತು ಅವರ ಸ್ಥಿರಗೂ ಕಷ್ಟ ದಾಯಿಗೆ ಎಳೆ ಯದಿರುವುದು ಮುಂದಿನ ಪ್ರಜೆಗಳ ತ್ತ ಜೀವನಕ್ಷೇಮ ನಾವು ಪೌರರೆಂಬ ಪ್ರಜ್ಞೆಯಿಂದ ಅವರು ಕರ್ತವ್ಯ ನಿರ್ವಹಿಸಬೇಕಾಗಿದೆ. ಈ ಸಂದರ್ಭದಲ್ಲಿ ಪತ್ರಿಕೆಗಳಲ್ಲೂ ಮತ್ತು ಒಳ್ಳಿಳಿ ಬಾಷಣಗಳ ಮೂಲಕವೂ ಪ್ರಚಾರ ಆಗಿಂದಾಗ್ಗೆ ಆಗುತ್ತಾ ಇರಬೇಕ ಇಂ ದಿನ ಚ ನಾವಕರ್ಗಳಲ್ಲಿ ಹೆಚ್ಚಿನ ಮಹತ್ವ ಅಪೇಕ್ಷಿಸುತ್ತಾರೆ ಇರುವುದನ್ನು ಮತದಾರ ರು ವಿವೇಚಿಸಿ ಆಕರ್ಷಣೆಯಿಂದ ಕೇಳಿ ತಿಳಿದುಕೊಳ್ಳಬೇಕಾಗುವುದು. ಆಲ್ಲದೆ ತನ್ನ ಮತವನ್ನು ಯಾವದಾದರೂ ವ್ಯಕ್ತಿ ಯು ಬಂದು ಕೇಳಿದಾಗ್ಗೆ ಅವನ ಖಚಿತ ಅಭಿಪ್ರಾಯವನ್ನು ಜೆನ್ನಾಗಿ ತಿಳಿದುಕೊ ಳ್ಳಬೇಕು. ಅಸಾಪ್ರಕಾರಗಳು ಇನ್ನಾದೂ ಅವನ್ನು ಇತರರಿಂದ ತಿಳಿದು ವಿವರಿಸಿ ವರ್ತನೆಯಾದಾಗ ಇನ್ನೊಂದು ವಿಷ ಯ. ಆಗುದರಿಂದ ನಮ್ಮ ಕೊಡಗಿನ ಮುಂದಿನ ಜೀವನಾಭಿವೃದ್ಧಿಯ ಈ ತಳಹದಿ ಯ ಮೇಲಿರುವುದರಿಂದ ಭಾವದ್ವೇಷ ನ್ಯೇಷಮದಿಂದಾಗಲೀ, ದ್ವೇಷದ ಫಲವಿಂ ದಾಗಲಿ, ಸರಾ ಕಾಂಚಾಣದ ಮೋಹ ವಿ ದಾಗಲೀ ತಮಗೆ ಕೊಡಲೇಕಾದ ನೈ ಕ್ಯಿಗಳಿಗೆ ಕೊಡದೆ, ಬೇರೆಯೊಬ್ಬರಿಗೆ ಕೊ ಟ್ಟರೆ ನಮ್ಮ ಆತ್ಮವನ್ನು ವಂಚಿಸಿದಲ್ಲದೆ ತನ್ನ ಮತವನ್ನು ಸದುಪಯೋಗ ಮಾಡಿ ದಂತಾಗುವುದಿಲ್ಲವೆಂಬುದನ್ನು ಮರೆಯ ಬಾರದು.

ಈಗಿನ ವಿಶ್ವದ ಜನರ ವರ್ತನೆ ಹೇಗಿದೆಯೆಂದರೆ ಶಿಕ್ಷ ವಿಜ್ಞಾನಿ ಪ್ರೊಫೆಸರ್ ಆಲ್ಬರ್ಟ್ ಸ್ಕ್ವೈಟ್ಜರ್ ಹೇಳಿದಂತೆ "At present we glorify success instead of sacrifice" ಎಂದು ಹೇಳಿರುವರು. ಅಂದರೆ ಅಧುನಿಕ ಸನ್ನಿವೇಶದಲ್ಲಿ ತ್ಯಾಗ ಶ್ರೇಷ್ಠ ಜಯವನ್ನು ಕೊಂಡಾಡುವುದು ರೂಢಿಯಾಗಿದೆ. ಆದುದರಿಂದ ನ್ಯಾಯೋ ನೈತಿಕತೆ, ತ್ಯಾಗ, ನೀತಿ, ಧರ್ಮಗಳನ್ನು ಪಾಲಿಸುವ ಸದಸ್ಯರಿಗೆ ಮತದೀಯರು ಬೇಕು. ಕೊನೆಯಪಕ್ಷವಾಗಿ ಹೇಳುವಹಾಗೆ ಲೋಕವೊನ್ಯತೆಯನ್ನು ಪಡೆದ ಶೇಕ್ಸ್‌ಪಿಯರ್ ಕವಿಯೂ ತನ್ನ ಒಂದು ನಾಟಕದಲ್ಲಿ ಈ ವಿಶ್ವವು ಒಂದು ನಾಟಕ ಶಾಲೆ. ಇಲ್ಲಿ ಪ್ರತಿಯೊಬ್ಬ ವ್ಯಕ್ತಿ ಒಂದಲ್ಲ ಒಂದೂ ರೀತಿಯ ವೇಷ ಧರಿಸಿ ತನ್ನ ಪಾತ್ರವನ್ನು ಜೀವದ ಹಿತಕ್ಕೋ ಮೂಸವನ ಹಿತಕ್ಕೋ ಅಥವ ಅವಶ್ಯಕತೆಗೋ ಮಾಡಿ ಹೋಗುವುದಿದೆ. ಆದುದರಿಂದ ಈ ಇಳೆಯೆಂಬ ನಾಟ್ಯರಂಗದೊಳಗೆ ನಾನಾ ಭಿನ್ನವೇಷಗಳ ತೊಟ್ಟು ಧರಿಸಿ ಹೋಗುವಾಗಿದೆಯೆಂಬುದನ್ನು ಅರಿತು ತಮ್ಮ ಅತ್ಯಕ್ಕೆ ಸಮಾಧಾನ ಕೊಡುವ ಕೆಲಸವನ್ನು ಹುಡುಕುವ ಚಿಂತನವನ್ನೆಯಲ್ಲಿ ಮಾಡಬೇಕಾದ್ದು ಪ್ರತಿಯೊಬ್ಬ ವೀರಾಯಿಯ ಕರ್ತವ್ಯ.

'ಓಟರು'.

ನೆಹರೂರವರ ಭಾಷಣ.

(ಗಿನೇ ಪುಕಡಿಂದ ಸಾಗಿದ್ದು)

ದರೆ ಶಮಗೆ ಆಸ್ಥೆಯಿಂಟು, ಅದೂ ಅಲ್ಲಿ ಹು ಅಲ್ಪ ಸಂಖ್ಯಾಕರ ಹಿತರಕ್ಷಣೆಯ ಸಂಬಂಧದಲ್ಲಿ. ನಾವಂತೂ ವಿಭಜನೆಗೆ ಒಪ್ಪಿಕೊಂಡೆವು ಅದರೆ ವಿಭಜನೆಯೂ ಪರಾವರ್ತನೆಯೂ ಬಗ್ಗೆ ಮಾತನಾಡುವುದೆಂದರೆ ಅದು ನಿಜವಾಗಿಯೂ ಹೇಯವಾದುದು. ಇದು ಭಾರತದಲ್ಲಿಯೂ ಯಾವನಿಗೂ ಭೂಷಣವಲ್ಲ.

'ಕಳೆದ ನಾಲ್ಕು ವರ್ಷಗಳಿಂದಲೂ ಬಿಕ್ಕಟ್ಟಿನ ರೂಪದಲ್ಲಿರುವ ಪಾಕಿಸ್ತಾನದೊಂದಿಗಿನ ಭಾರತದ ಸಂಬಂಧಗಳಿಗೆ, ಭಾರತವು ಈಗ ವೃಣಕಮಲ ಲೇಪನವನ್ನು ಕೊಡಬೇಕಾಗಿದೆ. ಕಲವು ಪ್ರಸಂಗಗಳಲ್ಲಾ ನಾವು ಯುದ್ಧದ ಪರಿಸ್ಥಿತಿಗೆ ಬಂದಿದ್ದೆವೆಂಬುದಶ್ಟು ನಿಜ. ಯುದ್ಧದಂಥ ಮೂರ್ಖಕನೆದ ಮತ್ತು ಅಹಿತಕಾರಿ ಕಾರ್ಯ ಮತ್ತೊಂದಿಲ್ಲವೆಂಬುದನ್ನು ಧಾರತೀಯನಾಗಲೀ, ಪಾಕಿಸ್ತಾನಿಯನಾಗಲಿ ಅರಿಯಬೇಕಿಲ್ಲ. ಆದರೆ ಉಪ್ಪಾಸ ಮತ್ತು ಕೋಪವು ಜನತೆಯಿಂ ಪವಿತ್ರವನ್ನು ಕಂಗೆಡಿಸುವುದು ಮತ್ತು ಅವರಲ್ಲಿ ದ್ವೇಷವನ್ನು ಪ್ರಜೋದಿಸುವುದು.

ಕಳೆದ ವರ್ಷವೇ ನಾವು ಪಾಕಿಸ್ತಾನದಲ್ಲಿ ತಿದ್ದ ಯುದ್ಧದ ಉನ್ಮಾದವನ್ನು ನೋಡಿದ್ದೇವೆ. ಅದರಿಂದಾಗಿಯೇ ನಾವು ಸಾಕಷ್ಟು ಮುಂಜಾಗ್ರತೆಗಳನ್ನು ತೆಗೆದುಕೊಳ್ಳಬೇಕಾಯಿತು. ಪ್ರಸಂಗ ಬಿದ್ದಾಗ, ಮುಂಜಾಗ್ರತೆಗಳನ್ನು ತೆಗೆದುಕೊಳ್ಳುವಾಗ, ಪಾಕಿಸ್ತಾನದೊಂದಿಗೆ ಶಮ್ಮ ಸಹಸ್ರೆಗಳ ಶಾಂತಿಯುತ ಪರಿಹಾರೋಪಾಯವೇ ಆಗಿರಬೇಕು ಕಲ ದಿನಗಳ ಹಿಂದೆಯೇ ಭಾರತದ ಧ್ವಜವಾಗಿದ್ದ ಅದರೊಂದಿಗೆ ನಿಕಟ ಮತ್ತು ಸ್ನೇಹಪೂರ್ಣ ಸಂಬಂಧ ಬೆಳೆಸುತ್ತ ನೋಡಬೇಕಾಗಿದೆ.

ಒಂದಿಲ್ಲ ಒಂದು ದಿನ ಈ ನಿಕಟ ಬಾಂಧವ್ಯ ಎರಡೂ ರಾಷ್ಟ್ರಗಳಲ್ಲಿ ಬರುವುದು ಅಶಿವಾರ್ಯವಾಗುವುದು. ಹಾಗಾದಲ್ಲಿ, ನಮ್ಮ ರಾಷ್ಟ್ರಕ್ಕೆ ಅಪಾಯಕಾರಿಯೂ ದ ಮತ್ತು ಗಂಡಾಂತರಕ್ಕೆ ಸಿಲುಕಿಸುವುದೆಂದು ತಿಳಿಯಲಾಗದ ಯಾವ ಕಾರ್ಯವನ್ನೂ ಕೈಕೊಳ್ಳದೇ ನಾವು ಆ ಗುರಿಯತ್ತ ಕಾರ್ಯೋನ್ಮುಖರಾಗೋಣ.

ಕಾಶ್ಮೀರ ಸಮಸ್ಯೆ.

'ಕಾಶ್ಮೀರದ ಭವಿಷ್ಯ ಕಾಶ್ಮೀರಿಗಳಿಂದಲೇ ನಿರ್ಧರಿಸಲ್ಪಡಬೇಕೆಂಬುದನ್ನು ಬೇರೆ ಹೇಳಬೇಕಿಲ್ಲ ಕಾಶ್ಮೀರದಲ್ಲಿ ಸಾರ್ವಮತಗಣತಿ ಪಡೆಯಬೇಕೆಂಬುದಕ್ಕೆ ನಾವು ಬದ್ಧರಾಗಿದ್ದು, ಅಪಕ್ಷಾಗಿ ನಾವು ತೃಪ್ತರಾಗಿದ್ದೇವಲ್ಲದೆ ಭಾವಿ ಪರಿಣಾಮದ ಜಗೆಯೂ ತೃಪ್ತರಾಗಿದ್ದೇವೆ ಅಂಥ ಮತಗಣತಿಯು ಯೋಗ್ಯವಾಗಿ ಪಾರ್ತ ಪಾರ್ತವಾಗಿ ಜರುಗಬೇಕಲ್ಲದೆ, ದಾಳಿಗಾರರ ಫಲುಮೆಗೆ ಅವಕಾಶ ಕೊಡಕಕ್ಕ ಕ ರಾರಿನ ಕೇಲೆ ಆದೆಂದೂ ಜರುಗ ಕೂಡದು. ಕಾಶ್ಮೀರಕ್ಕೆ ಹೋಗಿ ಅಲ್ಲಿಯ ಜನತೆ ತಮ್ಮ ಜಾತೀಯತೆಯನ್ನು ವರಿತು, ತಮ್ಮ ರಾಷ್ಟ್ರ ರಕ್ಷಣೆಗಾಗಿ ಮತ್ತು ಸಾಮಾಜಿಕ ಬೆಳವಣಿಗೆಗಾಗಿ ಹೇಗೆ ಒಗ್ಗೂಡಿ ಸಹಕಾರದಿಂದ ವರ್ತಿಸುತ್ತಿದ್ದಾರೆಂಬುದನ್ನು ಮತ್ತು ಅವರು ಏನು ಬಯಸುತ್ತಿದ್ದಾರೆಂಬುದನ್ನು ಕೋಡಿ ತಿಳಿದುಕೊಳ್ಳಬಹುದಾಗಿದೆ. ಭಾರತದ ಇತರ ಭಾಗಗಳಿಗಿಂತಲೂ ಕಾಶ್ಮೀರವು, ಭೂ ಸುಧಾರಣೆಯ ವಿಷಯದಲ್ಲಿ ಹೆಜ್ಜಾಗಿ ಶ್ರೇಷ್ಠಗತಿಯಿಂದ ಸುಧಾರಣೆಗೊಳಗಾಗಿದೆಯೆಂಬುದನ್ನು ಕಂಡುಕೊಳ್ಳಬಹುದಾಗಿದೆ.

ಜಾತೀಯತೆ

'ಜಾತೀಯತೆಯು ಸಂಕುಚಿತ ಮತ್ತು ವಿಚಾರಶಕಾರಿ ವಿಚಾರಸರಣಿಯಾಗಿದೆ. ಅಧುನಿಕ ಜಗತ್ತಿನಲ್ಲಿ ಇದಕ್ಕೆ ಎಳ್ಳಷ್ಟೂ ಸ್ಥಾನವಿಲ್ಲ. ನಮ್ಮ ನಮ್ಮಲ್ಲಿಯ ಸಂಧ್ಯದಲ್ಲಿ ಜಾತೀಯ ಕಂದರಗಳನ್ನು ನಿರ್ಮಿಸಿಕೊಂಡಲ್ಲಿ ಭಾರತದ ಪ್ರಗತಿಯು ಸಾಧ್ಯವೇ ಇಲ್ಲ ಜಾತೀಯತೆಯು ಪ್ರಶ್ನೆ ಕೇವಲ ಹಿಂದು-ಮುಸ್ಲಿಮರಿಗೆ ಮಾತ್ರ ಸಂಯೋಜಿತವಾಗಿರದೆ, ಇತರ ಧರ್ಮೀಯ, ಪಂಥದ ಮತ್ತು ಜಾತೀಯ ಗುಂಪುಗಳಿಗೂ ಸಂಬಂಧಿಸಿದುದಾಗಿದೆ. ಒಟ್ಟಿನ ಈ ವಿಘಾತುಕ ಒಲವು ಹುಟ್ಟಿಕೊಂಡರೆ, ಅದು ಎಲ್ಲಿಗೆ ಮುಕ್ತಾಯಗೊಳ್ಳುವುದೋ ಮತ್ತು ಎಳೆಗೆಯೂ ಒಗ್ಗೆ ಇದ್ದ ಕನಸು ಕೂಡ ಹೋಯವಾಗುವುದೋ ಎಂದು ಹೇಳಲಿಕ್ಕೆ ಬರಲಾಗದು. 'ನಾವು ಇತರ ರಾಷ್ಟ್ರಗಳಲ್ಲಿ ಕಾಣುತ್ತಿರುವ ವಿವಿಧರೀತಿಯ 'ಫ್ಯಾಸಿಜಂ' ದವೂದರಿಯೇ ನಮ್ಮ 'ಜಾತೀಯತೆ'ಯೂಗಾದಿ 'ಫ್ಯಾಸಿಜಂ'ಕ್ಕೆ ಧಾರತೀಯರ 'ಜಾತೀಯತೆ' ಎಂದು ಹೇಳಬಹುದು.

'ಆದ್ದರಿಂದ ಜಾತೀಯತೆಯನ್ನೂ ಹತ್ತಿಕ್ಕುವುದು ಮಹತ್ವದ ವಿಷಯವಾಗಿದೆ ಭಾರತದಲ್ಲಿ ವ್ಯಕ್ತ ಮತ್ತು ಅವ್ಯಕ್ತ ಜಾತೀಯತೆಯ ವಿಚಾರಹ ಹುಟ್ಟುನ್ನೇ ಅಡಗಿಸಬೇಕಾಗಿದೆ. ಅದರಿಂದ ಅತೀತರಾದಾಗ್ಗೆಯೇ ನಾವು ನಿಜವಾದ ಸ್ವಾತಂತ್ರ್ಯದ ಮರ್ಮವನ್ನು ಅರಿತೆವು ಮತ್ತು ವಿಶ್ವಕ್ಕೆ ಹೊಂದೇಷ್ಟ!

ಪ್ರಾಂತೀಯತೆ.

'ಭಾರತವು ವಿವಿಧ ಸಂಸ್ಕೃತಿಯುಳ್ಳ ವಿಶಾಲ ರಾಷ್ಟ್ರ. ಐಕ್ಯತೆಯು ಅಗತ್ಯವಿದ್ದಾಗ್ಗೆ ಒತ್ತಾಯದ ಏಕರೂಪತೆ ಅಥವಾ ಸಾಮ್ಯ ಅಗತ್ಯವಿಲ್ಲವಲ್ಲದೆ ಅನಪೇಕ್ಷಿತ ವಾಹುದೆಂದೂ ನಾನು ಭಾವಿಸುತ್ತೇನೆ. 'ನಮ್ಮಲ್ಲಿ ಕೆಲವರು ರೂಢಿಗೊಂಡ ಕೆಲವೊಂದು ವಿಶಿಷ್ಟ ಪದ್ಧತಿಗಳಿಗೆ ಅಥವಾ ವಿಶಿಷ್ಟವಾದ ವಿಶೇಷ ದೃಷ್ಟಿಗಳಿಗೇ ಇದನ್ನು ನಾವು ಅನ್ವಯಿಸಹೋಹರೆ. ಭಾರತದ ಶಮ್ಮ ತಿಳುವಳಿಕೆಗೇ ಮಹಾಘಾತಾಯನ್ನುಂಟುಮಾಡುವುದು.

ಸಂಸ್ಕೃತಿ.

'ಭಾರತಕ್ಕೆ ತನ್ನದೇ ಆದ ಮೂಲ ಭೂತ ಸಂಸ್ಕೃತಿಯು ನೋಟವುಂಟು ಪುರಾತನ ಕಾಲದಿಂದ ವಿಶಿಯೂ ವಿವಿಧ ಭಾಗಗಳಿಂದ ಹರಿದು ಬಂತ ಮತ್ತು ಅನೇಕರ ತಶ್ಚಿವಾಕ್ಯ ರಾಷ್ಟ್ರಗಳಿಂದ ಹರಿದು ಬಂದ ಸಂಸ್ಕೃತಿಯ ರುಧಿರಗಳಿಂದ ಶಮ್ಮ ಸಂಸ್ಕೃತಿ ಕಳೆಗೊಂಡಿದೆ. ಹೀಗೆ ಸಂಸ್ಕೃತಿಯಿಂದ ಭಾರತದೊಂದಿಗೆ ಹೆಣೆಯಲ್ಪಟ್ಟ ಆ ರಾಷ್ಟ್ರಗಳ ಸಂಬಂಧವನ್ನು ನಾವು ಕಾಯ್ದುಕೊಂಡು ಹೋಗಬೇಕಾಗಿದೆ'

ಹಿಂದೂ ಕೋಡು ಮಸೂದೆಯ ಜಗ್ಗೆ ಮಾತನಾಡುತ್ತ 'ಈ ಮಸೂದೆಯು ಅಶ್ರಯವು ಜಡತೆಯಮನ್ನು ವೈತೇಷವಾಗಿ ನೆಹರೆಯವರನ್ನು ಅಂಧ ಸಂಪ್ರದಾಯ ನಂತ್ರು ಅವರನ್ನು ಹಿಡಿದು ಕಟ್ಟಿದ ಬಂಧನಗಳಿಂದ ಬಿಡಿಸಲು ಯತ್ನಿಸುವ ವಿಶೇಷನಾಶಕ್ತಿಯಾಗಿದೆ. ನಾವು ಎಲ್ಲ ದಿಕ್ಕುಗಳಿಂದಲೂ ಏಳಿಗೆ ಹೊಂದಬೇಕಾಗಿದೆ' ಎಂದೂ ಹೇಳಿದರು.

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ.ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ (1931ರಲ್ಲಿ ಸ್ಥಾಪಿತವಾಗಿದೆ

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,99,400.
ಕ್ಷೇಮನಿಧಿ	ರೂ.	69,000.
ಇತರ ನಿಧಿಗಳು	ರೂ	36,000.

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದ

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡಲ್ಪಡುವುದು ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಮೂಲಕ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರೈನಿಟಿ ಮತ್ತು ವಾರ್ಡನ್ ಇನ್ಷೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಅಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಮೆನೆಜ್ಮೆಂಟ್.

ಕೊಡಗು ಪ್ರಾಂತೀಯ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ಸಮ್ಮಲ್ಲಿ ಈ ಕೆಳಗೆ ತೋರಿಸಿರುವ ಕೋವಿಗಳು, ವ್ಯವಸಾಯದ ಹತ್ಯಾರುಗಳು ಮತ್ತು ಕಬ್ಬಿಣದ ಸಲಾಕೆ ವಗೈರೆಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು ಮತ್ತು ರಿವಾಲ್ವರುಗಳು.
2. 12ನೇ ನಂಬರಿನ ಒಂಟಿ ಹೊಳವಿನ ಕೋವಿಗಳು.
3. 12ನೇ ನಂಬರಿನ ಜೋಡು ಹೊಳವಿನ ಕೋವಿಗಳು.
4. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೆ ಮಾಡುವ ಪಂಪುಗಳು.
5. 2", 1", ½", ¾", ¼" ಕಬ್ಬಿಣದ ಸಲಾಕೆಗಳು.
6. 9"×4" ಮತ್ತು 8"×4" ಕಬ್ಬಿಣದ ಬೀಮ್ಸ್ (Beams).
7. 8'×3"×12 (Gage)ನ ಕಬ್ಬಿಣದ ತಗಡುಗಳು.
8. 3"×3"×¼"ನ (Angles) ಎಂಗ್ಯೂಲರ್ಸ್ ಅವಶ್ಯವಿರುವವರು ಇಂಡೆಂಟ್ ಕೊಟ್ಟಲ್ಲಿ ತರಿಸಿ ಕೊಡಬಹುದು.

ಹೆಚ್ಚಿನ ಮಾಹಿತಿಯನ್ನು ಅಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೆ ಜಿಲ್ಲಾ ಮೇಜಸ್ಟ್ರೇಟಿನಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವುದು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

Licence No. 60.
Licenced to Post without Prepayment

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಬಿ. ದೇಶಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೩೦ | ಕಾರೀಕಳ ೨೩-೧೧-೧೯೫೫ನೇ ಶುಕ್ರವಾರ | ಸಂಚಿಕೆ ೪೫

ಕೊಡಗಿನ ಭವಿಷ್ಯನಿರ್ಧಾರ ಇಂದೇ ಆಗಲಿ.

ಕೊಡಗಿನ ಭವಿಷ್ಯವನ್ನು ನಿರ್ಧರಿಸುವ ಹಕ್ಕು ಕೊಡಗಿನ ಜನತೆಯದಾಗಿದೆಯೆಂದು ಹಲವು ವರ್ಷಗಳಿಂದಲೇ ಕೊಡಗು ಪ್ರತ್ಯೇಕವಾದಿ ಪಕ್ಷವು ವಾದಿಸುತ್ತಿದೆ. ಅದಕ್ಕನುಸಾರವಾಗಿ ಅದು ಈವರೆಗೆ ಕೆಲಸ ಮಾಡುತ್ತಿದೆ. ಕೊಡಗಿನ ಭವಿಷ್ಯದ ಪ್ರಶ್ನೆಯು ಇಂದು ನಿನ್ನೆಯದಲ್ಲ. ೧೯೫೦ನೇ ಇಸವಿಯಿಂದಲೇ ಕೊಡಗು ಬೇರೆ ಪ್ರಾಂತದೊಡನೆ ಸೇರಬೇಕೆಂಬ ಚಳವಳಿ ನಡೆಯುತ್ತಿದ್ದಕ್ಕೆ ಆಧಾರಗಳಿವೆ. ಈ ಮೂವತ್ತೈದು ವರ್ಷಗಳ ಈ ಅವಧಿಯಲ್ಲಿ ಕೊಡಗನ್ನು ಮೈಸೂರಿಗೆ ಸೇರಿಸಬೇಕು, ಮದ್ರಾಸಿಗೆ ಸೇರಿಸಬೇಕು, ಕರ್ನಾಟಕದ ಒಂದು ಅಂಗವಾಗಬೇಕು ಎಂಬ ಕ್ಯಾದಿ ಚಳವಳಿ ನಡೆಯುತ್ತಿದೆ. ಇಂದೂ ಕೂಡ ಆ ಪ್ರಶ್ನೆ ದೇಶದ ಮುಂದೆ ಬಂದಿದೆ. ದೇಶದ ಭವಿಷ್ಯದ ಪ್ರಶ್ನೆಯ ಬಗ್ಗೆ ದೇಶೀಯರಲ್ಲಿ ಭಿನ್ನಾಭಿಪ್ರಾಯವಿದ್ದರೂ ಈ ಪ್ರಶ್ನೆಯು ಬೇಗ ಪರಿಹಾರವಾಗಬೇಕೆಂಬ ಬಗ್ಗೆ ಎಲ್ಲರಿಗೂ ತಕರವಿದೆ ಎಂದರೆ ಈ ೩೫ ವರ್ಷಗಳ ದೀರ್ಘ ಅವಧಿಯಲ್ಲಿ ಈ ಪ್ರಶ್ನೆಯ ಕಾರಣ ದೇಶದಲ್ಲಿ ಭಿನ್ನಾಭಿಪ್ರಾಯವುಂಟಾಗಿ ದೇಶದ ಪ್ರಗತಿಗೆ ತೊಡರಾಗಿದೆ. ಅದರಲ್ಲೂ ಕಳೆದ ಆರೇಳು ವರ್ಷಗಳಿಂದ ಈ ಪ್ರಶ್ನೆಯ ಕಾರಣದಿಂದ ದೇಶದಲ್ಲಿ ಸ್ಪಷ್ಟವಾಗಿ ಎರಡು ಪಕ್ಷಗಳಾಗಿ ಈ ಎರಡು ಪಕ್ಷಗಳ ಪಕ್ಷ ರಾಜಕೀಯದಿಂದ ದೇಶದ ಜನತೆಗೆ ತೊಂದಾ ಆಹಿತವಾಗಿದೆ. ಈ ಎರಡು ಪಕ್ಷಗಳು ಅಳಿದು ದೇಶದ ಹಿತ ಎಂದಾಗುವುದೋ ಎಂದು ನಾವೆಲ್ಲರೂ ಬಾಂ ಬಾರಿಗೂ ಪ್ರಾರ್ಥಿಸಿದ್ದೇವೆ. ಇಂದೂ ಪ್ರಾರ್ಥಿಸುತ್ತೇವೆ. ಏಕೆಂದರೆ ಎರಡು ಪಕ್ಷಗಳು ಪರಸ್ಪರ ಹೊಡೆದಾಡಿ ಕೊಳ್ಳುವದರಿಂದ ಸರಕಾರವು ಯಾವುದೇ ಒಂದು ಕೆಲಸವನ್ನು ಕೈಕೊಂಡರೆ ಅದು ಪ್ರತ್ಯಕ್ಷವಲ್ಲದಿದ್ದರೂ ಅಪ್ರತ್ಯಕ್ಷವಾಗಿ ಒಂದಿಲ್ಲೊಂದು ಪಕ್ಷಕ್ಕೆ ಸಹಾಯಕ ಅಥವ ಅಸಹಾಯಕವಾಗುವದರಿಂದ ಒಂದು ಪಕ್ಷವು ಬೆಂಬಲಕೊಟ್ಟುದಕ್ಕೆ ಮತ್ತೊಂದು ಪಕ್ಷವು ವಿರೋಧ ಮಾಡಿ ಸರಕಾರವು ಯಾವ ಜನಹಿತ ಕೆಲಸವನ್ನೂ ಮಾಡದಂತಾಗಿದೆ. ಇದರಿಂದ ನಾಡಿಗೆ ಹಾನಿಯಾಗಿದೆ. ಒಂದು ಕಾಲೇಜಿನ ವಿಚಾರ, ಒಂದು ವ್ಯವಸಾಯ ಅದಾಯತೆರಿಗೆ, ಯಾವುದೇ ಒಂದು ವಿಚಾರಕ್ಕೂ ಕೊಡಗಿನ ಭವಿಷ್ಯದ ಬಗ್ಗೆನವನ್ನು ಎರಡು ಪಕ್ಷಗಳೂ ಹುಟ್ಟಿ ಒಂದು ಬೆಂಬಲವಿತ್ತರೆ ಮತ್ತೊಂದು ವಿರೋಧಿಸುತ್ತಾ ಬಂದಿದೆ. ೪ ರೀತಿಯಿಂದ ದೇಶದ ಪುಗತಿ ಕುಂಠಿತವಾಗಿ ದೈತನ ಜೀವನಕ್ಕೆ ಸಹಾಯಕವಾದ ರೀತಿ ಅಡಳಿತ ನಡೆಯುದಾಗಿದೆ. ಆದ್ದರಿಂದ ಕೊಡಗಿನ ಭವಿಷ್ಯದ ಪ್ರಶ್ನೆಯು ಎಷ್ಟು ಬೇಗ ಒಗ ಪರಿಹಾರವಾಗುತ್ತದೋ ಅಷ್ಟೂ ದೇಶಕ್ಕೆ ಹಿತಕರವೆನ್ನುವದರಲ್ಲಿ ಸಂಶಯವಿಲ್ಲ. ಆದ್ದರಿಂದ ಕೊಡಗನ್ನು ಪ್ರತ್ಯೇಕವಿಟ್ಟುಕೊಳ್ಳಬೇಕೆನ್ನುವ ಪಕ್ಷವು ಈ ಚುನಾವಣೆಯಲ್ಲಿ ಕೊಡಗಿನ ಭವಿಷ್ಯದ ಪ್ರಶ್ನೆಯನ್ನು ಜನರ ಮುಂದಿಡಬೇಕು. ಜನತೆಯ ಅಭಿಪ್ರಾಯವಂತೆ ದೇಶದ ಭವಿಷ್ಯ ನಿರ್ಣಯವಾಗಬೇಕು ಎನ್ನುತ್ತಿದೆ ಈ ಪ್ರಶ್ನೆಯನ್ನು ಜನರು ವಿವರ್ಶಿಸಿ ಆ ಕ್ಷಣ ಪ್ರಕಾರ ಓಟು ಕೊಡುವದರಿಂದ ಅವರು ಆರಿಸಿದ ಪ್ರತಿನಿಧಿಗಳಲ್ಲಿ ಯಾರು ಬಹುಮತ ಪಡೆಯುವರೋ ಅವರ ಅಭಿಪ್ರಾಯವೇ ದೇಶದ ಅಭಿಪ್ರಾಯವಾಗುವದು. ಸಂಯೋಜನಾವಾದಿಗಳು ಬಹುಮತದಲ್ಲಿ ಬಂದರೆ ದೇಶವು ಬೇರೆ ಪ್ರಾಂತದೊಡನೆ ಸೇರಲು ಅಭ್ಯಂತರವಿಲ್ಲವೆಂದು ಅವರು ಹೇಳುತ್ತಾರೆ.

ಹಾಗೆ ನೋಡಿದೆ ಈಗ ಕೊಡಗಿಗೆ ಸುಧಾರಣೆ ಬಂದಿದೆ ಆದ್ದರಿಂದ ದೇಶಪ್ರೇಮಿಗಳಿರುವ ಈ ಪಕ್ಷಗಳ ಯೋಚನೆಯನ್ನು ಬಿಟ್ಟು ನೇರವಲ ದಕ್ಷರನ್ನೂ ಯೋಗ್ಯರನ್ನೂ ಆರಿಸುವದು ಹಿತವೆಂದು ನಂಬಿ ಆ ರೀತಿ ನೋಡಿದರೆ ಪ್ರಯೋಜನವಾಗದು. ನವ್ಯ ದೇಶಕ್ಕೆ ಬಂದಿರುವ ಸುಧಾರಣೆಯು ಜನ ಹಿತಕಾರಕವಾಗಿ ಜಾರಿಯಲ್ಲಿ ಬರಬೇಕಾದರೆ ಕೊಡಗಿನ ಇಂದಿರುವ ಪಕ್ಷಗಳಲ್ಲಿ ಒಂದು ತಂಬಾ ಬಹುಮತದಿಂದ ಆರಿಸಬರಬೇಕು. ಇಲ್ಲದಿದ್ದರೆ ಮುಂದಿನ ಶಾಸನ ಸಭೆಯು ಈ ಎರಡು ಪಕ್ಷಗಳ ಕಾಳಗದ ಕ್ಷೇತ್ರವಾಗಿ ಒಂದು ಪಕ್ಷವು ಜಾರಿಗೆ ತರಲೆತ್ನಿಸುವ ವಿಚಾರವನ್ನು ಮತ್ತೊಂದು ವಿರೋಧಿಸಿ ಇಂದಿನಂತೆಯೇ ಅಂದೂ ಅಡಳಿತವು ಹದಗೆಟ್ಟು ಬಂದಿರುವ ಸುಧಾರಣೆಯು ನಿಷ್ಪ್ರಯೋಜಕವಾಗುವದು. ಯೋಗ್ಯರು ಮತ್ತು ದಕ್ಷರನ್ನು ಆರಿಸುವ ದೆಂದರೆ ಕೊಡಗಿನ ಎರಡು ಪಕ್ಷಗಳಲ್ಲೂ ಯೋಗ್ಯರೂ ಅಯೋಗ್ಯರೂ ಇರುತ್ತಾರೆ. ಕೊಡಗಿನ ಪಕ್ಷಗಳ ಜಗಳ ನಿರ್ಮೂಲನವಾಗಬೇಕಾದರೆ ಕೊಡಗಿನ ಭವಿಷ್ಯದಲ್ಲಿ ಕೊಡಗಿನ ಬಹುಮತೀಯ ಮತದಾರರ ಅಭಿಮತವೇನೆಂದು ತಿಳಿಯಲೇಬೇಕು. ಇದನ್ನು ಮುಂದೆ ನೂಳುವದರಿಂದ ಸರಕಾರಿಗೂ ಹಾನಿ ಇದೆಯಲ್ಲದೆ ಬಂದಿರುವ ಸುಧಾರಣೆಯೂ ನಿಷ್ಪ್ರಯೋಜಕವಾಗುವದು. ಆದ್ದರಿಂದ ಭವಿಷ್ಯದ ಪ್ರಶ್ನೆಯು ಜನತೆಯು ಮುಂದೆ ಈ ಚುನಾವಣೆಯಲ್ಲಿ ಇಡಲ್ಪಡಲೇಬೇಕು ಎಂದು ಪ್ರತ್ಯೇಕವಾದಿ ಪಕ್ಷವು ವಾದಿಸುತ್ತಿದೆ. ಈ ತತ್ವದ ಹೋರೆ ಹೋದ ತನ್ನ ತಳ ಉಮೇದುವಾರರನ್ನು ಚುನಾವಣೆಗೆ ಹುರಿಯೊಳಗಾಗಿ ನಿಲ್ಲಿಸಲಿಲ್ಲ.

ಆದರೆ ಕೊಡಗು ಕಾಂಗ್ರೆಸಿನ ಅಶ್ರಯದಲ್ಲಿ ಚುನಾವಣೆಗೆ ನಿಲ್ಲುವ ಜನರು ಈ ಭವಿಷ್ಯದ ಪ್ರಶ್ನೆ ಈಗ ಇಲ್ಲ ಎನ್ನುತ್ತಿದ್ದಾರೆ. ಸುಧಾರಣೆ ಬಂದಿದೆ. ಆದಕ್ಕಾಗಿ ನಾವು ಹೆಣಗಾಡಿದ್ದೇವೆ. ಈಗ ಸುಧಾರಣೆಯನ್ನು ಜಾರಿಯಲ್ಲಿ ತರುವುದೇ ದೇಶಿದೆ ಅಡಳಿತ ಕಾಂಗ್ರೆಸಿನ ಹೆಸರಿನಲ್ಲಿ ನಿಂತಿರುವವರೇ ಯೋಗ್ಯರೆಂದು ನಮ್ಮಕಿದ್ದಾರೆ. ಕೊಡಗಿನ ಭವಿಷ್ಯದ ವಿಚಾರದಲ್ಲಿ ತನ್ನ ನಿಲುವು ಏನು ಎಂಬುದನ್ನು ಸ್ಪಷ್ಟಪಡಿಸದೆ ಕಾಂಗ್ರೆಸಿನ ಹೆಸರಿನಿಂದ ಸಂಯೋಜನಾವಾದಿಗಳು ವರ್ತಿಸುತ್ತಿದ್ದಾರೆ. ಕೆಲವೆಡೆ ಕಾವೂ ಕೂಡ ಪ್ರತ್ಯೇಕವಾದಿಗಳೆಂದು ಇವರು ಸಾರಿದ್ದಾರೆ. ಇವರ ವಾದವನ್ನು ಸ್ವಲ್ಪ ವಿಮರ್ಶಿಸೋಣ. ಚುನಾವಣೆಗೆ ಕಾಂಗ್ರೆಸಿನ ಹೆಸರಿನಲ್ಲಿ ನಿಂತಿರುವ ಬಹುಮತೀಯರು ಸಂಯೋಜನಾವಾದಿಗಳು. ೧೯೫೦ನೇ ಇಸವಿಯಲ್ಲಿ ರಾಜ್ಯಸ್ಥಿಪನಾ ಸಭೆಗೂ, ಕೇಂದ್ರ ಸರಕಾರಕ್ಕೂ ಇವರು ಒಂದು ಅಫೀಲನ್ನು ಮಾಡಿ ಕೊಡಗಿನ ಭವಿಷ್ಯ ನಿರ್ಣಯದ ಹಕ್ಕನ್ನು ಕೊಡಗಿನ ಜನರಿಗೆ ಬಿಡಬಾರದು. ದೇಶದ ಸ್ಥಿತಿಗಳನ್ನೂ, ಅಡಳಿತದ ವ್ಯವಸ್ಥೆಯನ್ನೂ ತಿಳಿಯದ ಅಜ್ಞರಾದ ಹಳ್ಳಿಯ ಜನರು ದೇಶದ ಭವಿಷ್ಯದ ವಿಚಾರದಲ್ಲಿ ಅಭಿಪ್ರಾಯ ವ್ಯಕ್ತಮಾಡಲು ಅರ್ಹರಲ್ಲ. ಬದಲು ಕೇಂದ್ರ ಸರಕಾರವೇ ಒಂದು ನಿರ್ಣಯವನ್ನು ಕೊಟ್ಟು ಕೊಡಗನ್ನು ಮೈಸೂರಿನೊಡನೆ ವಿಲೀನಗೊಳಿಸಬೇಕು ಎಂದು ವಾದಿಸಿದ್ದಾರೆ ಈ ಅಭಿಪ್ರಾಯವನ್ನೇ ಶ್ರೀ ಸಿ ಎಂ ಪೂಣಚ್ಚನವರು ತಾರೀಕು ೧೬-೫-೫೫ರಲ್ಲಿ ಡೆಲ್ಲಿಯಲ್ಲಿ ನಡೆದ ಚೀಫ್ ಕಮಿಷನರ ಪ್ರಾಂತಗಳಿಗೆ ಸುಧಾರಣಾ ಕಾಂನಿನ ವಿಚಾರ ಮಾಡಾಡುತ್ತಾ (It is said that there is difference of opinion in the political circles so far as the future of Coorg is concerned. There is, it is bound to be, and it shall ever be so, till the Govt. takes a final decision If there has been this difference it is because of your hesitancy to give a clear cut decision on this)" 'ಕೊಡಗಿನ ರಾಜಕೀಯ ಪಕ್ಷಗಳಲ್ಲಿ ಕೊಡಗಿನ ಭವಿಷ್ಯದ ವಿಚಾರದಲ್ಲಿ ಭಿನ್ನಾಭಿಪ್ರಾಯಗಳಿವೆಯೆಂದು ಹೇಳಲಾಗಿದೆ ಅದು ಇರಬೇಕಾದ್ದೆ. ಸರಕಾರವು ಒಂದು ಕಡೆಯ ತೀರ್ಮಾನ ಕೊಡುವ ವರೆಗೆ ಅದು ಇದ್ದೇ ಇರುತ್ತದೆ. ಈ ಭಿನ್ನಾಭಿಪ್ರಾಯವು ಬಲಯುತವಾಗಿ ಅಲ್ಲಿರುವದಾದರೆ ಅದರ ವಿಚಾರ ನೀತಿ (ಕೇಂದ್ರ ಸರಕಾರವು) ಸ್ಪಷ್ಟವಾದ ಅಭಿಪ್ರಾಯವು ಕೊಡದ ಕಾರಣದಿಂದಾಗಿದೆ" ಎಂದು ಹೇಳಿದ್ದಾರೆ. ಹೀಗೆ ಕೊಡಗಿನ ಭವಿಷ್ಯದ ವಿಚಾರದಲ್ಲಿ ಕೇಂದ್ರ ಸರ್ಕಾರವು ತೀರ್ಮಾನ ಕೊಡಬೇಕೆಂದು ವಾದಿಸಿದ ಪೂಣಚ್ಚನವರೂ ಅವರ ಅನುಯಾಯಿಗಳೂ ಇಂದು ಚುನಾವಣೆ ಹತ್ತಿರ ಬಂದಿರುವಾಗ ಕೊಡಗಿನ ಜನಾಭಿಪ್ರಾಯವನ್ನು ತಿಳಿದೇ ಭವಿಷ್ಯ ನಿರ್ಣಯವಾಗಬೇಕೆನ್ನುತ್ತಿದ್ದಾರೆ. ಹಾಗಾದರೆ ಆ ಅಭಿಪ್ರಾಯವನ್ನು ಇಂದು ತಿಳಿಯಲು ಅಕ್ಷೇಪ ಮಾಡುತ್ತಿರುವರೇಕೆ? ಜನತೆಯು ಮುಂದೆ ಈ ಪ್ರಶ್ನೆಯನ್ನು ಇಡಲು ಇವರು ಹೆದರುತ್ತಿರುವರೇಕೆ? ಇಂದು ಜನತೆಗೆ ಫ್ರೌಢ ಮತದಾನ ಹಕ್ಕನ್ನು ಕೊಟ್ಟಿರುವರೇಕೆ? ದೇಶದ ಅಡಳಿತದ ವಿಚಾರದಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಹಕ್ಕು ಜನತೆಗಿಲ್ಲವೇ? ಹಾಗಿರುವಾಗ ಈ ವಿಚಾರದಲ್ಲಿ ಅವರ ಅಭಿಪ್ರಾಯವನ್ನು ತಿಳಿಯಬಾರದೇಕೆ? ಸಂಯೋಜನೆಯು ಪ್ರತ್ಯೇಕವಾದಿಗಳಿಂದ ಬಂದಾಗ ಜನತೆಯ ಅಭಿಪ್ರಾಯ ತಿಳಿದೇ ನಿರ್ಣಯವಾಗಬೇಕೆಂದು ಇವರು ಹೇಳುವದಾದರೆ ಜನತೆಯ ಅಭಿಪ್ರಾಯ ತಿಳಿಯಲು ಮುತ್ತೊಂದು ಚುನಾವಣೆ ನಡೆಯಲಾಗ ಬೇಡವೇ? ಹಾಗೆ ಮಾಡಿದರೂ ಇಲ್ಲಿಪೆಬೆ ಚುನಾವಣೆಯೆಲ್ಲಪೆಬೇರೆರೀತಿಯ ಪ್ಲೆಬಿಸೈಟು ಮೂಲಕ ಅಭಿಪ್ರಾಯ ತಿಳಿಯುವದಾದರೂದೇಶವಸಹಕಾರುರೂಪಾಯಿಇದಕ್ಕಾಗಿ ವೆಚ್ಚಮಾಡಬೇಕಾಗುವದಿಲ್ಲವೇ? ಇದನ್ನು ತಪ್ಪಿಸಲು ರಂಗಲೇಜನರ ಅಭಿಪ್ರಾಯ ತಿಳಿಯುವದರಲ್ಲಿ ದೇಶದ ಹಿತ ಅಡಗಿಲ್ಲವೇ? ಸಂಯೋಜನಾವಾದಿಗಳು ತಮ್ಮ ನಿಷ್ಪ ಅಭಿಮತವನ್ನು ಜನರ ಮುಂದಿಡಲು ಹಿಂಜರಿಯಲು ಕಾರಣವೇನು? ಜನತೆ ಇದನ್ನು ವಿಚಾರಿಸಬೇಕು. ಸಂಯೋಜನಾವಾದಿಗಳು ಕಾಂಗ್ರೆಸಿನ ಹೆಸರು ಹೇಳಿಕೊಂಡು ಜನತೆಯ ಮುಂದೆ ಈ ನಿರ್ಧಾರವನ್ನು ಇಡದೆ ಅಧಿಕಾರಕ್ಕೆ ಹೇಗಾದರೂ ಬರಬೇಕೆಂಬ ಯತ್ನಿಸುತ್ತಿದ್ದಾರೆ ಅವರು ಹೇಳದಿದ್ದರೂ ಉಮೇದುವಾರರು ಈ ಹಿಂದೆ ಕೊಡಗಿನ ಭವಿಷ್ಯದ ಬಗ್ಗೆ ಅವರು ಯಾವ ರೀತಿ ಅಭಿಪ್ರಾಯ ವ್ಯಕ್ತಮಾಡಿದ್ದಾರೆಂಬುದನ್ನು ಪರಿಶೀಲಿಸಬೇಕು. ದೇಶವನ್ನು ಪ್ರತ್ಯೇಕವಿಸಿ ಎಲ್ಲರಿಗೂ ಹಿತಕರವಾದ ಅಡಳಿತ ನಡೆಸಬೇಕೆನ್ನುವ ಪ್ರತ್ಯೇಕವಾದಿಗಳೇ ಅಂದಿನಿಂದ ಇಂದಿನ ವರೆಗೆ ನಿಷ್ಠೆಯಿಂದ ಏಕ ಪಥದಿಂದ ನಡೆಯುತ್ತಿರುವರು. ಆ ನಿಷ್ಠೆಗಾಗಿಯೇ ಕಾಂಗ್ರೆಸಿನ ಹೊರಗೆ ಬಂದವರು. ಸಮಯಕ್ಕೆ ಸರಿಯಾಗಿ ಎಣ್ಣೆ ಬತ್ತಲಾಯಿಸದೆ ಕೊಡಗಿನ ಪ್ರತ್ಯೇಕತೆಯಲ್ಲಿ ಅಚಲ ವಿಶ್ವಾಸವಿಟ್ಟು ಚುನಾವಣೆಗೆ ನಿಂತವರು ಕೊಡಗಿನ ಹಿತಬಯಸುವವರೆಲ್ಲರ ಮತಕ್ಕೆ ಅರ್ಹರು.

ಎಂ. ಎಸ್. ಸೋಮಯ್ಯ.

ನಾನು ಒಂದೆರಡು ಚುನಾವಣಾ ಪ್ರಚಾರ ಸಭೆಗಳಿಗೆ ಹೋಗಿದ್ದೆನು. ಗೋಣಿಕೊಪ್ಪಲಿನ ಸಭೆಯಲ್ಲಿ ಕೊಡಗಿನ ಎರಡು ಪಕ್ಷದವರೂ ವಾದ ಪ್ರತಿವಾದ ನಡೆಸಿದರು. ಅವುಗಳಲ್ಲಿ ಒಂದು ವಿಚಾರವನ್ನು ನಾನು ಸ್ಪಷ್ಟವಾಗಿ ಬರೆಯಬೇಕಾದ ಅವಶ್ಯ. ಪ್ರತ್ಯೇಕವಾದಿ ಪಕ್ಷದವರು ತಮ್ಮ ಅಭಿಪ್ರಾಯಗಳನ್ನು ಮಂಡಿಸುತ್ತಾ ಇಂದು ನಾವು ಚುನಾಯಿಸುವ ಪ್ರತಿನಿಧಿಗಳ ಅಭಿಪ್ರಾಯದಂತೆ ಕೊಡಗಿನ ಭವಿಷ್ಯ ನಿರ್ಣಯಿಸಲ್ಪಡುವದೆಂದೂ ಆದ್ದರಿಂದ ಆವರನ್ನು ಆರಿಸುವಾಗಲೇ ಆಲೋಚಿಸಿ ಕೊಡಗು ಪ್ರತ್ಯೇಕವಾದಿಗಳನ್ನೇ ಆರಿಸಬೇಕೆಂದೂ ಹೇಳಿದರು. ಇದಕ್ಕೆ ವಿರುದ್ಧವಾಗಿ ಸಂಯೋಜನಾವಾದಿಗಳು ವಾದಿಸುತ್ತಾ ದೇಶದ ಭವಿಷ್ಯ ನಿರ್ಣಯಿಸುವ ಹಕ್ಕು ಶಾಸನ ಸಭೆಗೆ ಇಲ್ಲವೆಂದೂ ರಾಜ್ಯಪುನರ್ನಿರ್ಮಾಣ ಕ್ಷೇತ್ರವನ್ನಿಲ್ಲಿ ಇದು ಪ್ರಸ್ತಾಪವಿದೆಯೆಂದೂ ವಿವರಿಸಿದರು. ಇವರ ವಿವರಣೆ ಸರಿಯಿಲ್ಲವೆಂದೂ ಪ್ರತ್ಯೇಕವಾದಿಗಳ ವಾದದಲ್ಲಿ ಸತ್ಯತೆ ಇದೆಯೆಂದೂ ಎರಡು ಪಕ್ಷಕ್ಕೂ ಸೇರದ ಕೇವಲ ಮತದಾರನೂ, ಕಲವಮಟ್ಟಿಗೆ ನ್ಯಾಯಶಾಸ್ತ್ರದ್ದಕ್ಕೆ ಹೆಜ್ಜೆನ ವಿರುವನೂ ಆದ ನಾನು ಈ ಕೆಳಗೆ ವಿವರಿಸುವೆನು.

ರಾಜ್ಯ ಪುನರ್ನಿರ್ಮಾಣ ಸಂಸ್ಥೆ ಪುಸ್ತಕದಲ್ಲಿ ಹೀಗಿದೆ--

▲ State Specified in part C Shall be administered by the president acting to such extent as he thinks fit through a Chief Commissioner or a Lt. Governor, to be appointed by him or through the Govt. of a neighbouring state–

Provided that the president shall not act through the Govt of a neighbouring state save after–

(a) consulting the Govts. concerned and

(b) ascertaining in such manner as the president considers most appropriate *the views* of the people of the state to be so administered.

"ಎ" ವರ್ಗದ ಒಂದು ಸಂಸ್ಥಾನದ ಆಡಳಿತವನ್ನು ಪ್ರೆಸಿಡೆಂಟರು ತನ್ನಿಂದ ನೇಮಕ ಮಾಡಲ್ಪಡುವ ಚೀಫ್ ಕಮಿಷನರ ಲೆಫ್ಟನೆಂಟ್ ಗವರ್ನರರ ಅಥವ ನೆರೆಯ ಸಂಸ್ಥಾನದ ಸರಕಾರದ ಮೂಲಕ ಕಾನೂನುಬದ್ಧಕ್ಕ ಹಾಗೆ ನಡೆಸಬಹುದು.

ನೆರೆ ಸಂಸ್ಥಾನದ ಮೂಲಕ ಆಡಳಿತ ನಡೆಸುವದಾದರೆ ಈ ಕೆಳಗಿನಂತೆ ಮಾಡದೆ ಪ್ರೆಸಿಡೆಂಟರು ವರ್ತಿಸಕೂಡದು.

(a) ಸಂಬಂಧಿಸಿದ ಸರಕಾರಗಳನ್ನು ವಿಚಾರಿಸಿ ವರ್ತಿಸಬೇಕು.

ಬಡ ಮತದಾರರಿಗೆ ಅನ್ಯಾಯ

[ಲೇಖಕರು—ವಕೀಲರು.]

(b) ಆಡಳಿತಕ್ಕೊಳಗಾಗುವ ಸಂಸ್ಥಾನದ ಜನರ ಅಭಿಪ್ರಾಯವನ್ನು ತನಗೆ ಯುಕ್ತವೆಂದು ಕಾಣುವ ರೀತಿಯಲ್ಲಿ ತಿಳಿದುಕೊಳ್ಳಬೇಕು.

ಈ ನಿಯಮದಂತೆ ಪ್ರೆಸಿಡೆಂಟರು ನೆರೆಯ ಪ್ರಾಂತದ ಸರಕಾರದ ಮೂಲಕ ಒಂದು ಸಂಸ್ಥಾನವನ್ನು ಆಳುವದೆಂದರೆ ಆದನ್ನು ಸಂಯೋಜನೆಗೊಳಿಸುವುದೆಂದು ಅರ್ಥವಾಗುವದಿಲ್ಲ. ಸಂಯೋಜನೆ ಮೂಡದೆ ಪ್ರತ್ಯೇಕವಿಟ್ಟ ನೆರೆಯ ಸಂಸ್ಥಾನದ ಆಡಳಿತ ನಡೆಸುವ ವಿಚಾರಕ್ಕೆ ಈ ಸೆಕ್ಷನ್ನು ಉದ್ದೇಶಿಸುವುದು (ಕೊಡಗಿಗೆ ಇದು ಅನ್ವಯಿಸಲಾರದು) ಹಾಗೆ ನೆರೆ ಪ್ರಾಂತದ ಸರಕಾರವು ಆಡಳಿತ ನಡೆಸುವದಾದರೂ ಅಲ್ಲಲ್ಲಿರುವ ಸಂಸ್ಥಾನದ ಜನರ ಅಭಿಪ್ರಾಯವನ್ನು ತನಗೆ ಯುಕ್ತ ಕಂಡ ರೀತಿಯಲ್ಲಿ ಪ್ರೆಸಿಡೆಂಟರು ತಿಳಿದು ಮಾಡಬೇಕೆಂದು.

ಜನರ ಅಭಿಪ್ರಾಯವನ್ನು ತಿಳಿಯುವ ವಿಧಾನಗಳು ಹಲವಿವೆ. ಪ್ರಾಥಮಿಕ ದಾನ ಪದ್ಧತಿಯಿಂದ ಚುನಾಯಿತರಾದ ಪ್ರತಿನಿಧಿಗಳ ಅಭಿಪ್ರಾಯವೇ ಜನರ ಅಭಿಪ್ರಾಯವಾಗುವದು. ಅದಲ್ಲದಿ ಪ್ರೆಸಿಡೆಂಟರು ಇನ್ನೊಂದು ವ್ಯವಸ್ಥೆ ಮಾಡಬೇಕೆಂದರೆ ಅದು ತಪ್ಪು. ಜನತೆಯ ಅಭಿಪ್ರಾಯವನ್ನು ರಿಫರೆಂಡಂ ಅಥವ ಪ್ಲೆಬಿಸೈಟ್ ಪ್ರಕಾರ ತಿಳಿಯಬೇಕಾದರೂ ವಿಶೇಷ ಖರ್ಚಿನ ಮಾರ್ಗವಾಗಿದೆ. ಆದ್ದರಿಂದ ಶಾಸನ ಸಭೆಯ ಅಭಿಪ್ರಾಯವನ್ನೇ ಜನರ ಅಭಿಪ್ರಾಯವೆಂದು ಪ್ರೆಸಿಡೆಂಟರು ತೆಗೆದುಕೊಳ್ಳಬೇಕಾದರೆ ಸಂಶಯವಿಲ್ಲ.

ಒಂದು ಪ್ರಾಂತವನ್ನು ಮತ್ತೊಂದರೊಡನೆ ವಿಲೀನ ಮಾಡುವ ಸಂದರ್ಭದಲ್ಲಿಯೂ ಇದೇ ರೀತಿ ವರ್ತಿಸಲಾಗುವದೆಂಬುದನ್ನು ಕೇಂದ್ರ ಶಾಸನ ಸಭೆಯಲ್ಲಿ ಗೃಹ ಮಂತ್ರಿಯವರಾದ ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್ಯರು ಸ್ಪಷ್ಟಪಡಿಸಿದ್ದಾರೆ. ಆವರು ಹೀಗೆ ಹೇಳುತ್ತಾರೆ:

It must be ensured that the people of the area to be merged desired merger and the people of the area in which it was to be merged were also agreeable to merger. This could be done by consulting the legislatures of the areas concerned or in the absence of a legislature by a plebicite or referendum. In such internal matters they should rule out ideas of plebicite.

"ವಿಲೀನೀಕರಣದ ಕಾಲಕ್ಕೆ ವಿಲೀನ ಹೊಂದುವ ಹಾಗೂ ಆದನ್ನು ಸೇರಿಸಿಕೊಳ್ಳುವ ಸಂಸ್ಥಾನಗಳೆರಡರ ಅಭಿಪ್ರಾಯವನ್ನು ತಿಳಿದೇ ಮಾಡಲಾಗುವುದು. ಈ ಅಭಿಪ್ರಾಯವನ್ನು ಆಯಾಯ ಪ್ರಾಂತಗಳ ಶಾಸನ ಸಭೆಯನ್ನು ಕೇಳಿ ತಿಳಿದು ಕೊಳ್ಳಲಾಗುವದು. ಆಯೋಯ ಪ್ರಾಂತಗಳಲ್ಲಿ ಶಾಸನ ಸಭೆಗಳಲ್ಲದ ಪಕ್ಷ ಮಾತ್ರ ಪ್ಲೆಬಿಸೈಟ್ ಯಾ ರೆಫರೆಂಡಂ ತೆಗೆಯಲಾಗುವುದೆ. ಇಂಥಾ ಆಂತರಿಕ ವಿಚಾರದಲ್ಲಿ ಪ್ಲೆಬಿಸೈಟ್ ತೆಗೆಯುವ ವಿಚಾರವು ಸಮಂಜಸವಲ್ಲ.

ಕೊಡಗಿನಲ್ಲಿ ಕಾನೂನ ಸಭೆ ಇದೆ. ಆದ್ದರಿಂದ ಕೊಡಗಿನ ಶಾಸನ ಸಭೆಯ ಅಭಿಪ್ರಾಯವನ್ನೇ ದೇಶದ ಜನರ ಅಭಿಪ್ರಾಯವಾಗಿ ತೆಗೆದುಕೊಳ್ಳುವರೆಂಬುದರಲ್ಲಿ ಸಂಶಯವಿಲ್ಲ.

ರಾಜ್ಯಪುನರ್ನಿರ್ಮಾಣ ಸಭೆಯಲ್ಲಿ ನಮ್ಮ ಪ್ರತಿನಿಧಿಯಾಗಿದ್ದ ಶ್ರೀ ಪೂಣಚ್ಚನವರು ಈ ಸೆಕ್ಷನ್ ಪಾಠವನ್ನು ಎತ್ತಿ ಹೇಳಿ ಪ್ರತಿ ಮತದಾರನ ಅಭಿಪ್ರಾಯವನ್ನು ವ್ಯಕ್ತಿಗತವಾಗಿ ತೆಗೆದುಕೊಳ್ಳಬೇಕೆಂದರು. ಇಂಗ್ಲಿಷಿನಲ್ಲಿ ಕೊಟ್ಟಿರುವ ಸೆಕ್ಷನ್ನನ್ನು ಇಂಗ್ಲಿಷ್ ತಿಳಿದವರು ಓದಿದರೆ ಅವರ ವಾದಕ್ಕೆ ತಿರುಕಿದೆಯೇ ಎಂಬುದು ತಿಳಿದಿರದು.

ಪತ್ತೆ ಅವರು ಜನತೆಯ ಕಣ್ಣಿಗೆ ಮಣ್ಣೆರಚಲೋ ಎಂಬಂತೆ ಸೆಕ್ಷನ್ ತಿಳಿಸನ್ನು ಎತ್ತಿ ಹೇಳಿದರು ಸೆಕ್ಷನ್ ತಿಳಿಸು ಹೀಗಿದೆ.—

(1) Until parliament by law otherwise provides, the constitution, powers and functions of the Coorg Legislative Council shall be the same as they were immediately before the Commencement of this Constitution.

(2) The arrangments with respect to revenues collected in Coorg and expenses in respect of Coorg shall, until other provision is made in that behalf by order, continue unchanged

(೧) ಪಾರ್ಲಿಮೆಂಟು ಹಾಗೂ ನಮೇರೆ ಬೇರೆ ವಿಧಾನ ಮಾಡುವ ವರೆಗೆ ಕೊಡಗು ಶಾಸನ ಸಭೆಯ ರಚನೆ, ಅಧಿಕಾರ ಮತ್ತು ಕೆಲಸಗಳು ಈ ರಾಜ್ಯ ಪುನರ್ನಿರ್ಮಾಣ ಜಾರಿಯಲ್ಲಿ ಬರುವ ಮುನ್ನ ಇದ್ದಂತೆ ಇರತಕ್ಕದ್ದು.

(೨) ಹಾಗೂನು ನೇರೆ ಬೇರೆ ವಿಧಾನ ಮಾಡುವ ವರೆಗೆ ಕೊಡಗಿನ ಆದಾಯ, ಖರ್ಚುಗಳ ವ್ಯವಸ್ಥೆಯು ಬದಲಾಗದೆ ಈ ಹಿಂದಿನಂತೆ ನಡೆಯತಕ್ಕದ್ದು.

ನಮ್ಮ ರಾಜ್ಯಪುನರ್ನಿರ್ಮಾಣ ಪರಿಷತ್ಸದಸ್ಯರಾದ ಶ್ರೀ ಪೂಣಚ್ಚನವರು ಯಾರ ಕಣ್ಣಿಗೆ ಮಣ್ಣೆರಚಲು, ಯಾವ ಬಡ ಮತದಾರರನ್ನು ಮಂಕುಬೂದಿಗೊಳಿಸಲು ದೊಡ್ಡ ದೊಡ್ಡ ಪುಸ್ತಕಗಳನ್ನು ಹಿಡಿದು ಈ ಸೆಕ್ಷನ್ನನ್ನು ಓದುವದು? ಸೆಕ್ಷನ್ನು ತಿಳಿಸಿದಲ್ಲಿ ಕೂಡಿಸಿದಂತೆ ಕೇಂದ್ರ ಸರಕಾರವು ಸಿ ಪ್ರಾಂತಗಳ ಮುಂದೆಯನ್ನು ಕಾಂಗ್ರೆಸ್ಸಿನ ರಚನೆ, ಅಧಿಕಾರ, ಕೆಲಸಗಳನ್ನೂ ಬಜೆಟ್ಟಿನ ಅಧಿಕಾರವನ್ನೂ ಸೂಕ್ತ ರೀತಿ ವಿಚಾರಿಸಿ ನಮಗೆ ಸೂಕ್ತ ಪ್ರತಿನಿಧಿಗಳನ್ನು ಕೊಟ್ಟಿದೆ. ಆದ್ದರಿಂದ ಈಗ ಈ ಸೆಕ್ಷನ್ ತಿಳಿಸು ಮತ್ತು ತಿಳಿತಪ್ಪು ಆದಂತಾಗಿದೆ. ಘಟನಾ ತಜ್ಞರೆಂಬಂತೆ ಆಗಾಗ ಪುಸ್ತಕದಿಂದ, ಓದುವ ಶ್ರೀ ಪೂಣಚ್ಚನವರಿಗೆ ಇದು ತಿಳಿಯದೇ? ಈ ಸೆಕ್ಷನಿಗೂ ಕೊಡಗಿನ ಭವಿಷ್ಯದ ವಿಚಾರದಲ್ಲಿ ಜನಾಭಿಪ್ರಾಯ ತೆಗೆಯುವ ವಿಚಾರಕ್ಕೂ ಸಂಬಂಧವೇನು?

ಮತದಾರರು ಈ ಸೆಕ್ಷನುಗಳನ್ನು ಸ್ವತಹ ಓದಲಿ. ನಂತರ ತಮ್ಮ ತೀರ್ಮಾನಕ್ಕೆ ಬರಲಿ. ಕನ್ನಡ ವಾರ್ತಾ ಪತ್ರಿಕೆಗಳು ಈ ವಿಚಾರವನ್ನು ಎಲ್ಲರೂ ಪರಿಶೀಲಿಸಿ ಸತ್ಯತೆಯನ್ನು ತಿಳಿದು ಅಪಪ್ರಚಾರವನ್ನೆ ದೂರಮಾಡಲಿ.

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕಂಪನಿಯ ಸಹಕಾರಿ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರ್ ಆದದ್ದು. (1921ರಲ್ಲಿ ಸ್ಥಾಪಿತವಾಗಿ.

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ.	2 05,500
ಕ್ಷೇಮನಿಧಿ	ರೂ.	59,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಊಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಸ್ಟಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಬ್ಯಾಂಕಿನ ದೀರ್ಘ ಕಂತಿನ ಸಾಲದ ಶಾಖೆಯ ಮೂಲಕ ದೀರ್ಘ ಕಂತಿನ ಸಾಲ ಕೊಡುವ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಪೊನ್ನಪ್ಪಯ್ಯ, ಬಿ. ಪಿ. ಅಪ್ಪಯ್ಯ, ಬಿ. ಎ. ಬಿ. ಎಲ್.
ಕಾರ್ಯದರ್ಶಿ. ಪ್ರೆಸಿಡೆಂಟ್ ಮತ್ತು ಮ್ಯಾನೇಜರ್.

ಶ್ರೀ ಪೂಣಚ್ಚನವರಿಂದ ದೇಶಕ್ಕಾದ ಸೇವೆ!

ಶ್ರೀ ಪೂಣಚ್ಚನವರು ರಾಜ್ಯಪುನರ್ ರಚನಾ ಸಮಿತಿಯಲ್ಲಿ ಸದಸ್ಯರಾಗಿ ಅಲ್ಪ ಸ್ವಲ್ಪ ದಿನದಿಂದ ಇಂದಿನ ವರೆಗೆ ಅಂದರೆ ಈ ಆರು ವರ್ಷಗಳಲ್ಲಿ ಅವರು ರಾಜ್ಯಪುನರ್ ರಚನಾ ಸಭೆಯ ಸದಸ್ಯರಾಗಿಯೂ, ಕೇಂದ್ರ ಶಾಸನ ಸಭೆಯ ಸದಸ್ಯರಾಗಿಯೂ ಕೊಡಗಿಗೆ ಮಾಡಿರುವ ಸೇವೆಯೇನೆಂಬುದನ್ನು ಕೊಡಗಿನ ಜನರು ಪರಿಶೀಲಿಸಬೇಕು. ಕೆಲವು ದಿನಗಳ ಹಿಂದೆ ಮಂಗಳೂರಿನ 'ಅರುಣ' ಪತ್ರಿಕೆಯು ದಿವಸಕ್ಕೆ ೪೫ ರೂಪಾಯಿಗಳ ಬತ್ತೆ ಪಡೆಯುತ್ತಿರುವ ಶ್ರೀ ಪೂಣಚ್ಚನವರು ಕಮ್ಮ ಮೆಂಬರಿಕೆಯ ಈ ಅವಧಿಯಲ್ಲಿ ಕಡಿಮೆ ರೂ. ೨೫,೦೦೦ ಸಂಪಾದಿಸಿರಬೇಕೆಂದೂ, ಅದರಲ್ಲಿ ೧೦,೦೦೦ ವನ್ನು ಈ ಜನಾನಾಜೆಗಾಗಿ ಕೆಸೆದಿಟ್ಟಿರು ವರೆಂದೂ ಒರೆದಿತ್ತು. ಅ ಪತ್ರಿಕೆಯ ಈ ವಾದದಲ್ಲಿ ತಿರುಳಿರಲೀ ಯೂ ಇಲ್ಲವಿರಲಿ, ದಿನಕ್ಕೆ ೪೫ ರೂಪಾಯಿಯಂತೆ ರಾಜ್ಯಪುನರ್ ರಚನಾ ಸಭಾ ಕಾರ್ಯ ನಿರ್ವಹಣೆಗಾಗಿ ಅವರು ಹೊಂದಿಕೊಂಡಿರಬೇಕಾ ದ್ದಷ್ಟು ದಿನ ಇವರು ಹೊಂದಿಕೊಂಡಿರಲೇಬೇಕು. ಆರು ವರ್ಷಗಳ ಅವಧಿಯಲ್ಲಿ ಇದು ಸಹಸ್ರಾರು ರೂಪಾಯಿಗಳಾಗುವದರಲ್ಲಿ ವಿಶೇಷವಿಲ್ಲ. ಬಹುಶಃ ಇವರ ಹಣವನ್ನು ಈ ರೀತಿ ಪಡೆದೇ ಈ ಪ್ರತಿನಿಧಿ ಶ್ರೀ ಪೂಣಚ್ಚನವರು ಹಿಂದೂಡಿಶಃ ಸ್ವಸ್ಥ ವಿನ್ನಿಂದ ಸೇವೆ ಸಲ್ಲಿಸಬಹುದು. ಅದರೆ ಕೊಡಗಿನಿಂದ, ಕೊಡಗಿನ ಹೆಸರನ್ನು ಹೇಳಿಕೊಳ್ಳಲು ಇವರು ಯಾವ ರೀತಿ ಕೊಡಗಿನ ಸೇವೆ ಮಾಡಿದ್ದಾರೆಂಬುದನ್ನು ಇವರನ್ನು ಆರಿಸಿ ಕಳುಹಿಸಿದ ಕೊಡಗಿನವರು ಪರಿಶೀಲಿಸುವುದು ಅವಶ್ಯ. ರಾಜ್ಯಪುನರ್ ರಚನಾ ಸಭೆಯ ಪ್ರಸಿದ್ಧ ಹಲವು ಸದಸ್ಯರು ಸಭಾಂಗಣದಲ್ಲೇ ಫೈಲ್ ಹೊಡೆಯುವುದು; ಸಭೆಗೆ ಗೈರು ಹಾಜರಾಗುವದು ಸಾಧಾರಣ ಸಂಪ್ರದಾಯವೆಂಬ ವಿಚಾರ ನಾವು ಪತ್ರಿಕೆಗಳಲ್ಲಿ ಓದಿದ್ದೇವೆ. ಸಭೆ ನಡೆಸಲು ಕೋರಂ ಬೊರೆಯದೆ ಮೆಂಬರುಗಳನ್ನು ಹುಡುಕಿ ತಂದು ಪೊಟೊಗ್ರಾಫ್ ತೆಗೆಸಿದ ಉದಾಹರಣೆಗಳೂ ಇವೆ. ಹಿಂದಿನ ಬೇಜವಾಬ್ದಾರಿಯ ಮಲಗಿ ಏದ್ದು ಮಾಡುವ ಗೊರಕೆಯ ಶಬ್ದದಿಂದ ಸಭೆಗೆ ತೊಂದರೆಯಾಗಿ ಆ ವಿಚಾರ ಅಧ್ಯಕ್ಷರು ಸದಸ್ಯರನ್ನು ಎಚ್ಚರಿಸಿದ ವಿಚಾರಗಳೂ ಇವೆ. ನಮ್ಮ ಪ್ರತಿನಿಧಿ ಪೂಣಚ್ಚನವರು ಆ ರೀತಿ ಮಾಡಿರಲಿಕ್ಕಿಲ್ಲವಾದರೂ ವಿಷಯಾದ ಪ್ರತಿನಿಧಿಯೊಬ್ಬನು ಮಾಡಬೇಕಾದ ಕರ್ತವ್ಯವನ್ನು ಮಾಡಿಲ್ಲವೆಂದು ಅಭಿಪ್ರಾಯ ಹಡಬಹುದು. ಪ್ರತಿನಿಧಿಯೊಬನು ಶಾಸನ ಸಭೆಯೊಳಗೆ ಆಗುವ ಕಾರ್ಯಕಲಾಪಗಳನ್ನು, ತಾನು ಪ್ರತಿನಿಧಿಸುವ ಭಾಗಕ್ಕೆ ಹೊಂದಿಸಿ ಬಂದ ಮಸೂದೆ, ನಿಯಮ ಗಳನ್ನೂ, ಆಯ ವಿಚಾರಗಳನ್ನೂ ತನ್ನನ್ನು ಆರಿಸಿ ಕಳುಹಿಸಿದ ಜನರಿಗೆ ಎಲ್ಲವನ್ನು ತಿಳಿಸುವುದು ಕರ್ತವ್ಯ. ಶ್ರೀ ಪೂಣಚ್ಚನವರು ಹಲವು ಬಾರಿ ಕೊಡಗಿಗೆ ಬಂದಿದ್ದಾರೆ. ಶಾಸನ ಸಭಾ ಕಾರ್ಯಗಳು ಇಡೀ ವರ್ಷ ನಡೆಯುವುದಿಲ್ಲ ಬಿಡುವಿದ್ದು ಕೊಡಗಿಗೆ ಹಲವಾರು ಬಾರಿ ಬಂದಿದ್ದಾಗಲಾದರೂ ಸಭೆಗಳಲ್ಲಿ ನಡೆದ ಘಟನೆಗಳಷ್ಟಾದರೂ ವಿವರಿಸಬೇಕಿತ್ತು. ಕೊಡಗಿನ ಭವಿಷ್ಯದ, ಕೊಡಗಿಗೆ ಸಂಧಾರಣೆಯಮೊದಲಾದ ಪ್ರಶ್ನೆಗಳ ಬಂದಾಗ ಆ ವಿಚಾರ ದೇಶದ ಉದ್ದಗಲಕ್ಕೂ ಪ್ರಚಾರ ಮಾಡಿ ದೇಶಕ್ಕೆ ತಾನು ಭರವಸೆ ಕೊಟ್ಟಿದ್ದಂತೆ ಜನಾಭಿಪ್ರಾಯ ತಿಳಿಯಬೇಕಿತ್ತು. ಶ್ರೀ ಪೂಣಚ್ಚನವರ ಅರು ವರ್ಷಗಳ ಈ ಜೀವನವು ಕೊಡಗಿನ ಜನರಿಗೆ ಕಶ್ಮಲೆಯ ರಾತ್ರಿಯಂತೆ. ಡೆಲ್ಲಿಯಲ್ಲಿ ಕೊಡಗಿನ ಪ್ರತಿನಿಧಿಯೊಬ್ಬ ಇದಾರೆ ಕಾರ್ಯಕಲಾಪಗಳು ಇಂದೂ ಮುಚ್ಚಿದ ಪುಸ್ತಕದಂತೆ! ತಾ ೧೫-೩-೫೦ರಲ್ಲಿ ಅವರು ಮಾಡಿದ ಭಾಷಣ ಮಾತ್ರ ಕೊಡಗು ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಉಪರಿಯಾಗಿ ಇವರು ಕೊಡಗಿಗೆ ಜಿಕ್ಕದೃಷ್ಟಿಯಿಂದ ವರ್ತಿಸಿಲ್ಲ ಎಂಬುದೇ ಪೇ ೃವಾಗುತ್ತಿತ್ತು.

ಕೊಡಗಿನ ಭವಿಷ್ಯ ಪ್ರಶ್ನೆಯು ಕೇಂದ್ರ ಶಾಸನ ಸಭೆಯ ಮುಂದೆ ಬಂದಾಗ, ಕರ್ನಾಟಕದ ಶ್ರೀ ಎಸ್. ನಿಜಲಿಂಗಪ್ಪನವರು ಕೊಡಗನ್ನು ವಿಲೀನಗೊಳಿಸಬೇಕೆಂದು ವಾದಿಸಿದಾಗ ಶ್ರೀ ಪೂಣಚ್ಚನವರು ಬಾಯಿಬಿಡಲಿಲ್ಲ. ಆ ಕಾಲಕ್ಕೆ ವಿಲೀನ ಕೊಡಲಿಲ್ಲ. ದೇಶದ ಜನರ ಅಭಿಪ್ರಾಯದಂತೆ ಕೊಡಗಿನ ಭವಿಷ್ಯ ನಿರ್ಣಯವಾಗಬೇಕೆಂದು ಎಷ್ಟು ಜಂಜಬೇಕಿತ್ತು. ಅಷ್ಟು ಬಾಯಿಬಿಡಲಿಲ್ಲ. ಕೊಡಗಿನ ಜನರು ಒಕ್ಕೂ ಕಂಠದ ತಂತ್ರಿಗಳ ಮೂಲಕ, ತಂತಿ ಗಳ ಮೂಲಕ, ಕೇಂದ್ರಕ್ಕೆ ಅಭಿಪ್ರಾಯ ಮಾಡಿಕೊಳ್ಳಬೇಕಾಗಿ ಒಂತಿ, ದೇಶದ ಜನತೆ ಒಲವನ್ನು ಕಂಡು ಶ್ರೀ ಪೂಣಚ್ಚನವರು ಕೊಡಗಿಗೆ ಸ್ವಧಾರಣೆ ಸ್ಥಿತ್ಯ ದೇರೆಯವಡೆಂದು ತಿಳಿದುಬಂದಾಗ ಸೂತ್ರ ತನ್ನ ಆಗಸ್ಟು ತಿಂಗಳ ಒಂದ ಭಾಷಣದಲ್ಲಿ ಕೊಡಗಿನ ಭವಿಷ್ಯವು ಜನರ ಅಭಿಪ್ರಾಯದಂತೆ ಆಗಲೆಂದೂ ಹೇಳಿದ್ದಾರೆಂದು ವಾರ್ತೆ ಇದು ಪೂಣಚ್ಚನವರು ಹೇಳಿದ್ದಲ್ಲ. ಕೊಡಗಿನ ಜನರ ಒಳ್ಳತನದ ವಿರೋಧದ ಕಾರಣ ಅವರ ಬಾಯಿಂದ ನಿರ್ಮಾಹಿಸಲ್ಪಟ್ಟ ಉಸುರಿದ್ದು.

ಆರ್ಥಿಕ ದೃಷ್ಟಿಯಿಂದಲೂ ಇವರಿಂದ ಕೊಡಗಿನ ಹಿತವೇನಾಗಲಿಲ್ಲ. ಕೊಡಗಿನಿಂದ ಕೇಂದ್ರ ಸರಕಾರಕ್ಕೆ ಜೋನುವಷ್ಟೂರು ೨೮ ಲಕ್ಷ ಸೆಂಟ್ರಲ್ ಎಕ್ಸೈಸ್ ಕಂದಾಯ ನೀಡುತ್ತಿರಲಕ್ಷ ಆದಾಯ ಕಂದಾಯಗಳಲ್ಲಿ ಒಂದು ಪಾಲು ಕೊಡಗಿಗೆ ದೊರೆಯಬೇಕು. ಕೆಲವು ವ್ಯಾಪಾರಗಳು ಇರದಲ್ಲಿ ಶೇಕಡ ೫೦/-ರಷ್ಟು ಪಡೆಯುತ್ತಿವೆ. ಕೊಡಗಿನಿಂದ ಕೇಂದ್ರಕ್ಕೆ ದೊರೆಯುವ ಈ ಆದಾಯದಿಂದ ಶೇಕಡ ೫೦/-ರಷ್ಟನ್ನು ಪಡೆಯಬೇಕೆಂದು ಕೊಡಗು ಕಾನ್ಸಿಲಿನಲ್ಲಿ ತೀರಾವಾದರೂ, ಕೇಂದ್ರದಲ್ಲಿರುವ ಶ್ರೀ ಪೂಣಚ್ಚನವರು ಇಮ ಕೊಡಗಿಗೆ ದೊರೆಯುವಂತೆ ಪ್ರಯತ್ನಿಸಬೇಕೆಂದು ಅಗಿನ ಚೀಫ್ ಕಮಿಷನರಾದ ಶ್ರೀ ಸಿ. ಪಿ. ಮೊದಲಿಯರರು ಕೇಳಿಕೊಂಡರೂ ಆ ಬಾಬಿಗೆ ಪೂಣಚ್ಚನವರು ಪ್ರಯತ್ನಿಸಿ ಸಾಧಿಸಿದ್ದೇನೂ ಕಂಡುಬಂದಿಲ್ಲ. ಬಹುಶಃ ಕೊಡಗಿನ ಸಂಯೋಜನೆಗೆ ಬೇಜವಾಬ್ದಾರಿಯ ಶ್ರೀ ಪೂಣಚ್ಚನವರಿಗೆ ಕೊಡಗಿನ ಸರಕಾರಕ್ಕೆ ಹೆಚ್ಚಿನ ಆದಾಯ ಬರುವದು ಬೇಕಿರಲಿಲ್ಲವೇನೋ! ಅರ್ಥಿಕ ಒಲದ ಪೇಲೆಯೇ ಧ್ರೀಪದ ಭವಿಷ್ಯ ನಿರ್ಧಾರವಾ ಳುವಾಗ ಕೊಡಗಿನ ಆರ್ಥಿಕ ಸ್ಥಿತಿಯನ್ನು ಶಿಥಿಲಗೊಳಿಸುವನು ಸಾಜೆ-ಜನಾ-ವಾದಿಗಳ ಯತ್ನವೆಂದು ಕೊಡಗಿನವರೆಲ್ಲರಿಗೆ ವಿವರವಾಗಿ ಆಕ್ಷೇಪಿಸಿ ಶ್ರೀ ಸಿ. ಎಂ. ಪೂಣಚ್ಚನವರ ಈ ಅರು ವರ್ಷಗಳ ವ್ಯಾಪ್ತಿಸಿನ್ಯ ವಾತ್ಸ ಅಧಿಕಾರವ ಲ್ಲಿ ಹೇಳಿಕೊಳ್ಳಬಹುದಾದ ಹಿತಕಾರ್ಯ ವೇನೂ ಕೊಡಗಿಗೆ ಆಗಿಲ್ಲವೆಂದರೆ ತ ಪ್ಪಾಗಲಾರದು. ಪೊನ್ನಪ್ಪ.

ಅನ್ಯಾಯದ ಒಂದು ಆರೋಪ

ಶ್ರೀ ಸಿ. ಎಂ. ಪೂಣಚ್ಚನವರು 'ಕೊಡಗು' ಪತ್ರಿಕೆಯ ವೇಲೆ ಅನ್ಯಾಯದ ಆರೋಪ ಹೊರಿಸುತ್ತಿದ್ದಾರೆ 'ಕೊಡಗು, ಪತ್ರಿಕೆಯಲ್ಲಿ 'ಕೊಡಗಿನ ಕವರ್' ಎಂಬುವರು "ಪೂಣಚ್ಚನವರೂ ಆನೆಗಳ ಜಕೀಯವೂ" ಎಂಬ ಲೇಖನ ಬರೆದಿದ್ದರು. ಅದಕ್ಕೆ ಉತ್ತರವಾಗಿ ನಾನು ಒಂದು ಲೇಖನ ಕಳಿಸಿದ್ದೆ. ಪತ್ರಿಕೆಯು ಅದನ್ನು ಪ್ರಕಟಿಸಲಾರದೆಂದು ಬರೆದಿದ್ದಾರೆ' ಎಂದು ಅಪಪ್ರಚಾರ ಮಾಡುತ್ತಿದ್ದಾರೆ. ನನ್ನ ಸ್ವಾರ್ಥವನ್ನು ಸಾರ್ವಜನಿಕರು ಎಷ್ಟಾದರೂ ಅಳತೆಯನ್ನು ಅಡ್ಡ ದಾರಿ ಹಿಡಿಯುವದು ಅದರೂಪವ ಲ್ಲದಿದ್ದರೂ ಶ್ರೀಯುತರು ಈ ರೀತಿ ಕೀಳು ತರಗತಿಯ ಪ್ರಚಾರ ಮಾಡಿತ್ತಾಧದು ವಿಷಾದಕರ. 'ಕೊಡಗಿನ ಕುವರರ' ಲೇಖನಕ್ಕೆ ಉತ್ತರವಾಗಿ ಶ್ರೀ ಪೂಣಚ್ಚನವರು ಲೇಖನ ಬರೆದು ಕಳಿಸಿಲಿಲ್ಲ. ಬದಲು ಕೇಂದ್ರ ಶಾಸನ ಸಭೆಯ ನಡನೆಯ ಟೈಪ್ ಮಾಡಿದ ಅಂ ಇಂಗ್ಲಿಷ್ ಭಾಷೆಯ ಪುಟಿಗಳನ್ನು ಕಳಿಸಿದ್ದರು. ಅದನ್ನು ಕನ್ನಡದಲ್ಲಿ ತರ್ಜಮೆ ಮಾಡಿ ಹಾಕಿದ್ದರೆ ಪತ್ರಿಕೆಯ ಕಡಿಮೆ ಮೂರು ಪುಟಗಳಾಗಬಹುದಿತ್ತು. ಈ ನಡವಳಿಕೆಯ ಪ್ರತಿಯ ಜೊತೆಯಲ್ಲಿ ಶ್ರೀಯುತರು ಪತ್ರ ಬರೆದು ಇದನ್ನ ಪೂರ್ಣ ಪ್ರಕಟಿಸದರೂ ಆಗಲ್ಲ ಜನರು ಚೆಪ್ಪು ಹುಬ್ಬುಂಕಟೇಕಿಸಬಹುದೆಂದು ಬರೆದಿದ್ದರು. 'ಕೊಡಗು' ಕನ್ನಡ ಪತ್ರಿಕೆಯಾಗಿದ್ದ ಇದರಲ್ಲಿ ಇಂಗ್ಲಿಷ್ ಲೇಖನ ಪ್ರಕಟಿಸುವಂತಿಲ್ಲ. ನೀವಾಗಿ ಆ ಪ್ರೊಸೀಡಿಂಗ್ಸಿನಲ್ಲಿ ಕೊಡಗಿಗೆ ಅನ್ಯಾಯವಾದ ಅನೇಕ ವಿಚಾರಗಳು ಇದ್ದವು. ಆದ್ದರಿಂದ ಆದರಲ್ಲಿ ನನಗೆ ವ್ಯಾಮೋಹವಿದ್ದದ್ದೇ ನನಗೆ ತೋರಿದ್ದನ್ನು ಎತ್ತಿ ಪ್ರಕಟಿಸಿದರೆ ಹಿಂದೆ ಬೇಕೆಯ ಕಾಲಕ್ಕೆ ಆದರ ಜವಾಬ್ದಾರಿಯನ್ನು ಸಮ್ಮ ಮೇಲೆ ಹೊರಿಸಲಂತಿದ್ದ ಕಾರಣ ಶ್ರೀಯುತರಿಗೆ ಪತ್ರ ಬರೆದು ತಾವೇ ಅದನ್ನು ಕನ್ನಡದಲ್ಲಿ ಬರೆದು ಕೊಡಬೇಕೆಂದೂ, ಅವರಿಗೆ ಆದಕ್ಕಾಗಿ ಪೂರ್ತಿ ಒಂದು ಪುಟವನ್ನು ವಿಸ್ತಾರಾಗಿರಿಸುವೆವೆಂದೂ ಬರೆದಿದ್ದೆವು. ಶ್ರೀಯುತರು ಹಾಗೆ ಮಾಡದೆ ಈಗ ಅನ್ಯಾಯದ ಟೀಕೆ ಮಾಡುತ್ತಿದ್ದಾರೆ. ಕೊಡಗಿನ ಜನರು ಇವರು ಕೇಂದ್ರದಲ್ಲಿ ಮಾಡಿದ ಭಾಷಣಗಳ ವಿಚಾರ ತಿಳಿಯಬೇಕೆಂಬ ಇಚ್ಛೆ ಇವರಲ್ಲಿ ಇದ್ದಿದ್ದರೆ ಇವರು ಬೇಜವಾಬ್ದಾರಿಯಂದ ಮಾಡಿದಂತೆ ಇಡೀ ಸಭೆಯ ಪ್ರೊಸೀಡಿಂಗ್ಸನ್ನೇ ಇಂಗ್ಲಿಷಿನಲ್ಲಿ ಕಳುಹಿಸುತ್ತಿರಲಿಲ್ಲ. ಇವರು ತಾರೀಕು ೧೬-೩-೫೦ರಲ್ಲಿ ಕೇಂದ್ರದಲ್ಲಿ ಮಾಡಿದ ಭಾಷಣದ ಪ್ರತಿಯನ್ನು ನನಗೆ ಕಳುಹಿಸಿದಾಗ ಅದನ್ನು ಕನ್ನಡಕ್ಕೆ ತರ್ಜಮೆ ಮಾಡಿ ಪ್ರಕಟಿಸಿದ್ದೆವು ಈ ಸಾರಿ ಕಳುಹಿಸಿದ ಭಾಷಣವಾಗಿಂದೆ ಪ್ರೊಸೀಡಿಂಗ್ಸ್ ಆಗಿದ್ದು ಕೊಡಗಿಗೆ ಸಂಬಂಧಿಸಿದ ವಿಚಾರಗಳೂ ಅಡಕವಾಗಿದ್ದುದರಿಂದ ಪ್ರಾಮುಖ್ಯ ವಿಚಾರಗಳನ್ನು ಹೆಕ್ಕಿ ಕೊಡುವ ಜವಾಬ್ದಾರಿಯನ್ನು ನಾವೇ ಬಿಟ್ಟಿದ್ದೆವು. ಅಂದಿನಿಂದ ಇಂದಿನ ವರೆಗೆ ನೂರಾರು ತಿಂಗಳುಗಳು ಕಳೆದರೂ ಶ್ರೀಯುತರು ಲೇಖನ ಬರೆದು ಕಳಿಸಲು ಗೋಜಿಗೆ ಹೋಗದೆ ಈಗ ಅನ್ಯಾಯದ ಆರೋಪ ಹೊರಿಸುತ್ತಿದ್ದಾರೆ.

'ಕೊಡಗು' ಪತ್ರಿಕೆಯು ಎಲ್ಲಾ ವಿಧದ ಅಭಿಪ್ರಾಯಗಳ ಪ್ರಕಟಣೆಗೂ ಅವಕಾಶ ಕೊಟ್ಟಿದೆ. ಕೊಡಲ್ತಿಪೆ ಸಂಯೋಜನಾವಾದಿಗಳು ತಮ್ಮ ವಿಚಾರ ಪ್ರಕಟಿಸುವದಿಲ್ಲವೆಂದು ಒಮ್ಮೆ ಆರೋಪ ಹೊರಿಸಿದರು. ಆ ಕಾಲದಲ್ಲಿ ಕೊಡಗಿನ ಸಂಯೋಜನೆಯಿಂದ ಆಗಬಹುದಾದ ಭವಿಷ್ಯಗಳ ಕುರಿತು ವಿಸ್ತೃತವಾಗಿ ಬಿಡಿಬಿಡಿಗಳಿಗೆ ಈ ಪತ್ರಿಕೆಯಲ್ಲಿ ಎಡೆ ಕೊಡೆಯೆಂದು ನಾವು ಅಗ್ರಲೇಖನ ಬರೆದು ಆಹ್ವಾನಿಸಿದುದಲ್ಲದೆ ಸಂಯೋಜನಾ ಪಕ್ಷದ ಮುಂಚೂಣಿಗಳಾದ ಶ್ರೀ ಎಸ್. ಸೋಮಣ್ಣನವರೇ ಮೊದಲಾದವರಿಂದ ಲೇಖನಗಳನ್ನೂ ಆಹ್ವಾನಿಸಿ ಪತ್ರ ಬರೆದಿದ್ದೆವು. ಇಂದೂ ಕೂಡ ತಮ್ಮ ಅಭಿಪ್ರಾಯಗಳನ್ನು ತತ್ವಬದ್ಧವಾಗಿ ಪ್ರಕಟಿಸಲು ಎಡೆ ಇದೆ. ಆದರೆ ಸಂಯೋಜನಾವಾದಿಗಳಾರೂ ಇಂದಿನ ವರೆಗೆ ಆ ವಿಚಾರದಲ್ಲಿ ಲೇಖನ ಬರೆದಿಲ್ಲ. ಸಂಯೋಜನೆಯಿಂದಾಗುವ ಲಾಭ ಲಾಭಗಳನ್ನು ಜನತೆಯು ವಂದಿಡಿದ ತೀರ್ಮಾನ ಮಾಡುತ್ತಿರುವರು. ಹೀಗೆ ಆ ವ್ಯಾಜ್ಯವಿತ್ತಿದ್ದರೂ ತಮ್ಮ ಕರ್ತವ್ಯವನ್ನು ಮಾಡದೆ ಅನ್ಯಾಯದ ಆರೋಪವನ್ನು ಹೊರಿಸುವದು ತೀರಾ ಅನ್ಯಾಯ. ಶ್ರೀ ಪೂಣಚ್ಚನವರಾಗಲೀ ಇತರ ಸಂಯೋಜನಾವಾದಿಗಳಾಗಲೀ ಅನುಕ್ತದ ಪಥವನ್ನು ಹಿಡಿದು ಅಪಪ್ರಚಾರ ಮಾಡುವದು ಯೋಗ್ಯವಲ್ಲ.

ಸಂಪಾದಕ.
'ಕೊಡಗು.'

Edited Printed & Published by P. T. Belliappa at 'Kodagu' Press, Mercara, for 'Kodagu' Ltd.

ಕೊಡಗು

ತಾ. ೫೫-೧೧-೪೯ರಂದಿನ ಸಂಚಿಕೆ ಶನಿವಾರ

ವಿನೋಬಾರವರ ಭೂಮಿ ದಾನ ಯಾತ್ರೆ.

ಮಹಾತ್ಮಾ ಗಾಂಧಿಯವರ ನಿಜ ಶಿಷ್ಯರಲ್ಲಿ ಅಗ್ರಗಣ್ಯರಾದ ಆಚಾರ್ಯ ವಿನೋಬಾರವರು ಆದರ್ಶ ಸನ್ಯಾಸಿಗಳು. ಹಿಂದೂ ದೇಶದ ವೇದಾಗಮಗಳಲ್ಲಿ ಪವಿತ್ರವೆಂದು ಹೇಳಲ್ಪಡುವ ತತ್ವ ಸಿದ್ಧಾಂತಗಳ ಸಾಕಾರ ಮೂರ್ತಿಗಳು. ಗಾಂಧೀಜಿಯವರ ನಿಧನದ ನಂತರ ಕಾಂಗ್ರೆಸು ಆಡಳಿತ ಜವಾಬ್ದಾರಿಯನ್ನು ಹೊತ್ತು ವಿಧಾಯಕ ಕಾರ್ಯಕ್ರಮವನ್ನು ಬಿಟ್ಟು ಅಧಿಕಾರ ರಾಜಕೀಯಕ್ಕೆ ಕೈಯಿಕ್ಕಿದಂದಿನಿಂದ ಕಾಂಗ್ರೆಸ್ಸನ್ನು ಬಿಟ್ಟು ಗಾಂಧೀಜಿಯವರ ಕಲ್ಪನೆಯ ಸರ್ವೋದಯ ಸಮಾಜ ರಚನೆಯ ತತ್ವಕ್ಕಾಗಿ ದುಡಿಯುತ್ತಿರುವವರು. ಅವರು ನೆಹರೂ ಸರಕಾರದ ಅನಿಶ್ಚಿತ ಮತ್ತು ಆಯಸ್ಕರ್ಯ ನೀತಿಯನ್ನು ಉಗ್ರವಾಗಿ ಟೀಕಿಸಿ ತಮ್ಮ ಹೃದಯದಲ್ಲಿ ಉಕ್ಕುತ್ತಿದ್ದ ಭಾವನೆಗಳನ್ನು ಹೊರಚಿಮ್ಮಿದ್ದಾರೆ. ಕಾಂಗ್ರೆಸ್ ತತ್ವ ಪ್ರಣಾಳಿಕೆಯಲ್ಲಿ ಸೂಚಿತವಾದ ಮತ್ತು ರಾಜ್ಯಳಿಟನೆಯಲ್ಲಿ ಅಡ್ಡಾಸನವಿತ್ತಿರುವ ಎಲ್ಲರಿಗೂ ಅನ್ನ, ಬಟ್ಟೆ, ಸಮಾನಾವಕಾಶಗಳನ್ನು ಒದಗಿಸಲಾರದೆ ನೆಹರೂ ಸರ್ಕಾರವನ್ನು ಟೀಕಿಸಿ, "ಪ್ರತಿಜ್ಞೆ ಪೂರ್ಣ ಮಾಡಿರಿ; ಇಲ್ಲವೇ ಪದತ್ಯಾಗ ಮಾಡಿರಿ" ಎಂದು ಎಚ್ಚರಿಸಿರುವರು.

ಪಂಡಿತ ನೆಹರೂರವರು ಕೇಂದ್ರ ಸರಕಾರದ ಪಂಚವಾರ್ಷಿಕ ಯೋಜನೆಯನ್ನು ಟೀಕಿಸಿದ ವಿನೋಬಾರವರನ್ನು ಕಾಣುವ ಆಸೆ ಪ್ರಕಟಿಸಿದ ಕಾರಣ ವಿನೋಬಾರವರು ವಾರ್ಧಾದ ತನ್ನ ಆಶ್ರಮದಿಂದ ಡೆಲ್ಲಿಗೆ ಸಾವಿರ ಮೈಲುಗಳನ್ನು ಕಾಲ್ನಡಿಗೆಯಲ್ಲಿ ಪ್ರಯಾಣ ಮಾಡಿ ಡೆಲ್ಲಿಗೆ ಮುಟ್ಟಿದ್ದಾರೆ. ೫೭ ವಯಸ್ಸಿನ ಭಗವದ್ಭಕ್ತ ಸನ್ಯಾಸಿಯು ತನ್ನ ಆತ್ಮಬಲದಿಂದ, ಬ್ರಹ್ಮತೇಜದಿಂದ ಅಸಾಧ್ಯ ಕಾರ್ಯಗಳನ್ನು ಮಾಡತೊಡಗಿದ್ದಾರೆ.

ಹೈದರಾಬಾದಿನ ತೆಲಂಗಣಾ ಜಿಲ್ಲೆಯಲ್ಲಿ ಕಮ್ಯೂನಿಸ್ಟರ ಉಪಟಳದಿಂದ ಜಮೀನ್ದಾರರಿಗೂ ಭೂಮಿ ಇಲ್ಲದ ಬಡ ಜನತೆಗೂ ಘರ್ಷಣೆಯಾಗಿ ಶಾಂತಿಯ ಹೆಸರೇ ಇಲ್ಲದಾಗಿತ್ತು. ಸರಕಾರದ ಅಧಿಕಾರಿಗಳ ಮಾತಿರಲಿ; ಕಾಂಗ್ರೆಸ್ಸಿಗರಿನ್ನುವವರ ಕೊಲೆ ಅಲ್ಲಿ ನಿಶ್ಚಯವಾಗಿತ್ತು. ಇಂಥಾ ಅಶಾಂತಮಯ ವಾತಾವರಣವಿದ್ದ ಪ್ರದೇಶಕ್ಕೆ ವಿನೋಬಾರವರು ತಮ್ಮ ಅಮರ ಪ್ರೀತಿಯ ಸಂದೇಶವನ್ನು ಸಾರಿದರು. ಪಾದಾಚಾರಿಯಾಗಿ ಹಳ್ಳಿ ಹಳ್ಳಿಗಳನ್ನು ಸುತ್ತಿದರು. ಬಡ ಜನರಿಗೆ ಭೂಮಿ ಇಲ್ಲದ್ದೇ ಅಲ್ಲಿಯ ಚಳವಳಿಕ್ಕೆ ಕಾರಣವೆಂದು ತಿಳಿದುಕೊಂಡರು. ಆದ್ದರಿಂದ ತನ್ನ ಪ್ರೀತಿ ಪ್ರೇಮದ ಬಲದಿಂದ ಜಮೀನ್ದಾರರಿಂದ ಭೂಮಿಯನ್ನು ದಾನವಾಗಿ ಪಡೆದು ಬಡ ಜನರಿಗೆ ಹಂಚುವ "ಭೂಮಿ ದಾನ" ಯಾತ್ರೆಯನ್ನು ಪ್ರಾರಂಭಿಸಿದರು. ಪ್ರತಿ ಸಂಧ್ಯೆಯ ಸಮಯದಲ್ಲಿ ಪ್ರಾರ್ಥನಾ ಸಭೆಗಳಲ್ಲಿ ತನ್ನ ಹೃದಯವನ್ನು ಜನತೆಯ ಮುಂದೆ ಪೆರೆದಿಟ್ಟರು. ಇವರ ಕಾಯ, ಕರ್ಮ, ಭಾವಗಳ ಪರಿಶುದ್ಧತೆ, ಬಡ ಜನರಿಗಾಗಿದುನ ಅವರ ಉತ್ಸಾಹಕ್ಕೆ, ಕಲ್ಲು ಹೃದಯವನ್ನೂ ಕರಗಿಸಿನವು. ಜಮೀನ್ದಾರರು ಭೂಮೂಲಿಕರು ಉದಾರವಾಗಿ ತಮ್ಮ ಲ್ಲಿರುವ ಭೂಮಿಯ ಬಹು ಅಂಶವನ್ನು ದಾನವಾಗಿ ಕೊಡಲು ಪ್ರಾರಂಭಿಸಿದರು. ವಿನೋಬರು ಈ ಭೂಮಿಯನ್ನು ಅಲ್ಲಲ್ಲೇ ಬಡಜನರಿಗೆ ಹಂಚಿದರು. ಈ ರೀತಿಯ ಕಾರ್ಯಕ್ರಮ ನಡೆದು ಸಹಸಾರು ಎಕರೆಗಳು ಹಂಚಲ್ಪಟ್ಟವು. ವಿನೋಬಾರವರು ಹಿಂದೂ ದೇಶದಲ್ಲಿಯ ಬಡಜನರ ದುಃಖ ನಿವಾರಣೆಗೆ ಇದು ರಾಜಮಾರ್ಗವೆಂಬುದನ್ನು ಮಾಡಿತೋರಿಸಿದರು. ಕಾಂಗ್ರೆಸ್ ಸರಕಾರವು ತನ್ನ ಘೋಷಣೆಯಲ್ಲಿ ಜಮೀನ್ದಾರ ಪದ್ಧತಿಯು ನಿರ್ಮೂಲನಕ್ಕೂ, ಭೂಮಿ ಇಲ್ಲದ ಒಕ್ಕಲಿಗರಿಗೆ ಭೂಮಿ ಒದಗಿಸಲಿಕ್ಕೂ ಕಟ್ಟುಬದ್ಧವಾಗಿದ್ದರೂ ಸರಕಾರದ ಅಳಿವಿನ ಕಾರಣ ಇವುಗಳನ್ನು ಈ ವರೆಗೆ ಜಾರಿಗೆ ತಾರದೆ ಪರಿಸ್ಥಿತಿಯು ದಿನೇ ದಿನೇ ಹಾಳಾಗುತ್ತಿದೆ. ಆದ ಕಾರಣನೇ ಹಿಂದೂ ದೇಶದಲ್ಲಿ ಕಮ್ಯೂನಿಸ್ಟ್, ತತ್ವ ಬೆಳೆಯತೊಡಗಿದೆ. ವಿನೋಬಾರವರು ತಮ್ಮ ವ್ಯಕ್ತಿಗತ ಕಾರ್ಯದಿಂದ ಜಗತ್ತಿನ ಮಹಾ ಸಮಸ್ಯೆಗೆ ಉತ್ತರವನ್ನು ಕಾರ್ಯತಃ ಮಾಡಿ ತೋರಿಸಿದ್ದಾರೆ. ಪರಿಣಾಮವಾಗಿ ವರ್ಷಗಳ ವರೆಗೆ ಅಧಿಕಾರದಿಂದ, ಕೋವಿತು ಬಾಕಿಗಳ ಬಲದಿಂದ ಯತ್ನಿಸಿದರೂ ತೆಲಂಗಣಾದಲ್ಲಿ ಶಾಂತಿಯನ್ನು ಪಸ್ತಾಪಿಸಲು ಸರಕಾರಕ್ಕೆ ಅಸಾಧ್ಯವಾಗಿದ್ದಿತಾದರೂ ವಿನೋಬಾರವರು ಪ್ರೇಮದಿಂದ ಹಿಂಸಾಪಾತಾನರ್ತಣವನ್ನು ಶುಚಿಗೊಳಿಸಿ ತೆಲಂಗಣದಲ್ಲಿ ಕಾಂತಿ ನೆಲೆಸುವಂತೆ ಮಾಡಿದ್ದಾರೆ. ಇವರ ಈ 'ಭೂಮಿದಾನ' ಯಜ್ಞವು ಜಗತ್ತಿನ ಗಮನವನ್ನೆ ರೆಯಿಸಿವೆ.

ನಿನೋಬಾರವರು ಈ ವರೆಗೆ ಅರ್ಧ ಲಕ್ಷ ಎಕರೆಗಳಷ್ಟು ಭೂಮಿಯನ್ನು ಧರ್ಮಾರ್ಥ ಪಡೆದು ಬಡವರಿಗೆ ಹಂಚಿದ್ದಾರೆ. ಹಿಂದೂದೇಶದ ಪರಿಸ್ಥಿತಿ ಸುಧಾರಿಸಲು ೫೦ ಮಿಲಿಯ ಎಕರೆಗಳ ದಾನವಾದರೂ ಬರಬೇಕೆಂದು ಅವರು ಹೇಳುತ್ತಾರೆ. ಅವರು ವರ್ಧಾದಿಂದ ಡೆಲ್ಲಿಯ ವರೆಗೆ ದಾರಿಯಲ್ಲಿ ಇದೇ ಕೆಲಸವನ್ನು ಮಾಡಿದರು. ಅವರ ಸಂಧ್ಯಾಪ್ರಾರ್ಥನೆಯ ಕಾಲಕ್ಕೆ ಅವರು ಆಡುವ ಪವಿತ್ರ ಮಾತುಗಳಿಗೆ ಮನಕರಗದವರಿಲ್ಲ. ಬಡ ಜನರ ಕೊರಗಿಗಾಗಿ ಕಣ್ಣೀರು ಮಿಡಿಯದವರಿಲ್ಲ. ಇದು ಪವಿತ್ರಅತ್ಮತೇಜದ ಬಲವು ಅಸಾಧ್ಯವನ್ನು ಸಾಧಿಸುವದೆಂದು ತೋರಿಸುತ್ತಿದೆ. ಕಾಂಗ್ರೆಸ್ ಸರಕಾರವು ನೂಡಿದ ಕರ್ತವ್ಯಚ್ಯುತಿಯನ್ನು ತೋರಿಸಿ ತಾನು ವ್ಯಕ್ತಿಗತ ಯಾತ್ರೆಯನ್ನು ಮುಂದುವರಿಸಿದ್ದಾರೆ. ಸರಕಾರ ಕಣ್ತೆರೆದು ವರ್ತಿಸಬೇಕು.

ಅವರು ಕಾಂಗ್ರೆಸ್ ಸರಕಾರವನ್ನು ಟೀಕಿಸಿ ಹೇಳಿದ ಮಾತನ್ನು ಸರಕಾರ ಗಮನಿಸಲೇಬೇಕು. "ನಿಮ್ಮ ಪ್ರತಿಜ್ಞೆಯಂತೆ ನೀವು ವರ್ತಿಸಿರಿ. ದೇಶಕ್ಕೆ ಆಹಾರವನ್ನೂ ಬಟ್ಟೆಯನ್ನೂ ಒದಗಿಸಿರಿ. ಮುಖ್ಯ ಮಂತ್ರಿಪದದಿಂದ ನೀವು ತೊಟ್ಟ ಪಣ ಇಡೀ ರಾಷ್ಟ್ರದ ಪಣವಾಗಿದೆ" ಎಂದುದಲ್ಲದೆ ತುಲಸೀದಾಸರ ವಚನವನ್ನು ಹೇಳುತ್ತಾ—

ರಘುಕುಲ ರೀತಿ ಸದಾ ಚಲಿ ಆಯೂ
ಪ್ರಾಣ ಜಾಯು ಪರು ವಚನ ನ ಜಾಯೂ॥

ಶ್ರೀ ರಾಮನ ಆದರ್ಶದಂತೆ ಪ್ರಾಣ ಕ್ಕಿಂತಲೂ ಮಿಗಿಲಾಗಿ ನೂಡಿನ್ನು ಪರಿಪಾಲಿಸಬೇಕೆಂದು ಹೇಳಿದ್ದಾರೆ. ಕರ್ಮವೀರ ಆಚಾರ್ಯ ವಿನೋಬಾರವರು ಗಾಂಧೀವಾದದ ಬೆಳಕು. ಆ ಬೆಳಕು ನಾಲ್ದೆಸೆಗೂ ಬೆಳಗಲಿ.

ವರ್ತಮಾನ.

ನಿವೃತ್ತ ಅಧ್ಯಾಪಕರಾದ ಶ್ರೀ ಕಾಡ್ಯಮಾಡ ಅಪ್ಪಣ್ಣನವರು ತಾ. ೧೪ ರಲ್ಲಿ ಅವರ ಒಳಗದವರಿಗೂ, ಗ್ರಾಮಸ್ಥರಿಗೂ ಸೇರಿ ತಮ್ಮ ಪೆನ್ಷನಿನ ನಿಮಿತ್ತವಾಗಿ ಒಂದು ಔತಣವನ್ನು ತಮ್ಮ ಮನೆಯಲ್ಲಿ ಕೊಟ್ಟರು.

ಸೋಮವಾರ ಲ್ಲಿ ಸ್ವತಂತ್ರ ಜನತಾ ಪಕ್ಷ ವೆಂಬ ರಾಜಕೀಯ ಸಂಸ್ಥೆಯೊಂದನ್ನು ಸ್ಥಾಪಿಸಲಾಗಿದೆಯೆಂದೂ, ಅದು ಮುಂಬರುವ ಚುನಾವಣೆಯಲ್ಲಿ ತನ್ನ ಉಮೇದುವಾರರನ್ನು ನಿಲ್ಲಿಸಲಿದೆಯೆಂಬುದೂ ತಿಳಿಯಬಂದಿದೆ.

ತಾ. ೧೫ರಲ್ಲಿ ಜೋಡುಪಾಲದ ಹತ್ತಿರ ಹಲವು ದಿನಗಳಿಂದ ದನಗಳನ್ನು ನಷ್ಟಪಡಿಸುತ್ತಿದ್ದ ಹುಲಿಯೊಂದು ಒಂದು ಎತ್ತಿನ ಜೀವ ಸಹಿತ ಹಿಡಿದು ಎಳೆದುಕೊಂಡು ಹೋಗುತ್ತಿದ್ದಾಗ ಶ್ರೀ ಚಿರಿಯಮನೆ ಸೋಮಯ್ಯನವರು ಗುಂಡಿಕ್ಕಿ ಕೊಂದಿರುವರು. ಎತ್ತು ಎಮುಕೆದೆಯಂತೆ

ತಾ. ೧೫ರಲ್ಲಿ ಸಮಾಜ ಶಿಕ್ಷಣ ದಿನಾಚರಣೆಯನ್ನು ಕುಂದ ಶಾಲೆಯಲ್ಲಿ ಮುದ್ದಿರ ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿಯೂ ತಾಲೂಕರಲ್ಲಿ ಸಂಯುಕ್ತರಾಷ್ಟ್ರ ದಿನಾಚರಣೆಯನ್ನು ಶ್ರೀ ಮನೆಯಪಂಡ ಬಿದ್ದಪ್ಪನವರ ಅಧ್ಯಕ್ಷತೆಯಲ್ಲೂ ನಡೆಸಲಾಯಿತು.

ಕೊಡಗು ಶಾಸನ ಸಭೆಯ ಮತದಾರರ ಪಟ್ಟಿಯ ನಕಲುಗಳು ೩೦೦ ಹೆಸರುಗಳ ಕಡಿತೆ ಇರುವ ಪ್ರತಿ ಹಾಳೆಗೆ ೧೫ ಆಣೆ ದರದಂತೆ ಆರ್ಡರುದಾರರಿಗೆ ಉತ್ತರ ಮತ್ತು ದಕ್ಷಿಣ ಕೊಡಗು ಸುಳ್ಯದಾರರಲ್ಲಿ ದೊರೆಯುವುದೆಂದು ತಿಳಿದುಬಂದಿದೆ.

ಮದ್ರಾಸು ವಿಶ್ವವಿದ್ಯಾಲಯದ ಕಳೆದ ಬಿ. ಎ. ಪರೀಕ್ಷೆಯಲ್ಲಿ ಶ್ರೀಗಳಾದ ಬೊಪ್ಪೇರಿಯಂಡ ಎಂ. ಕಾರ್ಯಪ್ಪ, ಮೇಚಂಡ ಎ. ಮುತ್ತಪ್ಪ, ಮತ್ತು ಕುಕ್ಕೆರ ಟಿ. ಮಂದಣ್ಣ ಇವರುಗಳೂ, ಇಂಟರ್ ಮೀಡಿಯೇಟ್ ಪರೀಕ್ಷೆಯಲ್ಲಿ ಶ್ರೀಗಳಾದ ಬೊಪ್ಪಂಡ ಉತ್ತಪ್ಪ ಏನಂಡ ಕೆ. ಚಿಣಪ್ಪ, ಪುಟ್ಟಿಚಂಡ ಕಾಳಪ್ಪ, ಕೇಟೋಳಿರ ಎಂ. ಸುಬ್ಬಯ್ಯ ಇವರುಗಳೂ ತೇರ್ಗಡೆಯಾಗಿರುವರು.

ನಾಪೋಕ್ಲು ಮಹಿಳಾ ಸಹಕಾರ ಸಮಾಜದ ಸದಸ್ಯರಲ್ಲಿ ಕಳೆದ ಹಿಂದೀ ರಾಷ್ಟ್ರಭಾಷಾ ಸರ್ಕಾರಕ್ಕೆ ಕುರಿತ ಆರು ಮಂದಿಯ ಸ್ಪೆಷಲ್ ಕ್ಲಾಸು ಮುಂದಿ ತೇರ್ಗಡೆಯೊಂದಿರುವ ರೆಂದು ಸಮಾಜದ ಕಾರ್ಯದರ್ಶಿನಿಯವರು ತಿಳಿಸುತ್ತಾರೆ.

ನಾಪೋಕ್ಲು ಮಹಿಳಾ ಸಹಕಾರ ಸಮಾಜದವರು ನಡೆಸುತ್ತಿರುವ ಶಿಲಾಪಿಯಾರಕ್ಕೆ ಒಬ್ಬ ಉಪಾಧ್ಯಾಯಿನಿ ಮತ್ತು ಒಬ್ಬ ಎಟೆಂಡರನ್ನು ನೇಮಕ ಮಾಡಿರುವರಾಗಿ ತಿಳಿಯುತ್ತೇವೆ

ಇದೇ ತಾ. ೧೬ರಲ್ಲು ಪೊನ್ನಂಪೇಟೆ ಝೋನಿ(zone)ನಲ್ಲು ಬಾಲಗಚಮುದಳದ ರೇಲಿಯು ನಡೆಯಿತು. ಅದಕ್ಕೆ ಆ ಝೋನಿನ ಆರು ಬಾಲಚಮು ದಳದವರೂ ಒಂದು ಮರಿಗಳ ಗುಂಪೂ (cubs) ಭಾಗವಹಿಸಿದವು. ಬಾಲಚಮು ದಳಗಳ ಸ್ಪರ್ಧೆಗಳಲ್ಲಿ ಪೊನ್ನಂಪೇಟೆ ಹೈಯರ್ ಎಲಿಮೆಂಟರಿ ಶಾಲೆಯ ದಳದವರು ಚಾಂಪಿಯನ್ ಷಿಪ್ ಕಪ್ಪನ್ನು ಗೆದ್ದರು. ವಿದ್ಯಾರ್ಥಿಕಾರಿಗಳು ಗೆದ್ದವರಿಗೆ ಬಹುಮಾನವನ್ನುಹಂಚಿದರು.

ಅಖಿಲ ಭಾರತ ಕಾಂಗ್ರೆಸ್ಸಿನ ಪ್ರಾಥಮಿಕ ಸದಸ್ಯತನಕ್ಕೆ ಡಾ. ಬಿ. ಕೆ. ನಂಜುಂಡೇಶ್ವರ ಇವರು ರಾಜಿನಾಮೆ ಇತ್ತಿರುವರೆಂದು ತಿಳಿಯಬರುತ್ತದೆ.

ಹಿಂದೀ ಪರೀಕ್ಷಾ ಫಲಿತಾಂಶ.

ಕಳೆದ ಆಗಸ್ಟ್ ತಿಂಗಳಲ್ಲಿ ನಡೆದ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಪರೀಕ್ಷೆಗೆ ಮಡಿಕೇರಿಯಲ್ಲಿ ಕುಳಿತವರಲ್ಲಿ ಈ ಕೆಳಗಿನವರು ತೇರ್ಗಡೆಯಾಗಿರುವರು.

ಪ್ರಾಥಮಿಕ–ಶ್ರೀ. ಶ್ರೀ. ಎಂ. ಟಿ. ಜಂಗಪ್ಪನವರು ಸ್ಥಳವು ಶ್ರೀಣಿಯಲ್ಲೂ, ಶ್ರೀಗಳಾದ ಸಿ. ಎಂ. ಕುಮಾರಿ, ಕೆ. ಎಸ್. ಪೊನ್ನಮ್ಮ ಮತ್ತು ಡಬ್ಲ್ಯೂ. ಎ. ಸರೋಜಿ ಇವರುಗಳು.

ಮಧ್ಯಮಾ–ಶ್ರೀಗಳಾದ ಹೆಲೆನ್ ರೋಸ್ಲಿ, ಎನ್. ಎಂ. ಶಕುಂತಳಾ, ಎಂ. ಎ. ಮುತ್ತಮ್ಮ, ಡಿ. ಕೆ. ನಾರಾಯಣ, ಕೆ. ಬಿ. ಉದಯಕುಮಾರಿ, ಸಿ. ಎಂ. ತಾರ, ಸಿ. ಎಂ. ಸೀತ, ಎ. ಪಿ. ಪಾರ್ವತಿ, ಡಿ. ಎಸ್. ಸರೋಜಿನಿ, ಕೆ. ಈ. ಮುತ್ತಮ್ಮ, ಎನ್. ಯು. ದಮಯಂತಿ, ಸಿ. ಪಿ. ಗಂಗಮ್ಮ, ಎ. ಕೆ. ಗಂಗಮ್ಮ, ಎ. ಕೆ. ಅಕ್ಕಮ್ಮ, ಕೆ. ಎಸ್. ನಾಗರತ್ನ, ಕೆ. ಬಿ. ಜಾನಕಿ, ಸಿ. ಎಂ. ಮುತ್ತಮ್ಮ, ಸಿ. ಕೆ. ಕಮಲ ಮತ್ತು ಎಂ. ಎಂ. ಸರಳ, ಬಿ. ಎ. ಬೊಳ್ಳಮ್ಮ ಇವರುಗಳು.

ರಾಷ್ಟ್ರಭಾಷಾ–ಶ್ರೀಗಳಾದ ಹೆಚ್. ಎಲ್. ಅನಸೂಯ ಮತ್ತು ಎನ್. ಜಿ. ಶೈಲಾ ಇವರುಗಳು.

ಪ್ರವೇಶಿಕಾ–ಶ್ರೀಗಳಾದ ಎನ್. ಡಿ. ನಾಗವೇಣಿ, ಕೆ. ಎಂ. ಶಿವರಾಮ್, ಎಸ್. ಜಿ. ಲಲಿತಾ ಇವರುಗಳು.

ವಿಶಾರದ–ಶ್ರೀಗಳಾದ ಎ. ಎಂ. ಸುಬ್ಬಮ್ಮ ಮತ್ತು ಕೆ. ಎಸ್. ಗೋಪಾಲರಾವ್ ಇವರುಗಳು.

ಕ್ರಯಕ್ಕೆ ದೊರೆಯುತ್ತೆ !

(ಬಹಳ ಅಚ್ಚುಕಟ್ಟಾದ ಮನೆ)

ಮಡಿಕೇರಿಯಲ್ಲಿ, ಬ್ರಾಹ್ಮಣರ ಬೀದಿಯ ರಸ್ತೆ ಬಾಳನಲ್ಲಿ ಎತ್ತರವಾದ ಸ್ಥಳದಲ್ಲಿ ಒಳ್ಳೇ ಗಾಳಿ ಬೆಳಕಿಗೆ ಆನ ಕೂಲವಾಗಿರುವ ಮತ್ತು ಕುಡ್ಡವಾದ ನೀರು ಉಳ್ಳ ಸೇದುಬಾವಿಯನ್ನೊಳಗೊಂಡಿರುವ ಮನೆಗಳೂರು ಹಂಚಿನ ದೊಡ್ಡ ಮನೆ ಮಾರಾಟಕ್ಕಿದೆ. ಕ್ರಯ ರೂಪಾಯಿ 16,000/—

ಹೆಚ್ಚು ವಿಷಯಗಳಿಗೆ ಈ ಕೆಳಗೆ ಕಂಡವರಲ್ಲಿ ನಿಚಾರಿಸಿ, ಅಥವಾ ಬರೆಯಿರಿ.

ಹೆಚ್. ವಿ. ರಾಮಕೃಷ್ಣ,
ಬ್ರಾಹ್ಮಣರ ಬೀದಿ,
ಮಡಿಕೇರಿ.

4–2

ಪೋಸ್ಟ್ ಆಫೀಸು ಜನರ ಕೊಟ್ಟಿಗೆಯೇ?

ವೀರಾಜಪೇಟೆ ಪೋಸ್ಟ್ ಆಫೀಸಿನ ಜಗಲಿಯಲ್ಲಿ ಸಾಧಾರಣ ೩ ತಿಂಗಳ ಹಿಂದಿನಿಂದಲೇ ಜನರ ಕೊಟ್ಟಿಗೆಯಲ್ಲಿ ಗುಂಡಿ ಬಿದ್ದಿರುವ ಹಾಗೆ ಗುಂಡಿ ಬಿದ್ದಿದೆ. ೩ ದಿನ ಈಗ ಹೆಚ್ಚಾಗ್ಗಿ ೩, ೪ ಸ್ಥಳಗಳಲ್ಲಿ ಆಗಿದೆ ಒಳ್ಳೆ ರೈತನ ಜನರ ಕೊಟ್ಟಿಗೆ ಯಲ್ಲಿ ಇಷ್ಟ ಇಂತಹ ಗುಂಡಿ ಇರುವುದಿಲ್ಲ. ನೂರಾರು ನೌಕರರು, ರೈತರು, ಕೂಲಿ ಕಾರರು ಮುಂತಾದವರು ಬಂದು ತನ್ನು ಟವ್ಯಾಲು ತೆಗೆದುಕೊಂಡು ಹೋಗುತ್ತಾ ರೆ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಇದು ಕಾಣ ವುದಿಲ್ಲವೆ? ಇಷ್ಟ ಸಂಗಾತಿಯೊಬ್ಬವು ಬೈರೂರಿನಿಂದ ಬಂದು ಇದನ್ನು ನೋಡಿ ಇದೇನು ಜನರ ಕೊಟ್ಟಿಗೆಯೇ ಎಂದು ಕೇಳಿದನು! ಇನ್ನಾ ದರೂ ಒಡನೆ ಇದರ ರಿಪೇರಿ ಮಾಡಲು ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಕೈ ಹಾಕುವರೆ? ಸಿ ಸಿ ಐಯ್ಯಪ್ಪ.

ಗ್ರಾಮ ಪರೇಲರ ಚುನಾವಣಾ ಪ್ರಚಾರ

ಶನಿವಾರ ಗ್ರಾಮದ ಸಣ್ಣಯ್ಯ ಪರೇಲರು ಮತ್ತು ಸಿಂಗಕ್ಕೂರು ಗ್ರಾಮದ ಶ್ರೀ ಕೆದಂಬಾಡಿ ರಾಮಯ್ಯ ಪರೇಲರು ಕಾಂಗ್ರೆಸ್ ಪಕ್ಷದ ಹುರಿಯೊಳುಗಳಿಗೆ ಓಟು ಕೊಡಬೇಕೆಂದು ಪ್ರಚಾರ ಮಾಡು ತ್ತಿದ್ದಾರಂತೆ ತಾ. ೬-೧೦-೫೧ರಲ್ಲಿ ನಡೆದ ಒಂದು ಸಭೆಯಲ್ಲಿ ಶ್ರೀ ಪಣ್ಣಂಡ್ಯನವರು ಅಧ್ಯ ಕ್ಷತೆ ವಹಿಸಿ, ಒಂದು ಕೋಮಿನವರ ಪರ ಯಾರ್ಯಾರು ಕಾಂಗ್ರೆಸ್ ಪುರಿಯೊಳಗಳಿಗೆ ನಿಲ್ಲುವಕ್ಕೆ ಬೆಂದು ತೀರ್ಮಾನಿಸಲಾ ಯಿತಂತೆ. ತಾ. ೧೫ರಲ್ಲಿ ಕರಿಕೆಯಲ್ಲಿ ಮತ್ತು ತಾ. ೧೪ರಲ್ಲಿ ಭಾಗಮಂಡಲದಲ್ಲಿ ನಡೆದ ಬಹಿರಂಗ ಸಭೆಗಳಲ್ಲಿ ಶ್ರೀ ಕೆದಂ ಬಾಡಿ ರಾಮಯ್ಯನವರು, ಕಾಂಗ್ರೆಸಿಗೆ ಓಟು ಕೊಡಬೇಕೆಂದು ಭಾಷಣ ಮಾಡಿ ರುತ್ತಾರಂತೆ. ಗ್ರಾಮ ಪರೇಲರು ಸರ ಕಾರಿ ನೌಕರರಾದುದರಿಂದ ಚುನಾವಣಾ ಪ್ರಚಾರ ಕಾರ್ಯದಲ್ಲಿ ಭಾಗವಹಿಸಬಾರ ದೆಂದು ಕಾನೂನಿದೆಯಂತೆ. ಇದು ನಿಜ ವಾದರೆ ಸರಕಾರವು ವಿಚಾರಣೆ ನಡೆಸಿ, ಪರೇಲರು ಚುನಾವಣಾ ಪ್ರಚಾರ ಮಾ ಡುವದನ್ನು ತಡೆಗಟ್ಟಿ ಈ ತನಕ ಮಾಡಿದ ವರಿಗೆ ತಕ್ಕ ಶಿಕ್ಷೆ ಕೊಡಲಾಗುವುದೆಂದು ನಂಬುತ್ತೇನೆ ಓಟರ.

ಸ್ವತಂತ್ರ ಜನತಾ ಪಕ್ಷ

ಕೆಲವು ದಿವಸಗಳಿಂದ ಸ್ವತಂತ್ರ ಜನ ತಾ ಪಾರ್ಟಿಯು ಸೋವಾರಪೇಟೆಯ ಲ್ಲಿ ಉದಯವಾಗಿರುವುದು ಕೆಲ ಜನತೆಗೆ ತಿಳಿದಿದೆ. ಈ ಪಕ್ಷವು ಮತನೈಕಮ್ಯದ ಹೊದಿಕೆಯನ್ನು ಎಳೆದು ಹಾಕಿ, ಇಡವ, ಬಲ್ಲಿದನೆಂಬ ಭಿನ್ನಾಭಿಪ್ರಾಯಗಳನ್ನು ಬ ದಿಗೊತ್ತಿ, ನ್ಯಾಯದ ಪೃಷ್ಠಿಯಿಂದ, ಜನ ತೆಯ ಹಿತಕ್ಕಾಗಿ ದುಡಿಯಲು ಶಂಕಿತ ಬದ್ಧವಾಗಿ ಕಾರ್ಯೋನ್ಮುಖವಾಗಿದೆ.

ಮುಂಬರುವ ಚುನಾವಣೆಯಲ್ಲಿ ಈ ಪಕ್ಷದ ಪರವಾಗಿ ಹಲವು ಉಮೇದುವಾ ರರು ಪ್ರತಿಸ್ಪರ್ಧಿಗಳಾಗಿ ನಿಲ್ಲುವವರು ಜಾರಿ. ಪಕ್ಷದ ವ್ಯವಸ್ಥಾಪಕ.

ಓದುಗರ ಓಲೆಗಳು

ಕೊಡಗಿನ ಭವಿಷ್ಯ

ಕಾರೀಕ. 9-11-51 ರ ಕೊಡಗು ಪತ್ರಿಕೆಯಲ್ಲಿ ಕಾಂಗ್ರೆಸ್ಸು ಮೆಂಬರುಷ ಚುನಾವಣೆಗೆ ಸಂಯೋಜನಾವಾದಿಗಳನ್ನೇ ಉಮೇದುವಾರರನ್ನಾಗಿ ನಿಲ್ಲಿಸಿದೆಯೆಂದು ಪ್ರತ್ಯೇಕ ಪಕ್ಷದ ಕಾರ್ಯದರ್ಶಿಯವರು ಪ್ರಕಟಿಸಿರುತ್ತಾರೆ. ಇದು ನಿಜವಲ್ಲವೆಂಬುದನ್ನು ಈ ಕೆಳಗಿನ ಕಾರಣಗಳಿಂದ ನಮ್ಮ ದೇಶದ ಮಹಾಜನರ ತಿಳುವಳಿಕೆಗಾಗಿ ನಾವು ಹೇಳುವವರಿದ್ದೇವೆ ನಾವುಗಳು ಕೊಡಗು ಪ್ರತ್ಯೇಕ ಪ್ರಾಂತ ವಾಗಿರಬೇಕೆಂಬ ವಿಷಯದಲ್ಲಿ ಪೂರ್ಣ ವಿಶ್ವಾಸವುಳ್ಳವರಲ್ಲವೆ. ಆದರ ಸಂಯೋ ಜನೆಯನ್ನು ಈ ದಿನವೂ ವಿರೋಧಿಸುವ ವರಿದ್ದೇವೆ ಪತ್ರಗಳನ್ನು ಚುನಾವಣೆ ಯಲ್ಲಿ ಹುರಿಯಾಳುಗಳನ್ನಾಗಿ ಕಾಂಗ್ರೆ ಸ್ಸಿನವರು ಅರಿಸುವ ಕಾಲದಲ್ಲೂ ಸಹ ಕೊ ಡಗಿನ ಸಂಯೋಜನೆಗೆ ನಮ್ಮ ಬೆಂಬಲ ವಿಲ್ಲವೆಂದೂ, ಅ ರೀತಿ ಕೊಡಗು ಕಾಂಗ್ರೆ ಸ್ಸು ನವ ಗೆ ಭರವಸೆ ಕೊಟ್ಟರೆ ಮಾತ್ರ ನಾವುಗಳು ಕಾಂಗ್ರೆಸ್ಸಿನ ಪರ ಚುನಾವಣೆಗೆ ನಿಲ್ಲಲು ಸಾಧ್ಯವೆಂದೂ ತಿಳಿಸಿ ಪತ್ರಿಕೆಯ ಕಾಂಗ್ರೆಸ್ಸು ಸವಿತಿಯ ವರು ನ ಮಗಳಿಗೆ ಕೊಡಗು ದೇಶದ ಪ್ರತ್ಯೇಕತೆ ಯ ವಿಷಯದಲ್ಲಿ ನೀವು ಕಾಂಗ್ರೆಸ್ಸು ಪರ ಉಮೇದುವಾರರಾಗಿ ನಿಂತರೂ ನಿಮ್ಮ ಸ್ವಂತ ಅಭಿವ್ಯಾಯಕ್ಕೆ ಕಾಂಗ್ರೆಸ್ಸು ಅಡ್ಡಿ ಮಾಡುವುದಿಲ್ಲವೆಂದು ಭರವಸೆ ಕೊಟ್ಟ ಮೇಲೆ ನಾವುಗಳು ಪ್ರತ್ಯೇಕವಾದಿಗಳಾದ ರೂ ಕಾಂಗ್ರೆಸ್ಸಿನ ಜನಹಿತ ಧ್ಯೇಯಗಳ ನ್ನು ನೋಡಿ ಇದರಿಂದ ದೇಶದ ಪ್ರತ್ಯೇ ಕತೆಗೆ ಯಾವ ರೀತಿಯಲ್ಲಾಗಿ ಭಂಗ ಬರು ವುದಿಲ್ಲವೆಂದೂ ಮತ್ತು ಭಾರತದಲ್ಲಿ ಜನ ಹಿತಕ್ಕಾಗಿ ಕೆಲಸ ಮಾಡುತ್ತಿರುವ ಸಂಸ್ಥೆ ಗಳನ್ನು ನೋಡಿದರೆ ಕಾಂಗ್ರೆಸ್ಸು ಸಂಸ್ಥೆ ಮೊದ್ಲ ಹೆಚ್ಚಿನ ಪ್ರಗತಿಯನ್ನು ಹೊಂ ದಿರುವ ಸಂಸ್ಥೆಯೆಂಬುದನ್ನು ಮನಗಂಡು ಕಾಂಗ್ರೆಸ್ಸಿನ ಪರ ಉಮೇದವಾರರಾಗಿ ನಿಂತಿರುತ್ತೇವೆ.

ಮುಕ್ಕಾಟ್ಟೀರ ಎ ಕರುಂಬಯ್ಯ,
ಮೀರುಂಡ ಡಿ. ಪೂಚಯ್ಯ.

ಮುರುವಂಡ ಪೂಚಯ್ಯ ಮತ್ತು ಮುಕ್ಕಾಟೀರ ಕರುಂಬಯ್ಯ.

ಇತಿಬ್ಬರು ಮಹನೀಯರು ಕಾಂಗ್ರೆ ಸ್ಸಿನ ಹೆಸರಿನಲ್ಲಿ ಉಮೇದುವಾರರು ನಿಂತು ತಾವು ಪ್ರತ್ಯೇಕವಾದಿಗಳೆನ್ನು ಸ್ಪಷ್ಟ ಟನೆಯೊಂದನ್ನು ಕಳೆದ ವಾರದ ಜನ್ಮ ಭೂಮಿಯಲ್ಲಿ ನೋಡಿದೆನು. ಕಾಂಗ್ರೆ ಸು ನಿಶ್ಚಿಸಿರುವ ಉಮೇದುವಾರರಲ್ಲಿ ಬ ಹುಮತದವರು ಸಂಯೋಜನಾವಾದಿಗಳೆಂ ಬುದು ಸ್ವಯಂ ಸಿದ್ಧ. ಇಲ್ಲಿ ಪ್ರತಿನಿಧಿಗ ಳಲ್ಲಿ ಎರಡು ಜನರಾದ ಇವರಿಬ್ಬರು ಕಾ ವು ಪ್ರತ್ಯೇಕವಾದಿಗಳೆಂದರೆ ಆಗುಹೋದೀ ತು? ಬಹುಮತದಂತೆ ಆಗಿಯೇ ಹೋಗು ತ್ತೆ. ಕಾಂಗ್ರೆಸ್ಸಿನ ಶಿಸ್ತಿಗೆ ವಿರುದ್ಧವಾಗಿ ಈ ಮಹನೀಯರು ಎಂದೂ ನರ್ತಿ ಸಲಾರರೇ. ಕಾಂಗ್ರೆಸ್ ಪಕ್ಷವು ಕೊಡ ಗಿನ ಸಂಯೋಜನೆಗೆ ಬದ್ಧವಾಗಿರುವದರಿಂ ದ ಆ ಪಕ್ಷದಲ್ಲಿರುವವರು ಪಕ್ಷದ ತತ್ವ ದಂತೆ ವರ್ತಿಸಲೇಬೇಕು. ಶ್ರೀ. ಕರುಂ ಬಯ್ಯನವರಾಗಲೀ, ಪೂಚಯ್ಯನವರಾಗ ಲೀ ಕಾಂಗ್ರೆಸ್ ಹೆಸರಿನಿಂದ ಪ್ರಯತ್ನಿಸು ತಿರುವ ಸಂಯೋಜನಾವಾದಿಗಳ ವಿರೋ ಧಿಗಳಾಗಿದ್ದಾರೆ ಈಗ ಕೊಡಗಿನ ಭವಿಷ್ಯದ ಪ್ರಶ್ನೆ ಇಲ್ಲವೆಂದು ಹೇಳುವ ಕಾಂಗ್ರೆಸ್ ಹೆಸರನ್ನೆ ಸಂಯೋಜನಾವಾದಿ ಗಳು ಜನತೆಗೆ ಆಸರಾಧ ಪೂಡುತ್ತಿದ್ದಾ ರೆ. ಈ ಚುನಾವಣೆಯು ಕೊಡಗಿನ ಭವಿಷ್ಯದ ತತ್ವದ ಮೇಲೆಯೇ ನಡೆಯಬೇಕು. ಇಲ್ಲವಾದರೆ ದೇಶಕ್ಕೆ ಹಿತವಿರಲಾರದು. ಇಂದು ಚುನಾಯಿಸಲ್ಪಡುವವ ರೇ ನ ದೇಶದ ಭವಿಷ್ಯವನ್ನು ನಿರ್ಣ ಯಿಸ ದು ಸೂರ್ಯ ಪ್ರಕಾಶದ ಷ್ಟು ಸ್ಪಷ್ಟವಿದೆ. ಕರುಂಬಯ್ಯನವರಾಗಲೀ, ಪೂಚಯ್ಯನವರಾಗಲೀ ನಾಳೆ ನಾವು ನಮ್ಮ ಸ್ವಂತ ಅಭಿಪ್ರಾಯವನ್ನು ಮುಂದಿಟ್ಟು ವರ್ತಿಸಬಹುದೆಂದರೆ ಮತ್ತೆ 'ಮೀಚಿಹೋದ ಕಾರ್ಯಕ್ಕೆ ಚಿಂತಿಸಿದಂ ತಾಗುವದು ಇವರಿಬ್ಬರು ಕೊಡಗು ಪ್ರತ್ಯೇಕವಿರಬೇಕೆಂದು ರಾಜಿನಾಮೆ ಇತ್ತು ಹೊರಗೆ ಬಂದರೂ ಏನೂ ಸಾಧಿಸ ಲಾರದು. ಉಳಿದ ೩೨ ಜನರ ಅಭಿಪ್ರಾ ಯವೇ ದೇಶದ ಅಭಿಪ್ರಾಯವೆಂದು ಕರಗಣಿಸ ಲ್ಪಡುವದು. ಆದ್ದರಿಂದ ಇವರಿಬ್ಬರು ಇನ್ನೂ ಆಲೋಚಿಸಬೇಕು. ಸಂಯೋಜ ನಾವಾದಿಗಳ ಕೈಗೊಂಬೆಗಳಾಗದಂತೆ ಎ ಚ್ಚರಿಕೆ ವಹಿಸಬೇಕು.

ಎಂ. ಬೆಳ್ಯಪ್ಪ.

ಮುಕ್ಕಾಟೀರ ಎ. ಕರುಂಬಯ್ಯನವರಿಗೆ ಜವಾಬು.

ನಿಮ್ಮ ಪ್ರಥಮ ಪತ್ರಿಕಾ ಪ್ರಕಟಣೆ ಯನ್ನು "ಜನ್ಮಭೂಮಿ"ಯಲ್ಲಿ ನೋ ಡಿದೆ ಇನ್ನು ನಿಮ್ಮ ಪ್ರಥಮ ಭಾ ಷಣ ಕೇಳಲಿಕ್ಕೆ ಬಾಕಿ ಇದೆ. ನೀವಿ ಮ್ಮ ನೆಂಟರೂ ಮತ್ತು ನಿಮ್ಮ ಮೂಲ ಮೂರು ಓಟಿನ ಮೇಲೆ, ದೇಶದ ಭವಿಷ್ಯ ವಿದೆಯೆಂದು ತಿಳಿದಿದ್ದರೆ, ಅದು ನಿಮ್ಮ ಬುದ್ಧಿಮಾಧ್ಯ. ಮೊತ್ತ ತಿಳಿಂದ ನಿನ್ನ ಕಳೆದರೆ ಇನ್ನೂ ಬಾಕಿ ೫. 'ಒಗ್ಗಟ್ಟಿನ ಲ್ಲಿ ಬಲವಿದೆ' ಎಂಬುದನ್ನು ಮರೆಯಬೇ ಡಿ. ಕಾಂಗ್ರೆಸಿನವರು, ನಿಮ್ಮನ್ನು ಜಲಂನಿಂದ ನೀವು ಬೇಡವೆಂದರೂ ಒ ರಾತ್ರೆ ಇಡೀ ಬೋಧಿಸಿ ನಿಮ್ಮನ್ನು ಉಮೇ ದುವಾರರಾಗಿ ನಿಶ್ಚಿಸಿದ್ದು ಎಂಬುದು ನಿಮ್ಮ ಓಟರುಗಳಗಲ್ಲಾ ಚೆನ್ನಾಗಿ ಗೊತ್ತಿದೆ. ಇದಕ್ಕೆ ಮೊದಲು, ನೀವು ಯುವಕರಿಗೆ 'ಸ್ವತಂತ್ರ್ಯ ಟಿಕೇಟಿನ ಮೇಲೆ, ನವ್ಯಬಾ ವ ಬೆಳ್ಯಪ್ಪನವರ ಹಾಗೆ ಕೌನ್ಸಿಲಿಗೆ ನಿಂ ಬೇಕು' ಎಂದು ಬೋಧಿಸಲಿಲ್ಲವೋ? ಆಗ ಯುವಕರು ದೇಶದಲ್ಲಿ ಎರಡು ಪಾರ್ಟಿಗಳಿವೆ ಯೂವುದಾದರೂ ಒಂದರ ಆಶ್ರಯ ಖಂಡಿತ ಪಡೆಯುಬೇಕೆಂಬ ಜವಾಬು ನಿಮಗೆ ಕೊಡಲಿಲ್ಲವೋ? ನಿಮ್ಮ ವ್ಯಾಪಾರ ಮೈಸೂರು ಮತ್ತು ಮಲಬಾರು ಕಡೆಗೆ ಹರಡಿರುವುದರಿಂದ ನೀವು ನಿಜವಾಗಿಯೂ ಪ್ರತ್ಯೇಕವಾದಿಗಳೋ? ಅಲ್ಲ; ಕೌನ್ಸಿಲು ಹಾಲಿಗೆ ಏನಾದರೂ ಅಧಿಕಾರಿ ಯಲು ಹೋಗುತ್ತೀರೋ? ನೀವು ಕೊಡಗಿ ನ ಎರಡು ಪತ್ರಿಕೆಗಳನ್ನು ಓದುತ್ತೀರೋ? ನೀವು ಅವುಗಳ ಚಂದಾದಾರರೋ? ನೀ ವು ಎಷ್ಟು ವರ್ಷದ ಕಾಂಗ್ರೆಸು ಮೆಂಬರ ರು? ಎಷ್ಟು ಚಂದಾ ಕೊಟ್ಟಿದ್ದೀರಿ? ನಿ ನ್ನು ನೈ ಹೇಲೆ ಅಥವ ಮನೆಯಲ್ಲಿ ಖಾದಿ ಬಟ್ಟೆ ಇದೆಯೇ? ನಿವು ಗೆ ದೇಶಿ ವಸ್ತು ವಿದೇಶಿ ವಸ್ತ್ರ ಕೂಪನ್ ಎಷ್ಟಿದೆ? ನಿವ್ಮ ಆಳುಗಳಿಗೆ ಕೂಪನ್ ಇದೆಯೇ? ವಾ ಷ್ಣೇಯ ವೆಂಬರು ನಿವ್ಮ ಮನೆಗೆ ಬಂದ ರಾತ್ರಿಯಿಂದ ಕಾಂಗ್ರೆಸು ಮೆಂಬ ರ ವತ್ತು ಹುರಿಯಾಳು ಆದರೋ? ಗಾಣಿಗ ಮೊರ್ತನಲ್ಲಿ ನಡೆದ ನಿವ್ಮ ಎಗ ಳ ಮ ನೆಗೆ ಮರ್ನ ಆದರ ಮೊವಲಿನ ರಾತ್ರಿ ಸರಾಸರಿ ಗಿರಾಕಿ ಗಳನ್ನು ಗ್ರಾಂ ಡಿ ಎಷ್ಟು ಕಪ್ಪಿ ಮತ್ತು ಟೆನ್ನು ಪಾಸು ಮಾಡಿದಿರಿ? ನಿವ್ಮ ಮಗಳ ಮದುವೆಯ ದಿನಗಳಲ್ಲಿ ನಿವ್ಮ ಕಾಂಗ್ರೆಸ್ ಕರ್ತವವನ್ನು ಯೂನ ಕಲ್ಪವೃಕ್ಷದ ಮೇಲೆ ಕಟ್ಟಿ ಮಡಗಿ ದ್ದಿರಿ? ಕಾಂಗ್ರೆಸ್ಸಿನ ಸಂಸ್ಥಾ ಪಕರೂ ಬಿದುವ ನಿವುಗೆ ಮಹಾತ್ಮಗಾಂಧಿ ಯವರ ಕಾಂಗ್ರೆಸಿನ ಶಿಸ್ತು ಗೊತ್ತಿಲ್ಲವೋ? ಬಾಲಘೋಷ ನರಿಯಂತೆ ಓಟಿಗಾಗಿ ನಾನೂ ಶ್ರಮಿಕನಾದಿ ಎಂದು ಹೇಳುತ್ತೀರಿ. ಇಷ್ಟರ ವರೆಗೆ ನಿವ್ಮ ದೇಶಸೇವೆ ಏನು? ಎಷ್ಟು ಸಾರ್ವಜನಿಕ ಸಭೆಗಳಿಗೆ ಸೇಂದ್ದೀರಿ ರಿ. ನಿವ್ಮ ಮನೆಯಲ್ಲಿ ಸಂಯೋಜನಾ ಹುಯಿಯಳುಗಳಿಗೆ ನೀವು ನಾನು ಕೊಡ ಗಿನ ಸಂಯೋಜನೆಗೆ ವಿರೋಧಿಸುತ್ತೇನೆಂದು ಹೇಳಿದನ್ನು ಕೇಳಿದವರು ಯಾರು? ಅವರ ಈ ವಿಚಾರ ನಿವ್ಮಗೆ ಬರೆದುಕೊ ಟ್ಟರೋ? ಸ್ವಾತಂತ್ರ್ಯಕ್ಕೆ ಮೊದಲು ಮತ್ತು ಸ್ವತಂತ್ರ್ಯ ಸಿಕ್ಕಿ ಇಷ್ಟವರ್ಷಗಳು ಕಳೆದ ರೂ ನಿವ್ಮಗೆ ಈಗ ದೇಶಸೇವೆಯ ಯೋಚ ನೆ ಬಂದದ್ದು ವೃದ್ಧನಾರೀ 'ಪತಿವ್ರತಾ ರೋಪಣ' ಎಂಬಂತೆ ಆಯಿತು. ನಿವ್ಮ ಸ್ವಂತ ಅಭಿಪ್ರಾಯ ನಿವ್ಮ ಮನೆಯಲ್ಲಿ ಮತ್ತು ನಿವ್ಮ ತಲೆಯೊಳಗೆ! ಕೌನ್ಸಿಲು ಜಾ ಲಿನಲ್ಲಿ ನಿವ್ಮ ಮುಖಂಡರು ಗ್ರಾಂ ಗ್ರೆಸು ಪೈಸಿಡೆಂಟರು ಹೇಳಿದ ಹಾಗೆ ಕೈ ಎತ್ತಿ ಕೂಣುಬೇಕು. ಅದೇ ಪಾರ್ಟಿ ಶಿಸ್ತು. ಗೊತ್ತಿರಲಿ ಇಲ್ಲದಿದ್ದರೆ ನಿವ್ಮ ನ್ನ ಪಾರ್ಟಿಯಿಂದ ಕಿಳ್ಳಿಬಿಡುತ್ತಾರೆ ಈ ಸಂದರ್ಭದಲ್ಲಿ ಯಾರ ಹೆಸರು ಹೇಳ ನಿವ್ಮ ರಾಜಕೀಯಪಪನ್ನು ನಡೆಸ ತ್ತಾ ಇ ರುವೆವೋ ಆ ಪೂಜ್ಯಜಾಪೂಜ್ಯಿಯವರಿಗೆ ಮತ್ತು ಆವರು ಸ್ಥಾಪಿಸಿದ ಕಾಂಗ್ರೆಸಿಗೆ ದ್ರೋಹ ಮತ್ತು ಅಹಿತ ಆಯಿತಂತಾ ಯಿತು. ಬಾಪೂಜಯವರ ಕಾಲದಲ್ಲಿ ಕಾ ಂಗ್ರೆಸಿಗರು ಖಾದಿ ಉಡಬೇ ಕೆಂದೂ, ಚರಕದಲ್ಲಿ ನೂಲು ತೆಗೆಯ ಬೇಕೆಂದೂ ಕಾನೂನು ಇತ್ತು. ನೂಲು ಕೊಟ್ಟ ಖಾದಿ ಕೊಳ್ಳವ ವಿರ್ಮಾಡಿತ್ತು. ಇದನ್ನು ವಿರೋಧಿಸದ ಪಂಡಿತ ಪ್ರೆಹ್ಮಾರವ ರಿಗೆ ನೂಲು ತೆಗೆಯಲು ಸಾಧ್ಯವಿಲ್ಲದ್ದ ರಿಂದ ಬಾಪೂಜಯವರು ತಾವೇ ನೂಲು ತೆಗೆದು ಪಂಡಿತರ ಹೆಸರಿನಲ್ಲಿ ಕಾಂಗ್ರೆಸಿಗೆ ನೂಲು ಚ.ದಾ ಕೊಡುತ್ತಿದ್ದರು. ಆ ಕಾಂಗ್ರೆಸು ಇಂದು ಎಂಥಾ ಸ್ಥಿತಿಗೆ ಇಳಿದಿ ದೆಯೆಂಬುದಕ್ಕೆ ದೇಶದ ಉದ್ದಗಲಕ್ಕೆ ಹಿರಿದು ಕಾಂಗ್ರೆಸು ವೇಂಬಯಂಗಳು ಕಾಂ ಗ್ರೆಸನ್ನು ಬಿಟ್ಟು ಹೊರಕ್ಕೆ ಬರುತ್ತಿರುವು ದು ಮತ್ತು ಬೇರೆ ಸಂಘೆ ಮತ್ತು ಸಂಸ್ಥೆ ಯನ್ನು ಸ್ಥಾಪಿಸುತ್ತಿರುವುದೇ ಸಾಕ್ಷಿ. ಇಂದು ಕಾಂಗ್ರೆಸು ಐಶ್ವರ್ಯವಂತರ, ಲಾ ಭದಡಕರ, ಕಪ್ಪು ಸಂತೆಯವರ ಕುರ್ಚಿ ಹುಡುಕುವವರ, ಕೋಮುವಾರು ಮನ ಬಂಡರ ಶಿಸ್ತು ಇಲ್ಲದವರ, ಸ್ವಾರ್ಥಿಗಳ, ರೈತರನ್ನೂ ಮಜೂರರನ್ನೂ ಮೂಲೆಗೊ ತ್ತುವವರ ಒಂದು ತಂಡ ಆಯ್ತೇ!

—'ನಿಮ್ಮ ಕೈಬಿಟ್ಟ ಓಟರು'

ಕಾಂಗ್ರೆಸ್ ಇವರ ಮೇಲೆ—

ಶಿಸ್ತು ಜಾರಿ ಮಾಡಲಿ.

ಕಾಂಗ್ರೆಸ್ಸಿನ ಹೆಸರಿನಲ್ಲಿ ಕೊಡಗಿನಲ್ಲಿ ೨೪ ಜನರು ಲೋಕಸಭೆ ಮತ್ತು ವಿಧಾನ ಸಭೆ ಚುನಾವಣೆಗೆ ಉಮೇದುವಾರರಾಗಿ ನಿಂತಿದ್ದಾರೆ. ಇವರು ತಮಗೆ ಓಟು ಪಡೆಯಲು ಪ್ರಚಾರಕ್ಕೂ ತೊಡಗಿದ್ದಾರೆ. ಕಾಂಗ್ರೆಸ್ಸಿಗರೆಲ್ಲರಿಗೂ ಕಾಂಗ್ರೆಸ್ಸಿನ ಚುನಾವಣಾ ಘೋಷಣೆಯೇ ಸರ್ವ ವೇದಾಗವು. ಅದರಲ್ಲಿ ನಮೂದಿಸಿರುವ ವಿಚಾರಗಳೇ ಕಾಂಗ್ರೆಸ್ಸಿಗರೆಲ್ಲರ ಧ್ಯೇಯ ಗುರಿಗಳು. ಕಾಂಗ್ರೆಸ್ಸಿನ ಈ ಚುನಾವಣಾ ಘೋಷಣೆಗೆ ವಿರುದ್ಧ ಪ್ರಚಾರ ಮಾಡುವವರಿಗೂ ವಿರೋಧ ಕೆಲಸ ಕೈಗೊಳ್ಳುವವರಿಗೂ ಕಾಂಗ್ರೆಸ್ಸಿನಲ್ಲಿ ಸ್ಥಾನವಿರಕೂಡದು. ಕಾಂಗ್ರೆಸ್ ಚುನಾವಣಾ ಘೋಷಣೆಯ ವಿರುದ್ಧ ಕಾಂಗ್ರೆಸ್ಸಿಗರು ಕೆಲಸ ಮಾಡಿದರೆ ಅವರ ಮೇಲೆ ಕಾಂಗ್ರೆಸ್ ನಿಜವಾಗಿಯೂ ಶಿಸ್ತು ಜಾರಿ ಮಾಡಿ ಅವರನ್ನು ಕಾಂಗ್ರೆಸ್ಸಿನಿಂದ ಹೊರತಳ್ಳಬೇಕು. ಮೊನ್ನೆ ಯಾಗಿ ನಾನು ಒಂದೆರಡು ಚುನಾವಣಾ ಪ್ರಚಾರ ವಿಷಯಗಳನ್ನೆ ಹೊರಟ್ಟಿದ್ದೆನು. ಗೋಣಿಕೊಪ್ಪದ ಕಾಂಗ್ರೆಸ್ ಉಮೇದುವಾರರಾದ ಶ್ರೀ ಸಿ. ಎಂ. ಪೂಣಚ್ಚನವರು ಗೋಣಿಕೊಪ್ಪಲು ಮತ್ತು ಬೆಟ್ಟಗೇರಿ ಸೆಂಡ್ಲ್‌ಗಳಲ್ಲಿ ನಡೆದ ಸಭೆಗಳಲ್ಲಿ ಪೊನ್ನಂಪೇಟೆಯ ಕಾಂಗ್ರೆಸ್ ಉಮೇದುವಾರರಾದ ಶ್ರೀ ಪಿ. ಎಂ. ನಾಣಯ್ಯನವರು ಬಾಳೆಲೆಯಲ್ಲಿ ನಡೆದ ಸಭೆಯಲ್ಲಿ ನಾವು ಕೂಡ ಪ್ರತ್ಯೇಕವಾದಿಗಳು. ಕೊಡಗನ್ನು ಬೇರೆ ಪ್ರಾಂತಕ್ಕೆ ಸೇರಿಸಲು ತಡೆಯೊಡ್ಡುವವರೆಗೆ" ಎಂಬ ಅರ್ಥದಲ್ಲಿ ಮಾತಾಡಿದರು. ನನಗೆ ಆಶ್ಚರ್ಯವಾಗಿದೆ. ಇವರು ನಿಜವಾಗಿಯೂ ಕಾಂಗ್ರೆಸ್ಸಿಗರೋ ಯಾ ಹೇಗಾದರೂ ಓಟು ಪಡೆದು ಅಧಿಕಾರಕ್ಕೆ ಬರಲು ಯತ್ನಿಸುವವರೋ ಎಂಬ ಸಂಶಯ ನನಗೆ ಬಂದಿದೆ.

ಕಾಂಗ್ರೆಸ್ಸಿನ ಚುನಾವಣಾ ಘೋಷಣೆಯ ೨೮ನೇ ಕಲಮಿನಲ್ಲಿ ಈ ರೀತಿ ಇದೆ:—

"ಅಡಚಣೆ ಆರ್ಥಿಕ ಮೊದಲಾದ ವಿಚಾರಗಳನ್ನು ಗಮನಿಸಿ ಭಾಷಾವಾರು ಪ್ರಾಂತರಚನೆಯು ತತ್ವಕ್ಕೆ ಕಾಂಗ್ರೆಸು ಬದ್ಧವಾಗಿದೆ. ಭಾಷಾವಾರು ತತ್ವಕ್ಕೆ ಕರ್ನಾಟಕ, ಕಾಂಗ್ರೆಸ್ ಪ್ರದೇಶ ಸಮಿತಿಯು ಪೂರ್ಣ ಒಪ್ಪಿರುವುದರಿಂದ ಕೂಡಲೇ ಭಾಷಾವಾರು ಪ್ರಾಂತರಚನೆಯ ಬೇಡಿಕೆಯನ್ನು ಪೂರೈಸಲು ಶಕ್ತ ಕ್ರಮಗಳನ್ನು ಸರಕಾರವು ಕೈಗೊಳ್ಳುವಂತೆ ಒತ್ತಾಯ ನೂಡುವದೇ ನಮ್ಮ ಗುರಿ"

ಆದರೆ ಕೊಡಗಿನಲ್ಲಿ ಕಾಂಗ್ರೆಸ್ಸಿನ ಹೆಸರಿನಲ್ಲಿ ನಿಂತಿರುವ ಉಮೇದುವಾರರು ಮೇಲೆ ಕೊಟ್ಟ ಇಬ್ಬರು ಮಹನೀಯರ ಉದಾಹರಣೆಯಂತೆ ಕಾವು ಪ್ರತ್ಯೇಕವಾದಿಗಳೆನ್ನುತ್ತಾರೆ. ಇವರು ಪ್ರತ್ಯೇಕವಾದಿಗಳೆಂದರೆ ಈ ಚುನಾವಣೆ ಕಳೆಯುವ ವರೆಗೆ ಪ್ರತ್ಯೇಕವಾದಿಗಳೇ ಧರ್ಮವೇ? ಈ ಚುನಾವಣೆಯಲ್ಲಾ ಕೂಡ ಭಾಷಾವಾರು ತತ್ವವನ್ನು ಓಟರರ ಮುಂದಿಟ್ಟು ಕೊಡಗು ಇಂದಲ್ಲ ನಾಳೆ ಸಂಯೋಜನೆ ಆಗಲೇಬೇಕು. ಕಾಂಗ್ರೆಸ್ಸಿನವರ ಗುರಿಯೇ ಅದು ಎಂದು ಕಾಂಗ್ರೆಸ್ಸಿನ ಘೋಷಣೆಯಂತೆ ಪ್ರಚಾರಮಾಡಿದೆ ನಾವು ಪ್ರತ್ಯೇಕವಾದಿಗಳೆಂದು ಹೇಳುವದರ ಅರ್ಥವೇನು? ಕೊಡಗಿನ ಜನತೆಯಲ್ಲಿ ಶೇಕಡ ೯೦ಕ್ಕೆ ಜನರು ಕೊಡಗು ಇಂದಿನಂತೆಯೇ ಮುಂದೆಯೂ ಸ್ವತ್ಯೇಕವಿರಬೇಕು ಬಂದೀವ ಸುಧಾರಣೆಗಳನ್ನು ಜನಹಿತದೃಷ್ಟಿಯಿಂದ ಜಾರಿಗೆ ತಂದು ಕೊಡಗನ್ನು ಆದರ್ಶ ಪ್ರಾಂತವಾಗಿ ಮಾಡಬೇಕೆನ್ನುವವರು. ಆದ್ದರಿಂದ ಕಾಂಗ್ರೆಸ್ಸೇ ಆದರೂ ತನ್ನ ಚುನಾವಣಾ ಘೋಷಣೆಯಂತೆ ಕೊಡಗು ಬೇರೆ ಪ್ರಾಂತದೊಡನೆ ಸೇರಬೇಕೆಂದು ಹೇಳಿದರೆ ಅವರಿಗೆ ಜನರ ಬೆಂಬಲ ದೊರೆಯಲಾರದೆಂಬುದು ಕೊಡಗಿನ ಕಾಂಗ್ರೆಸ್ ಉಮೇದುವಾರರಿಗೆ ತಿಳಿದಿದೆ. ಆದ್ದರಿಂದಲೇ ಅವರು ಕಾಂಗ್ರೆಸ್ ಚುನಾವಣಾ ಘೋಷಣೆಯನ್ನು ಮುಂದಾದರೂ ಅಧಿಕಾರಕ್ಕೇರಬೇಕೆಂಬ ಆಸೆಯಿಂದ ಹೊಸ ವೇಷ ತಾಳಿ ತಾವೂ ಪ್ರತ್ಯೇಕವಾದಿಗಳೆನ್ನುತ್ತಾರೆ. ಇವರು ಇಂದು ಪ್ರತ್ಯೇಕವಾದಿ ಎಂದು ತೋರಿದರೂ ಕಾಂಗ್ರೆಸ್ಸಿನ ಚುನಾವಣಾ ಘೋಷಣೆಯಂತೆ ವರ್ತಿಸಬೇಕೆಂದು ಕೊಡಗಿನ ಸಂಯೋಜನೆಗೆ ದುಂಬಾಲು ಕೊಡಲೇಬೇಕು. ಕಾಂಗ್ರೆಸ್ಸು ನಿಜವಾಗಿಯೂ ಚೀನಸಯಂತ ಸಂಸ್ಥೆಯಾಗಿದ್ದರೆ ಅದು ಈ ತತ್ವವಿರೋಧಿ ಕಾಂಗ್ರೆಸ್ ಉಮೇದುವಾರರಿಗೆ ಪಕ್ಷದ ಶಿಸ್ತಿನ ಕ್ರಮ ಕೈಕೊಳ್ಳಲೇಬೇಕು. ಕಾಂಗ್ರೆಸ್ಸಂದು ಹೇಳುತ್ತಾ, ಕಾಂಗ್ರೆಸ್ಸಿನೊಳಗಿರುತ್ತಾ ಕಾಂಗ್ರೆಸ್ಸಿನ ನೀತಿಯನ್ನೇ ಮುಂದುಮಾಡುವ ಇಂಥಾ ವ್ಯಕ್ತಿಗಳ ಕಾರಣವಾಗಿಯೇ ಇಷ್ಟು ಕಾಲ ಕಾಂಗ್ರೆಸ್ಸು ಜನಪ್ರೀತಿಯನ್ನ ಕಳೆದುಕೊಂಡು ಬಂಡವಾಳದಾರರ ಲಂಭಬಡಿಕರಹಾಗೂ ಮನೆ ಮುರುಕರ ಸಂಸ್ಥೆಯಾಗಿದೆ

ವಿಮರ್ಶಕ.

THE CANARA BANKING CORPORATION LTD., VIRAJPET.

ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್, ಲಿಮಿಟೆಡ್, ವೀರಾಜಪೇಟೆ

ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ನದರಿ ಬ್ಯಾಂಕಿನಿಂದ ನಗಗಳ ಈಡಿನ ಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ, ಅದರ ಮೇಲಿನ ಬಡ್ಡಿಯನ್ನಾಗಲೀ ವಾಯಿದೆಗೆ ಕೊಡದೆ ಇದ್ದುದರಿಂದಲೂ, ಈ ಬಗ್ಗೆ ಅವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಸಾವಕಾಶಿಯಾಗದೆ ವಾಪಾಸು ಬಂದಿರುವುದರಿಂದಲೂ, ಸದರಿಯವರಿಗೆ ಈ ಮೂಲಕ ತಿಳಿಯಿಪಡಿಸುವುದೇನೆಂದರೆ—

ಸದರಿಯವರು ಈಡಿಟ್ಟ ನಗಗಳನ್ನು ತಾರೀಕು 8-12-51ರ ಒಳಗೆ ಬಿಡಿಸಿಕೊಂಡು ಹೋಗದಿದ್ದ ಪಕ್ಷದಲ್ಲಿ ತಾರೀಕು 8-12-51ನೇ ಶನಿವಾರ ಅಪರಾಹ್ನ ಗಂಟೆ 2 ಕ್ಕೆ ಯೂ ಬ್ಯಾಂಕಿನವರಿಗೆ ಯುಕ್ತ ತೋರುವ ಬೇರೆ ತಾರೀಕಿನಲ್ಲಿ ಪುನಹ ನೋಟೀಸು ಕೊಡದೇನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ಸಾಲದ ನಂಬ್ರ	ಸಾಲಗಾರರ ಹೆಸರು, ನಿವಾಸ	ಸಾಲದ ಮೊಬಲಗು ರೂ
(1) 132/1948	ಶ್ರೀಮತಿ ಕೇನೂಬಾಯಿಯವರು, C/o. ಆರ್. ರಾಮಸ್ವಾಮಿ, ವೀರಾಜಪೇಟೆ...	25
(2) 418/1949	ಜನಾಬ್ ಅಕಸರಬು ಮುಮ್ಮು, S/o. ಮುಮ್ಮುಟ್ಟಿ, ಎಜಿನಕೆರೆ ಗ್ರಾಮ, ಸಿದ್ದಾಪುರ ಪೋಸ್ಟ್...	40
(3) 797/1949	ಜನಾಬ್ ಟಿ. ಹಮೀದ್, S/o. ಹಸನ್, ವ್ಯಾಪಾರಿ, ಮಾರ್ಕೆಟ್ ರಸ್ತೆ, ವೀರಾಜಪೇಟೆ.	35
(4) 375/1950	ಜನಾಬ್ ಮೊಹಿದೀನ್ ಕುಟ್ಟಿ, S/o. ಏಮ, ಕೂಲಿ, ವೀರಾಜಪೇಟೆ...	50

ಬ್ಯಾಂಕಿನ ಆಫೀಸು-ವೀರಾಜಪೇಟೆ.
ತಾರೀಕು, 15-11-51.

U. MADHAVA ACHAR,
AGENT.

ದಿ ಟ್ರಾಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮುಖ್ಯ ಖಜೀರಿ:—ಹೊಸಪೇಟೆಲ್ಲಿ.

52-28 ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ನೋಪಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್
ಜನೀಮ್ ಅಜಮಲಖಾನ್. ಡಾ|| ಎಂ. ಎ. ಅನ್ಸಾರಿ.

Transacts:--LIFE, FIRE, MOTOR and MARINE.

ಬ್ರಾಂಚ್ ಸೆಕ್ರೆಟರಿ,
ಹಂಪನಕಟ್ಟಾ, ಮಂಗಳೂರು.

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಕೋವಿಗಳು, ವ್ಯವಸಾಯದ ಹರ್ಕ್ಯಾರುಗಳು ಮತ್ತು ಕಬ್ಬಿಣದ ಸಲಾಕೆ ವಗೈರೆಗಳು ದೊರೆಯುತ್ತವೆ.

1. .32 ಪಿಸ್ತೂಲುಗಳು ಮತ್ತು ರಿವಾಲ್ವರುಗಳು.
2. .12ನೇ ನಂಬರಿನ ಒಂಟಿ ಹೊಳವಿನ ಕೋವಿಗಳು.
3. 12ನೇ ನಂಬರಿನ ಜೋಡು ಹೊಳವಿನ ಕೋವಿಗಳು.
4. ಆಳಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೆ ಮಾಡುವ ಪಂಪುಗಳು.
5. 2", 1", ¾", ½", ¾" ಕಬ್ಬಿಣದ ಸಲಾಕೆಗಳು.
6. 9"×4" ಮತ್ತು 8"×4" ಕಬ್ಬಿಣದ ಬೀಮ್ಸ್ (Beams).
7. 8'×3'×12 (Gage)ನ ಕಬ್ಬಿಣದ ತಗಡುಗಳು.
8. 3"×3"×¼"ನ (Angles) ಎಂಗ್ಯೂಲರ್ಸ್ ಅವಶ್ಯವಿರುವವರು ಇಂಡೆಂಟ್ ಕೊಟ್ಟಲ್ಲಿ: ತರಿಸಿ ಕೊಡಬಹುದು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು

(ಅವಶ್ಯವಿರುವ ಕೋವಿಗಳಿಗೆ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

ಚುನಾವಣೆಗೆ ನಿಂತಿರುವ

ಕಾಂಗ್ರೆಸ್ ಉಮೇದ್ವಾರರು.

ಕೊಡಗಿನಲ್ಲಿ ಕಾಂಗ್ರೆಸು ತನ್ನ ವತಿಯಿಂದ ೩೩ ಜನರನ್ನು ಚುನಾವಣೆಗೆ ನಿಲ್ಲಿಸುವ ನಿರ್ಧಾರಮಾಡಿ ಅವರ ಹೆಸರು ಪ್ರಕಟವಾಗಿದೆ. ಅವರಿಗೆ ಓಟು ಪಡೆಯಲು ಪ್ರಚಾರ ನಡೆಸುತ್ತಿದ್ದಾರೆ. ತಾವೂ ಕೂಡ ಪ್ರತ್ಯೇಕವಾದಿಗಳೆಂದು ಹೇಳಿಕೊಳ್ಳುತ್ತಿದ್ದಾರೆ. ಆದ್ದರಿಂದ ಈ ಉಮೇದುವಾರರ ಸೂಕ್ಷ್ಮ ಪರಿಚಯವನ್ನು ಮಾಡಿಕೊಳ್ಳುವದು ಹಿತವಲ್ಲದೆ ನಂಬೋಜನಾವಂದಿಗಳಾಗಿ ಈ ಗುಂಪಿನವರ ವಾದದಲ್ಲಿ ಹುರುಳಿ ಇದೆಯೇ ಎಂದು ಪರಿಶೀಲಿಸಬೇಕಾಗಿದೆ.

ಕಾಂಗ್ರೆಸಿನ ಹೆಸರಿನಲ್ಲಿ ನಿಲ್ಲಲಿರುವ ಈ ೩೩ ಉಮೇದುವಾರರಲ್ಲಿ ಪಾರ್ಲಿಮೆಂಟಿಗೆ ನಿಂತ ಶ್ರೀ ನಿಡ್ಡೆಮಲೆ ಸೋಮಣ್ಣ, ಶಾಸನ ಸಭೆಗೆ ನಿಲ್ಲಲಿರುವ ಶ್ರೀ. ಕೆ. ವಲ್ಲಪ್ಪ, ಭಾಗಮಂಡಲ್ಕ್ಕೆ ನಿಲ್ಲಲಿರುವ ಶ್ರೀ. ಕೋದಂಡ ದೇವಯ್ಯ, ನಂಜರಾಯಪಟ್ಟಣಕ್ಕೆ ನಿಲ್ಲಲಿರುವ ಶ್ರೀ. ಚೌರಿರ ಮಂದಣ್ಣ, ವೀರಾಜಪೇಟೆಗೆ ನಿಲ್ಲಲಿರುವ ಶ್ರೀ. ಎಸ್. ಎಸ್. ರಾಮಮೂರ್ತಿ, ಮತ್ತು ಶ್ರೀ. ಬ್ಲಾಜಂಡ ಬೆಳ್ಯಪ್ಪ. ಹುದಿಕೇರಿಗೆ ನಿಲ್ಲಲಿರುವ ಶ್ರೀ. ಜೆಕ್ಕೆರ ಪೂಚಯ್ಯ, ಅಮ್ಮತ್ತಿಗೆ ನಿಲ್ಲಲಿರುವ ಶ್ರೀ. ಮೂಚಿಮಾಡ ನಂಜುಂಡ ಇವರೆಲ್ಲರೂ ಸಂಯೋಜನಾವಾದಿಗಳು — ಕೊಡಗು ಪ್ರತ್ಯೇಕ ನಿಲ್ಲಲಾರದು. ಅದಕ್ಕೆ ಆರ್ಥಿಕ ಬಲವಿಲ್ಲ ಪ್ರಾಥಮತದಾನ ಪದ್ಧತಿಯಂತೆ ಜವಾಹ್ದಾರಿ ಸರಕಾರ ಬಂದರೂ ಅವನ್ನು ನಡೆಸಿಕೊಂಡು ಹೋಗುವ ಬುದ್ಧಿಸಾಧ್ಯವಿಲ್ಲ. ಆದ್ದರಿಂದ ಕೊಡಗಿನ ಸಂಯೋಜನೆ ಬೇಗ ಆಗಬೇಕೆಂದು ರಾಜ್ಯಪುನರ್ ಸಂಘಟನಾ ಸಭೆಗೂ, ಕೇಂದ್ರ ಸರಕಾರಕ್ಕೂ ಅರ್ಜಿಯನ್ನು ಮಾಡಿರುವವರು ಇವರೇ. ತಾ. ೧೦-೧೧-೫೦ರಲ್ಲಿ ಪ್ರಕಟಿಸಿರುವ ಪುಸ್ತಕವೇ ಇದಕ್ಕೆ ಆಧಾರವಾಗಿದೆ.

ವಿರಾಜಪೇಟೆಗೆ ನಿಲ್ಲಲಿರುವ ಶ್ರೀ ಎಸ್. ಎಸ್. ನಾರಾಯಣಮೂರ್ತಿಯವರು, ಪೊನ್ನಂಪೇಟೆಗೆ ನಿಲ್ಲಲಿರುವ ಶ್ರೀ. ಪಿ. ಎ. ಸಾಣಿಮ್ಮಯ್ಯನವರು, ಗೋಣಿಕೊಪ್ಪಲಿಗೆ ನಿಲ್ಲಲಿರುವ ಶ್ರೀ. ಸಿ. ಎಂ. ಪೂಣಚ್ಚನವರು ಇವರು ಸಂಯೋಜನಾವಾದಿಗಳೆಂದು ಅವರ ಈ ವರೆಗಿನ ಕಾರ್ಯಕಲಾಪಗಳಿಂದ ದೇಶೀಯರು ಊಹಿಸಬಹುದಾಗಿದೆ.

ಹಿಂದುಳಿದ ವರ್ಗ ಮತ್ತು ಪಂಗಡಗಳ ಪರ ನಿಲ್ಲಲಿರುವ ಶ್ರೀ. ಕೆ. ಜೆನ್ನಯ್ಯ, ಪಿ. ಲಕ್ಷ್ಮಣ ಕರಿಂಜನ ಕರುಂಬು, ಬೆಟ್ಟಕುಡುಬರ ಕಾಳಿ, ಎರವರ ಬೆಳ್ಳಿ, ಬೆಟ್ಟಕುರುಬರ ಮೂರ ಇವರು ದೇಶದ ಭವಿಷ್ಯದ ವಿಚಾರದಲ್ಲಿ ಶಕ್ತ ಸ್ವತಂತ್ರ ಬುದ್ಧಿಯಿಂದ ಆಲೋಚಿಸುವರೆನ್ನುವದಿಲ್ಲ. ಅವರನ್ನು ನಿಲ್ಲಿಸಿದ ಪಕ್ಷನವರ ಆಶಯದಂತೆಯೇ ಅವರು ವರ್ತಿಸುವರೆಂಬುದರಲ್ಲಿ ಸಂಶಯವಿಲ್ಲ.

ಮತ್ತೆ ಉಳಿದ ಉತ್ತರ ಮಡಿಕೇರಿಯ ಶ್ರೀ ಪಿ. ಡಿ. ಸುಬ್ಬಯ್ಯ, ಮಡಿಕೇರಿ ಪಟ್ಟಣದ ಶ್ರೀ ಕೆ. ಕೆ. ನಂಜಪ್ಪ, ಫ್ರೇಜರ್‌ಪೇಟೆಯ ಶ್ರೀ ಜೆ. ಎಂ. ಲಿಂಗರಾಜಯ್ಯ, ಸೋಮವಾರಪೇಟೆಯ ಶ್ರೀ ಚೌಡ್ಲು ಕಾಳಪ್ಪ, ಸುಂಟಿಕೊಪ್ಪದ ಶ್ರೀ ಜಿ. ಎಂ. ಮಂಜುನಾಥಯ್ಯ ಇವರುಗಳ ಅಭಿಪ್ರಾಯವು ಸ್ಪಷ್ಟವಾಗಿ ತೋರಿ ಬಂದಿದ್ದರೂ ಶ್ರೀ ಮಂಜುನಾಥಯ್ಯನವರು ಕಾನೂ ವಿಲೀನೀಕರಣಕ್ಕೆ ವಿರೋಧವಿಲ್ಲವೆಂದು ಸ್ಪಷ್ಟಪಡಿಸಿದ್ದಾರೆ. ಬಾಕಿ ಉಳಿದಿರುವ ಸಿದ್ದಾಪುರದ ಶ್ರೀ ಎಂ. ಡಿ. ಪೂಚಯ್ಯ, ಶ್ರೀಮಂಗಲದ ಶ್ರೀ ಎಂ. ಕರುಂಬಯ್ಯ ಇವರುಗಳು ಕಾವು ಪ್ರತ್ಯೇಕವಾದಿಗಳೆಂದೂ ಕಾಂಗ್ರೆಸ್ಸು ಇದನ್ನು ನಿಲ್ಲಿಸಿರುವ ೩೩ ಪ್ರತಿನಿಧಿಗಳಲ್ಲಿ ಒಂದೆರಡನ್ನು ಬಿಟ್ಟು ಉಳಿದವರೆಲ್ಲರೂ ಸಂಯೋಜನಾವಾದಿಗಳು. ಇದನ್ನು ಕೊಡಗಿನ ಮತದಾರರು ಪರಿಶೀಲಿಸಬೇಕು. ನಾವು ಕಾಂಗ್ರೆಸ್ಸಿಗರು ಸಂಯೋಜನಾವಾದಿಗಳಲ್ಲವೆಂದು ಹೇಳುವ ಇವರ ವಾದದ ಅಸತ್ಯತೆಯನ್ನು ಅರಿಯಬೇಕು.

ಕೆ. ಕೆ. ಗಣಪತಿ.

ಇವರು ಯಾವ ಕಾಂಗ್ರೆಸ್ಸು?

ಕಾಂಗ್ರೆಸಿನ ಹೆಸರಿನಲ್ಲಿ ಕೊಡಗಿನ ಮಂಬರುವ ಜನತಾ ಸಭೆಯ ಮತ್ತು ಸ್ಥಳೀಯ ಶಾಸನ ಸಭೆಯ ಚುನಾವಣೆಗೆ ಕಾಂಗ್ರೆಸ್ ಉಮೇದುವಾರರೆಂದು ೩೩ ಜನರನ್ನು ಆರಿಸಿ ಅವರ ಹೆಸರು ಪ್ರಕಟವಾಗಿದೆ. ಅವರೆಲ್ಲರ ಸೂಕ್ಷ್ಮ ಪರಿಚಯವನ್ನಿಲ್ಲಿ ಕೊಡಲಾಗಿದೆ.

(೧) ಶ್ರೀ ಎನ್. ಸೋಮಣ್ಣನವರು— ಹಳೆಯ ಚುನಾವಣೆಗಾಗಿ ಕಾಂಗ್ರೆಸ್ಸಿಗೆ ಸೇರಿದವರು. ಸಂಯೋಜನಾವಾದಿಗಳ ಮುಂದಾಳು. ಕೊಡಗಿನ ವಿಲೀನೀಕರಣವು ವೈಸ್‌ರಾಯಿನೊಂದಿಗೆ ಎಷ್ಟು ಶೀಘ್ರವಾಗುತ್ತದೋ ಅಷ್ಟು ಒಳ್ಳೆಯದೆಂಬ ನಂಬಿಕೆಯವರು. ಇವರು ಪಾರ್ಲಿಮೆಂಟಿಗೆ ನಿಂತಿದ್ದಾರೆ!

(೨) ಶ್ರೀ ಸಿ. ಎಂ ಪೂಣಚ್ಚನವರು:— ಪಾದಿ ಧರಿಸುವವರು. ಕಾಂಗ್ರೆಸಿನಲ್ಲಿ ದುಡಿದವರು. ಜೈಲಿಗೆ ಹೋದವರು ಡೆಪ್ಯುಟಿ ಕಮಿಷನರ ಶಕ್ತಿಸಲ್ಲಿ ಕೊಡಗಿನ ಹಣಕಾಸಿನ ಸ್ಥಿತಿಯ ಬಗ್ಗೆ ನಿಗಾಗಿಲ್ಲವೆಂದು ಹೇಳಿ ಅದ್ದರಿಂದ ಕೊಡಗು ತನ್ನ ಕಾಲಲ್ಲಿ ನಿಲ್ಲಲಾರದೆಂದು ಅಭಿಪ್ರಾಯ ಹುಟ್ಟುವಂತೆ ಮಾಡಿದವರು.

(೩) ಶ್ರೀ ಕೆ ವಲ್ಲಪ್ಪನವರು:— ಪಾದಿ ಶತ್ರದಲ್ಲಿ ವಿಶ್ವಾಸವಿಲ್ಲದವರು. ಶಾಸನ ಸಭೆಯ ಕಾಂಗ್ರೆಸ್ ಸದಸ್ಯರಾದರೂ ಗೇ ಬರ್ಡೀನ್, ಸೂಟ್, ಹೇಟ್ ಟೈಗಳಿಂದ ಮೆರೆಯುವವರು. ಸಂದರ್ಭಕ್ಕೆ ತಕ್ಕಂತೆ ಹೊರಗಿನಿಂದ ಕಾಂಗ್ರೆಸ್ಸಿಗರು ಬಂದೊಗ ಪಾದಿ ಸೂಟ್, ಇಲ್ಲದಿದ್ದರೆ ಸರ್ಜ್ ಸೂಟ್ ಧರಿಸುವವರು. ಕಾಂಗ್ರೆಸ್ ಚಳವಳಿಯಲ್ಲಿ ಭಾಗವಹಿಸಿದವರಲ್ಲ. ಕಳೆದ ಚುನಾವಣೆಗಾಗಿ ಕಾಂಗ್ರೆಸ್ಸಿಗೆ ಸೇರಿದವರು. ಸಂಯೋಜನಾವಾದಿಗಳು.

(೪) ಶ್ರೀ ಚೌಡ್ಲು ಕೆ. ಕಾಳಪ್ಪನವರು:— ಪಾದಿ ಧರಿಸುವವರಲ್ಲ. ಕಾಂಗ್ರೆಸ್ಸಿಗೆ ದುಡಿದವರಲ್ಲ. ಇಂದೂ ವಿದೇಶಿ ಬಟ್ಟೆ ಧರಿಸುವವರು. ಸರಕಾರಿ ಸಾರಾಯಿ ಡಿಪೋದ ಮೇನೇಜರರಾಗಿದ್ದವರು ವೈಸ್‌ರಾಯ ಮೇಲೆ ತುಂಬಾ ಪ್ರೀತಿಯುಳ್ಳವರು.

(೫) ಶ್ರೀ ಕೆಂಜೆಟ್ಟಿ ನಂಜಪ್ಪನವರು: ಪಾದಿ ಧರಿಸುವವರಲ್ಲ ಜೈಲಿಗೆ ಹೋದವರಲ್ಲ. ಕಾಂಗ್ರೆಸ್ಸಿಗಾಗಿ ದುಡಿದವರಲ್ಲ. ಕಾಫಿ ತೋಟ ಮಾಲೀಕರು. ಚುನಾವಣೆಗೆ ನಿಲ್ಲಲಿಕ್ಕಾಗಿ ಕಾಂಗ್ರೆಸ್ಸಿಗೆ ಬಂದವರು. ಕೊಡಗಿನ ಭವಿಷ್ಯದ ಬಗ್ಗೆ ಇನ್ನೂ ತಿಳಿಪ್ರಾಯ ವ್ಯಕ್ತ ಮಾಡದವರು.

(೬) ಶ್ರೀ ಪಿ. ಡಿ. ಸುಬ್ಬಯ್ಯನವರು:— ಸರ್ಟಿಫೈಡ್ ಖಾದಿಯಲ್ಲದಿದ್ದರೂ ಖಾದಿ ಹಾಕುತ್ತಾರೆ. ಮಡಿಕೇರಿಯಲ್ಲಿ ವ್ಯಾಪಾರಸ್ಥರು. ಜೈಲಿಗೆ ಹೋದವರಲ್ಲ. ಭವಿಷ್ಯದ ವಿಚಾರದಲ್ಲಿ ಸ್ಪಷ್ಟ ಅಭಿಪ್ರಾಯವನ್ನು ಮಾಡದಿದ್ದರೂ ಸಂಯೋಜನೆಗೆ ವಿರೋಧವಿಲ್ಲದವರೆಂದು ನಂಬಲು ಅವಕಾಶವಿದೆ

(೭) ಶ್ರೀ ಚೌರಿರ ಚಂದಣ್ಣನವರು:— ಶತ ಪ್ರತಿಶತ ಖಾದಿಧಾರಿಗಳಲ್ಲ. ಹಳೆಯ ಚುನಾವಣೆಯ ಕಾಲಕ್ಕೆ ಕಾಂಗ್ರೆಸ್ಸಿಗೆ ಬಂದವರು ಕಾಂಗ್ರೆಸ್ ಸೇವೆ ಮಾಡಿದವರಲ್ಲ ಸಂಯೋಜನಾವಾದಿಗಳು.

(೮) ಶ್ರೀ ಕೋದಂಡ ದೇವಯ್ಯನವರು:— ಗೌಡ ಕೋವಿನ ಸಂಘಕ್ಕೆ ಪ್ರೆಸಿಡೆಂಟರಂತೆ. ತಮ್ಮ ಕೋವಿನ ಮೇಲೆ ಪುಂಬಾ ಪ್ರೀತಿಯುಳ್ಳವರು. ಪಾದಿ ಧರಿಸುತ್ತಾರೆ. ಜೈಲಿಗೆ ಹೋಗವರು. ಕೊಡಗಿನ ಸಂಯೋಜನೆ ಆಗಬೇಕೆಂದು ಪ್ರಯತ್ನಿಸಿದವರು.

(೯) ಶ್ರೀ ಜಿ. ಎಂ. ಲಿಂಗರಾಜಯ್ಯನವರು:— ಕಾಂಗ್ರೆಸಿಗೆ ಮೊನ್ನೆ ಚುನಾವಣೆಗಾಗಿ ಕೆಲವರ ಬಲಾತ್ಕಾರದಿಂದ ಬಂದವರು ಖಾದಿಧಾರಿಗಳಲ್ಲ. ಕೊಡಗಿನ ಭವಿಷ್ಯದ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿಲ್ಲವಾದರೂ ವಿಲೀನೀಕರಣಕ್ಕೆ ವಿರೋಧವಿರಲಾರರು.

(೧೦) ಶ್ರೀ ಜಿ. ಎಂ. ಮಂಜುನಾಥಯ್ಯನವರು:— ಖಾದಿಧಾರಿಗಳಲ್ಲ. ಕಾಫಿ ವ್ಯಾಪಾರಿಗಳು. ಕೊಡಗಿನ ಸಂಯೋಜನೆಗೆ ವಿರೋಧವಿಲ್ಲವೆನ್ನುವವರು.

(೧೧) ಶ್ರೀ ಎಸ್. ಎಸ್. ನಾರಾಯಣಮೂರ್ತಿಯವರು:— ಖಾದಿ ಧರಿಸುವವರು. ಕಾಂಗ್ರೆಸ್ಸಿಗರಾದರೂ ಜೈಲಿಗೆ ಹೋಗದವರು. ಅವರ ಕೆಲಸದಿಂದ ಈವರೆಗಿನ ಕೊಡಗಿನವಿಲೀನೀಕರಣಕ್ಕೆ ವಿರೋಧವಿಲ್ಲದವರ.

(೧೨) ಶ್ರೀ ಬಿ ಎ ಬೆಳ್ಯಪ್ಪನವರು ಅರ್ಧ ಖಾದಿ ಅರ್ಧಪರದೇಶೀ ಉಡುವವರು ವೈಸ್‌ರಾಯಿನೊಂದಿಗೆ ಕೊಡಗಿನ ವಿಲೀನೀಕರಣವು ಎಷ್ಟು ಬೇಗ ಆಗುವದೋ ಅಷ್ಟು ಹಿತವೆಂದು ಹೇಳುವವರು.

(೧೩) ಶ್ರೀ ಎಸ್. ಎಸ್. ರಾಮಮೂರ್ತಿಯವರು:— ವಿದೇಶೀ ಬಟ್ಟೆ ಹಾಕಿರುತ್ತಾರೆ. ಸಂಯೋಜನಾವಾದಿಗಳು. ಈ ಹಿಂದೆ ಕಾಂಗ್ರೆಸ್ಸಿಗೆ ವಿರುದ್ಧ ಚುನಾವಣೆಗೆ ನಿಂತಿದ್ದವರು.

(೧೪) ಶ್ರೀ ಎಂ ಎಂ. ನಂಜುಂಡನವರು:— ಖಾದಿ ಧರಿಸಿನರೂ ಜೈಲಿಗೆ ಹೋದವರಲ್ಲ. ಸಂಯೋಜನಾವಾದಿಗಳು.

(೧೫) ಶ್ರೀ ಎಂ ಡಿ ಪೂಚಯ್ಯನವರು:— ಶರ್ಟಿಫೈಡ್ ಖಾದಿಯಲ್ಲದಿದ್ದರೂ ಖಾದಿ ಧರಿಸುತ್ತಾರೆ. ಜೈಲಿಗೆ ಹೋದವರಲ್ಲ. ಕಾಂಗ್ರೆಸ್ಸಿಗೆ ದುಡಿದವರಲ್ಲ. ಸಂಯೋಜನಾವಾದಿಗಳಲ್ಲವೆಂದು ಹೇಳುತ್ತಾರೆ.

(೧೬) ಶ್ರೀ ಪಿ. ಎಂ. ನಾಣಮ್ಮಯ್ಯನವರು:— ಖಾದಿ ಧರಿಸುತ್ತಾರೆ. ಜೈಲಿಗೆ ಹೋದವರು. ಸಂಯೋಜನಾವಾದಿ ಪಕ್ಷದವರು ವಿಲೀನೀಕರಣಕ್ಕೆ ವಿರೋಧವಿಲ್ಲದವರೆಂದು ಹೇಳಿ ಚುನಾವಣಾ ಕಾರ್ಯವನ್ನಾರಂಭಿಸಿದ್ದಾರೆ.

(೧೭) ಶ್ರೀ ಸಿ. ಪಿ ಮೂಚಯ್ಯನವರು— ಖಾದಿ ಧರಿಸುತ್ತಾರೆ. ವ್ಯಾಪಾರಸ್ಥರು, ವಿಲೀನೀಕರಣ ಸಂಯೋಜನಾವಾದಿಗಳು

(೧೮) ಶ್ರೀ ಮುಕ್ಕಾಟಿರ ಕರುಂಬಯ್ಯನವರು— ಪ್ಲಾಂಟರು, ವ್ಯಾಪಾರಸ್ಥರು. ಕಾಂಗ್ರೆಸ್ಸಿಗೆ ಮೊನ್ನೆ ಒಕ್ಕಾಯಂಕ್ಕಾಗಿ ಸೇರಿದವರು ಖಾದಿ ಧಾರಿಗಳಲ್ಲ. ಕಾಂಗ್ರೆಸ್ಸಿಗಾಗಿ ದುಡಿದವರೂ ಅಲ್ಲ. ಪ್ರತ್ಯೇಕವಾದಿ ಎನ್ನುತ್ತಾರೆ

ಹಿಂದುಳಿದ ವರ್ಗದ ಅರು ಜನ ಪ್ರತಿನಿಧಿಗಳ ವಿಚಾರ ಬರೆಯುವದು ಬೇಡ. ಈ ಹಿಂದೆ ಅವರು ಕಾಂಗ್ರೆಸ್ಸಿಗೆ ಸೇರಿದುಡಿಯುವ ಅವಕಾಶವಿದ್ದರೂ ಸಾಧ್ಯವಾಗಿರಲಿಲ್ಲ. ಈ ಮೇಲಿನ ಸಚ್ಚಿಟ್ಟಿ ಕೊಟ್ಟವರಲ್ಲಿ ಎಲ್ಲಾ ಕಾಂಗ್ರೆಸ್ ಉಮೇದುವಾರರಾಗಲು ಅರ್ಹತೆ ಪಡೆದವರೋ ಎಂಬ ಸಂಶಯವಿದೆ. ಪಂಡಿತ ನೆಹರೂರವರು ನಿರೂಪಿಸಿದ ಅರ್ಹತೆಯಂತೆ ಅಳೆಯುವದಾದರೆ ಕೇವಲ ನಾಲ್ಕೈದು ಜನರು ಮಾತ್ರ ಉಮೇದುವಾರರಿಗೆ ಯೋಗ್ಯರೆಂದು ಕೋರದಿರದು ಆದರೆ ಕರ್ನಾಟಕ ಕಾಂಗ್ರೆಸ್ ಇವರೆಲ್ಲರಿಗೂ ಅಶೀರ್ವಾದಮಾಡಿಕೊಟ್ಟಿದೆ. ಶ್ರೀಗಳಾದ ಎಂ. ಎ. ಕರುಂಬಯ್ಯ, ಕೆ. ಕೆ. ನಂಜಪ್ಪ, ಚೌಡ್ಲು ಕಾಳಪ್ಪ, ಜೆ. ಲಿಂಗರಾಜಯ್ಯ ಮೊದಲಾದವರು ಕಾಂಗ್ರೆಸ್ಸಿನ ಉಮೇದುವಾರರೆಂದರೆ ಆಶ್ಚರ್ಯಪಡಬೇಕು. ಯಾವ ಅರ್ಹತೆಗಾಗಿ ಇವರು ಅಯ್ಕೆ? ಇದರಿಂದ ಸ್ಪಷ್ಟವಾಗುವದೆಂದರೆ ಕಾಂಗ್ರೆಸ್ಸು ತನ್ನ ಶಕ್ತದ ದೃಷ್ಟಿಯಿಂದ ಕೊಡಗಿನಲ್ಲಿ ಉಮೇದುವಾರರನ್ನು ಚುನಾವಣೆಗೆ ನಿಲ್ಲಿಸಿಲ್ಲ. ಬದಲು ಸಂಯೋಜನಾವಾದಿಗಳೆಂಬ ಕಾರಣದಿಂದ ಅಯ್ಕೆ ನಡೆಸಿದೆ. ಇದು ತೀರಾ ಆತ್ಮವಿಶ್ವಕರ ಈ ಉಮೇದುವಾರರು ಸಂಯೋಜನಾವಾದಿಗಳಾಗಿದ್ದು ಕಾಂಗ್ರೆಸ್ಸಿನ ಮುಸುಕನ್ನು ಹೊದ್ದಕೊಂಡಿರುವರು. ನಿಜವಾಗಿಯೂ ಪ್ರದಾರರು ಇದನ್ನು ಗುರ್ತಿಸಿ ಕೊಡಗನ್ನು ಉಳಿಸುವವರಾಗಬೇಕು.

'ಕಾಂಗ್ರೆಸಿನ ಪ್ರಾಥಮಿಕ ಸದಸ್ಯ.'

ಶ್ರೀ ಸಿ. ಎಂ. ಪೂಣಚ್ಚನವರು

ಸಂಯೋಜನವಾದಿಗಳಲ್ಲವೇ?

ಶ್ರೀ. ಸಿ. ಎಂ. ಪೂಣಚ್ಚನವರು ತಾವು ಸಂಯೋಜನಾವಾದಿಯಲ್ಲ; ಬದಲು ದೇಶಕ್ಕೆ ಸುಧಾರಣೆಯನ್ನು ತರಲು ಯತ್ನಿಸಿದವರು. ಕೊಡಗು ಸಂಯೋಜನೆಯಾಗಬೇಕೆಂಬ ಅಭಿಪ್ರಾಯ ನನ್ನಲ್ಲಿಲ್ಲ ವೆಂದು ಪ್ರಚಾರ ಮಾಡತೊಡಗಿದ್ದಾರೆ. ಇವರ ಈ ವಾದದಲ್ಲಿ ಎಷ್ಟು ಸತ್ಯಾಂಶವಿದೆಯೆಂಬ ಪರಿಶೀಲಿಸುವದೇ ಈ ಲೇಖನದ ಗುರಿ. ಕೊಡಗು ಶಾಸನ ಸಭೆಯಿಂದ ಇವರನ್ನು ರಾಜ್ಯಪುನರ್ ಸಭೆಗೆ ಕೊಡಗಿನ ಪ್ರತಿನಿಧಿಯಾಗಿ ಆರಿಸಿದಾಗ ಕೊಡಗಿನ ಭವಿಷ್ಯದ ವಿಚಾರದಲ್ಲಿ ನಿಮ್ಮ ಅಭಿಪ್ರಾಯವೇನೆಂದು ಶ್ರೀ. ಕೆ. ಪಿ ಕರುಂಬಯ್ಯ ತರರು ಕೌನ್ಸಿಲು ಸಭೆಯಲ್ಲಿ ಪ್ರಶ್ನೆ ಕೇಳಿದಾಗ ಶ್ರೀ. ಸಿ. ಎಂ. ಪೂಣಚ್ಚನವರು ದೇಶದ ಭವಿಷ್ಯದ ಬಗ್ಗೆ ತಮ್ಮ ವ್ಯಕ್ತಿಗತ ಅಭಿಪ್ರಾಯವನ್ನು ಕೊಡುವದಿಲ್ಲವೆಂದೂ, ಕೊಡಗಿನ ಜಫರು ಯಾವ ರೀತಿಯ ನಿರ್ಣಯವನ್ನು ಕೊಡುವರೋ ಅದೇ ತಮ್ಮ ಅಭಿಪ್ರಾಯವೆಂದೂ ಖರವಸೆ ಇತ್ತರು, ಈ ಬಗ್ಗೆ ಹಸ್ತಪತ್ರಿಕೆಗಳನ್ನೂ ಹಂಚಿದರು. ಆದರೆ ಈ ಭರವಸೆಯನ್ನು ಪೂಣಚ್ಚನವರು ಪಾಲಿಸಲಿಲ್ಲ. 'ಎ' ವರ್ಗದ ಪ್ರಾಂತಗಳಿಗೆ ಬೇಕಾದ ಫಟನೆಯನ್ನು ತಯಾರಿಸಲು ರಾಜ್ಯಪುನರಾ ಸಭೆಯು ಶ್ರೀ. ಪೂಣಚ್ಚನವರನ್ನೊಳಗೊಂಡ ಒಂದು ಸಮಿತಿಯನ್ನು ನೇಮಿಸಿತು. ಆ ಸಮಿತಿಯು ಶಿಫಾರಸ್ಸು ಮಾಡಿದ ಸುಧಾರಣಾ ವರದಿಯಲ್ಲಿ ಕೊಡಗಿನ ಬಗ್ಗೆ ತಮ್ಮ ಟಿಪ್ಪಣಿಯೊಂದನ್ನು ಶ್ರೀ ಪೂಣಚ್ಚನವರು ಹೀಗೆ ಬರೆದಿದ್ದಾರೆ. "The special problems arising out of the smallness, geographical position and scantiness of resources might at no distant future necessitate the joining of this area to a contiguous unit. Hence there should be a specific provision in the constitution to make this possible after ascertaining the wishes of the people" "ಅಂದರೆ ಕೊಡಗಿನ ಚಿಕ್ಕತನ, ಭೌಗೋಳಿಕ ಸ್ಥಾನ ಹಾಗೂ ಹಣಕಾಸಿನ ಅಭಾವ ಇವುಗಳು ಹತ್ತಿರದ ಬೇರೆ ಪ್ರಾಂತದೊಡನೆ ಇದನ್ನು ಸೇರಿಸುವ ಅವಶ್ಯಕತೆಯನ್ನು ಶೀಘ್ರದಲ್ಲಿ ಭವಿಷ್ಯದಲ್ಲಿ ತರಬಹುದಾದ ಕಾರಣ ಜನರ ಅಭಿಯವನ್ನು ಪರಿಶೀಲಿಸಿ ತಾವು ಸಂಯೋಜನೆಗೆ ಫಟನೆಯಲ್ಲಿ ವಿಧಿವಿಷ, ವಿಧಾನವು ನೊಡಬೇಕು.' ಶ್ರೀ ಪೂಣಚ್ಚನವರು ಹೀಗೆ ಬರೆಯಲು ಕಾರಣವೇನು? ಶತ ಮಾನಗಳಿಂದ ಪ್ರತ್ಯೇಕ ಆಡಳಿತ ನಡೆಸಿಕೊಂಡು ಬಂದ ಕೊಡಗು ಬೇರೆ ಪ್ರಾಂತ ದೊಡನೆ ಸೇರಬೇಕಾಗುವುದೆಂಬ ಸಂಶಯ ಇವರಲ್ಲಿ ಬರಲು ಕಾರಣವೇನು? ಆ ಸಂಶಯದಂತೆ ಕೊಡಗನ್ನು ಹತ್ತಿರದ ಇತರ ಪ್ರಾಂತದೊಡನೆ ಸೇರಿಸಲು ಅನುವಾಗುವ ನಿಯಮವನ್ನು ಫಟನೆಯಲ್ಲಿ ಸೇರಿಸಬೇಕೆಂದು ಬರೆದಿದ್ದಾರೆ?! ಇದರಿಂದ ಇವರ ಒಲವು ಯಾವ ಕಡೆ ಇದೆಯೆಂಬುದು ಪ್ರತಿಯೊಬ್ಬನಿಗೂ ವ್ಯಕ್ತವಾಗುತ್ತದೆ. ದೇಶದ ಭವಿಷ್ಯದ ವಿಚಾರದಲ್ಲಿ ಜನರ ಅಭಿಪ್ರಾಯವನ್ನು ತಿಳಿಯದೆ ತನ್ನ ಸ್ವಂತ ಅಭಿಪ್ರಾಯ ಕೊಡುವುದಿಲ್ಲವೆಂದು ದೇಶಕ್ಕೆ ಧೂರವಸೆ ಇತ್ತ ಪೂಣಚ್ಚನವರು ಕೊಡಗು ಪ್ರತ್ಯೇಕವಾಗಿ ಬಹುಕಾಲ ನಿಲ್ಲಲಾರದೆಂಬ ಸಂಶಯ ತನ್ನಲ್ಲಿ ಬಂದಿದ್ದಕ್ಕೆ ಅದನ್ನು ಇಲ್ಲಿಯ ಜನರಿಗೆ ವಿವರಿಸಿ ಇಲ್ಲಿಯ ಜನರ ಅಭಿಪ್ರಾಯಕ್ಕನುಗುಣವಾಗಿ ವರ್ತಿಸಬೇಕಿತ್ತು. ಅದು ಬಿಟ್ಟು ತನ್ನ ಸ್ವಂತ ಅಭಿಪ್ರಾಯದಂತೆ ಕೊಡಗಿನ ಸಂಯೋಜನೆಗೆ ಎಡೆಮಾಡಬೇಕೆಂದು ಸೂಚಿಸಿದ ಪೂಣಚ್ಚನವರು ತನ್ನ ಭರವಸೆಗೆ ವ್ಯತಿರಿಕ್ತ ವರ್ತಿಸಿ ಆತ್ಮವಂಚನೆ ಮಾಡಿಕೊಂಡಿರುವದಲ್ಲದೆ ಜನರಿಗೂ ದ್ರೋಹಮಾಡಿದ್ದಾರೆ.

ದೇಶದ ಭವಿಷ್ಯದ ವಿಚಾರದಲ್ಲಿ ಜನರ ಅಭಿಮತ ತಿಳಿದು ವರ್ತಿಸಬೇಕೆಂದು ಹೇಳಿದ್ದೇನೆಷ್ಟಾಪ ಕೊಡಗಿಗೆ ಸುಧಾರಣೆ ಕೊಡಬೇಕೆಂದು ಪ್ರಯತ್ನಿಸಿದ್ದೇನೆಷ್ಟಾವ ಶ್ರೀ ಪೂಣಚ್ಚನವರು ಏನೆಂದಿದ್ದಾರೆ? ಕಾ. ರಾ–೩–೫೦ರಲ್ಲಿ 'ಎ' ಭಾಗದ ಪ್ರಾಂತಗಳಿಗೆ ಸಧಾರಣೆ ಕೊಡುವ ವಿಚಾರ ಚರ್ಚೆಗೆ ಬಂದಾಗ ಶ್ರೀ. ಪೂಣಚ್ಚನವರು ಮಾಡಿದ ಭಾಷಣದ ಯಥಾನಕಲು ಇಂಗ್ಲಿಷಿನಲ್ಲಿ ಕಾ ೨೮–೩–೫೦ ರ ಜನ್ಮಭೂಮಿ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಅದರಲ್ಲಿ ಕೊಡಗಿಗೆ ಸುಧಾರಣೆ ಬೇಕೆಂಬ ಒಂದು ಶಬ್ದವನ್ನೂ ಇವರು ಆಡಿಲ್ಲ. ಬದಲು ಕೊಡಗಿನ ಭವಿಷ್ಯದ ಬಗ್ಗೆ ಕೇಂದ್ರ ಸರಕಾರವು ಒಂದು ಆಜ್ಞೆ ಕೊಡಿರುವದೇ ಕೊಡಗಿನೊಳಗಿರುವ ಭಿನ್ನಾಭಿಪ್ರಾಯಕ್ಕೆ ಕಾರಣವೆಂದು ಹೇಳಿದ್ದಾರೆ. ಕೊಡಗಿನ ಜನರನ್ನು ಕೇಳದೆ ಕೇಂದ್ರವು ನಿರಂಕುಶ ರೀತಿಯಲ್ಲಿ ತೀರ್ಮಾನ ಕೊಡಬೇಕೆಂದು ವಾದಿಸಿದ್ದಾರೆ. (It is because you (the Govt. of India) have been drifting on this and hesitating to give a clear cut decision on this) ಹಾಗಾದರೆ ಕೊಡಗಿನ ಜನರಿಗೆ ಇವರು ತನ್ನ ಚುನಾವಣಾ ಕಾಲಕ್ಕೆ ಕೊಟ್ಟ ಭರವಸೆ ಏನಾಯಿತು? ಇತರ ಸಂಯೋಜನಾವಾದಿಗಳಂತೆಯೇ ಇವರೂ ಕೇಂದ್ರ ಸರಕಾರವು ಕೊಡಗಿನ ಭವಿಷ್ಯ ನಿರ್ಣಯ ಮಾಡಿಬಿಡಬೇಕೆಂದು ವಾದಿಸಿದ್ದಾರೆ.

ಕೊಡಗಿನ ಜನರು ಪೂಣಚ್ಚನವರ ಈ ಸಂಯೋಜನಾ ನೀತಿಯಂತೆ ಉದ್ರೇಕಗೊಂಡು ಅಲ್ಲಲ್ಲಿ ಸಭೆ ಠರಾವುಗಳನ್ನು ಮಾಡಿ ಕೇಂದ್ರ ಸರಕಾರಕ್ಕೆ ಬರೆದ ಕಾರಣ, 'ಕೊಡಗು' ಪತ್ರಿಕೆಯ ಮೂಲಕ ಜನರು ಇವರ ನೀತಿಯನ್ನು ಕಟುವಾಗಿ ಟೀಕಿಸಿದ ಕಾರಣ ಮತ್ತು ದೇಶೀಯರಿಲ್ಲರೂ ಭವಿಷ್ಯದ ಬಗ್ಗೆ ಉದ್ರೇಕಗೊಂಡಿರುವದರಿಂದ ಶ್ರೀ ಪೂಣಚ್ಚನವರೂ ನಿರ್ಣಾಹವಿಲ್ಲದೆ ಜನಾಭಿಪ್ರಾಯದಂತೆ ಭವಿಷ್ಯ ನಿರ್ಣಯವಾಗಬೇಕೆಂದು ಹೇಳುತ್ತಿದ್ದಾರೆ. ಹಾಗೆ ಹೇಳುತ್ತಿದ್ದರೂ ಭವಿಷ್ಯದ ಪ್ರಶ್ನೆಯಿಂದಿಲ್ಲಿ ಚುನಾವಣೆಗೆ ಅದನ್ನು ಜನರ ಮುಂದಿಡಬಾರದೆಂದು ವಾದಿಸುತ್ತಿದ್ದಾರೆ.

ನಿಜವಾದ ಪ್ರಜಾಧಿಕಾರಕ್ಕೆ ದೇಶಕ್ಕೆ ಒಂದು ನಿರ್ದಿಷ್ಟ ಹಾದಿಯನ್ನು ತೋರಿಸದೆ ತಮ್ಮ ತಲೆಗೆ ಉಳಿಸಿಕೊಳ್ಳುವ ದೃಷ್ಟಿಯಿಂದ ಅತ್ಯ ವಂಚನೆ ಮಾಡಿಕೊಂಡು ದೇಶೀಯರನ್ನು ಮೆಚ್ಚಿಸುವ ನಾನಾ ಸೇವಕನ್ನು ಶ್ರೀಯುತರು ತಳೆದರೂ ಅವರ ಆಂತರಿಕ ಆಶಯವು ಒಡೆದು ಕಾಣುತ್ತಿದೆ. ಜತರ ಅಭಿಪ್ರಾಯಕ್ಕೆ ಇವರು ತಲೆಬಾಗುವದಾದರೆ ಈ ಚುನಾವಣೆಯಲ್ಲಿ ಭವಿಷ್ಯದ ಬಗ್ಗೆ ಜನರ ಅಭಿಪ್ರಾಯವೇನೆಂದು ತಿಳಿಯಬಾರದೇಕೆ? ಕಳೆದ ೩೦ ವರ್ಷಗಳಿಂದ ಕೊಡಗಿನ ಮಹಾ ಸಮಸ್ಯೆಯಾಗಿ ಕೊಡಗಿನ ಪ್ರಗತಿಗೆ ಆಶಂಕವಾಗಿರುವ ಈ ಭವಿಷ್ಯ ಪ್ರಶ್ನೆಯನ್ನು ಜನತೆಯ ಮುಂದಿಟ್ಟು ಅವರ ಅಭಿಮತದಂತೆ ವರ್ತಿಸಲು ಹೆದರುವುದೇಕೆ? ದಿಲ್ಲಿಯಲ್ಲಿ ದಿಲ್ಲಿಯಲ್ಲಿ ಡೆಲ್ಲಿಯಲ್ಲಿ ನಡೆದ ಕೊಡಗು ಪ್ರತಿನಿಧಿಗಳ ಸಮ್ಮೇಳನದಲ್ಲೂ ಶ್ರೀಯುತರು ತಮ್ಮ ಸಂಯೋಜನಾ ಒಲವನ್ನು ವ್ಯಕ್ತಪಡಿಸಿದ್ದಾರೆಂತೇ. ಈ ರೀತಿ ವರ್ತಿಸಿ ದೇಶಕ್ಕೆ ಇವರಿತ್ತ ಭರವಸೆಯನ್ನು ಮುರಿದು ವರ್ತಿಸುತ್ತಿರುವ ಇವರು ಇಂದು ತಾನು ಪ್ರತ್ಯೇಕವಾದಿಯೆಂದು ಹೇಳುತ್ತಿದ್ದಾರೆ. ದೇಶದ ಮಹಾದಾನರ ಅಭಿಪ್ರಾಯದಂತೆ ವರ್ತಿಸುವೆನೆಂದು ಹೇಳಿದ ಶ್ರೀ ಪೂಣಚ್ಚನವರು ತಾವು ಪ್ರತ್ಯೇಕವಾದಿಯೆಂದು ಹೇಳುವದಾದರೆ ಅದು ಅಧಿಕಾರಕ್ಕೇರುವ ಆಸೆಯಿಂದ ಎಂಬುದನ್ನು ಸರ್ವರೂ ತಿಳಿಯಬೇಕು ದೇಶದಹಿತ ಅಭಿಪ್ರಾಯಕ್ಕನುಗುಣವಾಗಿ ವರ್ತಿಸುತ್ತೇವೆಂದು ಭರವಸೆ ಇತ್ತ ಇತರ ದೇಶದ ಅಭಿಪ್ರಾಯ ತಿಳಿಯುವ ಮೊದಲು ತಾನು ಪ್ರತ್ಯೇಕವಾದಿ ಯಾ ಸಂಯೋಜನಾವಾದಿ ಎನ್ನುವ ಹಕ್ಕಿಲ್ಲದಿದೆ!

— ಎಂ. ಐಯ್ಯಪ್ಪ.

ಸಮರ್ಥ ಹಾಗೂ ಸಮೃದ್ಧನಾಡು

ಸ್ವಿಟ್ಸರ್‌ಲೇಂಡ್

ಸ್ವಿಟ್ಸರ್‌ಲಂಡವು ಪ್ರಕೃತಿ ಸೌಂದರ್ಯ, ಪ್ರಕೃತಿ ಮಹಾತ್ಮೆಗಳಿಗಾಗಿ ಖ್ಯಾತಿವೆತ್ತ ನಾಡು. ಸಾಮರ್ಥ್ಯ ಸಂತೋಷಗಳು ಸಮಬದ್ಧಿಯಾದ ನಾಡು. ಸಮತೆಯು ಮೂರ್ತಿವಂತವಾಗಿ ವೈವೆತ್ತಿರುವನಾಡ. ಜನತೆ ಸುಖ, ಶಾಂತಿ, ತೃಪ್ತಿಗಳಿಂದ ಜೀವನ ನಡೆಯಿಸುವುದಕ್ಕಾಗಿವಿನೇನೆ ಸಲಕರಣೆಗಳನ್ನು ಬಯಸುತ್ತನೆಯೋ ಅವುಗಳೆಲ್ಲವೂ ಸ್ವಿಟ್ಸರ್‌ಲಂಡದಲ್ಲಿ ಸಮೃದ್ಧಿಯಾಗಿವೆ. ಹಾಗಾದರೆ ಈ ಸಮೃದ್ಧಿಯ ಗುಟ್ಟೇನು?

ಸ್ವಿಟ್ಸರ್‌ಲಂಡದ ಅಧ್ಯಕ್ಷರಿಗೆ, ಉಳಿದೆಲ್ಲ ದೇಶಗಳಲ್ಲಿರುವಂತೆ, ಸರಕಾರೀ ಭವನವಿಲ್ಲ, ಸರಕಾರೀ ಮೋಟಾರಕಾರಿಲ್ಲ. " ಅಧ್ಯಕ್ಷನೂ ಸಾಮಾನ್ಯ ನಾಗರಿಕನಂತೆ ತನ್ನ ತನ್ನ ಬದುಕು ಬಾಳನ್ನು ಸಾಗಿಸುತ್ತಾನೆ.

ಸ್ವಿಟ್ಸರ್‌ಲಂಡದ ಜನಸಾವನನ್ನನ ಜೀವಮೆಟ್ಟುವ ವೆಚ್ಚವು ಇಡೀ ಯುರೋಪ ಖಂಡದಲ್ಲಿಯೇ ಹೆಚ್ಚಿನ ವೆಚ್ಚದ್ದಾಗಿದೆ. ಅಲ್ಲಿದು ಬೀದಿ ಗುಡಿಸುವವನ ತಿಂಗಳ ಆದಾಯವು ಏಳುನೂರು ರೂಪಾಯಿಗಳಷ್ಟಿದೆ. ಅಲ್ಲದೆ. ಅವನಿಗೆ ಮೂರು ತಾಲ್ಕ ವಿಧಾನಗಳಲ್ಲಿ ಉತ್ತಮ ಹಾಗೂ ಆರ್ಥಿಕ ಸೌಕರ್ಯಗಳನ್ನೆಲ್ಲ ಒಳಗೊಂಡ ಮನೆಯಿರುತ್ತದೆ.

ಸ್ವಿಟ್ಸರ್‌ಲಂಡದಲ್ಲಿಯ ಭಾರತ ಕಚೇರಿಯ ಒಬ್ಬ ಅಧಿಕಾರಿಯು ಸ್ವಿಸ್ಸ್‌ಮೋಟಾಕ ಡ್ರಾಗ್ಸ್‌ವರನ್ನ. ಕೂಡ, ಫನ್ಮಣ್ಣಿಯ ಆಯ್. ಸಿ. ಎಸ್. ಅಧಿಕಾರಿಗಳು ಅಥವಾ ನನ್ನ ಪಾರ್ಲಿಮೆಂಟ್ ಸದಸ್ಯರು ವಾಸಿಸುವ ಮನೆಗಳಿಗಿಂತ ಹೆಚ್ಚು ಉತ್ತಮವಾದ ಹಾಗೂ ಹೆಚ್ಚಿನ ಸಲಕರಣೆ ಸಾಮಗ್ರಿಗಳುಳ್ಳ ಒಳ್ಳೆತರದ ಮನೆಯಲ್ಲಿ ವಾಸಿಸುತ್ತಾನೆ.

ನ್ಯೂಯಾರ್ಕ್, ಚಿಕ್ಯಾಗೋ, ಲಂಡನ್ ಮುಂಬಯಿ, ಕಲಕತ್ತಾ, ದಿಲ್ಲಿಗಳಲ್ಲಿ ಇದ್ದಂತೆ 'ಕೇಡಿಲಿಕ್'ಗಳು ಸ್ವಿಟ್ಸರ್‌ಲಂಡದಲ್ಲಿ ಇಲ್ಲವೇ ಇಲ್ಲ.

ಸ್ವಿಟ್ಸರ್‌ಲಂಡದಲ್ಲಿ, ಒಂದು ಜೊಲ್ಲು ಯಾಡಲೂ, ಕಣ್ಣು, ಕಲ್ಲಿದ್ದಲಿ, ಹತ್ತಿಗಳ ಉತ್ಪಾದನೆಯಿಲ್ಲ ಆದರೆ ಅದು ಬಂಗಡಿಯೊರಗಳನ್ನಸ್ಟೇ ಅಲ್ಲದೆ ಹೆಚ್ಚಿನ ಪ್ರಮಾಣದಲ್ಲಿ, ಮೋಸ್ ಮೋಟರ್ಸ ಇಂಜಿನ್ಸ ಮೊದಲಾದ ಯಂತ್ರಿಕ ಸರಕುಗಳನ್ನು ನಿರ್ಮಾತ ಮಾಡುತ್ತದೆ.

ಸ್ವಿಟ್ಸರ್‌ಲಂಡದ ಬಂಗಾರಗಳು, ಕೆಮಿಕಲ್ಸಗಳು, ಮೊದಲಾದವುಗಳೂ ಜಗತ್ಪ್ರಖ್ಯಾತಿ ಹೆಚ್ಚಿನ ಬೇಡಿಕೆಯಿರುತ್ತದೆ.

ಸ್ವಿಟ್ಸರ್‌ಲಂಡದಲ್ಲಿ ಸಂಬಂಧದ ಸೈನ್ಯವಿಲ್ಲವೇ ಇಲ್ಲ; ಕಮಾಂಡರ ಇನ್ ಚೀಫ್ (ಮುಖ್ಯ ಸೇನಾಪತಿ) ಕೂಡ ಇಲ್ಲ! ಅದಕ್ಕೆ ಸ್ವಿಟ್ಸರ್‌ಲಂಡದ ಪ್ರತಿಯೊಬ್ಬ ನಾಗರಿಕನೂ ಯುದ್ಧಾಳು–ದಂಡಾಳುವಾಗಿದಾನೆ ಅವಶ್ಯಬಿದ್ದರೆ ಅರ್ಧ ದಿನದಲ್ಲಿಯೇ ಸೈನ್ಯ ಸಂಘಟನೆಯನ್ನು ಸ್ವಿಟ್ಸರ್‌ಲಂಡವು ಮಾಡಬಲ್ಲದು.

ಸ್ವಿಟ್ಸರ್‌ಲಂಡವು ಸಂಯುಕ್ತ ರಾಷ್ಟ್ರ ಸಂಘದ ಸದಸ್ಯರಾಷ್ಟ್ರವಾಗಿಲ್ಲ ಅದರೆ ಜಾಗತಿಕ ಶಾಂತಿ ಸಾಧನೆಯ ತತ್ವಗಳನ್ನೆಲ್ಲವನ್ನೂ ಅದು ತನ್ನ ನಿತ್ಯದ ಆಚರಣೆಯಲ್ಲಿ ತಂದಿರುತ್ತದೆ. (ಸಂ. ರಾ. ಸಂಘವು ಆ ತತ್ವದ ಆಚರಣೆಯನ್ನೀಗ ನಡೆಸಿದೆ.)

ಸ್ವಿಟ್ಸರ್‌ಲಂಡವು ಅತ್ಯಂತ ಚಿಕ್ಕ ರಾಷ್ಟ್ರವಾಗಿದ್ದರೂ, ಜಗತ್ತಿನಲ್ಲಿಯ ದಿನದಿನದ ಉದಯೋನ್ಮುಗಳನ್ನು ಸ್ವಿಟ್ಸರ್‌ಲಂಡದ ಗಡಿಯೊರಗಳೇ ಸೂಚಿಸುತ್ತವೆ!

ಹೀಗಿರುವುದರಿಂದಲೇ ಸ್ವಿಟ್ಸರ್‌ಲಂಡವು ಜಗತ್ತಿನಲ್ಲಿಯೇ ಒಂದು ಸಮೃದ್ಧ ಸಮರ್ಥ ನಾಡಾಗಿರುತ್ತದೆ. ಹೀಗಾಗುವುದರ ಮೂಲಮಂತ್ರವೆಂದರೆ ಸಮಭಾವ ಉದ್ಯೋಗಶೀಲತೆ, 'ಬದುಕಬೇಕು; ಬದುಕಿಗೊಡಬೇಕು.' ಎಂಬುದರ ಪ್ರತ್ಯಕ್ಷ ಆಚರಣೆಗಳೇ, ಆಗಿರುತ್ತದೆ. ಯಾವ ನಾಡು–ನಾಡಿನ ಜನತೆ–ಇವನ್ನು ಆಚರಣೆಯಲ್ಲಿ ತರಬಲ್ಲದೋ ಅದು ಸಮರ್ಥವೂ ಸಮೃದ್ಧವೂ ಆಗುವದರಲ್ಲಿ ಸಂದೇಹವೇ ಇಲ್ಲ ಎಂದು ಅಲ್ಪ ಪರ್ವತದ ತುಟ್ಟತುದಿಗೆ ನಿಂತುಕೊಂಡು ಸ್ವಿಟ್ಸರ್‌ಲಂಡವು ಜಗತ್ತಿಗೇ ಘೋಷಿಸುತ್ತಿದೆ ಕೂಗಿ ಹೇಳುತ್ತಲಿದೆ.

Licence No. 60.
Licenced to Post without Prepayment

Reg. No. M. 1550.
'KODAGU' MERCANA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೩೦ | ತಾರೀಕು ೩೦-೧೧-೧೯೫೦ನೇ ಮಂಗಳವಾರ | ಸಂಚಿಕೆ ೩೬

॥ ಮತದ ಮಹತ್ವ ಮತ್ತು ಮೀಮಾಂಸೆ. ॥

ಮತದಾರರು ರಾಜಕೀಯ ಪಕ್ಷ ವಿಶಿಷ್ಟಗಳ ಧ್ಯೇಯ, ಧೋರಣೆಗಳನ್ನು ಸೇವಾಬಲ ಸಂಘಟನ ಶಕ್ತಿಗಳನ್ನು ಕೆಲಿದುಕೊಳ್ಳಲಿದೆ ತಮ್ಮ ಸುತದ ಮಹತ್ವವನ್ನೂ ಪ್ರಾಮುಖ್ಯವಾಗಿ ಅರಿತುಕೊಳ್ಳಬೇಕು. ಒದರ ಅರ್ಥ, ಸ್ವಭಾವ, ಪರಿಣಾಮಗಳನ್ನೂ ನೆನಪಿಟ್ಟು ವಾಡಿಕೊಳ್ಳಬೇಕು. ಏಕೆಂದರೆ ಮತದಾನವು ಮಂಗನ ಕೈಯ ನಾಣ್ಯಕ್ಕೆ ಬಾಬರದ ವಸ್ತುವಿನ ಸಮವಾಗಿದೆ ಮೌಲ್ಯವನ್ನು ಪಡೆದುಕೊಂಡಿದೆ. ಆದುದರಿಂದ ನಾಗರಿಕರಿಗೆ ತಿಳಿದ ಮಟ್ಟಿಗೆ ಮತದ (Vote) ಗುಟ್ಟು, ಗುರಿ, ಉದ್ದೇಶ, ಉಪಾಯ, ನೀತಿ, ಗೌರವ ಮುಂತಾದ ಅಂಶಗಳ ಅಂಶೀಚನೆ ಮಾಡಿ ಅವರ ಅರ್ಥ ಮನವಟ್ಟಿಕೆಯನ್ನು ಇಲ್ಲಿ ಕೊಡಲಾಗಿದೆ

ಈಗಿನ ಶಾಲಿಲ್ಲಿ ಮತದಾನವು ಬಹುಮಾನ್ಯವಾಗಿದೆ ಎಂಬ ಸಂಪ್ರದಾಯ ಪಡೆಯುತ್ತಿದೆ. ಅದಕ್ಕೆ ಭೂದಾನ, ಕನ್ಯಾದಾನ, ಗೋದಾನ, ಸುವರ್ಣದಾನಗಳಿಗೆ ಕಲಾ ಹೆಚ್ಚಿನ ಹಿರಿಮೆಯೊದಗುತ್ತಿದೆ. ಏಕೆಂದರೆ ಇತ್ತೀಚೆಗೆ ಮತಕ್ಕೆ ಬಾಯ್ಕರೆದ ಹುಂಬಲಿಸುವವರ ಹೇಳವಾಗಿದ್ದಾರೆ ಕಾಡಿ ಬೇಡಿ ಬೆಂಬತ್ತಿದಂತೆ ಅವರ ಬೆಲೆ ಬೆಳೆಯುತ್ತಿದೆ. ಪ್ರಜಾರಾಜಕೀಯ ಸಾಮಾಜಿಕ ಆರ್ಥಿಕ ಪಕ್ಷಸಂಗಡಗಳನ್ನು ಕಟ್ಟಬಲ್ಲದು, ಕೆಡಿಸಬಲ್ಲುದು. ರಾಜ್ಯಗಳನ್ನು ಕಳಿಸಬಲ್ಲುದು. ಅಡಳಿತವನ್ನು ಬುಡಮೇಲು ಮಾಡಬಲ್ಲುದು. ಸ್ವತಂತ್ರ ಸೌಭಾಗ್ಯಗಳನ್ನು ತರಬಲ್ಲುದು, ಗಂಡಾಂತರದ ಗಣಿಗೆ ನೂಕಬಲ್ಲುದು. ಇಂತಹ ಪ್ರಭಾವವುಳ್ಳ ಮತವನ್ನು ಸಂತಯಿಸುವ ಸಾಧಿಸುವ ತತ್ವ—ತಂತ್ರಗಳನ್ನು ಎಲ್ಲರೂ ಅಭ್ಯಸಿಸಬಲ್ಲಿದ್ದರೆ ಅದೊಂದು ಆಶ್ಚರ್ಯವಲ್ಲ.

ಅದರ ವಿಶಾಲ ವ್ಯಾಪ್ತಿಯುಳ್ಳ ಅರ್ಥವನ್ನು ತಿಳಿಯಬಲ್ಲವರ ಗೈಯಲ್ಲಿರುವ ಮತವು ಸ್ವಾತಂತ್ರ್ಯದಸ್ತ್ರವೆಯೊಗಿ, ಪ್ರಜಾ ಪ್ರಭುತ್ವದ ಕತ ಕೆಯೊಗಿ ನಿಲ್ಲಬಲ್ಲುದು. ಅಂತರಂ ಕೈಯ ಮತವು ಸರಕಾರದ ಸಾಧಿಯೊಗುವುದು. ಗತ್ಯಂತರವಿಲ್ಲದೆ ಗಂಡಾತರವಾಗುವುದು. ಅಡಳಿತದ ಅಥವಾ ರಾಜ್ಯ ವ್ಯವಸ್ಥೆಯ ಸೂತ್ರಧಾರಿಕ ವಾಗುವುದು. ಅಧಿಕ ಸ್ಥಾನಂಗಿಗಳ, ಅಧಿಕಾರ ಸತಾ ಧರ ಅಂಕ ಶವಾಗುವುದು. ಜನ ಕ್ರಾಂತಿಕ ಜ್ಯೋತಿಯೊಗುವುದು. ಶಾಂತಿ—ಸಮತೆಗಳ ಸಾಧಕವಾಗುವುದು. ಜನಹಿತಾವಹ ಧುರೀಯೊಗುವುದು ಅಡಳಿತ ಪಕ್ಷಗಳಿಕ್ಕೆ ಅಂಜಿಕೆಯುಂಟಾಗುವುದು. ಶಾಂತಿ ಪುಷ್ಟಿ, ತಪಿಗಳಿಸ್ನೇಹಿಯ ಕಾಮ ಧೇನುವಾಗುವುದು.

ಆದರೆ ಕರಿಯವರ ವಶವಲ್ಲರುವ, ವತ್ತು ದೋರಿಸುವರು ಒಂದಿಗೆ ಕೆವಿ ಜೋಲವರ ಗೈಯಲ್ಲಿರಬಹುದು ಮತವು ಅನೇಕ ಅಪಘಾತಕಾರಿಯೊಗಿ ವಂಚಿಸಬಹುದು. ಅಮಾಯಿಂದ ಶಿಕ್ಷಣವನು ಭವನಗಳಿಂದ ಸ್ವತಂತ್ರ ವಿಚಾರಶಕ್ತಿಯನ್ನು ಪಡೆಯದ ಪ್ರಜೆಗಳ ಸಂಖ್ಯೆಯೇ ಅತ್ಯಧಿಕವಾಗಿರುವಷ್ಟು ಪ್ರಜಾಸ್ವಭ ಪ್ರಭ್ವವೆ ಆದರ್ಶಕ್ಕೆ ಗೆಲವು ಗಟ್ಟಿ ನಡೆಯವದು ತುಂಬ ಕಷ್ಟವೆಂದು ಒತ್ತಿಪರು ಹೇಳುತ್ತಾರೆ ಕರಿಯದ ಮಂಗ್ಧ ಮತದಾರರು ಜಿತಗಳ ಜಾಲಕ್ಕೆ ಸೋಲಬಹುದು. ಕುಹಕರ ಕೈಗೊಂಬೆಯೊಗಬಹುದು. ಬೆರಕೆ ಗತ್ಯನ್ವಾರ ಬಲಿಗೆ ಬೀಳಬಹುದು. ಒಂದಲ್ಲ ಎರಡಲ್ಲ ಹಲವು ಅನಾಹುತಗಳಿಗೆ ಆಹುತಿಯೊಗಬಹುದು.

ಇಂತಹ ಅನರ್ಥ ಪರಂಪರೆಯನ್ನು ತಡೆಯಲು ಜನತಾನುರಾಗವುಳ್ಳ ಸುಶಿಕ್ಷಿತರು, ನಿರಕ್ಷರಿಗಳಿಗೆ ತಿಳಿಯದವರಿಗೆ ಮತದಲ್ಲಡಗಿರುವ ಮಹತ್ವವನ್ನು ಮಮತೆಯಿಂದ ತಿಳಿಸಬೇಕು. ಚುನಾವಣೆಗಳೆಂದರೆ ರಾಜ್ಯಾಸ್ಥಿಯನ್ನು ಸಾಗಿಸಲು ಸಮರ್ಥವಾದ ಗುಣಾತಿಲಿಗಳನ್ನು ಆರಿಸಿ ಕಳಿಸುವ ಹಿರಿದಾದ ಹೊಣೆಯೆಂಬುದನ್ನು ಅವರ ಗಮನಕ್ಕೆ ತಂದು ಕೊಡಬೇಕು. ಜನಾಣಿಯೆಂದರೆ ಅದೊಂದು ಹಬ್ಬ ಹರಿದಿನಗಳ ಸಂಭ್ರಮವಲ್ಲ ಜನತೆಯು ಸಾರಾ ಸಾರಾ ವಿಚಾರ ಮಾಡಿ ತಾನು ಇಷ್ಟಪಡುವ ಪ್ರತಿನಿಧಿಗಳನ್ನು ಸರಕಾರ ನಡೆಸಲು ಆರಿಸಿ ಕಳಿಸುವ ಮಹಾಕಾರ್ಯ. ಈ ಕೆಲಸವನ್ನು ಜನರು ಸೋಮಾರಿತನದಿಂದ, ತಿಳಿಗೇಡಿತನದಿಂದ ಸರಿಯಾದ ರೀತಿಯಲ್ಲಿ ನೆರವೇರಿಸದಿದ್ದರೆ, ತಮಗಿಷ್ಟವಿಲ್ಲದವರು ಅಧಿಕಾರ ಪದಗಳಿಗೇರಿ ತುಂಬ ತೊಂದರೆಪಡಬೇಕಾದೀತೆಂಬುದನ್ನು ನೆನಪಿಸಿಕೊಳ್ಳಬೇಕು. ಈ ಬಗೆಗೆ ಪ್ರಭಾವಶಾಲಿಯೊದ ಪ್ರಚಾರವನ್ನೆಸಗುವ ಹೊಣೆಯೂ ಓದು ಬರಹ ಬಲ್ಲವರದು, ನಾಡಿನ ಸನ್ನಿವೇಶಗಳನು ತಿಳಿದವರದು.

ನೂರಾರೂ ಚುನಾವಣೆಗಳು ಜನಕಾ ಶಿಕ್ಷಣಕ್ಕೊಂದು ಸಂಧಿ. ಜನಸಾಮಾನ್ಯರಿಗೆ, ಹಳ್ಳಿಯವರಿಗೆ ರಾಜಕೀಯ, ಆರ್ಥಿಕ, ಸಾಮಾಜಿಕ ಸ್ಥಿತಿಗಳನ್ನು ತಿಳಿಯುವ ಭಾಷೆಯಲ್ಲಿ ಮನವರಿಕೆಯೊಗುವ ತೆರದಿಯಿ ಹೇಳುವ ಅನುಕೂಲಕಾಲ. ರಾಷ್ಟ್ರಜೀವನದ ಪುನರುಜ್ಜೀವನವಾಗಿ ರಾಜ್ಯಾಂಗದಲ್ಲಿ ಸಾಮರ್ಥ್ಯ ನಿರ್ಮಾಣವಾಗಬೇಕಾದರೆ, ಜನರು ಅಡಳಿತವನ್ನು ಅರ್ಥ ಮಾಡುವ ಅನುಭವ ಪಡೆಯಬೇಕಾದರೆ, ಈ ಸಂದರ್ಭವನ್ನು ಲೋಕ ಶಿಕ್ಷಣಕ್ಕಾಗಿ ಪೂರ್ಣ ಉಪಯೋಗಿಸಬೇಕು. ಸರ್ವ ಶಿಕ್ಷಣ ಸಾಧನಗಳನ್ನೂ ಬಳಸಿ ಜನತೆಯಲ್ಲಿ ಮತದಾನದ ಮಹತ್ವವನ್ನು ಬಿಂಬಿಸಬೇಕು. ಉಪನ್ಯಾಸ ಕೀರ್ತನ, ಪ್ರವಚನ ಸಂಘಾಷಣಗಳಿಂದ ಇದನ್ನು ಸಾಧಿಸಬೇಕು. ಕಾರ್ಯಕರ್ತರು ಹಳ್ಳಿಗಳ ಹಕ್ಕು ಗಜೆಯನ್ನು ಬೆಳೆಸಿಕೊಂಡು ವಯಸ್ಕರಿಗೆಲ್ಲ ಸಾಧ್ಯವಾದ ಪ್ರತಿ ಹೆಜ್ಜೆಗಳ ರಾಜಕೀಯ ಅರ್ಥವನ್ನು ಪ್ರಜ್ಞಾಪೂರ್ವಕವನ್ನಾಗಿ ಕೊಡಬೇಕು. ಶಾಸನ ಸಭೆಗಳೆಂದರೇನು, ಪಾರ್ಲಿಮೆಂಟು ಅಂದರೇನು ದೇಶದ ಆಡಳಿತದಲ್ಲಿ ಅವುಗಳ ಸ್ಥಾನಮೇನು ಎಂಬುದನ್ನೆಲ್ಲ ಚೆನ್ನಾಗಿ ವಿವರಿಸಬೇಕು. ಸ್ತ್ರೀಯರಿಗೂ ಈ ಬಗೆಯ ಶಿಕ್ಷಣ ಸಿಕ್ಕಬೇಕು. ಹೀಗೆ ವಿಶಾಲ ಜ್ಞಾನದಿಯ ಮೇಲೆ ಲೋಕ ಶಿಕ್ಷಣವು ಒಂದೆರಡು ತಿಂಗಳಾದರೂ ನಡೆದರೆ ಜನರಿಗೆ ತಮ್ಮ ಹಕ್ಕು ಹಿತ ಜೊಣೆಗಳ ಅರಿವಾಗುವುದು. ತಮ್ಮ ಕೈಯಲ್ಲಿರುವ ಮತವೆಂಬ ಅಮೂಲ್ಯ ಅಸ್ತ್ರದ ಅರ್ಥವಾಗುವುದು. ಮತಕ್ಕೆ ನಾಡಿನ ನೆನ್ಮದಿಯ ನಿಧಿಯೆಂಬುದು ಆಗ ಹೊಳೆಯುವುದು. ಆದರೆ ದುರುಪಯೋಗದಿಂದ ದುರಂತವಾದೀತೆಂದು ಅನಿಸಿ ಬುದು ಸಮಗ್ರ ರಾಷ್ಟ್ರದ ಸುದ್ಧಿಯಾದ ಐಕ್ಯ, ಸರ್ವಜಾತಿ ಮತ ಸಂಧದವರೂ ಬೆಳವಣಿಗೆಗೆ ಸಮಾನವ ಕಾಶ, ಜೀವನಾವಶ್ಯಕ ವಸ್ತುಗಳ ಶಮ್ಯ ದ್ಧಿ, ಶಿಕ್ಷಣಾಭಿವೃದ್ಧಿ ರಾಷ್ಟ್ರ ರಕ್ಷಣ ಶಕ್ತಿ ಮಂತಾದವನ್ನು ಸಾಧಿಸಲು, ಶಾಸನ ಸಭೆಗೆ ಸರ್ವ ಹಿತದೃಷ್ಟಿಯ ಸದ ಧರ್ಮರು ಹೋಗಬೇಕೆಂದು ಅವರಿಗೆ ತಕ್ಕಾನೆ ತಿಳಿಯುವುದು. ಸರಕಾರದ ರಚನೆಯು ಶಿಲ್ಪಿಗಳು ಕಾವೇ, ಶಮ್ಯ ವಸ್ತುಗಳಲ್ಲಿಯೇ ಮಂತ್ರಿಗಳ ಮೂಲ ಎಂಬುದನ್ನು ಬಗೆದಂದು ಜಾಗರೂಕರಾಗುವರು. ರಾಜ್ಯಭಾರಿಗಳ ರಾಯಿವು ತಮ್ಮ ಕೈಯಲ್ಲಿದೆಯೆಂದು ಎನ್ನು ಸಂತೋಷಪಡುವರು. ರಾಷ್ಟ್ರದ ಅಗ ಹೋಗುಗಳನ್ನು ತೂಗುವ ತಿಟ್ಟಿಲವು ತಮ್ಮ ಮತದಲ್ಲಿರುವುದರಿಂದಲೇ, ಚುನಾವಣೆಯಲ್ಲಿ ಇಷ್ಟೊಂದು ಚಟುವಟಿಕೆ ತುರುಸು ವಿರುವ ಹೋರಾಟಗಳು ನಡೆಯುವುವೆಂದು ದನ್ನು ಸೊಗಸಾಗಿ ತಿಳಿಯುವರು. ದೇಶದ ವಿಶಾಲ ವಿಚಾರಗಳು ತಮ್ಮ ಸಣಕಿವನ್ನು ಪಲಂಬಿಸುವೆಯೆಂದ ಬಳಿಕ, ತಮ್ಮ ಕೇರಿ ಳಿಲ್ಲಗಳಿಗೆಗೆ ತಾವೇ ಹೊಣೆಯೆಂಬುದನ್ನೂ ಅರಿಯುವರು. ಆದುದರಿಂದ ಶ್ರಮ ಪಡದೆ ಸ್ವಾವಲಂಬಿಗಳಾಗದೆ ಸ್ವಾತಂತ್ರ್ಯದ ಮಧುರ ಫಲಗಳ ದುರ್ಲಭವೆಂಬುದನ್ನೂ ಗುರುತಿಸುವರು. ತಮ್ಮ ಈ ಹಿರಿ ಹೊಣೆಯನ್ನು ಸೊಗಸಾಗಿ ನಿರವೇರಿಸಲು ಅವಶ್ಯಕವಾದ ಅಡಳಿತದ ರೀತಿನೀತಿಗಳ, ಆರ್ಥಿಕ ವಿಧಿವಿಧಾನಗಳ ವಿವರಗಳನ್ನೂ ತಿಳಿಯಲಿಕ್ಕೆ ಸುವರು. ಜನಸಾಮಾನ್ಯರಿಗಾಗಿ ರಾಜಕೀಯ ರಂಗದ ವ್ಯವಹಾರ ಜ್ಞಾನವು ಬೆಳೆದ ಬಳಿಕ ಚುನಾವಣೆಗಳಲ್ಲಿ ಲಂಚ ವಂಚನೆಗಳಿಗೆ ಪುರಸ್ಕಾರ ಸಿಕ್ಕುವುದು ಕಡಿಮೆಯೊಗುವುದು. ಸಮಷ್ಟಿ ಸಮಾನಾವಕಾಶಗಳಿಂದ ಎಲ್ಲರ ಏಳ್ಗೆಯೆಂಬ ಪರಮಾದರ್ಶವಾದಾಗ ಹೊಟ್ಟೆ—ಬಟ್ಟೆ ಬಿಡಾರಗಳು ಎಲ್ಲರಿಗೂ ಸಾಕಷ್ಟು ದೊರೆಯಬೇಕೆಂಬುದು ಅಡಳಿತದ ದೃಷ್ಟಿಯೊಗುವಾಗ ಜಾತೀಯತೆಯ ಜ್ವಾಲಾಮುಖಿಯು ನಂದಿಹೋಗುವುದು. ಓಟಿನ ಬೇಟೆಯು ತುರುಸು ಕೊಸ ದಾರಿಯನ್ನು ಹಿಡಿಯದುವುದು. ಆಗ ಚುನಾವಣೆಗಳು ಚೈತನ್ಯಕಾರಿಯೊಗುವವು

'ನವಯುಗ'

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೊಡಗಿನಲ್ಲಿರುವ ಸಹಕಾರಿ ಸಂಸ್ಥೆಗಳ ಆಶ್ರಯ ಪ್ರಕಾರ ನಿರ್ವಹಿಸುವುದು. (1921ರಲ್ಲಿ ಸ್ಥಾಪಿಸಲಾಗಿದೆ

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಸೊಬಲಗು	ರೂ.	2,05,500
ಕ್ಷೇಮನಿಧಿ	ರೂ.	59,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಬೇರೆ ವ್ಯಕ್ತಿ ಬೇರೆ ನಗರಗಳ ಹಡಿನ ಮೇಲೆ ಸಹ ಸಾಲ ಕೊಡಲಾಗುವುದು. ಜೆಕ್ ಯಾ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಸ್ಟಿಟ್, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಕೊಂಡಿ ಕೊಳ್ಳಲಾಗುವುದು. ಬ್ಯಾಂಕಿನ ದೀರ್ಘ ಕಂತಿನ ಸಾಲದ ಶಾಖೆಯ ಮೂಲಕ ದೀರ್ಘ ಕಂತಿನ ಸಾಲ ಕೊಡುವ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಬಿ. ಪಿ. ಅಪ್ಪಯ್ಯ, M. L. C
ಮಾ. ಕಾರ್ಯದರ್ಶಿ, ಕೃಷಿಕರಾಹ ಮತ್ತು ಋಣಾಧಿ

ರಾಜಕೀಯವನ್ನು ಅಂತಃಕಲಹದ ಕೆಸರಿನಿಂದ ಮೇಲೆತ್ತಿರಿ.

ಕೊಡಗಿನಲ್ಲಿ ಚುನಾವಣೆ ಹತ್ತಿರ ಬರುತ್ತಿದ್ದಂತೆಯೇ ರಾಜಕೀಯದಂಗಡಿ ಹೊಸತೊತನ ತೋರಿಬರುತ್ತಿದೆ. ಜಲ್ಲಡ್ಡಿ ಮೊಟಿಂಗುಗಳು, ಭಾಷಣಗಳು ಕೇಳಿಬರುತ್ತವೆ. ಚುನಾವಣೆಗೆ ನಿಂತ ಉಮೇದುವಾರರು ಬಿರುಸಾಗಿ ತಿರುಗಾಟ ಪ್ರಾರಂಭಿಸಿದ್ದಾರೆ. ಕಾರುಗಳೂ, ಜೀಪುಗಳೂ ಹಳ್ಳಿಯ ಕಡೆ ಓಡಾಡುತ್ತಿವೆ. ಇಷ್ಟೆಲ್ಲಾ ಆಗಬೇಕಾದುದೆ! ದೇಶದ ಸುಪ್ರಸಿದ್ಧ ನಾಯಕರನ್ನು ಜಾಗೃತಿಗೊಳಿಸಿ ಜನತೆಯನ್ನಾವರಿಸಿರುವ ಚುನಾವಣೆಗೆ ನಿಂತ ಗುರಿಯನ್ನೂ ತನ್ನ ಸೇವಾಕಾಂಕ್ಷೆಯನ್ನೂ ವ್ಯಕ್ತಪಡಿಸಿ ಜನತೆಯ ಮತ ಯಾಚನೆ ಮಾಡಬೇಕಾದ ಚುನಾವಣೆಗಳಲ್ಲಿ ಅವಶ್ಯ ಆಗಬೇಕಾದ ಕಾರ್ಯಕ್ರಮಗಳ ಆಂಗ. ಕೊಡಗಿನಲ್ಲಿರುವ ೪೫,೦೦೦ ಮತದಾರರಲ್ಲಿ ಬಹುಮಂದಿ ಯಾರು ಅವಿದ್ಯಾವಂತರು. ನೂರಕ್ಕೆ ೨೦ ರಷ್ಟು ಜನರು ಅವಿದ್ಯಾವಂತರೆಂದರೆ ಅತ್ಯುಕ್ತಿಯಲ್ಲ ಇಂಥಾ ಅವಿದ್ಯಾವಂತ ಓಟರರು ತಮ್ಮ ಓಟಿನ ಸದುಪಯೋಗವಾಗಬೇಕಾದರೆ ನ್ಯಾಯಯುತವಾದ ಪ್ರಚಾರವೂ, ಸತ್ಯದೃಷ್ಟಿಯ ವರ್ತನೆಯೂ ಪ್ರಚಾರಕರಲ್ಲೂ, ಉಮೇದುವಾರರಲ್ಲೂ ಇರಬೇಕು. ತಿಳಿಯದ ಜನರಿಗೆ ತಿಳಿಯಹೇಳುವುದು ತಿಳಿದವರ ಕರ್ತವ್ಯವೆನ್ನಲ್ಲದೆ ಅದ್ದಾದಾರಿಯಿಂದ ಜಯಪಡೆಯಲೆತ್ನಿಸುವುದೇ ಸರ್ವಸ್ವವಲ್ಲ. ಬಹು ಜನರು ತಮ್ಮ ನಾಗರೀಕ ಹಕ್ಕು ಬಾಧ್ಯತೆಗಳನ್ನು ತಿಳಿಯದವರಾಗಿ ತಪಾಗಿ ಬಂದಿರುವ ಮತ ಪತ್ರಗಳ ಸಂಹತ್ವವನ್ನು ಅರಿಯದವರಾಗಿರುವಾಗ ಉದಸ್ಸನ್ನು ತಿಳಿಸಿ ಆದರ ಸದುಪಯೋಗದಾಗುವಂತೆ ಮಾಡುವುದು ಪ್ರತಿಯೊಬ್ಬನ ಕರ್ತವ್ಯ. ಫ್ರೌಡ ಮತದಾನ ತತ್ವವು ಸರಿಯಾಗಿ, ದೇಶಹಿತಕಾರಕವಾಗಿ ಕೆಲಸ ಮಾಡಬೇಕಾದರೆ ಜನರಲ್ಲಿ ತಮ್ಮ ಹಕ್ಕು ಬಾಧ್ಯತೆಗಳ ಅರಿವಿರಬೇಕು. ಜನತೆಯಲ್ಲಿ ರಾಜಕೀಯ ಜ್ಞಾನವಿರಬೇಕು. ದೇಶದ ರಾಜಕೀಯ ಪಕ್ಷಗಳಾವುವು, ಅವುಗಳ ಗುರಿಗಳೇನು ಎಂಬ ಅರಿವಿರಬೇಕು. ಮತದಾರನು ವಿದ್ಯಾವಂತನೂ, ರಾಜಕೀಯ ವಿಚಾರಗಳನ್ನು ತಿಳಿಯಲು ಶಕ್ತಿ ಇರುವನೆನೂ ಆಗಿದ್ದರೆ ಅತನ ಮತದ ದುರುಪಯೋಗವಾಗಿ ಪ್ರಜಾತಂತ್ರವ್ಯವಸ್ಥೆ ಕೊಲೆಯೂಡಲ್ಪಡುವಷ್ಟು ತಪ್ಪು ಓಟಿನ ಮಹತ್ವವನ್ನು ತಿಳಿಯದವನು ಮತವನ್ನು ನೆಂಟನೆಂಬ ಕಾರಣಕ್ಕೋ ಜಾತಿಯವನೆಂಬ ಪ್ರೀತಿಗೋ, ದುಡ್ಡಿನ ಆಸೆಗೋ, ಅಧಿಕಾರದ ನೋಪಕ್ಕೋ ಕೊಟ್ಟುಬಿಡುವನು. ಅನೇಕರು ತಮ್ಮ ಮೇಲಿನ ಅಧಿಕಾರಿಯೂ ಯಜಮಾನನೂ ಆಜ್ಞೆಯಂತೆ ತಮ್ಮ ಮತವನ್ನೀಯುವರು. ಇದೆಲ್ಲವೂ ಮತದ ದುರುಪಯೋಗವಾದರೆ ದೇಶದ ಅವನತಿಯು ನಿಶ್ಚಿತವಾಗಿದೆ.

ಪ್ರಜಾಪ್ರಭುತ್ವ ಉಳಿಯುವುದೂ, ಅಳಿಯುವುದೂ ಮತದಾರರಾದ ನಮ್ಮ ಯೋಗ್ಯತೆಯ ಮೇಲೆ ನಿಂತಿದೆ. ಅದ್ದರಿಂದಲೇ ದೇಶದ ಜನರು ಯೋಗ್ಯತೆಗೆ ಸರಿಯಾದ ಸರಕಾರ ಆವರಿಗೆ ದೊರೆಯುವಷ್ಟೆನ ಪದಾಗಿದೆ. ಆ ಕಾರಣ ನಾವು ಉಮೇದುವಾರರಲ್ಲಿ, ಏಜಂಟರಲ್ಲಿ, ಪ್ರಚಾರಕರಲ್ಲಿ ಪ್ರತಿಯೊಬ್ಬನೂ ನಮ್ಮ ಸಮ್ಮ ಜವಾಬ್ದಾರಿಯನ್ನು ತಿಳಿದು ವರ್ತಿಸಬೇಕು. ಚುನಾವಣೆಗೆ ನಿಂತ ಉಮೇದುವಾರರಿಗೆ ಜಾಗೃತಿಗೊಳಿಸಬೇಕು. ದೇಶದ ಹಿತ ಬಯಸುವವರೆಲ್ಲರ ಕರ್ತವ್ಯ ವಿದು. ಅಸಲಿ ಕೊಡಗಿನಲ್ಲಿ ಆಗುತ್ತಿರುವ ಪ್ರಚಾರವೆಂಥ ದ್ದ?

ಚುನಾವಣೆಗೆ ನಾನೂ ಒಬ್ಬ ಉಮೇದುವಾರನಾಗಿ ಹಲ ಕೆಲವು ಮೊಟಿಂಗುಗಳಿಗೆ ಹೋಗಿದ್ದೇನೆ. ಹಲವು ಸಭೆಗಳಲ್ಲಿ ಕೊಡಗಿನ ಪ್ರತ್ಯೇಕವಾದಿ ಮತ್ತು ಸಂಯೋಜನಾವಾದಿ ಪಕ್ಷಗಳು ಮಾಡಿಸುವದನ್ನ ಕಂಡಿದ್ದೇನೆ ಆಂಗೆ ಇವರ ವಾದ ವಿವಾದಗಳು ದೇಶದ ಜನರ ಹಿತದೃಷ್ಟಿಯಿಂದ ಯೋಗ್ಯವಾಗಿಲ್ಲ ದೇಶದಲ್ಲಿ ಪಕ್ಷಗಳು ಬೇಕು. ನಿಜ. ರಾಜಕೀಯದಲ್ಲಿ ಎಷ್ಟೇ ಪಕ್ಷವಿಲ್ಲದಿದ್ದರೆ ಪ್ರಜಾಪ್ರಭುತ್ವವು ಸರಿಯಾಗಿ ಬೆಳವು ಪೂಪಲಾರದು. ಆದ್ದರಿಂದ ಪಕ್ಷಗಳು ಅತ್ಯಗತ್ಯ ಆದರೆ ಪಕ್ಷಗಳು ತತ್ವಗಳ ಮೇಲೆ ಕಟ್ಟಲ್ಪಟ್ಟಿರಬೇಕಲ್ಲದೆ ವ್ಯಕ್ತಿವಿರೋಧದ ತಳಹದಿಯಿಂದಾಗಿರಕೂಡದು. ತತ್ವಗಳನ್ನು ಚರ್ಚಿಸಿದಷ್ಟು ಹಿತ. ನಿಜಾರಗಳನ್ನು ವಿಪರೀತವಾಗಿ ದಷ್ಟು ಜನರಿಗೆ ಸಹಾಯಕ, ಅದೃಷ್ಟಿಯಿಂದ ಕೊಡಗಿನಲ್ಲಿರುವ ಇಂದಿನ ಪ್ರತ್ಯೇಕಯಾದ ಕೊಡಗಿನ ಸಂಯೋಜನೆಯೂ ಪ್ರತ್ಯೇಕತೆಯ ವಿಚಾರ ಚರ್ಚಾಲ್ಪಡಲಿ. ಪ್ರತ್ಯೇಕವಿದ್ದರೆ ಜನಹಿತ ಹೀಗೆ ಆಗುತ್ತದೆ. ಸಂಯೋಜನೆಯಾದರೆ ಹೀಗಾದೆಯೆಂದು ಅಂಕೆ ಸಂಕೆಗಳನ್ನು ಕೊಟ್ಟು ವಾದಿಸಲಿ. ಮುಂದಿನ ಶಾಸನ ಸಭೆಯ ಅಧಿಕಾರ ಹೀಗಿದೆ, ಜನತೆಯ ಹಕ್ಕು ಇಷ್ಟಿದೆಯೆಂಬುದನ್ನು ವಿವರಿಸಲಿ. ಆಗಲೆ ಆ ಸ್ಥಿತಿಯು ನಡತೆ ಇಂಥಾದ್ದು. ಇಂಥಾವನು ನನಗೆ ಈ ರೀತಿ ಅನ್ಯಾಯಮಾಡಿದ್ದಾನೆ ಎಂದು ದೂರೂ ವ್ಯಕ್ತಿಗತವಾಗಿ ನಾದಿಸದಿರಲಿ. ಮುಂದಿನ ರಾಜಕೀಯವು ಈ ವ್ಯಕ್ತಿ ದೂಷಣೆ, ತಪ್ಪಿಲ ರಾಜಕೀಯದಿಂದ ಕುಲುಷಿತವಾಗಿ ಹೇಸಿಗೆಯು ಆಗಬಾರದು. ಅದನ್ನು ಪರಿಶುದ್ಧಗೊಳಿಸಿ ರಾಜಕೀಯವು ವ್ಯಕ್ತಿದೂಷಣೆಯ ಹೊಲಸಿನಲ್ಲಿ ಕೊಳೆಯುದಂತೆ ಮೇಲೆತ್ತುವುದು ಪ್ರತಿಯೊಬ್ಬನ ಕರ್ತವ್ಯ. ಕೊಡಗಿನ ಮುಂದಾಳುಗಳೆನ್ನುವ ಮಹನೀಯರು ಸೇರಿದ ಹಲವು ಚುನಾವಣಾ ಮೊಟಿಂಗುಗಳಿಗೆ ಹೋಗಿರುವೆನು. ಈ ಮುಂದಾಳುಗಳಲ್ಲೇ ಶಿಸ್ತು ಇಲ್ಲ; ಸಭೆ ಹೇಗೆ ನಡೆಯಬೇಕೆಂಬುದರ ಅರಿವಿಲ್ಲ. ಅಧ್ಯಕ್ಷರಿಗೆ ಯಾವ ಗೌರವ ಕೊಡಬೇಕೆಂಬುದರ ಪರಿಮೆಯ ಇಲ್ಲ. ಸಿಟ್ಟೆದ್ದ ವಾಗ್ಬಾಣಗಳಂತೆ ಕೂಗುಹಾಕ್ಕಾರೆ, ಅರಚುತ್ತಾರೆ. ಇದನ್ನು ಯಾವ ರಾಜಕೀಯವೆನ್ನೋಣ?

ಈ ರಾಜಕೀಯ ಸಭೆಗಳನ್ನು ತನ್ನ ನೈಸರ್ಗಿಕ ಮಂಗ್ಯತೆಯಿಂದ ನೋಡುವ ವೈಪರೀತ್ಯಗಳಿಲ್ಲದೇ ಇರುವಾಗಲೆ ಲೇಖಕ ಏನು ಕಾರಣಾಂತ್ಯಾಗಿ ಈ ಮುಂದಾಳುಗಳು ಹೀಗೆ ಕಚ್ಚಾಡಿಕೊಳ್ಳುತ್ತಾರೆ ಎಂಬುದು ಅನರಿಗೆ ಬಿಟ್ಟವಾಗದೆ ನಾನು ಕಲ್ಪನೆಗೆ ನನ್ನ ಮೂಡಬೇಕಾಗುತ್ತದೆ. ಕೌನ್ಸಿಲರು ಮೆಂಬರಾದರೆ ವಿನೋ ಲ ಭವಿಷ್ಯವೆಂಬ ಭಾವನೆಗೆ ಅವರಲ್ಲಿ ಒಂದೇ ಇರುತ್ತದೆ. ಉಮೇದುವಾರರೂ ಕೂಡ ಮೂಲಕ ವಿನೋ ಲ ಭವಾಗುತ್ತದೆ, ಯೆಸರು ಬರುತ್ತದೆ, ಫನತೆ ಜಯಪ್ರದೆಂಬ ನರ್ತನವಂತೆ ತೋರುವದೇ ವಿನಾ ಅದು ಜನರ ಸೇವಾವರ್ಗ, ನಾನು ಮೆಂಬರಾಗದಿದ್ದರೆ ಜನರ ಸೇವಕನಾಗುವದೆಂಬ ಭಾವನೆಯಿಂದ ವರ್ತಿಸುವರು ಬಹು ವಿರಳ. ವಿಜಯವಾಗಿಯೂ ಶ್ರದ್ಧೆಯು ಪರಿವರ್ತನೆ ಹೊಂದಿ, ಜನಸೇವೆಯೇ ಜನಾರ್ಧನನ ಸೇವೆಯೆಂದು ಬಗೆವರೂ ಶಾಸನ ಸಭೆ ಜನ ಸೇವೆಗೆಂದು ನುಗ್ಗಲಾರರು. ಅಂಥಾವರು ಬಹಳ ವಿರಳತೆದಲ್ಲಿ ಬಹುಮಂದಿ ಇರಲಾರರು. ಒಬ್ಬ ಮಹಾತ್ಮಾಗಾಂಧಿಯೋ ಒಬ್ಬ ಆಚಾರ್ಯ ವಿನೋಬಾರೋ ಹೀಗೆ ವಿರಳವಾಗಿರುವುದು! ಇನ್ನು ದೃಢ ವಿಶ್ವಾಸವಿಲ್ಲದ ಕೆಲವು ಸೇವಾ ಸಂಸ್ಥೆಗಳೂ ಶಾಸನ ಸಭೆಗೆ ನುಗ್ಗಿದ್ದಾರೆ. ಅವರ ಭಾವನೆಯೆನ್ನು ಜನತೆಗೆ ಏನೂ ತೊಡಬೇಡ; ಅವರ ಸೇವೆ ಮಾಡಬೇಕೆಂಬ ತವಕವಿದ್ದರೂ ಅದಕ್ಕೆ ಸರಿಯಾದ ಪ್ರದರ್ಶನಾವಕಾಶ ಗೌರವ ದೊರೆಯದಿದ್ದರೆ ಅವರು ಮುಂಬರಲಾರರು. ಗೌರವ ಕೊಟ್ಟು ಬೆನ್ನುತಟ್ಟಿ ನೀನು ಮಾಡೆಂದು ಬಿಟ್ಟರೆ ಆತ್ಮತೃಪ್ತಿಯಿಂದ ಜನರಿಗಾಗಿ ಅವರು ದುಡಿಯುತ್ತಾರೆ ಅಂಥಾವರು ಸಾವಿರ ಕೆಕ್ಕಿಲ್ಲ ಇರಬಹುದು. ಅಂಥಾವರಿದ್ದರೆ ಅವರಿಗೆ ಬೆಂಬಲವೀಯುವುದು ನರ್ವರ ಕರ್ತವ್ಯ. ಅವರಿಗೆ ಕೊಟ್ಟ ಪ್ರೋತ್ಸಾಹನವೂ, ಸಹಾಯವೂ ನಿರರ್ಥಕವಾಗಲಾರದು. ಆದರೆ ಚುನಾವಣಾರಂಗದಲ್ಲಿ ವೈಪೋಟಿಗಳಿದಿರುವ ನಮ್ಮಲಿ ಬಹುಮಂದಿಯರು ಸೇವಾದೃಷ್ಟಿಯಿಂದ ನಿಂತವರಲ್ಲ. ಹೆಸರಿಗಾಗಿ, ಸ್ಥಿರತೆಗಾಗಿ, ಹೊಗಳಿಕೆಗಾಗಿ ನಿಂತವರು. ಹೀಗೆನ್ನುವಾಗ ಯಾರೂ ನಿಟ್ಟುಗಾಬಾರದು. ಕೊಡಗಿನ ಶಾಸನ ಸಭೆಯ ಗತ ೩೬ ವರ್ಷಗಳ ಚರಿತ್ರೆಯನ್ನು ನೋಡಿದರೆ ಜನಸೇವೆಯ ದೃಷ್ಟಿಯೀಂದ. ಕೌನ್ಸಿಲಿಗೆ ಬಂದವರು ಒಬ್ಬಿಬ್ಬರಾದರೆ ಹೆಸರಿಗಾಗಿ ಬಂದವರು ಹಲವಾರು ಇಲ್ಲದಿದ್ದರೆ ಚುನಾವಣೆಯು ಕಾಲಕ್ಕೆ ಬಿಟ್ಟು ಪಡೆಯಲು ವನೆ ಮನೆ ತಿರುಗಿದವನು ತಾನು ಗೆದ್ದ ನಂತರ ಹಳ್ಳಿಯ ಕಡೆ ತಿರುಗದಿರುವವರ ಕಾರಣನೇನು? ಬಡ ಪೈತನಿಗೆ ವರ್ಷಕ್ಕೆ ಕೇವಲ ೪೭೭ ಬತ್ತ ಸಾಕೆಂದು ಸರಕಾರವು ನಿಯಮಮಾಡಲು ಜನ ಪ್ರತಿನಿಧಿಗಳನ್ನು ತೀರ್ಮಾನಿಸಿದಾಗ ನಿಜವಾದ ಪ್ರತಿನಿಧಿಯು ಈ ವಿಚಾರದಲ್ಲಿ ತನಗೆ ಓಟು ಕೊಟ್ಟ ವೈತನ್ಯ ಯಿಂದ ಅಭಿಪ್ರಾಯವನ್ನು ವೈತರಿಸಿ ಅಭಿಪ್ರಾಯಕರಿಲಿಲ್ಲವೇ? ಜಕ್ಕಿ ಮಂಡಲಿಕ್ಕಾಗಿ ಗ್ರಾಮ ದಂಡ ಬತ್ತ ಹೆಚ್ಚಳಕ್ಕೆ ಸಾಗಿಸಲು ಲೈಸೆನ್ಸ್ ಬೇಕೆಂಬ ಜಜ್ಜೆ ಚಾರ್ಜ್ ತರಲ್ಪಟ್ಟಿದ್ದಕ್ಕೆ ದೇಶಮೊಗ್ಗೆ ಈ ದೇಶನಿಗ್ರ ಬಂಧ್ಯವಿಲ್ಲ ವೆಂದೂ, ದೇಶದಿಂದ ಹೊರಗೆ ಸಾಗಿಸುವಾಗ ಲೈಸೆನ್ಸ್ ಬೇಕೆಂಬ ಪ್ರತಿನಿಧಿಗಳ ಹೋರಾಡಬೇಕಾಗಲ್ಲವೇ? ರೈತನ ಓಟು ಪಡೆದು ಆರಿ ಲ್ಪಟ್ಟ ಪ್ರತಿನಿಧಿಯು ರೈತನ ವಿಚಾರ ಆತೋಚಿಸದೆ, ಅತನ ಕಷ್ಟ ಸುಖಗಳನ್ನು ಅರಿಕೊಳ್ಳದೆ ಆತನನ್ನು ಮರೆತ ಬಿಟ್ಟರೆ ಅಕಸ್ಮಾ ನಿಜವಾಗಿಯೂ ರೈತರ ಪ್ರತಿನಿಧಿಯೆಂದು ಹೇಗೆ ಕರೆಯಿಸಿಕೊಂಡಾನು? ಹಲವಾರು ಸರ್ಕಾರಿ ಕಾರ್ಯಗಳನ್ನು ಕೌನ್ಸಿಲಿನಲ್ಲಿ ಅನೇಕರು ಪ್ರಶ್ನೆಗಳಿಗಿದ್ದರು ಎಷ್ಟು ಪ್ರತಿನಿಧಿಗಳು ಜನರನ್ನು ಪ್ರಶ್ನಿಸಿ, ಅವರ ಕಷ್ಟಗಳನ್ನು ಪರಿಹಾರಿಸಿ, ರೈತರು ಬೇಕಾ ಬೇಡಾಗಳನ್ನು ತೀರಿಸಿಕೊಳ್ಳಲು ಅವಕಾಶಗಳನ್ನು ಒದಗಿಸಿ ಕೊಡಲು ಕೌನ್ಸಿಲಿನಲ್ಲಿ ಜೀರಂದ್ದಾರೆ? ಹೀಗಿನ ಲೆಸ್ಸಿಲಿಗೆ ಸಕಸ್ಮ ಅಧಿಕಾರವಿಲ್ಲವೆನ್ನುವದೆ ನಿಜ. ಆದರೆ ಪ್ರತಿನಿಧಿಯು ತನ್ನ ಪಟಿಲ ಕರ್ತವ್ಯ ಮಾಡಲು ಅದಂ ಎಂದೂ ಬಾಧಕವಾಗಲಿಕ್ಕಿಲ್ಲ. ಜನತೆಯು ಕೂಗು ಸರಿಯಾಗಿ ಕರ್ಕಾರದ ಮಂದೆ ಇಡಲಾಗದಿದ್ದರೆ ಹಿಂದಿನ ಕೌನ್ಸಿಲಿನಲ್ಲಿ ಸಾಧಿಸಿ ಹೆದಾಗಿರುವ ಅನೇಕ ಹಿತಕಾರ್ಯಗಳಾಗುತ್ತವೆ.

ಆದ್ದರಿಂದ ಒಂದು ದೇಶದ ಕಾರ್ಯದಲ್ಲಿ ಪಕ್ಷಕ್ಕಿತ್ವವನ್ನು ಗಣಿಸುವುದು ಕ್ಷಮ್ಯವಿಲ್ಲ. ಒಂದು ಸಾರ್ವಜನಿಕ ಸಭೆಗಳಲ್ಲಿ ವ್ಯಕ್ತಿ ದೂಷಣೆ ನೂಡುವುದು ಯೋಗ್ಯತೆಯಲ್ಲ. ಪ್ರತಿಯೊಬ್ಬನೂ ತ್ವಕ್ಕಾಗಿ ಹೋರಾಡಬೇಕು. ಸೋಲಾಗಾಗಿ ಸ್ಪರ್ಧೆ ನಡೆಯಬೇಕು. ಈ ರೀತಿಯ ಉದಾತ್ತ ಭಾವನೆ ನಮ್ಮಲ್ಲಿ ಬರುವಂತೆ ಮುಂದಾಳುಗಳು ಮಾರ್ಗದರ್ಶಕರಾಗಬೇಕು. ಆದರಿಂದ ಇನ್ನಾದರೂ ಕೊಡಗಿನ ರಾಜಕೀಯ ಪಕ್ಷಗಳು ತಮ್ಮ ಹೇಸಿಗೆಯಂತ ಅಂತಕಲಹದ ಸೆಳಿಗೆಯನ್ನು ಸಾರ್ವಜನಿಕ ನೆಲೆಯಲ್ಲಿ ಬಿಗೆಯದಿರಲಿ. ಒಂದು ದೇಶದ ರಾಜಕೀಯ ಜೀವನದಲ್ಲಿ ವ್ಯಕ್ತಿಗಳು ನೀರಗುಳ್ಳೆಗಳಂತೆ. ಇಂದು ಇದ್ದವನು ನಾಳೆ ಇಲ್ಲವಾಗಬಹುದು. ಆದರೆ ತತ್ವಗಳು ಚಿರವಾದವು. ಅಂಥಾ ಚಿರವಾದ ತತ್ವದ ಮೇಲೆ ರಾಜಕೀಯವು ನಿಲ್ಲಲ್ಪಡಲಿ. ಹೀಗೆ ನಿಂತ ರಾಜಕೀಯವು ವ್ಯಕ್ತಿಗಳ ಉದಯ ಅಸ್ತಮಾನಗಳಿಂದ ವ್ಯತ್ಯಾಸ ಹೊಂದದೆ ಚಿರಂತನವಾಗಿರುವುದು. ಈ ಕಾರಣಕ್ಕಾಗಿ ಕೊಡಗಿನ ಚುನಾವಣಾ ರಾಜಕೀಯದಲ್ಲಿ ವ್ಯಕ್ತಿದೂಷಣೆಯು ಕೊಲಸನ್ನು ತೆಗೆದು ಹಾಕಿ ಅನಾವಶ್ಯಕ ಉದ್ರೇಕ ಹಾಗೂ ಹಿಂಸಾ ಸ್ಪರ್ಧೆಗಳಿಗೆ ಎಡೆ ಕೊಡದೆ ರಾಜಕೀಯವು ಭದ್ರವೂ, ಶಾಂತಿಯುತವೂ ಮತ್ತು ಪವಿತ್ರವೂ ಆದ ತತ್ವಗಳ ಮೇಲೆ ನಿಲ್ಲುವಂತೆ ಮುಂದಾಳುಗಳು ಎಚ್ಚರಿಕೆ ವಹಿಸಬೇಕು.

ಉಮೇದುವಾರರ ಹಾಗೂ ಪ್ರಚಾರಕರ ಕರ್ತವ್ಯ.

ಲೇ:—"ಗುಪ್ತ" ಮಡಿಕೇರಿ.

ದೇಶದ ಭವಿಷ್ಯದ ಶೀರ್ಮಾನ ಈ ಚುನಾವಣೆಯಲ್ಲೇ ಆಗಲಿ.

ಇಷ್ಟು ಒಂದೂವರೆ ತಿಂಗಳುಗಳಲ್ಲಿ ಇಂಡಿಯಾ ದೇಶದ ಉದ್ದಗಲಕ್ಕೂ, ಹಾಗೆ ಕೊಡಗಿನಲ್ಲಿಯೂ ಕೂಡ ಚುನಾವಣೆಯು ಪಡೆಯುವುದು. ಇಂಡಿಯಾ ದೇಶದಲ್ಲಿ ಇದುವರೆಗೆ ಪ್ರಾಮುಖ್ಯವಾಗಿದ್ದ ಒಂದೆರಡು ಪಂಗಡಗಳು ಒಡೆದು, ಇಂದು ಅನೇಕ ಪಂಗಡಗಳಾಗಿವೆ. ಪತ್ರಿಕೆಗಳೆಲ್ಲವೂ ಚುನಾವಣೆಯ ಪ್ರಚಾರದಲ್ಲಿಯೇ ತುಂಬಿವೆ. ಪ್ರಚಾರವೆಷ್ಟು, ಅಪಪ್ರಚಾರವೆಷ್ಟು? ಒಂದು ಪಂಗಡಕ್ಕೆ ಪ್ರಚಾರವೆಂದು ತೋರುವುದೆಲ್ಲವೂ ಇನ್ನೊಂದು ಪಂಗಡಕ್ಕೆ ಅಪಪ್ರಚಾರ. ಆದರೆ, ಯಾವುದು ಪ್ರಚಾರ, ಯಾವುದು ಅಪಪ್ರಚಾರ; ನ್ಯಾಯ ಅನ್ಯಾಯ; ತತ್ವ ದೂಷಣೆ, ವ್ಯಕ್ತಿ ದೂಷಣೆ, ಯಾರು ಯೋಗ್ಯರು, ಯಾರು ಅಯೋಗ್ಯರು; ಯಾರು ಸ್ಪರ್ಧಾತೀತರು, ಯಾರು ಕ್ಯಾಗಿಗಳು ಎಂದು ದೇಶದ ಮಹಾಜನರೇ ಅಂತಿಮ ಅಭಿಪ್ರಾಯ ಪಡಬೇಕಾಗಿದೆ.

ಅದಕ್ಕನುಗುಣವಾಗಿಯೇ ದೇಶದ ವ್ಯಕ್ತಿಗಳೂ, ಪಂಗಡಗಳೂ ಅವರವರ ತತ್ವಗಳನ್ನು ವಿವರಿಸುವ ಎತ್ತಿಹಿಡಿಯುವ ದೇಕಾಗಿದೆ. ಅಂತ್ಯದಲ್ಲಿ ಉಳಿಯುವುದೇ ದೇಶ. ವ್ಯಕ್ತಿಗಳೂ, ಅವರು ಪಡೆದುದೆಲ್ಲವೂ ಜಳಿಯುವುದು. ದೇಶದ ಜನರೆಲ್ಲಾ ತೃಪ್ತಿಪಡಿಸಲು ಯಾವುದೂ ಸಾಧ್ಯವಿಲ್ಲ ಎಲ್ಲಾ ಸ್ಪರ್ಧೆಗಳೂ, ಅವುಗಳನ್ನು ಜಗಳಕಾರಿಸುವ ವಿಧಾನಗಳೂ ಯಾವಾಗಲೂ ಭಿನ್ನಾಭಿಪ್ರಾಯವನ್ನು ತರುತ್ತವೆ. ಅದು ಪ್ರಾಕೃತಿಕ್ಕೆ ಯಾವ ವ್ಯಕ್ತಿಯೂ, ತನ್ನ ಮನಸಾಕ್ಷಿಗೆ ವಿರೋಧವಾಗಿ, ಬರೀ ಜನರನ್ನು ತೃಪ್ತಿಪಡಿಸುವುದಕ್ಕಾಗಿ ತನ್ನ ಅಭಿಪ್ರಾಯಗಳನ್ನು ಜನರಿಗೆ ಅನುಕೂಲವಾಗುವಂತೆ ಬದಲಾಯಿಸುವುದು ಅಯೋಗ್ಯವು. ಬದಲಾಗಿ ಮಹಾ ಜನತೆಯನ್ನು ತನ್ನ ಅಭಿಪ್ರಾಯಕ್ಕೆ ಸೆಳೆಯಬೇಕು.

ಹೇಗೂ ದೇಶದ ಉದ್ದಗಲಕ್ಕೂ ಅನೇಕ ಪಂಗಡಗಳು ಜನಿಸಿದವು, ಜನರು, ಆಯಾ ಚುನಾವಣೆಯಲ್ಲಿ ತೋರಿಸುವ ಉತ್ಸಾಹವು, ದೇಶದ ಶ್ರೇಯಸ್ಸಿನ್ನೆಯಾಗಿವೆ. ಬೇಗನೇ ಈ ಉತ್ಸಾಹವು ತಣ್ಣಗಾಗಿ ಪಂಗಡಗಳು ತಮ್ಮ ನಿಜಸ್ಥಿತಿಯನ್ನು ಅರಿತು. ಅಂತ್ಯದಲ್ಲಿ ಸುಮಾರು ಎರಡು ಪಂಗಡಗಳಾಗಿ ನೆಲೆಯೊಗಿ, ಇಂಡಿಯಾ ದೇಶದ ಉದ್ದಗಲಕ್ಕೂ ಪ್ರಜಾಬದ್ಧರಿಸರ ಕಾದ ಉತ್ತಮ ಬೆಳವಣಿಗೆಗೆ ಅಸ್ಪದ ದೊರೆಯುವುದರಲ್ಲಿ ಸಂಶಯವಿಲ್ಲ.

ನಾವು ಇಗ ಕೊಡಗಿನಲ್ಲಿರುವಂತಾದರಿಂದ, ಕೊಡಗಿನ ಇಂದಿನ ರಾಜಕೀಯ ಪರಿಸ್ಥಿತಿಯನ್ನು ಪರಿಶೀಲಿಸೋಣ. ಕೊಡಗಿನಲ್ಲಿ ಇಂದು ಎರಡು ರಾಜಕೀಯ ಪಂಗಡಗಳು ಇವೆ. ಸಂಯೋಜನಾತಾದಿ ಪಕ್ಷ, ಮತ್ತು ಸ್ವತಂತ್ರವಾದಿ ಪಕ್ಷ. ಈ ಎರಡು ಪಂಗಡಗಳು ಇವೆಯೆಂಬಿಗೆ ಕರ್ನಾಟಕ ಪ್ರದೇಶ ಕಾಂಗ್ರೆಸ್ಸ ಕಮಿಟಿಯ ಅಧ್ಯಕ್ಷರಾದ ಶ್ರೀ ನಿಜಲಿಂಗಪ್ಪನವರು ಸಹ ಒಪ್ಪಿದವರಂತಿದ್ದಾರೆ—"There seems to be two groups, one standing for the merger of Coorg and the other against it–Sri Nijalingappa.

ಲೇ:—ಶ್ರೀ ಕೆ. ಎಂ. ಪೂವಯ್ಯ.

1) ಈಗ ಕಾಂಗ್ರೆಸ್ಸಿನ ಆಶ್ರಯದಲ್ಲಿರುವ ಸಂಯೋಜನವಾದಿ ಪಕ್ಷವು ಕೊಡಗಿನ ಭವಿಷ್ಯತ್ತಿನ ಶೀರ್ಮಾನವು ಈ ದೇಶದ ಮಹಾಜನರಲ್ಲಿಲ್ಲವೆಂದು ವಾದಿಸಿದವರು, ಇನ್ನೂ ವಾದಿಸಲಿರುವವರು. ಮತ್ತು ಕೊಡಗು ಪ್ರತ್ಯೇಕವಾಗಿರಲು ಸಾಧ್ಯವಿಲ್ಲವೆಂದು ನಂಬುವವರು.

2) ಈಗ ಕಾಂಗ್ರೆಸ್ಸಿನ ಅಧೀನದಿಂದ ಹೊರಬಂದಿರುವ ಪ್ರತ್ಯೇಕವಾದಿ ಪಕ್ಷ–ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ಸಿನ ಅಧಿಕಾರಿಗಳ, ಪದೇ ಪದೇ ಅನ್ಯಾಯವೆಂದು ಕಂಡು ಬಂದಂತಹ, ಈ ನಮ್ಮ ಕೊಡಗು ದೇಶಕ್ಕೆ ಹಾನಿಕರವಾಗುವಂತಹ ನರ್ತನೆಗಳಂದ ಲಪ್ತಿಸಿಕೊಳ್ಳವರೆ, ಕಾಂಗ್ರೆಸ್ಸು ಮಹಾ ಸಂಸ್ಥೆಯ ವಿಸರ್ಜನೆಯಿಲ್ಲ, ಕಾಂಗ್ರೆಸ್ಸಿನ ಮಹಾತತ್ವಗಳಿಗೆ ಒಳಪಟ್ಟ ವರಾಗಿಯೇ, ಯಾವ ದೇಶದ ಭವಿಷತ್ತನ್ನೂ ನಿರ್ಧಾರ ಮಾಡುವ ಹಕ್ಕು (The principle of self determination) ಆ ದೇಶದ ಎಲ್ಲಾ ಜನರಿಗೆ ಕೂಡಿದ್ದಾಗಿದೆ ಎಂದು ಸಂಪೂರ್ಣವಾಗಿ ಅದಕ್ಕೂತ್ತರ ಹೇಳಿಯಲು ನಿಂತು, ಕಾಂಗ್ರೆಸ್ಸು ಒಂದು ಪಕ್ಷದ ಬೆನ್ನುತಟ್ಟಿ ಕೊಡಗು ಅದಕ್ಕನುಗುಣವಾಗಿ ಉಪದೇಶ ವಾಚರನ್ನು ನಿಲ್ಲಿಸಿದ ಕಾರಣ, ಕಾಂಗ್ರೆಸ್ಸಿನ ಶಿಸ್ತಿಗೆ ತಲೆ ಬಾಗಿ ಕಾಂಗ್ರೆಸ್ಸಿಗರಾಗಿಯೇ ಕಾಂಗ್ರೆಸ್ಸಿನಿಂದ ಸರಬಂದವರಾಗಿದ್ದಾರೆ. ಇವರು ಕೊಡಗು ದೇಶದ ಪ್ರತ್ಯೇಕ ನಿಲ್ಲಲು ಸಂಪೂರ್ಣ ಸಾಧ್ಯವಿದೆ ಎಂದು ನಂಬುವವರಾಗಿದ್ದಾರೆ.

ಪರೀಕ್ಷಿಸಿ ನೋಡಿದರೆ, ಈ ಎರಡು ಪಂಗಡಗಳ ತತ್ವಗಳು, ಅವರೊಳಗೆ ಹೆಚ್ಚಾಗಿ ವಿರೋಧವಾಗಿರುವುದರಿಂದ, ಖಂಡಿತವಾಗಿಯೂ ಈ ಸಂಗತಿಗಳಲ್ಲಿ ದೇಶದ ಮಂತ್ರಾಂತರಿಗೆ ಸರಿಯಾಗಿ ತಿಳಿವಳಿಕೆ ಕೊಡಲು, ಮತ್ತು ಮುಂದಿನ ರಾಜ್ಯಾಡಳಿತಕ್ರಮವನ್ನು ನಡೆಸಲು ಸಹ ಅನುಕೂಲವಾಗುವಂತೆ ಒಂಬಳ್ಳಿಯಂದು ಪಂಗಡಕ್ಕೆ ವಿರೋಧವಾಗಿ ಖಂಡಿತವಾಗಿಯೂ ಚುನಾವಣೆಗೆ ನಿಲ್ಲಲೇ ಬೇಕಾಯಿತು. ರಾಜಕೀಯ ರಂಗದಲ್ಲಿ ತತ್ವಗಳೇ ತಲೆಎತ್ತಿ ನಡೆಯಬೇಕಲ್ಲದೆ ವ್ಯಕ್ತಿ, ಯಾವ್ಯಕ್ತಿಯಲ್ಲ. ಇಂತಹ ಮಹತ್ತಾದ ಭಿನ್ನಾಭಿಪ್ರಾಯಗಳನ್ನ ಇಟ್ಟುಕೊಂಡು, ಈ ಪ್ರಶ್ನೆಯನ್ನು ಈ ಚುನಾವಣೆಯಲ್ಲಿ ಒಂದು ಪ್ರಾಮುಖ್ಯವ ಪ್ರಶ್ನೆಯಾಗಿ ಮಾಡಬಾರದೆಂಬ ಕೋರಿಕೆಗೆ ಅರ್ಥವೇ ಇಲ್ಲ. ಮೂಲ ತತ್ವಗಳೆಲ್ಲಿ ಒಪ್ಪಂದಕ್ಕೆ ಬರಬಹುದೆಂದರೆ ಪ್ರಜಾ ಜವಾಬ್ದಾರಿ ಸರಕಾರದ ಕೊಲೆ ಮಾಡಿದಂತೆ.

ಇವುಗಳ ಮಧ್ಯೆ ಕೆಲವು ಮಹನೀಯರು, ನಾವೂ ಕೂಡ ಸಂಯೋಜನಕ್ಕೆ ಸಂಪೂರ್ಣ ವಿರೋಧ, ನಾವೂ ಕೂಡ ಪ್ರತ್ಯೇಕವಾದಿಗಳೇ ಎಂಬುದಾಗಿ ಈಗ ಹೇಳಿ ಸಂಯೋಜನಾ ಪಕ್ಷದ ಪರವಾಗಿ, ಪ್ರತ್ಯೇಕವಾದಿಗಳಿಗೆ ವಿರೋಧವಾಗಿ ಚುನಾವಣೆಗೆ ನಿಂತಿದ್ದಾರೆ. ಇವರ ತತ್ವವೇನವ್ವೋ ಯಾರ ವ್ಯಕ್ತಿಪ್ರೇಮವೋ ಅರ್ಥವಾಗುವುದಿಲ್ಲವಾದರೂ! ಕಾಂಗ್ರೆಸ್ಸಿನಿಂದ ಈಗ ತಾನೆ ಹೊರಬಂದ ಮಹನೀಯರು ತಮ್ಮ ಅನುಭವವನ್ನು ದೇಶದ ಮುಂದೆ ಸಾರಿ ಸಾರಿ ಹೇಳುತ್ತಿದ್ದಾರೆ. ಹೀಗಿರುವಲ್ಲಿ ಕೆಲವು ಹುಲ್ಲೆವರಿಗಳು ರಾಜಕೀಯ ತೋಳಗಳ ಅಟ್ಟದ ನರಿಗಳಾಗಿ ಎಷ್ಟು ದಿನ ಬಾಳುವರೋ? ತಿಳಿಯಾದು! ಹುಲ್ಲೆಸಂಗಳಿಗೂ ತೋಳನ ಹಾಲು ರುಚಿಯೂ ಗೊತ್ತಿರಬಹುದೆ! ಆದರೆ ಸ್ಥಿತಿಯ ಬಗ್ಗೆ ಅಯ್ಯೋ ಪಾಪ!

ಆದ್ಯವಲ್ಲಿ ನಮ್ಮ ಸಂಯೋಜನಾ ವಿತ್ರಗಳ್ಳಿ ಎರಡು ಕೋಣಂ—

ಒಂದನೆಯದಾಗಿ—ಕೊಡಗಿನ ಸಂಯೋಜನಾ ಪ್ರಶ್ನೆಯನ್ನ ಈ ಚುನಾವಣೆಯಲ್ಲಿ ಬಚ್ಚಿಡುವುದು ನ್ಯಾಯವಲ್ಲ. ಈ ಪ್ರಶ್ನೆಯೆಂಬ ಶೀರ್ಮಾನವಾಗದೆ ದೇಶದಲ್ಲಿ ಯಾವ ಅಭಿವೃದ್ಧಿಗೂ ಎಡೆ ಇಲ್ಲವೆಂದು ಪ್ರತಿ ದೇಶದ ರೈಲ್ವೆಸ್ಟೇಷನ್ನಿನಲ್ಲಿರುವ ಈ ಮಧ್ಯದ ಸೈನ್ ನಿಮ್ಮ ಮನಸಾಕ್ಷಿಯೂಗಿಯೂ ನಂಬಿಲಾ ಸಂಯೋಜನೆಯು ತತ್ವವನ್ನ ಬಚ್ಚಿಡುವುದು ಯುಕ್ತವಲ್ಲ ಬದಲು ಗಿ ಎರಡು ಪಂಗಡಗಳೂ ಅವರವರ ಮೂಲ ತತ್ವವನ್ನು ಮತದಾರರಿಗೆ ಸಂಪೂರ್ಣ ಪಂದಿಟ್ಟು ಮಾಡಿ, ಅವರ ಅಭಿಪ್ರಾಯಕ್ಕೆ ತಲೆಬಾಗುವುದು ರಾಜಕೀಯ ಧರ್ಮವೆ

ಎರಡನೆಯದು—ಕೊಡಗಿನ ಇಂದಿನ ಚುನಾವಣೆಯಲ್ಲಿ, ಕೇವಲ ಪ್ರಾಂತೀಕ ಪ್ರಶ್ನೆಯಾದ ಕೊಡಗಿನ ಭವಿಷ್ಯದ ಪ್ರಶ್ನೆಯೇ ಪ್ರಧಾನವಾಗಿರಬಾರದು, ಬರೀ ಬಹುಮತಿನಲ್ಲಿ ನಿಂತ ಕಾಂಡಿಡೇಟಿನ ಪ್ರತ್ಯೇಕವಾದಿಗಳ ಮೇಲೆ ಕಾಂಡಿಡೇಟಲು ನೀವು ಅ ಮಹಾ ಸಂಸ್ಥೆಯಾದ ಕಾಂಗ್ರೆಸ್ಸಿನನ್ನೆ ಕರೆಯಲ್ಲಿ ನಿಲ್ಲಬೇಡಿ. ಬಾಳಿನಲ್ಲಿ ನಿಂತವರೂ ಕೂಡ ಕಾಂಗ್ರೆಸ್ ಪ್ರೇಮಿಗಳೇ. ಪ್ರಾಥಮತದಾನದ ಪ್ರಥಮ ಸ್ಥಾನ್ಪಯಲ್ಲಿ ಮತದಾರರು ಅವರ ಹಕ್ಕನ್ನು ಹೇಗೆ ಉಪಯೋಗಿಸುವರೆಂಬುದನ್ನು ಯಾರಿಗೂ ಹೇಳಲಾಗುವುದಿಲ್ಲ. ಬಹುಶಃ ಇನ್ನೆರಡು ತಿಂಗಳಲ್ಲಿ ಫಲಿತಾಂಶವು ತಿಳಿದು ಒಂದು ವಾಗಿ ನಿಮ್ಮ ಇಂದಿನ ನರ್ತನೆಯು, ಕಾಂಗ್ರೆಸ್ ನಲ್ಲಿರುವಂದಲೇ ಕಾರ್ಯಕ್ರಮವನ್ನು ಕಾರ್ಯಕ್ರಮದಿಂದ, ಕಾಂಗ್ರೆಸ್ಸಿನ ಜೊತೆಯಲ್ಲಿ ಜಯಕೀರ್ತಿಯು ಬಂದರೆ, ನೀವು ಆ ಸಮಯದಲ್ಲಿ ನಿಮಗೆ ನೆಲಸ್ಥಾನ ಕೊಟ್ಟ ಕಾಂಗ್ರೆಸ್ಸಿನ ಕೀರ್ತಿಯನ್ನ ಹೇಗೆ ಪಾಲಿಗುವಿರಿ?

Representation of the people (Conduct of Elections and Election Petitions) Rules.

೧೯೫೧ನೇ ಇನೆಯ ನಿಬಂಧನೆಗನುಸಾರವಾಗಿ ನೋಟೀಸು.

ಲೋಕಸಭೆಯ (House of the people) ಕೊಡಗು ದೇಶದ ಚುನಾವಣೆ ಸ್ಥಾನದಿಂದ 1952ನೆಯ ಇನವಿ ಫೆಬ್ರವರಿ 5ನೆಯ ತಾರೀಖಿನ ದಿನ ಅಥವಾ ಅದಕ್ಕೆ ಮುಂಚಿತವಾಗಿ ಒಬ್ಬರು ಸದಸ್ಯರನ್ನು ಚುನಾಯಿಸಬೇಕೆಂದು ಕೋರಲ್ಪಟ್ಟಿರುವುದರಿಂದ ಮೇಲೆ ಸೂಚಿತವಾದ ಚುನಾವಣೆ ಸ್ಥಾನದ ರಿಟರ್ನಿಂಗ್ ಆಫೀಸರಾದ ಶ್ರೀ ಎನ್. ಸಿ. ಸುಬ್ಬಯ್ಯ ಎಂಬ ಹೆಸರಿನವನಾದ ನಾನು ಈ ಕೆಳಗೆ ಕಂಡಂತೆ ಈ ಮೂಲಕ ಸಮಸ್ತ ಜನರ ತಿಳಿವಳಿಕೆಗಾಗಿ ಈ ರೀತಿ ಪಬ್ಲಿಕ್ ನೋಟೀಸು ಕೊಟ್ಟಿದ್ದೇನೆ:—

ಪಬ್ಲಿಕ್ ನೋಟೀಸು.

(i) ಚುನಾಯಿಸಲ್ಪಡತಕ್ಕವರ ಸಂಖ್ಯೆಯು ಒಂದು.

(ii) "ನಾಮನಿರ್ದೇಶನ" ಕಾಗದಗಳನ್ನು ಈ ಕೆಳಗೆ ರುಜು ಮಾಡಿರತಕ್ಕವರಿಗೆ ಮಡಿಕೇರಿಯಲ್ಲಿರುವ ಅವರ ಆಫೀಸಿನಲ್ಲಿ ಕೊಡಬಹುದು. ಅವುಗಳನ್ನು 1951ನೆಯ ಡಿಸೆಂಬರ್ 4ನೆಯ ತಾರೀಖಿನ ದಿನ ಅಥವಾ ಅದಕ್ಕೆ ಮುಂಚಿತವಾಗಿ ಬೆಳಗ್ಗೆ 11 ಗಂಟೆಯಿಂದ ಅಪರಾಹ್ನ 3 ಗಂಟೆಯ ಒಳಗಾಗಿ ಕೊಡಬೇಕು.

(iii) "ನಾಮನಿರ್ದೇಶನ" ಕಾಗದದ ನಮೂನೆಗಳನ್ನು ಮೇಲೆ ನಮೂದಾಗಿರತಕ್ಕವರ ಆಫೀಸುಗಳಲ್ಲಿ 26–11–1951 ತಾರೀಖಿನಿಂದ 3–12–1951 ತಾರೀಖಿನ ದಿನದ ವರೆಗೆ 11 ಘಂಟೆಯಿಂದ 5–30 ಘಂಟೆಯ ವರೆಗೆ ಯಾವಾಗ ಬೇಕಾದರೂ ಪಡೆಯಬಹುದು.

(iv) "ನಾಮನಿರ್ದೇಶನ" ಕಾಗದಗಳನ್ನು 1951 ಡಿಸೆಂಬರ್ 8ನೇ ತಾರೀಖಿನ ದಿನ ಪೂರ್ವಾಹ್ನ 11 ಗಂಟೆಗೆ ಮಡಿಕೇರಿ ಚೀಫ್ ಇಲೆಕ್ಟರಲ್ ಆಫೀಸರ ಆಫೀಸಿನಲ್ಲಿ ಪರಿಶೀಲನೆಗೆ ತೆಗೆದುಕೊಳ್ಳಲಾಗುವುದು.

(v) ಎಷ್ಟು ಜನ ಸದಸ್ಯರುಗಳು ಚುನಾಯಿಸಲ್ಪಡಬೇಕೋ ಅಷ್ಟಕ್ಕಿಂತಲೂ ಹೆಚ್ಚು ಮಂದಿ ಉಮೇದುವಾರರಿದ್ದು ಸ್ಪರ್ಧಿಸುವ ಪಕ್ಷದಲ್ಲಿ ಚುನಾವಣೆದಾರರು ಓಟು ಕೊಡುವ ತಾರೀಖು ಅಥವಾ ತಾರೀಖುಗಳನ್ನೂ ಮತ್ತು ಅವರು ಎಷ್ಟು ಘಂಟೆಯಿಂದ ಎಷ್ಟು ಘಂಟೆಯ ವರೆಗೆ ಓಟು ಕೊಡಬಹುದೆಂಬುದನ್ನೂ ಪ್ರತ್ಯೇಕವಾಗಿ ತಿಳಿಸಲಾಗುವುದು.

ತಾರೀಖು 26–11–1951.

ಚೀಫ್ ಇಲೆಕ್ಟರಲ್ ಆಫೀಸರ ಮತ್ತು ರಿಟರ್ನಿಂಗ್ ಆಫೀಸರ್,
ಮಡಿಕೇರಿ.

ಎನ್. ಸಿ. ಸುಬ್ಬಯ್ಯ.

ಕೊಡಗು

ತಾ. ೩೦-೧೧-೧೯೫೧ನೇ ಶುಕ್ರವಾರ

ಬತ್ತದ ಬೆಲೆ.

ಪ್ರತಿ ವರ್ಷ ಕೊಡಗಿನಲ್ಲಿ ಬತ್ತದ ಬೆಲೆಯನ್ನು ಸರಕಾರದಲ್ಲಿ ನಿಶ್ಚಯಿಸದೆ ಬಡ ರೈತರಿಗೆ ಕುಂಬಾ ತೊಂದರೆಯಾಗುತ್ತದೆ. ಈಗಾಗಲೇ ದೊಡ್ಡಿ, ಕೆಂಬಕ್ಕಿ ಮೊದಲಾದವುಗಳು ಕಟಾವಿಗೆ ಬಂದಿದ್ದು ನಾಳೆ ಇಂದಿಲ್ಲಾ ನಾಡಿದ್ದು ಕೊಯ್ಲಿಗೆ ಸಿದ್ಧವಾಗುತ್ತವೆ. ಆದರೂ ಬತ್ತದ ಬೆಲೆ ಇನ್ನೂ ನಿಶ್ಚಯವಾಗಿಲ್ಲ. ಈ ವರ್ಷ ಗಾಡಿಗೆ ಕಡಿಮೆ ರೂ. ೨೨೫-೦-೦ ದೊರೆಯುವೇಕೆಂಬುದು ಕೊಡಗಿನ ರೈತರ ಲ್ಲರ ಅಭಿಪ್ರಾಯವಾಗಿತ್ತು. ಈಗಿನ ಜೀವನ ಖರ್ಚಿನ ದೃಷ್ಟಿಯಿಂದ ಈ ಬೆಲೆಯನ್ನು ಹೆಚ್ಚಲ್ಲವೆನ್ನಬಹುದು. ಆದರೆ ಕೇಂದ್ರ ಸರಕಾರವು ೧೯೫೦ ಪರೆಯ ಗಾಡಿಗೆ ರೂ. ೨೦೨ ಬೆಲೆ ನಿಶ್ಚಯಿಸಿದೆಯೆಂದು ವರ್ತಮಾನವಿದೆ. ಇದು ಬತ್ತ ಸಂಗ್ರಹ ಚಾರ್ಜು ರೂ. ೧೦ ನ್ನು ಸೇರಿದೆ ಎಂದು ತಿಳಿಯಬೇಕಾಗುತ್ತದೆ. ಕೇಳ್ವಿ ಇನ್ನು ಜಾರಿಯಲ್ಲಿ ಬರುವಂತಾಗಬೇಕು.

ಕಳೆದ ವರ್ಷ ಬತ್ತದ ಬೆಲೆಯನ್ನು ಸರಿಯಾಗಿ ಒಂದೇ ಜಾಗಿಗೆ ಗೊಕ್ಕನೂಡದೆ ಪೃಥಮದಲ್ಲಿ ಗಾಡಿಗೆ ರೂ. ೧೯೯ ರಲ್ಲಿ ಮೂರಾಟ ಕೂಡಲು ಬಿಟ್ಟು ನಂತರ ಒಂಭತ್ತು ಅವಧಿಯಲ್ಲಿ ಮೂರಿದನವಿಗೆ ಗಾಡಿಗೆ ರೂ. ೬ ಹೆಚ್ಚು ಜೊರೆಯಾಯಿತೆಂದು ಪ್ರಕಟಿಸಿದರೂ ಯಾವ ರೈತನಿಗೂ ಇದರಿಂದ ಪ್ರಯೋಜನವಾಗಲಿಲ್ಲ.

ಬತ್ತದ ಬೆಲೆಯನ್ನು ಕೇಂದ್ರ ಸರಕಾರವು ನಿಶ್ಚಯಿಸುವಹಾಗೆಯೂ ಸ್ಥಳೀಯ ಸರಕಾರದ ಶಿಫಾರಸ್ಸಿನ ಮೇರೆ ಆದು ನಿಶ್ಚಯಿಸಬಲ್ಲದಾಗಿತ್ತದೆ. ಸ್ಥಳೀಯ ಸರಕಾರವು ತನ್ನ ಶಿಫಾರಸ್ಸನ್ನು ಕಳುಹಿಸಿದ್ದು ಆದರ ಮೇಲೆ ಇಂಡಿಯಾ ಸರಕಾರವು ಈ ಬೆಲೆಯನ್ನು ನಿಶ್ಚಯಿಸಿದೆ. ಸ್ಥಳೀಯ ಸರಕಾರವು ಕೊಡಗಿನ ರೈತನ ಸ್ಥಿತಿಯನ್ನು ಪರಿಶೀಲಿಸಿ ತಿಳಿದು ಬೆಳೆಸುವವನಿಗೆ ಸ್ವಲ್ಪ ಪ್ರೋತ್ಸಾಹಕವಾದ ಬೆಲೆ ನಿಶ್ಚಿಸುವ ದೃಷ್ಟಿಯಿಂದ ಮಾಡಿದ ಸೂಚನೆಯನ್ನು ಪೂರ್ತಿಯಾಗಿ ಕೇಂದ್ರ ಸರಕಾರವು ಒಪ್ಪಿಲ್ಲವಾದರೂ ಗಾಡಿಗೆ ರೂ. ೨೦೨ ರಂತೆ ನಿಶ್ಚಯಿಸಿದ್ದು ಸ್ವಲ್ಪ ಮಟ್ಟಿಗೆ ತೃಪ್ತಿಕರವಾಗಿದೆ. ಸರಕಾರವು ತೀರ್ಮಾನವಾಗಿ ಇವನ್ನು ಪ್ರಕಟಿಸಬೇಕು. ಇಷ್ಟಾದಿದ್ದರೆ ಮುಂದಿನ ಕೊಯಿದೆಯಿಂದ ನರಳುತ್ತಿರುವ ರೈತನು ಬತ್ತ ಮೂರಾಟ ಮೂಡಲಾರದೆ ವಿಪರೀತ ಕಷ್ಟಕ್ಕೊಳಗಾಗ ಬೇಕಾಗುವದು.

ವರ್ಗಾವಣೆ.

ಬೊಂಬಾಯಿ ಪ್ರಾಂತದ ಮಹಬಲೇಶ್ವರದ ಜೇನಿನ ಕಾರ್ಖಾನೆಯಲ್ಲಿ ಮೇನೇಜರಾಗಿದ್ದ ಶ್ರೀ ಪಿ. ಜಿ. ಮುದ್ದಯ್ಯನವರ ಅಳಿಯಂದಿಯರಾದ ಶ್ರೀ ಜಿ. ಎಂ. ಗಣೇಶರಾಮ್‌ರವರು ತಾ. ೨೧ರಲ್ಲಿ ಮೈಸೂರು ಆಸ್ಪತ್ರೆಯಲ್ಲಿ ತೀವ್ರಾಧೀನರಾದರು.

ಹಾತೂರು ಹಾಕಿ ಕಪ್ ಪಂದ್ಯಾವಳಿ ದಲ್ಲಿ ಜಯಶೀಲರಾದ "ಯಂಗ್‌ಸ್ಟರ್ಸ್ ಸ್ಪೋರ್ಟ್ಸ್ ಕ್ಲಬ್"ನ ಪೈಸರು ಳಿಗೆ ವಾರ ಮಡಿಕೇರಿ ಕಾಟೇಜ್ ಕಪ್ ಪಂದ್ಯಾವಳಿ ಯಲ್ಲಿಯೂ ಜಯಶೀಲವಾಗಿ ಕಪ್ಪನ್ನು ಗೆದ್ದಿತು.

ಕಳೆದ ವಾರ ಬೆಂಗಳೂರಿನಲ್ಲಿ ನಡೆದ ಪ್ರಸನ್ನ ಕುಮಾರ್ ಎತ್ಲೆಟಿಕ್ ಫರ್ಧೆಯಲ್ಲಿ ಶ್ರೀ ಸೋದಾಕಂಡ ಬೋಪಯ್ಯನವರು ಭಾರದ ಗುಂಡನ್ನು ಎಸೆಯುವುದರಲ್ಲಿ ಪ್ರಥಮ ಬಂದಿರುವದಲ್ಲದೆ ಬೆಂಗಳೂರಿನ ರಿಕಾರ್ಡನ್ನು ೭½ ಅಡಿಗಳಿಂದ ಮುರಿದರು.

ಕೊಡಗು ಕೌನ್ಸಿಲಿಫ ವಿಸ್ತೀರ್ಣದ ತಾ. ೧೦-೧೨-೫೧ರಲ್ಲಿ ಮಡಿಕೇರಿಯಲ್ಲಿ ನಡೆಯುವದು.

ಕೊಡಗಿನ ಮುಂಬರುವ ಶಾಸನ ಸಭಾ ಚುನಾವಣೆಗೂ ಕೇಂದ್ರ ಪಾರ್ಲಿಮೆಂಟಿಗೂ ಉಮೇದುವಾರರಾಗಲಿರುವವರು ನಾಮಪತ್ರವನ್ನು ಸಲ್ಲಿಸುವ ಕಡೇ ತಾರೀಕು ಡಿಸೆಂಬರು ೪ ಎಂದೂ ಪರಿಶೀಲನೆ ತಾ ೬ರಲ್ಲಿ ಎಂದೂ, ವಾಪಾಸು ಕೆಗೆದು ಕೊಳ್ಳಲು ಕಡೇ ತಾ. ಡಿಸೆಂಬರು ೧೧ ಎಂದೂ, ಮತದಾನವು ಜನವರಿ ತಾ. ೧೪ ರಿಂದ ಪ್ರಾರಂಭವಾಗುವುದೆಂದೂ ಪ್ರಕಟವಾಗಿದೆ.

ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ನಡೆದ ಇಂಟರ್‌ಸ್ಕೂಡಿಯೇಟ್ ಪರೀಕ್ಷೆಯಲ್ಲಿ ಶ್ರೀಗಳಾದ ಕೇತಿಯಂಡ ಸಿ. ತಿಮ್ಮಯ್ಯ, ಖಲೀಲ್ ಖಾನ್ ಕೈಸ್ತ ಮತ್ತು ಪುಲಿಯಂಡ ಜೆ ಸೀತಾರ್ ಇವರುಗಳೂ, ಕಿ. ಯಾ. ಸಿ. ಪರೀಕ್ಷೆಯಲ್ಲಿ ಶ್ರೀ ಮತಿಗಳಾದ ಪುಟ್ಟಿಚಂಡ ಯಂ ಗಂಗಮ್ಮನವರು ಮತ್ತು ಕೊಕ್ಕಲೆರ ಯಸ್. ಪಾರ್ವತಿಯವರು ಪೂರ್ತಿಯಾಗಿ ಪಾಸಾಗಿರುವರು.

ಸುದಿಕೇರಿ ಶಾಲಾ ಆಶ್ರಯದಲ್ಲಿ ಶ್ರೀ ಕಾಡ್ಯಮಾಡ ಏಮ್ಮೆಗೌಡ ಸಹೋದರರು ಇಟ್ಟಿಹಾಕಿ ಕಪ್ಪಿನ ಸಂದ್ಯಾಟವು ಡಿಸೆಂಬರ್ ೩ ರಿಂದ ಪ್ರಾರಂಭವಾಗುವದೆ.

ಶ್ರೀಮಂಗಲ ನಾಡು ಹರಿಹರ ಶುಭ್ರ ವೆಣ್ಣೆ ದೇವಸ್ಥಾನದ ಬಳಿ ದಪಗಳ ವತ್ತು ವಸ್ತು ಪ್ರದರ್ಶನವು ಬರುವ ತಾ. ೪ ಮತ್ತು ೫ರಲ್ಲಿ ನಡೆಯುವದು.

ನೆಲ್ಲೂರಿನ ಸೈಂಟ್ ಫಿಲೋಮಿನಾ ಕಾಲೇಜಿನ ಎತ್ಲೆಟಿಕ್ ಭಾಂಪಿಯನ್‌ಶಿಪ್ ಕಪ್ಪನ್ನು ಶ್ರೀ ಎಂ ಬಿ ತಿಮ್ಮಯ್ಯನವರು ಪಡೆದಿರುವರು. ಶ್ರೀ ಎಂ. ಎಸ್. ಮಾಚಿಡ್ಯಮನವರು ಫಿಲೋಮಿನ ಕಾಲೇಜು ಯೂನಿಯನ್‌ನ ಗೌರವ ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟಿರುವರು.

ವೀರಾಜಪೇಟೆಯಿಂದ ಕುಟ್ಟಕ್ಕೆ 1½ ಗಂಟೆಗೆ ಹೋಗುವ ಸಿ. ಜೆ. ಎ. ಗಾಳಿನೇ ಪಿ. ವಿ. ಬಸ್ಸಿನಲ್ಲಿ ತಾ ೨೪ನೇ ಶನಿವಾರ ಯೂರಪೋ ರೂ. ೨೦ ಬಿದ್ದು ಸಿಕ್ಕಿ ಅದು ಕಂಡಕ್ಟರ್ ಶ್ರೀ ಕೂತಂಡ ಎನ್. ಮಂದಪ್ಪನವರಲ್ಲಿ ಹೆಯೆಂದೂ ಕಳಕೊಂಡವರು ತಕ್ಕೆ ರುಜುವಾತಿನಿಂದ ಅದನ್ನು ಹೊಂದಿ ಕೊಳ್ಳಬಹುದೆಂದೂ ತಿಳಿಸುತ್ತಾರೆ.

ಬಿ. ಎ. ಮತ್ತು ಬಿ ಎಸ್. ಪಾಸಾದ ಕೊಡಗಿನ ತರುಣರು ಹೈಕ್ಕೂಲು ಉಪಾಧ್ಯಾಯರ ವೃತ್ತಿಗಾಗಿ ಮಡಿಕೇರಿ ಡಿಸ್ಟ್ರಿಕ್ಟ್ ಎಂಪ್ಲಾಯಿಮೆಂಟ್ ಆಫೀಸಿನಲ್ಲಿ ತಮ್ಮ ಹೆಸರನ್ನು ರಿಜಿಸ್ಟರ್ ಮಾಡಿಸಿಕೊಳ್ಳಬಹುದು.

ಕೊಡಗು ಪೋಲೀಸಿಗೆ ಜನರು ಬೇಕಾಗಿದ್ದಾರೆ. ಸೇರಲು ಇಷ್ಟವುಳ್ಳವರು ಡಿಸೆಂಬರ್ ೫ನೇ ತಾರೀಕಿನೊಳಗೆ ಮಡಿಕೇರಿ ಎಂಪ್ಲಾಯಿಮೆಂಟ್ ಆಫೀಸಿಗೆ ಹಾಜರಾಗಬೇಕಾಗಿ ಈ ಮೂಲಕ ತಿಳಿಸಿದೆ. ಮಾ ಜಿ ಸಿಪಾಯಿ, ಮಾಜಿ ಎಕ್ಸ್ ಸಿ. ಸಿ. ಸಿವಿಲ್ ಗಾರ್ಡ್ಸ್ ಇವರಿಗೆಗಳಿಗೆ ಹೆಚ್ಚಿನ 'ಪ್ರಿಫರೆನ್ಸ್' ಕೊಡಲಾಗುವುದು.

ಕೆಲವು ದಿವಸಗಳಿಗೆ ಹಿಂದೆ ವಿ. ಡಿ ಕೇರಿ ಸುಂಟಿಕೊಪ್ಪ ರಸ್ತೆ ಕಿದಕಲ್‌ಪಳ್ಳಿಯಲ್ಲಿ ಪೊಲೀಸರಿಗೆ ಪುತ್ತು ಬ್ಯಾರಿ ಎಂಬವನು ಆಪತ್ತಿನ ಹೆಂಡತಿಯನ್ನು ಕೊಂದನೆಂಬ ಕೇಸು ಮಡಿಕೇರಿ ಸೆಷನ್ಸ್ ಕೋರ್ಟಿನಲ್ಲಿ ವಿಚಾರಣಾಗಿ ತಾ. ೧೬-೧೧-೫೧ ರಲ್ಲಿ ಆಪರಾಧಿಗೆ ಪಾಸಿ ಶಿಕ್ಷೆ ತೀರ್ಪು ಕೊಡಲಾಯಿತು.

೨೨-೧೧-೫೧ ರಲ್ಲಿ ಮಡಿಕೇರಿ ನಾಡು ಆರುವತೊಕ್ಕಲು ಗ್ರಾಮದ ಮಂಜಾಂದಿರ ಗಣಪತಿಯವರನ್ನು ಅವರ ಮನೆ ಕಾರ್ಯಪ್ಪನವರು ಗುಂಡು ಹೊಡೆದು ಕೊಂದರೆಂಬ ಕೇಸು ಬಗ್ಗೆ ಪೋಲೀಸು ವಿಚಾರ ನಡೆಯುತ್ತಿದೆ. ಗಣಪತಿಯವರ ದೊಕೆಯಲ್ಲಿದ್ದ ಚಾತರನ ಪೂನರ್ಯುನಸಂಗೆ ಗುಂಡು ತಗಲಿ ಸತ್ತಿರುವರೆಂದು ವರ್ತಮಾನ.

ಶ್ರೀ ಬಿ. ಯಸ್. ಕುಶಾಲಪ್ಪನವರು ಮಡಿಕೇರಿ ಸಂಸ್ಕಾರಿ ಕಾಲೇಜಿನ ಪ್ರಿನ್ಸಿಪಾಲರ ಕೆಲಸಕ್ಕೆ ೧-೧೨-೫೧ ರಿಂದ ರಾಜಿನಾಮೆ ಕೊಡಲಿರುವರು. ಇವರು ಕಾಂಗ್ರೆಸ್ಸಿಗರ ಅಭಿಪ್ರಾಯದಂತೆ ಕೊಡಗು ಎಸೆಂಬ್ಲಿ ಚುನಾವಣೆಗೆ ನಿಲ್ಲುವರು.

ಸೇಲಂ ನಗರಸಭೆಯ ೧೨ ಜನ ಕಾಂಗ್ರೆಸಿಗರ ರಾಜಿನಾಮೆ

ಸೇಲಂ ನಗರ ಸಭೆಯ ೧೨ ಜನ ಕಾಂಗ್ರೆಸ್ ಸಭಾಸದರು ಕಾಂಗ್ರೆಸ್ಸಿನ ಪ್ರಾಥಮಿಕ ಸದಸ್ಯತ್ವ ಹಾಗೂ ಮಹತ್ವದ ಸ್ಥಾನಗಳಿಗೆ ರಾಜಿನಾಮೆಯಿತ್ತಿದ್ದಾರೆ. ಅವರಲ್ಲಿ ನಗರ ಸಭೆಯ ಅಧ್ಯಕ್ಷರೂ ಹಿರಿಜನ ಸೇವಕ ಸಂಘದ ಕಾರ್ಯದರ್ಶಿಗಳೂ ಇದ್ದಾರೆ. ಗಾಂಧಿ ತತ್ವಾನುಯಾಯಿಗಳಿಗೆ ಕಾಂಗ್ರೆಸ್ಸಿನಲ್ಲಿ ಸ್ಥಾನವು ಉಳಿದಿಲ್ಲವೆಂದು ಅವರು ತಮ್ಮ ರಾಜಿನಾಮೆ ಪತ್ರಗಳಲ್ಲಿ ತಿಳಿಸಿದ್ದಾರೆ.

ಶೇಕ್ ಅಬ್ದುಲ್ಲಾರ ಅಪಹರಣದ ಯತ್ನ

ಕಾಶ್ಮೀರದ ಮುಖ್ಯ ಮಂತ್ರಿ ಶೇಖ್ ಅಬ್ದುಲ್ಲಾರವರನ್ನು ಪಾಕಿಸ್ತಾನಕ್ಕೆ ಹಾರಿಸಿಕೊಂಡು ಹೋಗುವ ಆಕಾಸ್ಥಾನವೊಂದು ನಡೆದಿದ್ದು ವೈಮಾನಿಕನ ಚಾತುರ್ಯದಿಂದ ಕೊನೆಯು ತಕ್ಷಣದಲ್ಲಿ ತಿಳಿಯಲ್ಪಟ್ಟಿತು.

ದಿಲ್ಲಿಗೆಂದು ಹೊರಟ ವಿಮಾನವನ್ನು ನೇರಾಗಿ ಲಾಹೋರಿಗೆ ಒಯ್ಯುವದೆಂದು ಪೀಠಿಕೆ ನಡೆದಿತ್ತು. ವೈಮಾನಿಕನಿಗೆ ಒಂದು ಲಕ್ಷ ರೂಪಾಯಿ ಕಾಣಿಕೆ ಕೊಡುವ ಭರವಸೆಯಿತ್ತಂತೆ. ಅವನು ಅಕ್ಷರಶಃ ಅಸುದ್ದಿಯಷ್ಟನ್ನು ನೊದಲಾಗಿ ತಿಳಿದಿದ್ದರಿಂದ ಕೊಕೆಯ ಕ್ಷಣದಲ್ಲಿ ಅದು ಹೆಳಕಿಗೆ ಬಂತು. ಈ ಒಳಸಂಚಿನಲ್ಲಿ ಉನ್ನತಾಧಿಕಾರಿಗಳ ಕೈಯಿಯೆಂದು ಹೇಳಲಾಗಿದೆ. ಕಾಶ್ಮೀರೀ ಗುಪ್ತ ಪೋಲೀಸರು ತನಿಖೆ ನಡೆಸುತ್ತಿರುವರು.

ಬೇಕಾಗಿವೆ.

ಗರಿಗಳು:—ಕಾಡುಕೋಳಿಯ ಕುತ್ತಿಗೆಯಲ್ಲಿರುವ ಗರಿಗಳು ಪ್ರತಿಯೊಂದಕ್ಕೆ ರೂ. ೧-೮-೦ಯ ದರದಲ್ಲಿ, ನೀರುಬಾತಿನ ಗರಿಗಳು ಪೌಂಡಿಗೆ ೪ ಆಣೆಯ ದರದಲ್ಲಿ ಬೇಕಾಗಿವೆ.

D. H. THANGAM & Co.,
43, P. V. Koil Street,
Royapuram, Madras.
2-1

For Sale.

New 1951 Model unregistered Chevrolet Deluxe Car available directly from Show Room at Company's price. Delivery will be given in Coorg.

For particulars, write to

P. N. APPANA,
220-Walkeshwar Road,
Malabar Hill, Bombay.

ತಡೆ ನೋಟೀಸು.

ಬಿಳೂರು ಗ್ರಾಮದ ಇಬ್ರಾಹಿಂ ಯಾನೆ ಬಾಷಾನವರ ನಾನ್ನು ಸರ್ವಜನರಿಗೆ ತಿಳಿಯಪಡಿಸುವದೇನೆಂದರೆ.

ನನ್ನ ಅಣ್ಣನ ಮಗ ಅಮೀರ್ ಸಾಬಿಯು ನನ್ನ ಕುಟುಂಬಕ್ಕೆ ಸೇರಿದ ಸಾಗುಭೂಮಿಯನ್ನು ಪರಾಬಾರೆ ನೊಡಲು ಯತ್ನಿಸುತ್ತಿದ್ದಾನೆ ಈ ಸೊತ್ತಿನ ಮೇಲೆ ನನ್ನ ಹಕ್ಕು ಇರುವದರಿಂದಲೂ, ಆ ಸೊತ್ತನ್ನು ಪರಾಬಾರೆ ನಡುವ ಅವಶ್ಯಕತೆ ಇಲ್ಲದುದರಿಂದಲೂ ಯಾರೂ ಇವನ್ನು ಕ್ರಯಕ್ಕಾಗಲೀ ಬೋಗ್ಯಕ್ಕಾಗಲೀ ಪಡೆಯಕೂಡದು. ಹಾಗೆ ಪಡೆದರೆ ಅವರೇ ಮುಂಬರುವ ಕಷ್ಟನಷ್ಟಗಳಿಗೆ ಜವಾಬ್ದಾರರಾಗಿರಬೇಕೆಂದು ಈ ಮೂಲಕ ಎಚ್ಚರಿಸಿದೆ.

ಬಾಶಾ
ಬಿಳೂರು ಗ್ರಾಮ,
ಪೊನ್ನಂಪೇಟೆ.

ಕ್ರಯಕ್ಕೆ ದೊರೆಯುತ್ತೆ !

(ಬಹಳ ಅಚ್ಚುಕಟ್ಟಾದ ಮನೆ)

ಮಡಿಕೇರಿಯಲ್ಲಿ, ಬ್ಯಾಹ್ಮಣರ ಬೀದಿಯ ರಸ್ತೆ ಬಾಜಿನಲ್ಲಿ ಎತ್ತರವಾದ ಪ್ರದೇಶದಲ್ಲಿ ಒಳ್ಳೇ ಗಾಳಿ ಬೆಳಕಿಗೆ ಅನುಕೂಲವಾಗಿರುವ ವತ್ತು ಶುದ್ಧವಾದ ನೀರು ಉಳ್ಳ ಸೆದಂಬಾವಿಯನ್ನೊಳಗೊಂಡಿರುವ ಮಂಗಳೂರು ಹಂಚಿನ ಬೊಷವ ನೆನೂರಂಟಿಕ್ಕಿದೆ. ಕ್ರಯ ರೂಪಾಯಿ 16,000/—

ಹೆಚ್ಚು ವಿಷಯಗಳಿಗೆ ಈ ಕೆಳಗೆ ಕಂಡವರಲ್ಲಿ ವಿಚಾರಿಸಿ, ಅಥವಾ ಬರೆಯಿರಿ.

ಹೆಚ್. ವಿ. ರಾಮಕೃಷ್ಣ,
ಬ್ಯಾಹ್ಮಣರ ಬೀದಿ,
4-3 ಮಡಿಕೇರಿ.

ಓದುಗರ ಓಲೆಗಳು

'ತನ್ನ ಹಿತಕ್ಕಾಗಿ ಹರಸಿಂದೆ'

ಇದೇ ತಾರೀಕು ೧೨ ರ 'ಕೊಡಗು' ಪತ್ರಿಕೆಯ ಪ್ರಾದೇಶಿಕ ವಾರ್ತೆಯಲ್ಲಿ 'ಕಾನೂರು ಆಸ್ಪತ್ರೆಯ ಸಮಸ್ಯೆ' ಎಂಬ ಶೀರ್ಷಿಕೆಯನ್ನು ಓದಿ, ಚಿತ್ತಾಗಿ ಮನವರಿಕೆಯಾಯಿತು. ಆಸ್ಪತ್ರೆಯ ಈ ವಿಷಯದಲ್ಲಿ ಸತ್ಯಾಂಶವಿಲ್ಲವೆಂದು ಹೇಳಬಯಸುತ್ತೇನೆ. ಕಾನೂರು ಆಸ್ಪತ್ರೆಯು ನಾನೊಬ್ಬ ರೋಗಿ. ಪದರು ಆಸ್ಪತ್ರೆಗೆ ವಾರಕ್ಕೆ ಎರಡಾವರ್ತಿ ಬಂಳಿಲಿಪಿಂದ ಬರುವ ಡಾಕ್ಟರ್ ಮಂತ್ರಿಣಿಯವರು, ಕಾವು ಬರುವ ದಾರಿಯಲ್ಲಿ ಇರುವ ರೋಗಿಗಳನ್ನೂ ಆಸ್ಪತ್ರೆಯಲ್ಲಿ ಇರುವ ರೋಗಿಗಳನ್ನೂ ಸಾಯುಂಕಾಲವಾದರೂ ಸಹ ನೋಡಿಕೊಂಡು ತಮ್ಮ ಸೇವೆಯನ್ನು ಸಲ್ಲಿಸಿ, ಸಾಧ್ಯ ಇಲ್ಲದ ರೋಗಕ್ಕೆ ಬೇರೆ ಕಡೆ ದೊಡ್ಡ ಆಸ್ಪತ್ರೆಗಳಿಗೆ ದೋಗುವಂತೆ ಸಲಹೆ ಕೊಟ್ಟ ಕಳ ಹಿಸುತ್ತಾ ಇದ್ದಾರೆ. ಆದರೆ ಆಪರ ಬೇಗಿನಲ್ಲಾ ಯಾ ಜೇಬಿನಲ್ಲಾ ಔಷಧಿ ಬಾಟಲಿಯಿಂದ ತಂದು ಕಾನೂರಲ್ಲಿ ರೋಗಿಗಳಿಗೆ ಪದರುವರೆಬುದು. 'ಕಾಡಿಯುನ ನೀರಿಗೆ ಕೈಹಾಕಿಕೊಂಡು ತಾನು ಕುಡಿಯುವದು ಇಲ್ಲ ಕುಡಿಯುವವನಿಗೆ ಮಾಡುವದು ಇಲ್ಲ' ಎಂಬಂತೆ ಆಗಿದೆ. ತನ್ನ ಕಾಯಿಲೆ ವಾಸಿಯಾಗದಕ್ಕೆ ಬೇರೆಯವರಿಗೆ ಔಷಧವೇ ಸೂಡಬೇಡವೆಂಬಲೂ ಇನ್ನು ಈ ಆಸ್ಪತ್ರೆಗೆ ಡಾಕ್ಟರ್‌ಗಳೇ ಬರಬಾರದೆಂಬಲೂ ಆವರ ಅಭಿಪ್ರಾಯವಾಗಿರುವದೇ? ಒಂದು ಗಂಜಿ ಕ್ಷೀರಕ್ಕೆ ಒಂದು ಹನಿ ವಿಷ ಬೆದ್ದರೆ ಪೂರ್ತಿ ಕ್ಷೀರವೇ ವಿಷವಾಗುತ್ತೆ, ಹಾಗೆ ಒಂದೊಂದು ವ್ಯಕ್ತಿಗಳಿಂದ ಸಮ್ಮ ಗ್ರಾಮಕ್ಕೆ ಅಲ್ಲ, ನಾಡಿಗೆ ಅಲ್ಲ, ಇಡೀದೇಶಕ್ಕೆಹಾನಿಯಾಗುತ್ತಿದೆ. ಕಾನೂರು ಆಸ್ಪತ್ರೆಗೆ ಧಮರ್ಥವಾಗಿ ಹೂವಿನ ಚಟ್ಟಿ ಕೊಟ್ಟ ದಿನವೇ ಅವರು ಹೇಳಿಯುತ್ತಾರೆ–ಇಲ್ಲಿ ನಿತ್ಯ ಆಸ್ಪತ್ರೆ ತೆರೆಯುವದಿಲ್ಲ ನಿತ್ಯ ಹೂವಿಗೆ ನೀರು ಹಾಕುವ ತಾಪತ್ರೆ ಆದಂದ ಬಾಳಿಲೆ ಆಸ್ಪತ್ರೆಗೆ ತೆಗೆದುಕೊಂಡು ಹೋಗುತ್ತೇನೆಂದ .... ಸರ್ವಜನಿಕರ ರೂಪುರೇಷೆ ಕೊಂಡು ಹೋಗಿರುವದರಿಂದ ಅರೋಪಕ್ಕೆ ಎಲ್ಲಿಯೂ ಎಡೆ ಇಲ್ಲ.

'ಆಸ್ಪತ್ರೆಯಲ್ಲಿ ಚಿಕಿತ್ಸೆ
ಹೊಂದಿದ ರೋಗಿ.'

ಕೊಡಗಿನ ಭವಿಷ್ಯ ಜನರ ಕೈಯ್ಯಲ್ಲಿದೆ.

ನಿಜವಾಗಿಯೂ ಕೊಡಗಿನ ಭವಿಷ್ಯದ ವಿಚಾರವಾಗಿ ನಿರ್ಣಯ ಕೊಡುವ ಹಕ್ಕು ಕೊಡಗಿನ ಸಮಸ್ತ ಜನತೆಯದಲ್ಲದೆ ಮೂಂದಾಳುಗಳೆಂದು ಓಡಾಡುವ ಕಾಂಗ್ರೆಸಿಗರದಲ್ಲ. ಕೊಡಗಿನ ಪ್ರತ್ಯೇಕ ಪಕ್ಷವು ಹಿಂದಿನಿಂದಲೂ ಕೂಡ ಕೊಡಗಿನ ಭವಿಷ್ಯದ ಬಗ್ಗೆ ಜನರ ಅಭಿಪ್ರಾಯವು ತೆಗೆಯಬೇಕೆಂದು ವಾದಿಸುತ್ತಿದೆ. ಆದಕ್ಕಾಗಿ ವಿಶ್ವಪ್ರಯತ್ನ ಪಟ್ಟಿದೆ. ಇಂದೂ ಕೂಡ ಅವರು ಈ ಪ್ರಶ್ನೆಯನ್ನು ಜನರ ಮುಂದೆ ಈ ಚುನಾವಣೆಯಲ್ಲಿ ಇಡಬೇಕೆಂದು ವಾದಿಸುತ್ತಿದ್ದಾರೆ. ಅವರ ಈ ಪ್ರಯತ್ನಕ್ಕೆ ದೇಶವು ಅವರಿಗೆ ಚಿರಋಣಿಯಾಗಿದೆ ಕೊಡಗಿನ ಜನತೆಯನ್ನು ಕೇಳದೆ ಕೊಡಗನ್ನು ಬೇರೆ ರಾಜ್ಯಕ್ಕೆ ವಿಲೀನಗೊಳಿಸಬೇಕೆಂದು ಈಗ ಕಾಂಗ್ರೆಸು ಎಂದು ಹೇಳುವ ಹಲವರು ಪ್ರಯತ್ನಿಸಿದರು. ಕೊಡಗಿನ ಜನರು ಇಂದು ಚಿನ್ನವಣಿ ಹೊಂದಿ ಬರುವ ಪ್ರತಿನಿಧಿಗಳೇ. ಮುಂದೆ ಕೊಡಗಿನ ಭವಿಷ್ಯವನ್ನು ನಿರ್ಣಯಿಸುವರಾದ್ದರಿಂದ ಅವರನ್ನು ಆರಿಸುವಾಗ ಭವಿಷ್ಯದ ಬಗ್ಗೆ ಅವರ ಅಭಿಪ್ರಾಯವೇನೆಂದು ತಿಳಿದೇ ಮತದಾರನು ತನ್ನ ಓಟು ಕೊಡಬೇಕಲ್ಲದೆ ಸಂಯೋಜನವಾದಿಗಳು ಇಂದು ತಲೆದಿರುವ ವೇಷಕ್ಕೂ ಅವರ ರಾಭರಿತವಾದಭಾಷಣಕ್ಕೂ ಮರುಳಾಗಿ ಅವರಿಗೆ ಮತ ವಿತ್ತರೆ ಕೊಡಗಿಗೆ ಉಳಿಗವಿಲ್ಲ. ಕಳೆದ ಪಂಕ್ತಿಗ್ರಹಣದಲ್ಲಿ ಈಸಂಯೋಜನವಾದಿ ಕಾಂಗ್ರೆಸ್ಸಿಗರು ದೇಶದ ಜನರಿಗೆ ಕೊಟ್ಟ ಟೋಧನೆಗಳು ಹೇಗೆ? ಪವಿತ್ರ ದೇಶವನ್ನು ನಾವೇ ಆಳುವ. ನಮ್ಮ ಕಾಲಲ್ಲಿ ನಾವು ನಿಲ್ಲುವ, ಪರರ ಕಾಲಡಿಯಲ್ಲಿ ನಿಲ್ಲುವದು ನಮಗೆ ಯೋಗ್ಯವಲ್ಲ ನಾವು ವೀರರಿದ್ದೇವೆ, ಧೀರರಿದ್ದೇವೆ. ಎಂದು ಹೇಳಿದರು. ಇಂದು ದೇಶವನ್ನು ಸಂಯೋಜನೆ ಮಾಡಿವಾ ಎನ್ನುತ್ತಿದ್ದಾರೆ. ಆದೂ ನಾಲಿಗೆ ನಿನ್ನೆಯ ವರೆಗೆ ಕೊಡಗು ಸಂಯೋಜನೆಯಾಗಬೇಕೆಂದು ಪ್ರಯತ್ನಿಸುತ್ತಿದ್ದಂತೆ ಜನರು ಇಂದು ತಾವೂ ಪ್ರತ್ಯೇಕವಾದಿಗಳೆಂದೂ ಈ ಚುನಾವಣೆಯಲ್ಲಿ ಕೊಡಗಿನ ಭವಿಷ್ಯದ ಪ್ರಶ್ನೆ ಬರುವದಿಲ್ಲವೆಂದೂ ವಾದಿಸುತ್ತಿದ್ದರೆ ಅದು ಕೇವಲ ಅಧಿಕಾರಕ್ಕೆ ಏರುವ ಆಸೆಯಿಂದ ಎಂದು ಹೇಳಿದರೆ ತಪ್ಪಲ್ಲ. ಆದ್ದರಿಂದ ಮತದಾರರು ಹುಂಬಾ ಎಚ್ಚರಿಕೆಯಿಂದ ವರ್ತಿಸಬೇಕು. ಕೊಡಗನ್ನು ಪ್ರತ್ಯೇಕ ವಿಧಿಸಿ, ಆ ಕಾವೇರಿಮಾತೆಯ ಕೀರ್ತಿಯನ್ನು ಉಳಿಸಲಿಕ್ಕೆ ಸ್ವಯತ್ತಿಸುವ ದೇಶದ ಪ್ರತ್ಯೇಕವಾದಿಗಳಿಗೆ ನಮ್ಮ ಮತದಾನವನ್ನು ಕೊಡುವ.

ಬಿ. ಡಿ. ಅಚ್ಚಯ್ಯ.

ಓಟರರಿಗೆ ಎಚ್ಚರಿಕೆ

ಕೊಡಗು ಪವಿತ್ರ ಕಾವೇರಿಯ ದೇಶ ಈ ದೇಶದಲ್ಲಿ ಪ್ರತ್ಯೇಕವಾದ ಸಂಸ್ಕೃತಿ ನೀತಿಗಳಿವೆ. ಒಂದು ದೇಶದ ಧರ್ಮವೆ ಪ್ರತಿಮನೆಯಲ್ಲಿವೆ. ಇಂಥಾ ದೇಶವನ್ನು ಬೇರೆ ಪ್ರಾಂತದೊಡನೆ ಸೇರಿಸುವ ಮಾತು ಖಂಡಿತವಾಗಿಯೂ ಕಾವೇರಿ ನಾತೆಗೆ ದ್ರೋಹ ಬಗೆದಂತೆ. ಆದ್ದರಿಂದ ಓಟರರು ನಿರ್ದಾಕ್ಷಿಣ್ಯವಾಗಿ ಪ್ರತ್ಯೇಕವಾದಿಗಳಿಗೆ ಓಟು ಕೊಡಬೇಕು. ಸಂಯೋಜನಾ ಪಕ್ಷದವರಿಗೆ ಸೊಡವೆ ಪ್ರತಿ ಓಟೂ ಕೂಡ ದೇಶಕ್ಕೆ ಆಪಾಯವನ್ನು ತರುವದಲ್ಲದೆ ಕಾವೇರಿ ಸುತೆಯ ಪವಿತ್ರತೆಯನ್ನು ಹಾಳು ಮಾಡುವದು. ಆದ್ದರಿಂದ ಸ್ವಸ್ಥ ಓಟರೂ ಕೊಡಗನ್ನು ಉಳಿಸುವ ವಿಚಾರಕ್ಕೆ ತನ್ನ ಓಟನ್ನು ವಿನಿಯೋಗಿಸಲಿ.

ಎನ್. ಕೆ. ಮಂಡುವಮ್ಮಯ್ಯ

ಶ್ರೀ ರಾಮಕೃಷ್ಣ ಆಶ್ರಮ ಪೊನ್ನಂಪೇಟೆ

ಶ್ರೀ ರಾಮಕೃಷ್ಣ ಧರ್ಮಾದಾಯಕ ಆಸ್ಪತ್ರೆಯೊಂದು ಇರುವುದು ಈನಾಡಿನ ಜನರ ಒಂದು ಧಾರ್ಮ್ಯವೇ ಸರಿ. ಆದರ ಅದರಲ್ಲಿ ಶಂಯೂದ ಪ್ರತಿ ಫಲವನ್ನು ಹೆಚ್ಚಿನ ಜನರು ಹೊಂದಲಾರದೆಂಬುದನ್ನು ಈಗ ತಾನೇ ನಾನು ತಿಳಿದಿದ್ದು. ಕಾರಣವಾವುದೂ ಇಷ್ಟೇ ಹೆಚ್ಚಿನ ಪದವೀಧರರನ್ನು ಒಬ್ಬ ಡಾಕ್ಟರನ್ನಾಗಿಸೆಂಬ ನಿಯಮ ಕೋಸ ಆದರೆ ಈ ಡಾಕ್ಟರವರು ಉದಾರತ್ವವಿಂದ ವೇತನವಿಲ್ಲದೆ ಕೆಲಸ ನಡೆಯಿಸುವುದಿಲ್ಲವಷ್ಟೆ! ಅಂದ ಮೇಲೆ ಇಷ್ಟೇ ಪದವೀಧರರಾದ ಇತರ ಡಾಕ್ಟರವರು ಈಗ ಕೊಡುತ್ತಿರುವ ವೇತನದಲ್ಲೇ ಕೆಲಸ ನಡೆಸಲು ಒಗುವುದಿಲ್ಲವೇ? ಬಂಗಾಳಿ ಮತ್ತು ಇಂಗ್ಲಿಷ್ ಭಾಷೆ ಕಲಿತು ಈ ನಾಡಿನ ಹೆಚ್ಚಿನ ಜನರ ಕನ್ನಡವ ತ್ಯಜಿಸಿ ಕೊಡಗು ಭಾಷೆ ಕಲಿಯದಿರುವ ಈ ಡಾಕ್ಟರರಿಂದ ಹೆಚ್ಚು ಸಹಾಯವಿಲ್ಲ. ಇದು ವ್ಯಕ್ತಿ ಮತ್ಸರದಿಂದ ಬರೆದುದಲ್ಲ. ಬದಲು ರೋಗಿಯು ಕಾಯಿಲೆಯನ್ನು ಪೂರ್ತಿ ಹಿಡಿದ ಕೊಡೇ ಕೂಡಿಸಿ ಕೊಳ್ಳಿಂದು, ಇಲ್ಲಿ ಅವರ ಭಾಷೆಯನ್ನು ಇಂಗ್ಲಿಷಿನಲ್ಲಿ ತರ್ಜಮೆ ಮಾಡಿ ಡಾಕ್ಟರನಿಗೆ ಹೇಳಿ ಡಾಕ್ಟರನು ಪರೀಕ್ಷೆ ಮಾಡುವಾಗ ಏನೊಂದು ಹೇಳಲಿರಯದ ಆ ರೋಗಿಯ ಸ್ಥಿತಿ ಅರಿವಾಗುವದು ಕಷ್ಟವಲ್ಲವೇ? ಬದಲು ಇಲ್ಲಿಯ ಭಾಷೆ ಅರಿತ ಒಬ್ಬನನ್ನು ಇಟ್ಟು ಕೊಂಡಲ್ಲೇ ಅದರ ಹಿತವಲ್ಲವೇ? 'P. S. D.'

ಇದಾವ ಸೇವೆ?

ಸೋಮವಾರಪೇಟೆ ನೋಟಿಫೈಡ್ ಏರಿಯಾದ ಮೆಂಬರುಗಳಲ್ಲಿ ಒಬ್ಬರು ಚುನಾವಣೆಗೆ ನಿಂತಾಗ ತಾನು ಜನರ ಉದ್ಧಾರಕ್ಕಾಗಿ ನಿಂತಿದ್ದೇನೆ. ಬಡಜನರ ಸೇವೆಯೇ ನನ್ನ ಗುರಿ ಎಂದು ಹೇಳುತ್ತಾ ಓಟನ್ನು ಪಡೆದು ಸದಸ್ಯರಾಗಿ ಆರಿಸಲ್ಪಟ್ಟರು. ಈಗ ಅವರೇ ಸದಸ್ಯಪಕ್ಷಕ್ಕೆ ರಾಜೀನಾಮೆ ಇತ್ತು ಅದೇ ಆಫೀನಿನ ಗುಮಾಸ್ತರಾಗುವರೆಂಬ ವರ್ತಮಾನ ವಿದೆ. ಇದಾವ ಸೇವೆ? 'ಪಟಣಿ'

Representaion of the people (Conduct of Elections and Election Petitions) Rules-

೧೯೫೧ರ ನೇಯ ನಿಬಂಧನೆಗನುಸಾರವಾಗಿ ನೋಟೀಸು.

ಕೊಡಗು ವಿಧಾನ-ಸಭೆಯ (Coorg Legislative Assembly ಉತ್ತರಕೊಡಗು ತಾಲೋಕಿನ ಎಂಟು ಜುನಾವಣೆ ಸ್ಥಾನಗಳಿಂದ 1952ನೆಯ ಇಸವಿ ಫೆಬ್ರವರಿ ೯ ನೆಯ ತಾರೀಕಿನ ದಿನ ಅಥವಾ ಅದಕ್ಕೆ ಮುಂಚಿತವಾಗಿ ಹೆತ್ತು ಮಂದಿ ಸದಸ್ಯರುಗಳನ್ನು ಜುನಾಯಿಸಬೇಕೆಂದು ಕೋರಲ್ಪಟ್ಟಿರುವುದರಿಂದ, ಮೇಲೆ ಸೂಚಿತವಾದ ಜುನಾವಣೆ ಸ್ಥಾನದ ರಿಟರ್ನಿಂಗ್ ಆಫೀಸರಾದ ಶ್ರೀ ಜಿ. ಸಿ. ಕಾರ್ಯಪ್ಪಎಂಬ ಹೆಸರಿನವನಾದ ನಾನು ಈ ಕೆಳಗೆ ಕಂಡಂತೆ ಈ ಮೂಲಕ ಸಮಸ್ತ ಜನರ ತಿಳುವಳಿಕೆಗಾಗಿ ಈ ಕೆಳಗಿನ ಪಬ್ಲಿಕ್ ನೊಟೀಸ್ ಕೊಟ್ಟಿದ್ದೇನೆ:-

ಪಬ್ಲಿಕ್ ನೋಟೀಸು.

(i) ಜುನಾಯಿಸಲ್ಪಡತಕ್ಕವರ ಸಂಖ್ಯೆಯು ಉತ್ತರ ಕೊಡಗಿನ ಎಂಟು ಚುನಾವಣಾ ಕ್ಷೇತ್ರಗಳಿಂದ ಈ ಕೆಳಗೆ ನಮೂದಿಸಿದ ರೀತಿ ಇದೆ.

ಜುನಾವಣಾ ಕ್ಷೇತ್ರ.	ಒಟ್ಟು ಸ್ಥಳಗಳು	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ
ಶನಿವಾರಸಂತೆ	2	1	—
ಸೋಮವಾರಪೇಟೆ (North)	1	—	—
ಸೋಮವಾರಪೇಟೆ (South)	1	—	—
ಶ್ರೇಜರ್‌ಪೇಟೆ	1	—	—
ಸುಂಟಿಕೊಪ್ಪ	2	1	—
ಮಡಿಕೇರಿ ಟೌನ್	1	—	—
ಮೂರ್ನಾಡು	1	—	—
ಮಡಿಕೇರಿನಾಡು	1	—	—

(ii) "ನಾಮಿನೇಷನ್" ಕಾಗದಗಳನ್ನು ಈ ಕೆಳಗೆ ರುಜು ಮಾಡಿರಪಕ್ಕವರಿಗೆ ಸೋಮವಾರಪೇಟೆಯಲ್ಲಿರುವ ಅವರ ಆಫೀಸಿನಲ್ಲಿ ಕೊಡಬಹುದು. ಅಥವಾ ಅವರು ಅವುಗಳನ್ನು ಸ್ವೀಕರಿಸುವುದು ಅನಿವಾರ್ಯವಾಗಿ ಸಾಧ್ಯವಾಗದೆ ಹೋದರೆ ಅವುಗಳನ್ನು ಉತ್ತರಕೊಡಗು ತಾಲೋಕಿನ ಅಸಿಸ್ಟೆಂಟ್ ರಿಟರ್ನಿಂಗ್ ಆಫೀಸರಿಗೆ ಕೊಡಬಹುದು. ಅವುಗಳನ್ನು 1951 ನೆಯ ಇಸವಿ ನವೆಂಬರ್ 4 ನೇಯ ತಾರೀಕಿನ ದಿನ ಅಥವಾ ಅನಂತರ ಸುಂಚಿತವಾಗಿ ಬೆಳಿಗ್ಗೆ 11 ಗಂಟೆಯಿಂದ ಅನಂತರ ಮಧ್ಯಾಹ್ನ 3 ಗಂಟೆಯ ಒಳಗಾಗಿ ಕೊಡಬೇಕು

(iii) "ನಾಮಿನೇಷನ್" ಕಾಗದದ ನಮೂನೆಗಳನ್ನು ಮೇಲೆ ನಮೂದಾಗಿರತಕ್ಕ ವರ ಆಫೀಸುಗಳಲ್ಲಿ 26-11-1951 ನೆಯ ತಾರೀಕಿನಿಂದ 3-12-1951 ರ ವರೆಗೆ 11 ಗಂಟೆಯಿಂದ 5-30 ಗಂಟೆಯ ವರೆಗೆ ಯಾವಾಗ ಬೇಕಾದರೂ ಪಡೆಯಬಹುದು.

(iv) "ನಾಮಿನೇಷನ್" ಕಾಗದಗಳನ್ನು 8-12-1951 ನೆಯ ತಾರೀಕಿನ ದಿನ ಬೆಳಿಗ್ಗೆ ಹತ್ತು ಗಂಟೆಗೆ ಸೋಮವಾರಪೇಟೆ ತಾಲೋಕು ಆಫೀಸಿನಲ್ಲಿ ಪರಿಶೀಲನೆಗೆ ತೆಗೆದುಕೊಳ್ಳಲಾಗುವುದು.

(v) ಎಷ್ಟು ಜನ ಸದಸ್ಯರುಗಳು ಚುನಾಯಿಸಲ್ಪಡಬೇಕೋ ಅಷ್ಟಕ್ಕಿಂತಲೂ ಹೆಚ್ಚು ಮಂದಿ ಉಮೇದ್ವಾರರಿಮ್ಮೆ ಸ್ಪರ್ಧಿಸುವ ವಕ್ಕಪಕ್ಷದಲ್ಲಿ ಚುನಾವಣೆಯಾದರು ಓಟು ಕೊಡುವ ತಾರೀಕು ಅಥವಾ ತಾರೀಕುಗಳನ್ನೂ ಮತ್ತು ಅವರು ಎಷ್ಟು ಗಂಟೆಯಿಂದ ಎಷ್ಟು ಗಂಟೆಯ ವರೆಗೆ ಓಟು ಕೊಡುಬಹುದೆಂಬುವುದನ್ನೂ ಪ್ರತ್ಯೇಕವಾಗಿ ತಿಳಿಸಲಾಗುವುದು.

ತಾರೀಕು 26-11-1951.

ಜಿ. ಸಿ. ಕಾರ್ಯಪ್ಪ,
ರಿಟರ್ನಿಂಗ್ ಆಫೀಸರ್.

ಉತ್ತರ ಕೊಡಗು ತಾಲೋಕು, ಸೋಮವಾರಪೇಟೆ.

ಬಿಹಾರದಲ್ಲಿ ೩೦೦೦೦ ನಾಮಪತ್ರಗಳು.

ಬಿಹಾರದಲ್ಲಿ ಲೋಕಸಭೆಯ ೧೫ ಸ್ಥಳಗಳಿಗೂ ಶಾಸನ ಸಭೆಯ ೩೩೦ ಸ್ಥಳಗಳಿಗೂ ೩೦೦೦೦ ನಾಮಪತ್ರಗಳು ಸಲ್ಲಿಸಲ್ಪಟ್ಟಿವೆಯೆಂದು ಅಂದಾಜುಮಾಡಲಾಗಿದೆ. ೧೩ ರಾಜಕೀಯ ಪಕ್ಷಗಳು ನಾಮಪತ್ರ ಸಲ್ಲಿಸಿವೆ.

ಹೈದರಾಬಾದಿನಲ್ಲಿ.

ಹೈದ್ರಾಬಾದ ರಾಜ್ಯದ ಶಾಸನ ಸಭೆಯ ೧೬೦ ಜಾಗೆಗಳಿಗೆ ೫೫೫ ಉಮೇದುವಾರಿಕೆ ನಾಮಪತ್ರಗಳು ಸ್ವೀಕೃತವಾಗಿವೆ. ಈ ಉಮೇದುವಾರರು ೧೧ ವಿವಿಧ ರಾಜಕೀಯ ಪಕ್ಷಕ್ಕೆ ಸೇರಿದವರು. ಈಗಾಗಲೇ ನಾಲ್ವರು ಕಾಂಗ್ರೆಸ್ ಉಮೇದುವಾರರು ಅವಿರೋಧಿಯಾಗಿ ಆಯಿಬಂದಿದ್ದಾರೆ.

ಒಟ್ಟು ಸಲ್ಲಿಸಿದ ನಾಮಪತ್ರಗಳು ೧೬೫ ಜಾಗೆಗಳಿಗೆ ೬೫೮. ಇದರಲ್ಲಿ ೪೩ ಅರ್ಜಿಗಳು ನಿರಾಕರಿಸಲ್ಪಟ್ಟವು. ೧೫೬ ಹಿಂತೆಗೆದುಕೊಳ್ಳಲ್ಪಟ್ಟವು. ಸ್ಪರ್ಧಿಸುವ ಪಕ್ಷಗಳ ಉಮೇದುವಾರರ ಸಂಖ್ಯೆಯು ಈ ಕೆಳಗಿನಂತಿರುವುದು. ಕಾಂಗ್ರೆಸ್ ೧೬೯, ಸಮಾಜವಾದಿಕಿಸಾ, ಜನಕ್ರಾ ಪ್ರಜಾ ಸತ್ತ ಪಕ್ಷ ೭೫, ದಲಿತ ವರ್ಗದ ಫೆಡರೇಷನ್ ೨೦, ಆಂ ಪ್ರಜಾಪಕ್ಷ, ರಾಮರಾಜ್ಯ ಪರಿಷತ್ ೪೦, ಲೀಗ್ ಆಫ್ ಸೋಷಾಲಿಸ್ಟರು ೩, ದಲಿತ ಜನಸಂಘ ೩, ಹಿಂದೂ ಮಹಾಸಭೆ ಒಂದು, ಸ್ವತಂತ್ರ ೧೫೫ ಸಂಯುಕ್ತ ದಲಿತ ವರ್ಗದ ಫೆಡರೇಷನ್ ೧.

ಶ್ರೀ. ನೆಹರೂರ ವಿರುದ್ಧ ಇವರ ಸ್ಪರ್ಧೆ.

ಶ್ರೀ. ನೆಹರೂ ಅವರ ವಿರುದ್ಧ ಅಲಹಾಬಾದ ಮತದಾರ ಕ್ಷೇತ್ರದಲ್ಲಿ ಒಬ್ಬ ಹಿಂದು ಮಹಾಸಭೆಯವರೂ, ಕಾಂತಿಕಾರಿ ಸಮಾಜವಾದಿ ಪಕ್ಷದವರೊಬ್ಬರೂ, ಮೂವರು ಸ್ವತಂತ್ರರೂ ಸ್ಪರ್ಧಿಸುವರು. ರಾಮಪುರ ಮತದಾರ ಕ್ಷೇತ್ರದಲ್ಲಿ ಮಾಜಾನಾ ಅಬ್ದುಲ್ ಕಲಂ ಆಜಾದರ ವಿರುದ್ಧ ಹಿಂದು ಮಹಾಸಭೆಯ ಪ್ರಧಾನ ಕಾರ್ಯದರ್ಶಿ ಶ್ರೀ ಬಿಶನ್ ಚಂದ್ರಸೇನರು ನಿಲ್ಲುವರು.

ಕೇಂದ್ರ ಮಂತ್ರಿ ಶ್ರೀ. ಶ್ರೀಪ್ರಕಾಶರ ವಿರುದ್ಧ ಕಿಸಾನ ಮಜದೂರ ಪ್ರಜಾಪಕ್ಷದ ಶ್ರೀ ಕೆ. ಕೆ. ಭಟ್ಟಾಚಾರ್ಯ, ಇವರು ಸ್ವತಂತ್ರರು ಹಾಗೂ ರಾಮರಾಜ್ಯ ಪರಿಷತ್ತಿನ ಒಬ್ಬರು ನಿಂತಿದ್ದಾರೆ.

ಫೈಜಾಬಾದ ಜಿಲ್ಲೆಯ ವಾಯವ್ಯ ಮತದಾರ ಕ್ಷೇತ್ರದಲ್ಲಿ ಕಾಂಗ್ರೆಸಿನ ಶ್ರೀ. ಅಲ್ಲನಜಯ:ವರನ್ನು ಆಚಾರ್ಯ ಜೆ. ಬಿ. ಕೃಪಲಾನಿಯವರ ವಿರುದ್ಧ ನಿಲ್ಲಿಸಿದೆ.

ಕಾಂಗ್ರೆಸಿನ ಮಿ. ರಫಿ ಅಹ್ಮದ್ ಕಿಡ್ವಾಯಿಯವರ ವಿರುದ್ಧ ಜನಸಂಘದ ಒಬ್ಬಳು ಹಾಗೂ ಒಬ್ಬಳು ಸ್ವತಂತ್ರರು ನಿಂತಿದ್ದಾರೆ.

ಕಾಂಗ್ರೆಸಿನ ಶ್ರೀ ಕೃಷ್ಣದತ್ತ ವಾಲಿಯವರ ವಿರುದ್ಧ ಪಂಡಿತ ಹೃದಯನಾಥ ಕುಂಜರು ಅವರು ನಿಂತಿದ್ದಾರೆ. ಮೂವರು ಸ್ವತಂತ್ರ ಹುರಿಯಾಳುಗಳು ಮಂತ್ರಿ ಶ್ರೀ. ಮಹವೀರ ತ್ಯಾಗಿಯವರನ್ನು ಪ್ರತಿ ಸ್ಪರ್ಧಿಸುವರು.

ಚುನಾವಣಾ ವಾರ್ತೆಗಳು.

ಭಾರತದ ಚುನಾವಣೆಯ ವಿಶೇಷ ಮಾಹಿತಿಗಳು

ಮತದಾರರ ಸಂಖ್ಯೆ	೧೭ ಕೋಟಿ ೭೬ ಸಾವಿರ
ಮತಗಟ್ಟೆಗಳು	೨ ಲಕ್ಷ ೩೪ ಸಾವಿರ
ಪ್ರತಿಯೊಂದು ಮತಗಟ್ಟೆಗೆ	ಒರ್ವ ಪ್ರಿಸಾಯಿಡಿಂಗ ಆಫಿಸರ ೩ ಕಾರಕೂನರೂ ೪ ಪೋಲೀಸರು
ಪ್ರಿಸಾಯಿಡಿಂಗ ಅಧಿಕಾರಿಗಳು	೫೬,೦೦೦
ಕಾರಕೂನರು	೨,೪೦,೦೦೦
ಪೋಲೀಸರು	೨,೭೦,೦೦೦
ಒಟ್ಟು ವೆಚ್ಚ ಸು	೧೦ ಕೋಟಿ ರೂ. ಗಳು
ಒಟ್ಟು ಸ್ಥಳಗಳು	೪೪೧೩
ಮತದಾರರ ಕ್ಷೇತ್ರಗಳು	೩೫೫

ಬೊಂಬಾಯಿ.

ಬೊಂಬಾಯಿ ರಾಜ್ಯದಲ್ಲಿ ಚು.ನಾವಣೆಗೆ ನಾಮಪತ್ರಗಳನ್ನು ಕೊಡುವ ಕೊನೆಯ ದಿನ ತಾ. ೩೪ ರ ಮಧ್ಯಾಹ್ನ ಮೂರು ಘಂಟೆಯ ಹೊತ್ತಿನ ವರೆಗೆ ಮುಂಬೈರಾಜ್ಯದ ಲೋಕಸಭೆಯ ೪೫ ಜಾಗೆಗಳಿಗೂ ಶಾಸನ ಸಭೆಯ ೩೧೫ ಜಾಗೆಗಳಿಗೂ ಒಟ್ಟು ೧೫೦೦ ನಾಮಪತ್ರಗಳು ಬಂದಿವೆ ಎಂದು ಅಂದಾಜು ಮಾಡಲಾಗಿದೆ. ಡಿವ್ಯ ನಾಮಪತ್ರಗಳನ್ನು ಹೊಂತುಪಡಿಸಿದರೂ ೧೨೦೦ ಜನ ಉಮೇದುವಾರರು ಚು ನಾವಣೆಯ ರಂಗಕ್ಕೆ ಇಳಿಯಬಹುದೆಂದು ನಿರೀಕ್ಷಿಸಿದೆ.

ಮದ್ರಾಸ್.

ಮದ್ರಾಸ್ ರಾಜ್ಯದ ತಂಬೆಲ್ಲ ಮಂಬರುವ ಚು.ನಾವಣೆಗಳಿಗಾಗಿ ೩೬೯೦ ನೇ ವೇಲ್ಪಟ್ಟು ನಾಮಪತ್ರಗಳು ಸಲ್ಲಿಸಲ್ಪಟ್ಟಿವೆಯೆಂದು ಸರಕಾರಕ್ಕೆ ಬಂದ ಸುದ್ದಿಯಿಂದ ತಿಳಿದಿದೆ. ಚು.ನಾವಣೆಗಳಲ್ಲಿ ೧೪ ಪಕ್ಷಗಳು ಭಾಗವಹಿಸುವವು. ಆದರೆ ಕಾಂಗ್ರೆಸ್ಸಿನ ವಿರುದ್ಧ ಹೋರಾಡುವಂಥಾ ಏಟು ಖ್ಯರಾರೆಂದರೆ ಕವ್ಯೂನಿಸ್ಟರು, ಸಮಾಜವಾದಿಗಳು, ಕಿಸಾನ ಮಜದೂರ ಪ್ರಜಾಪಕ್ಷದವರು ಹಾಗೂ ಸ್ವತಂತ್ರರು. ಈ ರಾಜ್ಯದಲ್ಲಿ ೧೩೫ ಕಾಯ್ದಿಟ್ಟ ಸ್ಥಳಗಳನ್ನೊಳಗೊಂಡು ಪಾರ್ಲಿಮೆಂಟಿನ ೭೫ ಸ್ಥಳಗಳಿವೆ. ಇದು ವರೆಗೆ ೭೦ ಮತದಾರ ಕ್ಷೇತ್ರಗಳಿಗೆ ೩೫ ಜನರು ಸ್ಪರ್ಧಿಸುವರು. ಚು ನಾವಣೆಗಳಲ್ಲಿ ೧೨ ಅಖಿಲ ಭಾರತ ಪಕ್ಷಗಳೂ ೬ ಪ್ರಾದೇಶಿಕ ಪಕ್ಷಗಳು ಭಾಗವಹಿಸಿವೆ.

ಡಾ॥ ಭಾರ್ಗವರು ಕಿಸಾನ ಮಜ್ದೂರ ಪ್ರಜಾಪಕ್ಷಕ್ಕೆ?

ಇತ್ತೀಚೆಗೆ ಕಾಂಗ್ರೆಸಿನ ಸಂಬಂಧ ಕಡಿದುಕೊಂಡ ಡಾ. ಗೋಪಿಚಂದ ಭಾರ್ಗವರವರು ಕಿಸಾನ ಮಜದೂರ ಪ್ರಜಾಪಕ್ಷಕ್ಕೆ ಸೇರುವರೆಂದು ತಿಳಿದು ಬಂದಿದೆ. ಈ ಬಗ್ಗೆ ಡಾ ಭಾರ್ಗವರವರು ಕೂಡಲೇ ಪ್ರತಿಜ್ಞಾಪೂರ್ವಕವಾಗಿ ಘೋಷಿಸುವ ನಿರೀಕ್ಷೆಯಿದೆ. ಆ ಪಕ್ಷ ಸೇರುವದರ ಬಗ್ಗೆ ವಿವರಗಳನ್ನು ಪೂರ್ತಿಗೊಳಿಸಲು ಕಿಸಾನ ಮಜದೂರ ಪ್ರಜಾಪಕ್ಷದ ಪ್ರಧಾನರನ್ನು ಕಾಣಲು ಡಾ ಭಾರ್ಗವರು ದೆಲ್ಲಿಗೆ ತೆರಳಿದರು.

ಉತ್ತರ ಪ್ರದೇಶ.

ಉತ್ತರ ಪ್ರದೇಶದಲ್ಲಿ ಒಂದು ಸಾವಿರ ನಾಮಪತ್ರಗಳು ಸಲ್ಲಿಸಲ್ಪಟ್ಟಿವೆ. ಇದು ವರೆಗೆ ಲೋಕಸಭೆ ಮತ್ತು ಶಾಸನ ಸಭೆಗಳಿಗೆ ೧೫೦೦೦ ನಾಮಪತ್ರಗಳು ಒಂದಿರಬಹುದು.

ರಾಮಪುರ ಜಿಲ್ಲೆಯಿಂದ ಮೌಲಾನಾ ಅಜಾದರು ಲೋಕಸಭೆಗೆ ನಾಮಪತ್ರವನ್ನು ಸಲ್ಲಿಸಿದರು. ಬಿಷನ್‌ಚಂದ್ರ ಸೇಟ್ (ಹಿಂದೂ ಕಾರ್ಯಾಭಿ) ಯು ಪ್ರಧಾನ ಕಾರ್ಯದರ್ಶಿಯವರು ಇವರಿಗೆ ಪ್ರತಿ ಸ್ಪರ್ಧಿಯಾಗಿ ನಿಂತಿರುವರು.

ಲಕ್ನೋದಲ್ಲಿ ವಿಜಯಲಕ್ಷ್ಮಿ ಪಂಡಿತರು ಲೋಕಸಭೆಗೆ ತಮ್ಮ ನಾಮಪತ್ರವನ್ನು ಸಲ್ಲಿಸಿದ್ದರು. ಇದೇ ಮತಕ್ಷೇತ್ರದಿಂದ ವಿಜ. ನಾಥುರಾಮ್‌ಗೋಡ್ಸೆ ಸ್ವತಂತ್ರ ಉಮೇದುವಾರರಾಗಿ ನಾಮಪತ್ರ ಸಲ್ಲಿಸಿರುವರು. ತೆಹರಿಗರ್‌ವಾಲ ವಹರಾಜರು ಲೋಕಸಭೆಗೆ ತಮ್ಮ ನಾಮಪತ್ರವನ್ನು ತ್ತಿರುವ.

Representation of the people (Conduct of Elections and Election Petitions) Rules.

೧೯೫೧ ರ ಸೆನೇ ನಿಬಂಧನೆಗನುಸಾರವಾಗಿ ನೋಟಿಸ್.

ಕೊಡಗು ವಿಧಾನ-ಸಭೆಯ (Coorg Legislative Assembly) ದಕ್ಷಿಣಕೊಡಗು ತಾಲೋಕಿನ ಹತ್ತು ಚುನಾವಣೆ ಸ್ಥಾನಗಳಿಂದ 1952ನೇಯ ಇಸವಿ ಫೆಬ್ರವರಿ 5 ನೆಯ ತಾರೀಕಿನ ದಿನ ಅಥವಾ ಅದಕ್ಕೆ ಮುಂಚಿತವಾಗಿ 14 ಮಂದಿ ಸದಸ್ಯರುಗಳನ್ನು ಚುನಾಯಿಸಬೇಕೆಂದು ಕೋರಲ್ಪಟ್ಟಿರುವುದರಿಂದ, ಮೇಲೆ ಸೂಚಿತವಾದ ಚುನಾವಣೆಸ್ಥಾನದ ರಿಟರ್ನಿಂಗ್ ಆಫೀಸರಾದ ಶ್ರೀ ಬಿ. ಬಿ. ಅಪ್ಪಯ್ಯ ಎಂಬ ಹೆಸರಿನವನಾದ ನಾನು ಈ ಕೆಳಗೆ ಕಂಡಂತೆ ಈ ಮೂಲಕ ಸಮಸ್ತ ಜನಗಳ ತಿಳುವಳಿಕೆಗಾಗಿ ಈ ಕೆಳಗಿನ ಪಬ್ಲಿಕ್ ನೋಟೀಸನ್ನು ಕೊಟ್ಟಿದ್ದೇನೆ:-

ಪಬ್ಲಿಕ್ ನೋಟೀಸ್.

(i) ಚುನಾಯಿಸತಕ್ಕವರ ಸಂಖ್ಯೆಯು ದಕ್ಷಿಣ ಕೊಡಗು ತಾಲೋಕಿನ ಹತ್ತು ಚುನಾವಣಾ ಕ್ಷೇತ್ರಗಳಾಗಿ ಈ ರೀತಿ ನಿಮಾಡಿಸಲಾಗಿದೆ.

ಚುನಾವಣಾ ಕ್ಷೇತ್ರ	ಒಟ್ಟು ಸ್ಥಳಗಳು	ಶೆಡ್ಯೂಲ್ಡ್ ಜಾತಿ	ಶೆಡ್ಯೂಲ್ಡ್ ಪಂಗಡ
ಶ್ರೀಮಂಗಲ	2	—	1
ಹುದಿಕೇರಿ	1	—	—
ಪೊನ್ನಂಪೇಟೆ	2	—	1
ಬೆಟ್ಟಗೇರಿನಾಡು	1	—	—
ವೀರರಾಜಪೇಟೆ ಟೌನ್	1	—	—
ವೀರರಾಜಪೇಟೆ ನಾಡು	2	1	—
ಅಮ್ಮತ್ತಿ	1	—	—
ಸಿದ್ದಾಪುರ	2	—	1
ನಾಪೋಕ್ಲು	1	—	—
ಭಾಗಮಂಡಲ	1	—	—

(ii) "ನಾಮಿನೇಶನ್" ಕಾಗದಗಳನ್ನು ಈ ಕೆಳಗೆ ರುಜು ಮಾಡಿರತಕ್ಕವರಿಗೆ ವೀರಾಜಪೇಟೆಯಲ್ಲಿರುವ ಅವರ ಆಫೀಸಿನಲ್ಲಿ ಕೊಡಬಹುದು, ಅಥವಾ ಅವರು ಅವುಗಳನ್ನು ಸ್ವೀಕರಿಸುವುದು ಅನಿವಾರ್ಯವಾಗಿ ಸಾಧ್ಯವಾಗದೆ ಹೋದರೆ ಅವುಗಳನ್ನು ದಕ್ಷಿಣ ಕೊಡಗಿನ ಅಸಿಸ್ಟೆಂಟ್ ರಿಟರ್ನಿಂಗ್ ಆಫೀಸರಿಗೆ ಕೊಡಬಹುದು. ಅವುಗಳನ್ನು 1951 ನೆಯ ಇಸವಿ ಡಿಸೆಂಬರು 4 ನೆಯ (ತಾರೀಕಿನ) ದಿನ ಅಥವಾ ಮುಂಚಿತವಾಗಿ ಬೆಳಿಗ್ಗೆ 11 ಗಂಟೆಯಿಂದ ಅವರಾಹ್ನ 3 ಗಂಟೆಯ ಒಳಗಾಗಿ ಕೊಡಬೇಕು.

(iii) "ನಾಮಿನೇಶನ್" ಕಾಗದ ನಮೂನೆಗಳನ್ನು ಮೇಲೆ ನಮೂದಾಗಿರಕ್ಕವರ ಆಫೀಸುಗಳಲ್ಲಿ 26-11-1951 ತಾರೀಕಿನಿಂದ 3-12-1951 ನೆಯ ತಾರೀಕಿನ ವರೆಗೆ 11 ಗಂಟೆಯಿಂದ 5-30 ಗಂಟೆಯ ವರೆಗೆ ಯಾವಾಗ ಬೇಕಾದರೂ ಪಡೆಯಬಹುದು.

(iv) "ನಾಮಿನೇಶನ್" ಕಾಗದಗಳನ್ನು 8-12-1951 ನೇಯ ತಾರೀಕಿನ ದಿನ ಪೂರ್ವಾಹ್ನ ಹತ್ತು ಗಂಟೆಗೆ ವೀರಾಜಪೇಟೆಯ ತಾಲೋಕು ಆಫೀಸಿನಲ್ಲಿ ಪರಿಶೀಲನೆಗೆ ತೆಗೆದುಕೊಳ್ಳಲಾಗುವುದು.

(v) ಎಷ್ಟು ಜನ ಸದಸ್ಯರುಗಳು ಚುನಾಯಿಸಲ್ಪಡಬೇಕೋ ಅಷ್ಟಕ್ಕಿಂತಲೂ ಹೆಚ್ಚು ಮಂದಿ ಉಮೇದ್ವಾರರಿದ್ದು ಸ್ಪರ್ಧಿಸುವ ಪಕ್ಷದಲ್ಲಿ ಚುನಾವಣೆದಾರರು ವೋಟು ಕೊಡುವ ತಾರೀಕು ಅಥವಾ ತಾರೀಕುಗಳನ್ನು ಮತ್ತು ಅವರು ಎಷ್ಟು ಗಂಟೆಯಿಂದ ಎಷ್ಟು ಗಂಟೆಯ ವರೆಗೆ ವೋಟು ಕೊಡಬಹುದೆಂಬುದನ್ನೂ ಪ್ರತ್ಯೇಕವಾಗಿ ತಿಳಿಸಲಾಗುವುದು.

ತಾರೀಕು 26-11-1951.

ಬಿ. ಬಿ. ಅಪ್ಪಯ್ಯ.
ರಿಟರ್ನಿಂಗ್ ಆಫೀಸರ್.

ವಿಳಾಸ:-ತಾಲೋಕು ಆಫೀಸು, ವೀರಾಜಪೇಟೆ.

ಕಾಂಗ್ರೆಸ್ ಮತ್ತು ರಚನಾತ್ಮಕ ಕಾರ್ಯಕರ್ತರು

ಬಿಹಾರ ಚರಖಾ ಸಂಘದ ಶ್ರೀ ಲಕ್ಷ್ಮೀನಾರಾಯಣರೂ ಅವರ ಸಹಕಾರಿಗಳೂ ಹಿಂದಿಯಲ್ಲಿ ಒಂದು ಪತ್ರವನ್ನು ಹೊರಡಿಸಿದ್ದಾರೆ. ಅದನ್ನು ಸ್ವಲ್ಪ ಸಂಕ್ಷಿಪ್ತ ರೂಪದಲ್ಲಿ ಕೆಳಗೆ ಕೊಡಲಾಗಿದೆ.

ಸ್ವತಂತ್ರ್ಯ ಹೊರಪಡೆದ ನಂತರ ಪ್ರತಿ ದಲನೇ ಸಾರ್ವತ್ರಿಕ ಚುನಾವಣೆಗಳ ಸಂಬಂಧವಲ್ಲಿ ಕಾಂಗ್ರೆಸ್ ತನ್ನ ಘೋಷಣಾ ಪತ್ರವನ್ನು ಹೊರಡಿಸಿದೆ. ಇದೊಂದು ಮಾಮೂಲಿ ಲೇಖನವಾಗಿದೆ. ಸ್ವಾತಂತ್ರ್ಯ ದ ಹೋರಾಟಗಳಲ್ಲಿ ಕೊಡಗಿದ್ದಾಗ ಕಾಂಗ್ರೆಸು (ನುಂಡೆ ಇಲ್ಲಿಯಲ್ಲೇ ವಿಶೇಷವಿದ್ದು) ಅಲ್ಲಿ ಸಾಮಾಜಿಕ ಮತ್ತು ಆರ್ಥಿಕ ಮೂಲ ತತ್ವಗಳನ್ನು ಅಂಗೀಕರಿಸಿತ್ತು. ಅನೇಕ ಜನರಿಗೆ ಸಾಕ್ಷಿಕ ರಾಜಕಾರಣದಲ್ಲಿ ಏನೂ ಆಸ್ಥೆ ಇದ್ದಿಲ್ಲವಾದರೂ ಈ ಮೂಲ ತತ್ವಗಳಲ್ಲಿ ಆಸಕ್ತಿ ಇತ್ತು. ಈ ಅಸ್ತ ಯ ಕಾರಣವಿಂದಲೇ ಅವರು ಕಾಂಗ್ರೆಸ್ಸಿ ನಲ್ಲಿ ಸೇರಿದರು. ಕಾಂಗ್ರೆಸ್ಸಿನ ಪ್ರಸ್ತುತ ಘೋಷಣೆಯು ಈ ಮೂಲ ತತ್ವಗಳ ಸಂಬಂಧದಲ್ಲಿ ಕಾಂಗ್ರೆಸ್ಸಿನ ಅಭಿವ್ಯಾಯವನ್ನು ಸೂಚಿಸುತ್ತದೆಂದು ನಾವು ಗ್ರಹಿಸಬೇಕು. ಕಾಂಗ್ರೆಸಿಗೆ ಅಧಿಸತ್ತಾ ಸರಕಾರಗಳ ಘೋಷಣೆಯು ಪ್ರೋತ್ಸಾಹಕವಾಗಿದ್ದಿಲ್ಲೆಂದು ಎಲ್ಲರಿಗೂ ಗೊತ್ತಿದೆ. ಆದರೆ ಪ್ರಸ್ತುತ ಘೋಷಣೆಯನ್ನು ನೋಡಿದರೆ ಈ ಮೂಲ ತತ್ವಗಳ ಬಗ್ಗೆ ಕಾಂಗ್ರೆಸ್ಸು ತನ್ನ ನಿಲುವಿನ ಸ್ಪಷ್ಟ ಬದಲಿಸಿದೆಯೆಂದು ವ್ಯಕ್ತವಾಗುವುದು.

ಅಧಿಕಾರವಲ್ಲಿ ಬಂದ ಅನುಭವಗಳ ಮೇಲಿಂದ ತನ್ನ ಹಿಂದಿನ ಅಭಿವ್ಯಾಯಗಳನ್ನೂ ಧ್ಯೇಯಗಳನ್ನೂ ಬಿಟ್ಟು ಬಿಡಲು ಪ್ರತಿಯೊಂದು ವ್ಯಕ್ತಿಗೂ ಸಂಸ್ಥೆಗೂ ಹಕ್ಕಿದೆ. ಈ ಬಗ್ಗೆ ನಮ್ಮದೇನೂ ದೂರಲ್ಲ. ಆದರೆ ಕಾಂಗ್ರೆಸಿನ ಹೊಸ ಘೋಷಣೆಯು ನ್ನ ಅನಾಲಕ್ಷಿಸಿ ಕಾಂಗ್ರೆಸಿನೊಡನೆ ನಮಗಿರ ವ ಸಂಬಂಧವನ್ನು ನಾವು ಪುನರ್ವಿಮರ್ಶಿಸಬೇಕಾದ ಕಾಲವೀಗ ಒಡಗಿದೆಯೆಂದು ಅನಿಸುತ್ತದೆ.

ಘೋಷಣೆಯ ಪ್ರಾರಂಭದಲ್ಲಿ ಗಾಂಧೀಜಿಯ ರೀತಿ, ನೀತಿ ಮತ್ತು ಕಾರ್ಯದ ಉಲ್ಲೇಖವಿದೆ. ನಮ್ಮ ಅಭಿಪ್ರಾಯದಲ್ಲಿ, ಈ ಘೋಷಣೆಯಲ್ಲಿ ಗಾಂಧೀಜಿಯ ಹೆಸರನ್ನು ಎಳೆಬು ತರುವ ಅವಶ್ಯಕತೆಯೇ ನೂ ಇದ್ದಿಲ್ಲ; ಏಕೆಂದರೆ ಗಾಂಧೀವಾದ ಕಾಂಗ್ರೆಸ್ಸಿನ ಮೂಲ ತತ್ವಗಳನ್ನು ಅಂಗೀಕರಿಸಲು ಈ ಘೋಷಣೆ ಸಿದ್ಧವಿಲ್ಲ.

ಸ್ವಾತಂತ್ರ್ಯ ಸಮರ ನಡೆಯುತ್ತಿದ್ದಾಗಲೂ ಪರಕೀಯರ ನೋದಿಂದ ಭಾರತವನ್ನು ಮುಕ್ತಗೊಳಿಸುವುದೊಂದೇ ಅದರ ಉದ್ದೇಶವಾಗಿದ್ದಿಲ್ಲ. ದಾರಿದ್ರ್ಯ ಮತ್ತು ಶೋಷಣೆಯಿಂದ ಜನತೆಯನ್ನು ವಿಮೋಚಿಸುವುದೂ ಧ್ಯೇಯವಾಗಿತ್ತೆಂದು ಕಾಂಗ್ರೆಸ್ ಘೋಷಣೆಯಲ್ಲಿ ಹೇಳಿದೆ. ಆದರೆ ತನ್ನ ಹಿಂದಿನ ಧೋರಣೆಯನ್ನು ಅನಾಲಕ್ಷಿಸಿ ಯಾವ ರೀತಿಯಲ್ಲಿ ಈ ಧ್ಯೇಯವನ್ನು ಸಾಧಿಸಲು ಅದು ಅಪೇಕ್ಷಿಸುತ್ತಿದೆಯೆಂದು ಅದರಲ್ಲಿ ಎಲ್ಲಿಯೂ ಹೇಳಲ್ಲ ಅ ಧೋರಣೆಯೇಗ ಕುಂಬು ಬಾಲ ನಡೆ ನೊಂದಿದೆ ನೋಲನೆಯ ಹಗಗಾಂ ಧೀಜಿಗ್ರಾಮ ಪನ್ನು ಪ್ರಾರಂಭ್ಯದ ವ್ಯಾಪ್ತಿ ವಿಕ ಘೆಟಕನೆಂದು ಕಲ್ಪಿಸಿದ್ದರು. ಹ ಳ್ಳಿಗಳನ್ನು ಮೂಲ ಅವಶ್ಯಕತೆಗಳ ವಿಷಯ ದಲ್ಲಿ ಸ್ವಯಂಪೂರ್ಣವಾಗಿ ಮಾಡುವ ಮೂಲಕ ಸ್ವಾತಂತ್ರ್ಯವು ಹಳ್ಳಿಗಳಲ್ಲಿ ವೇರೂರುವಂತೆ ಮಾಡಬೇಕೆಂಗು ಅವರು ಬ ಗೆದಿದ್ದರು. ಆದ್ದರಿಂದ ಅವರು ಖಾದಿ ಮತ್ತ ಗ್ರಾಮೋದ್ಯೋಗಗಳಿಗೆ ಅಗ್ರಸ್ಥಾ ನವನ್ನು ಸ್ವಾತಂತ್ರ್ಯವು ಹೆಚ್ಚಾಗುವುದರ ಕಾ ರ್ಯಕ್ರಮವಲ್ಲಿ ಅನ್ನೇ ಮಂತ್ರಿಯಂಗಳಾ ಗಿ ನೇಮಿಸಿದ್ದರು.

ಮೇಲ್ಕಾಣಿಸಿದ ಘೋಷಣೆಯಲ್ಲಿ ಇಂಥದೊಂದೂ ಇಲ್ಲವೇ ಇಲ್ಲ. ಬದಲಿಗೆ ಅವರಲ್ಲಿ ಪ್ರತಿಪಾದಿಸಲ್ಪಟ್ಟ ವಿಚಾರಗಳು ಗಾಂಧೀಜಿಯ ಕಲ್ಪನೆಗೆ ಬದ್ಧ ವಿರುದ್ಧವಾಗಿವೆ. ಸಹಕಾರಿ ಒಕ್ಕೂಟಕನವನ್ನು ಶೈ ಕೆಲ್ಲಬೇಕೆಂದು ಅಲ್ಲಿ ಹೇಳಿತ್ತಿದೆ; ಆದ ರೆ ವಿಶೇಷಗಳಂದ ತಾವಿದ ಪೆಟ್ರೋಲ್ ಆ ಧನ ಕೂಡಾ ಮಿಲ್‌ನಿಂದ ನಡೆಯುವ ಟ್ರಾಕ್ಟರ್‌ಗಳನ್ನು ಈ ಬಗ್ಗೆ ಎತ್ತಿ ಮ ಟ್ಟಿಗೆ ಉಪಯೆ ಗಿ ಬಾಗುವುದು, ಕೃಷಿ ಗೊಬ್ಬರದ ಸಹಾಯವನ್ನ ಪಡೆಯಲಾ ಗುವುದೇ, ಎತ್ತು, ಹಟ್ಟಿಯ ಗೊಬ್ಬರ ಮತ್ತು ಹಳ್ಳಿಗರ ನಿತ್ಯದ ನುಲ ಮಾಡಿ, ದಿಗಳ ಉಪಯೋಗದ ಬಗ್ಗೆ ಅದರ ಧೋರಣವೇನೆಂಬುದಕ್ಕೆ ಎಲ್ಲಿಯೂ ಉತ್ತರ ವಿಲ್ಲ.

ಅದೇ ಪ್ರಕಾರ ಘೋಷಣೆಯಲ್ಲಿ ಗ್ರಾಮೋದ್ಯೋಗಗಳಿಗೆ ಸ್ಥಾನವನ್ನು ಕೊಟ್ಟಿಲ್ಲ. (ಚಕ್ಕಪುಟ್ಟ ಕಬ್ಬಿಣ ಕೈಗಾರಿಕೆ'ಗಳ ಉಲ್ಲೇಖ ಮಾತ್ರ ಇದೆ. ಚಿಕ್ಕಪುಟ್ಟ ಮತ್ತು ಮನೆ ಕೈಗಾರಿಕೆಗಳಿಗೂ ಗ್ರಾಮೋದ್ಯೋಗಗಳಿಗೂ ಇರುವ ಬೇಧವನ್ನು ವಿವರಿಸುವ ಆವಶ್ಯಕತೆಯೇ ಇಲ್ಲ. ಗ್ರಾಮೋದ್ಯೋಗಗಳೆಂದರೆ ಹಳ್ಳಿ ಯ ಪ್ರಾಥಮಿಕ ಅವಶ್ಯಕತೆಗಳನ್ನು ಪೂ ರೈಸುವ ಉತ್ಪನ್ನಗಳು. ಅವುಗಳ ಮೇ ಲೆಯೇ ಹಳ್ಳಿಗಳ ಸ್ವಾವಲಂಬನೆ ನಿರ್ಭರ ವಾಗಿದೆ. ಅವುಗಳಲ್ಲದ ಹಳ್ಳಿ ಎಷ್ಟು ಸಮೃದ್ಧವಾಗಿದ್ದರೂ ಅದು ಹೊರಗಿನಿಂದ ಎಲ್ಲ ಪದ ರ್ಥಗಳನ್ನೂ ತರಿಸಿಕೊಳ್ಳುವ ಒಂದು ಪೇಟೆಯನ್ನಾಗಿಯೇ ಸೈ. ಇವರ ಬದ ಲು ವನೆ ಕೈಗಾರಿಕೆ, ಚಿಕ್ಕಪುಟ್ಟ ಉದ್ಯೋ ಗಗಳಿಂದರೆ ಜನರಿಗೆ ಉಲ್ಬಸ್ಥಲ್ಪ ಹಣವ ನ್ನು ಸಂಗ್ರಹಿಸುವ ಸಾಧನಗಳು ಮಾತ್ರ. ಚಿಕ್ಕಪುಟ್ಟ ಕೈಗಾರಿಕೆಗಳು ಯಾವುದೇ ಕಾಲದಲ್ಲಿಯೂ ಜನರ ಸಂಪೂರ್ಣ ಮಿತಿಯೀರಿನ್ದರಿಂದ ಅವರ ನೋಲೆ ಬಿದ್ದಿರುವ ಭಾರವನ್ನು ಕಡಿಮೆ ಮಾಡಲು ಈ ಜನರಲ್ಲಿ ಕೆಲವನ್ನು ಇತರ ವೃತ್ತಿಗಳ ಕಡೆ ಹೊರಳಿಸುವುದವಶ್ಯ. ಕೆಲವನ್ನು ದೊಡ್ಡ ಉದ್ದಿಮೆಗಳಿಗೆ ಜೊರಳಿ ಸಬಹುದು. ಆನಂತರ ಅಧಿಕಾಂಶ ಜನರ ಉಪಜೀವಿಕೆಗೆ ಚಿಕ್ಕಪುಟ್ಟ ಮತ್ತು ಮನೆ ಕೈಗಾರಿಕೆಗಳೇ ಮುಖ್ಯ ಸಾಧನವಾಗಬಲ್ಲವು" ಎಂದು ಸ್ಪಷ್ಟವಾಗಿ ಹೇಳಲಾಗಿದೆ.

ಯಾವ ಚಿಕ್ಕಪುಟ್ಟ ಕಥವಾ ಮನೆಕೈಗಾರಿಕೆಗಳನ್ನು ಕೈಕೊಂಡರೂ ಅವುಗಳ ನ್ನು ಅಕ್ಕತ್ತನ ತಂತ್ರಗಳಲ್ಲಿಯೇ ನಡೆಸ ಬೇಕೆಂದೂ ಅವುಗಳು ಆರ್ಥಿಕ ದೃಷ್ಟಿ ಯಿಂದ ಅಕ್ಕತ ಉಪಯುಕ್ತವೂ ಕಾರ್ಯ ಕ್ಷಮವೂ ಆಗಿ ಬದವಶ್ಯವೆಂದೂ ಎಚ್ಚರಿ ಕೆ ಕೊಡಲಾಗಿದೆ. ಇಂಥ ಪರಿಣಾಮ ವೂ ಬ್ರಿಟಿಷ್ ಘೋಷಣೆಯ ಪರಿಣಾಮದಂತೆ ಆ ಗಲಾರದೆ? ಹಾಗೆ ಕೈಗಾರಿಕೆ ಅಂದರೆ ಕೈಯಿಂದ ಬತ್ತ ಕುಟ್ಟುವುದು, ಕಾರ್ಪ ಕ್ಷವಲ್ಲದೆ ಬೇರೆ ಕೈಕ್ಷ ಸಾಧನಗಳನ್ನು ಉಪಯೋಗಿಸಲಾಗುವುದು; ಗಾಣದಲ್ಲಿ ಯ ಸ್ಥಾನವನ್ನು ವಿದ್ಯುಚ್ಛಕ್ತಿಯ ಎಣ್ಣೆ ಮಿಲ್ಲು ಪಡೆದುಕೊಳ್ಳುವುದು; ಸಾಬೂನಿಗೆ ಸಿಗಾಗಿ ಜಪಾನಿ ಆಟಿಗೆ ಸಾಮಾ ನುಗಳ ಯಂತ್ರಗಳನ್ನು ಹಳ್ಳಿಗಳಿಗೆ ಕಳಿಸ ಲಾಗುವುದು; ಈ ರೀತಿ ಇಂತಾ ಜನರಿಗೆ ಆರ್ಥಿಕ ಸೌಖ್ಯವನ್ನು ಒದಗಿಸಲು ಯತ್ನಿಸ ಲಾಗುವುದು. ಹಳ್ಳಿಗಳಲ್ಲಿ ಹಳ್ಳಿಗರ ಪ್ರೇರಣ ಶಕ್ತಿ ಬೆಳೆದು, ಹಳ್ಳಿಗಳಲ್ಲೇ ಲಭ್ಯವಾಗಬಹುದಾದ ಯಂತ್ರಶಕ್ತಿ, ಕಾರ್ಮಿಕ ಶಕ್ತಿಯ ಉಪಯೋಗ ತಂತ್ರಜ್ಞರ ಬಲದಿಂದ ಹಳ್ಳಿಗರ ನಿತ್ಯದ ಆವಶ್ಯಕತೆಗಳನ್ನು ಪೂರೈಸುವುದು. ಗ್ರಾಮೋದ್ಯೋಗಗಳ ಮೂಲೋದ್ದೇಶವಾಗಿತ್ತು. ಗಾಂಧೀಜಿ ಯ ಹೆಸರನ್ನು ಸ್ಮರಿಸಿಯೂ ಈ ಕಲ್ಪನೆ ಯನ್ನು ಮೂಲೆಗೊತ್ತಲಾಗಿದೆಂಬುದಲ್ಲವೆ?

ಜನರಲ್ಲಿ ಏನೂ ಸಂಶಯ ಉಳಿಯ ಕೂಡದೆಂದೋ ಏನೋ ಸಾಕಷ್ಟು ಸ್ಪಷ್ಟ ನವಲ್ಲಿ ಗ್ರಾಮಸ್ಥರ ಉದ್ದಿಮೆಯನ್ನು ಉಂಡಿಸಲಾಗಿದೆ. ಕೈಗ್ರಾಮವು ನಮ್ಮ ನುಖ ನ ಕೈಗಾರಿಕೆಯೊಡ್ಡಿರಿಂದ ಅ ವಶ್ಯ ಸರಕಾರದಿಂದ ಎಲ್ಲ ಬಗೆಯ ಸಹಾ ಯ ನಿಂಡಲಾಗುವುದೆಂದು ಹೇಳಿದೆ. ಈ ಪರಿಗೆ ನಮಲಿನ ಕೊತೆಯಿಂದ ಈ ಉದ್ಯ ಮಕ್ಕೆ ತೊಂದರೆಯೊಗಿತ್ತು. ಆದರೆ ಇ ನ್ನು ಮುಂದೆ ಸಾಕಷ್ಟು ನೂಲು ಕೈಗ್ರಾಗ ಗಳಿಗೆ ದೊರಯುವಂತೆ ಸರಕಾರ ನೋಡಿ ಕೊಳ್ಳಬೇಕು. ಗಿರಣಿ ನೂಲಿನಿಂದ ನಡೆ ಯುವ ಕೈಮಗ್ಗಗಳ ನಮ್ಮ ಮುಖ್ಯ ಮನೆ ಕೈಗಾರಿಕೆಯೆಂದು ಕಾಂಗ್ರೆಸ್ಸು ಇಂದು ಕಲೋಕ್ತವಾಗಿ ಸಾರುತ್ತಿದೆ! ನಾವು ಇ ದನ್ನೇ ಒಪ್ಪಬೇಕೆಂದು ಬ್ರಿಟಿಷರು ಹೇಳು ತ್ತಿದ್ದಾರೆ. ಮತ್ತು ಚರಖಾ ಸಂಘವು ಗಾಂ ಧೀಜಿಯ ನೇತೃತ್ವದಲ್ಲಿ ದೀರ್ಘ ಕಾಲ ವಿ ರೋಧಿಸಿದ್ದೂ ಇದೇ ತತ್ವವನ್ನೇ ಅಲ್ಲವೇ?

ಹೀಗೇ ಇರಲಿ, ಇಂದಿನ ಕಾಂಗ್ರೆ ಸ್ ಘೋಷಣೆಯನ್ನು ಸೂಕ್ಷ್ಮಪ್ರಕಾರದ ಮನ್ನ ಪ್ರಸ್ತವಾಗಿ ವಿಮರ್ಶಿಸಿದ್ದಕ್ಕಾಗಿ ನಾವು ಈ ಘೋಷಣೆಯ ಕರ್ತೃವಿಗೆ ಋಣಿಗಳಾ ಗಿರಬೇಕಷ್ಟಿದ್ದು. ಕಾಂಗ್ರೆಸ್ ಅಳತೆಯಲ್ಲಿ ಹಳ್ಳಿಗರ ಎಷ್ಟೇ ಕಿಡಿಗಂಡು ಉಟ್ಟುತ್ತೂ ಟ್ಟು ಸುಖವಾಗಿದ್ದರೂ ಅವು ದೊಡ್ಡ ಉ ದ್ದಿಮೆಗಳನ್ನು ನಡೆಸುವ ನಗರಗಳಿಗೆ ಅ ಧೀನವಾಗಿರುವುದೇ ಸರಿಯೆಂದು ನಮಗೀ ಗ ಚೆನ್ನಾಗಿ ತಿಳಿಯಿತು.

ವನ್ಯಶಕ್ತಿ ಉದ್ದಿಮೆಯನ್ನು ಅನಪಶ್ಯಕ್ಯವಾಗಿ ವಿಸ್ತರಿಸಿ ದೇಶದ ಪಶುಸಂಪತ್ತಿಯನ್ನು ಹಾಳುಮಾಡಲು ಕಾರಣವಾದ ಮೂಲ ಭೂತ ವ್ಯತಭೇದವಿದೇ. ಈ ಭೇದವೇ ಕೈಯಿಂದ ಭತ್ತ ಕುಟ್ಟುವ ಉ ದ್ದಿಮೆಯನ್ನು ಜೊಂದದ್ದು, ಗಾಣದ ಉ ದ್ದಿಮೆಯನ್ನ ಕಡಿಹಿದ್ದು, ಬೆಲ್ಲ ತಯಾರಿಕೆ ಯನ್ನು ಪ್ರತಿಬಂಧಿಸಿದ್ದು ಮತ್ತು ಇನ್ನೂ ಅನೇಕ ಗ್ರಾಮೋದ್ಯೋಗಗಳನ್ನು ಗತಿಗಾ ಟಿಸಿದ್ದು. ಗಾಂಧೀಜಿ ಸಕ್ಕಾಗ್ರಹವನ್ನು ಹೂಡಲು ಕಾರಣವಾದ ಉನ್ನತ ಕಶ್ಚಗ ಎಂದ ಎಂಥ ಅಘಾತನವಿದು! ನಮ್ಮೀ ಹೇಳಿಕೆಯನ್ನು ದೃಢಪಡಿಸಲು ಇನ್ನೂ ದಾ ಖಲೆಗಳೂ ಇವೆ. ಈ ಘೋಷಣೆಯಲ್ಲಿ ಪಂಡ್ಯಪ್ರತಿಬಂಧವನ್ನು ಕುರಿತು ಚಕಾರ ಶಬ್ದವೂ ಇಲ್ಲ. ಇಲ್ಲದ ಆ ಪ್ರಶ್ನೆಯ ಚರ್ಚೆ ನಡೆದಾಗ, ಘೋಷಣೆಯು ಕರ್ತೃವೂ ಕಾಂಗ್ರೆಸ್ಸನ್ನು ಅಲ್ಲಾಲ್ಲಿ ಬೆಟ್ಟಿಯಾದ ನೇತೃವೂ ಅವ ಪಂಡಿತ ಜವಾಹರಲಾಲರು, ಅವಸರದಿಂದ ಸಂಪೂರ್ಣ ಪ್ರತಿಬಂಧ ಮಾಡಿ ದೇಶದ ಆರ್ಥಿಕ ಸ್ಥಿತಿಯನ್ನು ಹದಗೆಡಿಸ ಬಹುದು ಎಂದು ವಿವರಿಸಿದರು ಮಂಟಿಯು ಮತ್ತ ಬೇರೆ ಕೆಲ ರಾಜ್ಯಗಳು ಈ ದಾರಿಯ ಕ್ಷಿಟ್ಟ ಹೆಜ್ಜೆಗಳು ಹಣಕಾಸಿನ ದೃಷ್ಟಿಯಿಂ ದ ತಪ್ಪೆಂದೂ ಅದು ಕಾರಣ ಅಭಿಗಳನ್ನು ಹಿಂದೆಗೆಯಬೇಕೆಂದೂ ಇದರ ತಾತ್ಪರ್ಯ ವೇ? ಪಂಡ್ಯಪ್ರತಿಬಂಧವಿಲ್ಲದೆ ಹಿಂದುಳಿದ ವರ್ಗಗಳನ್ನು ಉದ್ಧರಿಸುವುದು ಎಂದಾದ ರೂ ಸಾಧ್ಯವುಂಟೇ? ಹಿಂದುಳಿದ ವರ್ಗಗ ಳ ಉದ್ಧಾರವು ನರಕಾರದ ಮುಖ್ಯ ಕರ್ತ ವ್ಯಗಳೆಂದು ಗೃಹೀತವಾಗಿದೆ. ಆ ದರೆ ಕಾಂಗ್ರೆಸ್ ವಿಚಾರಧಾರೆಯು ಮೇರೆ ಗೆ ಅವರ ಸಾಂಪ್ರತಿಕ ಮತ್ತು ಆರ್ಥಿಕ ಉದ್ಧಾರವಾಗಬೇಕಾದರೆ ನೋರಲು ಅವ ರು ಕುಡಿಯುವಂತೆ ಮಾಡಬೆ ವಿಧಿಯಿ ಲ್ಲ! ಘೋಷಣೆಯ ಸಾರಾಂಶದಲ್ಲಿ ಗಾಂಧೀಜಿ ಯ ಎರಡು ಮೂಲ ತತ್ವಗಳಲ್ಲಿ ನಾವು ಉಪಯೋಗಿಸುವ ಸಾಧನಗಳೇ ಕೊನೆಗೆ ನಮ್ಮ ಸಾಧ್ಯದ ಸ್ವರೂಪವನ್ನು ರೂಪಿಸು ತ್ತವೆ ಮತ್ತು ರಾಷ್ಟ್ರಜೀವನದ ನೈತಿಕ ಸತ್ತ ಕಾತ್ಮಿಕ ವಿಕಾಸದಿಯನ್ನು ಅಮೂ ಲ್ಯವೆಂದು ನಾವು ಪರಿಗಣಿಸುತ್ತೇವೆ. ಎಂ ಬ ವಾಕ್ಯಗಳನ್ನು ಪ್ರತಿಜ್ಞಾಪೂರ್ವಕ ಉ ದ್ಧರಿಸಲಾಗಿದೆ; ಇದಕ್ಕೂ ಕಾಂಗ್ರೆಸ್ಸು ತಳೆ ದ ಘೋಷಣೆಗೂ ತಾಳಮೇಳವುಂಟೇ?

ತನ್ನ ನಾಲ್ಕು ವರ್ಷಗಳ ಅಳತೆಯಲ್ಲಿ ಕಾಂಗ್ರೆಸ್ಸು ತನ್ನ ತತ್ವಗಳನ್ನು ಗಾಳಿಗೆ ತೂ ರಿದೆ. ಹಳೆಯ ವುಗಳ ಜಾಡಿಲಿ, ಹೊಸ ತತ್ವಗಳನ್ನು ಕೂಡ ಅದು ಉಲ್ಲಾಸಿಸಿದ್ದು ಎದ್ದು ಕಾಣುತ್ತದೆ. ನವ್ಯದು ಲೌಕಿಕ ರಾಜ್ಯವೆಂದು ಬೇಸರಿಗೆ ಬರುವಷ್ಟು ಸಲ ಪೂ ಘೋಷಿಗಲಾಗುತ್ತಿದೆ. ಆದರೆ ರಾ ಮಂ-ಜ್ಯ ಪರಿಪತ್ತು, ಹಿಂದೂಮಹಾಸಭೆ ಗಳಂಥ ಸಂಸ್ಥೆಗಳಿಗೆ ರಾಜಕೀಯ ಮನ್ನೆ ತೆಯನ್ನಿತ್ತು ರಾಜಕೀಯ ಕಕ್ಷ್ಯಾಳೆಂದು ಜನರಾಪಣೆಗಳಲ್ಲಿ ಹೋರಾಡಲು ಅವಕಾ ಶವೀಯ ಲಾಗುತ್ತಿದೆ. ಲೌಕಿಕ್ಯ ಜಾತ್ಯ ತೀತದಲ್ಲಿ 'ಹಿಂದೂಸಭೆ' ಅಥವಾ 'ಮಾ ಸ್ಲಿಂ ಜಮಿಯ ತ್' ನಂಥವು ರಾಜಕಾರಣ ದಲ್ಲಿ ಸ್ಥಾನಮಾನವನ್ನು ಕಡೆಯುವುದು ನಾವೂನ್ಯರಲುದಿಗೆ ನಿಲುಕದ ಚಮತ್ಕಾ

ರ. ಇಂದಿನ ಜಗತ್ತಿನಲ್ಲಿ ರಾಜಕೀಯ ಪಕ್ಷಗಳು ಯಾವುದೂ ಇಂದು ಆರ್ಥಿಕ ಅಥವಾ ಸಾಮಾಜಿಕ ಶಕ್ತಿಯನ್ನು ಬಲಿಯಿಸಿ ಕೆಲಲ ಮಾಡುತ್ತವೆ. ಆದರೆ ಇಲ್ಲಿ ನಾವು ಚಾತ್ಮತೀಕ ರಾಷ್ಟ್ರದ ಮಂತ್ರಿಗಳನ್ನು ಜಪಿಸುತ್ತ ಸಂಗಡಲೇ ಇಂಥ ರಾಜಕೀಯ ಪಕ್ಷಗಳ ಅಸ್ತಿತ್ವಕ್ಕೆ ಎಡೆಗೊಡುತ್ತೇವೆ ಕಾಂಗ್ರೆಸ್ಸಿನೊಳಗಿನ ಬೇರೆ ಬೇರೆ ಗುಂಪುಗಳ ಚಾತೀಯ ಭಾವನೆಯನ್ನು ಸರಕಾರೇತರ'ವೆಂದು ಹಾರಿಸಿಬಿಡಬಹುದು; ಆದರೆ **ಸರಕಾರವ ಇಂಥ ಘೋರಶಕ್ತೀಪಾ ಸವೂ ಧಾನ?**

ಸ್ತ್ರೀಯರ ವಿಮೋಚನೆಯ ಬಗ್ಗೆ ಮಾತಾಡುವುದಕ್ಕೇನೂ ತುಂಬಾ ಬದಲಿಲ್ಲ; ಆದರೆ ಶಿರುಳಿನ ಪರ್ಸ್ಪ ಮುಂದಿನ ಚುನಾವಣೆಗಳಲ್ಲಿ ಆಗಬೇಕು. ಆದರೆ ಸುರಾಪಾನದ ದುಷ್ಪರಿಣಾಮದ ಹೊಡೆತ ಬೀಳುವುದು ಹೆಚ್ಚಾಗಿ ದೇಶದ ಸ್ತ್ರೀಜನರ ಮೇಲೆಂಬುದನ್ನು ನಾವು ಮರೆಯುವಂತಿಲ್ಲ.

ಘೋಷಣೆಯ ಪ್ರತಿಯೊಂದು ಅಂಶವನ್ನು ಎತ್ತಿ ಉದ್ಘಾಟಿಸಲು ಫಲಿಗೆ ಇಚ್ಛೆಯಿಲ್ಲ. ಅಬಲೆ ಇಷ್ಟು ಮಾತ್ರ ಬೇರೆ ಬಯಸುತ್ತೇವೆ–ಗಾಂಧೀಜಿಯ ಹೆಸರನ್ನು ವ್ಯಾಪಾರದಲ್ಲಿ ಸ್ಮರಿಸಿರುವುದು ಕೇವಲ ಮುಂಬರುವ ವಿಘ್ನಗಳ ನಿವಾರಣೆಗಾಗಿ ಮತ್ತು ಕಾಲಪ್ರಿಲ್ಲ ಹಿಂಜರಿಯುವ ಹೊಸ ದಾರಿಯನ್ನು ನಿರಂತರವಾಗಿ ಮಾಡುವುದಕ್ಕಾಗಿ ಮಾತ್ರ. ಗಾಂಧೀಜಿಯ ಹೆಸರನ್ನು ಇದರೊಳಗೆ ಎಳೆಯದಿದ್ದರೆ ಚೆನ್ನಾಗಿತ್ತೆಂದು ನೊವಲು ನಾವು ಹೇಳಿದ್ದು ಇದ ಕ್ಕಾಗಿಯೇ. ಪಾದಿ ಮತ್ತು ಗ್ರಾಮೋದ್ಯೋಗಗಳ ಮೂಲ ತತ್ವಗಳ ಕಲ್ಲಿಗೆ ಮಾಡಿ, ಗಾಂಧೀ ಪ್ರಭೇತ ನೈತಿಕ ಮಾರ್ಗದಲ್ಲಿ ಜೀವಿಸಿ ಆಡಳಿತ ನಿರ್ವಹಿಸುವೆವೆಂಬುದೊಂದು ವಿಡಂಬನೆಯಲ್ಲದೆ ಮತ್ತೇನು? ಸ್ವಾವಲಂಬಿ ಮತ್ತು ನೈತಿಕ ಜೀವನ ಅಹಿಂಸಕ ಸಮಾಜನಿರ್ಮಾಣದ ಮೂಲಾಧಾರ. ಅದನ್ನೇ ನಿರಾಕರಿಸಿದ ಬಳಿಕ ನಾವು ಅಹಿಂಸಕ ಸಮಾಜ ನಿರ್ಮಾಣದಲ್ಲಿ ಪ್ರಾಮಾಣಿಕರಾಗಿದ್ದೇವೆಂದು ಹೇಗೆ ಹೇಳಿಕೊಳ್ಳಬೇವೆ? ಆದ್ದರಿಂದ ಮೇಲೆ ಹೇಳಿದ ಗಾಂಧೀಜಿಯು ಕಲ್ಪನೆಯಲ್ಲಿ ವಿಶ್ವಾಸವಿಲ್ಲವೆಂಬುದಕ್ಕೆ ಕಾಂಗ್ರೆಸ್ಸಿನಲ್ಲಿ ಸ್ಥಾನವಿಲ್ಲೆಂದು ನಾವು ಘೋಷಿಸಿದ್ದೇವೆ ಖಾದಿ, ಗ್ರಾಮೋದ್ಯೋಗ, ಮದ್ಯಪಾನಬಂಧ ಮೊದಲಾದ ಉಪಾಯಗಳಿಂದ ಅಹಿಂಸಕ ಸಮಾಜವನ್ನು ನಿರ್ಮಿಸಬೇಕೆಂದು ನಂಬಿರುವವರು ಹೊಸ ದಾರಿ ಹುಡುಕುವ ಕಾಲವೀಗ ಬಂದಿದೆ.

(ಹರಿಜನದಿಂದ)

ಚುನಾವಣೆಯೂ ಕಮ್ಯೂನಿಸ್ಟರೂ

ಕಮ್ಯೂನಿಸ್ಟ ಪಕ್ಷವು ಇಡಿತನದ ಭೂತವಪ್ಪೆಯಿಂದಿರಿಸುವುದು, ಸಮತೆಯನ್ನು ಸಾಧಿಸುವುದು, ಅದು ಶ್ರವ.ಜೀವಿಗಳ ಕೂಲಿಯಳಿಗಳ ಕೈವಾರಿ, ಎಂಬ ಬಿರುದು ಬಾವಲಿಗಳನ್ನು ಹೊತ್ತು ನಿಂತಿದ್ದರೂ ತೃತರ ರಕ್ಷಕನೆಂದು ಹೊಗಳಿಸಿಕೊಳ್ಳುತ್ತಿದ್ದರೂ ಅದು ಜನಪ್ರಿಯವಾಗಲೊಲ್ಲದೂ. ಇದಕ್ಕೆ ಶತ್ಕಾರಣಗಳುಂಟು. ಅದರ ವಿರುದ್ಧ ಜನತೆಯು ಸಾಮಾನ್ಯವಾಗಿ ಹೊರಿಸುವ ಆಕ್ಷೇಪವೆಂದರೆ ಅದು ರಷಿಯದ ಸೆರಗು ಹಿಡಿದ ಶಿಶುವೆಂಬುದು ಮೂಸ್ಕೋದ ವಾತಾನಿಂತೆ ಮಣಿಯುವ ಕುಣಿಯುವ ಪಕ್ಷವೆಂಬುದು ಒಂದು ವಿದೇಶದ ಆದೇಶದಂತೆ ನಡೆಯುವ ಪಕ್ಷವು ಇದೀಗ ಸ್ವತಂತ್ರವಾದ ಭಾರತಕ್ಕೆ ಹಿತಕಾರಿಯಾಗಲಾರದು. ಕಮ್ಯೂನಿಸ್ಟ ಮುಂದಾಳುಗಳು ಈ ಆರೋಪವನ್ನು ಅಲ್ಲಗಳೆಯುತ್ತಾರೆಂಬುದನ್ನು ಮರೆಯಲಾಗದು. ಹೀಗಿರುತ್ತ ಮತದಾರರು ಈಪಕ್ಷದ ಗೊತ್ತುಗುರಿಗಳ ಬಗೆಗೆ ಕೂಲಂಕಷ ವಿವರಗಳನ್ನು ಅರಿತುಕೊಳ್ಳಬೇಕು. ಮೇಲಿನ ಆರೋಪಕ್ಕೆ ಸಾಕಷ್ಟು ಆಧಾರವಿರಬಹುದೆಂದೂ ಮತದಾರರೆಯರಾದರೆ ಅಂತಹ ಪಕ್ಷದ ಸಹವಾಸವನ್ನೇ ತೊರೆಯಬೇಕು. ಅದಲ್ಲದೆ ಕಮ್ಯೂನಿಸ್ಟರು ಕ್ರಾಂತಿಕಾರರು, ಕೊಲೆಗುಲಿಗೆಗಳನ್ನೆಸಗುವ ಹಿಂಸಾವಾದಿಗಳು ಎಂಬ ಕೂಗು ಎಲ್ಲೆಲ್ಲಿಯೂ ಕೇಳಿಬರುತ್ತಿದೆ. ಈ ಮಾತಿನರ್ಥ ವಿಮರ್ಶಗಳನ್ನೂ ತಿಳಿದುಕೊಳ್ಳಬೇಕು. ಸಾಮಾನ್ಯವಾಗಿ ಮತದಾರರು ಹಿಂಸಾಮಾರ್ಗವನ್ನೆಂದಿಗೂ ಒಪ್ಪಲಾರರು. ನಮ್ಮ ಭಾರತೀಯ ಸಮಾಜ ವರ್ಗಗಳಲ್ಲಿ ಅದೆಷ್ಟು ಆರ್ಥಿಕ ಅಸಮತೆಯಿದ್ದರೂ ಅದನ್ನು ಕ್ರಾಂತಿಯಿಂದಾಗಿಸಿ ತಿದ್ದಲು ಹಿಂಸಾಚಾರವು ಸಲ್ಲದ ಬಾರಿಯೆಂಬುದನ್ನು ಯಾರು ಅಜ್ಞಾನಿಗಳೆಯರು. ನ್ಯಾಯಬದ್ಧವಾದ ಶಾಸನ ಕ್ರಮಗಳಿಂದ ಸುಧಾರಣೆಯು ಸಾಧ್ಯವಿರುವಾಗ ಹಿಂಸೆಯ ಹಾದಿಯು ಸರಿಯಲ್ಲ.

ರಾಜಕೀಯವಾದಿಗಳ ಈ ವರ್ತನೆಯಿಂದ ದೇಶಕ್ಕೆ ಕಲ್ಯಾಣವಾಗದು.

ಲೇ:–ಶ್ರೀ ಕೆ. ಸಿ. ಕರುಂಬಯ್ಯ, ವಿರಾಜಪೇಟೆ.

ಹಲವು ತಿಂಗಳಿಂದ ಇತ್ತೀಚೆಗೆ ಕೊಡಗಿನ ಪತ್ರಿಕೆಗಳನ್ನು ನೋಡಿದ್ದೇ ಆದರೆ ನ್ಯಕ್ಕಿಕ್ಕಾರವಾದ ಟೀಕೆಗಳೇ ಪತ್ರಿಕೆಗಳಲ್ಲಿ ತುಂಬಿರುತ್ತವೆ. ಪತ್ರಿಕೆಗಳಲ್ಲಿ ಮಾತ್ರವೇ ಅಲ್ಲ, ಇತ್ತೀಚೆಗೆ ಎಡೆಬಿಡದೆ ನಡೆಯುತ್ತಿರುವ ಚುನಾವಣಾ ಪ್ರಚಾರಕ ಸಭೆಗಳಲ್ಲಿಯೂ ಕೂಡ ಇದೇ ಪುರಾಣದ ಉಲ್ಲೇಖವನ್ನೆ ಎನ್ನವುಗಂತ್ತದೆ. ಇಷ್ಟು ವರ್ಷಗಳ ಕಾಲ ಸುಸ್ತಾನಸ್ಥೆಲ್ಲಡಗಿ ಸರಸ್ಪರ ಕುಂದುಗೊರತೆಗಳುಚುನಾವಣೆ ಸಮಿಪಿಸಿದಂತೆಯೇ ಒಂದಕ್ಕೆ ಮೂರಾಗಿ, ಅಪಪ್ರಚಾರವಾಗಿ ಮೂರ್ಪಟ್ಟು ಹೊರಬೀಳ ತ್ತಿವೆ. ರಾಜಕೀಯ ಅಭಿಜ್ಞಾನವಿದ್ದು, ದೇಶದ ವಿಚಾರ ತಿಳುವಳಿಕೆಯುಳ್ಳ ಈ ಮಹಾನೀಯರುಗಳೇ ಈ ರೀತಿಯ ಕುರುಕ್ಷೇತ್ರದಂತಹ ಕಾಳಗವನ್ನು ನಡೆಸಲು ನೊವಲು ಮಾಡಿದರೆ ಶಿಕ್ಷಾಪಿ ಹಾಗೂ ಕೂಲಿಕಾರ ವರ್ಗದವರ ಪಾಡೇನು? ಕಲ್ಲುಸ್ಪ ಗುಂಡಸ್ಪ ಸೇರಿ ಮೆಣಸಸ್ಪ ಪುಡಿಯಾದಂತೆ ಈ ಪಾರ್ಟಿಗಳು ಗುದ್ದಾಟದಲ್ಲಿ ರೈತ ಕೂಲಿಕಾರರ ವರ್ಗ ಪುಡಿಯಾಗುವುದರಲ್ಲಿ ಸಂದೇಹವಿಲ್ಲ ಇದು ಬಹಳ ವಿಷಾದಕರವಾದ ಸಂಗತಿಯಾಗಿದೆ. ಓಟುಕೊಡುವ ಸಮಯ ಬರುವುದಕ್ಕೆ ಮೊದಲು ಪ್ರತಿಯೊಬ್ಬರ ವೈಯಕ್ತಿಕ ಪರಿಚಯ ಅವರ ಹಿಂದಿನ ಚರಿತ್ರೆಯನ್ನು ತಿಳಿದುಕೊಳ್ಳುವುದು ಯೋಗ್ಯವಾದುದೆ ಆದರೀತಿ ಇದಕ್ಕೆ ಮೊದಲೇ ಪ್ರಕಟವಾದ ಪತ್ರಿಕೆಗಳಿಂದಲೂ ಎಲ್ಲಾರೀತಿಯಿಂದಲೂ ಈ ವ್ಯಕ್ತಿಗಳ ವಿಷಯ ನಮ್ಮ ಜನತೆಗೆ ಸಾಕಷ್ಟು ವಸಹಿತಿಯಾಗಿದೆ ಆದರೆ ಪರಸ್ಪರ ದೂಷಿಸುವುದನ್ನೇ ಚುನಾವಣಾ ತತ್ವವನ್ನಾಗಿ ಮಾಡಿಕೊಂಡು ಓಟು ಕೇಳುತ್ತಿರುವುದು ನಮ್ಮ ರಾಜಕೀಯ ವಾದಿಗಳು ಮಾಡುತ್ತಿರುವ ಮಹಾಪರಾಧವೆಂದು ಹೇಳಬೇಕಾಗುತ್ತದೆ. ಇಂದು ಈ ಮಹಾನೀಯರುಗಳು ಅಹಿಂಸಾತತ್ವವನ್ನು ಮರೆತು ಹಿಂಸಾತ್ಮಕತ್ವಕ್ಕೆ ಇಳಿದಿರುವಂತೆ ತೋರುತ್ತದೆ. ಯಾವ ರೀತಿಯಿಂದಲಾದರು ಓಟು ಪಡೆಯಬೇಕೆಂದು ಹಂಬಲದಿಂದ ಅಳ್ಳಸುವಾಗಿ ವರ್ತಿಸುವುದು ಬಹಳ ದುಃಖಕರವಾದ ವಿಷಯವಾಗಿದೆ. ತನ್ನ ಮನೆಯ ಮುಂದೆ ಅನೆ ಸತ್ತು ಬಿದ್ದಿದ್ದರೂ ಪಕ್ಕದ ವನೆಯ ಮುಂದೆ ಪೊಣ ಸತ್ತು ಬಿದ್ದನ್ನು ನೋಡಿ ಜಗಳಕ್ಕೆ ಹೋದವನಂತೆ ನಮ್ಮ ರಾಜಕೀಯವಾದಿಗಳು ವರ್ತಿಸುತ್ತಿರುವುದು ಶ್ರೇಯಸ್ಕರವಲ್ಲ ಹಳೆಯ ಹುಳುಕನ್ನು ಅಗಲಮಾಡುವುದರ ಬದಲು ಹುಳುಕು ಎಂತಹದೆಂದು ಪರೀಕ್ಷಿಸಿ, ಔಷಧಿ ಕೊಟ್ಟು ವಾಸಿಮಾಡುವುದು ಇಂದಿನ ಕರ್ತವ್ಯವಾಗಿದೆ. ಮಾಡಿದ ತಪ್ಪುಗಳನ್ನು ತಿದ್ದಿ, ಮುಂದಿನ ಏಳಿಗೆಗಿರುವ ಮಾರ್ಗವನ್ನು ಕಂಡುಹಿಡಿಯುವುದು ನ್ಯಾಯವಾದ ಮಾರ್ಗ. ನಮ್ಮ ದೇಶದಲ್ಲಿ ಚುನಾವಣೆಗೆ ನಿಂತಿರುವ ಅನೇಕ ಉಮೇದ್ವಾರರಲ್ಲಿ ಬರೇ ಕುರ್ಚಿಯ ಸ್ಥಾನವನ್ನು ಯೋಚಿಸಿಕೊಂಡು ಓಟು ಕೇಳುತ್ತಿರುವಂತೆ ತೋರುತ್ತಿದೆ. ಯಾವನೇ ಒಬ್ಬ ಉಮೇದ್ವಾರನೂ, ವೈಯಕ್ತಿಕ ಮತ್ತು ಪಂಗಡಗಳದ್ವೇಷದಿಂದ ವೇದಿಕೆಯ ಮೇಲೆ ನಿಂತು ಘೋಷಾಘೋಷವಾಗಿ ಸರಕನ್ನು ಠೀಕಿಸಿ ಓಟು ಕೇಳಿದ್ದೇ ಆದರೆ ಅದು ದೇಶಕ್ಕೆ ದ್ರೋಹ. ಬೇರೊಬ್ಬರು ತಪ್ಪು ಮಾಡಿದ್ದರೂ ಸರಿಯೇ ಮಾಡದಿದ್ದರೂ ಸರಿಯೇ ಅವರನ್ನು ಯಜ್ಞಾತಜ್ಞಾ ಠೀಕಿಸಿ ಆತ್ಮಪ್ರಶಂಸೆ ಮಾಡಿ, ತಾನು ಮೇಲೆಂದು ಹೇಳಿ ಜನರನ್ನು ಆಕರ್ಷಿಸಿ ಸ್ಥಾನಗಳಿಸುವುದು ಜನತೆಯನ್ನು ವಂಚಿಸಿದಂತೆಯೇ ಸರಿ. ದೇಶದಲ್ಲಿ ನಿರಕ್ಷರಕುಕ್ಷರ ಸಂಖ್ಯೆ ಹೆಚ್ಚಾಗಿದೆ. ಅವಕಾಶವನ್ನು ಬೇಗನೆ ಮರಳುಗೊಳಿಸಬಹುದೆಂದು ಅಂತಹ ಜನತೆಗೆ ಮಂಕುಬೂದಿಯನ್ನು ಚೆಲ್ಲುವುದು ದೇಶದ ಏಳಿಗೆಗೆ ಕಂಟಕ. ಇಂತಹ ಅನ್ಯಾಯದ ವರ್ತನೆಗಳು ಯಾವ ಮಾರ್ಗದಿಂದಲೂ ತರವಲ್ಲ.

ಇಂದು ನಮ್ಮ ಮುಂದೆ ಜಟಿಲವಾದ ಸಮಸ್ಯೆಯೊಂದು ನಿಂತಿದೆ. ಆರ್ಥಿಕ ಮಾರ್ಗ ಬ್ಬು ಹೆಚ್ಚಾಗುತ್ತಾ ಬರುತ್ತಿದೆ. ಅನ್ನಸ್ಪ ವಸ್ತ್ರಕ್ಕೆ ಬಹಳ ತೊಂದರೆಯಾಗಿದೆ. ಉದ್ಯೋಗಸ್ಥರಿಗೆ ತಮ್ಮ ಜೀವನ ಹಾಗೂ ಸಂಸಾರದ ಜೀವನ ನಡೆಸಿಕೊಂಡು ಹೋಗುವುದು ಬಹಳ ಕಷ್ಟವಾಗಿದೆ. ರೈತರಿಗೂ ಉದ್ಯೋಗಸ್ಥರಿಗೂ ಸಾಲ ಹೆಚ್ಚುತ್ತಾ ಹೋಗುತ್ತಿದೆ. ನಿರುದ್ಯೋಗಿಗಳು ದೇಶದಲ್ಲಿ ಅನೇಕ ಜನರು ಆಳಕಿಸುತ್ತಾ ಇದ್ದಾರೆ. ಭಿಕ್ಷುಕರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಾ ಇದೆ. ಕೂಲಿಕಾರ ವರ್ಗದವರು ಒಂದು ದಿವಸ ಕಾಯ್ದು ಯೊಗಿ ಮಲಗಿದರೆ ಮೂರನೆ ದಿವಸಕ್ಕೆ ಅನ್ನವಿಲ್ಲ ದೇಶದ ಉತ್ಪತ್ತಿ ಕಡಿಮೆಯಾಗುತ್ತ ಬರುತ್ತಿದೆ. ಆಗುತ್ತಿರುವ ಉತ್ಪತ್ತಿ ಎಲ್ಲೆಲ್ಲೋ ಕಳ್ಳಸಂತೆಯ ಮಾರ್ಗವಾಗಿ ಎಲ್ಲಿಗೋ ಸಾಗುತ್ತಿದೆ. ಇಂತಹ ಪನ್ನಿವೇಶದಲ್ಲಿಯೇ ನಮ್ಮ ಜನರು ತಮ್ಮ ಭವಿಷ್ಯತ್ತನ್ನು ಕಾರ್ಗತ್ತಲೆಯಲ್ಲಿ ಬಿಟ್ಟಿರುವರು. ಇವುಗಳನ್ನು ಎದುರಿಸಲು ನಾವು ಹೋರಾಡಬೇಕಾಗಿದೆ. ಜಮಾಬ್ಧಾರೀ ಪರಿಷ್ಕರಣವನ್ನು ಶಿಕ್ಷೆಯಲ್ಲಿಯೇ ಕಟ್ಟಿಲಿದ್ದೇವೆ. ಉಮೇದ್ವಾರರಾರರ ಆಯ್ಕೆಯಾಗಬೇಕಾಗಿದೆ. ಉಮೇದ್ವಾರರು ಮಂದೆ ಓಂದು ನೀತು ಪ್ರಚಾರ ಕಾರ್ಯ ನಡೆಸುತ್ತಿದ್ದಾರೆ. ಆದರೆ ಹಣಬಲದಿಂದ, ಆತ್ಮಪ್ರಶಂಸೆ ಮಾಡಿ ಓಟು ಕೇಳುವ ಉಮೇದ್ವಾರರು ನಮಗೆ ಬೇಕಾಗಿಲ್ಲ ಇವರನ್ನು ದೇಶಸೇವಕರೆಂದೂ ಕರೆಯಲು ಆಗುವುದಿಲ್ಲ. ಆರ್ಥಿಕ ಮುಗ್ಗಟ್ಟಿನ ನಿವಾರಣೆಗಾಗಿ, ಅನ್ನವಸ್ತ್ರದ ಪ್ರಶ್ನೆಯನ್ನು ಬಗೆಹರಿಸಲಿಕ್ಕಾಗಿ, ನಿರುದ್ಯೋಗದ ಸಮಸ್ಯೆಯ ಪರಿಹಾರಕ್ಕಾಗಿ ದೇಶದ ಕೈಗಾರಿಕೋತ್ಪತ್ತಿಯ ಅಭಿವೃದ್ಧಿಗಾಗಿ ಯಾವ ರೀತಿಯ ಘೋರ ಜೆಯನ್ನು ಕೈಗೊಳ್ಳಬಹುದು, ಈ ಗುರಿಯನ್ನು ಮುಟ್ಟಲು ಹೇಗೆ ಸಾಧ್ಯತೆಯಿದೆಯೆಂಬುದನ್ನು ತಿಳಿಸುವುದು ಹೆಚ್ಚಾಗಿ, ಇಂದಿನ ಮಟ್ಟಿಗೆ ವಿಚಾರ ತಿಳಿದಂತಹ ಉಮೇದ್ವಾರರು, ಹಾಗೂ ದೇಶಸೇವಕರ ಕೈಯ್ಯಲ್ಲಿದೆ. ಈ ರೀತಿ ವರ್ತನೆಯಲ್ಲಿ ರಾಜಕೀಯವಿದೆ ಇಂತಹವರನ್ನು ಆರಿಸುವುದು ಯೋಗ್ಯವಾದುದು. ಇದಕ್ಕಿಂತಲೇ ದೇಶಕ್ಕೆ ಕಲ್ಯಾಣವಾಗುವುದು. ಬದಲಾಗಿ ಕರ್ತವ್ಯವನ್ನು ಮರೆತು ಜನತೆಗೆ ಬೇಕಾದ್ದನ್ನ ಬಿಟ್ಟು ಬೇಡಾದ್ದನ್ನ ಎತ್ತಿ ಸ್ವಪ್ರಶಂಸೆ, ಪರದೂಷಣೆಯಿಂದ ಜನರನ್ನು ದಿಕ್ಕರುಗೊಳಿಸಿ ಮತ ಪಡೆದು ಬಂದು ಕಟ್ಟಲಿರುವ ಮಂತ್ರಿಮಂಡಲದಿಂದ ದೇಶದ ಕಲ್ಯಾಣ ಎಂದೂ ಆಗದು.

Edited Printed & Published by P. I. Belliappa at 'Kodagu' Press, Mercara, for 'Kodagu' Ltd.

Licence No. 60.
Licenced to Post without Prepayment

Regd. No. M. 1830.
'KODAGU' MERCARA. (Coorg).

ಕೊಡಗು

ಸಂಪುಟ ೩೦ | ವಾರೀಕು ೭–೧೦–೧೯೬೯ನೇ ಸುಕ್ರವಾರ | ಸಂಚಿಕೆ ೨೭

ಪ್ರತ್ಯೇಕವಾದಿಗಳು ಕಾಂಗ್ರೆಸ್ಸಿಗ

ರಾಜೀನಾಮೆ ಕೊಟ್ಟದ್ದೇಕೆ ?

ಅ. ಭಾ. ಕಾಂಗ್ರೆಸ್ ಪ್ರಸಿಡೆಂಟರಾದ ಪಂಡಿತ ಜವಾಹರ್ ಲಾಲ್ ನೆಹರೂರವರಿಗೂ—ಕೊಡಗಿನ ಪ್ರತ್ಯೇಕ ಪಕ್ಷದ ಪ್ರಸಿಡೆಂಟರಾದ ಶ್ರೀ ಸಿ. ಐ. ಬೆಳ್ಯಪ್ಪನವರಿಗೂ ನಡೆದ ಪತ್ರವ್ಯವಹಾರಗಳು.

ಪ್ರಥಮ ಪತ್ರ.

ಮಡಿಕೇರಿ,
೧೩–೮–೬೯

ಪ್ರಿಯ ಪಂಡಿತಜಿಯವರೇ,

ನಿಮಗೆ ವಿಪರೀತ ಕೆಲಸವಿರುವ ಈ ಸಮಯದಲ್ಲಿ ತೊಂದರೆ ಕೊಡಲು ನನಗೆ ಇಚ್ಛೆ ಇಲ್ಲದಿದ್ದರೂ, ಕೊಡಗಿನ ಜನರಿಗೆ ಬಹು ಕುರಿತ ಸುತ್ತು ಪ್ರಾಮುಖ್ಯವಾದ ಒಂದು ವಿಚಾರದಲ್ಲಿ ನಿಮ್ಮ ಬುದ್ಧಿವಾದವನ್ನು ಕೇಳದೆ ಸಾಧ್ಯವಿಲ್ಲ. ಬರುವ ಜನರಲ್ ಚುನಾವಣೆಯ ಸಂಬಂಧ ನಮ್ಮ ವರಿಷ್ಠ ಸ್ಥಿತಿಯು ಎಷ್ಟು ಬಿಕ್ಕಟ್ಟಿನಿದೆ ಎಂಬುದು ಇದರೊಂದಿಗೆ ಕಳುಹಿಸಿರುವ–ನಾವು ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ ಕೊಟ್ಟ ಅಸ್ಪೀಲಿನಿಂದ ವಿಷದವಾಗುವುದು ಕಾಂಗ್ರೆಸಿನ ಆಶ್ರಯದಲ್ಲಿ ಎರಡು ಸಂಗಡದ ಉಮೇದುವಾರರುಗಳನ್ನು ನಿಲ್ಲಿಸಲು ಸಾಧ್ಯವಿಲ್ಲವಾದರೆ, ನಮ್ಮ ಸಮಸ್ಯೆಯನ್ನು ಬಿಡಿಸಲು ಇರುವುದು ಒಂದೇ ದಾರಿ. ಅದೇನೆಂದರೆ–ಕೊಡಗಿನ ಕಾಂಗ್ರೆಸಿಗರು ಜುನಾವಣೆಯಲ್ಲಿ ಗೆದ್ದ ಮೇಲೆ ಕಾಂಗ್ರೆಸು ಎನೆಂಬ್ಲಿ ಪಾರ್ಟಿಯ ಮೆಂಬರುಗಳಾಗಿರುವೆವೆಂಬ ಪ್ರತಿಜ್ಞೆಗೆ ಸಹಿ ಮಾಡಿಸಿ ತಮ್ಮ ತಮ್ಮ ಸಂಯೋಜನೆ ಮತ್ತು ಪ್ರತ್ಯೇಕ ಪ್ರಶ್ನೆಗಳ ಮೇಲೆ ಜುನಾವಣೆಗೆ ನಿಲ್ಲಲು ಬಿಡುವುದು. ಹೀಗೆ ಮಾಡಿದರೆ ಇಲ್ಲಿಯ ಜನರಿಗೆ ಪ್ರಾಂತ್ಯದ ಭವಿಷ್ಯತ್ತಿನ ವಿಚಾರ ಅಭಿಪ್ರಾಯ ಕೊಡಲು ಅನುಕೂಲ ಮಾಡಿಕೊಟ್ಟಂತಾಗುವುದು

ಕಾಂಗ್ರೆಸ್ ವರ್ಕಿಂಗ್ ಕಮಿಟಿಯಿಂದ ನಮ್ಮ ಅಪೀಲಿಗೆ ಇನ್ನೂ ಯಾವುದೊಂದು ಜವಾಬು ಬಂದಿರುವುದಿಲ್ಲ ಮತ್ತು ಬೇಗನೆ ಜವಾಬು ಸಿಕ್ಕುವುದೆಂದು ನಂಬಲಾಗುವುದಿಲ್ಲ. ನಮ್ಮ ನೇಮಕ ಪತ್ರಗಳನ್ನು ಕ. ಪ್ರಾ.. ಕಾ. ಕ. ಯವರಿಗೆ ಈ ತಾರೀಕು ೨೫ ರ ಒಳಗೆ ಕಳುಹಿಸಬೇಕಾದುದರಿಂದ ಈ ವಿಚಾರದಲ್ಲಿ ನಾವು ಕೈಕೊಳ್ಳಬಹುದಾದ ಉತ್ತಮ ದಾರಿಯು ಯಾವುದೆಂಬುದನ್ನು ದಯವಿಟ್ಟು ತಿಳಿಸಿ.

ವಂದನೆಗಳಿಂದ ನಿಮ್ಮವನಾದ
ಸಿ ಐ. ಬೆಳ್ಯಪ್ಪ.

ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ ಕಳುಹಿಸಿದ ಅಸ್ಪೀಲು

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಅಧ್ಯಕ್ಷರು ಮತ್ತು ಮೆಂಬರುಗಳಿಗೆ–

ಹುಬ್ಬಳ್ಳಿ, ಕ. ಪ್ರಾ. ಕಾ. ಕಮಿಟಿಯ ಅಧ್ಯಕ್ಷರ ಮೂಲಕ–

ಪ್ರಿಯ ಮಿತ್ರರೇ,

ಈ ಕೆಳಗೆ ಸಹಿ ಮಾಡಿದ ಕೊಡಗಿನ ಪ್ರತ್ಯೇಕ ಪಕ್ಷದ ಕಾಂಗ್ರೆಸ್ ಕೆಲಸಗಾರರಾದ ನಾವು ಕಳೆದ ಕಾಂಗ್ರೆಸ್ ಜುನಾವಣೆಗಳು ಮುಪ್ಪು ಬರುವ ಜನರಲ್ ಚುನಾವಣೆಗೂ ಕೊಡಗಿನ ಭವಿಷ್ಯತ್ತಿಗೂ ಇರುವ ಸಂಬಂಧವನ್ನು ಕುರಿತ ಕೆಲವು ತೊಂದರೆಗಳನ್ನು ನಿಮ್ಮ ಗಮನಕ್ಕೆ ತರ್ಮ ತೀರ್ಮಾನವ ಬಗ್ಗೆ ನಿಮ್ಮ ಮುಂಚೆ ಇರುವವರಾಗಿದ್ದೇವೆ.

೨. ಕೊಡಗು ೧೫೫೩ ಚದರ ಮೈಲಿ ಮತ್ತು ೩,೫೧,೦೦೦ ಜನಸಂಖ್ಯೆಯಿಂದ ಕೂಡಿ ವಲ್ಲೀನ ಹಿಂದೂಸ್ಥಾನದಲ್ಲಿರುವ, ಎಲ್ಲದಕ್ಕಿಂತಲೂ ಚಿಕ್ಕೆಯದಾದ ಚೀಫ್ ಕಮಿಷನರ ಪ್ರಾಂತವಾಗಿದೆ. ಎಲ್ಲಾ ಚೀಫ್ ಕಮಿಷನರ ಪ್ರಾಂತ್ಯಗಳ ವೈಶಿಷ್ಟ್ಯ ಪ್ರತ್ಯೇಕ ಪ್ರಶ್ನೆಗಳ ಮೇಲೆ ಜುನಾವಣೆಗೆ ನಿಲ್ಲಲು ಬಿಡುವುದು. ಇಷ್ಟೆ ಆರ್ಥಿಕ ವಿಚಾರವಲ್ಲಿ ತಪ್ಪು ಕಾಲಿನ ಮೇಲೆ ನಿಲ್ಲಲು ರೆತ್ತೆ ಇರುವ ಮತ್ತು ಕಳೆದ ೩೭ ವರ್ಷಗಳಿಂದ ನ್ಯಾಯನಿಧಾಯಕ ಸಭೆಯ ಅನುಭವವಿರುವ ಪ್ರಾಂತ್ಯ ಇದು ಒಂದೆ.

೩ ಹಿಂದೂದೇಶಕ್ಕೆ ಸ್ವಾತಂತ್ರ್ಯ ಸಿಕ್ಕುವ ವರೆಗೆ ಈ ಪ್ರಾಂತ್ಯವ ತಳೆ ಕಾಂಗ್ರೆಸ್ ಕೆಲಸಗಾರರು ಯೋರಾಟವನ್ನು ಬಿಗ್ಗಟ್ಟಿನಲ್ಲಿ ನಾಗಿಸುತ್ತ ಬಂದರು. ಆದರೆ ಸ್ವಾತಂತ್ರ್ಯ ದೊರಿತ ಮೇಲೆ ಕೊಡಗಿನ ಭವಿಷ್ಯತ್ತಿನ ವಿಷಯವಾಗಿ ಜನತೆಯಲ್ಲಿ ಯೂ ಹಾಗೂ ಕಾಂಗ್ರೆಸ್ ಕೆಲಸಗಾರರಲ್ಲಿ ಯೂ ಭಿನ್ನಾಭಿಪ್ರಾಯವು ಹೋರಲಾರಂಭಿಸಿತು. ಒಂದು ಪಂಗಡವು ಸಂಪೂರ್ಣ ಸುಧಾರಣೆಗಳಿಂದ ಕೊಡಗನ್ನು ಪ್ರತ್ಯೇಕ ವಾಗಿಟ್ಟುಕೊಳ್ಳಬೇಕೆಂದೂ, ಇನ್ನೊಂದು ಪಂಗಡವು ಕೊಡಗನ್ನು ಮೈಸೂರು ಯೂ ಮುಂದೆ ಆಗಬಹುದಾದ ಕರ್ನಾಟಕ ಪ್ರಾಂತ್ಯದೊಂದಿಗೆ ಸಂಯೋಜಿಸಬೇಕೆಂದೂ ಪ್ರಯತ್ನಿಸುತ್ತಿವೆ.

೪. ಕ. ಪ್ರಾ.. ಕಾ. ಕಮಿಟಿಯವರು ಕೊಡಗು ಸಂಯೋಜನೆಯನ್ನೂಗಬೇಕೆಂಬ ನಿರ್ಧಾರವನ್ನಾಮದರಿಂದ ಆದರ ಕೈಕೆಳಗಿರುವ ನಮ್ಮ ಜಿಲ್ಲಾ ಕಾಂಗ್ರೆಸ್ ಸಮಿತಿಯ ಸಂಯೋಜನಾಪಕ್ಷದವರಿಗೆ ಪ್ರಾರಂಭದಿಂದಲೆಂಬ ಜಬುಲಕೊಡುತ್ತಾ ಬಂದಿವೆ ಕ. ಪ್ರಾ. ಕಾ. ಕಮಿಟಿಯವರು ಕೆಲವು ಕಾಲದ ನೆನ್ನೆಯಿಂದ ಕೊಡಗಿನ ಜಿಲ್ಲಾ ಕಾಂಗ್ರೆಸ್ ಸಮಿತಿಯನ್ನು ಅಮಾನುಕ್ಕಾಬು ಪಾಲು ಮೆಂಬರುಗಳು ಬಹುಮತದಿಂದ ಸಂಯೋಜನೆಯನ್ನು ವಿರೋಧಿಸಿದ ಕಾರಣ ಗಲಾಟೆಯಲ್ಲಿರುವುದು ನೂಡಿ ಹೆಚ್ಚಾಗಿ ಸಂಯೋಜನಾವಾದಿಗಳಿಂದಲೇ ಕೂಡಿದ ಒಂದು ವಿಶೇಷಾಕ್ ಕಮಿಟಿಯನ್ನು ನೇಮಿಸಿ, ಇವನ್ನು ನಿವಸಪಡಿಸಿದರು. ಈ ವಿಶೇಷಾಕ್ ಕಮಿಟಿಯನ್ನು ಒಂದು ವರ್ಷವ ವರೆಗೆ ನೂತ್ರ ನೇಮಿಸಿದ್ದರೂ ಸಾವು ಹಲವು ಸಾರಿ ಆಕ್ಟೇಪಿಸಿದವನ್ನು ಗಮನಿಸದೆ ಅವನ್ನು ಕಳೆದ ಸಾರಿ ಗಾಂಧಿಯಲ್ಲಿ ನಡೆದ ಜುನಾವಣೆ ಬಳಿಕೆ ಮುಂದುವರಿಬು ಬಿಟ್ಟರು. ಈ ವಿಶೇಷಾಕ್ ಸಮಿತಿಯು ತನ್ನ ಅಧಿಕಾರವನ್ನು ಉಪಯೋಗಿಸುತ್ತಾ ಪ್ರತ್ಯೇಕ ವಕ್ಷವಲಿಸಿದ ಕಾಂಗ್ರೆಸು ಮೆಂಬರುಗಳಾಗಲಿವ ವರ್ಕ್ಕೂ, ಕಾಂಗ್ರೆಸು ಕಮಿಟಿಯ ಸದಸ್ಯರುಗಳಾಗುವವರ್ಕ್ಕೂ ಕುಟಾ ಆಜ್ಞೆಗಳನ್ನು ತಮ್ಮ ಒಪ್ಪಿಗೆಯ.

ಇದರಿಂದ ಕಾಂಗ್ರೆಸ್ ಕಮಿಟಿಯ ಜುನಾವಣೆಗಳಲ್ಲಿ ಭಾಗವಹಿಸಲು ನಮಗೆ ಸಾಧ್ಯವಾಗಲಿಲ್ಲ. ಈ ವಿಚಾರಗಳನ್ನೆಲ್ಲಾ ಆಗಿಂದಾಗ್ಗೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ ತಿಳಿಸುತ್ತ ಬಂದಿದ್ದೆವು ಒಂದೆರಡು ಸಾರಿ ನಮ್ಮ ಅಭಿಪ್ರಾಯಗಳನ್ನು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ನಮ್ಮ ಕೋರಿಕೆಗೆ ಪಿರುದ್ಧವಾಗಿ ಕ. ಪ್ರಾ. ಕಾ. ಕಮಿಟಿಗೆ ವಿಚಾರಣೆ ಬಗ್ಗೆ ಕಳುಹಿಸಿದ್ದರು. ನಾವು ನೀಕ್ಷಣೆ ನೂಡಿದಂತೆ ಆನರ ತೀರ್ಮಾನಗಳು ನಮಗೆ ವಿರುದ್ಧವಾಗಿಯೂ, ಸಂಯೋಜನಾಪಕ್ಷಕ್ಕೆ ಪೂರ್ಣ ಸಹಾಯಕವಾಗಿಯೂ ಇದ್ದವು. ನಾವು ಕಡೆಯದಾಗಿ ತಾ. ೧೫–೬ ಗಂಟೆಲ್ಲಿ ಕಳುಹಿಸಿದ ಅಸ್ಪೀಲು ಕೇಂಪ್ರೆ ಇಲೆಕ್ಟ್ರಿಸ್ಟ್ರಿಬ್ಯುಟರ್ಸ್‌ನ ಮುಂದೆ ವಿಚಾರವಾಗಿದೆ ಹಾಗೆಯೇ ಇದೆ. ಈ ಮುಷ್ಕೆ ಜನರಲ್ ಜುನಾವಣೆಯು ನಿಮಗೆ ಗೊತ್ತಿರುವಂತೆ ಏಪ್ರಿಲ್ ಸಮೀಪಿಸುತ್ತಿದೆ. ಮುಂಬರುವ ಚುನಾವಣೆಯಲ್ಲಿ ನಮ್ಮ ವರ್ತನೆ ಹೇಗಿರಬೇಕೆಂಬುದು ನಮಗೆ ಗೊತ್ತಾಗುವುದಿಲ್ಲ. ಕೊಡಗಿನ ಭವಿಷ್ಯತ್ತನ್ನು ನಿರ್ಣಯಿಸಲು ಇದೀಗ ಬಹು ಜಾತ್ರಮಹಾನ ಸಂದರ್ಭವಾಗಿದೆ. ಹೀಗಿರುವ ಸ್ಥಿತಿಯಲ್ಲಿ ಕೊಡಗಿನ ಜಿಲ್ಲಾ ಸಮಿತಿಯಲ್ಲಿ ಬರೇ ಸಂಯೋಜನಾವಾದಿಗಳೇ ಇರುವುದರಿಂದ ನಮ್ಮ ಪಾರ್ಟಿಗೆ ಧಾನಿಯಾಗುವ ರೀತಿಯಲ್ಲಿ ಸ್ವಕೀಯ ಎನೆಂಬಿಗೂ ಮತ್ತು ಪಾರ್ಲಿಮೆಂಟಿಗೂ ತಮ್ಮ ಪಕ್ಷದ ಉಮೇದುವಾರರುಗಳನ್ನೇ ಸ್ವಾಧಿಕಾರಿಗಳಾಗಿ ಹಾಕುವರು. ಜಿಲ್ಲಾ ಕಾಂಗ್ರೆಸ್ ಸಮಿತಿಯು ತಮ್ಮ ಪಕ್ಷದ ಉಮೇದ್ವಾರರುಗಳನ್ನೇ ಹಾಕಿದಲ್ಲಿ ಕಾಂಗ್ರೆಸ್ ಕೆಲಸಗಾರರಲ್ಲಿ ದೀರ್ಘ ಕಾಲದಿಂದಲೇ ಬಲವಾದ ಭಿನ್ನಾಭಿಪ್ರಾಯವಿರುವ ಕೊಡಗಿನ ಭವಿಷ್ಯತ್ತಿನ ವಿಚಾರ ಇಲ್ಲಿಯ ಜನರಿಗೆ ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಸಲು ಕಾಂಗ್ರೆಸ್ ಅವಕಾಶ ಕೊಡದಂತೆ ಆಗುವುದು.

೫. ಮೇಲಿನ ಬಿಕ್ಕಟ್ಟಿನ ಪರಿಸ್ಥಿತಿಯನ್ನು ಬಗೆಹರಿಸಲು ನಿಮ್ಮ ಅಭೋಜನೆಗೆ ಈ ಕೆಳಗಿನ ಸೂಚನೆಗಳನ್ನು ಕೊಡುವು. (೧) ಕೊಡಗಿನಲ್ಲಿರುವ ಎರಡು ಕಾಂಗ್ರೆಸ್ ಪಂಗಡಗಳು ತಮ್ಮ ಎರಡು ಸಾಲು ಉಮೇದುವಾರುಗಳನ್ನು ಹಾಕಲು ಬಿಡಬೇಕು. (೨) ಮೇಲಿನ ಸೂಚನೆಯು ಒಪ್ಪಿಕವಲ್ಲವಾದರೆ ಕಾಂಗ್ರೆಸ್ ತನ್ನ ಹೆಸರಿನಲ್ಲಿ ಉಮೇದ್ವಾರರುಗಳನ್ನು ಹಾಕದೆ ಕಾಂಗ್ರೆಸ್ ಕೆಲಸಗಾರರು ಸಂಯೋಜನೆ ಮತ್ತು ಪ್ರತ್ಯೇಕತ್ವದ ಪ್ರಶ್ನೆಯ ಮೇಲೆ ಜುನಾವಣೆ ನಿಲ್ಲುವಂತೆ ಬಿಡಬೇಕು. ಆದರೆ ಹೀಗೆ ನಿಲ್ಲುವ ಕಾಂಗ್ರೆಸ್ ಮೆಂಬರುಗಳು ಚುನಾವಣೆ ಮುಗಿದನಂತರ ಎಸೆಂಬ್ಲಿಯಲ್ಲಿ ಕಾಂಗ್ರೆಸು ಪಾರ್ಟಿಯ ಮೆಂಬರುಗಳಾಗಿ ಇರುವೆವೆಂದು ಪ್ರತಿಜ್ಞೆಗೆ ಸಹಿ ಹಾಕಬೇಕು.

೬ ಆಂತ್ಯದಲ್ಲಿ ನಮ್ಮ ಮುಂದಿರುವ ವಿಶೇಷ ಸಮಸ್ಯೆಯನ್ನು ಬಿಡಿಸಲು ನೀವು ಯತ್ನ ಮಾಡಬೇಕಾಗಿ ಕೋರುತ್ತೇವೆ.

೧೫ ಕಾಂಗ್ರೆಸ್ ಕೆಲಸಗಾರರು
ಮಡಿಕೇರಿ, ೧೫–೮–೬೯.

ಪಂಡಿತಜಿಯವರ ಜವಾಬು

ನ್ಯೂಡೆಲ್ಲಿ
೨೪–೮–೬೯

ಪ್ರಿಯ ಬೆಳ್ಯಪ್ಪನವರೆ,

ನಿಮ್ಮ ತಾ. ೧೫–೮–೬೯ ರ ಪತ್ರ ನೋಡಿದೆ ನಾನು ಈಗ ಕಾಂಗ್ರೆಸು ವರ್ಕಿಂಗ್ ಕಮಿಟಿಯೂ ಇಲೆಕ್ಷನ್ ಕಮಿಟಿಯಲ್ಲಿ ಇರುವುದರಿಂದ ಈಗ ಈ ವಿಚಾರದಲ್ಲಿ ನನಗೇನೂ ಸೂಚನೆ ಸಾಧ್ಯವಿಲ್ಲ. ನಿಮ್ಮ ತೊಂದರೆಯು ನನಗೆ ಮನವರಿಕೆಯಾಗಿದೆ ಆದರೂ ಇನ್ನೂ ತುಟಾ ಸಮಯವಿದೆ. ಈಗ ನೇಮಕ ಪತ್ರಗಳನ್ನು ಕಳುಹಿಸಿರಿ ಈ ವಿಚಾರವನ್ನು ತೀರ್ಮಾನಿಸಿಳ್ಳುವುದು ಉತ್ತಮ.

ನಿಮ್ಮವನಾದ
ಜವಾಹರಲಾಲ್ ನೆಹರು.

ಸೆಪ್ಟೆಂಬರು ಎರಡನೇ ವಾರದಲ್ಲಿ ಶ್ರೀ. ಸಿ. ಐ ಬೆಳ್ಯಪ್ಪನವರು ದೆಲ್ಲಿಗೆ ಹೋಗಿ ತಾ. ೧೫–೯ ರಂದಲ್ಲಿ ಪಂಡಿತಜೀಯವರನ್ನು ಭೇಟಿಮಾಡಿ ಚುನಾವಣೆ ಸಂಬಂಧ ಸಂಭಾಷಣೆಯನ್ನು ನಡೆಸಿದರು. ಅದರ ಸಾರಾಂಶವನ್ನು ಮರುದಿನ ನಂಗಿತಜೀಯವರಿಗೆ ಬರೆದು ಕಳುಹಿಸಿದ ಪತ್ರ.

ಎರಡನೇ ಪತ್ರ.

ನ್ಯೂಡೆಲ್ಲಿ.
ತಾ. ೧೪–೯–೬೯.

ಪ್ರಿಯ ಪಂಡಿತಜೀಯವರೇ,

ನೀವು ದಯವಿಟ್ಟು ನಿನ್ನೆ ದಿನ ನನಗೆ ಸಂಭಾಷಣೆಗೆ ಅವಕಾಶ ಕೊಟ್ಟದಕ್ಕೆ ತುಂಬಾ ವಂದಿಸುತ್ತೇನೆ. ಮಾಗೆ ವಂದಿಸುವಾಗ್ಗೆ ಮುಂಬರುವ ಚುನಾವಣೆ ಸಂಬಂಧ ನಿಮ್ಮ ಮುಂದೆ ನಾನು ಇಟ್ಟ ವಿಚಾರಗಳನ್ನು ನಿಮಗೆ ಪುನ ಜ್ಞಾಪಿಸಲು ಇಚ್ಛಿಸುತ್ತೇನೆ.

ಕೊಡಗಿನ ಕಾಂಗ್ರೆಸು ಕೆಲಸಗಾರರಲ್ಲಿ ಎರಡು ಪಂಗಡಗಳಿವೆ: ಒಂದು ಪಂಗಡವು ಕೊಡಗನ್ನು ಪ್ರತ್ಯೇಕ ಇಟ್ಟುಕೊಳ್ಳಬೇಕೆಂದೂ. ಇನ್ನೊಂದು ಪಂಗಡವು ಕೊಡಗನ್ನು ಮೈಸೂರು ಯೂ ಮುಂದಿನ ಕರ್ನಾಟಕ ಪ್ರಾಂತ್ಯದೊಂದಿಗೆ ಸಂಯೋಜಿಸಬೇಕೆಂದೂ ಪ್ರಯತ್ನಿಸುತ್ತಿವೆ. ನಮ್ಮ ಜಿಲ್ಲಾ ಕಾಂಗ್ರೆಸು ಕಮಿಟಿಯು ಕರ್ನಾಟಕ ಪ್ರದೇಶ ಕಾಂಗ್ರೆಸು ಕಮಿಟಿಯ ಅಧೀನದಲ್ಲಿರುವ

ದಾಗಿದೆ. ಕೊಡಗಿನ ಜಿಲ್ಲಾ ಕಾಂಗ್ರೆಸು ಕಮಿಟಿಯು ಅದರ ಚುನಾವಣೆಯಲ್ಲಿ ಕ್ರಮವಹಿಸುವ ರೀತಿಗಳನ್ನು ಅನುಸರಿಸಿದ ಕಾರಣ ನಾವು ಸ್ವತ್ಯೇಕವಾಗಿ ನೂಡಬೇಕಾಗಿ ಬಂತು. ಆದರಿಂದ ಸದರಿ ಸಮಿತಿಯಲ್ಲಿ ಸಂಯೋಜನ ವಾಗದಿಗಳು ಮೂತ್ರ ಮೆಂಬರುಗಳಾಗಿರುವರು. ಈ ವಿಚಾರ ನಾವು ಕೇಂದ್ರ ಚುನಾವಣಾ ಟ್ರಿಬ್ಯೂನಲ್ಲಿಗೆ ತಾ. ೧೯-೨-೪೧ ರಲ್ಲಿ ಕಳುಹಿಸಿದ ಅಪೀಲನ್ನು ಇನ್ನೂ ವಿಚಾರಿಸಿರುವುದಿಲ್ಲ. ಕೊಡಗಿನ ಸಂಯೋಜನ ವಿಷಯದಲ್ಲಿ ತುಂಬಾ ಕುತೂಹಲದಲ್ಲಿರುವ ಕರ್ನಾಟಕ ಪ್ರಾಂತೀಕ ಕಾಂಗ್ರೆಸು ಸಮಿತಿಯು ಕೊಡಗಿನ ಸಂಯೋಜನ ಪಕ್ಷಕ್ಕೆ ಸಂಪೂರ್ಣ ಬೆಂಬಲವನ್ನೀಯುತ್ತಿದೆ. ಕೊಡಗಿನ ದೊಡ್ಡ ಬಹುಮತ ಜನರು ಕೊಡಗು ಸ್ವತ್ಯೇಕವಿರಬೇಕೋ ಯಾ ಸಂಯೋಜನೆಯೊಳಗಿರಬೇಕೋ ಎಂಬ ಪ್ರಶ್ನೆಯನ್ನು ತಮ್ಮ ಸ್ವಾಗತಾರ್ಹ ಪ್ರಾಮುಖ್ಯವಾಗಿ ಎಣಿಸುತ್ತಿರುವುದರಿಂದ ಬರುವ ಚುನಾವಣೆಯಲ್ಲಿ ತಮ್ಮ ಓಟುಗಳನ್ನು ಮುಖ್ಯವಾಗಿ ಈ ಸಮಸ್ಯೆಯ ಮೇಲೆಯೇ ಕೊಡುವರು. ಆದುದರಿಂದ ಕಾಂಗ್ರೆಸು ಉಮೇದ್ವಾರರು ಚುನಾವಣೆಯಲ್ಲಿ ಗೆದ್ದ ನಂತರ ಕಾಂಗ್ರೆಸು ಪಾರ್ಟಿಯ ತೀರ್ಮಾನಗಳಿಗೆ ಹಾಗೂ ಮೆಂಬರುಗಳಾಗಿರುವೆ ಮೆಂದು ಕಾಂಗ್ರೆಸು ಪ್ರತಿಜ್ಞೆಗೆ ಸಹಿಮಾಡಿದಲ್ಲಿ ಎರಡು ಪಂಗಡದವರನ್ನು ತಮ್ಮತಮ್ಮ ಸ್ವಂ ಸಂಯೋಜನೆ ಯೂ ಪ್ರತ್ಯೇಕ ಪ್ರಶ್ನೆಗಳ ಮೇಲೆ ಚುನಾವಣೆಗೆ ನಿಲ್ಲಲು ಬಿಟ್ಟು ಕೊಡಗಿನ ಜನರಿಗೆ ತಮ್ಮ ಪ್ರಾಂತ್ಯದ ಭವಿಷ್ಯತ್ತಿನ ವಿಚಾರ ಅಭಿಪ್ರಾಯ ಕೊಡಲು ಅವಕಾಶ ಮಾಡಿಕೊಡುವುದು ನ್ಯಾಯವಾಗಿದೆ. ಕೊಡಗಿನಲ್ಲಿ ಕಾಂಗ್ರೆಸಿನ ಹೆಸರಿನಲ್ಲಿ ಉಮೇದ್ವಾರರುಗಳನ್ನು ನಿಲ್ಲಿಸಬೆ, ಪ್ರಾಂತ್ಯದ ಭವಿಷ್ಯತ್ತಿನ ಅಭಿಪ್ರಾಯವನ್ನೊಳಗೊಂಡು ತಮ್ಮ ತಮ್ಮ ಯೋಗ್ಯತೆ ಮೇಲೆ ಚುನಾವಣೆಯಲ್ಲಿ ಸ್ಪರ್ಧಿಸಲು ಇಲ್ಲಿಯ ಕಾಂಗ್ರೆಸು ಕೆಲಸಗಾರರನ್ನು ಬಿಡಬೇಕು. ಈಗ ಚುನಾವಣೆಯಲ್ಲಿ ಸ್ಪರ್ಧಿಸುವಷ್ಟಾ ಬೇರೆ ಸುಸಜ್ಜಿತವಾದ ರಾಜಕೀಯ ಪಂಗಡಗಳು ಇಲ್ಲಿ ಇಲ್ಲ. ಎಲ್ಲಾ ಕ್ಷೇತ್ರಗಳಲ್ಲಿ ಸ್ವತ್ಯೇಕವಾದಿ ಕಾಂಗ್ರೆಸಿಗರನ್ನು ಚುನಾವಣೆಗೆ ನಿಲ್ಲಲು ಬಿಡದಿದ್ದರೆ ಪ್ರತ್ಯೇಕತ್ವ ಪ್ರಶ್ನೆ ಮೇಲೆ ಬಲವಾದ ಸ್ವತಂತ್ರ ಉಮೇದ್ವಾರರುಗಳು ನಿಲ್ಲಬಹುದಾದ ಕಾರಣ ಕಾಂಗ್ರೆಸಿಗೆ ಜಯ ದೊರೆಯುವುದು ಕಷ್ಟ. ಈ ರೀತಿಯ ಚುನಾವಣೆ ಕ್ರಮಕ್ಕೆ ನಮ್ಮ ಪೂರ್ತಿ ಸಹಾನುಭೂತಿಯಿರುವದರಿಂದ ನಮ್ಮ ಪಾರ್ಟಿಯ ಎಲ್ಲಾ ಉಮೇದ್ವಾರರುಗಳನ್ನು ಚುನಾವಣೆಗೆ ನಿಲ್ಲಲು ಕೇಂದ್ರ ಚುನಾವಣೆ ಸಮಿತಿಯು ಬಿಡುವ ದೆಂದು ನಂಬಿ ಕ್ಷೇತ್ರಗಳು ನಿಶ್ಚಯವಾದ ಮೇಲೆ ಸ್ವಳೀಯ ಎಸೆಂಬ್ಲಿಯಲ್ಲಿ ೩೪ ಸ್ವಳಗಳಿಗೂ ನುತ್ತು ಪಾರ್ಲಿಮೆಂಟ್ ಸಭೆಯಲ್ಲಿ ಒಂದು ಸ್ಥಳಕ್ಕೂ ನಮ್ಮ ಪ್ರತ್ಯೇಕ ಪಕ್ಷದ ಉಮೇದುವಾರರುಗಳ ನೇಮಕ ಪತ್ರಗಳನ್ನು ಅವಶ್ಯವಿರುವ ಫೀಸ್ ಮತ್ತು ರೇವಣಾತಿಗಳೊಂದಿಗೆ ನೀವು ಹೇಳಿದಂತೆ ಕ. ಪ್ರಾ. ಕಾಂ. ಕಮಿಟಿಯ ಮೂಲಕ ಕಳುಹಿಸುವೆವು.

ಈ ಮಧ್ಯೆ ನಮ್ಮ ಸ್ವಳೀಯ ಎಸೆಂಬ್ಲಿ ಚುನಾವಣೆಗೆ ಕ್ಷೇತ್ರಗಳು ಇನ್ನೂ ನಿಶ್ಚಯವಾಗದೆ ಇರುವುದರಿಂದ, ನಿಶ್ಚಯ ಆಗುವ ವರೆಗೆ ನಮ್ಮ ನೇಮಕ ಪತ್ರಗಳನ್ನು ಕಳುಹಿಸಲು ಸಮಯ ಮುಂದರಿಸುವಂತೆ ನೀವು ದಯವಿಟ್ಟು ಕ. ಪ್ರಾ. ಕಾಂ ಕಮಿಟಿಗೆ ಬರೆಯಬೇಕೆಂದು ಕೇಳಿಕೊಳ್ಳುತ್ತೇನೆ. ಕ. ಪ್ರಾ. ಕಾಂ. ಕಮಿಟಿಯು ಎಸೆಂಬ್ಲಿ ಮೆಂಬರುತನಕ್ಕೆ ನಿಶ್ಚಯಿಸಿರುವ ನೂರು ರೂ ಫೀಸು ಮತ್ತು ಇನ್ನೂರು ರೂ. ರೇವಣಾತಿಯು ಮತ್ತು ಪಾರ್ಲಿಮೆಂಟು ಮೆಂಬರುತನಕ್ಕೆ ಇನ್ನೂರ ರೂಪಾಯಿ ಫೀಸು ಐನೂರು ರೂಪಾಯಿ ಡಿಪಾಜಿಟ್ಟು ಬಹಳಹೆಚ್ಚಾಗಿದೆ. ಮತ್ತು ಹಿಂದುಳಿದ ಸಂಗಡಗಳ ಉಮೇದ್ವಾರರುಗಳಿಗೆ ಎಸೊಂದೂ ರಿಯಾತಿ ತೋರಿಸಿರುವುದಿಲ್ಲ. ಮೆಂಬರೊಂದರ ರೂ ಇನ್ನೂರು ರೇವಣಾತಿ ತೆಗೆದುಕೊಳ್ಳುವ ಕರ್ನಾಟಕ ಕಾಂಗ್ರೆಸು ಕಮಿಟಿಯವರ ಚುನಾವಣಾ ಪ್ರಚಾರವು ನಮಗೆ ಬೇಕಾಗಿಲ್ಲ; ಬದಲು ಅವರ ಪ್ರಚಾರವು ಸಂಯೋಜನೆ ವಕ್ಷದ ಉಮೇದುವಾರರಿಗೆ ಮೂತ್ರ ಒತ್ತಾಸೆಕೊಡುವಂತಾಗುವುದು. ಆದುದರಿಂದ ಸದರಿ ರೇವಣಾತಿಯಿಂದ ನಮ್ಮನ್ನು ಪೂರ್ತಿ ವಿನಾಯಿಸುವಂತೆ ಅಥವಾ ಅವನ್ನು ಬಹುಮಟ್ಟಿಗೆ ಕಡಿಮೆ ಮಾಡುವಂತೆ ನೀವು ದಯವಿಟ್ಟು ಕ. ಪ್ರಾ. ಕಾ. ಕಮಿಟಿಗೆ ಬರೆಯಬೇಕಾಗಿ ಕೋರುತ್ತೇನೆ.

ಈ ದಿನ ಸಾಯಂಕಾಲ ನಾನು ಡೆಲ್ಲಿಯಿಂದ ವಾಪಾಸು ಹೊರಡುವೆನು. ಕೇಂದ್ರ ಚುನಾವಣಾ ಸಮಿತಿಯ ಮುಂದಿನ ಮಿಟಿಂಗು ಯಾವಾಗ ನಡೆಯುವದೆಂದು ನನಗೆ ಗೊತ್ತಾದರೆ ಕೊಡಗಿನ ಸಂಬಂಧ ನಿಮಗೆ ಬೇಕಾದ ಹೆಚ್ಚಿನ ಸೂಹಿತಿಯನ್ನು ಕೊಡಲು ನಾನು ಸದರಿ ಮಿಟಿಂಗಿಗೆ ಅವಶ್ಯವಿದ್ದಲ್ಲು ಡೆಲ್ಲಿಗೆ ಬರುವೆನು.

ತುಂಬಾ ನಂದನೆಗಳೆಂದ

ತಾ ೧೪-೯-೪೧. ನಿಮ್ಮವನಾದ,
ಪಿ. ಐ. ಬೆಳ್ಯಪ್ಪ.

ಮೂರನೆಯ ಪತ್ರ.

"ಗಾಂಧಿ ಭವನ"
ಮಡಿಕೇರಿ, ೧೯-೧೦-೪೧.

ಸ್ತ್ರೀಯ ಪಂಡಿತಜಿಯನರೇ—

ನಾನು ನಿಮ್ಮನ್ನು ತಾ. ೧೫-೯-೪೧ ರಲ್ಲಿ ಡೆಲ್ಲಿಯಲ್ಲಿ ಭೇಟಿಯಾಗಿ ಕೊಡಗಿನ ಪ್ರತ್ಯೇಕ ಪಕ್ಷದ ಕಾಂಗ್ರೆಸು ಕೆಲಸಗಾರರ ಸ್ಥಿತಿಯನ್ನು ಕುರಿತು ನಿವ್ಮೊಂದಿಗೆ ಸಂಭಾಷಣೆ ನಡೆಸಿದಾಗ್ಗೆ, ಕ. ಪ್ರಾ. ಕಾ. ಕಮಿಟಿಯು ನಮ್ಮ ಪಕ್ಷಕ್ಕೆ ಸಂಪೂರ್ಣ ವಿರುದ್ಧವಿದ್ದುದರಿಂದ ನಮ್ಮ ಪಕ್ಷದ ಪರಿಸ್ಥಿತಿಯನ್ನು ನೀವು ಅರಿತುಕೊಂಡು, ಕೊಡಗಿನಲ್ಲಿ ಕಾಂಗ್ರೆಸಿನ ಹೆಸರಿನಲ್ಲಿ ಉಮೇದುವಾರರನ್ನು ಹಾಕದೆ, ಕಾಂಗ್ರೆಸಿನಲ್ಲಿರುವ ಎರಡು ಪಂಗಡಗಳವರನ್ನು ಅವರವರ ಯೋಗ್ಯತೆ ಮೇರೆ ಚುನಾವಣೆಯಲ್ಲಿ ಸ್ಪರ್ಧಿಸಲು ಬಿಡಬೇಕೆಂಬ ನನ್ನ ಸೂಚನೆಗೆ ನೀವು ಪೂರ್ಣ ಸಹಾನುಭೂತಿ ತೋರಿಸಿದಿರಿ. ಇದು ನಮ್ಮ ಪಂಗಡದ ಕೆಲಸಗಾರರಿಗೆ ತುಂಬಾ ಧೈರ್ಯವನ್ನುಂಟು ಮಾಡಿತ್ತು. ನನ್ನ ಸಂಭಾಷಣೆಯ ಸಾರಾಂಶವನ್ನು ಕೊಟ್ಟು, ನಮ್ಮ ಸ್ವಳೀಯ ಎಸೆಂಬ್ಲಿಯ ಚುನಾವಣಾ ಕ್ಷೇತ್ರಗಳು ಇನ್ನೂ ನಿಶ್ಚಯವಾಗದ ಕಾರಣ, ಅದಕ್ಕೆ ಉಮೇದುವಾರರ ನೇಮಕ ಪತ್ರಗಳನ್ನು ಕಳುಹಿಸಲು ಸಮಯ ಮುಂದರಿಸುವಂತೆಯೂ, ಕ. ಪ್ರಾ. ಕಾ. ಕಮಿಟಿಯವರ ಚುನಾವಣಾ ಪ್ರಚಾರವು ನಮಗೆ ಅವಶ್ಯವಿಲ್ಲದ್ದರಿಂದ ನಾವು ಅವರಿಗೆ ಕೊಡಬೇಕಾದ ರೇವಣಾತಿಯನ್ನು ಸಜ ಮಾಡಬೇಕು, ಇಲ್ಲವಾದರೆ ಬಹುಮಟ್ಟಿಗೆ ಕಡಿಮೆ ಮಾಡುವಂತೆಯೂ ಕ. ಪ್ರಾ. ಕಾ ಕಮಿಟಿಗೆ ನೀವು ದಯವಿಟ್ಟು ಬರೆಯಬೇಕೆಂದು ತಾ. ೧೪-೯-೪೧ ನಾನು ನಿಮಗೊಂದು ಪತ್ರ ಬರೆದಿದ್ದೆನು. ಇವ ಕ್ಕೆ ಕ. ಪ್ರಾ. ಕಾ. ಕ. ಯವರೆಂದಾಗಲೀ ನಿಮ್ಮಿಂದಾಗಲೀ ಜವಾಬು ದೊರೆಯದ್ದರಿಂದ ನಾನು ಲೋಕಸಭೆಗೆ ನಮ್ಮ ಪಕ್ಷದ ಉಮೇದುವಾರರಾದ ಶ್ರೀ ಕೆ. ಟಿ. ಉತ್ತಪ್ಪನವರ ನೇಮಕ ಪತ್ರವನ್ನು ಪೂರ್ತಿ ಫೀಸು ಮತ್ತು ರೇವಣಾತಿ ರೂ. ೭೫೦/-ರೊಂದಿಗೆ ನನ್ನದೊಂದು ಪೇಲ್ಕಾಗದ ಸಮೇತ ಸೆಪ್ಟೆಂಬರು ೩೭ರಲ್ಲಿ ಕ. ಪ್ರಾ. ಕಾ. ಕ. ಗೆ ಕಳುಹಿಸಬೇಕಾಯಿತು. ಅದೇ ದಿನ ನಮ್ಮ ನೇಮಕ ಪತ್ರದ ಮತ್ತು ನನ್ನನತ್ರದ ನಕಲೊಂದನ್ನು ನಿಮಗೆ ಸೀದಾ ಕಳುಹಿಸಲಾಯಿತು. ಕ ಪ್ರಾ. ಕಾ. ಕ. ಯವರು ನಮ್ಮ ಉಮೇದುವಾರರ ನೇಮಕ ಪತ್ರವನ್ನು ತಿಳಿಸಾರನ್ನು ಮೂಡದಿರಲು ಈ ತಿಂಗಳ ಪ್ರಾರಂಭದಲ್ಲೇ ತೀರ್ಮಾನಿಸಿದ್ದರೂ ಕೂಡ ಉಮೇದುವಾರರಿಗೆ ಈ ತಾ. ೧೫ರಲ್ಲಿ ಮಾತ್ರ ತಿರಸ್ಕಾರಕ್ಕೆ ಕಾರಣವೇನನ್ನೂ ಸೂಚಿಸಿದೆ ತಂತೀ ಮೂಲಕ ತಿಳಿಸಿದರು. ಕರ್ನಾಟಕ ಚುನಾವಣಾ ಬೋರ್ಡಿನ ಲ್ಲಿರುವ ಇಲ್ಲಿಯ ಸಂಯೋಜನಾ ಪಕ್ಷದ ಮೆಂಬರೊಬ್ಬರು ನಮ್ಮ ಉಮೇದುವಾರರ ಡಿಪಾಜಿಟ್ಟು ಹಣವನ್ನು ಮುಟ್ಟುಗೋಳು ಹಾಕಲ್ಪದುವುದೆಂದು ಹೇಳುತ್ತಿದ್ದಾರೆ. ಆದು ಸಲ್ಪವಿ, ಉಮೇದುವಾರರುಗಳ ಪಟ್ಟಿಯು ಕ. ಪ್ರಾ. ಕಾ. ಕಮಿಟಿಯಿಂದ ಇನ್ನೂ ಬಂದಿಲ್ಲವೆಂದೂ ಆಯ್ತೆ ಆದ ಮೇಲೆ ನಾಮ ನಿಕ್ಕದ ಉಮೇದುವಾರರು ಆಫೀಸ್ರಲನ್ನು ತಮ್ಮ ಆಫೀಸಿಗೆ ಕಳುಹಿಸಬಹುದೆಂದೂ ಮತ್ತು ಆಯ್ಕೆರು ಆಯ್ತೆ ನೂಡುವಾಗ ನನಗೆ ತಿಳಿಸುವರೆಂದೂ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಆಫೀಸಿನಿಂದ ತಾರೀಕು ೭-೧೦-೪೧ರಲ್ಲಿ ನನಗೊಂದು ಕಾರ್ಡು ಬಂದಿದೆ.

ಸ್ವಳೀಯ ಎಸೆಂಬ್ಲಿ ಚುನಾವಣೆಗೆ ಉಮೇದುವಾರರುಗಳ ನೇಮಕ ಪತ್ರಗಳನ್ನು ಕಳುಹಿಸಲು ನಮ್ಮ ಮುಂದೆ ಕೆಚ್ಚಿನ ಸಮಯವಿಲ್ಲ. ೩೪ ಉಮೇದುವಾರರುಗಳ ನೇಮಕ ಪತ್ರಗಳನ್ನು ಒಟ್ಟು ಡಿಪಾಜಿಟ್ಟು ೬,೨೦೦ ರೂಪಾಯಿಗಳೊಂದಿಗೆ ಕ. ಪ್ರಾ. ಕಾ. ಕಮಿಟಿಯ ಮೂಲಕ ಕಳುಹಿಸಿದರೆ ಈ ದೊಡ್ಡ ಮೊಬಲಗನ್ನು ಕೂಡ ಅವರು ಮುಟ್ಟುಗೋಳು ಹಾಕುವರೆಂಬ ಭಯ ನಮಗಿದೆ. ನೀವು ಒಪ್ಪಿದರೆ ಡಿಪಾಜಿಟ್ಟು ಹಣವನ್ನು ಅ ಭಾ. ಕಾ. ಕಮಿಟಿಗೆ ಕಳುಹಿಸಲು ತಯಾರಿದ್ದೇನೆ ನೇಮಕ ಪತ್ರಗಳನ್ನು ಕ. ಪ್ರಾ. ಕಾ. ಕಮಿಟಿಯ ಮೂಲಕ ಕಳುಹಿಸುವ ಮುಂಚಿತವಾಗಿ ನಮ್ಮ ಪಕ್ಷದ ಉಮೇದ್ವಾರರುಗಳನ್ನು ಎಲ್ಲಾ ಕ್ಷೇತ್ರಗಳಲ್ಲಿ ಚುನಾವಣೆಗೆ ನಿಲ್ಲಲು ಬಿಡುವೆವೋ ಎಂಬುದನ್ನು ತಿಳಿಸಿದರೆ ನಮಗೆ ತುಂಬಾ ಸಹಾಯವಾಗುತ್ತಿತ್ತು. ತೊಂದರೆಯನ್ನು ದಯವಿಟ್ಟು ಕ್ಷಮಿಸಿ. ಒಂದು ಪಂಕ್ತಿ ಜವಾಬಿಗೆ ಋಣಿಯೊಗುವೆನು.

ನಿಮ್ಮವನಾದ,
ಪಿ. ಐ. ಬೆಳ್ಯಪ್ಪ.

ಅಕ್ಟೋಬರು ಅಂತ್ಯವಲ್ಲಿ ಶ್ರೀ ಪಿ. ಐ. ಬೆಳ್ಯಪ್ಪನವರು ಡೆಲ್ಲಿಗೆ ಹೋಗಿ ತಾ. ೨೯ರಲ್ಲಿ ಪಂಡಿತಜೀಯವರನ್ನು ಭೇಟಿ ಮಾಡಿ ಅವರಿಗೆ ಕೊಟ್ಟ ಅಪ್ಪೀಲು.—

ಪಂಡಿತ ಜವಾಹರ್‌ಲಾಲ್ ನೆಹರುರವರಿಗೆ—
ಅಧ್ಯಕ್ಷರು, ಇಂಡಿಯಾ ನೇಶನಲ್ ಕಾಂಗ್ರೆಸ್, ನ್ಯೂಡೆಲ್ಲಿ.

ಮಾನ್ಯ ಮಹಾಶಯರೆ,

ಕೊಡಗಿನ ಪ್ರತ್ಯೇಕ ಪಕ್ಷದ ಕಾಂಗ್ರೆಸ್ಸು ಕೆಲಸಗಾರರಾದ ನಾವು ಈ ಕೆಳಗಿನ ವಿಚಾರಗಳನ್ನು ಆಲೋಚನಾ ಮತ್ತು ತೀರ್ಮಾನದ ಬಗ್ಗೆ ನಿಮ್ಮ ಮುಂದೆ ಇಡುವವರಿದ್ದೇವೆ.

ಕೊಡಗಿನಲ್ಲಿರುವ ಕಾಂಗ್ರೆಸ್ ಕೆಲಸಗಾರರ ಎರಡು ಪಂಗಡಗಳಲ್ಲಿ, ಒಂದು ಕೊಡಗನ್ನು ಪ್ರತ್ಯೇಕವಾಗಿಟ್ಟುಕೊಳ್ಳಬೇಕೆಂದೂ, ಇನ್ನೊಂದು ಅದನ್ನು ಮೈಸೂರಿನೊಡನೆಯೂ ಕರ್ನಾಟಕದೊಂದಿಗೆ ಸಂಯೋಜನೆ ಮಾಡಬೇಕೆಂದೂ ಪ್ರಯತ್ನಿಸುತ್ತಿರುವದು ನಿಮಗೆ ತಿಳಿಯದ್ದಲ್ಲ. ನಮ್ಮ ಜಿಲ್ಲಾ ಕಾಂಗ್ರೆಸು ಕಮಿಟಿಯು ಕ. ಪ್ರಾ. ಕಾ. ಸಮಿತಿಯ ಅಧೀನವಲ್ಲಿರುವದಾಗಿದೆ. ಕೊಡಗು ಜಿಲ್ಲಾ ಕಾಂಗ್ರೆಸ್ ಸಮಿತಿಯ ಚುನಾವಣೆಯು ಕ್ರಮಬದ್ಧವಾಗಿ ನಡೆಯದ್ದರಿಂದ ಅಸಹಕಾರ ಮೂಡಿದ ಕಾರಣ ಅದರಲ್ಲಿ ಈಗ ಸಂಯೋಜನಾವಾದಿಗಳು ಮೂತ್ರ ಇರುವರು. ಕೊಡಗಿನ ಸಂಯೋಜನೆಯೆಲ್ಲಿ ಪೂರ್ಣ ನಂಬಿಕೆಯಿರುವ ಕ. ಪ್ರಾ. ಕಾ. ಕಮಿಟಿಯವರು ಇಲ್ಲಿಯ ಸಂಯೋಜನ ಪಕ್ಷವನರಿಗೆ ತುಂಬಾ ಬೆಂಬಲ ಕೊಡುತ್ತಿರುವರು.

ಆದಕಾರಣ ಕ. ಪ್ರಾ. ಕಾ. ಕಮಿಟಿಯವರಿಂದ ನ್ಯಾಯ ಸಿಕ್ಕುವದೆಂದು ನಾವು ನಿರೀಕ್ಷಿಸಲಾರೆವು. ಆ ಚುನಾವಣೆಯ ಸಂಬಂಧ ತಾ. ೧೯-೨-೪೧ರಲ್ಲಿ ನಾವು ಕೇಂದ್ರ ಚುನಾವಣಾ ಟ್ರಿಬ್ಯೂನಲ್‌ಗೆ ಕಳುಹಿಸಿದ ಅಪೀಲು ಇನ್ನೂ ವಿಚಾರಣೆಗಾಗಿಲ್ಲ. ಜನರಲ್ ಚುನಾವಣೆಯು ಪ್ರಾರಂಭಿಸಿತ್ತಿರುವದರಿಂದ ಶ್ರೀ ಪಿ. ಐ. ಬೆಳ್ಯಪ್ಪನವರು ನಮ್ಮ ಪಕ್ಷದ ಪರ ನಿಮ್ಮನ್ನು ನೆಪ್ಟೆಂಬರ್ ೧೩ರಲ್ಲಿ ಡೆಲ್ಲಿಯಲ್ಲಿ ಭೇಟಿ ಮಾಡಿ ಚುನಾವಣೆಯಲ್ಲಿ ನಮ್ಮ ಸ್ಥಿತಿ ಹೇಗಿರಬೇಕೆಂಬುದನ್ನು ಕುರಿತು ನಿಮಗೆ ವಿವರಿಸಿರುವರು.

ನೀವು ನಮ್ಮ ಕಷ್ಟವನ್ನು ಅರಿತುಕೊಂಡು ಕೊಡಗಿನಲ್ಲಿ ಬರುವ ಚುನಾವಣೆಗೆ ಕಾಂಗ್ರೆಸಿನ ಹೆಸರಿನಲ್ಲಿ ಉಮೇದ್ವಾರರುಗಳನ್ನು ನಿಲ್ಲಿಸಬೆ, ಚುನಾವಣೆಯಲ್ಲಿ ಗೆದ್ದ ಮೇಲೆ ತಾವು ಎಸೆಂಬ್ಲಿ ಮತ್ತು ಪಾರ್ಲಿಮೆಂಟಿನಲ್ಲಿ ಕಾಂಗ್ರೆಸು ಪಾರ್ಟಿ ಮೆಂಬರುಗಳಾಗಿ ಇರುವೆವೆಂದು ಕಾಂಗ್ರೆಸು ಪ್ರತಿಜ್ಞೆಗೆ ಸಹಿ ಮಾಡಿ ಕಾಂಗ್ರೆಸ್ಸಿನ ಎರಡು ಪಕ್ಷದ ಕೆಲಸಗಾರರನ್ನು ತಮ್ಮತಮ್ಮ ಯೋಗ್ಯತೆ ಮೇಲೆ ಚುನಾವಣೆಯಲ್ಲಿ ಸ್ಪರ್ಧಿಸಲು ಬಿಡುವ ನೂಚನೆಗೆ ನೀವು ಸಹಾನುಭೂತಿಯನ್ನು ತೋರಿಸಿದ್ದ ನಮ್ಮ ಪಕ್ಷದ ಕೆಲಸಗಾರರಿಗೆ ತುಂಬಾ ಧೈರ್ಯವನ್ನು ಕೊಟ್ಟ ಕಾರಣ ನಮ್ಮ ನೇಮಕ ಪತ್ರಗಳನ್ನು ನಿಮ್ಮ ಸೂಚನೆಯಂತೆ ಕ. ಪ್ರಾ. ಕಾ. ಕ. ಯ ಮೂಲಕ ಕಳುಹಿಸಲು ನಿಶ್ಚೈಸಿವೆವು. ಹಾಗೆಯೇ ಲೋಕಸಭೆಗೆ ನಮ್ಮ ಪಕ್ಷದ ಶ್ರೀ ಕೆ. ಟಿ. ಉತ್ತಪ್ಪನವರ ನೇಮಕಪತ್ರವನ್ನು ತಾ. ೩೭-೯-೪೧ರಲ್ಲಿ ರೂ. ೭೫೦/- ಕೇವಣಾತಿಯೊಂದಿಗೆ, ಮುಂದಿನ ಚುನಾವಣೆಯಲ್ಲಿ ನಮ್ಮ ಸ್ಥಿತಿಯನ್ನು ಸ್ಪಷ್ಟವಾಗಿ ವಿವರಿಸುವ ಒಂದು ಪತ್ರ ಸಮೇತ ಕಳುಹಿಸಲಾಯಿತು. ಕ. ಪ್ರಾ. ಕಾ. ಕಮಿಟಿಯವರಿಂದ ನಮಗೆ ನ್ಯಾಯ ದೊರೆಯಲಾರದೆಂಬ ಅನುಭವದ ಮೇರೆ, ಸದರಿ ನೇಮಕ ಪತ್ರದ ಮತ್ತು ಮೇಲ್ಕಾಗದದ ನಕಲನ್ನು ನಿಮಗೆ ಸೀದಾ ಕಳುಹಿಸಿದ್ದೆವು.

ಕ. ಪ್ರಾ. ಕಾ. ಕಮಿಟಿಯವರು ಉಮೇದ್ವಾರರ ನೇಮಕ ಪತ್ರಗಳನ್ನು ಬಿಟ್ಟು ಸಂಯೋಜನ ಪಕ್ಷವಲಂಬಿಸಿದ್ದಾರೆ ರಾದ ಶ್ರೀ ಎನ್. ಸೋಣ್ಣಪ್ಪನವರ ನೇಮಕ ಪತ್ರವನ್ನು ಸಿಫಾರಸ್ಸು ಮಾಡಲು ಈ ತಿಂಗಳ ಪ್ರಾರಂಭದಲ್ಲೇ ನಿಶ್ಚೈಸಿದ್ದರೂ ಅದನ್ನು ನಮ್ಮ ಉಮೇದ್ವಾರರಿಗೆ ತಾ. ೧೫ರಲ್ಲಿ ಮಾತ್ರ ತಂತಿ ಮೂಲಕ ಕಳಿಸಿದರು. ಅಲ್ಲದೆ ರೂ. ೬೦೦೦ ಡಿಪಾಜಿಟ್ಟನ್ನು ನಮ್ಮ ಉಮೇದ್ವಾರರಿಗೆ ಪಾನಾನು ಕೂಡಲಾಗುವುದಿಲ್ಲವೆಂದು ಇಲ್ಲಿಯ ಸಂಯೋಜನ ಪಕ್ಷದವರು ಅನ್ನುತ್ತಿದ್ದಾರೆ. ಹೇಗೂ ನಮ್ಮ ಉಮೇದುವಾರರು ಸೆಂಟ್ರಲ್ ಪಾರ್ಲಿಮೆಂಟು ಬೋರ್ಡಿಗೆ ಅಫೀಲನ್ನು ಕಳುಹಿಸಿರುವರು.

ಇಲ್ಲಿಯ ಎಸೆಂಬ್ಲಿಯ ಸ್ಥಾನಗಳಿಗೆ ನೇಮಕ ಪತ್ರಗಳನ್ನು ಕಳುಹಿಸಲು ಸಮಯವು ಬಹು ಸಮೀಪಿಸುತ್ತಿದೆ. ನಿಮ್ಮ ಸೂಚನೆಯಂತೆ ನಮ್ಮ ನೇಮಕ ಪತ್ರಗಳನ್ನು ಕ. ಪ್ರಾ ಕಾ. ಕಮಿಟಿಯವರ ಮೂಲಕ ಕಳುಹಿಸಲು ನಾವು ತಯಾರಿದ್ದರೂ ನಮ್ಮ ಉಮೇದ್ವಾರರುಗಳನ್ನು ಎಲ್ಲಾ ಕ್ಷೇತ್ರಗಳಲ್ಲಿ ನಿಲ್ಲಲು ಬಿಡದಿದ್ದರೆ ನಾವು ಉಮೇದ್ವಾರರುಗಳಿಗಾಗಿ ಕಳುಹಿಸಬೇಕಾದ ರೂ. ೭೩೦೦ ತೇವಣಾತಿ ಮುಟ್ಟು ಗೋಲು ಹಾಕಲ್ಪಡುವ ಭಯ ನನಗಿದೆ.

ಆದ್ದರಿಂದ ನಮ್ಮ ನೇಮಕ ಪತ್ರಗಳನ್ನು ಕ. ಪ್ರಾ. ಕಾ. ಕಮಿಟಿಯವರ ಮೂಲಕ ಕಳುಹಿಸುವ ಮುಂಚಿತವಾಗಿ ನಮ್ಮ ಪಕ್ಷದ ಉಮೇದ್ವಾರರುಗಳನ್ನು ನ್ಯಾಯವಾಗಿ ಎಲ್ಲಾ ಕ್ಷೇತ್ರಗಳಲ್ಲಿ ನಿಲ್ಲಲು ಒಬ್ಬರನ್ನು ಪಾರ್ಲಿಮೆಂಟಿಗೂ, ನಿಲ್ಲಲು ಬಿಡಬೇಕೆಂದು ಕೇಳಿಕೊಳ್ಳುತ್ತೇವೆ. ಇದು ಕೂಡಲೆ ಸಾಧ್ಯವಿಲ್ಲವಾದರೆ ನಮ್ಮ ನೇಮಕ ಪತ್ರಗಳನ್ನು ಮಾತ್ರ ಕ. ಪ್ರಾ. ಕಾ. ಕಮಿಟಿಯವರ ಮೂಲಕ ಕಳುಹಿಸಿ ಡಿಪಾಜಿಟ್ಟು ಹಣವನ್ನು ನೀವು ನಮ್ಮ ಉಮೇದ್ವಾರರುಗಳನ್ನು ಎಲ್ಲಾ ಕ್ಷೇತ್ರಗಳಲ್ಲಿ ನಿಲ್ಲಲು ಬಿಡುವ ತೀರ್ಮಾನ ಮಾಡಿದ ನಂತರ ಕಳುಹಿಸುವಂತೆ ಬಿಡಬೇಕೆಂದೂ, ಇಲ್ಲವಾದರೆ ಸದರಿ ಹಣವನ್ನು ನೀವಾ ಅಖಿಲ ಭಾರತ ಕಾಂಗ್ರೆಸು ಕಮಿಟಿಗೆ ಕಳುಹಿಸಲು ಬೇಡಬೇಕೆಂದೂ ಕೇಳಿಕೊಳ್ಳುತ್ತೇನೆ. ಕೊಡಗು ಪ್ರತ್ಯೇಕ ನಿಲ್ಲಬೇಕೋ ಯಾ ಸಂಯೋಜನೆಯೊಗಬೇಕೋ ಎಂಬ ಅತೀ ಪ್ರಾಮುಖ್ಯ ಪ್ರಶ್ನೆಯನ್ನು ಓಟುದಾರಗಳಿಗೆ ತಮ್ಮ ಅಭಿಪ್ರಾಯವನ್ನು ಸೂಚಿಸಲು ಒಂದು ಅವಕಾಶವನ್ನು ಮಾಡಬೇಕೆಂಬ ಉದ್ದಿಶ್ಯದಿಂದಲೇ ನಮ್ಮ ಉಮೇದ್ವಾರರುಗಳನ್ನು ಎಲ್ಲಾ ಕ್ಷೇತ್ರಗಳಲ್ಲಿ ಚುನಾವಣೆಗೆ ನಿಲ್ಲಲು ಬಿಡಬೇಕೆಂದು ನಿಮ್ಮಲ್ಲಿನುವ್ಯ ವಿಶೇಷ ಅಫೀಲಾಗಿದೆ. ಈ ಪ್ರಶ್ನೆಯನ್ನು ಇಲ್ಲಿಯ ಜನರು ತಮ್ಮ ಪ್ರಾಣದಷ್ಟೇ ಪ್ರಾಮುಖ್ಯವೆಂದು ಎಣಿಸುವದರಿಂದ ಬರುವ ಚುನಾವಣೆಯು ಈ ಪ್ರಶ್ನೆಯ ಮೇಲೆಯೇ ನಡೆಯುವದು. ಕಾಂಗ್ರೆಸಿನಲ್ಲಿರುವ ಪ್ರತ್ಯೇಕ ಪಕ್ಷದವರನ್ನು ಎಲ್ಲಾ ಕ್ಷೇತ್ರಗಳಲ್ಲಿ ಚುನಾವಣೆಗೆ ನಿಲ್ಲಲು ಬಿಡದಿದ್ದರೆ ಸ್ವತಂತ್ರವಾಗಿ ನಿಲ್ಲುವ ಪ್ರತ್ಯೇಕವಾದಿ ಬಲವಾದ ಉಮೇದ್ವಾರರುಗಳ ಮುಂದೆ ಕಾಂಗ್ರೆಸಿಗೆ ಜಯ ದೊರೆಯುವುದು ಕಷ್ಟ.

ನಿಮ್ಮವರಾದ ಅಖಿ ಕಾಂಗ್ರೆಸು
ತಾ. ೨೯–೧೦–೫೫. ಕೆಲಸಗಾರರು.

ಮೇಲಿನ ಅಫೀಲನ್ನು ಪಂಡಿತಜಿಯವರು ಕೇಂದ್ರ ಇಲೆಕ್ಷನ್ ಸಮಿತಿಯು ಮುಂದೆ ಇಟ್ಟಾಗ್ಗೆ ಕೊಡಗಿನ ಕಾಂಗ್ರೆಸ್ಸು ಎರಡು ಪಂಗಡವಾಗಿರುವುದನ್ನು ಚುನಾವಣೆಯಲ್ಲಿ ಪ್ರತಿನಿಧಿಸಲು ಬಿಡಲಾಗಿರುವುದಿಲ್ಲವೆಂಬ ಸದರಿ ಅಭಿಪ್ರಾಯವನ್ನು ತೆರ್ಮಾನಿಸಿದ್ದನ್ನು ಅ. ಭಾ. ಕಾ. ಕಮಿಟಿಯ ಕೆ ಟಂಬಂಧಿಸಿ ಶ್ರೀಮತಿ ಇಂದಿರಾಗಾಂಧಿಯವರಿಗೆ ತಾ. ೧೫ನೇ ಅವರ ಈ ಕೆಳಗಿನ ರಾಜಿನಾಮೆ ಪತ್ರವನ್ನು ಕಾಂಗ್ರೆಸು ಪ್ರೆಸಿಡೆಂಟರಿಗೆ ಕೆ ಪ್ರೆಟರಿಯವರ ಮೂಲಕ ಕಳುಹಿಸಿದರು.

ಪಂಡಿತ ಜವಾಹರಲಾಲ್ ನೆಹರೂ ರವರಿಗೆ–

ಅಧ್ಯಕ್ಷರೆ, ಇ ಡಿಯನ್ ನೇಶನಲ್ ಕಾಂಗ್ರೆಸ್.

ಮಾನ್ಯ ಮಹಾಶಯರೇ,

ಕೊಡಗಿನ ಕಾಂಗ್ರೆಸಿನ ಪ್ರತ್ಯೇಕ ಪಕ್ಷದ ಕೆಲವರ ನಡವಳಿಕೆಯಿಂದ ನಾವು ಕಾಂಗ್ರೆಸು ಸದಸ್ಯತನಕ್ಕೆ ನಮ್ಮ ರಾಜಿನಾಮೆಯನ್ನು ಈ ಕೆಳಗಿನ ಕಾರಣಗಳಿಗಾಗಿ ಒಹುದ ಬದಿಂದ ನಿಮ್ಮ ವಂದೆ ಇಡುವ ವರ್ತಿಸುತ್ತೇವೆ.

ನಮ್ಮಲ್ಲಿ ಹಲವರು ಇಂಡಿಯನ್ ನೇಶನಲ್ ಕಾಂಗ್ರೆಸಿನಲ್ಲಿ ಕಳೆದ ಇಪ್ಪತ್ತಕ್ಕಂದ ವರ್ಷಗಳಿಂದ ಸದಸ್ಯತನವನ್ನು ಉಳಿಸಿಕೊಂಡು ಬಂದಿದ್ದೇವೆ. ಮಹಾತ್ಮ ಗಾಂಧಿಯವರ ಮಂದಾಳತನದಲ್ಲಿ ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯ ದೊರೆತಾಗ ನಾವು ಆನಂದ ಭರಿತರಾದೆವು. ಈ ಸಂತೋಷದ ಘಟನೆಯು ನಂತರ ನಮ್ಮ ಮನಸ್ಸು ನಮ್ಮ ಪ್ರಾಂತದ ಭವಿಷ್ಯತ್ತಿನ ಕಡೆಗೆ ತಿರುಗಿತು. ದೌರ್ಭಾಗ್ಯದಿಂದ ಕೊಡಗಿನ ಕಾಂಗ್ರೆಸು ಕೆಲಸಗಾರರಲ್ಲಿ ಕೊಡಗನ್ನು ಪ್ರತ್ಯೇಕ ಇಟ್ಟುಕೊಳ್ಳಬೇಕೆಂಬ ಮತ್ತು ದೊಡ್ಡ ಪ್ರಾಂತ್ಯಕ್ಕೆ ಸಂಯೋಜನೆ ಮಾಡಬೇಕೆಂಬ ಎರಡು ಅಭಿಪ್ರಾಯಗಳು ಬಲವಾದುವು. ಕೊಡಗನ್ನು ಸಂಯೋಜನೆ ಮಾಡಬೇಕೆಂಬ ಖಚಿತ ಅಭಿಪ್ರಾಯವು ಕೆ. ಪ್ರಾ. ಕಾ. ಕಮಿಟಿಯು ಕೊಡಗಿನ ಸಂಯೋಜನಾ ಪಕ್ಷಕ್ಕೆ ಪ್ರಾರಂಭದಿಂದಲೇ ಒತ್ತಾಸೆ ಕೊಡುತ್ತಾ ಪ್ರತ್ಯೇಕ ಪಕ್ಷದ ಕೆಲವು ಕಾರ್ಯಗಳಿಗೆ ಅಡಚಣೆ ತಂದೊಡ್ಡುತ್ತಾ ಸದ್ರಿ ಪಕ್ಷವನ್ನು ನಾಮಲೆಗೊತ್ತಲು ಪ್ರಯತ್ನಪಡುತ್ತಾ ಬಂದಿರುವರು.

ಹೊಸ ರಾಜ್ಯಘಟನೆಯು ಪ್ರಕಾರ ಮುಂದಿನ ಹೊಸ ಎಸೆಂಬ್ಲಿಗೆ ಕೊಡಗಿನ ಭವಿಷ್ಯ ನಿರ್ಧರಿಸುವ ವಿಷಯ ಪೂರ್ತಿ ಅಧಿಕಾರವಿರುವದಿಂದ ಈ ವಿಚಾರವನ್ನು ಕುರಿತು ಬರುವ ಚುನಾವಣೆಯಲ್ಲಿ ಜನತೆಯ ಅಭಿಪ್ರಾಯ ತಿಳಿಯುವದು ಉತ್ತಮವೆಂದೂ ನಾವು ಭಾವಿಸಿ, ಕಾಂಗ್ರೆಸು ಪ್ರತಿಜ್ಞೆಗೆ ಸಹಿ ಮಾಡಿ ಚುನಾವಣೆ ನಂತರ ಎಸೆಂಬ್ಲಿ ಮತ್ತು ಪಾರ್ಲಿಮೆಂಟನಲ್ಲಿ ಕಾಂಗ್ರೆಸ್ ಪಾರ್ಟಿಮೆಂಬರುಗಳಾಗಿ ಇರುವೆವೆಂದು ಒಪ್ಪಿದರೆ ಕೊಡಗಿನ ಎರಡು ಪಕ್ಷದವರನ್ನು ಬರುವ ಚುನಾವಣೆಯಲ್ಲಿ ಕಮ್ಮ ಕಮ್ಮ ಯೋಗ್ಯತೆ ಮೇರೆ ಸ್ಪರ್ಧಿಸಲು ಬಿಡಬೇಕೆಂದು ನಿವೃತ್ತಿ ಎಸೆಂಬ್ಲಿಗೆ ಪಂಡಿತಾ ಇರುವಷ್ಟು. ಆ ಕಪ್ಪೇಲು ಮಾಡಿದ್ದಾಗಿದೆ. ದುರ್ದೈವಿಯಂದ ಆ ಅವಕಾಶವು ನಮಗೆ ದೊರೆಯಲಿಲ್ಲ ಆದರೆ ಹಲವು ವರ್ಷಗಳಿಂದ ನಮ್ಮ ಜೀವನ ಅಗಿದ್ದ ಸಂಸ್ಥೆಗೆ ಬಹು ದ್ರೋಹದಿಂದ ರಾಜಿನಾಮೆಯನ್ನು ಕೊಡಬೇಕಾದರೂ ಕೂಡ ಈ ಚುನಾವಣೆಯನ್ನು ನಮ್ಮ ಪ್ರಾಂತ್ಯದ ಭವಿಷ್ಯತ್ತನ್ನು ನಿಶ್ಚಯಿಸಲು ಉಪಯೋಗಿಸದಿದ್ದರೆ ನಾವು ನಮ್ಮ ದೇಶಕ್ಕೆ ನಮ್ಮ ಕರ್ತವ್ಯವನ್ನು ಮಾಡಿದಂತಾಗುವುದಿಲ್ಲವೆಂದು ನಮಗನಿಸುತ್ತದೆ. ನಾವು ಬೇರೆ ಯಾವ ಪಾರ್ಟಿಗೂ ಸೇರಲು ಇಚ್ಛೆಗುವುದಿಲ್ಲವಾದುದರಿಂದ ಈ ಅನಿಲುವಿಕೆಯು ಶಾಶ್ವತಿಕ ವಾಗುವುದೇ ವಿನಃ ಚುನಾವಣೆಯಲ್ಲಿ ಜಯ ಹೊಂದಿದ ನಂತರ ಪುನಹ ಕಾಂಗ್ರೆಸಿಗೆ ಏನೊಂದೂ ಸಂತೋಷವಲ್ಲದೆ ಸೇರಲಿರುವೆವು.

ನಿಮ್ಮವರಾದ
ಅಖಿ ಕಾಂಗ್ರೆಸು ಕೆಲಸಗಾರರು.

ಕಾಂಗ್ರೆಸು ಪ್ರೆಸಿಡೆಂಟರ ಉತ್ತರ.

ಅಖಿಲ ಭಾರತ ಕಾಂಗ್ರೆಸ್ ಕಮಿಟಿ,
ನ್ಯೂ ಡೆಲ್ಲಿ,
೩–೧೧–೫೫.

ಪ್ರಿಯ ಬೆಳ್ಯಪ್ಪ,

ನೀವು ಮತ್ತು ಹಲವರು ಇಂಡಿಯನ್ ನೇಶನಲ್ ಕಾಂಗ್ರೆಸಿನ ಸದಸ್ಯತನಕ್ಕೆ ರಾಜಿನಾಮೆ ಕೊಡುತ್ತೇನೆಂದು ಸಹಿ ಮಾಡಿ ಕಳುಹಿಸಿದ ಪತ್ರವೊಂದು ಈ ದಿನ ನನಗೆ ಸಿಕ್ಕಿದೆ. ಈ ಪತ್ರದಲ್ಲಿ ಕಾರಣಕಿಲ್ಲ. ನೀವು ಕೆಲವೆ ದಿವಸಗಳ ಹಿಂದೆ ಡೆಲ್ಲಿಗೆ ಬಂದಾಗ್ಗೆ ಈ ಪತ್ರವನ್ನು ತಂದಿರಬಹುದೆಂದು ನನ್ನ ಊಹನೆ ಅಂದರೆ, ನೀವು ಕೆಲವು ಸಮಯದ ಹಿಂದೆಯೇ ಕೊಡಗನ್ನು ಸಂಯೋಜನೆಗೊಂಡು ಹಲವು ಸ್ಟೇಟ್‌ಗಳಿಗೆ ಸಂಬಂಧಪಟ್ಟ ಖಾನೂನನ್ನು ಪಾರ್ಲಿಮೆಂಟ್ ಸಭೆಯು ಮಾಡಿದೆ. ಇದರಿಂದ ಸಂಯೋಜನೆಯ ಮೂತ ಕೂಡಲೆ ಮಾತ್ರವಲ್ಲ, ಕೆಲವು ಸಮಯದ ವರೆಗೆ ಇಲ್ಲವೇನೆಂಬ ಅರ್ಥವಾಗುತ್ತೆ. ಇಲ್ಲವಾದರೆ ಕೊಡಗಿನ ಲ್ಲಿ ಚುನಾಯಿತ ಎಸೆಂಬ್ಲಿಗೆ ಕೆಲವು ಅಧಿಕಾರಗಳನ್ನು ಕೊಡುವ ಈ ಖಾನೂನು ಮಾಡಿ ಪ್ರಯೋಜನವಿಲ್ಲ.

ಹೀಗಿರುವಾಗ್ಗೆ ಸಂಯೋಜನೆ ಪ್ರಶ್ನೆಯ ಮೇಲೆ ಚುನಾವಣೆಯನ್ನು ಹಿಡಿಸುವುದು ಅಸಂಬದ್ಧ; ಬಹು ಅಕಾಲವಾದುದ್ದು ಮತ್ತು ಅವಿವೇಕದ್ದು. ಯಾವ ವಿಚಾರದ ಮೇಲಾದರೂ ಅಭಿಪ್ರಾಯ ಕೊಡುವ ಹಕ್ಕು ಕೊಡಗಿನ ಹೊಸ ಎಸೆಂಬ್ಲಿಗೆ ಪಂಡಿತಾ ಇರುವಷ್ಟು. ಆದರೆ ಸಂಯೋಜನೆಯ ಪ್ರಶ್ನೆಯನ್ನು ಪರಿಸ್ಥಿತಿಯ ಒತ್ತಾಯದಿಂದ ಮುಂದಕ್ಕೆ ತಳ್ಳಿ ಅದನ್ನು ಚುನಾವಣೆಯ ಪ್ರಶ್ನೆಯಾಗಿ ಮಾಡದಿದ್ದರೆ ಇದರ ವಿಚಾರ ಕೊಡುವ ಅಭಿಪ್ರಾಯಕ್ಕೆ ಹೆಚ್ಚಿನ ಬೆಲೆ ಇರಲಾರದು. ಹೇಗೂ ಈ ವಿಚಾರವನ್ನು ಕೊಡಗಿನ ಎಸೆಂಬ್ಲಿಯು ತೀರ್ಮಾನಿಸಲಾರದು. ಆದರೆ ಪಾರ್ಲಿಮೆಂಟ್ ಸಭೆಯು ಕೊಡಗಿನ ಜನರ ಅಭಿಪ್ರಾಯವನ್ನು ಮಾತ್ರವಲ್ಲ ಇತರ ಹಲವು ಮುಖ್ಯ ವಿಚಾರಗಳನ್ನು ಗಣನೆಗೆ ತೆಗೆದು ಕೊಂಡು ತೀರ್ಮಾನಿಸುವುದು.

ಹೇಗೂ ನೀವು ನಿಮ್ಮ ಪತ್ರದಲ್ಲಿ ಸೂಚಿಸಿರುವ ರೀತಿಯನ್ನು ಮಾಡಲೇಬೇಕೆನ್ನುವದಾದರೆ ನಮ್ಮ ಅಡ್ಡಿ ಇಲ್ಲ ಈಗ ಕಾಂಗ್ರೆಸು ಸ್ವಾಭಾವಿಕವಾಗಿ ಬೇರೆ ಜನರಿಂದ ಬಿನ್ನ ಉಪ ಪಮುಖರುಗಳನ್ನು ಆರಿಸುವುದು. ಆದರೂ ನಾವು ಸಂಯೋಜನೆಯ ವಿಚಾರ ಗಮನಿಸುವುದಿಲ್ಲ.

ನೀವು ಕಾಂಗ್ರೆಸ್ಸಿನ ಮೆಂಬರುತನಕ್ಕೆ ರಾಜಿನಾಮೆಕೊಟ್ಟರುವುದರಿಂದ ಇನ್ನು ಮುಂದಕ್ಕೆ ನಿಮ್ಮೊಡನೆ ಮೆಂಬರ್‌ಷಿಪ್ಪಿಲ್ಲವೆಂದೂ ವರ್ತಿಸುವೆವು. ಪ್ರಾಥಮಿಕ ಮೆಂಬರುತನದ ರಾಜಿನಾಮೆ ಯನ್ನು ಸ್ಥಳೀಯ ಕಮಿಟಿಗೆ ಕಳುಹಿಂಪಕ್ಕದ್ದು. ನಾವು ಇಲ್ಲಿ ಪ್ರಾಥಮಿಕ ಮೆಂಬರುತನದ ಬಾಬಿಲೆ ಇಡುವುದಿಲ್ಲ.

ನಿಮ್ಮವನಾದ
ಜವಾಹರ್‌ಲಾಲ್ ನೆಹರು.

ಕಾಂಗ್ರೆಸು ಪ್ರೆಸಿಡೆಂಟರ ಮೇಲಿನ ಜವಾಬಿನಲ್ಲಿ ರಾಜಿನಾಮೆ ಪತ್ರಕ್ಕೆ ತೀರಿಕ ಹಾತೆಲಿಲ್ಲವೆಂದು, ಅದನ್ನು ಮೊದಲೇ ತಿಲಂಗಿತ್ತಿಂದೂ ಹೇಳಲ್ಪಟ್ಟಿದೆ. ಶ್ರೀ. ಬೆಳ್ಯಪ್ಪನವರು ಡೆಲ್ಲಿಗೆ ಹೋಗುವ ಮುಂಚೆ–ಎಲ್ಲಾ ಕ್ಷೇತ್ರಗಳಲ್ಲಿ ತಮ್ಮ ಉಮೇದ್ವಾರರನ್ನು ಚುನಾವಣೆಗೆ ನಿಲ್ಲಲು ಬಿಡಬೇಕೆಂದು ಕಾಂಗ್ರೆಸು ಅಧ್ಯಕ್ಷರಿಗೆ ಕೊಡುವ ಅಪ್ಪೀಲನ್ನು ಅವರು ತಿರಸ್ಕರಿಸಿದರೆ, ಕಾಂಗ್ರೆಸು ಮೆಂಬರು ತನಕ್ಕೆ ರಾಜಿನಾಮೆ ಕೊಡಬೇಕೆಂದು ಪ್ರತ್ಯೇಕ ಪಕ್ಷದವರು ತೀರ್ಮಾನಿಸಿದ್ದರು. ಆಗಲೆ ಆ ರಾಜಿನಾಮೆ ಪತ್ರವು ಡೆಲ್ಲಿಗೆ ತಾ. ೩೦–೧೦–೫೫ ರಲ್ಲಿ ಮಾತ್ರ ಪೊಸ್ಟಪ್ಪಾಲಿನ ಮೂಲಕ ತಲಪಿತ್ತು. ಹೇಗೂ ಇದಕ್ಕೆ ರುಜು ಹಾಕಿದ್ದಾದರೂ ಪಂಡಿತಜಿಯವರ ಜವಾಬು ಸಿಕ್ಕುವ ಮುಂಚೆಯೇ ಆಗಿತ್ತು. ಯಾಕೆಂದರೆ ಅವರ ಜವಾಬು ದೊರೆತನಂತರ ಕೊಡಗಿಗೆ ಬಂದು ರಾಜಿನಾಮೆಗೆ ಸಹಿತೆಗೆವು ವಾಪಸು ಹೋಗುವುದು ಸುಲಭವಿಚಾರವಾಗಿತ್ತಿಲ್ಲ. ಆದರೆ ರಾಜಿನಾಮೆ ಕೊಟ್ಟಿದ್ದಾದರೂ ಸ್ಟೇಟಿಗೆ ಜವಾಬು ಸಿಕ್ಕಿದ ಮೇಲೆ. ಆದ ಕಾರಣ ಅದಕ್ಕೆ ನಿಜವಾದ ತಾರೀಕು ಹಾಕಲು ಸಾಧ್ಯವಿಲ್ಲ. ತಾರೀಕ. ಇಲ್ಲದಿದ್ದರೂ ರಾಜಿನಾಮೆ ಕೊಟ್ಟವರಲ್ಲಿ ಸಂಶಯವೇನೂ ಇಲ್ಲವಷ್ಟೆ.

ಯಾವ ವಿಚಾರದ ಮೇಲಾದರೂ ಅಭಿಪ್ರಾಯ ಕೊಡುವ ಹಕ್ಕು ಕೊಡಗಿನ ಹೊಸ ಎಸೆಂಬ್ಲಿಗೆ ಪಂಡಿತಾ ಇರುವುದು ಎಂದು ಪಂಡಿತಜಿಯವರು ಪ್ರತ್ಯಕ್ಷಪಡಿಸಿರುವರು.

(೬ನೇ ಪುಟಕ್ಕೆ ೩)

ಕೊಡಗು

ತಾ. ೭-೧೨-೧೯೫೧ನೇ ಶುಕ್ರವಾರ

ಓಟರುಗಳ ಮುಂದಿರುವ ಪ್ರಶ್ನೆ.

ಭಾರತದ ಪಾರ್ಲಿಮೆಂಟ್ ಸಭೆಗೂ ಮತ್ತು ಸ್ಥಳೀಯ ಎಸೆಂಬ್ಲಿಗೂ ಚುನಾವಣೆಯು ಸವಿಾಪಿಸುತ್ತಾ ಬಂದ ಹಾಗೆ ಓಟರುಗಳ ಮನಸ್ಸನ್ನು ಗಲಿಬಿಲಿಗೊಳಿಸುವಂಥಾ ಹಲವು ತರಗ ಪ್ರಚಾರಗಳು ನಡಿಸಲ್ಪಡುತ್ತಿವೆ ಕೊಡಗಿನ ಗಂಯೋಜನೆಯು ಪ್ರಶ್ನೆಯು ಈ ಸಾರಿಯ ಚುನಾವಣೆಗೆ ಸಂಬಂಧ ಪಟ್ಟದಲ್ಲವೆಂದು ಕಾಂಗ್ರೆಸ್ಸಿನ ಉಮೇದುವಾರರು ಸಾರುತ್ತಿದ್ದಾರೆ ಚುನಾವಣೆಯಲ್ಲಿ ಜಲವು ಪಾರ್ಟಿ ಸಂಗಡಗಳು ಭಾಗವಹಿಸುವಲ್ಲಿ ಆಯಾಯ ಪಾರ್ಟಿಯವರು ತಪ್ಪಿಸುವುದಿನ ಸರಕಾರದ ಉದ್ದಿಶ್ಯಗಳನ್ನು ಓಟರುಗಳ ಮುಂದಿಡುವುದು ಸ್ವಾಭಾವಿಕ ಅದುದರಿಂದ ಯಾವುದೊಂದು ಪಾರ್ಟಿಗಾದರೂ ಇಂಥಾ ಪ್ರಶ್ನೆಯು ಓಟರುಗಳ ಮುಂದಿಟ್ಟುವುದೇ ಸಲ್ಲದೆಂದು ಹೇಳುವ ಹಕ್ಕಿಲ್ಲ. ಒಂದು ವೇಳೆ ಯಾವ ಪಾರ್ಟಿಯೂ ಒಂದು ವಿಚಾರವನ್ನು ಚುನಾವಣೆಯ ಪ್ರಶ್ನೆಯಾಗಿ ಇಡದಿದ್ದರೆ, ಅದು ಓಟರುಗಳ ದೃಷ್ಟಿಯಲ್ಲಿ ಪ್ರಾಮಾಣ್ಯವಾದದ್ದಾದರೆ ಆ ವಿಷಯವನ್ನು ಉಮೇದುವಾರರುಗಳ ಗಮನಕ್ಕೆ ತಂದಿಟ್ಟು, ಆದರ ಮೇಲೆಯೇ ತಮ್ಮ ಓಟುಗಳನ್ನು ಕೊಡುವ ಹಕ್ಕು ಅವರಿಗಿದೆ. ಈ ವಿಶೇಷವಾದ ಹಕ್ಕನ್ನು ಓಟರುಗಳು ಪಡೆಯದಿರಲಿ

ಈ ಪ್ರಶ್ನೆಯನ್ನು ಅನುಸರಿಸಿ ನಡೆಯಲು ಹೇದಾದರೆ ಕೊಡಗಿನ ಭವಿಷ್ಯತ್ತಿನಂಥ ಮಹಾ ಪ್ರಶ್ನೆಯನ್ನು ಚುನಾವಣೆಯ ಪ್ರಶ್ನೆಯಾಗಿ ಮಾಡುವ ಹಕ್ಕು ಯಾವದಾದರೊಂದು ಪಾರ್ಟಿಗೂ ಇರುವದಲ್ಲದೆ, ಓಟರುಗಳಿಗೂ ಇದೆಯೆಂಬುದರಲ್ಲಿ ಸಂದೇಹವಿಲ್ಲ. ಈ ಹಕ್ಕು ಯಾವ ಸರಕಾರಕ್ಕೂ ಇಲ್ಲ ಈಗ ಸುಮಾರು ೩೦ ವರ್ಷಗಳಿಗಲೇ ಸಂಯೋಜನೆಯ ಪ್ರಶ್ನೆಯು ದೊಕದವರ ಮನಸ್ಸನ್ನು ಕಳವಳಗೊಳಿಸುತ್ತಾ ಇಂದಿದೆ. ಹಿಂದೂದೇಶಕ್ಕೆ ಸ್ವಾತಂತ್ರ್ಯವು ದೊರೆತನಂತರ ಕೊಡಗಿನ ಮುಂದಿನ ಸರಕಾರದ ಪದ್ಧತಿ ಯಾವ ರೀತಿಯದ್ದಾಗಬೇಕೆಂಬ ವಿಚಾರವು ಮುಂದಕ್ಕೆ ಬಂದಾಗ ಭವಿಷ್ಯತ್ತಿನ ಪ್ರಶ್ನೆಯು ವಿಶೇಷ ಪ್ರಾಮುಖ್ಯತೆಯನ್ನು ಕೊಂದಿತು ಈ ಕಂಬಂದ ದೇಶದಲ್ಲಿ ಈಗ ಹಾಲ್ಕೈದು ವರ್ಷಗಳಿಂದ ಬಹು ತೀವ್ರವಾದ ಚಳವಳಿ ನಡೆಯುತ್ತಾ ಇಂದಿದೆ. ಹಲವು ದೇಶೀಯರು ಇದನ್ನು ತಮ್ಮ ಸ್ವಾರ್ಥಕ್ಕೆ ಬೆಲೆಯಿಲ್ಲದ್ದೆಂದು ನೇಮಿಸಿದ್ದಾರೆ. ಅದುದರಿಂದ ಇವನ್ನು ಬಗೆಹರಿಸಲು ಆವಶ್ಯಕತೆಯನ್ನು ಕಾಯುತ್ತಿದ್ದರು. ಅಂಥಾ ಆವಶ್ಯಕತೆಯು ಈಗ ಹಾಸೊನೆಯು ಬಂದ್ದಾಗಿಯೇ ಪರಿಣಮಿಸಿದೆ. ಈಗ ಇದನ್ನು ಕಳಚಿಕೊಳ್ಳುವದು ಬಹಿರ್ದೃಷ್ಟಿಗೆಯು ಈ ದೃಷ್ಟಿಯಿಂದ ನೋಡುವರಿಗೆ ಚುನಾವಣೆಯೇ ಬಹು ಕಾರ್ಯಾಸ್ಮವಾಗಬಹುದು. ಈಗ ಓಟರುಗಳು ತಮ್ಮ ಹಿತದೃಷ್ಟಿಯಿಂದ ಜವಾಬ್ದಾರಿ ಸರಕಾರವನ್ನು ನಡೆಸುವುದಕ್ಕಾಗಿ ಯೋಗ್ಯರಾದ ಮಹನೀಯರನ್ನು ಆರಿಸಿ ಪುಡ

ಕೊಡಗಿನ ಬವಿಷ್ಯ ನಿರ್ಣಯ ಜನತೆಯ ಹಕ್ಕು

ಲೇಃ-"ದೇಶಕ್ಕೇವಿ"

ಈಕೆದ ವಾರದ "ಜನ್ಮ ಭೂವಿ" ಪತ್ರಿಕೆಯಲ್ಲಿ ನೆಹರೂರವರು ಶ್ರೀ ಪಿ. ಇ. ಬೆಕ್ಕಯ್ಯನವರಿಗೆ ಬರೆದ ಪತ್ರದ ನಕಲೊಂದು ಪ್ರಕಟವಾಗಿತ್ತು. ಅದೇ ಪತ್ರವನ್ನು ಹಲ್ಲೆ ಪತ್ರಿಕೆಯಾಗಿಯೂ ಹಲವೆಡೆ ಹಂಚಲಾಗುತ್ತಿದೆ. ಈ ಪತ್ರದ ಹಿನ್ನೆಲೆಯಿಂದ ಕಾಂಗ್ರೆಸಿಗರು ಅಪಪ್ರಚಾರ ಮಾಡುತ್ತಿದ್ದಾರೆಂದರೆ ತಪ್ಪಾಗಲಾರದು. ಆ ವಿಚಾರದಲ್ಲಿ ಜನತೆಯು ನೆಹರೂ ಪತ್ರದ ಹಿನ್ನೆಲೆ ಏನು ಅವರ ನಿಜ ಅರ್ಥವೇನೆಂಬುದನ್ನು ಪರಿಶೀಲಿಸಿ ತಿಳಿಯಬೇಕು.

ಕೊಡಗಿನಲ್ಲಿ ಚುನಾವಣೆಯು ಹತ್ತಿರ ಬಂದಿದೆ. ಉಮೇದುವಾರರನ್ನು ನಿಲ್ಲಿಸುವ ಪರ್ಯಾಲೋಚನೆ ನಡೆಯುತ್ತಿದೆ. ಕೊಡಗಿನಲ್ಲಿ ಕಾಂಗ್ರೆಸು ಒಂದು ಪಕ್ಷವಲ್ಲದೆ ಬೇರೆ ಬಲಯುತವಾದ ಪಕ್ಷಗಳಿಲ್ಲ. ಆದರೆ ಕೊಡಗಿನ ಭವಿಷ್ಯದ ಬಗ್ಗೆ ಕಾಂಗ್ರೆಸಿನವರಿಗೆ ಭಿನ್ನಾಭಿಪ್ರಾಯವಿದ್ದು ಒಂದು ಪಕ್ಷವು ಕೊಡಗನ್ನು ಬೇರೆ ಪ್ರಾಂತಕ್ಕೆ ಸೇರಿಸಬೇಕೆಂದೂ, ಕೆಲವರು ಕೊಡಗನ್ನು ಈಗಿರುವಂತೆ ಸ್ವತ್ಕೇಂದ್ರವಿಟ್ಟು ಕೊಳ್ಳಬೇಕೆಂದೂ ನಿಶ್ಚಿತ ಅಭಿಪ್ರಾಯವು ಉಳ್ಳವರಾಗಿ ಕಾಂಗ್ರೆಸಿನಲ್ಲಿ ಪ್ರಮುಖ ಎರಡು ಪಕ್ಷಗಳಿದ್ದವು. ಇದ್ದರಿಂದ ಚುನಾವಣೆಗೆ ಕಾಂಗ್ರೆಸು ತಪ್ಪ ಉಮೇದುವಾರರನ್ನು ನಿಲ್ಲಿಸುವ ಕಾಲಕ್ಕೆ ಹೇಗೆ ನಿರ್ಣಯಿಸಬೇಕೆಂಬ ಪ್ರಶ್ನೆಯು ಮುಂದೆ ಬಂದಿತು.

ಕೊಡಗನ್ನು ಪ್ರತ್ಯೇಕವಿಟ್ಟುಕೊಳ್ಳಬೇಕೆಂಬ ಪಕ್ಷವು ಈ ವಿಚಾರವಾಗಿ ಅಳವಾಗಿ ಆಲೋಚಿಸಿದೆ. ಕೊಡಗಿನ ಭವಿಷ್ಯದ ಪ್ರಶ್ನೆಯೆಂದು ಕೊಡಗಿನ ಜನರ ಮುಂದೆ ಕಳೆದ ಕಾಲು ಶತಮಾನದಿಂದ ಬಾ ಒಂಬಿಲ್ಲೆಂದು ರೀತಿಯಿಂದ ಆಗಾಗ್ಗೆ ತಲೆ ಎತ್ತಿದ್ದರೂ ಪ್ರತ್ಯೇಕವು ಬಗೆಹರಿಯದೆ ಉಳಿದಿದೆ. ಈ ಪ್ರತ್ಯೇಕವು ಕಾರಣ ವಿಂದಾಗಿ ಕಾಂಗ್ರೆಸಿನಲ್ಲೂ ದೇಶದ ಜನತೆ, ಮುಂದೆ ಪ್ರಶ್ನೆ ಎರಡು ಪಂಗಡಗಳಾಗಿವೆ. ಈ ಎರಡು ಪಂಗಡಗಳು ಪರಸ್ಪರ ಹೊಡೆದಾಡಿಕೊಂಡು ದೇಶಕ್ಕೆ ತಂಬಾ ಹಾನಿಯಾಗುತ್ತಿದೆ. ಆಡಳಿತದ ವಿಚಾರದೇ ಆಗಲಿ, ಬೇರೆ ಯಾವುದೇ ಕಾರ್ಯವಿರಲಿ, ಅಕನು ಸಂಯೋಜನಾವಾದಿ, ಈತನು ಪ್ರತ್ಯೇಕವಾದಿ ಎಂಬ ಭಾವನೆಯೇ ಹೆಚ್ಚಿ ಪ್ರತಿ ಕುಟುಂಬವಲ್ಲಿಯೂ ಈ ವಾದ ತಲೆ ದೋರಿ ಅಣ್ಣ ತಮ್ಮಂದಿಯಾರಾಗಿ, ನೆಂಟರು ಬಂಧುಗಳಾಗಿದ್ದವರಲ್ಲಿಯೂ ಭಿನ್ನಕ ತಲೆದೋರಿ ರಾಜಕೀಯ ದ್ವೇಷವು ಹುಟ್ಟಿ ಹಾವಳಿಯೇ ಅಲ್ಲ; ಪಾವಿತ್ರ್ಯ ಕ್ಷೇತ್ರದಲ್ಲೂ ಪಕ್ಷ ಪಂಗಡಗಳಾಗಿವೆ. ಈ ಕಾರಣದಿಂದ ದೇಶದ ಸರಕಾರವೂ ಯಾವುದೇ ಜನ ಹಿತ ಕೆಲಸ ಮಾಡದೆ ಈ ಎರಡು ಪಂಗಡಗಳ ಕಚ್ಚಾಟವನ್ನು ನೋಡುತ್ತಾ ತಾನು ನಿಷ್ಕ್ರಿಯವಾಗಿ ತಟಸ್ಥ ಕುಳಿತಿದೆ. ಅದೇ ಅಲ್ಲ; ಈ ಎರಡು ಪಂಗಡಗಳಿಂದಾಗುವ ತೊಂದರೆ ಯಾವುದೇ ಜನಹಿತ ಕೆಲಸ ಮಾಡಲು ಆಗುವುದಿಲ್ಲ. ಒಂದು ಕೆಲಸ ಕೈಕೊಂಡರೆ ಒಂದು ಪಕ್ಷಕ್ಕೆ ಹಿತವಾಗಿ ಮತ್ತೊಂದಕ್ಕೆ ಅಹಿತವಾಗುವುದರಿಂದ ತಮ್ಮ ತಮ್ಮ ತತ್ವಗಳಿಗೆ ಧಕ್ಕೆಯಾಗದಿರಲು ಸಾಧ್ಯವಾಗುತ್ತಿಲ್ಲವೆಂದು ಸ್ಪಷ್ಟ ಸೋಲುತ್ತಿದೆ. ಈ ರೀತಿಯು ಒಂದು ವಾತಾವರಣವು ದೇಶದಲ್ಲಿ ಉಂಟಾಗಿ ಕೊಡಗಿನ ಜನತೆಗೆ ಆಗುತ್ತಿರುವ ಅನ್ಯಾಯವನ್ನು ಪ್ರತ್ಯೇಕವಾದಿ ಪಕ್ಷವು ಮನಗಂಡಿದೆ.

ಇಂಥಾ ಬಿಕ್ಕಟ್ಟಿನ ಸಂದರ್ಭದಲ್ಲಿ ಕೊಡಗಿಗೆ ಸುಧಾರಣೆ ದೊರೆತು ಆ ಮಗ್ಗೆ ಕಾರ್ಯಕ್ರಮಕ್ಕೆ ಚ ನಾವಣೆಗೆ ವಿಧಾನ ಗುತ್ತಿಲ್ಲವು, ಪ್ರತ್ಯೇಕವಾದಿ ಪಕ್ಷವು ಪುರ್ಣಾಧಾರ ಪ್ರತ್ಯೇಕವನ್ನು ನಿರಾಕಾರ ಗೈ ಸ್ಥಿಯಿಂದ ಪರಿಶೀಲಿಸಿದೆ. ಈಗ ಕೊಡಗಿಗೆ ಬಂದಿರುವ ಸುಧಾರಣೆಯು ಸಂಪೂರ್ಣ ಜಾರಿಗೆ ಬಂದು ಅನಂತರ ದೊಂದು ಜನತಾ ಪೂರ್ಣಾಭಿಪ್ರಾಯವನ್ನು ಪಡೆದು ಕೊಡಗಿನಲ್ಲಿರುವ ಈ ಎರಡು ಪಕ್ಷಗಳ ಜೊತ್ತಾಡಿಟ್ಟು ನಿಲ್ಲಿಸಬಹುದು. ಈ ಎರಡೂ ಪಕ್ಷಗಳು ಸ. ವಿಧಾನಸಭೆಗೆ ಜನಾಧಿಪತ್ಯವಾಗಿ ಈ ಹಿಂದಿನಂತೆ ಕಾಂಗ್ರೆಸಿನ ಸಭೆಯಲ್ಲಿ ಅವರು ಸಾಮಿಲ್ಲ ಜಿಲ್ಲಾ

ಬ್ಬನೂ ಪ್ರಶ್ನಿಸಿಕೊಳ್ಳಬೇಕಾಗಿದೆ. ಈ ಟ್ಟೊಂಬ ಕುಟುಂಬಗಳಲ್ಲಿ ಫೆಡರೇಶನ್‌ಗೆ ಉಡುಪಾಡಿ ಬಂದು ಬಾಂಧವ್ಯವನ್ನು ದೂರಮಾಡಿ ಇಂದಿನ ಕೊಡಗಿನ ಪ್ರಧಾನ ಪ್ರಶ್ನೆಯಾದ ಈ ವಿಚಾರವು ಏಕೆ ಇಂದು ಇಲ್ಲ? ಸಂಯೋಜನಾವಾದಿಗಳು ಕೇವಲ ಜನತೆಯ ಓಟನ್ನು ಯಾವುದೋ ನೆಗಿನಿಂದ ಪಡೆಯುವ ಕಾರಣದಿಂದ ವರಕೊಳಗೆ ತಲೆ ಅಡಗಿಸಿದ ಉಷ್ಟ್ರ ಪಕ್ಷಿಗಳಂತೆ ಕಾಂಗ್ರೆಸಿನ ಹೆಸರನ್ನು ಹೇಳಿಕೊಂಡು ತಲೆಮರೆಸಿಕೊಂಡರೆ ದೇಶದ ಈ ಪ್ರಶ್ನೆ ಇಲ್ಲದಾಗುವದೇ? ತನ್ನ ಕಾಂಗ್ರೆಸಿನ ಮನಸಂಕಲ್ಪವನ್ನು ತೆಗೆದು ಕೊಡಗಿನ ಭವಿಷ್ಯದ ವಿಚಾರದಲ್ಲಿ ತನ್ನ ಅಭಿಪ್ರಾಯವನ್ನು ಸ್ಪಷ್ಟ ವಚನಗಳಿಂದ ಕಾಂಗ್ರೆಸು ಉಮೇದುವಾರರು ಹೇಳಲಿ. ಪ್ರತ್ಯೇಕವಾದ ಪಕ್ಷವು ತನ್ನ ನಿಶ್ಚಿತ ನೀತಿಯನ್ನು ಪ್ರಕಟಪಡಿಸಿ ಇಂದು ಚುನಾವಣೆಗೆ ಆ ತತ್ವಕ್ಕಾಗಿಯೇ ಅದರ ಹೆಸರಿನಲ್ಲಿಯೇ ನಿಂತಿದೆ.

ಪಂಡಿತ ನೆಹರೂರವರ ಬಾಯಿಂದ ಈ ಪ್ರಶ್ನೆ ಇಂದು ಜನತೆಯ ಮುಂದಿಲ್ಲವೆಂದು ಹೇಳಿಸಿದಾಕ್ಷಣ ಕಾಲು ಶತಮಾನದಿಂದ ಬಗೆ ಹರಿಯದೆ ಉಳಿದಿರುವ ಈ ಭವಿಷ್ಯ ಪ್ರಶ್ನೆಯು ಗೆ ಹರಿಯಬಂತಾಗಲಿಲ್ಲ. ಕೊಡಗಿನ ಭವಿಷ್ಯವನ್ನು ನಿರ್ಣಯಿಸಬಿದ್ದಾರೆ ಬಂದಿರುವ ಸಂಧಾನಕಾರರು ವಿಫಲರಾಗುವದೆಂಬುದನ್ನು ಎಲ್ಲರೂ ಒಪ್ಪಬೇಕು. ಆದ್ದರಿಂದ ಈ ಪ್ರಶ್ನೆ ಈಗಲೇ ಬಗೆ ಹರಿಯಬೇಕು. ಈ ಹಿಂದಿನಿಂದಲೇ ಕೊಡಗಿನ ಭವ್ಯತನ್ನು ಕೊಡಗಿನ ಜನರೇ ನಿರ್ಣಯಿಸಬೇಕಾಲ್ಲದೆ ಡೆಲ್ಲಿಯಲ್ಲಿರುವ ಅಧಿಕಾರಿಗಳೂ ಅಲ್ಲ; ಕಾಂಗ್ರೆಸಿಗರೆಂದೂ, ದೇಶದ ಮುಂದಾಳುಗಳೆಂದೂ ಹೇಳಿಕೊಳ್ಳುವವರಾಲ್ಲ ಜನರಲ್ಲಿಲ್ಲವೆಂದೂ ಸಾರಿ ಹೇಳುತ್ತಾ ಬಂದಿದ್ದೇವೆ. ಇಂದು ಕಾಂಗ್ರೆಸ್ಸಿನವರೆಂದು ಹೇಳಿ ಕೊಳ್ಳುತ್ತಿರುವ ಕಾಂಗ್ರೆಸ್ಸಿಗರು ದೇಶದ ಭವಿಷ್ಯವನ್ನು ಜನತೆಯನ್ನು ಕೇಳದೆ ಕೇಂದ್ರ ಸರಕಾರವೇ ನಿರ್ಣಯಿಸಿಬಿಡಬೇಕೆಂದು ಕೇಂದ್ರ ಸರಕಾರಕ್ಕೂ, ರಾಜ್ಯಪುನರ್ನಾ ಸಭೆಗೂ, ಆಗಾಗ್ಗೆ ಅಫೀಲು ಮಾಡಿದ್ದಾರೆ, ಅದಕ್ಕಾಗಿ ಪುಸ್ತಕಗಳನ್ನು ಬರೆದು ಪ್ರಕಟಿಸಿದ್ದಾರೆ. ಈ ರೀತಿಯಲ್ಲಿ ಜನಾಭಿಪ್ರಾಯಕ್ಕೆ ಹೆದರಿ ಜನತೆಗೆ ದ್ರೋಹ ಬಗೆಯಲೆತ್ನಿಸಿದವರು ಇಂದು ಕೊಡಗಿನ ಭವಿಷ್ಯದ ಪ್ರಶ್ನೆ ಜನತೆಯ ಮುಂದೆ ಇಲ್ಲ ಎನ್ನುವದರಲ್ಲಿ ಆಶ್ಚರ್ಯವಿಲ್ಲ. ಪಂಡಿತ ಜವಾಹರರು ಭವಿಷ್ಯ ನಿರ್ಣಯದ ವಿಚಾರದಲ್ಲಿ ಜನರ ಅಭಿಮತವನ್ನು ಅರಿತೇ ವರ್ತಿಸಬೇಕೆಂದೂ, ಈ ಪ್ರಶ್ನೆಯನ್ನು ಜಿಲ್ಲಾ ಮುಂದಿಡದೆ ಅರಿತು ಬಂದ ತಾಸನ ಸಭೆಗೆ ಆ ವಿಚಾರದಲ್ಲಿ ತನ್ನ ನಿರ್ಣಯವನ್ನು ಮಾಡುವ ಹಕ್ಕಿದೆಯೂದರೂ ಅದಕ್ಕೆ ಹೆಚ್ಚಿನ ಬೆಲೆ ಇಲ್ಲವಾರದೆಂದು ಅವರು ಹೇಳುತ್ತಾರೆ. ಆದರೆ ಇಂದು ಪ್ರತ್ಯೇಕವಾದಿ ಪಕ್ಷವು ಭವಿಷ್ಯದ ಪ್ರಶ್ನೆಯನ್ನು ಜನತೆಯ ಮುಂದೆ ಇಟ್ಟಿದೆ. ಕಾಂಗ್ರೆಸು ಈ ಪ್ರಶ್ನೆಯು ಜನತೆಯ ಮುಂದಿಲ್ಲವೆಂದು ಕಣ್ಣು ಮುಚ್ಚಿ ಕೊಂಡರೂ ಮತದಾರನಿಗೆ ಈ ಪ್ರಶ್ನೆಯು ಅರಿವಾಗಿದೆ. ಈ ಪ್ರಶ್ನೆಯು ಬಗೆ ಹರಿಸಲ್ಪಡಬೇಕೆಂಬ ಕಾರಣಕ್ಕಾಗಿಯೇ ಪ್ರತ್ಯೇಕವಾದಿ ಪಕ್ಷವು ಚುನಾವಣೆಗೆ ತನ್ನ ಏಳು ಹುರಿಯೋಳಗನ್ನು ನಿಲ್ಲಿಸಿದೆಯೆಂಬುದು ಗೊತ್ತಿದೆ. ಹಾಗಿರುವದರಿಂದ ನೆಹರೂರವರ ಅಭಿಪ್ರಾಯದಂತೆ ಕೊಡಗಿನ ಭವಿಷ್ಯವನ್ನು ನಿರ್ಣಯಿಸುವ ಒಂದು ತೀರ್ಮಾನವನ್ನು ಇಂದು ಚುನಾಯಿತರಾಗುವ ಕೊಡಗು ಶಾಸನ ಸಭೆಯು ಪಾಸು ಮಾಡಿದರೆ ಅದೇ ಜನಾಭಿಪ್ರಾಯವೆಂದು ಹರಗಣಿಸಲ್ಪಡುವದಲ್ಲದೆ ಅದರಂತೆಯೇ ಕೇಂದ್ರ ಸರಕಾರವೂ ವರ್ತಿಸುವದರಲ್ಲಿ ಸಂಶಯವಿಲ್ಲ.

ಆದ್ದರಿಂದ ನೆಹರೂರವರ ಪತ್ರವನ್ನು ದೊಡ್ಡದು ಮಾಡಿ ಪ್ರಚಾರ ಮಾಡುವದರಿಂದ ಕೊಡಗಿನ ಭವಿಷ್ಯದ ಪ್ರಶ್ನೆ ತೀರ್ಮಾನವಾದಂತಾಗಲಿಲ್ಲ. ಈ ಚುನಾವಣೆಯು ಕಾಲುಶತಮಾನದಿಂದ ಕೊಡಗಿನ ಅಭಿವೃದ್ಧಿಗೆ ಆತಂಕವಾಗಿರುವ, ಕೊಡಗಿನಜನ ಜೀವನದಲ್ಲಿ ಅನೈತಿಕತೆಗೂ ಕಾರಣವಾಗಿರುವ ಈ ಪ್ರಶ್ನೆಯು ತೀರ್ಮಾನವಾಗಲಿ. ಚುನಾವಣೆಯನಂತರ ವಾದರೂ ದೇಶದವರು ತಮ್ಮ ಮತದಾನದಿಂದ ಬೆಂಬಲಕೂಟ್ಟು ಆರುಮತ ಪಕ್ಷವು ದೇಶಕ್ಕೆ ಬಂದಿರುವ ಸಂಧಾರಣೆಯನ್ನು ಸರ್ವಜನರ ಹಿತದೃಷ್ಟಿಯಿಂದ ಜಾರಿಯಲ್ಲಿ ತರುವಂತಾಗಲಿ ಆದ್ದರಿಂದ ಮತದಾರರು ಎಚ್ಚರಿಕೆಯಿಂದ ವರ್ತಿಸಬೇಕು. ಕಾಂಗ್ರೆಸ್ ಎಂದರೆ ಸಂಯೋಜನವಾದಿಗಳೆಂದೂ ಕೊಡಗಿನ ಸಂಯೋಜನೆಗೆ ಪ್ರಯತ್ನಿಸುವವರೆಂದೂ ತಿಳಿದು ಮತದಾನ ಮಾಡಬೇಕು. ಕೊಡಗು ಪ್ರತ್ಯೇಕವಿರುವದರಿಂದ ನಮಗೆ ಈ ಕಾನ್ಸಿಲಿಲ್ಲ, ಈ ಸಂಧಾರಣೆ ಇಲ್ಲ. ನಮ್ಮದೇ ಆದ ಸರಕಾರ ನಮ್ಮಸನ ಅಧಿಕಾರವಿದೆ. ಆದ್ದರಿಂದ ಯಾರೂ ನಮ್ಮ ವ್ಯಕ್ತಿತ್ವವನ್ನೂ, ಸ್ವಾತಂತ್ರ್ಯವನ್ನೂ ಕಳಕೊಳ್ಳುವ ರೀತಿ ವರ್ತಿಸದಿರಲಿ.

ನೆಹರೂ–ಬೆಳ್ಯಪ್ಪನವರ ಪತ್ರವ್ಯವಹಾರಗಳು.

(ಒನೇ ಪುಟದಿಂದ ಸಾಗಿದ್ದು)

ಅಂದಮೇಲೆ ಕೊಡಗಿನ ಭವಿಷ್ಯತ್ತಿನ ಪ್ರಶ್ನೆ ವ್ಯಾಮುಖ್ಯ ವಿಚಾರವಲ್ಲಿ ಎಸೆಂಬ್ಲಿಗೆ ಅಭಿಪ್ರಾಯ ಕೊಡುವ ಹಕ್ಕಿದೆಯೆಂದಾಯಿತು. ನಮ್ಮ ಎಸೆಂಬ್ಲಿಗೆ ಇಂಥಾ ಹಕ್ಕಿಲ್ಲವೆಂದು ವಾದಿಸುತ್ತಿರುವ ಸಂಯೋಜನೆವಾದಿಗಳು ಇನ್ನಾದರೂ ಇದಕ್ಕೆ ಒಪ್ಪುವರೇ? ಅಲ್ಲವೆ ಸಂಸ್ಥಾನಗಳ ಸಂಕ್ರಿಯೆಯ ಶ್ರೀ ಗೋಪಾಲ ಸ್ವಾಮಿ ಐಯ್ಯಂಗಾರರು ಸಿ. ಭಾಗದ ಸ್ಟೇಟ್ಸ್‌ಗಳ ಸುಧಾರಣಾಸಮಿತಿಯನ್ನು ಪಾರ್ಲಿಮೆಂಟಿನ ಮುಂದಿಟ್ಟಾಗ–ಜವಾಬ್ದಾರಿ ಸರಕಾರ ಕೊಟ್ಟ ಮಾತ್ರಕ್ಕೆ ಸಂಯೋಜನೆಯು ಪ್ರತ್ಯೇಯ ಆಂಕ್ಯವಾಗಲಿಲ್ಲವೆಂದೂ, ಆ ಪ್ರಶ್ನೆಯನ್ನು ಸಂಬಂಧಪಟ್ಟ ಜನಗ ಅಭಿಪ್ರಾಯವನ್ನು ಸ್ಥಳೀಯ ಎಸೆಂಬ್ಲಿಯ ಮೂಲಕವೇ ತೆಗೆದು ತೀರ್ಮಾನೀಕರಿಸುವುದೇ ಪ್ರಶ್ನೆ ಮಾಗಿ ಹೇಳಿರುವರು ಪ್ರಾಂತ್ಯದ ಭವಿಷ್ಯತ್ತಿನ ವಿಚಾರ ಆಯೋಗ ತೀರ್ಮಾನ ಪಾರ್ಲಿಮೆಂಟ್ ಸಭೆಯಲ್ಲೇ ಆಗುವುದಾದರೂ ಸ್ಥಳೀಯ ಎಸೆಂಬ್ಲಿಗೆ ಅಲ್ಲಯ ಜನತೆಯು ಅಭಿಪ್ರಾಯವನ್ನು ಕೊಡುವ ಪೂರ್ಣ ಹಕ್ಕಿದೆ ಈ ಮುಖ್ಯ ವಿಚಾರವನ್ನು ಓದುಗರು ಜ್ಞಾಪಕ ಮಾಡಿಕೊಳ್ಳಬೇಕು.

ಸಂಯೋಜನೆಯ ವಿಚಾರ ಓದುಗರು ಮುಂದಿಡದಿದ್ದರೆ ಎಸೆಂಬ್ಲಿಯು ಈ ಸಂಬಂಧ ಕೊಡಬಹುದಾದ ಅಭಿಪ್ರಾಯಕ್ಕೆ ಹೆಚ್ಚಿನ ಬೆಲೆ ಇಲ್ಲವೆಂಬುದು ಸರಿ. ಆದರೆ ಈಗಿನ ಚುನಾವಣೆಯಲ್ಲಿ ಪ್ರಧಿಸುವ ಒಂದು ಪಾರ್ಟಿಯೂದ ಕಾಂಗ್ರೆಸು ಈ ವಿಚಾರವನ್ನು ಓಟರುಗಳ ಮುಂದಿಡದಿದ್ದರೂ, ಪ್ರತ್ಯೇಕ ಪಕ್ಷದವರು ಈ ಪ್ರಶ್ನೆಯು ಮೇಲೆಯೇ ಚುನಾವಣೆಗೆ ನಿಂತಿರುವರು. ಆದ ಮೇಲೆ ಕೊಡಗಿನ ಭವಿಷ್ಯತ್ತಿನ ಪ್ರಶ್ನೆ ಇಂದು ಓಟರುಗಳ ಮುಂದೆ ಇದೆಯೆಂದು ಎಲ್ಲರೂ ಒಪ್ಪಬೇಕು. ಆದರ ಮೇಲೆ ಓಟುಗಳೂ ಕೂಡ ಕೊಡಲ್ಪಡವವು. ಹಾಗೆ ಚುನಾಯಿತಲ್ಪಡುವ ಪ್ರತಿನಿಧಿಗಳು ಎಸೆಂಬ್ಲಿಯಲ್ಲಿ ಕೊಡುವ ಅಭಿಪ್ರಾಯಕ್ಕೆ ತುಂಬಾ ಬೆಲೆ ಇರುತ್ತದೆ ಎಂಬುದನ್ನು ಯಾರೂ ಅಲ್ಲಗಳೆಯಮಲಾರರು.

ಕೊಡಗಿನ ಭವಿಷ್ಯತ್ತಿನ ವಿಚಾರಕ್ಕೂ ಈ ಚುನಾವಣೆಗೂ ಸಂಬಂಧವಿಲ್ಲವೆನ್ನುವ ಪರಲ್ಲಿ ಅರ್ಥವಿಲ್ಲ. ಹಲವು ವರ್ಷಗಳಿಂದ ದೇಶದಲ್ಲಿ ಈ ವಿಚಾರವಾಗಿ ಬಹುಮಟ್ಟಿಗೆ ಗೊಂದಲ ನಡೆಯುತ್ತಿದ್ದು ಈಗ ಜನರಿಗೆ ತಮ್ಮ ಅಭಿಪ್ರಾಯವನ್ನು ಕೊಡಲು ದೊರೆತಿರುವ ಅವಕಾಶವನ್ನು ಉಪಯೋಗಿಸಬೇಡವೆಂಬುದೂ ವಿವೇಕವಲ್ಲ ಕಾಂಗ್ರೆಸಿನ ಚುನಾವಣಾ ಘೋಷಣೆಯಲ್ಲಿಯೇ ಕಲವಿನಲ್ಲಿ ಹೇಳಿರುವಂತೆ ಭಾಷಾವಾರು ಪ್ರಾಂತ್ಯ ರಚನೆಯೇ ಕೆ. ಪ್ರಾ. ಕಾ. ಕಮಿಟಿಯು ಗುರುಮಾಪರ ತದರ ಅಧೀನದಲ್ಲಿರುವ ಕೊಡಗು ಕಾಂಗ್ರೆಸ್ ಸಮಿತಿಯೂ ಅದಕ್ಕೆ ತಲೆಬಾಗಲೇಬೇಕು. ಆದುದರಿಂದ ಕಾಂಗ್ರೆಸ್ ಉಮೇದುವಾರರುಗಳಿಗೆ ಓಟು ಕೊಡುವವರೆಲ್ಲರೂ ಸಂಯೋಜನೆಗೆ ಒತ್ತಾಸೆ ಕೊಟ್ಟಂತೆಯೇ ಆಗುವುದು.

ಪಂಡಿತಜಿಯವರು ಹೇಳಿರುವಹಾಗೆ ರೂ ಕೆಲವು ಸಮಯದಿಂದ ವರೆಗೆ ಸಂಯೋಜನೆಯ ಪ್ರಶ್ನೆ ಬರಲಾರದೆಂಬುದು. ಆದರೆ ಅದು ಎಷ್ಟು ವರ್ಷಗಳ ವರೆಗೆಂದು ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ. ಆದ ಕಾರಣ ಈ ಚುನಾವಣೆಯಲ್ಲಿಯೇ ಆದ ನ್ನು ತೀರ್ಮಾನಿಸುವುದು ಯುಕ್ತವಾಗಿದೆ. ಹೀಗೆ ಬೇಗನೆ ತೀರ್ಮಾನಿಸಿ ಪ್ರತ್ಯೇಕ ಪಕ್ಷದವರನ್ನು ಗೆಲ್ಲಿಸಿದರೆ ಮುಂದೆ ಬರುವ ಜವಾಬ್ದಾರಿ ಸರಕಾರಕ್ಕೆ ಜನರ ಹಿತದೃಷ್ಟಿಯಿಂದ ಉತ್ತಮ ಕಾರ್ಯಗಳನ್ನು ಮಾಡಲು ಅನುಕೂಲ ಮಾಡಿ ಕೊಟ್ಟಂತಾಗುವುದು ಬದಲು ಕಾಂಗ್ರೆಸಿನ ಹೆಸರಿನಲ್ಲಿ ನಿಂತಿರುವ ಸಂಯೋಜನಾ ಪಕ್ಷವು ಗೆದ್ದು ಜಯವಾದರೆ ಎಸೆಂಬ್ಲಿಯು ಮೂಲಕ ಅವರ ತೀರ್ಮಾನದಂತೆ ಸಂಯೋಜನೆಗೆ ಅನುಕೂಲ ಮಾಡಿ ಕೊಟ್ಟಂತಾಗುವುದು. ಓದುಗರು ಈ ವಿಚಾರ ಚೆನ್ನಾಗಿ ಆಲೋಚಿಸಬೇಕಾಗಿ ವಿನಂತಿ.

ಪ್ರತ್ಯೇಕ ಪಕ್ಷದ ಕಾರ್ಯದರ್ಶಿ.

ಮೊರಾಟಕ್ಕಿದೆ.

(1) ಪಡೀಲ್ ಮುನಿಸಿಪಾಲಿಟಿ ಬ್ಲಾಕ್ ನಂ. 20ರ ಬ್ರಾಹ್ಮಣರ ಬೀದಿಯಲ್ಲಿ ಹೊಸದಾಗಿ ಕಟ್ಟಿರುವ ಎರಡು ಹಂಚಿನ ಮನೆ, ಪತ್ತಾ ಇದಕ್ಕೆ ಸೇರಿದ ಬಾವಿ ಹಿತ್ತಲು ಸಹಿತ.

(2) ಉ. ಕೊಡಗು ಕೊಡ್ಲಿಪೇಟೆ, ಕೊಡ್ಲೂರು ಗ್ರಾಮದಲ್ಲಿರುವ 7 ಎಕರೆ ತರಿ ಜಮೀನು, ಮತ್ತು ಇ. ಕೈ ಸೇರಿದ ವರ್ಷಕ್ಕೆ 30 ಬಟ್ಟೆ ಗದ್ದೆಗೆ ಬರುವ 12 ಎಕರೆ ಕುಮ್ಕಿ ಜಮೀನು ಈ ಎರಡು ಆಸ್ತಿಗಳು ಮೊರಾಟಕ್ಕಿವೆ. ಖರೀದಿಸುವವರು ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದು ಕೊಳ್ಳಬಹುದು.

ಕೆ. ನರಸಿಂಹ್ಮಮೂರ್ತಿ,
4–1 ಬ್ರಾಹ್ಮಣರ ಬೀದಿ,
ಮಡಿಕೇರಿ.

ವೀರಾಜಪೇಟೆ.

ಶ್ರೀ ಟಿ. ಎಸ್. ಗೋವಿಂದರಾಜು, 'ಕೊಡಗು' ಏಜೆಂಟರು,

ಶ್ರೀ ಕೆ. ಯಂ. ಮೊಗಪ್ಪನವರು, "ಕೊಡಗು" ಏಜೆಂಟರು, ಸೋಮವಾರಪೇಟೆ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿಸಲಾಗಿತ್ತು.

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಲಗು	ರೂ.	2,05,500
ಕ್ಷೇಮನಿಧಿ	ರೂ.	69,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡಲಾಗುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಅಡಿನ ಮೇಲೆ ಸಣ್ಣ ಸಾಲ ಕೊಡಲಾಗುವುದು. ಬೇರೆ ಯಾ ಜಾಮೀನ್ದಾರಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರೆಸ್ಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಸೂರೆನ್ಸ್ ಕಂಪನಿಗಳ ಪ್ರೀಮಿಯಂ ಹಣವನ್ನು ಹೊಂದಿ ಕೊಳ್ಳಲಾಗುವುದು. ಬ್ಯಾಂಕಿನ ದೀರ್ಘ ಕಾಲದ ಶಾಖೆಯ ಮೂಲಕ ದೀರ್ಘ ಕಂತಿನ ಸಾಲ ಕೊಡುವ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಬಿ. ಪಿ. ಅಪ್ಪಯ್ಯ, M. L. C.
ಜಿ. ಕಾರ್ಯದರ್ಶಿ, ಪ್ರೆಸಿಡೆಂಟ್ ಮತ್ತು ಮ್ಯಾನೇಜರ್.

॥ ಮುಂಬರುವ ಚುನಾವಣೆ ॥

ಲೇ:—ಶ್ರೀ ಪಿ. ಜಿ. ಐಯ್ಯಪ್ಪ, ಮಡಿಕೇರಿ.

'ಕೊಡಗಿಗೂ, ಇತರ ಪ್ರಾಂತ್ಯಗಳಂತೆ ಪ್ರಜಾ ಜವಾಬ್ದಾರಿ ಸರಕಾರ ಕೊಡಲಾಗುವುದು.' ಎಂಬ ಇಂಡಿಯಾ ಸರಕಾರದ ಖುಷಿಯನ್ನು ಆದಂದಿನಿಂದ ಕೊಡಗಿನ ರಾಜಕೀಯ ರಂಗಭೂಮಿಯಲ್ಲಿ ಅನೇಕ ಬದಲಾವಣೆಗಳು ಕಂಡು ಬರುತ್ತಿವೆ, ಅಲ್ಲದೆ ಈ ಮುಂಬರುವ ಚುನಾವಣೆಯು ನ್ಯಾಯಾಂಶ, ಅನೇಕ ಬಾತ್ಮಿಗಳೂ. ಭಾಷಣಗಳೂ, ಹಸ್ತ ಪತ್ರಗಳೂ ಹೊರಬಿದ್ದಿವೆ. ಈಗ ಕಡೆಯದಾಗಿ, ಕಾಂಗ್ರೆಸ್ ಪುಸಿಡೆಂಟರಾದ ಶ್ರೀ ಜವಾಹರ್‌ಲಾಲ್ ನೆಹರೂರವರು ಶ್ರೀ ಪಿ. ಐ. ದೇವಯ್ಯನವರಿಗೆ ಬರೆದ ಒಂದು ಕಾಗದವನ್ನೆ ಕನ್ನಡದಲ್ಲೂ, ಇಂಗ್ಲಿಷಿನಲ್ಲೂ, ಅಚ್ಚು ಹಾಕಿಸಿ, ಕೊಡಗು ಕಾಂಗ್ರೆಸ್ ಪಕ್ಷದ ಮುಂದಾಳುಗಳು ಎಲ್ಲರಿಗೂ, ಹಂಚುತ್ತಿದ್ದಾರೆ.

ಈ ಓಡಾಟ ಚಳವಳಿಗಳಲ್ಲಿ ಓಟರ್ಸ್ ರಾದ ನಮ್ಮ ಜವಾಬ್ದಾರಿಕೆಯು ದಿನೇ ದಿನೇ ಹೆಚ್ಚಾಗುತ್ತಿದೆ. ನಾವು ನಮ್ಮ ಅಮೂಲ್ಯವಾದ ಓಟ್ ಗಳನ್ನು ಕೊಡುವಾಗ್ಗೆ ಎಲ್ಲಾ ವಿಶಯಗಳನ್ನೂ, ಸರಿಯಾಗಿ ವಿಚಾರಿಸದೆ ಹೋದಲ್ಲಿ, ನಾವು ಮಹತ್ವದ ಗಂಡಾಂತರಕ್ಕೆ ಇಳಿಯಬಹುದು. ಎಲ್ಲವನ್ನೂ ಕೂಲಂಕಶವಾಗಿ ಪರಿಶೀಲಿಸಬೇಕಾಗಿದೆ

ಈಗ ನಾವು ಮುಖ್ಯವಾಗಿ ವಿಚಾರಿಸ ಬೇಕಾದ ಸಂಗತಿಗಳೆಂದರೆ (೧) ಕೊಡಗಿನ ರಾಜಕೀಯ ರಂಗಭೂಮಿಯಲ್ಲಿ ಎರಡು ಪಾರ್ಟಿಗಳು ಇದ್ದಾರೆ ಅವು ಯಾವ ಯಾವ ಪಾರ್ಟಿಗಳು ಮತ್ತು ಆ ಪಾರ್ಟಿಗಳ ಧ್ಯೇಯ ಯಾ ಗುರಿ ಏನಾಗಿತ್ತು. (೨) ಈಗ ಚುನಾವಣೆಗೆ ನಿಂತಿರುವವರಲ್ಲಿ ಯಾರು ಯಾವ ಪಾರ್ಟಿಗೆ ಸೇರಿದವರು. (೩) ಕೊಡಗಿನ ಭವಿಷ್ಯವ ನಿಶ್ಚಯ ಮಾಡುವ ಹಕ್ಕು ಯಾರದು. ದೇಶ ಸ್ವರದೋ? ಈಗ ಚುನಾವಣೆಗೆ ನಿಂತಿರುವ ಮುಂದಾಳುಗಳದೋ? ಕರ್ನಾಟಕ ಕಾಂಗ್ರೆಸ್ ಕಮಿಟಿಯವರದೋ? ಅಕ್ಷಿ ಇಂಡಿಯಾ ಪಾರ್ಲಿಮೆಂಟನದೊ? (೪) ಕೊಡಗಿನ ಭವಿಷ್ಯದ ವಿಶಯದಲ್ಲಿ ಎಂದರೆ ಸಂಯೋಜನೆಯ ಪ್ರತ್ಯೇಕವಿರುವಿಕೆ ಇವುಗಳಲ್ಲಿ ಯಾವ ಅಭಿಪ್ರಾಯಕ್ಕೆ ಜನರ ಹೆಚ್ಚಿನ ಬೆಂಬಲವಿದೆ. (೫) ಈ ಚುನಾವಣೆಯಲ್ಲಿ ಯಶಕ್ಕೋಸ್ಕರ ಕೊಡಗಿನ ಭವಿಷ್ಯದ ನಿರ್ಣಯವಾಗಬಾರದು (೬) ನೆಹರೂರವರು ಬರೆದಿರುವ ಪತ್ರದಲ್ಲಿ ಈಗ ನಾವು ಆರಿಸಿ ಬರುವ ಮುಂದಾಳುಗಳಿಗೆ ಕೊಡಗಿನ ಭವಿಷ್ಯವನ್ನು ಕುರಿತು ನಿರ್ಣಯಿಸುವ ಯಾ ಅಭಿಪ್ರಾಯ ಕೊಡುವ ಹಕ್ಕು ಸಂಪೂರ್ಣ ಇರುವುದಿಲ್ಲವೆಂದು ನಿರ್ದಿಷ್ಟವಾಗಿ ಹೇಳಿರುವರೇ? (೭) ಈಗ ಕೊಡಗು ಕಾಂಗ್ರೆಸ್ ಪಾರ್ಟಿಯ ಹುರಿಯಾಳುಗಳೆಂದು ನಿಂತಿರುವ ಸದಸ್ಯರುಗಳು ಪ್ರತ್ಯೇಕವಾದಿಗಳೇ ಯಾ ಸಂಯೋಜನವಾದಿಗಳೇ?

ಕೊಡಗಿನ ರಾಜಕೀಯ ರಂಗಭೂಮಿಯಲ್ಲಿ ಎರಡು ಪಾರ್ಟಿಗಳಿವೆ ಎಂಬುದು ನಿರ್ವಿವಾದದ ವಿಶಯ. ದೇಶದಲ್ಲಿ ಈಗ ಪ್ರತಿಯೊಬ್ಬನಿಗೂ ಕರ್ನಾಟಕ ಕಾಂಗ್ರೆಸ್ ಕಮಿಟಿಗೂ ಮತ್ತು ಇಂಡಿಯಾ ಸರಕಾರಕ್ಕೂ ಸಹಜ ಈ ಸಂಗತಿ ಮನವರಿಕೆ ಇದೆ. ಒಂದು ಪಾರ್ಟಿಯವರು ಕೊಡಗನ್ನು ಪ್ರತ್ಯೇಕ ಪ್ರಾಂತ್ಯವಾಗಿಯೇ ಇಟ್ಟುಕೊಳ್ಳಬೇಕೆಂದೂ, ಇನ್ನೊಂದು ಪಾರ್ಟಿಯವರು ಕೊಡಗನ್ನು ಮೈಸೂರು ಯಾ ಕರ್ನಾಟಕ ಪ್ರಾಂತ್ಯಕ್ಕೆ ದೊಡನೆ ಸಂಯೋಜನೆ ಮಡಬಿಡಬೇಕೆಂದೂ ಇಲ್ಲಿಂದ ಹಿಡಿದು ಹೆಲ್ಲಿನವರೆಗೆ ಭಾಷಣಗಳ ಪೂರಾಲಕವೂ, ಹಸ್ತಪತ್ರಿಕೆ, ಪುಸ್ತಕ ಮತ್ತು ಮೆಮೋರಿಯಲ್‌ಗಳ ಮುಖಾಂತರವೂ, ವಿಶ್ವಪ್ರಯತ್ನ ದೂಡಿದ್ದು ಎಲ್ಲರಿಗೂ ಗೊತ್ತಿರುವ ಸಂಗತಿ. ಇಪ್ಪೇ ಅಲ್ಲ. ಸಂಯೋಜನಾವಾದಿಗಳಿಗೆ ಕಳೆದ ಕೌನ್ಸಿಲಿನಲ್ಲಿ ಬಹುಮತವಿದ್ದುದರಿಂದಲೂ, ಮತ್ತು ಇನರ ಧ್ಯೇಯವನ್ನು ಕರ್ನಾಟಕ ಕಾಂಗ್ರೆಸ್ ಕಮಿಟಿಯು ಸಂಪೂರ್ಣ ಅನುಮೋದಿಸುತ್ತಿರುವುದರಿಂದಲೂ ಇನರು ಕೌನ್ಸಿಲಿನಲ್ಲಿ ಅಲ್ಪ ಸಂಖ್ಯಾತರಾಗಿದ್ದ ಪ್ರತ್ಯೇಕವಾದಿಗಳ ಚಳವಳಿಗಳನ್ನು ಅಡ್ಡಗಟ್ಟಿಲು ಮತ್ತು ಅವರ ಬಾಯಿಯನ್ನು ಮುಚ್ಚಲು ಎಷ್ಟು ಪ್ರಯತ್ನ ತಾನೇ ಮಾಡಲಿಲ್ಲ? ಅಂತೂ ದೇವರದಯದಿಂದಲೂ ಮತ್ತು ದೇಶದ ಪ್ರತ್ಯೇಕವಾದಿಗಳೂ ಮತ್ತು ಅವರ ಮುಂದಾಳುಗಳು ನೂಡಿದ ಸತತಪ್ರಯತ್ನದ ಫಲವಾಗಿಯೂ, ಇಂಡಿಯಾ ಸರಕಾರದ ಮುಂದಾಳುಗಳು, ಕೊಡಗಿನ ಸಂಯೋಜನೆಯನ್ನು ತತ್ಕಾಲಕ್ಕೆ ನಿಲ್ಲಿಸಿ ಹೆಚ್ಚಿನ ಸ್ವಧಾರಣೆಯನ್ನು ಕೊಡಲಾಗಿ ಆ ಕೊಡಲಿ ಈ ಸಂಯೋಜನವಾದಿಗಳಾಗಿದ್ದ ಮುಂದಾಳುಗಳು 'ಕೊಡಗಿನಲ್ಲಿ ಈಗ ಪಾರ್ಟಿಗಳಿಲ್ಲ, ನಾವೆಲ್ಲಾ ಒಂದೇ. ಆದುದರಿಂದ ಕಾಂಗ್ರೆಸ್ಸು ಉಮೇದುವಾರರನ್ನೇ ಆರಿಸಬೇಕೆನ್ನುವುದರಲ್ಲಿ ವಿಶೇಷವಿದೆ. ಆವಿದ ಮಾತುಗಳನ್ನು ಕದಿಯುಬಹುದೊ? ಆದರೆ ಇವರು ಬರೆದ ಬಾತ್ಮಿಗಳನ್ನೂ ಕೊಟ್ಟ ಮೆಮೋರಿಯಲ್‌ಗಳನ್ನೂ ನಾಶಪಡಿಸಲು ಸಾಧ್ಯವಿದೆಯೇ? ಆದುದರಿಂದ ಈಗಿನ ಕೊಡಗಿನ ಕಾಂಗ್ರೆಸ್ ಪಾರ್ಟಿಯ ಹುರಿಯಾಳುಗಳು ಚುನಾವಣೆಯಲ್ಲಿ ಹೇಗಾದರೂ ಮಾಡಿ ಜಯಶೀಲರಾಗಬೇಕೆಂಬ ಕಾಂಪ್ಲಿಯಿಂದ ಏನೇನು ಹೇಳಿದರೂ, ತಮ್ಮ ಇತರ ಕಾಂಗ್ರೆಸ್ ಪಕ್ಷದ ಧ್ಯೇಯ ಮತ್ತು ಗುರಿ, ಕೊಡಗನ್ನು ಮೈಸೂರಾದರೂ ಮಾಡಿ, ಬೇರೆ ಪ್ರಾಂತ್ಯದೊಡನೆ ವಿಲೀನೀಕರಿಸಿ ಬಿಡಬೇಕೆಂಬುದೇ ಆಗಿದೆ ಎಂದು ಪ್ರತಿಯೊಬ್ಬ ಓಟರಿನವರಿಗೂ ಗೊತ್ತಿರುವ ಸಂಗತಿಯಾಗಿದೆ. ಅಲ್ಲದೆ ಈಗ ಕಾಂಗ್ರೆಸ್ಸಿನವರ ಹೊರಬಂದು ಇನರಿಗೆ ವಿರೋಧ ಪಾರ್ಟಿಯಾಗಿ ನಿಂತಿರುವ ಶ್ರೀ ಪಿ ಐ ದೇವಯ್ಯನವರ ಪಾರ್ಟಿಯವರ ಗುರಿಯು ಯಾವಾಗಲೂ ಕೊಡಗನ್ನು ಈಗಿರುವಂತೆಯೇ ಪ್ರತ್ಯೇಕ ಪ್ರಾಂತ್ಯವಾಗಿಟ್ಟುಕೊಂಡು ಪೂರ್ಣಸ್ವಾತಂತ್ರ್ಯವನ್ನು ಗಳಿಸುವುದೇ ಎಲ್ಲರಿಗೂ ಎಂಬುದು ಗೊತ್ತಿದೆ ಇವರಿಗೆ ಕೊಡಗಿನಭವಿಷ್ಯದ ನಿರ್ಣಯವು ವಿಶಯವಲ್ಲಿ ವಿನಹ ಇನ್ನು ಯಾವ ಕಾರಣದಲ್ಲೂ ಕಾಂಗ್ರೆಸ್ಸಿನೊಡನೆ ವಿರೋಧವಿಲ್ಲವೆಂಬ ಸಂಗತಿಯೂ ಕೊಡಗಿನ ಪ್ರತಿಯೊಂದು ವ್ಯಕ್ತಿಗೂ ಮನವರಿಕೆ ಇದೆ.

(೪) ಆವುದರಿಂದ ಕೊಡಗಿನಲ್ಲಿ ಎರಡು ಪಾರ್ಟಿಗಳಿರುವದು ನಿಜ. ಆದರಲ್ಲಿ ಈಗಿನ ಕಾಂಗ್ರೆಸ್ ಪಾರ್ಟಿಯು ಗುರಿ ಕೊಡಗಿನ ಸಂಯೋಜನೆಯೊಡನೆ ಶ್ರೀ ದೇವಯ್ಯನವರ ಪಾರ್ಟಿಯವರ ಗುರಿ. 'ಕೊಡಗನ್ನು ಪ್ರತ್ಯೇಕವಿಟ್ಟುಕೊಳ್ಳವದು' ಎಂದಾಯಿತು. ಹಾಗಾದರೆ ಈ ಗುರಿಯನ್ನು ನಿರ್ಣಯಿಸುವ ಹಕ್ಕು ಯಾರದು? ಇದು ದೇಶಕ್ಕಂತರದು, ಎಂಬುದಕ್ಕೆ ಎರಡನೇ ಅಭಿಪ್ರಾಯವೇ ಇರಲಾರದು. ಕೊಡಗು ದೇಶವು ಕೊಡಗಿನ ಪ್ರತಿಯೊಬ್ಬ ವ್ಯಕ್ತಿಗೆ ಸೇರಿರುವುದರಿಂದ ಕೊಡಗಿನ ಭವಿಷ್ಯ ನಿರ್ಣಯವೂ, ಪ್ರತಿಯೊಬ್ಬ ವ್ಯಕ್ತಿಯದೇ ಆಗಿದೆ. ಆದರೆ ಇಂಥಾ ಮಹತ್ತರವಾದ ವಿಶಯಗಳಲ್ಲಿ ಪ್ರತಿಯೊಬ್ಬನಿಗೂ, ಯೋಚಿಸಿ ಒಂದು ನಿರ್ಣಯಕ್ಕೆ ಬರುವಷ್ಟು ತಿಳುವಳಿಕೆ ಇರಲಾರದು ಅಂಥಾ ಸಮಯದಲ್ಲಿ ವಿದ್ಯಾವಂತರೂ, ತಿಳುವಳಿಕೆ ಇರುವವರೂ ಮತ್ತು ಮುಂದಾಳುಗಳೂ ಈ ಸಮಸ್ಯೆಯನ್ನು ಓಟರುಗಳಿಗೆ ವಿಶದವಾಗಿ ವಿವರಿಸಿ, ಅವರ ಒಪ್ಪಿಗೆಯನ್ನು ಒಂದಲ್ಲ ಒಂದು ಸಮಯ ಪಡೆಯಬೇಕು. ಹಾಗೆ ವಿವರಿಸಿದನಂತರ ಓಟರುಗಳು ತಮ್ಮ ಅಭಿಪ್ರಾಯದಂತೆ ತಮ್ಮ ಮುಂದಾಳುಗಳನ್ನು ಚುನಾಯಿಸುತ್ತಾರೆ. ಆ ಮೇಲೆ ಈ ಮುಂದಾಳುಗಳು ತಮ್ಮ ಆ ಅಭಿಪ್ರಾಯಗಳನ್ನು ವಿಶದಪಡಿಸಬಹುದು. ಆಂಶ ದೇಶದ ಭವಿಷ್ಯದ ನಿರ್ಣಯದ ಮೂಲ ಭೂತ ಹಕ್ಕು ಓಟರುಗಳಲ್ಲದೆ ಈಗ ನಿಂತಿರುವ ಉಮೇದುವಾರರದಾಗಲೀ ಯಾ ಕರ್ನಾಟಕ ಕಾಂಗ್ರೆಸ್ ಕಮಿಟಿಯವರದಾಗಲೀ ಯಾ ಇಂಡಿಯಾ ಸರಕಾರದವರದಾಗಲೀ ಅಲ್ಲ. ಓಟರುಗಳು ಅವರವರ ಅಭಿಪ್ರಾಯಗಳನ್ನು ತಮ್ಮ ಮುಂದಾಳುಗಳನ್ನು ಚುನಾಯಿಸುವುದರಲ್ಲಿ ವ್ಯಕ್ತಪಡಿಸಿದ ನಂತರ, ಮುಂದಾಳುಗಳು ಓಟರುಗಳ ಪರವಾಗಿ ದೇಶದ ಮುಂದಿನ ಪರಿಸ್ಥಿತಿಯನ್ನು ನಿರ್ಣಯಿಸಬಹುದು. ಸ್ಥಿತಿಯು ಹೀಗಿರುವಾಗ ಕಾಂಗ್ರೆಸ್ಸಾಗಲೀ, ಯಾ ಅವರು ನಿರ್ದಿಷ್ಟ ಹುರಿಯಾಳುಗಳಾಗಲೀ ಈ ಚುನಾವಣೆಯಲ್ಲಿ ದೇಶದ ಭವಿಷ್ಯದ ನಿರ್ಣಯದ ಪ್ರಶ್ನೆಯನ್ನು ಓಟರ ಗಳ ಮುಂದಿಡಕೂಡದು' ಎಂದು ಹೇಳುವ ಅಧಿಕಾರವಿಲ್ಲದೆ ಯೂ ಇವೆಲ್ಲವನ್ನೂ ಅರಿಸುವುದು ಓಟರುಗಳ ಹಕ್ಕು, ಅವರು ಯಾವ ಯಾವ ಪ್ರಶ್ನೆಗಳ ಮೇಲೆ ಅಥವಾ ಯಾವ ಧ್ಯೇಯ, ಯಾಗ ರಿಗಳನ್ನು ಮುಂದಿಟ್ಟುಕೊಂಡು ತಮ್ಮ ಮುಂದ ಳುಗಳನ್ನು ಆರಿಸುತ್ತಾರೆ ಎಂಬದನ್ನು ನಿರ್ಣಯಿಸುವ ಹಕ್ಕು ಓಟರುಗಳಿಗಿರುವದಲ್ಲದೆ ಬೇರೆ ಯಾರಿಗಿದೆ?

ಆಷ್ಟೇ ಅಲ್ಲ; ಚುನಾವಣೆಯು ಇನ್ನು ಬರಲಿರುತ್ತಿದೆ. ಕೊಡಗಿನ ಭವಿಷ್ಯದ ನಿರ್ಣಯವು, ಇಂದಲ್ಲಿ ನಾಳೆಯಾದರೂ ಆಗಲೇ ತೀರಬೇಕಾಗಿದೆ. ಪಾಕಿಸ್ತಾನಕ್ಕೆ ಈ ಪ್ರಶ್ನೆಯು ಈ ಚುನಾವಣೆಗೆ ಅಗತ್ಯವಿಲ್ಲದ ವಿಚಾರ, ಕೇವಲ ಅತಂಬಂಧ ಮತ್ತು ಅವಿವೇಕ ಎಂಬುದರ ಅರ್ಥ ವೇನು? ಅಂತೂ ಇಂತೂ, ಚುನಾವಣೆ ಯಾಗುತ್ತಿದೆ. ಈ ಚುನಾಯಿತ ಮೆಂಬರರೂ ದೇಶದ ಆಡಳಿತವನ್ನು ಕೈಗೆ ತೆಗೆದು ಕೊಳ್ಳುತ್ತಾರೆ. ಮತ್ತು ಈ ಪ್ರಾಂತ್ಯದ ಭವಿಷ್ಯವು ಇಂದಲ್ಲ ನಾಳೆ ಆಗಿಯೇ ತೀರ ಬೇಕು ಎಂದ ಮೇಲೆ, ಈಗಾಗಲೇ ಆ ಪ್ರಶ್ನೆಯನ್ನೂ ಓಟರರ ಮುಂದಿಟ್ಟು ಅವರ ಅಭಿಮತವನ್ನು ಕೇಳುವುದರಲ್ಲಿ ಅಗುವ ಬಾಧಕವೇನು? ಒಂದೇ ಗುಂಡಿನಿಂದ ಎರಡು ಪಕ್ಷಿಗಳು ಬಿದ್ದಂತೆ, ಕಾಂಗ್ರೆಸ್ಸಿನವರಿಗೆ ಆಗುವ ನಷ್ಟ, ಯಾ ದಕ್ಕೆಯಾದರೂ ಯಾವುದು? ಯಾತಕ್ಕೋಸ್ಕರ, ಕಾಂಗ್ರೆಸ್ಸು ಪಾರ್ಟಿಯವರು ಈ ಪ್ರಶ್ನೆಯನ್ನೇ ಓಟರರ ಮುಂದಿಡಲು ಬಿಡಬಾರದೆಂದು ಇಷ್ಟೊಂದು ಪ್ರಯತ್ನ ಮಾಡುತ್ತಿದ್ದಾರೆ? ಈ ಪ್ರಶ್ನೆಯು ಚುನಾವಣೆಯಲ್ಲೇ ಬಗೆಹರಿದರೆ ಅದರಿಂದ ಮುಂದಕ್ಕೆ ನಮ್ಮ ಸರಕಾರಕ್ಕೆ ಈ ಅಭಿವ್ಯಾಯನವನ್ನು ತೆಗೆಯಲು ಬೆಚ್ಚನೂಡಬೇಕಾದ ಸಾವಿರಾರು ರೂಪಾಯಿಗಳ ಖರ್ಚು ಉಳಿವರಿಯೂಗುವುದಲ್ಲದೆ, ಓಟರುಗಳಿಗೂ ಸಹಕಷ್ಟ ಕೆಲಸಗಳನ್ನು ಬಿಟ್ಟು ಇನ್ನೊಮ್ಮೆ ಓಡಿಯೂಡಬೇಕಾದ ತೊಂದರೆಯೂ ತಪ್ಪುವುದು. ಅಷ್ಟೇ ಅಲ್ಲ, ಮಂಬರುವ ಮಂತ್ರಿಗಳಿಗೂ ಸಹ ದೇಶದ ಮುಂದುವರಿಯುವಿಕೆಯ ಕುರಿತು ಮಾಡಬೇಕಾದ ಹೆಚ್ಚವಾರ್ಷಿಕ, ಯೂ ದಶವ ರ್ಷಿಕ ಯೋಜನೆಗಳನ್ನು ನಿರ್ಣಯಿಸಲು ಸಹ ಸಹಾಯವಾಗುತ್ತದೆ. ಆದರ ಬದಲು, ಈ ಪ್ರಶ್ನೆಯನ್ನು ಈಗಿರುವಂತೆ ಪುನಃ ಗಾಳಿಯಲ್ಲುಳಿ ತೇಲಲುಬಿಟ್ಟರೆ, ಈ ಮಂತ್ರಿಗಳಿಗೂ ಸಹ ಮುಂದಿನ ನಿರ್ಣಯವು ತಿಳಿಯದಿರಲಿಂದ, ಏನೆಂದ ಅರ್ಥಿಕ ಮುಂದುವರಿಕೆಯ ಯೋಜನೆಗಳನ್ನು ಕೈಕೊಳ್ಳಲು ಧೈರ್ಯವಿಲ್ಲದೆ ಈಗಿನ ಸರಕಾರವನ್ನೇ ಮುಂದುವರಿಸುತ್ತಾ ಹೋಗಬಹುದೇ ಹೊರತು ವಿನೊಂದು ಪ್ರಯತ್ನ ಮಾಡಲಾರರು. ಆವುದರಿಂದ ಈ ಪ್ರಶ್ನೆಯನ್ನು ಈಗಲೇ ಬಗೆಹರಿಸುವುದು ಉತ್ತಮ.

(೫) ಈಗಿರುವ ಎರಡು ಪಾರ್ಟಿಗಳಲ್ಲಿ, ಯಾವ ಪಾರ್ಟಿಗೆ ದೇಶದ ಓಟರುಗಳ ಹೆಚ್ಚಿನ ಬೆಂಬಲವಿದೆ, ಎಂಬ ವಿಶಯದಲ್ಲಿ ಪ್ರತ್ಯೇಕವಾದಿಗಳಿಗೇ ಹೆಚ್ಚಿಗೆ ಬೆಂಬಲವಿರುವುದು ಎಂಬದನ್ನು ವಿವರಿಸಿ ಹೇಳಬೇಕಾಗಿಲ್ಲ. ಸಂಯೋಜನವಾದಿಗಳ ಹಿಂದಿನ ಮತ್ತು ಈಗಿನ ನಡವಳಿಕೆಗಳೇ ಇದನ್ನು ದೃಢೀಕರಿಸಬಹುದು. ಇವರು ಕೊಡಗನ್ನು ಬೇರೆ ಪ್ರಾಂತ್ಯದೊಡನೆ ವಿಲೀನೀಕರಿಸಲು ಪ್ರಯತ್ನಪಡುತ್ತಿರುವಾಗಲೂ, ಈ ವಿಷಯದ ಹಿನ್ನಾತರದ ಮೆಮೋರಿಯಲ್ ಮತ್ತು ಸಾಕ್ಷ್ಯಗಳನ್ನು, ಕಾಂಗ್ರೆಸ್ಸಿಗೂ, ಇಡಿಯೂ ಸರಕಾರಕ್ಕೂ ಕೊಡುತ್ತಿದ್ದಾಗಲೂ ಜಪರ ಅಭಿಪ್ರಾಯವನ್ನು ತೆಗೆಯಲು ಎಂದೂ ಪ್ರಯತ್ನಪಟ್ಟಿದೇ ಇಲ್ಲ. ಯಾಕೆಂದರೆ, ಹಾಗೆ ಮಾಡಿದರೆ ಇವರಿಗೆ ದೇಶದಲ್ಲಿ ಬೆಂಬಲ ಸಿಕ್ಕು

ವದಿಲ್ಲ ವೆಂಬುದು ಗೊತ್ತಿತ್ತು. ಅ ಸ್ಥೇ ಅಲ್ಲ, ಇವರು ಕೊಟ್ಟ ಒಂದು ನೆ ಮೋರಾಂಡಂನಲ್ಲಿ ಹೀಗೆ ಬರೆದಿದ್ದನ್ನು ತಾನು ಓದಿದ ಜ್ಞಾಪಕ ನನಗಿದೆ ಇಂಥ ಹ ಮಹತ್ತರವಾದ ಸಮಸ್ಯೆಗಳನ್ನು ಬಗೆ ಹರಿಸುವಾಗ್ಯೆ (ಎಂದರೆ ದೇಶವನ್ನು ಪು ಶ್ಚೇಕವಿಡಬೇಕೋ ಯಾ ದೊಡ್ಡ ಪ್ರಾಂತ್ಯ ದೊಡನೆ ಸೇರಿಸಿಬಿಡಬೇಕೋ ಎಂಬ ವಿಷ ಯಗಳಲ್ಲಿ)ದೇಶದ ಸಾಮಾನ್ಯ ಜನರ ಅಭಿ ಪ್ರಾಯ ಕೇಳುವುದು ಸರಿಯಲ್ಲ. ಹೆಚ್ಚು ತಿಳುವಳಿಕೆ ಇಲ್ಲದ ಅವರು–ತಾವು ಇದ್ದ ಲ್ಲೇ ಇರುವುದು ಒಳ್ಳೆಯದು ಎಂದು ಭಾ ವಿಸುವುದರಿಂದ ಅಂತಹ ಬದಲಾವಣೆಗೆ ಒ ಪ್ಪುವುದಿಲ್ಲ. ಅದುದರಿಂದ ಇಂಡಿಯಾ ಸರಕಾರದ ಮುಂದಾಳುಗಳೇ ಕೊಡಗಿನ ವುಂದಿನ ವಿಲೀಗೆಯನ್ನು ಬಯಸಿ, ದೇಶವ ನ್ನು ಜನರ ಅಭಿಮತ ಕೇಳಿಕೆಯೇ ಬೇರೆ ಪ್ರಾಂತ್ಯಕ್ಕೆ ಸೇರಿಸಿ ಬಿಡಬೇಕು' ಎಂದು ಬರೆದಿದ್ದರು. ಅಲ್ಲದೆ ಪ್ರತ್ಯೇಕವಾದಿಗ ಳು ಸಹ ಈ ವಿಷಯದಲ್ಲಿ ದೇಶದಲ್ಲಿ ಚಳ ವಳ ಎಬ್ಬಿಸದಂತೆ ಮಾಡಲು, ಈ ವಿಷಯ ಯಾರೂ ಯಾವ ವಿಚಾರಣೆನಲ್ಲೂ ನೂಕಾ ಡಕೂಡದು. ಎಂಬ ನಿರ್ಬಂಧದ ಆರ್ಡರ ನ್ನು ಕೆ. ಪಿ. ಸಿ. ಸಿಯವರಿಂದ ಮಾಡಿಸಿದ ರು. ಕೊಡಗು ಪ್ರಾಂತೀಕ ಕಾಂಗ್ರೆಸ್ ಕವಿ ಟಿಯಲ್ಲಿ, ಪ್ರತ್ಯೇಕವಾದಿಗಳಿಗೆ ಹೆಚ್ಚಿ ನ ಮೆಜಾರಿಟಿ ಇದ್ದದರಿಂದ, ಕರ್ನಾಟಕ ಕಾಂಗ್ರೆಸ್ ಕಮಿಟಿಯವರು, ನಿಷ್ಕಾರಣ ವಾಗಿ ಈ ಕೊಡಗು ಕಮಿಟಿಯನ್ನು ರದ್ದು ಮಾಡಿ, ಸಂಯೋಜನಾವಾದಿಗಳಿಂದ ಕೂ ಡಿದ ಒಂದು ಎಡ್‌ಹಾಕ್ ಕಮಿಟಿಯನ್ನು ಮಾಡಿ, ಸುಮಾರು ಏಸು ವರ್ಷಗಳ ವ ರೆಗೆ ಈ ಕಮಿಟಿಯನ್ನು ಬದಲಾಯಿಸದೆ ಯೂ ಚುನಾವಣೆಯನ್ನು ಮಾಡದಿರುವ ಕಾಲ ತಳ್ಳಿದರು.

ಇಷ್ಟು ಕಲ್ಲುಮುಳ್ಳುಗಳನ್ನು ಪ್ರತ್ಯೇ ಕವಾದಿಗಳ ದಾರಿಗೆ ಇಡ್ಡ ತುಂದು ಸಾ ಲದೆ, ಈ ಮುಂದಾಳುಗಳು, ಈಗಲೂ ಅ ವರಿಗೆ ದೇಶಕ್ಕಂತ ಬೆಂಬಲ ದೊರೆಯುವುದಿ ಲ್ಲವೆಂಬ ಸಂಗತಿ ಮನವರಿಕೆ ಇರುವುದರಿಂ ದಲೇ ಇಷ್ಟರ ವರೆಗೆ ಕೊಡಗನ್ನು ವಿಲೀನೀ ಕರಿಸಲು, ಆಕಾಶ ಭೂಮಿಗಳನ್ನು ಒಟ್ಟಾ ಡಿಸಲು ಪ್ರಯತ್ನಪಟ್ಟ ಈ ಮಹನೀಯ ರೂ, ಈಗ ಏಕಾಏಕಿ, ಓಟುಗಳ ಮುಂ ದೆ ನಿಂತ, ವಿನೂಯಂಪು ಸಂತೋಷ ವಿಲ್ಲದೆ, 'ನಾನೂ ಪ್ರತ್ಯೇಕವಾದಿ ನನಗೆ ಓಟುಕೊಡಿ' ಎಂದು ಕೇಳುತ್ತಿದ್ದಾರೆ. ಇ ದರಿಂದ, ಇವರ ಧ್ಯೇಯ, ಯಾ ಗುರಿಯೂ ದ ಸಂಯೋಜನೆಯಲ್ಲಿ ಇವರಿಗೇ ನಂಬಿ ಕೆ ಇಲ್ಲ' ಎಂಬುವುದು ನಿರ್ವಿವಾದಗುತ್ತ ಸೋ, ಇಲ್ಲನೇ ಇಂದು ಇವರು ಓಟುಗಳ ನ್ನು ವಂಚಿಸಿ, ಅವರ ಬೆಂಬಲವನ್ನು ಸೂರೆಗೊಳ್ಳಲು ಮಾಡುವ ಕುಟಿಲ ಪ್ರಯ ತ್ನವೆಂದರೆ, ಅದನ್ನು ಯಾರೂ ತಪ್ಪೆಂದು ಹೇಳಲಾರರು. ಅಂತೂ ಇಂತೂ, ಈ ಸಂಯೋಜನವಾದಿಗಳ ನಡಾವಳಿಕೆಯಿಂ ದಲೇ, ಪ್ರತ್ಯೇಕವಾದಕ್ಕಲ್ಲದೆ ಸಂಯೋಜ ನವಾದಕ್ಕೆ ದೇಶದಲ್ಲಿ ಹೆಚ್ಚಿನ ಬೆಂಬಲವಿ ಲ್ಲವೆಂಬುದು ಸಂಪೂರ್ಣ ರುಜುವಾತು ವಾದಂತಾಯಿತು.

ಆದುದರಿಂದಲೇ ಕಾಂಗ್ರೆಸ್ ಪಾ ರ್ಟಿಯವರು ಈ ಪ್ರಶ್ನೆಯನ್ನು ಈಗ ಓಟರ ರ ಮುಂದಿಡಬಾರದು ಎಂದು ವಿಶ್ವಪ್ರ ಯತ್ನ ಮಾಡುತ್ತಿದ್ದಾರೆ.

ಓ. ನೆಹರೂವರು ಬರೆದ ಕಾಗದದಲ್ಲಿ ಇವರು ಈ ಪ್ರಶ್ನೆಯನ್ನು ಈಗ ಓಟರರ ಮುಂದಿಡುವ ಅವಶ್ಯಕತೆ ಇಲ್ಲವೆಂಬದಾಗಿ ಹೇಳಿದರೂ, ಮುಂದೆ ನಾವು ಚುನಾಯಿ ಸುವ ಕೌನ್ಸಿಲಿಗೆ ದೇಶದ ಭವಿಷ್ಯದ ವಿಷ ಯ ಅಭಿಪ್ರಾಯಕೊಡುವ ಯಾ ಮಾತಾ ಡುವ ಹಕ್ಕು ಇಲ್ಲವೇ ಇಲ್ಲವೆಂಬುದು ನಿ ರ್ದಿಷ್ಟವಾಗಿ ಹೇಳುವುದಿಲ್ಲ ಅವರು ಹೇ ಳುವ ಮಾತಿದು. 'ಕೊಡಗಿನ ಎಸೆಂಬ್ಲಿಗೆ ಯಾವುದಾದರೂ ವಿಚಾರ ಕುರಿತು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವ ಹಕ್ಕು ಇರುವುದು ಸಹಜ.' ಎಂದು ಹೇಳುತ್ತಾ, ಆ ಮೇಲೆ 'ಆದರೆ ಈಗಿನ ಪರಿಸ್ಥಿತಿಯು ಬ ಲವತ್ತರದ ಕಾರಣದಿಂದ ಈ ಪ್ರಶ್ನೆಯು ಮುಂದೂಡಲ್ಪಟ್ಟು, ಇದೊಂದು ಚುನಾ ವಣೆಯ ಪ್ರಶ್ನೆಯಾಗದಿದ್ದಲ್ಲಿ ಇವನ್ನು ಕುರಿತು ಜೊಸ ನ್ಯಾಯವಿಧಾಯಕ ಸಭೆ ಯು ಕೂಡುವ ಯಾವ ಅಭಿಪ್ರಾಯಕ್ಕೂ ಹೆಚ್ಚು ಬೆಲೆ ದೊರೆಯಲಾರದು' ಎಂದೂ ಬರೆದಿದ್ದಾರೆ. ಇದರ ಬದಲು ಅವ ರು ನಿರ್ದಿಷ್ಟವಾಗಿ 'ಎಸೆಂಬ್ಲಿಗೆ ಕೊಡಗಿನ ಭವಿಷ್ಯದ ವಿಷಯ ಅಭಿಪ್ರಾಯಕೊಡುವ ಅಧಿಕಾರ ಇರುವುದಿಲ್ಲ ಎಂಬದಾಗಿ ಬರೆ ಯಬಹುದಿತ್ತು. ಆದರೆಜವರು ಹಾಗೆ ಬರೆ ದಿಲ್ಲ. 'ಆ ಪ್ರಶ್ನೆಯು ಇಂದಿನ ಪರಿಸ್ಥಿತಿ ಯಿಂದ ಮುಂದೂಡಲ್ಪಟ್ಟರೆ ಯಾ ಇ ದೊಂದು ಚುನಾವಣೆಯ ಪ್ರಶ್ನೆಯಾಗ ದಿದ್ದಲ್ಲಿ, ಮಾತ್ರ ಈ ಸಭೆ ಯು ಕೂಡುವ ಅಭಿಪ್ರಾಯಕ್ಕೆ ಹೆಚ್ಚಿನ ಬೆಲೆ ಇರಲಾರದು' ಎಂದು ಹೇಳುತ್ತಿ ರಿ. ಇದೇಂದ 'ಇಂದಿನ ಪರಿಸ್ಥಿತಿಯ ಬಲವತ್ತರ ಇತ್ಯೆಂಬುದನ್ನಾಗಲೀ ಇರ ಲಿಲ್ಲವೆಂಬುದನ್ನಾಗಲೀ ಅ ಮೇಲೆ ರುಜು ವಾತು ಮಾಡುವವರು ಯಾರು? ಅಲ್ಲದೆ ಇಷ್ಟು ಜಳಪಳಿಯಾದ ಮೇಲೆ ಒಂದು ವೇಳೆ ಸಂಯೋಜನಾ ಪಾರ್ಟಿಯನ್ನೇ ನೆ ಜಾರ್ಟಿಯಾದಲ್ಲಿ, ಈ 'ಪ್ರಶ್ನೆ ಚುನಾ ವಣೆಯಲ್ಲಿ ಒಂದಿರಲಿಲ್ಲ' ಎಂದು ಹೇಳುವ ದಾದರೂ ಹೇಗೆ? ಅಸ್ಥೇ ಅಲ್ಲ, ಒಂದು ವೇಳೆ ಕಾಂಗ್ರೆಸ್ಸೇ ಈ ಚುನಾವಣೆಯಲ್ಲಿ ಜಯಶೀಲವಾಗಿದ್ದರೆ, ನೆಹರೂವರ ಈ ಪತ್ರಕ್ಕೆ ಆಸ್ಪೆ ಇರುವ ಸರಕಾರವವರು ಬೆಲೆ ಕೊಡುವರೆಂಬ ಆಧಾರವೇನು?

ಇಷ್ಟೆಲ್ಲಾ ತೊಂದರೆ ಯಾ ವಾದವೇ ತಕ್ಕೆ ಈ ಚುನಾವಣೆಯಲ್ಲಿ ಈ ಪ್ರಶ್ನೆಯ ನ್ನೇ ಮುಂದು ಮಾಡಿಕೊಂಡು ಚುನಾವ ಣೆ ನಡಿಸಿದರೆ ಅದರಿಂದ ಕಾಂಗ್ರೆಸಿಗೆ ಲಾ ಗವ ತೊಂದರೆ ಏನೂ ಇಲ್ಲದಂದ ಓಟಿ ರುಗಳಾದ ನಾವು ಈ ಪ್ರಶ್ನೆಯನ್ನು ಮುಂ ದುವರಿಸಬೇಕಾದ ಯಾವದೊಂದು ಅವ ಶ್ಯಕತೆಯೂ ನನಗೆ ಕಂಡು ಬರುವುದಿಲ್ಲ. ಆದರ ಬದಲು ಈ ಪ್ರಶ್ನೆಯ ನೇಲೆಯೇ ನ್ನ ಮುಂದಾಳುಗಳನ್ನು ಆರಿಸುವುದಾ ಉತ್ತಮ.

ಕಡೆಯದಾಗಿ ಈ ಸಂಯೋಜನಾ ವಾದಿಗಳೆ, ಇಷ್ಟರ ವರೆಗೆ ಪೇಳುತ್ತಿದ್ದ ದ್ದು ಕೊಡಗಿನ ಈಗಿನ ಅರ್ಧಿಕ ಪ ರಿಸ್ಥಿತಿಯಲ್ಲಿ ಸಧ್ಯಾತ ಸರಕಾರವನ್ನು ನಡೆಸಲು ಎಂದಿಗೂ ಸಾಧ್ಯವಿಲ್ಲ. ಆ ದುದರಿಂದ ಕೊಡಗು ಬೇರೆ ಪ್ರಾಂತ್ಯದೊ ಡನೆ ವಿಲೀನವಾಗಲೇಬೇಕು' ಎಂದು. ಈ ಗ ಇಂಡಿಯಾ ಸರಕಾರವು ಕೊಡಗಿಗೆ ಸು ಧಾರಣೆಯನ್ನು ಮಾತ್ರ ಕೊಟ್ಟರುವುದಲ್ಲ ದೆ ಆರ್ಥಿಕ ಸಹಾಯವನ್ನೂ ಕೊಟ್ಟಿಲ್ಲ. ಹಾಗಿರುವಾಗ್ಯೆ ಕೊಡಗಿನ ಇದೇ ಹು ಟ್ಟುವಳಿಯಿಂದ ಈ ಸುಧಾರಿತ ಸರಕಾರ ವನ್ನು ನಾವು ನಡಿಸುತ್ತೇವೆ" ಎಂದು ಇ ವರು ಮುಂದೆ ಬಂದಿದ್ದರೆ ಆರ್ಥವೇನು? ಇವರು ಮೊದಲು ಹೇಳಿದ ಮಾತನ್ನು ಮ ರೆತು ಬಿಟ್ಟರೇ? ಅಲ್ಲ, ಪ್ರತ್ಯೇಕವಾದಿಗಳ ನ್ನು ಅಧಿಕಾರಕ್ಕೆ ಬಿಟ್ಟರೆ ಇವರು ಈಉಟ್ಟು ವಳಿಯಿಂದಲೇ ಜನರಿಗೆ ಕೃಪ್ತಿಕರವಾದ ಸರಕಾರವನ್ನು ನಡೆಸಿ, ಮುಂದಕ್ಕೆ ನಮ ಗೆ ಸಂಯೋಜನಕ್ಕೆ ದಾರಿಯೇ ಇಲ್ಲದ ಹಾಗೆ ಮಾಡಿಯಾರು', ಆದುದಂದ ನಾ ವು ಹೇಗಾ-ದರೂ ಮಾಡಿ ಅಧಿಕಾರವನ್ನು ಸಂಪಾದಿಸಿ ಈ ಆರ್ಥಿಕ ಸ್ಥಿತಿಯಲ್ಲಿ ಕೊ ಡಗು ಪ್ರತ್ಯೇಕವಿರಲಾರದು ಎಂಬ ರೀತಿ ಯಲ್ಲಿ ಸರಕಾರದ ಹಣವನ್ನು ಕಂಡ ರೀ ತಿಯಲ್ಲಿ ಸೂರೆ ಮಾಡಿ, ತಾವು ಹಿಡಿದ ಹಟದಂತೆ ಕೊಡಗನ್ನು ಬೇರೆ ಪ್ರಾಂತ್ಯ ಕ್ಕೆ ಸೇರಿಸಿಯೇ ಬಿಡಬೇಕೆಂದೋ? ಹಾ ಗಿದ್ದರೆ, ಇವರ ಅಭಿಪ್ರಾಯ ಬಹು ನೀ ಚ ತರದೆಂದೇ ಭಾವಿಸಬೇಕಾಗುತ್ತದೆ.

ಏನೇ ಇರಲಿ, ಓಟುಗಳು ತವ ಓಟುಗಳನ್ನು ಈ ಚ ನಾವಣೆಯಲ್ಲಿ ಕೊ ಡುವಾಗ ಈ ಎಲ್ಲಾ ಸಂಗತಿಗಳನ್ನು ಮ ನಸ್ಸಿಗೆ ತೆಗೆದುಕೊಂಡು, ನೆಂಟರು, ಜಾತಿ ಯಷ್ಟ, ಸ್ನೇಹಿರ, ಎಂಬಕಾರಣಗಳಿಗೆ ಮ ರುಳಾಗದೆ ದೇಶವನ್ನು ಪ್ರತ್ಯೇಕ ಇಡ ಲು ಪ್ರಯತ್ನ ಪಟ್ಟ ಮತ್ತಾ ಈಗಲೂ ಪ್ರಯತ್ನ ಪಡುತ್ತಿರುವವರಿಗೆ ತಮ್ಮ ಅ ಮೂಲ್ಯವಾದ ಓಟುಗಳನ್ನು ಕೊಟ್ಟು ಅ ವರನ್ನೆ ಜಯಶೀಲರನ್ನಾಗಿ ಮಾಡುವುದು ನನಗೆ ಒಳ್ಳೆಯ ದಾಗಿ ಕಾಣುತ್ತಿ. ಒಂ ದು ದೇಶದ ಚರಿತ್ರೆಯಲ್ಲಿ ಇ ವರ್ಷಗಳು ಬಹಳ ಕೊಂಚ ಸಮಯ ವೆಂದೇ ಭಾವಿಸ ಬೇಕಾಗಿದೆ. ಈ ಕಂಚಿತ್ ಸಮಯದ ಲ್ಲಿ ಪ್ರತ್ಯೇಕವಾದಿಗಳು ಕೊಡಗನ್ನು ಪ್ರ ತ್ಯೇಕ ಇಟ್ಟು ತೋಳ್ಬಲ ಸಾಧ್ಯವಿದೆ ಎಂ ಬದನ್ನು ಜನರಿಗೆ ಮನದಟ್ಟು ಮಾಡಿ ದ್ದರೆ ಆ ಮೇಲೆ ಬೇಕಾದರೆ ಸಂಯೋಜ ನೆಯಾಗಬಹುದಷ್ಟೆ. ಅಷ್ಟರಲ್ಲಿ ಲೋಕವು ಮಲಗಿ ಹೋಗುವುದಿಲ್ಲ. ಆಶಾವೃ ಬಿದ್ದೂ ಬಿಡಲಾರದು.

ಬೇಕಾಗಿವೆ.

ಗರಿಗಳು:–ಕಾಡುಕೋಳಿಯ ಕುತ್ತಿ ಗೆಯಲ್ಲಿರುವ ಗರಿಗಳು ಪ್ರತಿಯೊಂದಕ್ಕೆ ರೂ. ೧-೮-೦ಯ ದರದಲ್ಲಿ, ನೀರುಬಾತ ನ ಗರಿಗಳು ನೂಂಡಿಗೆ ೪ ಆಣೆಯಂ ದ ರ ದಲ್ಲಿ ಬೇಕಾಗಿವೆ.

D. H. THANGAM & Co.,
43, P. V. Koil Street,
Royapuram, Madras.
2-2

ಕ್ರಯಕ್ಕೆ ದೊರೆಯುತ್ತೆ !

(ಬಹಳ ಅಚ್ಚುಕಟ್ಟಾದ ಮನೆ)

ಮಡಿಕೇರಿಯಲ್ಲಿ, ಬ್ರಾಹ್ಮಣ ಬೀದಿಯ ರಸ್ತೆ ಬಾಜಿನಲ್ಲಿ ಎತ್ತರ ವಾದ ಸ್ವದೇಶಗಲ್ಲಿ ಒಳ್ಳೇ ಗಾಳಿ ಬೆಳಕಿಗೆ ಅನು-ಕೂಲವಾಗಿರುವ ಸ್ವಂತ ಕುದ್ದವಾಪ ನೀರು ಉಳ್ಳ ಸೇದುಬಾವಿಯನ್ನೊಳಗೊಂ ಡಿರುವ ಮಂಗಳೂರು ಹಂಚಿನ ದೊಡ ಮನೆ ಮೂರಾಟಕ್ಕಿದೆ. ಕ್ರಯ ರೂಪಾ ಯಿ 16,000/—

ಹೆಚ್ಚು ವಿವರಗಳಿಗೆ ಈ ಕೆಳಗೆ ಕಂ ಡವರಲ್ಲಿ ವಿಚಾರಿಸಿ, ಅಥವಾ ಬರೆಯಿರಿ.

ಹೆಚ್. ವಿ. ರಾಮಕೃಷ್ಣ,
ಬ್ರಾಹ್ಮಣರ ಬೀದಿ,
ಮಡಿಕೇರಿ.

4-4

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಕೋವಿಗಳು, ನ್ಯಸಾಯಂದ ಹತ್ತಾ ರುಗಳು ಮಾತ್ರ ಕಬ್ಬಿಣದ ಸಲಾಕೆ ವಗೈರೆಗಳು ದೊರೆಯುತ್ತವೆ.

1. ·32 ಪಿಸ್ತೂಲುಗಳು ಮತ್ತು ರಿವಾಲ್ವರುಗಳು.
2. ·12ನೇ ನಂಬರಿನ ಒಂಟಿ ಕೊಳವಿನ ಕೋವಿಗಳು.
3. 12ನೇ ನಂಬರಿನ ಜೋಡು ಕೊಳವಿನ ಕೋವಿಗಳು.
4. ಕಾಫಿ ಮತ್ತು ಟೆಕ್ಕೆ ತೋಟಗಳಿಗೆ ಸ್ಪೆ ಮಾಡುವ ಪಂಪುಗಳು.
5. 2", 1", ¾", ½", ¾" ಕಬ್ಬಿಣದ ಸಲಾಕೆಗಳು.
6. 9"×4" ಮತ್ತು 8"×4" ಕಬ್ಬಿಣದ ಬೀಮ್ಸ್ (Beams).
7. 8'×3'×12 (Gage)ನ ಕಬ್ಬಿಣದ ತಗಡುಗಳು.
8. 3"×3"×¼"ನ (Angles) ಎಂಗ್ಯಾಲ್ಸ್ ಅವಶ್ಯವಿರುವವರು ಇಂ ದೇ ಟೆಂಡರ್ ಕೊಟ್ಟಲ್ಲಿ ತಂದು ಕೊಡಬಹುದು.

ಹೆಚ್ಚಿನ ವಿವರಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅನಶ್ಯವಿರುವ ಕೋವಿಗಳಿಗೆ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

Licence No. 60.
enced to Post without Prepayment

Reg. No. M. 1330.
'KODAGU' MERCARA, (Coorg).

ಕೊಡಗು

ಸಂಸಾರಕರು—ಪಿ. ವಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. ೨-೦-೦.

ಸಂಪುಟ ೩೦ | ತಾರೀಖು ೨೧-೧೨-೧೯೬೦ನೇ ಶುಕ್ರವಾರ | ಸಂಚಿಕೆ ೨೮

॥ ಓಟಿನ ಓಡಾಟ ॥

[ಬರೆದು ಬಂದದ್ದು]

ಉಮೇದುವಾರರ ನೈತಿಕ ಸತ್ಯಗಳ ಪರೀಕ್ಷೆಯನ್ನು ನಡೆಸಿದ ಬೇಲೆ ಓಟಿನ ಓಡಾಟವು ನಮ್ಮ ದೇಶದಲ್ಲಿ ಒಂದು ಬಿಸಿನಿಂದ ಮುಂದುವರಿಯುತ್ತಿದೆ. ಹಿಂದೂದೇಶ. ಇತರ ಭಾಗಗಳಲ್ಲಿ, ಅನೇಕ ಪಾರ್ಟಿಗಳು ಉದ್ಭವಿಸಿ, ಒಂದು ಇನ್ನೊಂದು ಪಾರ್ಟಿಯು ತತ್ವಗಳನ್ನೂ ಮುಂದಿನ ಯೋಜನೆಗಳನ್ನೂ ಹಳಿಯುತ್ತಾ 'ತಾವು ಜನಪರೀಕ್ಷಾರಾಗಿ ಬಂದರೆ, ದೇಶಕ್ಕೆ ಯಾವ ಯಾವ ಕಲ್ಯಾಣಗಳನ್ನು ತರಲು ಪ್ರಯತ್ನಿಸುತ್ತೇವೆ" ಎಂದು ಮೊದಲಾಗಿ ಹೇಳುತ್ತಿದ್ದಾರೆ. ಕಾಂಗ್ರೆಸ್ ಪಾರ್ಟಿ ಮಾತ್ರ ಕಾಂಗ್ರೆಸ್ಸನ್ನು ಬಿಟ್ಟು ಬೇರೆ ಇರುವ ಪಾರ್ಟಿಗಳು ಹೊಸ್ಸೆ ತಾನೆ ಹುಟ್ಟಿದ ಪಾರ್ಟಿಗಳು. ಅವರ ತತ್ವದಲ್ಲಿ ಯಾ ಯೋಜನೆಗಳಲ್ಲಿ ಸರಿಯಾದುತ್ವವಿಲ್ಲ. ಒಬ್ಬೊಬ್ಬರದೂ ಒಂದೊಂದಕ್ಕೆ ವಿರೋಧವಾಗಿದೆ. ಆದುದರಿಂದ ಇಂದು ಒಂದು ಭದ್ರವಾದ ಸರಕಾರವನ್ನು ಸ್ಥಾಪಿಸಿ, ಭಾರತದ ವ್ಯಕ್ತಿತ್ವವನ್ನು ಉಳಿಸುವಂತ ಯೋಜನೆಯನ್ನು ಕೈಕೊಳ್ಳಲು ನಿಜವಾದ ಶಕ್ತಿ ಇರುವ ಒಂದು ಪಾರ್ಟಿ ಎಂದರೆ ಅದು ಕಾಂಗ್ರೆಸು ಆದುದರಿಂದ ಕಾಂಗ್ರೆಸಿಗೆ ಬೆಂಬಲ ಕೊಡಿ' ಎಂದು ಹೇಳುತ್ತಿದ್ದಾರೆ.

ನಮ್ಮ ದೇಶದಲ್ಲಿ ಇಂತಹ ನಾನಾ ತರದ ಪಾರ್ಟಿಗಳೆಲ್ಲ ಇರುವುದು ಒಂದೇ ಪಾರ್ಟಿ. ಆದರೆ ಅದನ್ನಲ್ಲ ಕೊಡಗಿನ ಭವಿಷ್ಯದ ಪ್ರಶ್ನೆಯ ಮೇಲೆ ಒಡಕು ಬಂದು ಈಗ ಕಾಂಗ್ರೆಸಿನೊಳಗೇ ಎಂಟು ಪಾರ್ಟಿಯಾಗಿರುವುದಲ್ಲದೆ, ಕಾಂಗ್ರೆಸಿನ ಯೋಜನೆಗಳಿಗೆ ವಿರೋಧವಾದ ಪಾರ್ಟಿ ಕೊಡಗಿನಲ್ಲಿಲ್ಲವೆಂದೇ ಹೇಳಬಹುದು. ಕಮ್ಯುನಿಸ್ಟ್ ಪಾರ್ಟಿಯು ಪರ ಒಂದೆರಡು ಉಮೇದುವಾರರು ನಿಂತಿರುವರಾದರೂ, ಈಗ ಮುಖ್ಯವಾಗಿ ಕಂಡುಬರುವ ಎರಡು ಪಾರ್ಟಿ ಎಂದರೆ, ಶ್ರೀ ಪಿ. ವಿ ಬೆಳ್ಯಪ್ಪನವರ ಪಾರ್ಟಿ ಮತ್ತೆ ಕೆ. ಪಿ. ಸಿ. ಸಿ. ಯವರು ಕಾಂಗ್ರೆಸ್ ಸರಕಾರವಾಗಿ ನಿಲ್ಲಿಸಿದವರೆಂದು ಹೇಳುವ ಪಾರ್ಟಿ. ಈ ಎರಡು ಪಾರ್ಟಿಗಳಲ್ಲಿ ಅಖಿಲ ಕಾಂಗ್ರೆಸ್ ಪಾರ್ಟಿಯ ತತ್ವಗಳ ಕುರಿತು ಯಾವುದೊಂದೂ ವ್ಯತ್ಯಾಸವಿಲ್ಲ. ಅವರೆ ಕೊಡಗಿನ ಭವಿಷ್ಯದ ವಿಚಾರದಲ್ಲಿ ಮಾತ್ರ ಮಹತ್ತರವಾದ ವ್ಯತ್ಯಾಸವಿದೆ ಎಂಬುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಕೊಡಗನ್ನು ಪ್ರತ್ಯೇಕ 'ಸಾಸ್ಥಾನವಾಗಿಟ್ಟುಕೊಂಡು ಇಲ್ಲಿ ಮಹಾತ್ಮಾ ಗಾಂಧಿಯವರ ಮನಸ್ಸಿನಲ್ಲಿದ್ದ 'ರಾಮರಾಜ್ಯ'ವನ್ನು ಕಾರ್ಯರೂಪಕ್ಕೆ ತರಬೇಕೆಂಬುದು ಶ್ರೀ ಪಿ ವಿ. ಬೆಳ್ಯಪ್ಪನವರ ಪಾರ್ಟಿಯ ತತ್ವವಾಗಿರೆ ಇವರು ಎದುರು ಪಾರ್ಟಿಯವರ ತತ್ವವು 'ಕೊಡಗಿನ ಈಗಿನ ಸ್ಥಿತಿಯಲ್ಲಿ ಎಂದರೆ ಅದರ ಸಣ್ಣತನ ಮತ್ತು ಆರ್ಥಿಕ ಅಡಚಣೆಯೀದಾಗಿ, ಅದಕ್ಕೆ ಪ್ರತ್ಯೇಕವಿರಲು ಸಾಧ್ಯವಿಲ್ಲವೆಂದರಿಂದ ಅದರ ಉದ್ಧಾರವೆಂಗದೇ ಕಾದರೆ, ಅದು ನೈಸರ್ಗಿಕವಾಗಿ ಮುಂಬರುವ ಕರ್ನಾಟಕದ ಒಂದು ಭಾಗವಾಗಿ ಸಂಯೋಜನೆ ಆಗಲೇಬೇಕು. ತರುವರೆಂದ ಕೊಡಗನ್ನು ನೇಲ್ಯಂಡ ದೊಡ್ಡ ಪ್ರಾಂತದೊಂದಿಗೆ ಸೇರಿಸುವ ಪ್ರಯತ್ನವೇ ಅವರ ಮುಖ್ಯ ತತ್ವವಾಗಿದೆ. ಹೀಗೆ ಈ ಎರಡು ಪಾರ್ಟಿಗಳೊಳಗೆ, ಕೊಡಗಿನ ಭವಿಷ್ಯದ ವಿಷಯದಲ್ಲಿ ಇಂತಹ ಮಹತ್ತರವಾದ ವ್ಯತ್ಯಾಸ ವಿದ್ದೂ, ಕಾಂಗ್ರೆಸ್ ಪಾರ್ಟಿಯು ಮಾಡಿರುವ ಕಾರ್ಯಗಳು ಓಟರರ ಬೆಂಬಲ ಕೇಳುವಾಗ್ಯೆ, ಇದನ್ನು ಬಚ್ಚಿಡಲು ಪ್ರಯತ್ನಪಡುವುದಲ್ಲದೆ, ರಾಜಕೀಯ ಪಕ್ಷ ಜ್ಞಾನದಲ್ಲಿ ಹೆಚ್ಚಿನ ತಿಳುವಳಿಕೆ ಇಲ್ಲದ ಅನೇಕ ಓಟರುಗಳ ಮುಂದೆ ಕೆಲವು ಅಪಪ್ರಚಾರಗಳನ್ನೂ ಹರಡುತ್ತಿದ್ದಾರೆ ಅಂತಹ ಅಪಪ್ರಚಾರಗಳು, ನನ್ನ ಅವಗಾಹನೆಗೆ ಬಂದ ಕೆಲವನ್ನು ಇಲ್ಲಿ ನಾನು ಪ್ರಕಟಿಸುವುದಾಗಿದೆ.

ಒಂದನೆಯದಾಗಿ ಕೆ. ಪಿ. ಸಿ. ಸಿ. ಯವರು ನಿಶ್ಚಯಿಸಿರುವ ಕಾಂಗ್ರೆಸ್ ಮುಂದಾಳುಗಳಲ್ಲಿ ಕೇಳಿರು 'ನಾವು ಸಂಯೋಜನಾವಾದಿಗಳಲ್ಲ ಪ್ರತ್ಯೇಕವಾದಿಗಳು ಮತ್ತು ನಮ್ಮನ್ನ ಕಾಂಗ್ರೆಸ್ ಪರವಾಗಿ ನಿಲ್ಲಿಸುವಾಗಲೂ ಸಹ ನಾವು ಈ ಅಭಿಪ್ರಾಯವನ್ನು ಕೆ. ಪಿ ಸಿ ಸಿ ಪೈಡೀಟೆರಿರೂ, ಮತ್ತು ಕೊಡಗು ಪ್ರಾಂತೀಕ ಕಾಂಗ್ರೆಸ್ ಕಮಿಟಿಯವರಿಗೂ ತಿಳಿಸಿದ್ದುದಲ್ಲದೆ ಮುಂದೆ ಈ ಎಸೆಂಬ್ಲಿಯಲ್ಲಿ ಆ ವಿಷಯ ನಿರ್ಣಯಕ್ಕೇನಾದರೂ ಬಂದಲ್ಲಿ, ನಾವು ಈ ಚರ್ಚೆಯಲ್ಲಿ ಭಾಗವಹಿಸದೆ, ಅದಕ್ಕೆ ವಿರೋಧಿಸುತ್ತೀವೆಂದು ಹೇಳಿರುವುದಲ್ಲದೆ, ಈ ಸಂಗತಿಯನ್ನು ಪತ್ರಿಕೆಗಳಲ್ಲಿ ಪ್ರಕಟಿಸಿರುವುದೂ ಇದರಿಂದ ಒಂದು ಸಂಗತಿ ಸ್ಪಷ್ಟವಾಗಿ ರುಜುವಾತು ಆಗುತ್ತಾಯಿತ್ತು. ಆದೇನೆಂದರೆ ಈ ಉಮೇದುವಾರರನ್ನು ಆರಿಸುವ ಸಮಯದಲ್ಲಿ ಕೊಡಗಿನ ಭವಿಷ್ಯದ ನಿರ್ಣಯದ ಮೊದಲು ಅಲ್ಲಿ ಬಂದಿದೆ ಮತ್ತು 'ಶ್ರೀ. ಪಿ. ವಿ. ಬೆಳ್ಯಪ್ಪನವರು ಕೊಡಗು ಪ್ರಾಂತೀಕ ವಿಷಯದ ಪರ ಕೊಡಗನ್ನು ಸಂಯೋಜನೆ ಮಾಡಬೇಕೆಂಬ ಗುರಿಯನ್ನು ಬಿಟ್ಟಿಲ್ಲ' ಎಂಬುವುದು ಅಲ್ಲಿದ್ದ್ದರೆ ಕಾಂಗ್ರೆಸ್ ಪಾರ್ಟಿಯ ಉಮೇದುವಾರರ ಪೈಕಿ ಕೆಲವರು ಈ ತರದ ವಿರೋಧದ ಅಭಿಪ್ರಾಯವನ್ನು ಗೂಡಿಸಲಿಕ್ಕಾಗಲೀ, ಪ್ರಕಟಿಸಲಿಕ್ಕಾಗಲೀ ಸಂದರ್ಭವೇ ಇರಲಿಲ್ಲ. ಎರಡನೆಯದಾಗಿ, ಶ್ರೀಯುತ ನೆಹರೂರವರು ಶ್ರೀ. ಪಿ. ವಿ. ಬೆಳ್ಯಪ್ಪನವರಿಗೆ ಒರೆಗ ಸತ್ಯವನ್ನು ಪ್ರಕಟಿಸುವುದರ ಬದಲು ಇವರು ಇಪ್ಪತ್ತು ವರ್ಷಾಲ್ಯ ಜನರು ಕೊಡಗಿನ ಭವಿಷ್ಯದ ನಿರ್ಣಯದಲ್ಲಿ 'ನಾವೆಲ್ಲಾ ಸಂಪೂರ್ಣ ಪ್ರತ್ಯೇಕವಾದಿಗಳು' ಎಂಬ ಒಂದು ಅಭಿಪ್ರಾಯ ಹೇಳಿಕೆಯನ್ನಾದರೂ ಪ್ರಕಟಿಸುತ್ತಿದ್ದರು. ಆದರೆ ಇವರು 'ಈ ವಿಕೇಂದ್ರೀಕರಣ' ತತ್ವಕ್ಕೆ ಬದ್ಧರಾಗಿರುವ ಪ್ರಯತ್ನ ಇತಿಹಾಸ ಮಹಶ್ರೇಷ್ಠರಾದ ಪಟೇಲರುಗಳ ಸಿದ್ಧಾಂತವಾದ ಯೂನಿಯೊಂದು ಅಭಿಪ್ರಾಯವನ್ನು ಬರೆಯಲಿಕೆಯಲ್ಲಿ ಕೊಡದೆ, ಮುಂದಕ್ಕೆ ಕಟ್ಟು ಬೀಳದ ರೀತಿಯಲ್ಲಿ ಅದನ್ನು ತಪ್ಪಲು ಪ್ರಯತ್ನಿಸುತ್ತಿದ್ದಾರೆ. ಈ ರೀತಿಯಲ್ಲಿ ತಾವು ಅನೇಕ ವರ್ಷಗಳಿಂದ ಪ್ರತಿಪಾದಿಸುತ್ತಿದ್ದ ಧ್ಯೇಯ ಮತ್ತು ಗುರಿಯನ್ನು ಬರೇ ಚುನಾವಣೆಯಲ್ಲಿ ಜಯಶೀಲರಾಗಬೇಕೆಂಬ ಗುರಿಯಿಂದ ಬಲಿಕೊಡುವುದು ಯೋಗ್ಯವಲ್ಲ. ಒಂದು ವೇಳೆ ಇವರು ತಮ್ಮ ಅಭಿಪ್ರಾಯವನ್ನು ನಿಜವಾಗಿಯೂ ಬದಲಾಯಿಸದೆ, ಬರೀ ಜನಕನ್ನು ಮಂಜೆಲು ಹೀಗೆ ಹೇಳುವುದಾದರೆ ಅದು ಕೇವಲ ಕಿಮ್ಮತ್ತಿಲ್ಲದ ನಡವಳಿಕೆ ಎಂದೇ ಭಾವಿಸಬೇಕಾಗಿದೆ.

ಎರಡನೆಯದಾಗಿ, ಕೊಡಗಿನ ಕಾಂಗ್ರೆಸ್ ಪಾರ್ಟಿಯವರು—ಶ್ರೀಯುತ ನೆಹರೂರವರ ಪತ್ರವನ್ನು ಅಚ್ಚುಹಾಕಿಸಿ, ಎಲ್ಲರ ಬಿಯೂ ಹಂಚಿರುತ್ತಾರೆ, ಈಗಿನ ಇಲೆಕ್ಷನ್ ರೂಲು ಪ್ರಕಾರ ಚುನಾವಣೆಗೆ ಸಂಬಂಧದ ಯಾವುದಾಗರೊಂದು ಹಸ್ತಪತ್ರಿಕೆ ಯೂ ಪ್ರಕಟಣೆಕ್ಕುನ್ನು ಹೊರಡಿಸಿದರೆ, ಅದನ್ನು ಪ್ರಕಟಿಸಿದವರ ವಿಳಾಸ, ಮತ್ತು ಅಂತಹ ಪ್ರತಿ ಪ್ರಿಂಟಾದ ಜಾಗದ ಹೆಸರು ಆದರಲ್ಲಿರಬೇಕೆಂದಿದೆ. ಆದರೆ, ನನ್ನ ಸೈಸೇರಿದ ಈ ಪ್ರತಿಯಲ್ಲಿ ಆ ವಿಚಾರವೂ ಇಲ್ಲ ಅಲ್ಲದೆ, ಈ ಕಾಗದವನ್ನು ಶ್ರೀಯುತ ನೆಹರೂರವರ ಸುತ್ತು ಶ್ರೀ. ಬೆಳ್ಯಪ್ಪನವರ ಒಪ್ಪಿಗೆ ಪಡೆದು ಬಿಡಿರಂಗಪಡಿಸಿರುವರೋ ಎಂಬುವುದೂ ಗೊತ್ತಿಲ್ಲ. ಏನೇ ಇರಲಿ, ಈ ಪತ್ರದಲ್ಲಿ ಬರೆದಿರುವದಾದರೂ ಏನು? 'ಕಾಂಗ್ರೆಸ್ ಪುಸಿಡೆಂಟರಾದ ನೆಹರೂರವರ ಅಭಿಪ್ರಾಯದಲ್ಲಿ, 'ಕೊಡಗಿನ ಸಂಯೋಜನೆಯ ಪ್ರಶ್ನೆ ಈಗ ಬರುವುದಿಲ್ಲ ಮತ್ತು ಮುಂಬರುವ ಚುನಾವಣೆಗೂ ಅದಕ್ಕೂ ಸಮ್ಮಂಧವಿಲ್ಲ. ಹೀಗಿರುವಾಗ್ಯೆ ಸಂಯೋಜನೆ ಪ್ರಶ್ನೆಯ ಮೇಲೆ ಈ ಚುನಾವಣೆಯನ್ನು ನಡಿಸುವುದು ಅಗತ್ಯವಿಲ್ಲದ ವಿಚಾರ, ಕೇವಲ ಅ ಸಂಬಂಧ ಮತ್ತು ಅವಿವೇಕ'.....ಅಷ್ಟಲ್ಲದೆ ಅವರು ಅದನ್ನು ನಿರಾಕರಿಸಿದ್ದಾಗಲೀ, ಯಾ ಈ ಪ್ರಶ್ನೆಯನ್ನು ಈಗ ಎತ್ತಲೇ ಬಾರದೆಂದಾಗಲೀ ಕಟ್ಟಪ್ಪಣೆಯನ್ನೇನೂ ಮಾಡಿರುವುದಿಲ್ಲ. ಆಸ್ಟೇ ಅಲ್ಲ ಕಡೆಯಲ್ಲಿ ಅವರು ಹೀಗೆ ಬರೆದಿದ್ದಾರೆ 'ಹೇಗೂ ನೀವು (ಎಂದರೆ, ಬೆಳ್ಯಪ್ಪನವರೂ ಮತ್ತು ಅವರೊಡನೆ ಕಾಂಗ್ರೆಸಿಗೆ ರಾಜೀನಾಮೆ ಕೊಟ್ಟವರೂ) ನಿನ್ನ ಪತ್ರದಲ್ಲಿ ಸೂಚಿಸಿರುವ ರೀತಿ ವರ್ತಿಸಬೇಕೆಂದು ಹಠಮಾಡುವುದಾದರೆ, ನಿನ್ನ ಇಷ್ಟದಂತೆ ನಡೆದುಕೊಳ್ಳಿರಿ' ಎಂದು.

ಸಂಗತಿಯು ಹೀಗಿದ್ದರೂ, ಈ ಪತ್ರವು ಹೊರಬರುವುದಕ್ಕೆ ಮೊದಲು ಶ್ರೀಯುತ ನೆಹರೂರವರು ಬೆಳ್ಯಪ್ಪನವರಿಗೆ ಒಂದು ಬಹಳ (Nasty) ತುಚ್ಛ ಪತ್ರವನ್ನು ಬರೆದಿದ್ದಾರೆಂದು ಒಂದು ಅಪಪ್ರಚಾರ ಹೊರಟಿತ್ತು. ಈ ಅಪಪ್ರಚಾರವನ್ನು ಕೇಳಿ, ಆ ಪತ್ರದ ಎಂಕಹದಿರಬಹುದೆಂಬ ಕುತೂಹಲ ಸ್ವಾಭಾವಿಕವಾಗಿ ನಮ್ಮಲ್ಲಿ ಹುಟ್ಟಿತ್ತು. ಆದರೆ ಆ ಪತ್ರವು ಹೊರಬಿದ್ದಾಗ ಅದರಲ್ಲಿ ಪ್ರಚಾರವಾದ ರೀತಿಯ ಜಾಡಿದೊಂದು 'ತುಚ್ಛತೆ' ವೂ ಅದರಲ್ಲಿ ಕಂಡುಬರಲಿಲ್ಲ.

ಆ ಮೇಲೆ "ನೆಹರೂರವರು ಈ ಪ್ರಶ್ನೆಯನ್ನು ಈಗ ಎತ್ತಕೂಡದು" ಎಂದು ಅಪ್ಪಣೆ ಮಾಡಿರುತ್ತಾರೆ. ಆದುದರಿಂದ 'ಆ ಪ್ರಶ್ನೆ ಈ ಚುನಾವಣೆಯಲ್ಲಿ ಬರುವುದಿಲ್ಲ" ಎಂಬೀ ಪ್ರಚಾರ ಬಹು ಬಿರುಸಾಗಿ ನಡೆಯಿತು. ಆದರೆ ಶ್ರೀ. ಬೆಳ್ಯಪ್ಪನವರಿಗೂ ಶ್ರೀ. ನೆಹರೂರವರಿಗೂ ನಡೆದ ಎಲ್ಲಾ ಪತ್ರಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಿದುದರಿಂದ ಈ ಪ್ರಚಾರವೂ ನಿಸ್ಸಾರವಾಗಿ ಅಡಗಿಹೋಯಿತ್ತು ಪ್ರಕಟಿಸಿದ ತೊಟ್ಟಲೆ ಹತ್ತಲಿಲ್ಲವಾಯಿತು.

ಈಗ ಕಡೆಯದಾಗಿ ಇನ್ನೊಂದು ಕೇವಲತರದ ಪ್ರಚಾರವು ಈಗ ಹೊರಟಿದೆ. ಅದೇನೆಂದರೆ "ಶ್ರೀ. ನೆಹರೂರವರು ಅಷ್ಟು ಕಂಠೋಕ್ಕಣಾಗಿ ಈ ಪ್ರಶ್ನೆಯನ್ನು ಈಗ ಎತ್ತಬಾರದೆಂದು ಕಾಂಗ್ರೆಸ್ ಮುಂದಾಳುಗಳನ್ನೇ ಜಯಶೀಲರಾಗಿ ಮಾಡಬೇಕೆಂದು" ಹೇಳಿರುವಾಗ ಶ್ರೀ ಬೆಳ್ಯಪ್ಪ ಮತ್ತು ಅವರ ಪಾರ್ಟಿಯವರು ಈಗ ಈ ಅಭಿಪ್ರಾಯಕ್ಕೆ ವಿರೋಧವಾಗಿ ಚುನಾವಣೆಗೆ ನಿಂತರೆ, ಒಂದು ವೇಳೆ ಜಯಶೀಲರಾದರೆ, ನೆಹರೂರವರು ಸಿಟ್ಟಿನಿಂದ ಈ ಕೊಡಗಿನ ಕಾಂಗ್ರೆಸ್ ಕಮಿಟಿಯನ್ನೇ ಕೇಳಿಸಿಯೇ ಇಲ್ಲವೆಂದು ಕಾಂಗ್ರೆಸ್ಸಿನಿಂದ ಹೊರಗೆ ಪ್ಯಾಂಕ್ಕಿಕ್ಕಿ ಸೇರಿಸಿಬಿಡಬಹುದಾದ್ದರಿಂದ ಆಲ್ಲದೆ ಶ್ರೀ. ನೆಹರೂರವರಿಗೆ ಕೊಡಗಿನ ಮೇಲೆ ಬಹಳ ಪ್ರೀತಿ, ಗೌರವವಿರುವುದರಿಂದ, ಅದನ್ನು ಈ ಬೆಳ್ಯಪ್ಪನವರೂ, ಅವರ ಅನುಯಾಯಿಗಳೂ, ತಮ್ಮ ದುರ್ವರ್ತನೆಯಿಂದ ಹಾಳು ಮಾಡಿ ಬಿಡುತ್ತಾರೆ" ಎಂಬುದಾಗಿ.

ಈ ಅಪಪ್ರಚಾರವು ಎಷ್ಟರ ಮಟ್ಟಿಗೆ ನಿಷ್ಕಾರಣವಾದುದೆಂದು ಹೇಳಬೇಕಾಗಿಲ್ಲ, ಅಂತರಾಷ್ಟ್ರೀಯ ಮುಂದಾಳು ಆಗಲು ಯೋಗ್ಯನೆಂದು, ಲೋಕವೇ ಬೆರಗಿತ್ತು ಕೊಂಡಾಡುತ್ತಿರುವ ಶ್ರೀ. ಪಂಡಿತಜವಾಹರ್‌ಲಾಲ್ ನೆಹರೂರವರಿಗೆ ತಮ್ಮ ದೇಶದ ಕೆಂಚಿತ್ ಭಾಗವನೆಯ ಸ್ವಭಾವವನ್ನು ಕೊಂಕಿಸುವುದು ಬಹು ನೀಚ ನಡಾವಳಿಕೆ ಎಂದೇ ಕೇಳಬೇಕು ಅಷ್ಟಲ್ಲದೆ ಶ್ರೀಯುತರು ಸ್ವತ್ತ ನೈತಿಕ ಕಟ್ಟಪ್ಪಣೆಯನ್ನು

ಬೆಳ್ಳಪ್ಪ ಮತ್ತು ಪಾರ್ಟಿಯವರ ಮೇಲೆ ಮಾಡಿದ್ದಾರೆಂಬುವುದು ಅವರು ಬರೆದ ಕಾಗದದಲ್ಲಿ ಎಲ್ಲಿಯೂ ಕಾಣುವಂತಿಲ್ಲ. ಅಷ್ಟೇ ಅಲ್ಲ ಶ್ರೀ ಬೆಳ್ಳಪ್ಪನವರು ಕಾಂಗ್ರೆಸ್‌ನಿಂದ ಹೊರಗೆ ಬಂದಿದ್ದರೂ, ಅವರು ಕಾಂಗ್ರೆಸಿಗೆ ವಿರೋಧ ಪಾರ್ಟಿಗಳಿಗೆ ಸೇರಿಲ್ಲ. ಇದು ಶ್ರೀ ಬೆಳ್ಳಪ್ಪನವರೂ ಅವರ ಅನುಯಾಯಿಗಳು ಕಾಂಗ್ರೆಸಿಗೆ ಕೊಟ್ಟ ರಾಜೀನಾಮೆಯಲ್ಲೇ ಸ್ಪಷ್ಟವಾಗಿದೆ. 'ನಾವು ಬೇರೆ ಯಾವ ಪಾರ್ಟಿಗೂ ಸೇರಲು ಇಚ್ಛಿಸುವುದಿಲ್ಲವಾದುದರಿಂದ ಈ ಕ್ಷಣಲು ವಿಕಯು ತತ್ಕಾಲಿಕವಾಗಿರುವುದು ಮತ್ತು ಜನಾನಪೇಯಲ್ಲಿ ಜಯಗೊಂಡಿದನಂತರ ಪುನಃ ಕಾಂಗ್ರೆಸಿಗೆ ಏನೋಂದೂ ಸಂಬಂಧವಿಲ್ಲದೆ ಸೇರಲಿರುವೆವು ನಿಮ್ಮವರಾದ ಳದ ಕಾಂಗ್ರೆಸ್ ಕೆಲಸಗಾರರು' ಎಂದು ಸ್ಪಷ್ಟವಾಗಿ ಬರೆದಿರುವರು. ಸಂಗತಿಯು ಹೀಗಿರುವಾಗ ಶ್ರೀ ನೆಹರೂರವರಿಗೆ ಇವರ ಮೇಲೆ ಸಿಟ್ಟು ಬರಲಿಕ್ಕಾಗಿಲಿ ಯೂ, ಇವರ ಪಡಾವಳಿಯು ನೆಹರೂರವರಿಗೆ ಕೊಡುವ ಪತ್ರವನ್ನು ಮರ್ಜಾಲ ಮಾಡುವುದಕ್ಕಾಗಿಲಿ ಎಡೆ ಎಲ್ಲಿ ಹೆ? ಇವರು ಈ ತರಹದ ಅವ ಪ್ರಚಾರಗಳಿಂದ ಪಂಡಿತಜೀಯವರ ಮೇಲೆ ನಾವೂ ನ್ಯ ಜನರಿಗೆ, ಅಲ್ಪ ಅಭಿಪ್ರಾಯ ಹುಟ್ಟುವಂತೆ ಮಾಡುವುದಾಗಿದೆ.

ಇವರು ಚುನಾವಣೆಯಲ್ಲಿ ಜಯಶೀಲರಾಗಬೇಕೆಂದಿದ್ದರೆ, ಸರಿಯಾದ ಮಾರ್ಗದಲ್ಲ ಹೋಗಿ ತನ್ನ ಧ್ಯೇಯ ಯೊಗುರಿಯನ್ನುವೆಂಬುವುನ್ನ ಜನರ ಮುಂದಿಡುವುದು ಉತ್ತಮ. ಆದರ ಬದಲು ಹೋಮುವಾರು ನೈಮನಸ್ಯವನ್ನೋ, ಇನ್ನಿತರ ಅಪಪ್ರಚಾರಗಳನ್ನೋ, ಆದೂ ಪವಿತ್ರವಾದ ಕಾಂಗ್ರೆಸ್ ಸಂಸ್ಥೆಯ ಹೆಸರಿನಲ್ಲೂ ಮಹಾತ್ಮ ಗಾಂಧಿಜಿಯವರ ಹೆಸರಿನಲ್ಲೂ, ಮತ್ತು ಶ್ರೀ ನೆಹರೂರವರ ಹೆಸರಿನಲ್ಲೂ ಹರಡಿ ಹಿಂಬಾಗದ ಬಾಗಿಲಿಗಾಗಿ ಗದ್ದಲಗೆ ಏಂಬಲಾ ಪ್ರಯತ್ನಿಸುವುದು ಓಟರರಾದ ನಮ್ಮ ಮನಸ್ಸಿಗೆ ಬೇಸರವನ್ನೂ, ಸಂಶಯವನ್ನೂ ಹುಟ್ಟಿಸುವಂತಿದೆ.

ಒಂದು ವೇಳೆ ಕಾಂಗ್ರೆಸಿನ ಮತ್ತು ಕೊಡಗು ಪ್ರಾಂತ್ಯದ ಇಂದಿನ ಹಿಶ್ಚಯಿಯಿಂದ ಈ ಸಂಯೋಜನೆಯು ಸ್ಪರ್ಧಿಕವಿದ ವಿಕಯು ಸ್ಪಷ್ಟಯಿಸಲ್ಪ ಈಗ ಎತ್ತುವೆದು ಅವಿವೇಕ ಯೂ ಅಯೋಗ್ಯವೆಂದು ಇವರು ಖಂಡಿತವಾಗಿಯೂ ಇವರ ಹೃದಯಪೂರ್ವಕವಾಗಿ ನಂಬುವುದಾದರೆ, ಆ ಯೋಗ್ಯ ಮಾಡುವ ಕೀಯ ಲ್ಲಿ ದೇಶದ ಹಿತಸಾ ಎಂಬ ಮಾತು ಇಲ್ಲಿ ನೆನೆಸುವುದು ಹಾಳು ಮಾಡುತ್ತದೆ ಎಂಬು ವಂಚಿಸಿದನ್ನು ಇವರು ವಿನಂಶಿಸಬಹುದಿತ್ತು ಎಂ ಗೊಳ್ಳಲು ವ ಕಾರಣವನ್ನಾದರೂ ಕೊಟ್ಟಿಲ್ಲ. ಆ ದೇ ಆಲ. ಈ ಪ್ರಶ್ನೆಯನ್ನು ನುಂಬ ಯನ ಎಸೆಂಬ್ಲಿಯಲ್ಲಿ ಖಂಡಿತವಾಗಿಯೂ ಎತ್ತುವುದಿಲ್ಲ ಎಂಬುದನ್ನು ಸಹ ನಿರ್ವಿವಾದವಾಗಿ ಹೇಳಲ್ಲ. ಅದರ ಬಗಲು ಶ್ರೀ ಪಿ. ಸಿ. ಸಿ. ಯವರು ಅನೇಕ ವರ್ಷಗಳಿಂದ ಕಾಂಗ್ರೆಸಿನಲ್ಲಿ ದುಡಿದವರೂ, ನುರಿತವರೂ ಆದ ಅನೇಕ ಮಂದಾರಾಗಳಿದ್ದರೂ ಸಹ ಅವರನ್ನೆಲ್ಲಾ ಬಿಟ್ಟು ಬರೀ ಸಂಯೋಜನೆಯ ಒಂದು ವಿಷಯದಲ್ಲಿ ಮಾತ್ರ ಬೆಂಬಲವಿಯಿಸ್ತಿದ್ದವರನ್ನೆ ಕಾಂಗ್ರೆಸ್ ಹುರಿಯೂಳ್ಳಾಗಿ ಆರಿಸಿರುವ್ಯ ದೇಶಕ್ಕಾದ ನಾವು ಹೇಗೆ ಇವರ ಮನಸ್ಸಿನ ಸತ್ಯವನ್ನು ತಿಳಿಯಬೇಕು. ಹೀಗೆ ಇವರೆ ಮಾತೊಂದು, ವರ್ತನೆಯೊಂದು ಆಗಿರುವಾಗ ಓಟರುಗಳು ತಮ್ಮ ಮಂದಾಳುಗಳನ್ನು ಈ ಪ್ರಶ್ನೆಯ ಮೇಲೆ ಆರಿಸಿದರೆ ಈ ಕೆ. ಪಿ. ಸಿ. ಯವರಿಗಾಗಲೀ ಯೂ ಸಂಯೋಜನಾವಾದಿಗಳಿಗಾಗಲೀ ಉಟ್ಟಾಗುವ ಪೊಂದರೆಯೂದರೂ ಏನು? ಈಗ ಕಾಂಗ್ರೆಸಿಗೆ ಎದುರಾಗಿ ನಿಂತಿರುವ ಪಾರ್ಟಿಯವರಲ್ಲಿ ವಿದ್ಯಾವಂತರಾಲೀ, ಬುದ್ಧಿವಂತರಾಗಲೀ ಯೂರೂ ಇಲ್ಲವೆಂದು ಹೇಳಲು ಸಾಧ್ಯವಿಲ್ಲ ಒಂದು ವೇಳೆ ಈಗಿನ ಸಂಯೋಜನಾವಾದಿಗಳೆಂದು ಹೇಳುವ ಕಾಂಗ್ರೆಸ್ ಮುಂದಾಳುಗಳೇ ಚುನಾಯಿತರಾದರೆ, ಇವರು ಎಲ್ಲಾದರೂ ನಮ್ಮ ದೇಶವನ್ನು ಬೇರೆ ಪ್ರಾಂತ್ಯಕ್ಕೆ ಸೇರಿಸಿಬಿಟ್ಟಾರೋ' ಎಂಬ ಹೆದರಿಕೆಯೂ ಸಂಶಯವೂ ಸ್ಪಷ್ಟವಾದಿಗಳಾದ ಓಟರುಗಳ ಮನಸ್ಸಿನಲ್ಲಿರುತ್ತದೆ.

ಆದಷ್ಟು ಬದಲು, ಪ್ರತ್ಯೇಕವಿದಳಿಸುವಂದಾಳುಗಳೇ ಬಹುಮತದಿಂದ ಚುನಾಯಿತರಾದರೆ, ಸಂಯೋಜನೆಯ ಗೂತೇ ತತ್ಕಾಲಕ್ಕೆ ಇಲ್ಲವೆಂದಾದ ಮೇಲೆ, ಹೊಸ ಓಟರಿಸಿಗೂ ವ್ಯಸನಕ್ಕೂ, ಸಂಶಯಕ್ಕೂ ಹೆದರಿಕೆಗೂ ಎಡೆಯೇ ಇರುವುದಿಲ್ಲವಷ್ಟೆ. ಆದುದರಿಂದ ಪ್ರತ್ಯೇಕವಾದಿಗಳನ್ನೇ ಈ ಚುನಾವಣೆಯಲ್ಲಿ ಜಯಶೀಲರನ್ನಾಗಿ ಮಾಡುವುದು ಎಲ್ಲಾ ಓಟರುಗಳ ಹಿತಕ್ಕಾಗಿಯೂ ಸಮರ್ಪಕವಾಗಿದೆ.

ಮುಂಬರುವ ಚುನಾವಣೆಯಲ್ಲಿ

ಕೊಡಗಿನ ಮತದಾರರಲ್ಲಿ ಒಂದು ಬೇಡಿಕೆ.

ಲೇಃ-ಶ್ರೀ ಸಿ. ಎಂ. ಭೀಪುಯ್ಯ.

ನಮ್ಮ ಪ್ರಾಂತ್ಯದ ಚುನಾವಣೆಯು ಜನವರಿ ತಿಂಗಳಿಂದ ಪ್ರಾರಂಭವಾಗಬೇಕಾಗಿದೆ. ಈಗಾಗಲೇ ಚುನಾವಣೆ ಜ್ವರವು ಬಹು ಜೋರಾಗಿ ಹಿಡಿಯತೆ ಕಾಣುತ್ತಿದೆ. ಆದರೆ ಪ್ರತಿ ಒಂದು ಕಡೆಯಲ್ಲಿ ಸಭೆ ಸೇರಿದಲ್ಲಿ ಪಕ್ಷಗಳ ಹೆಸರನ್ನು ಎಲ್ಲಿಯೂ ಸಹ ಮೂಡಿಸುವುದಿಲ್ಲವೆಂಬ ತಾವು ಮೂಡಬಹುದಾದ ಮೂಡಿಪ ಕೆಲವಾಗಳನ್ನು ಕೇಳುತ್ತಿಲ್ಲ. ಜರೆದು ದರಿಂದಾಗಲೀ, ಹೀರ್ಯೂಸಿದಿಂದಾಗಲೀ ಜನತೆಗೆ ಏನೂ ಪ್ರಯೋಜನವಾಗುವ ಹಾಗಿಲ್ಲ.

ಒಂದಾನೊಂದು ಕಾಲದಲ್ಲಿ ಕಾಂಗ್ರೆಸ್ ಸಂಸ್ಥೆಯನ್ನು ಅದರಲ್ಲೂ ರಾಷ್ಟ್ರೀಯ ಪಿತಾಮಹನಾದ ಮಹಾತ್ಮ ಗಾಂಧಿಯವರನ್ನು ಜರೆದು ಅಲ್ಲಗಳೆದವರು ಮತ್ತು ರಾಷ್ಟ್ರದ ಮಂಜುಡರ ಭಾವ ಚಿತ್ರಗಳನ್ನು ಕೊಡಪತ್ರಗಳಲ್ಲಿ ಇಡಲಿಕ್ಕೆ ಹೆದರಿದವರು ಸ್ವಾತಂತ್ರ್ಯ ಸಿಕ್ಕಿದ ಮಾಡಿ

ಸ ನೆಯ ನಮೂನೆ.

[10 (3) ನಿಯಮ 11 ನೆಯ ಪೆಟಿಂಟನೆಗಳು.]

ಇದಕ್ಕೆ ಜೋಡಿಸಿರುವ ದಕ್ಷಿಣ ಕೊಡಗು ತಾಲೂಕಿನ ಪ್ರತ್ಯೇಕ ಪ್ರತ್ಯೇಕ ಚುನಾವಣಾ ಸ್ಥಾನಗಳಿಂದ ಕೊಡಗು ವಿಧಾನ-ಸಭೆಗೆ (Coorg Legislative Assembly) ಚುನಾವಣೆ. ನಿಂಧ್ಯವಾಗಿರತಕ್ಕೆ ನಾಮನಿರ್ದೇಶನಗಳ (Valid Nominations) ಪಟ್ಟಿ. ಚುನಾವಣೆಗೆ ಅಭ್ಯರ್ಥಿಯಾಗಿರತಕ್ಕವರ ಅಂತಿಮ ಪಟ್ಟಿ. (Final List of candidates for Election.)

ಜಂಜ್ಞೆ ಸಂ	ಅಭ್ಯರ್ಥಿಯ ಹೆಸರು*	ಅಭ್ಯರ್ಥಿಯ ವಿಳಾಸ	ಸಂಕೇತದ ಗುರುತು
	ಶ್ರೀಮಂಗಲ ಚುನಾವಣಾ ಕ್ಷೇತ್ರ		
✓1	ಕರುಂಬಯ್ಯ, ಮಂಜಿಟೀರ	.... ಕುಟ್ಟ ಗ್ರಾಮ, ಕುಟ್ಟ ಪೋಸ್ಟ್, ದ. ಕೊಡಗು ತಾಲೂಕು.	.... ನೊಗ ಹೇರಿದ ಎರಡು ಎತ್ತುಗಳು (ಕಾಂ)
2	ಕರುಂಬಯ್ಯ, ಕೋಳೆರ	.... ವಕೀಲ್, ವೀರಾಜಪೇಟೆ, ದ. ಕೊಡಗು ತಾಲೂಕು	.... ತಕ್ಕಡಿ (ಪ್ರತ್ಯೇಕ ಪಕ್ಷ.)
††3	ಪೂವ, ಪೆಟ್ಟೆಕರುಬರ	.... ಕುಟ್ಟ ಗ್ರಾಮ, ಕುಟ್ಟ ಪೋಸ್ಟ್, ದ. ಕೊಡಗು ತಾಲೂಕು	.... ನೊಗ ಹೇರಿದ ಎರಡು ಎತ್ತುಗಳು (ಕಾಂ)
††4	ಪೊಬ್ಬಯ್ಯ, ಜಿ.	.... ಹೈಸೊಡ್ಲೂರು ಗ್ರಾಮ, ಹುದಿಕೇರಿ ಪೋಸ್ಟ್, ದ. ಕೊಡಗು ತಾಲೂಕು	.... ಹುಂಜ (ಪ್ರತ್ಯೇಕ)
	ಹುದಿಕೇರಿ ಚುನಾವಣಾ ಕ್ಷೇತ್ರ		
1	ಗಣಪತಿ, ತಾಳತಮನೆ	.... ದೇಗೂರು ಗ್ರಾಮ, ಹುದಿಕೇರಿ ಪೋಸ್ಟ್, ದ. ಕೊಡಗು ತಾಲೂಕು	.... ತಕ್ಕಡಿ (ಪ್ರತ್ಯೇಕ)
2	ಮಾಚಯ್ಯ, ಚೆಕ್ಕೆರ	.... ಗೋಣಿಕೊಪ್ಪಲ್ ದ. ಕೊಡಗು ತಾಲೂಕು	.... ನೊಗ ಹೇರಿದ ಎರಡು ಎತ್ತುಗಳು (ಕಾಂ)
3	ಮೊಣ್ಣಯ್ಯ, ಚೆಕ್ಕೆರ ಜಿ.	.... ಕೋಣಗೇರಿ ಗ್ರಾಮ, ಹುದಿಕೇರಿ ಪೋಸ್ಟ್ ದ. ಕೊಡಗು ತಾಲೂಕು	.... ಜೋಳ ಕದಿರು ಮತ್ತು ಕುಡುಗೋಲು (ಪಮ್ಯೂನಿಸ್ಟ್)
	ಬೆಟ್ಟತ್ತು ನಾಡು ಚುನಾವಣಾ ಕ್ಷೇತ್ರ		
1	ಪೂಣಚ್ಚ ಚೆಪ್ಪುಡಿರ	.... ಹೋಂಕೋಟು, ಗೋಣಿಕೊಪ್ಪಲು, ದ. ಕೊಡಗು ತಾಲೂಕು	.... ನೊಗ ಹೇರಿದ ಎರಡು ಎತ್ತುಗಳು (ಕಾಂ)
2	ಪಮ್ಮಯ್ಯ, ಚೇಂದಿರ	.... ಪೊನ್ನಂಪೇಟೆ ದ. ಕೊಡಗು ತಾಲೂಕು	.... ತಕ್ಕಡಿ (ಪ್ರತ್ಯೇಕ)
	ಪೊನ್ನಂಪೇಟೆ ಚುನಾವಣಾ ಕ್ಷೇತ್ರ		
††1	ಬೆಳ್ಳಿ, ಯರವರ	.... ನೊಮ್ಮಿ ಗ್ರಾಮ, ತಿತಿಮತಿ ಪೋಸ್ಟ್ ದ. ಕೊಡಗು ತಾಲೂಕು	.... ನೊಗಹೇರಿದ ಎರಡು ಎತ್ತುಗಳು (ಕಾಂ)
2	ಗಣಪತಿ, ಬಿ. ಡಿ.	.... ಜನ್ನಲಿಳ್ಳಿ, ಮಡಿಕೇರಿ, ಉ. ಕೊಡಗು ತಾಲೂಕು	.... ತಕ್ಕಡಿ (ಪ್ರತ್ಯೇಕ)
3	ಮುತ್ತಣ್ಣ ಮೊಣಂಗಡ	.... ಕೊಟ್ಟಗೇರಿ ಗ್ರಾಮ, ಪೊನ್ನಂಪೇಟೆ ಪೋಸ್ಟ್ ದ. ಕೊಡಗು ತಾಲೂಕು	.... ಗಾಡಿ (ಸ್ವತಂತ್ರ)
4	ಮೊಣಯ್ಯ, ಪುಚ್ಚಿಮಡ	.... ಸನ್ನಿ ಕಾಟೇಜ್, ಪೊನ್ನಪ್ಪ ಸಂತೆ ರೋಡು, ಗೋಣಿಕೊಪ್ಪಲ್ ಪೋಸ್ಟ್ ದ. ಕೊಡಗು ತಾಲೂಕು	.... ದೋಣಿ (ಸ್ವತಂತ್ರ)
5	ನಾಣಯ್ಯ ಪುತ್ತಮನೆ	.... ಪೊನ್ನಂಪೇಟೆ ದ. ಕೊಡಗು ತಾಲೂಕು	.... ನೊಗ ಹೇರಿದ ಎರಡು ಎತ್ತುಗಳು (ಕಾಂ)
††6	ಪಾಳ ಪಂಜ ಯರವರ	.... ನೊಮ್ಮಿ ಗ್ರಾಮ, ತಿತಿಮತಿ ಪೋಸ್ಟ್ ದ. ಕೊಡಗು ತಾಲೂಕು	.... ಹುಂಜ (ಪ್ರತ್ಯೇಕ)
	ವೀರಾಜಪೇಟೆ ಟೌನ್ ಚುನಾವಣಾ ಕ್ಷೇತ್ರ		
1	ಅಹಮದ್ ಎಸ್. ಜಿ.	.... ವ್ಯಾಪಾರಿ, ವೀರಾಜಪೇಟೆ, ದ. ಕೊಡಗು ತಾಲೂಕು	.... ತಕ್ಕಡಿ (ಪ್ರತ್ಯೇಕ)
✓ 2	ರಾಮಮೂರ್ತಿ ಎಸ್. ಎಸ್.	.... ಅಡ್ವೋಕೇಟ್, ವೀರಾಜಪೇಟೆ, ದ. ಕೊಡಗು ತಾಲೂಕು	.... ನೊಗಹೇರಿದ ಎರಡು ಎತ್ತುಗಳು (ಕಾಂ)
	ವೀರಾಜಪೇಟೆ ನಾಡು ಚುನಾವಣಾ ಕ್ಷೇತ್ರ		
1	ಅಚ್ಚುವ್ವ, ಪಾಲೆಕಂಡ	.... ಕದನೂರು ಗ್ರಾಮ ವೀರಾಜಪೇಟೆ ಪೋಸ್ಟ್ ದ. ಕೊಡಗು ತಾಲೂಕು	.... ಗಾಡಿ (ಸ್ವತಂತ್ರ)
2	ಬೆಳ್ಯಪ್ಪ, ಬಿ ಎ.	.... ಎಡಿಟರ್, ಜನ್ಮಭೂಮಿ, ಮಡಿಕೇರಿ ಉ. ಕೊಡಗು ತಾಲೂಕು	.... ನೊಗ ಹೇರಿದ ಎರಡು ಎತ್ತುಗಳು (ಕಾಂ)
3	ಬೆಳ್ಳಿಪ್ಪ, ಕಂಬೀರಂಡ	.... ಸಾಂಗಾಲ ಗ್ರಾಮ, ಬಿಟ್ಟಂಗಾಲ ಪೋಸ್ಟ್ ದ. ಕೊಡಗು ತಾಲೂಕು	.... ಸೈಕಲ್ (ಸ್ವತಂತ್ರ)
+ 4	ಕರುಂಬಿ, ಕೆಂಬಟ್ಟಿ	.... ಮಂಗ್ಗಲ ಗ್ರಾಮ ವೀರಾಜಪೇಟೆ ಪೋಸ್ಟ್, ದ. ಕೊಡಗು ತಾಲೂಕು	.... ನೊಗ ಹೇರಿದ ಎರಡು ಎತ್ತುಗಳು (ಕಾಂ)
× 5	ತೋಜ, ಹರಿಜನ	.... ಬಿಳುಗೂಡ ಗ್ರಾಮ, ಅಮ್ಮತ್ತಿ ಪೋಸ್ಟ್ ದ. ಕೊಡಗು ತಾಲೂಕು	.... ಹುಂಜ (ಪ್ರತ್ಯೇಕ)
6	ಉತ್ತಯ್ಯ, ಪಿ. ಸಿ.	.... ಚಿಕ್ಕಪೇಟೆ ವೀರಾಜಪೇಟೆ, ದ. ಕೊಡಗು ತಾಲೂಕು	.... ತಕ್ಕಡಿ (ಪ್ರತ್ಯೇಕ)
	ಅಮ್ಮತ್ತಿ ಚುನಾವಣಾ ಕ್ಷೇತ್ರ		
1	ಬೆಳ್ಯಪ್ಪ, ಪಿ. ಐ.	.... ಗಾಂಧಿ ಭವನ, ಮಡಿಕೇರಿ, ಉ. ಕೊಡಗು ತಾಲೂಕು	.... ತಕ್ಕಡಿ (ಪ್ರತ್ಯೇಕ)
✓ 2	ಪೂಣಚ್ಚ, ಮೊಣಮಂಡ	.... ಕೈಕೇರಿ ಗ್ರಾಮ, ಗೋಣಿಕೊಪ್ಪಲ್ ಪೋಸ್ಟ್, ದ. ಕೊಡಗು ತಾಲೂಕು	.... ನೊಗ ಹೇರಿದ ಎರಡು ಎತ್ತುಗಳು (ಕಾಂ)
	ಸಿದ್ದಾಪುರ ಚುನಾವಣಾ ಕ್ಷೇತ್ರ		
1	ಕುಟ್ಟಪ್ಪ, ಜಿ. ಎಸ್.	.... ಗಣಪತಿ ಬೀದಿ, ಬ್ಲಾಕ್ ನಂ. 6 ಮನೆ ನಂ. 20, ಮಡಿಕೇರಿ ಉ. ಕೊಡಗು ತಾಲೂಕು	.... ಜೋಳ ಕದಿರು ಮತ್ತು ಕುಡುಗೋಲು (ಪಮ್ಯೂನಿಸ್ಟ್)
††2	ತಾಳ, ಪೆಟ್ಟೆ ಕುರುಬರ	.... ಹೆಬ್ಬಾಲೆ ಗ್ರಾಮ ಪೊಳೆಬೆಟ್ಟ ಪೋಸ್ಟ್, ದ. ಕೊಡಗು ತಾಲೂಕು	.... ನೊಗ ಹೇರಿದ ಎರಡು ಎತ್ತುಗಳು (ಕಾಂ)
3	ಮುರುವಂಡ ಮಾಚಯ್ಯ	.... ಪೊಳೆಬೆಟ್ಟ ಪೋಸ್ಟ್ ದ. ಕೊಡಗು ತಾಲೂಕು	.... ನೊಗ ಹೇರಿದ ಎರಡು ಎತ್ತುಗಳು (ಕಾಂ)
††4	ಮೂರ ಎಳವರ	.... ಪೇಪ್ರಿ, ಲಕ್ಷ್ಮಿ ತೋಟ ಪೊಳೆಬೆಟ್ಟ ದ. ಕೊಡಗು ತಾಲೂಕು	.... ಹುಂಜ (ಪ್ರತ್ಯೇಕ)
5	ಪೂನಯ್ಯ, ಕೊಡಂಡ	.... ಪ್ಲಾಂಟರ್, ಲಕ್ಷ್ಮಿ ತೋಟ, ಪೊಳೆಬೆಟ್ಟ ದ. ಕೊಡಗು ತಾಲೂಕು	.... ತಕ್ಕಡಿ (ಪ್ರತ್ಯೇಕ)
	ನಾಪೋಕ್ಲು ಚುನಾವಣಾ ಕ್ಷೇತ್ರ		
1	ನಾರಾಯಣಾಚಾರ್ಯ ಎಸ್. ಎಸ್.	.... ನೆಮ್ಮಂದಡ ಗ್ರಾಮ, ಚೆಯ್ಯಂಡಾಣೆ ಪೋಸ್ಟ್ ದ ಕೊಡಗು	.... ನೊಗ ಹೇರಿದ ಎರಡು ಎತ್ತುಗಳು (ಕಾಂ)
2	ತಿಮ್ಮಯ್ಯ, ಎ. ಸಿ.	.... ಗ್ರೀನ್ ಹಿಲ್ಸ್, ವೀರಾಜಪೇಟೆ, ದ. ಕೊಡಗು ತಾಲೂಕು	.... ತಕ್ಕಡಿ (ಪ್ರತ್ಯೇಕ)
	ಭಾಗಮಂಡಲ ಚುನಾವಣಾ ಕ್ಷೇತ್ರ		
1	ದೇವಯ್ಯ, ಕೋರಕ	.... ಹೊದ್ದೂರು ಗ್ರಾಮ, ಮೂರ್ನಾಡು ಪೋಸ್ಟ್, ಉ. ಕೊಡಗು	.... ನೊಗ ಹೇರಿದ ಎರಡು ಎತ್ತುಗಳು (ಕಾಂ)
2	ಚಿಣ್ಣಪ್ಪಾಸಿಂಗ್, ಆರ್. ಜೆ.	.... ಅಡ್ವೋಕೇಟ್, ವೀರಾಜಪೇಟೆ, ದ. ಕೊಡಗು ತಾಲೂಕು	.... ಹುಂಜ (ಸ್ವತಂತ್ರ)
3	ಪೊನ್ನಪ್ಪ, ಪಟ್ಟಮಡ	.... ದೇಂಗೂರು ಗ್ರಾಮ, ಕೊಟ್ಟಗೂರು ಪೋಸ್ಟ್, ಉತ್ತರ ಕೊಡಗು	.... ತಕ್ಕಡಿ (ಪ್ರತ್ಯೇಕ)

ಸೂಚನೆ.— * 1. ಪೋಟು ಕೊಡುವುದಕ್ಕಾಗಿ ಗೊತ್ತಾಗಿರತಕ್ಕ ಮತ್ತು ಪ್ರತ್ಯೇಕವಾಗಿ ತೆರೆಸಲಾದ ಪೋಲಿಂಗ್ ಸ್ಟೇಷನ್‌ಗಳಲ್ಲಿ 22-1-52 (ಕಾರೀಕು ಅಥವಾ ತಾಕೀಮು ಗಳು) 7-30 ಗಂಟೆಯಿಂದ ಮೊದಲಾಗಿ 12-30 ಗಂಟೆ ವರೆಗೆ ಅಪರಾಹ್ನ 1ರಿಂದ 4-30 ಗಂಟೆಯವರೆಗೆ ಪೋಟು ಕೊಡಲು ಅವಕಾಶ ಕೊಡಲಾಗುವುದು.

** 2. ಅಭ್ಯರ್ಥಿಯ ಹೆಸರುಗಳಿಗೆ † ಗುರುತು ಹಾಕಿದ ಅಭ್ಯರ್ಥಿಗಳು "ಪೆಡ್ಯೂಲ್ಡ್" (Scheduled Castes) ಸೇರಿದವರು ಮತ್ತು + ಗುರುತು ಹಾಕಿರುವ ಅಭ್ಯರ್ಥಿಗಳು "ಪೆಡ್ಯೂಲ್ಡ್" ಜಂಗಡಗಳಿಗೆ Scheduled Tribes) ಸೇರಿದವರು.

ಸ್ಥಳ ದಕ್ಷಿಣ ಕೊಡಗು ತಾಲೂಕು
ತಾರೀಕು 11-12-51

ಜಿ. ಬಿ ಅಚ್ಚಯ್ಯ,
ಚುನಾವಣಾ ಅಧಿಕಾರಿ

ಕೊ ಡ ಗು

ತಾ. ೨೧-೧೨-೧೯೫೦ರಂದೇ ಶುಕ್ರವಾರ

ಚುನಾವಣೆಯೂ ಸಾರ್ವಜನಿಕ ಸಭೆಗಳೂ.

ಚುನಾವಣೆ ಹತ್ತಿರ ಬಂದಂತೆ ಪ್ರಚಾರ ಕಾರ್ಯಗಳು ಬಹು ಬಿರುಸಿನಿಂದ ಸಾಗುತ್ತಿವೆ. ಕೊಡಗಿನ ಚುನಾವಣಾ ಕಣದಲ್ಲಿ ಎರಡು ಪ್ರಬಲ ಪಕ್ಷಗಳು ತಮ್ಮ ತಮ್ಮ ಪ್ರಚಾರ ನಡೆಸುತ್ತಿವೆ. ಒಂದು ಪಕ್ಷದ ವಾದವನ್ನು ಮತ್ತೊಂದು ಪಕ್ಷವು ಅಲ್ಲಗಳೆದು ತಾನೇ ಸತ್ಯಪಥದಲ್ಲಿ ನಡೆಯುತ್ತಿರುವುದಾಗಿ ಹೇಳಿಕೊಳ್ಳುವುದರಿಂದ ಮತದಾರರಿಗೆ ಯಾವ ಪಕ್ಷದ ವಾದದಲ್ಲಿ ತಿರುಳಿದೆ ಎಂಬುದನ್ನು ಅರಿತುಕೊಳ್ಳುವುದು ಕಷ್ಟಸಾಧ್ಯವಾಗಿದೆ. ಎರಡೂ ಪಕ್ಷಗಳ ಕಛೇರಿಗಳಲ್ಲಿ ಕೇಳಿ ಓಟರರಾಗಿ ಸಾಕಾಗಿದೆ. ಆದ್ದರಿಂದ ಓಟರರು ಎರಡೂ ಪಕ್ಷದವರನ್ನು ಒಂದೇ ಸಭೆಯಲ್ಲಿ ಸೇರಿಸಿ ಅವರ ಅಭಿಪ್ರಾಯವನ್ನು ಹೊರಪಡಿಸಿಕೊಳ್ಳುವುದು ಹಿತ ಸುಳ್ಳು, ಮೋಸ, ದೂಷಣೆ, ಆರೋಪಗಳ ದಾಳಿಯು ಎಂದೂ ಹಿತಕಾರಕವಲ್ಲ.

ವರ್ತಮಾನ.

ಬೋಯಿಕೇರಿಯಲ್ಲಿರುವ ಶ್ರೀ ಟಿ. ಕೃಷ್ಣ ಮೇಸ್ತ್ರಿಯವರು ಬೋಯಿಕೇರಿಯಲ್ಲಿ ಮಗ್ಗದಿಂದ ಬಟ್ಟೆ ನೇಯುತ್ತ ಕೇಂದ್ರ ಒಂದನ್ನು ತೆರೆದಿರುವರು.

ಡೆಪ್ಯುಟಿ ರೇಂಜರ್ ಕೆಲಸಕ್ಕೆ ಕೆಮಿಸ್ಟ್ರಿ, ಬೊಟನಿ ಮತ್ತು ಜೋಲಜಿ ತೆಗೆದುಕೊಂಡು ಇಂಟರ್ ವಿೂಡಿಯೇಟ್ ಪಾಸಾದ ತರುಣರು ಬೇಕಾಗಿದ್ದಾರೆ. ಆಸಕ್ತರು ಹೆಚ್ಚಿನ ವಿವರಗಳನ್ನು ಮಡಿಕೇರಿ ಡಿಸ್ಟ್ರಿಕ್ಟ್ ಎಂಪ್ಲಾಯ್‌ಮೆಂಟ್ ಆಫೀಸಿನಲ್ಲಿ ಹೆಸರನ್ನು ರಿಜಿಸ್ಟರ್ ಮಾಡಿಸತಕ್ಕದ್ದು.

"ಹಿಂಸೂ ವೈದ್ಯಕೀಯ ದಳಕ್ಕೆ ಎಸ್. ಎಸ್. ಎಲ್. ಸಿ. ಪಾಸಾದ ಯುವಕರು ಬೇಕಾಗಿದ್ದಾರೆ. ಸೇರಲಿಚ್ಛಿಸುವವರು ಇದೇ ತಿಂಗಳು ಅಂದರೆ ಡಿಸೆಂಬರ್ ಅಂತ್ಯದೊಳಗೆ ಹೆಚ್ಚಿನ ವಿವರಗಳನ್ನು ಮಡಿಕೇರಿ ಡಿಸ್ಟ್ರಿಕ್ಟ್ ಎಂಪ್ಲಾಯ್‌ಮೆಂಟ್ ಆಫೀಸಿನಿಂದ ತಿಳಿದು ಕೊಳ್ಳಬಹುದು.

ಮುಂದೆ ಜಾರಿಯಲ್ಲಿ ಬರುವ ವೈವಸಾಯ ಆದಾಯ ತೆರಿಗೆಯ ವಿಚಾರದಲ್ಲಿ ಚೇಂಬರ್ ಕಮಿಷನರನ್ನು ವೈವಸಾಯ ಆದಾಯ ತೆರಿಗೆಯ ಕಮಿಷನರಾಗಿಯೂ ಡಿ. ಜಿಲ್ಲರನ್ನು ಡಿಪ್ಯುಟಿ ಕಮಿಷನರಾಗಿಯೂ ನೇಮಿಸಲಾಗಿದೆ.

ಉತ್ತರ ಕೊಡಗಿನಲ್ಲಿ ಚುನಾವಣೆಯು ಜನವರಿ ಕಾ. ೧೫ ರಲ್ಲಾ ದ. ಕೊಡಗಿನಲ್ಲಿ ಕಾರೇಳು ೩೨ ರಲ್ಲೂ ನಡೆಯುವುದು. ಚುನಾವಣೆಯ ದಿನ ಬೆಳಿಗ್ಗೆ ೭-೩೦ ರಿಂದ ೧೨-೩೦ ರ ವರೆಗೂ, ಮಧ್ಯಾಹ್ನ ೧ ಗಂಟೆಯಿಂದ ೪-೩೦ ರ ವರೆಗೆ ಓಟು ನೀಡಬಹುದೆಂದು ಸಮಯ ನಿಗದಿಪಡಿಸಲಾಗಿದೆ.

ನಿವೃತ್ತ ಇಂಜಿನಿಯರಾಗಿದ್ದ ಶ್ರೀ. ಕೊಂಗೆಟ್ಟಿರ ಪಿ. ಕಾಳಪ್ಪನವರು ತಾ. ೧೫ ರಲ್ಲಿ ಬೆಂಗಳೂರಿನಲ್ಲಿ ನಿಧನರಾದರು.

ಆಕ್ಕೂರು ಗ್ರಾಮದ ಶ್ರೀ. ಚೆಪ್ಪುಡೀರ ಟಿ. ಮುತ್ತಣ್ಣನವರು ತಾ. ೧೭ ರಲ್ಲಿ ತಮ್ಮ ಆತ್ಮೀಯ ವಯಸ್ಸಿನಲ್ಲಿ ಸ್ವರ್ಗಸ್ಥರಾದರು.

ಕೊಡಗು ಜೀಪ್ ಕಮಿಷನರವರ ಕಛೇರಿ, ಮಡಿಕೇರಿ,
ತಾ. 20ನೇ ಡಿಸೆಂಬರ್ 1951.

ಪ್ರಕಟಣೆ (ನೋಟೀಸ್).

1951ನೇ ಇಸವಿಯ ಕೊಡಗು ವೈವಸಾಯ ವರಮಾನ ತೆರಿಗೆ ಅಕ್ಟಿನ (ಕೊಡಗಿನ 1951 ನೇ ಇಸವಿಯ 1ನೇ ನಂಬರು ಆಕ್ಟು) ನೇರೆಗೆ ವೈವಸಾಯ ವರಮಾನ ತೆರಿಗೆ ವಕೂಲಿ.

1951-52 ನೇ ವರ್ಷದಲ್ಲಿ ಕೊಡಬೇಕಾದ ತೆರಿಗೆಯನ್ನು ನಿರ್ಧಾರಿಸುವ ಬಗ್ಗೆ ಹಿಂದಿನ ವರ್ಷದ ಒಟ್ಟು ವೈವಸಾಯ ವರಮಾನದ ದಾಖಲೆ ಪಟ್ಟಿ.

1951 ಇಸವಿಯ ಕೊಡಗು ವೈವಸಾಯ ವರಮಾನ ತೆರಿಗೆ ಅಕ್ಟಿನ ನೇರೆಗೆ, ಚಾಲ್ತಿ ತೆರಿಗೆ ವರ್ಷದಲ್ಲಿ ಅಂದರೆ 1951-52 ನೇ ವರ್ಷದಲ್ಲಿ, ಮೂಲ ವೈವಸಾಯ ವರಮಾನವು 3500 ರೂಪಾಯಿಗಳಿಗೆ ಮಿಂಚಿತ್ತೋ ಅಂಥ ಪ್ರತಿಯೊಬ್ಬ ವೈಯಕ್ತಿಕ ವೇಲೂ ತೆರಿಗೆ ವಿಧಿಸಲಾಗುವುದು. ಸದರಿ ಹಿಂದಿನ ವರ್ಷದಲ್ಲಿ 3500 ರೂಪಾಯಿಗಳಿಗೆ ಮಿಂಚಿದ ಒಟ್ಟು ವೈವಸಾಯ ವರಮಾನವಿರುವ ಪ್ರತಿಯೊಬ್ಬ ವೈಯಕ್ತಿಯೂ ಮಡಿಕೇರಿಯಲ್ಲಿರುವ ಕೊಡಗು ವೈವಸಾಯ ವರಮಾನ ತೆರಿಗೆ ಅಧಿಕಾರಿಗೆ ಈ ಬಗ್ಗೆ ವಿಧಿಸಿರುವ ನಮೂನೆಯಲ್ಲಿ (ಫಾರಂ) ಬರಂಯಿಸಿ ಈ ಬಗ್ಗೆ ವಿಧಿಸಿರುವ ಎಲ್ಲಾ ವಿವರಗಳನ್ನೂ ಕೊಡತಕ್ಕದ್ದು. ಹಿಂದಿನ ವರ್ಷದ ಒಟ್ಟು ವೈವಸಾಯ ವರಮಾನಗಳ ವಿವರಗಳನ್ನೊಳಗೊಂಡ ಒಂದು ದಾಖಲೆ ಪಟ್ಟಿಯನ್ನು ಕೊಡಬೇಕಾಗಿದೆ.

ಪೂರ್ತಿ ದಾಖಲೆ ಪಟ್ಟಿಯನ್ನು ತಯಾರಿಸುವ ವಮಾನೆಗಾಗಿಯೂಗಲಿ ಮತ್ತು ಈ ವಿಚಾರದಲ್ಲಿ ಹೆಚ್ಚಿನ ವಿವರಗಳನ್ನು ತಿಳಿದುಕೊಳ್ಳುವುದಕ್ಕಾಗಲಿ ಮಡಿಕೇರಿಯ ಬಳಿರುವ ಕೊಡಗು ವೈವಸಾಯ ವರಮಾನ ತೆರಿಗೆ ಆಫೀಸರವರಿಗೆ ಅರ್ಜಿ ಬರೆಕೊಳ್ಳಬಹುದು.

ಕೆ. ಪಿ. ಪೊನ್ನಪ್ಪ
ಜೀಪ್ ಕಮಿಷನರವರ ಕಾರ್ಯದರ್ಶಿ.

ಕೊಡಗಿನ ಮತದಾರರಲ್ಲಿ ವಿನಂತಿ.

ಮುಂಬರುವ ಕೇಂದ್ರ ಜನತಾ (ಪಾರ್ಲಿಮೆಂಟ್) ಸಭೆಗೆ ಪ್ರತ್ಯೇಕ ಪಕ್ಷದ ಪರ ನಾನೊಬ್ಬ ಉಮೇದುವಾರನಾಗಿ ನಿಂತಿರುವೆನು. ಕೊಡಗನ್ನು ಪ್ರತ್ಯೇಕವಾಗಿ ಇಟ್ಟುಕೊಂಡು ಈಗ ದೊರೆತಿರುವ-ಜವಾಬ್ದಾರಿ ಸರಕಾರವನ್ನು ಇಲ್ಲಿಯ ಸಮಸ್ತ ಜನರ ಹಿತಕ್ಕಾಗಿ ಜಯಪ್ರದವಾಗಿ ನಡೆಸುವ ಕಂಪೂರ್ಣ ವಿಶ್ವಾಸವಿರುವ ನನಗೆ ಕೊಡಗಿನ ಓಟುದಾರಿಗಳಿಲ್ಲರು ತಮ್ಮ ಅಮೂಲ್ಯವಾದ ಓಟನ್ನು ಕೊಟ್ಟು ಜಯಶೀಲನಾಗಿ ಮಾಡಬೇಕಾಗಿ ವಿನಂತಿ. ಇತ್ತಿ ಚುನಾವಣಾ ನಕ್ಷೆ ತಕಡಿಯೂಗಿದೆ.

ಕೆ. ಟಿ. ಉತ್ತಪ್ಪ.

ಕಂಬನಿ.

ನಮ್ಮ ಕಂಪೆನಿಯಲ್ಲಿ ೧೯ ವರ್ಷಗಳಿಂದ ಲೂಮ್ ಕಂಪೋಸಿಟರಾಗಿ ಕೆಲಸ ಮಾಡುತ್ತಿದ್ದ ಶ್ರೀ. ಕೆ. ಕೆ. ನಾಣಯ್ಯನವರು ತಾ. ೯-೧೨-೫೧ ರಲ್ಲಿ ನಿಧನರಾದರೆಂದು ತಿಳಿದು ವಿಷಾದಿಸುತ್ತೇವೆ. ತೀರಾಯುವಕರೂ, ಒಳ್ಳೇ ಕೆಲಸಗಾರರೂ, ಆಗಿದ್ದ ಇವರು ಇನ್ನೂ ಬದುಕಬೇಕಿತ್ತು. ಕೊಡಗು ಕಂಪೆನಿಯ ಮೂಲಕ ಈ ಪತ್ರಿಕೆಗೆ ಸಲ್ಲಿಸಿದ ಅವರ ಸೇವೆಯು ಸ್ಮರಣೀಯವಾದುದು. ಅವರ ಅಕ್ಕನಿಗೆ ಬೆಂಗಳೂರಿನಲ್ಲಿ ದುಃಖಸಹನಾ ಶಕ್ತಿಯನ್ನೂ ಭಗವಂತನು ಕೊಡಲೆಂದು ಪ್ರಾರ್ಥಿಸುವೆವು.

ವೇ ನೇಜರು,
ಕೊಡಗು ಕಂಪೆನಿ.

JEEP FOR SALE.

In excellent condition recently over-hauled. new parts, newhood with side curtains and new battery, two new and four old tyres. Mileage 20 per gallon. Prize Rs. 5,000/-.

Apply to-

I. C. BOPAIAH.
MANAGER,
Mylemoney Estate,
Joladalu Post,
Chickamagalur.

—೦೦೦—

ಶ್ರೀ ನಿಡ್ಡೆಮಲೆ ಸೋಮಂಣನವರಿಗೆ ಒಂದು ಸವಾಲು

ಮೊನ್ನೆ ಕಾನೂರಿನಲ್ಲಿ ನಡೆದ ವಿಮಾನಗಳಲ್ಲಿ ಶ್ರೀ ಬಿ. ಡಿ. ಗಣಪಯ್ಯನವರು ೧೯೪೮ರಲ್ಲಿ ನೀವು ಬಳಿದ ಸಹಿ ಹಾಕಿದ ಪತ್ರದಿಂದ ಆಧಾರಪೂರ್ವಕವಾಗಿ ಎತ್ತಿ ಓದಿದ ನೀವು ಸಂಯೋಜನಾವಾದಿಯೆಂಬುದನ್ನು ರುಜುಪಡಿಸಿದಾಗ ನೀವು ಅನಪೇಕ್ಷಿಸಿ ೧೯೪೮ರ ಡಿಸೆಂಬರ್ ನಲ್ಲಿ ಮಾತ್ರ ಸಂಯೋಜನಾವಾದಿಯಾಗಿದ್ದೆನೆಂದೂ ಆನಂತರ ಈಗ ಪ್ರತ್ಯೇಕವಾದಿಯಾಗಿರುವೆನೆಂದೂ, ನಾನು ಸುಳ್ಳು ಹೇಳುವನೆಲ್ಲ" ನೇರವಾಗಿ ಸ್ಪಷ್ಟವಾಗಿ ಹೇಳಿದಿರಿ. ಆದರೆ ತಾರೀಖು: ಜ-೧೨-೪೯ರ "ಜನ್ಮಭೂಮಿ" ಪತ್ರಿಕೆಯಲ್ಲಿ "ಕೊಡಗು ನೆಲ ಸರಕಾರವನ್ನು ಸೇರಲು ಇದು ಸಮಯ"ವೆಂದು ನೀವು ಬರೆದ ಲೇಖನವನ್ನು ಮತ್ತೊಮ್ಮೆ ಓದುವಿರಾ? ಅದರಲ್ಲಿ ನೀವು ಬರೆದ ಸಾಲುಗಳಲ್ಲಿ "ನೆಲೂರಿಗೆ ಈಗಲೇ ಸೇರುವದು ಉತ್ತಮವೆಂದು ಪ್ರತ್ಯೇಕವಾಗಿ ಕೇಳು ಬರುವದು. ನೆಲೂರಿನ ರಾಜ್ಯಾಂಗ ರಚನೆ ಇನ್ನೂ ಆಗಿಲ್ಲ. ಈಗಲೇ ಸೇರಿದರೆ ನಾವೂ ಬಿಹಾರಿನ ಆಡಳಿತಕ್ಕೆ ಧಾರಾಳವಾಗಬಹುದಲ್ಲದೆ ನಮ್ಮ ಹಕ್ಕು ಬಾಧ್ಯತೆಗಳನ್ನು ಕಾಯ್ದುಕೊಳ್ಳಲಾಗದು. ಆದ್ದರಿಂದ ಇದೇ ಸಂದರ್ಭ ೧೯೫೨ರ ಚುನಾವಣೆ ಮುಗಿದ ಮೇಲೆ ಪ್ರತ್ಯೇಕವಾದಿಗಳೆಂದು ಪ್ರಚಾರ ಮಾಡಿದ ನಿಮ್ಮ ಸಂಯೋಜನಾವಾದಿಯಾಗಿದ್ದೇನೆಂದೂ ಆನಂತರ ಈಗ ಪ್ರತ್ಯೇಕವಾದಿಯಾಗಿರುವೆನೆಂದೂ, ನಾನು ಸುಳ್ಳು ಹೇಳುವನೆಲ್ಲ" ನೇರವಾಗಿ ಸ್ಪಷ್ಟವಾಗಿ ಹೇಳಿದ ನಿಮ್ಮ ಆತ್ಮ ರಾಜಕೀಯಸ್ಥೈರ್ಯ ಮೆಚ್ಚತಕ್ಕದ್ದೇ? ಗಾಂಧಿಜಿಯವರ ಹೆಸರಿನ್ನೂ ಹೇಳಲು ಯೋಗ್ಯತೆಯೇ? ದಯವಿಟ್ಟು ಉತ್ತರ ಕೊಡಿ.

ಚರಿತಾರ್ಥ.

—೦೦೦—

ಕಾಂಗ್ರೆಸ್ಸಿನವರಿಗೆ ಕೆಲವು ನೇರವಾದ ಪ್ರಶ್ನೆಗಳು

(1) ಕಾಂಗ್ರೆಸಿನ ಹೊಸರಾಜ್ಯ ಚುನಾವಣೆಗೆ ನಿಂತ ನೀವು ಸಂಯೋಜನಾವಾದಿಗಳಲ್ಲವೇ?

(2) ಕೊಡಗು ಪ್ರತ್ಯೇಕ ಪ್ರಾಂತವಾಗಿ ಇರಬೇಕೆಂದು ನೀವು ಹೇಳುವಿರೆ?

(3) ಪೊನ್ನಂಪೇಟೆತಾಲೂಕಿನಲ್ಲಿ ನಿಮ್ಮ ಕೆಲವು ಉಮೇದುವಾರರು ತಾವು ಪ್ರತ್ಯೇಕವಾದಿಗಳೆಂದು ಹೇಳಿದರೆ ಉತ್ತರ ಕೊಡಗಿನಲ್ಲಿ ಕೆಲವರು ಸಂಯೋಜನಾವಾದಿಗಳೆಂದು ಹೇಳುತ್ತಿರುವಿರೇಕೆ?

(4) ಭಾಷಾವಾರು ಪ್ರಾಂತರಚನೆಗೆ ತತ್ವತಃ ಬದ್ಧವಾಗಿರುವ ನೀವು ಈಗ ಪ್ರತ್ಯೇಕವಾದಿಗಳೆಂದರೆ ಅದು ಕೇವಲ ಓಟಿನ ಆಸೆಯಿಂದ ಅಲ್ಲವೇ?

(5) ಅಂದು ಕೊಡಗಿನಲ್ಲಿ ಹಣವಿಲ್ಲವೆಂದೂ ಆತಂಕತೆಗೆ ದಕ್ಷಸಿಬ್ಬಂದಿಯೆಂದೂ ಆ ಕಾರಣ ಕೊಡಗು ಬೇರೆ ಪ್ರಾಂತಕ್ಕೆ ಸೇರಬೇಕೆಂದೂ ವಾದಿಸಿದ ನೀವು ಇಂದು ಕೊಡಗನ್ನು ಪ್ರತ್ಯೇಕವಿಟ್ಟು ಆಡಳಿತ ನಡೆಸಬಹುದೆಂದು ಚುನಾವಣೆಗೆ ನಿಂತಿದ್ದರಿ ಅಂದಿನ ನಿಮ್ಮ ವಾದದ ಆರ್ಥವೇನು? ಅಂದು ಕೊಡಗು ಪ್ರತ್ಯೇಕವಿರಲು ಇಲ್ಲದ ಯೋಗ್ಯತೆಯು ಇಂದು ಕೊಡಗಿನಲ್ಲಿ ಹೇಗೆ ಬಂತು?

(6) ಅಂದು ಕೊಡಗು ತನ್ನ ಕಾಲಲ್ಲಿ ನಿಲ್ಲಲಾರದೆಂದು ವಾದಿಸಿದ ನೀವು ಇಂದು ಕೊಡಗು ಪ್ರತ್ಯೇಕವಿರಬೇಕೆಂದು ಚುನಾವಣೆಗೆ ನಿಂತಿರುವದು ಕೇವಲ ಅಧಿಕಾರದ ಆಸೆಯಿಂದ ಅಲ್ಲವೇ?

(7) ಕಳೆದ ಅನೇಕ ವರ್ಷಗಳಿಂದ ಪ್ರತಿ ಮನೆಯು ಮೂಕಾಗಿ, ಪ್ರತಿ ಚಳವಳದ ಸಾರವಾಗಿದ್ದ ಕೊಡಗಿನ ಭವಿಷ್ಯದ ಪ್ರಶ್ನೆಯು ಇಂದು ದೇಶದ ಮುಂದೆ ಇಲ್ಲವೆಂದು ನೀವು ಹೇಳುತ್ತಿರುವದು ಜನತೆಯು ಓಟು ಬೊಕೆಯಲಾರದೆಂಬ ಹೆದರಿಕೆಯಿಂದಲ್ಲವೇ?

(8) ಕಾಂಗ್ರೆಸಿನ ಪೈಸಿಡೆಂಟರೂ, ಕೊಡಗು ಕಾಂಗ್ರೆಸಿನವರಾದ ನೀವೂ ಇಂದು ಕೊಡಗಿನ ಭವಿಷ್ಯದ ಪ್ರಶ್ನೆ ಇಲ್ಲವೆಂದು ಕಣ್ಣು ಮುಚ್ಚಿಕೊಂಡಾಕ್ಷಣ ದೇಶದಲ್ಲಿ ಆ ಪ್ರಶ್ನೆ ಇಲ್ಲವೆಂದು ನಿಮ್ಮ ಅಭಿಪ್ರಾಯವೇ?

(9) ಭಾಷಾವಾರು ತತ್ವಕ್ಕೆ ಅನ್ವಯವಾಗುವಂತೆ ನೀವು ಆ ತತ್ವವನ್ನು ಕೊಡಗಿನ ಮತದಾರರ ಮುಂದಿಟ್ಟು ಅವರ ಅಭಿಪ್ರಾಯಗಳನ್ನು ವಿವರಿಸಿ ಮತಪಡೆಯಲು ಪ್ರಯತ್ನಿಸುತ್ತಿಲ್ಲವೇಕೆ?

(೧೦) ಕಾಂಗ್ರೆಸಿನಿಂದ ನೀವು ನಿಲ್ಲಿಸಿರುವ ೫೪ ಅಭ್ಯರ್ಥಿ ವಾರರಲ್ಲಿ ಎಷ್ಟು ಜನರು ಮೂಲ ತಾವು ಪ್ರತ್ಯೇಕವಾದಿಗಳೆಂದು ಪ್ರಚಾರ ಮಾಡಿದವರು ಸಂಯೋಜನಾವಾದಿಗಳೆಂಬ ಅರ್ಥವಾಗಿ ವುದಿಲ್ಲವೆ?

(೧೧) ದೇಶದ ಉದ್ದಗಲಕ್ಕೂ ಕೊಡಗನ್ನು ಪ್ರತ್ಯೇಕವಿಟ್ಟುಕೊಳ್ಳಲು ಪಡೆಸಿದ ವಿಚಿತ್ರಗಳು, ಪೂಜೆಗಳಲ್ಲೂ, ಹೆಬ್ಬಿಗೆ ಕಳುಹಿಸಿದ ಕಂತಿ ವಾರ್ತೆಗಳಲ್ಲೂ ಇಂದು ಕಾಂಗ್ರೆಸ್ಸಿಗರೆನ್ನಿಸಿ ನೀವು ಯಾರು ಭಾಗವಹಿಸಿದ್ದೀರಿ? ಕೊಡಗು ಪ್ರತ್ಯೇಕವಿರಬೇಕೆಂದು ಎಲ್ಲಿ ವಿಚಿತ್ರಂಗು ಮಾಡಿದ್ದೀರಿ?

(೧೨) ೧೯೫೦ ನೇ ನವಂಬರಿನಲ್ಲಿ ಕೊಡಗು ಮೈಸೂರಿಗೆ ಸೇರಿ ಹೋಯಿತೆಂದು ಅಪಪ್ರಚಾರವಾದಾಗ ಬೀ ಕಾರ್ಯ ನಡೆಸಿದವರು ನಿಮ್ಮ ಗುಂಟಿನಲ್ಲಿ ಇಂದು ಇಲ್ಲವೇ?

(೧೩) ನೀವೇ ನೇರವಾಗಿ ಅಲ್ಲದಿದ್ದರೂ ನಿಮ್ಮ ಉಮೇದುವಾರರಿಗೆ ಸೋಲು ನಿಶ್ಚಯವೆಂದು ಕಂಡು ಬಂದ ಕ್ಷೇತ್ರಗಳಲ್ಲಿ ಮೂರನೇ ಪಕ್ಷದವರನ್ನು ಹಿಂತೆಗೆಸಲು ದುಡ್ಡಿನ ಆಶೆಯನ್ನು ತೋರಿಸಿ ಜಯಶೀಲರಾಗಿ ಕುವಿರೆಂದು ಹಬ್ಬಿರುವ ವರ್ತಮಾನ ನಿಜವೇ?

(೧೪) ಕಾಂಗ್ರೆಸ್ಸಿಗರಾಗಿ ಬಡಮತದಾರರಿಗೆ ರಾಜಕೀಯ ಜಾಗೃತಿಯನ್ನೂ, ಅತನ ಹಕ್ಕು ಬಾಧ್ಯತೆಗಳನ್ನೂ ತಿಳಿಸಿ ಹೇಳಲು ನೀವು ಮಾಡಿದ ವಿಧಾಯಕವಾದ ಪ್ರಚಾರವೇನು?

(೧೫) ಕಾಂಗ್ರೆಸು ನಿಜವಾಗಿಯೂ ಜನ ಸೇವೆ ಮಾಡುವ ಸಂಸ್ಥೆಯಾಗಿದ್ದರೆ ರಾತ್ರಾರಾತ್ರಿ ಕಾರು ಜೀಪುಗಳಲ್ಲಿ ಗ್ರಾಮದ ಮುಖ್ಯಸ್ಥರ ಮನೆ ಮನೆ ತಿರುಗಿ ಕಾಡಿ, ಬೇಡಿ, ಒತ್ತಾಯಪಡಿಸುವ ಅವಶ್ಯಕತೆ ಏನು?

(೧೬) ಮತದಾರರು ಯಾರೇ ಒಬ್ಬರು ಮಾಡಿದ ಸೇವೆ, ತ್ಯಾಗಗಳನ್ನು ಮರೆಯುವ ಕೃತಘ್ನರೆಂದು ನಿಮ್ಮ ಅಭಿಪ್ರಾಯವೇ?

(೧೭) ಶ್ರೀಗಳಾದ ಬಿದ್ದಂಡ ಕಾಲಪ್ಪ, ಕ ಹಮಮಂರಾಜಯ್ಯ, ಚಿಕ್ಕೇರ ಮೂಚಯ್ಯ, ಜಿ. ಎಂ. ಲಿಂಗರಾಜಯ್ಯ, ಮಲಕಾಜೆರ ಕಟ್ಟುಂಬಯ್ಯ, ಮಲ ಕಾಂಡ ನೂಚಯ್ಯ, ಜಿ. ಎಂ. ಮಂಜುನಾಥಯ್ಯ ಮೂಡಿಮನೆಯ ನಂಜುಂಡ, ಜೊಡ್ಡ ಕಾಳಪ್ಪ ಮೊದಲಾದವರನ್ನು ಕಾಂಗ್ರೆಸಿನ ಉಮೇದುವಾರರಾಗಿ ಆರಿಸಲು ನೀವು ಇಟ್ಟುಕೊಂಡ ಆಳತೆಗೋಲೇನು? ನೆಹರೂರವರ ಆಕಯಿಷೆ ಇವರು ಉಮೇದುವಾರರಾಗಲು ಅರ್ಹರೆಂದು ನೀವು ನಂಬಿರುವಿರಾ?

ಈ ಪ್ರಶ್ನೆಗಳಿಗೆ ದಯವಿಟ್ಟು ಈ ಪತ್ರಿಕೆಯ ಮೂಲಕವೇ ಉತ್ತರ ಕೊಡಿ.

"ಮತದಾತ"

ಅವನೀಂದ್ರನಾಥ ಟಾಗೋರರ ನಿಧನ

ಭಾರತೀಯ ಕಲೆಯನ್ನು ಪುನರುಜ್ಜೀವನಗೊಳಿಸಿದ್ದ ಡಾ. ಅವನೀಂದ್ರನಾಥ ಟಾಗೋರರು ಇತ್ತೀಚೆಗೆ ಕಲ್ಕತ್ತದಿಂದ ೬ ಮೈಲು ದೂರದಲ್ಲಿರುವ ಬೆರಿಕ್‌ಪುರ ಟ್ರೇಕ್ ರಸ್ತೆಯಲ್ಲಿರುವ ತಮ್ಮ ಸ್ವಗೃಹದಲ್ಲಿ ತಮ್ಮ ಅಗಣಿತ ಹಿರೀ ವಜಸ್ಸಿನಲ್ಲಿ ದಿವಂಗತರಾದರು. ಭಾರತೀಯ ಕಲೆಯು ಅಧಿಕೃದ್ಧಿಗೆ ತಂದಿಟ್ಟ ಜೊಡಾಸಾಂಕೊ ಬಂಗಾಲಿ ಕಲಾಗಾರರಲ್ಲಿ ಇವರು ಹಿರಿಯ ಸ್ಥಾನ ಗಳಿಸಿದ್ದರು. ವಿಶ್ವಕವಿ ರವೀಂದ್ರನಾಥ ಟಾಗೋರರ ಸೋದರಳಿಯರಿವರು. ವಿಶ್ವ ಭಾರತಿಯ ಸ್ಥಾಪನೆಗಾಗಿ ವಿಶ್ವಕವಿಯವರೊಡನೆ ಜತೆಗೂಡಿ ಸೇವೆ ಸಲ್ಲಿಸಿದ ನಿಷ್ಕಾವಂತ ಸಹಪಾಠಿಯರು.

ಲಿಯೊಮಿತರ ಕೊಲೆಯ ಕುರಿತು.

ಕಳೆದ ಆಕ್ಟೋಬರ್ ತಾ. ೧೬ ರಂದು ರಾವಲ್ಪಿಂಡಿಯಲ್ಲಿ ಭಾಷಣ ಮಾಡಿಕೆಯ ಮೇಲೆ ಪಾಕಿಸ್ತಾನದ ಪ್ರಧಾನ ಮಂತ್ರಿ ಮಿ. ಲಿಯೊಮಿತ್ ಅಲಿಖಾನರ ಕೊಲೆ ನಡೆದ ದಿನ, ಆ ಸಭೆಗೆ ಭದ್ರತಾ ವ್ಯವಸ್ಥೆಗಾಗಿ ೬೯೨ ಮಂದಿ ಪೋಲೀಸ್ ಅಧಿಕಾರಿಗಳನ್ನು ಕಳಿಸಿಕೊಡಲಾಗಿತ್ತೆಂದು ಪೆರಿಗ್ರಿನಸ್‌ರವರು 'ಹಿಂದುಸ್ಥಾನ ಟೈಮ್ಸ್' ಪತ್ರಿಕೆಗೆ ಬರೆದ ಒಂದು ವರದಿಯಲ್ಲಿ ಮೇಲಿಂದ ತಿಳಿದುಬರುತ್ತದೆ. ಆ ಸಭೆಗೆ ಹಾಜರಾದ್ದ ಪೋಲಿಸ್ ಸಿಬ್ಬಂದಿಯು ಇವಕ್ಕೆ ಗಳನ್ನು 'ಪೆರಿಗ್ರಿನಸ್' ಈ ರೀತಿಯಾಗಿ ಕೊಟ್ಟಿರುತ್ತಾರೆ. ಸಾಲ್ಕ ಮಂದಿ ಗಜೆಟೆಡ್ ಅಧಿಕಾರಿಗಳು, ೯ ಮಂದಿ ಸಬ್ ಇನ್ಸ್‌ಪೆಕ್ಟರರು, ೧೧ ಮಂದಿ ಅಸಿಸ್ಟಂಟ್ ಸಬ್ ಇನ್ಸ್‌ಪೆಕ್ಟರರು, ೩೦ ಮಂದಿ ಹೆಡ್ ಕಾನ್ಸ್‌ಟೇಬಲರು, ೨೪೦ ಮಂದಿ ಪೋಲಿಸ್ ಕಾನ್ಸ್‌ಟೇಬಲರು ಇವರೆಲ್ಲದೆ ಸಿ. ಐ. ಡಿ. ಖಾತೆಯ ಒಬ್ಬ ಸೂಪರಿಂಟೆಂಡೆಂಟರು, ಇಬ್ಬರು ಇನ್ಸ್‌ಪೆಕ್ಟರರು, ೯ ಮಂದಿ ಸಬ್‌ಇನ್ಸ್‌ಪೆಕ್ಟರ್ಸ್, ೨೧ ಹೆಡ್‌ಕಾನ್ಸ್‌ಟೇಬಲರು ಮತ್ತು ೬೫ ಮಂದಿ ಕಾನ್ಸ್‌ಟೇಬಲರು ಅಲ್ಲಿ ಭದ್ರತಾ ವ್ಯವಸ್ಥೆಗಾಗಿ ಕಳಿಸಲ್ಪಟ್ಟಿದ್ದರು. ಓರ್ವ ವ್ಯಕ್ತಿಯ ರಕ್ಷಣೆಗಾಗಿ ಅಷ್ಟು ಅಧಿಕ ಸಂಖ್ಯೆಯ ರಕ್ಷಣಾ ಸಿಬ್ಬಂದಿ ಕಳಿಸುವುದೆಂದರೆ ಆಶ್ಚರ್ಯವೇ; ಆ ಅಷ್ಟೂ ಮಂದಿಯಿಂದಲೂ ಪ್ರಧಾನರ ಪ್ರಾಣ ರಕ್ಷಿಸಲಾಗಿಲ್ಲವೆಂಬುದು ಇನ್ನಷ್ಟು ಆಶ್ಚರ್ಯಕರ ಹಾಗೂ ಶೋಚನೀಯ.

ಆಂಧ್ರ ಪ್ರಾಂತ ಈಗಿಲ್ಲ.

ಆಂಧ್ರ ಪ್ರಾಂತ ರಚನೆಗಾಗಿ ಮಹಾ ಚುನಾವಣೆಗಳು ಮುಗಿಯುವ ವರೆಗೂ ಆಂಧ್ರರು ಕಾಳ್ಕೆ ವಹಿಸುವುದು ಅಗತ್ಯವೆಂದೂ ಆಚಾರ್ಯ ವಿನೋಬಾ ಭಾವೆಯವರು ಹಿತವನ್ನುಡಿಯಿತ್ತಿರುವರೆ.

ಮದ್ರಾಸ್ ನಗರದ ಬಗ್ಗೆ ಆಂಧ್ರ ನಾಯಕರಲ್ಲೇ ಒಮ್ಮತವಿಲ್ಲದ್ದರಿಂದ ಸದ್ಯಕ್ಕೆ ಕಾವೇರಾಂ ಮಾಡಲು ಸಾಧ್ಯವಿಲ್ಲವೆಂದು ಪಂಡಿತ ನೆಹರೂ ತಿಳಿಸಿರುವುದಾಗಿಯೂ ಹೀಗಿರಬೇಕಾಗಿ ಆಂಧ್ರರು ಒಮ್ಮತಕ್ಕೆ ಬರುವ ವರೆಗೂ ಕಾಯಬೇಕೆಂದೂ ಆಚಾರ್ಯ ವಿನೋಬಾಭಾವೆಯವರು ಸ್ವತಃ ಸೀತಾರಾಮಯ್ಯಗಾರಿಗೆ ತಿಳಿಸಿದ್ದಾರೆ.

ಪ್ರತ್ಯೇಕ ಪಕ್ಷದ ಬೆಂಬಲಕ್ಕಾಗಿ ಕಾಂಗ್ರೆಸ್ಸಿಗೆ ರಾಜೀನಾಮೆ.

ತಾಲೂಕು ಬೋರ್ಡಲ್ಲಿ ಅನ್ಯತ್ರ ನಾಡಿನವರ ಸಾರ್ವಜನಿಕ ಸಭೆಯೊಂದು ಕಳ್ಳರ ಬಾಣೆಯಲ್ಲಿ ಜರಾದು ತಕ್ಕಂತೆ ಶ್ರೀ ಕೊಟ್ಟಿರ ಮಂತ್ಯಣ್ಣನವರ ಅಧ್ಯಕ್ಷತೆಯಲ್ಲಿ ನಡೆದು ಶ್ರೀ ಪಿ. ಎ ಬೆಳ್ಯಪ್ಪನವರನ್ನು ಕಮ್ಮ ತಾಡಿನ ಪರವಾಗಿ ಸ್ಪರ್ಧೆಯ. ತಾಸನ ಸಭೆಗೆ ಉಪೆ ೧೮೦ ಮತದಾರರಾಗಿ ಏಳಲಿಲ್ಲ ಕೇಳಿಕೊಂಡದ್ದಲ್ಲದೆ ಶ್ರೀ ವಂಜಿಮಂಡ ನಂಜುಂಡನವರು ತಮ್ಮ ಉಮೇದುವಾರಿಕೆಯನ್ನು ವಾಪಾಸು ತೆಗೆದುಕೊಳ್ಳಬೇಕೆಂದೂ ಕೇಳಿಕೊಳ್ಳಲಾಯಿತು. ಶ್ರೀ ಮೂಡಿಮಂತ ನಾಣಯ್ಯನವರಿಂದ ಸಭೆ ಸಲ್ಲಬ್ಬಿ ಶ್ರೀಪೆದ್ದಂತ ಅಪ್ಪಚ್ಚನವರಿಂದ ಅನುಮೋದನೆಲ್ಪಟ್ಟ ನಂತರ ಕೊಡಗನ್ನು ಪ್ರತ್ಯೇಕವಿಟ್ಟುಕೊಳ್ಳುವ ಉದ್ದೇಶ ಪ್ರತ್ಯೇಕ ಪಕ್ಷವು ಉಮೇದುವಾರರಿಗೆ ಕೆಲಸ ಮಾಡುವಿಕ್ಕಾಗಿ ಅವ್ಯಕ್ತ ನಾಡಿನ ಕಾಂಗ್ರೆಸಿಗರೆಲ್ಲರೂ ಕಾಂಗ್ರೆಸಿಗೆ ರಾಜೀನಾಮೆ ಕೊಡಬೇಕೆಂಬ ಪ್ರಸ್ತಾವನೆಯು ಅಮೋಘವಾಗಿ ಅಂಗೀಕೃತವಾಯಿತು.

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಸೂಚನೆಯಿಲ್ಲದೆ ಹೊಸ್ತಿಲಿಂದ ಸಾಲ ಕೊಡಲಾಗುವದಿಲ್ಲ. (1931ನೇ ಸಾಲಿನಲ್ಲಿ ಸ್ಥಾಪಿತವಾಗಿದೆ.)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ.	2,65,500
ಕ್ಷೇಮನಿಧಿ	ರೂ.	59,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಪ್ರಾಂತೀಯ ಹೊಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುತ್ತಿರುವುದಲ್ಲದೆ ಜನ್ಮ ಮತ್ತು ಜನ್ಮದ ನಗದಗಳ ಆಡಿನ ಮೇಲೆ ಸಹ ಸಾಲ ಕೊಡಲಾಗುವುದು. ಹೆಚ್ಚಿನ ಮಾಹಿತಿಗಳ ಬಿನ್ನೊಂಟು ಮಾಡಲ್ಪಡುವುದು. ಟ್ರಸ್ಟಿಗಳು, ವಾರ್ಡರ್ ಮತ್ತು ವಿಶ್ವಭಾರತಿ ಇನ್ಸೂರೆನ್ಸ್ ಕಂಪೆನಿಗಳ ಸ್ಟ್ರೀಮಿಯಂ ಹಣವನ್ನು ಜಮಾಂದಿ ಕೊಳ್ಳಲಾಗುವುದು. ಬ್ಯಾಂಕಿನ ದೀರ್ಘ ಕಾಲೀನ ಸಾಲದ ಕಾಪಿಯು ಮೂಲಕ ದೀರ್ಘ ಕಾಲೀನ ಸಾಲ ಕೊಡುವ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಗಳನ್ನು ಅಳಿಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಸೆಕ್ರೆಟರಿ.

ಕೆ. ಪಿ. ಅಪ್ಪಯ್ಯ, ಬಿ. ಎ. ಬಿ. ಎಲ್. ಪ್ರೆಸಿಡೆಂಟ್ ಮತ್ತು ಮೆನೇಜರ್.

ಇದಾವ ಗೂಂಡಾಗಿರಿ ?

ಲೇ:-ಶ್ರೀ ಎ. ಉತ್ತಯ್ಯ.

ಕೊಡಗಿನಲ್ಲಿ ನಾಡಿನ ಅಂದಕೆ ಮತ್ತೂರು, ಕಿರುಗೂರು, ಕೋಟೂರು, ದೊಡ್ಡಗೂರು, ನಲ್ಲೂರು ಮತ್ತು ಮುಂಗುಟಗೇರಿ ಗ್ರಾಮದ ಕೆಲವು ಜನರು ಸೇರಿ ನಾಡಿನ ಸಾರ್ವಜನಿಕ ಸಭೆಯನ್ನು ತಾ. ೧೫ ರಲ್ಲಿ ಮಕ್ಕೂರು-ದೇವಸ್ಥಾನದ ಬಳಿ ಸೇರಿಸಿದ್ದರು. ವಿಷಯಕ್ಕೆ ಸೇರಲು ಕೊಟ್ಟ ನೋಟೀಸಿನಲ್ಲಿ ಈ ರೀತಿ ಬರೆಯಲಾಗಿತ್ತು. ಮುಂಜರುವ ಚುನಾವಣೆಯ ವಿಚಾರದಲ್ಲಿ ಪ್ರತ್ಯೇಕವಾದಿ ಪಕ್ಷದವರ ತತ್ವನಿಲುಮೆಗಳನ್ನು ಅರಿಯಲು ನಾಡಿನವರ ಸಭೆಯೆಂದೂ,ಮಧ್ಯಾಹ್ನದ ಊಟಕ್ಕಾಗಿ ನಾಡಿನವರು 'ಧಾರೆ' ತರಬೇಕೆಂದೂ ಸೂಚಿಸಲಾಗಿತ್ತು. ಈ ವಿಷಯಂಗಿಗೆ ಸಂಯೋಜನಾ ಪಕ್ಷದವರನ್ನಾಗಲೀ, ಕಮ್ಯೂನಿಸ್ಟರನ್ನಾಗಲೀ ಕಾಂಗ್ರೆಸಿಗರನ್ನಾಗಲೀ ಆಹ್ವಾನಿಸಿರಲಿಲ್ಲ. ಆದರೆ ಪ್ರತ್ಯೇಕವಾದಿಗಳ ಅಭಿಮತವನ್ನು ಅರಿಯಲು ಸೇರಿಸಿದ ಈ ವಿಷಯಂಗಿನಲ್ಲಿ ಶ್ರೀಗಳಾದ ನಿಡ್ಡೆವಂಲೆ ಸೋಮಣ್ಣ, ಸಿ. ಎಂ. ಪೂಣಚ್ಚ, ಮತ್ತಿತರ ಹಲವು ಸಂಯೋಜನಾವಾದಿಗಳು ಹಾಜರಿದ್ದರು. ನ್ಯಾಯಸಮರ್ಪಕವಾಗಿ ವಿಷಯಂಗನ್ನು ಕರೆಸಿದವರಿಗೇ ಆ ದಿನದ ಸಭೆಗೆ ಅಧ್ಯಕ್ಷರನ್ನು ಆರಿಸುವ ಹಕ್ಕಿಲ್ಲದೆ ಬೇರೆಯವರಿಗಿರಲಿಲ್ಲ. ಆದರೆ ಈ ವಿಷಯಂಗಿಗೆ ತೊಂದರೆ ಮಾಡಬೇಕೆಂಬ ದುರುದ್ದೇಶದಿಂದಲೇ ಬಂದಿದ್ದ ಕೆಲವರು ದೇವಸ್ಥಾನದ ಪಶ್ಚಿಮದೆಂಟರಾದ ಶ್ರೀ. ಸಿ. ಕೆ. ಮಾದಯ್ಯನವರು ವಿಷಯಂಗಿನ ಅಧ್ಯಕ್ಷರಾಗಬೇಕೆಂದು ಸೂಚಿಸಿದರು. ವಿಷಯಂಗನ್ನು ಕರೆಸಿದವರು ಹಾಗೂ ಪ್ರತ್ಯೇಕವಾದಿ ಪಕ್ಷದವರು ಮತ್ತಿತರರು ತಾವು ವಿಷಯಂಗನ್ನು ಕರೆಸಿದವರೆಂದೂ, ಬೇರೆ ಅಧ್ಯಕ್ಷರನ್ನು ಗೊತ್ತು ಮಾಡಿಕೊಂಡಿರುವೆವೆಂದೂ, ಇದು ಕೇವಲ ಪ್ರತ್ಯೇಕವಾದಿಗಳ ಅಭಿಪ್ರಾಯವನ್ನು ಅರಿಯುವ ವಿಷಯಂಗೆಂದೂ ಒಂದು ದೇವಸ್ಥಾನದ ಪ್ರೆಸಿಡೆಂಟರನ್ನು ರಾಜಕೀಯ ವಿಷಯಂಗಿನ ಅಧ್ಯಕ್ಷರಾಗಿ ಮಾಡುವದು ನಿಯಮಬಾಹ್ಯ ವಿರುದ್ಧವೆಂದೂ ಸೂಚಿಸಿದರು. ಕೇವಲ ತಂಟೆ ಮಾಡಲು ಬಂದಿದ್ದ ಕೆಲವರು ಇಲ್ಲದ ತಕರಾರನ್ನು ಮುಂದೆ ತಂದು ಬೆಳಿಗ್ಗೆ ೧೦ ಗಂಟೆಗೆಂದು ನಿಶ್ಚಯಿಸಿದ್ದ ವಿಷಯಂಗು ಮಧ್ಯಾಹ್ನ ೨-೩೦ರ ವರೆಗೂ ನಡೆಯದಂತೆ ಅತಂಕಪಡಿಸಿದರು. ಸಭೆಯಲ್ಲಿ ಹಾಜರಿದ್ದ ಉಮೇದುವಾರರೊಬ್ಬರಾದ ಶ್ರೀ. ನಾಣಯ್ಯನವರು ವಿಷಯಂಗಿಗೆ ವಿರೋಧವೂಡುವವರ ಪಕ್ಷವಹಿಸಿ ವಾದಿಸಿ ಗಲಭೆಗೆ ಕಳಿಕೊಡುತ್ತಿದ್ದರು. ಇವರ ಈ ಗಲಾಟೆಗೆ ಬೆಂಬಲವೀಯುತ್ತಾ ಶ್ರೀ. ಸಿ. ಎಂ. ಪೂಣಚ್ಚ, ಎಸ್. ಸೋಮಣ್ಣ, ಶ್ರೀ. ಕೆ. ಸಿ ಕರುಂಬಯ್ಯ ಮೊದಲಾದವರು ತಲೆಹೊಗುತ್ತಿದ್ದರು. ಇವರ ಈ ಮೌನವೆಂಬಲದ ಕಾರಣವೇ ಗಲಭೆ ನಿಲ್ಲದೆ ೨-೩೦ ಗಂಟೆಯವರೆಗೆ ಸಾಗಿತು.

ವಿಷಯಂಗೆ ನಾಡಿನವರು ಅನೇಕರು ತಮ್ಮ ಕಾರ್ಯಗಳು ಕೆಲಸವನ್ನು ಬಿಟ್ಟು ಬಂದಿದ್ದರು. ಈ ಗಲಾಟೆಯಿಂದಾಗಿ ವಿಷಯಂಗು ನಡೆಯುವ ಸಂದರ್ಭ ತಾಣದಂತಿತ್ತು. ಕಡೆಗೆ ವಿಷಯಂಗನ್ನು ಕರೆಸಿದವರು ತಾವು ವಿಷಯಂಗನ್ನು ನಡೆಸುವ ನಿರ್ಧಾರ ಮಾಡಿ ಶ್ರೀ ಸಿ. ಕೆ. ಸುಬ್ಬಯ್ಯನವರನ್ನು ಅಧ್ಯಕ್ಷಸ್ಥಾನಕ್ಕೆ ಸೂಚಿಸುತ್ತಾ ಇದು ಪ್ರತ್ಯೇಕವಾದಿ ಪಕ್ಷದವರ ಅಭಿಮತ ತಿಳಿಯಲು ನಾಡಿನವರ ವಿಷಯಂಗೆಂದೂ, ಅಹ್ವಾನವಿಲ್ಲದೆ ವಿಷಯಂಗಿಗೆ ಬಂದವರು ಗಲಾಟೆ ಮಾಡದೆ ಶಾಂತರೀತಿಯಿಂದ ಇರಬೇಕೆಂದೂ ಇಲ್ಲದಿದ್ದರೆ ಹಿಂತಿರುಗಿ ಬಹುದೆಂದೂ ಹೇಳಿದರು. ಅಧ್ಯಕ್ಷರು ಅಧ್ಯಕ್ಷತೆಯನ್ನು ವಹಿಸಿ ಪ್ರತ್ಯೇಕವಾದಿ ಪಕ್ಷದಧ್ಯೇಯವನ್ನು ವಿವರಿಸಲು ಶ್ರೀ ದಳಂಗಂಡ ನಂಜಪ್ಪನವರು ಮಾತಾಡುವಂತೆ ಕೇಳಿಕೊಂಡರು. ಶ್ರೀ ನಂಜಪ್ಪನವರು ಮಾತಾಡಲು ಪ್ರಾರಂಭಿಸಿದಾಗ ಗಲಭೆ ನಡೆಸಲು ಟೊಂಕ ಕಟ್ಟಿ ಬಂದವರು ಅದೇ ಸಭೆಯಲ್ಲಿ ಶ್ರೀ ಮೂದಯ್ಯನವರನ್ನು ಅಧ್ಯಕ್ಷರಾಗಿ ಆರಿಸಿ ಶ್ರೀ. ಪಿ. ಎ. ನಂಜುಮಯ್ಯನವರೂ ಭಾಷಣ ಮಾಡತೊಡಗಿದರು. ಈ ರೀತಿ ನ್ಯಾಯಬದ್ಧವಾಗಿ ಕರೆಸಿದ ವಿಷಯಂಗಿಗೆ ಸಂಯೋಜನಾ ಪಕ್ಷದಲ್ಲಿ ಕೆಲಸ ಮಾಡುತ್ತಿರುವ ಕೆಲವು ಗೂಂಡಾಗಳು ಅತಂಕ ತಂದು ವಿಷಯಂಗು ಶಾಂತರೀತಿಯಲ್ಲಿ ನಡೆಯದಂತೆ ತೊಂದರೆ ಪಡಿಸಿದ ಕಾರಣ ಅಧ್ಯಕ್ಷರಾದ ಶ್ರೀ. ಸಿ. ಕೆ ಸುಬ್ಬಯ್ಯನವರು ಪೋಲೀಸರನ್ನು ಆಹ್ವಾನಿಸಿ ಚುನಾವಣಾ ನಿಯಮದ ಸೆಕ್ಷನ್ ೧೭೩ ರಂತೆ ಗಲಾಟೆ ನಡೆಸುವವರ ಪತ್ತೆ ಬರಕೊಂಡು ಕ್ರಮ ಜರಗಿಸಬೇಕೆಂದು ಸೂಚಿಸಿ ನಾಡಿನವರ ವಿಷಯಂಗು ಸೇರಿ ಹೊಡೆದಾಟಕ್ಕೆ ಅವಕಾಶವಾಗಬಾರದೆಂದು ವಿಷಯಂಗನ್ನು ಬರಕಾಸ್ತು ಮಾಡಿದರು. ಈ ರೀತಿಯಲ್ಲಿ ನ್ಯಾಯಬದ್ಧ ನೋಟೀಸು ಕೊಟ್ಟು ಕರೆಸಿದ ಒಂದು ವಿಷಯಂಗನ್ನು ಗಲಾಟೆ ಎಬ್ಬಿಸಿ ನಡೆಯದಂತೆ ಮಾಡಿ ಅಧ್ಯಕ್ಷರು ವಿಷಯಂಗು ಬರಕಾಸ್ತು ಮಾಡಿದ ನಂತರ ಬೇರೆಡೆ ಶ್ರೀಗಳಾದ ಕೆ. ಸಿ. ಕರುಂಬಯ್ಯ, ಎಸ್. ಸೋಮಣ್ಣ,ಸಿ. ಎಂ. ಪೂಣಚ್ಚ, ನಾಣಯ್ಯ ಮೊದಲಾದವರು ಸೇರಿ ವಿಷಯಂಗು ನಡೆಸಿದರಂತೆ!

ಕೊಡಗಿನ ಕಾಂಗ್ರೆಸ್ಸಿನ ಮಂಚಿಂತರು ಯಾವ ತೆಳರಗತಿಗಳಿದಿರುವರೆಬುದಕ್ಕೆ ಇದೊಂದು ನಿದರ್ಶನ. ಕಮ್ಯೂನಿಸ್ಟರು ಹೇಳುವಂತೆ 'ಕಾಂಗ್ರೆಸ್ಸು ಗೂಂಡಾಗಳ ಸಂಸ್ಥೆ' ಎಂಬ ಮಾತಿಗೆ ಇವರ ಕೃತಿಯೇ ಬಲ ಕೊಡುತ್ತಿದೆ! ನಾಡಿನವರಲ್ಲಿ ಪರಸ್ಪರ ಭಿನ್ನಾಭಿಪ್ರಾಯ ಬಂದು ವಿಷಯಂಗು ಆಗದ ಸಂದರ್ಭವಿರುವಾಗ ಬುದ್ಧಿವಂತರೂ, ಮುಂದಿನ ದೇಶದ ಜವಾಬ್ದಾರಿಯನ್ನು ಹೊರಲು ಮುಂದೆ ಬಂದಿರುವವರೂ ಎನ್ನುವ ಶ್ರೀ. ಸೋಮಣ್ಣ, ಪೂಣಚ್ಚ, ಕರುಂಬಯ್ಯ ಮೊದಲಾದವರು ಜನರು ಗಲಾಟೆ ಮಾಡಬಾರದೆಂದೂ, ತಾವು ಈ ಗಲಭೆಗೆ ಕಾರಣರಾಗಿದೆವೆಂದೂ, ಅದ್ದರಿಂದ ತಾವು ಆ ವಿಷಯಂಗಿನಲ್ಲಿ ಭಾಗವಹಿಸೆವೆಂದೂ ಹೇಳಬೇಕಿರಲಿಲ್ಲವೇ? ಜನರು ನ್ಯಾಯಬದ್ಧವಾಗಿ ಕರೆಸಿದ ವಿಷಯಂಗನ್ನು ಗೂಂಡಾಗಿರಿಯಿಂದ ನಿಲ್ಲಿಸಿದ ಮೇಲೆ ಮೌನವ್ರೋತ್ಸಾಹವಿತ್ತು ಪ್ರತ್ಯೇಕವಾದಿ ಪಕ್ಷದವರು ಹೊರಟು ಹೋದ ನಂತರ ಪುನಹ ಇವರು ವಿಷಯಂಗು ನಡೆಸಿರುವರಂತೆ! ಇದು ಕಾಂಗ್ರೆಸಿನ ನೀತಿಯೇ?

ಕೊಡಗಿನ ರಾಜಕೀಯದಲ್ಲಿ ಇಂಥಾ ಗೂಂಡಾಗಿರಿಗೆ ಎಡೆಕೊಟ್ಟರೆ ಮುಂದೆ ಅನಾಹುತವಾದೀತು. ಅದ್ದರಿಂದ ಅಧಿಕಾರಿಗಳು ಚುನಾವಣಾ ಕಾನೂನಿನಂತೆ ಈ ರಾಜಕೀಯ ಗೂಂಡಾಗಳಿಗೆ ತಕ್ಕ ಶಿಕ್ಷೆ ವಿಧಿಸುವದು ಕರ್ತವ್ಯವಾಗಿರುವದಲ್ಲದೆ, ಮುಂದಿನ ಪ್ರಚಾರಕಾರ್ಯಕ್ಕೂ ಯೋಗ್ಯ ಅವಕಾಶ ಕಲ್ಪಿಸಿಕೊಟ್ಟಂತಾಗುವದು.

ನೋಟೀಸ್

ಪೊನ್ನಂಪೇಟೆತಾಲ್ಲೂಕು ಕೊಟ್ಟಗೇರಿ ಗ್ರಾಮದ ಹುಟಲಾನ್ನರ ಅವಿರೋ ಸಾಬುಯು ಸರ್ವರಿಗೂ ತಿಳಿಸುವುದೇನೆಂದರೆ-

ಬಿಳೂರು ಗ್ರಾಮದ ಒಬ್ಬ ಇಬ್ರಾಹಿಂ ಸಾಬಿಯು, ನಾವು ಇನ್ನೂ ಜವಾಬುದಿ ಅನುಭೋಗದ ಭೂವಿ ಮಾಡಿಟವೂಡಲು ಕೃಯತ್ಕಿ ಪಡೆಯುವವರಿಗೆ ಅಟಂಕ ಪಡಿಸಿ ತಾರೀಕು ೩೦-೧೧-೫೧ರ "ಕೊಡಗು" ಪತ್ರಿಕೆಯಲ್ಲಿ ಪ್ರಕಟಿಸಿ ಮಾಡಿರುತ್ತಾರೆ ಈ ಪ್ರಕಟನೆ ಮಾಡಿದ ಇಬ್ರಾಹಿಂ ಸಾಬಿ ಯಾನೆ ಬಾಷಾ ಸಾಬಿಯು ಈಗ್ಗೆ ೧೫ ವರ್ಷಕ್ಕೆ ಹಿಂದೆ ಅವನ ಹಿಸೆ ಆಸ್ತಿಯನ್ನು ಶುದ್ಧ ಕ್ರಯಕ್ಕೆ ವಿಕ್ರಯಿಸಿ ಸರ್ವ ಹಕ್ಕನ್ನು ಕಳಕೊಂಡ ವ್ಯಕ್ತಿ ಆಗಿರುತ್ತಾನೆ. ಈ ನನ್ನ ಆಸ್ತಿ ವಾರಾಟಕ್ಕೆ ತಡೆಮಾಡಲು ಮೇಲ್ಕಂಡ ಇಬ್ರಾಹಿಂ ಯಾನೆ ಬಾಷಾ ಸಾಬಿಗೆ ಯಾವ ಹಕ್ಕೂ ಇಲ್ಲದ ಕಾರಣ ಇವನ ತಾ. ೩೦-೧೧-೫೧ ರ ಪ್ರಕಟನೆ ರದ್ದು ಆಗಿರತಕ್ಕದ್ದು.

M A AMEER SAHEB.
Kottageri Village.

5 ನೆಯ ನಮೂನೆ.

[10 (3) ಮತ್ತು 11ನೆಯ ನಿಬಂಧನೆಗಳು]

ಕೊಡಗು ಚುನಾವಣೆ ಸ್ಥಾನದಿಂದ **ಲೋಕ ಸಭೆಗೆ** (House of the People) ಚುನಾವಣೆ

ಸಿಂಧುವಾಗಿರತಕ್ಕ ನಾಮನಿರ್ದೇಶಕಗಳ (Valid Nominations) ಪಟ್ಟಿ.

ಚುನಾವಣೆ ಉಮೇದ್ವಾರರಾಗತಕ್ಕವರ ಆಖೈರು ಪಟ್ಟಿ. Final List of Candidates for Election)

ಜಾಬರು ಸಂಖ್ಯೆ	ಉಮೇದುವಾರರ ಹೆಸರು	ಉಮೇದುವಾರರ ವಿಳಾಸ	ಉಮೇದುವಾರಿಕೆಗೆ ಸೂಚಿಸಿದವರೂ ಸಂಯೋಜಕರು ಗುರುತಿಸಲು ಕೊಟ್ಟಿರುವ ೪ ಗುರುತು
1	ಶ್ರೀ ಎಸ್. ಸೋಮಣ್ಣ, B. A., B. L.,	ಅಡ್ವೊಕೇಟ್, ಮಡಿಕೇರಿ.	ಅಖಿಲ ಭಾರತದ ಕಾಂಗ್ರೆಸ್ ಗುರುತು ನೊಗವೇರಿದ ಎರಡು ಎತ್ತುಗಳು.
2	ಶ್ರೀ ಕೆ. ಟಿ. ಉತ್ತಪ್ಪ, B. A.,	ಬೈಸನ್ ಫೀಲ್ಡ್ ಎಸ್ಟೇಟ್, ಸಿದ್ದಾಪುರ	ತಕ್ಕಡಿ. (ಸ್ವತಂತ್ರ)

ಸೂಚನೆ:-†† 1. ಓಟುಕೊಡುವುದಕ್ಕಾಗಿ ಗೊತ್ತಾಗಿರತಕ್ಕ ಮತ್ತು ಪ್ರತ್ಯೇಕವಾಗಿ ತಿಳಿಸಲಾದ ಪೋಲಿಂಗ್ ಸ್ಟೇಷನ್‌ಗಳಲ್ಲಿ ಉತ್ತರ ಕೊಡಗು ತಾಲೋಕಿನಲ್ಲಿ ತಾರೀಕು 18-1-1952ರಲ್ಲಿ ಪೂರ್ವಾಹ್ನ 7-30 ಗಂಟೆಯಿಂದ ಅಪರಾಹ್ನ 12-30 ಗಂಟೆಯ ವರೆಗೆ ಮತ್ತು ಅಪರಾಹ್ನ 1 ಗಂಟೆಯಿಂದ 4-30 ಗಂಟೆಯ ವರೆಗೆ—ದಕ್ಷಿಣ ಕೊಡಗು ತಾಲೋಕಿನಲ್ಲಿ ತಾರೀಕು 22-1-1952ರಲ್ಲಿ ಪೂರ್ವಾಹ್ನ 7-30 ಗಂಟೆಯಿಂದ 12-30 ಗಂಟೆಯ ವರೆಗೆ ಮತ್ತು ಅಪರಾಹ್ನ 1 ಗಂಟೆಯಿಂದ 4-30 ಗಂಟೆಯ ವರೆಗೆ ವೋಟು ಕೊಡಲು ಅವಕಾಶ ಕೊಡಲಾಗುವುದು.

ಮಡಿಕೇರಿ,
ತಾ. 11-12-51.

ಎಸ್. ಸಿ ಸುಬ್ಬಯ್ಯ,
ರಿಟರ್ನಿಂಗ್ ಆಫೀಸರ್, ಲೋಕಸಭೆ (ಪಾರ್ಲಿಮೆಂಟ್).

ಕೊಡಗಿನ ಕಾಂಗೆಸ್ಸಿನಲ್ಲಿ ಏನಿದೆ?

ಲೇ:-ಸಿ ಎಂ. ಪೂವಪ್ಪ

ಹಿಂದೂದೇಶದಲ್ಲಿ ಕಾಂಗ್ರೆಸ್, ಜನತಾ ಪಕ್ಷಗಳಿಗೆ ಸರ್ವಸ್ವದೇಶಗಳಲ್ಲೂ ನೀತಿದೆ. ಕಾಂಗ್ರೆಸ ಹಿಂದೂದೇಶದ ಆಡಳಿತ ಪಕ್ಷವಾಗಿ ಸಂಸ್ಥಾನಗಳು ದಾಟಿದವು. ಈ ಒಂದು ಅಧ್ಯಾಯದಲ್ಲಿ ಅದು ನಡೆಸಿದ ರಾಜ್ಯಭಾರದಲ್ಲಿ ಒಡಕಿನ ಮೇಲೆಗೆ ಹೋಗಿ ಒಟ್ಟಿಗೂಡಿಸಿಬಿಡುವುದಿಲ್ಲ. ಒಡಕಿನ ಹೊಟ್ಟೆಗೆ ಕತ್ತಿ ಬಿದ್ದಿದೆ. ಹೀಗೆ ಸ್ವಾತಂತ್ರ್ಯ ಪಡೆದಾಗಿನಿಂದ ಕಾಂಗ್ರೆಸು ತನ್ನ ಜನಾನುರಾಗವನ್ನು ಕಳೆದು ಕೊಂಡು ನಿರ್ನಾಮವಾಗುವ ಪರಿಸ್ಥಿತಿ ಬಂದಿತ್ತು. ಆಂಧ್ರ ಸಮಯದಲ್ಲಿ ಪಂಡಿತ ಜವಾಹರ್ ಅವರ ಅಧ್ಯಕ್ಷತೆಯಲ್ಲಿ ನಡೆಸಿ ವ್ಯತಪ್ರಯತ್ನವಾಗಿದ್ದ ಕಾಂಗ್ರೆಸ್ ಪುನಶ್ಚೇತನ ಪ್ರಯತ್ನ ಹೊಡೆದಿದೆ. ಆದರೆ ಒಂದು ಸಂಸ್ಥೆಯ ಜೀವನ ಶಕ್ತಿ, ಕಾರ್ಯಕ್ಷಮತೆಗಳ ಆಧಾರವೆಲ್ಲವೂ ಅದರ ಪ್ರಾಮಾಣಿಕ ಸದಸ್ಯರ ಮೇಲೆ ನಿಂತಿರುವಂತಹ ಪರಿಸ್ಥಿತಿಯಲ್ಲಿ ಒಬ್ಬ ವ್ಯಕ್ತಿಯೆಂದು ಒಂದು ಸಂಸ್ಥೆಯೂ ಉಳಿಯಲಾರದು. ಸಹಕಾರವೇ ದಕ್ಷರೂ, ಜನಹಿತಕೃತ್ಯಿಯವರೂ ಎಂದು ಕ್ಷಣ ಇಡೀ ಕಾಂಗ್ರೆಸ್ಸಿಗೆ ಆಯೋಗ್ಯತೆ ಬಂದೆನ್ನಲಾಗಲಿಲ್ಲ. ಕಾಂಗ್ರೆಸು ಇಂದ ಸಹಕಾರವನ್ನು ಪಡೆದುಬ್ಬರೂ ಪಡೆದು, ಅವರ ಜೀವರನ್ನು ಉಪಯೋಗಿಸಿ ಕೊಂಡು, ಚುನಾವಣೆಗಳಲ್ಲಿ ಬಹುಬಲ ಪಡೆದು ಅಧಿಕಾರಕ್ಕೆ ಬಂದ ಮೇಲೆ ಕೆಲವರನ್ನು ಕಾಂಗ್ರೆಸ್ ಸರಕಾರದಲ್ಲಿ ಬಂಬಸುವುದು. ಹಾಗೆ ಬಾಕ್ಷಣ ಕಾಂಗ್ರೆಸ್ಸಿನ ಯೋಗ್ಯತೆ ಹೆಚ್ಚಿತೆಂದಾಗಲೀ, ಕಾಂಗ್ರೆಸಿಗರ ಪಾಲಿನಡತೆ ಮಣಿಪಾದಾಯ ತೆಂದಾಗಲೀ ರಾಷ್ಟ್ರೀಯ ಭಾವಿಸಕಹಿದು. ಕಾಂಗ್ರೆಸ್ಸಿನಲ್ಲಿ ಲಾಭ ಬಡಕರು, ಕಪ್ಪುಸಂತೆಯವರೂ, ಅಧಿಕಾರಲ ಲಸಿಗರು, ಸೋ ಕಂಬಿಗಿವರೋ ಹಾಗೆಯೆ ಆತ್ಮಸಂಜಿಕರೂ ತುಂಬಿದ್ದಾರೆ ಕಲ್ಲುಬಿದ್ದರೆ ಪುಸ್ತೇಕ್ಷಮವಾಸ ಟಂಡಿಸ್ಪಾಮಂ ಅನ್ಯಸ್ಪಾರ ಗಿದ್ದಾಗಲಿ ಅವರ ಮೂಶ್ಚಕ್ತಿಗಳಚ್ಚೆತನಿಯೊಗುಳ್ಳಿದವರು, ನೆಹರೂಜವರು ಅಧಿಕ್ಷರಾದಾಂಗಲೂ, ಕಾಂಗ್ರೆಸ್ಸನ್ನು ಉಳಿಸಲು ನೆಹರೂಜವರ ಮಾತಿನಂತೆ ಕಾಂಗ್ರೆಸ್ಸಿಗರಿಂದ ಆಗಬೇಕಾಗಿದೆ? ಕಾಂಗ್ರೆಸ್ ಸಂಸ್ಥೆಗೆ ಜವಾಬ್ದಾರಿಯ ಸೇವಟನ್ನಿಟ್ಟು, ಶಂಖೆಗೆ ಆಸಿದ್ದರೂ ಅದರ ಒಳಗೆ ಸ ಪೂರ್ಣವಾಗಿ ಶುಚಿಯೇ ತೊಳೆಯೆಂಬ ಹೇಳಲು ಧೈರ್ಯವಿಪಡುವಂತಾಗಿದೆ.

ಈ ಹೊಳಲು ಮನಸ್ಸಿನ ಕೊರಳು ರಾಜಕೀಯದ ಜಾಗೃತಿಗರು ಜನಾನುರಾಗಕ್ಕಾಗಿ ಲಿಕ್ಕಿ ಅಲ್ಲಾಡಿ ಕೇಳಲು ಸಾಧ್ಯವಾಗಿ ಹೆಚ್ಚಿಗಸ್ಸು ಮಾಡಿದ್ದಾರೆ. ತಾವು ಕೇಳಿದವರು ತತ್ವವೇ ವಿಗಳು-ವರೂ ಕಾಂಗ್ರೆಸ್ಸೆಯ್ಯುತ್ತಾರೆ. ಬಡ ಜನರ ಒಡಲಿಗೆ ಹೆಚ್ಚಿಯುವ ಕಪ್ಪು ಸಂತೆಯವರಿಂದಲೂ ಕಾಂಗ್ರೆಸ್ಸನ್ನು ತ್ತಾರೆ. ಗಾಂಧೀಜಿಯ ಹೆಸರಿನ ತತ್ವಗಳನ್ನು ಪಾಲಿಸಬೇಕಾದರೂ ಕಾಂಗ್ರೆಸ್ಸನ್ನು ಕ್ಕಾರೆ. ಇಂಥಾ ಅನೀತಿಯಿಂದಲೂ ಅಸೂತಿಯ ಕಾರ್ಯಕ್ಕೂ ಬೆಹಾಕಿ ಸ್ಥಾನ ಶಿಖರವನ್ನು ಸ್ತಿದ್ದಾರೆ ಇಲ್ಲಿಪ್ಪರೆ ಸಮಾಜವಾದಿ ಪಕ್ಷದ ಶ್ರೀ. ಅಶೋಕ್ ಮೆಹತಾರವರು ಕೇಳಿದಂತೆ ಹಿಮಾಚಲ ಸ್ಥದೇಶದಲ್ಲಿ ಚುನಾವಣೆ ಬಂದಲ್ಲಿ ಕಾಂಗ್ರೆಸಿನ ವಿರೋಧಿ ಅಭ್ಯರ್ಥಿಗೆ ಓಟು ಹಾಕಲು ಕೂಶಿಲ್ಲದ ಪಟ್ಟಿಗೆಗಳನ್ನೂ ಗಾಡೂದ ಚಿತ್ರವಿಲ್ಲದ ಪೆಟ್ಟಿಗೆಗಳನ್ನೂ ಇಡಲಾಗುತ್ತಿತ್ತೆ? ಇಲ್ಲವೇ ಓಟರ ಪೆಟ್ಟಿಗೆಗಳನ್ನು ಕಲೆಕಳಗಾಗಿ ಇಟ್ಟಿರಲಾಗುತ್ತಿತ್ತೆ? ಒಬ್ಬರಿಗೆ ಹೆಳುವದಾಗಿ ಕಾಗ್ರೆಸ್ಸಿಗೆ ಹಾಕಿ ಇಲ್ಲಿ ನಡೆಸಿ ಇಲ್ಲಿ ಗಾಂಧೀಜಿಯ ಚಿತ್ರ, ಅಹಿಂಸೆಗಳ ಸಿಸಾರವಾಗಿ ಕಾಗ್ರೆಸ ಅಧಿಕಾರಿಸ್ಥಾಗಳು, ಮಂತ್ರಿಗಳಲ್ಲಾಗಳ ಸಂಸ್ಥೆಯಾಗಿದೆ. ನೆಹರೂಜವರು ಸ್ಪಷ್ಟವಾಗಿ ಕಾಗ್ರೆಸ ಅಧಿಕಾರಿಸ್ಥಾಗಳು, ಮಂತ್ರಿಗಳು, ಗಾಂಧಿತತ್ವ

ಕ್ಷಯ ರೋಗದ ಹಾವಳಿಯನ್ನು ನಿಲ್ಲಿಸುವ ಹೋರಾಟಕ್ಕೆ ಸೇರಿ!

ಕ್ಷಯ ರೋಗವು ಹೇಗೆ ಹರಡುತ್ತದೆಂದು ನಿಮಗೆ ಗೊತ್ತಿದೆಯೇ?

ಕ್ಷಯ ರೋಗ ತಗಲಿದವನೊಡನೆ ನೇರವಾದ ಸಂಪರ್ಕ ಮಾಡುವುದರಿಂದ ಅದು ಹರಡುತ್ತದೆ ಕ್ಷಯ ರೋಗದ ಹರಡುವಿಕೆಯನ್ನು ತಡೆಗಟ್ಟಿದರೆ ಕಾಯಿಲೆಯು ಹಂಡದಂತೆ ಮಾಡಿದಂತಾಗುವುದು ಕ್ಷಯ ರೋಗ ಹರಡುವುದನ್ನು ತಡೆಗಟ್ಟಿದರೆ ಅದನ್ನು ನಿವಾರಣೆ ಮಾಡಲು ಹೂಡುವ ಯುದ್ಧದ ಅರ್ಧಭಾಗದ ಜಯವನ್ನು ಗಳಿಸಿದಂತಾಗುವುದು.

ಕ್ಷಯರೋಗವನ್ನು ತಡೆಗಟ್ಟಲು ಕೈಕೊಳ್ಳಬೇಕಾದ ಸಲಕರಣೆಗಳು

೧. ಕ್ಷಯರೋಗದಿಂದ ನರಳುತ್ತಿರುವವರನ್ನು ಪ್ರತ್ಯೇಕ ಇಟ್ಟು ಉಪಚರಿಸಲು ವಾರ್ಡುಗಳು

೨. ಗರೀಬ ಕ್ಷಯ ರೋಗಿಗಳನ್ನು ಮತ್ತು ಅವರ ಕುಟುಂಬದವರ ಎಚ್ಚರಿಕೆ ತೆಗೆದುಕೊಳ್ಳಲು ಕಮಿಟಿಗಳು

೩. ಗುಣಮುಖರಾದ ಖಾಯಿಲಸ್ಥರನ್ನು ಎಚ್ಚರಿಕೆ ತೆಗೆದುಕೊಳ್ಳಲು ಸೆಂಟರುಗಳು

೪. ಟಿ. ಬಿ. ಕ್ಲಿನಿಕ್‌ಗಳು

೫. ಕ್ಲಿನಿಕ್‌ಗಳಲ್ಲಿ, ಆಸ್ಪತ್ರೆಗಳಲ್ಲಿ, ಸ್ಯಾನಿಟೋರಿಯಸ್‌ಗಳಲ್ಲಿ ಮತ್ತು ಯಸ್ಸ್-ರೇ ಲೆಬೋರೆಟರಿಗಳಲ್ಲಿ ಹೊಸ ಮೂದರಿಯ ಸಲಕರಣೆಗಳು

೬. ಕ್ಷಯ ರೋಗವು ಹರಡದಂತೆ ತಡೆಗಟ್ಟುವ ಆರೋಗ್ಯ ಪ್ರಚಾರ

ಪುನಃ ಹುತ್ತರಿ ಹಬ್ಬವು ಬಂದಿದೆ

ಕೊಡಗಿನಲ್ಲಿ ಈಗ ಒಳ್ಳೆ ಕಾಲವಾಗಿದೆ ಜಮೀನುಗಳೆಲ್ಲೆಲ್ಲಾ ಬತ್ತ, ಕಾಫಿ, ಕಿತ್ತಳೆ, ಒಳ್ಳೆಣಸು, ಜೂಲಕ್ಕಿ ಮತ್ತು ಇತರ ಫಲಗಳಿಂದ. ಅಪಾರವಾದ ಫಲಲು ಬಂದ ಸಮಯದಲ್ಲಿ ಅನೇಕ ನಿರ್ಗತಿಕರು ಕ್ಷಯ ರೋಗ ಪೀಡಿತರಾಗಿದ್ದಾರೆ. ಅವರಿಗೆ ಈ ಕಾಲದ ಉತ್ಸವದಲ್ಲಿ ಸಂತೋಷಪಡಲು ಆಗುವುದಿಲ್ಲ. ಎಂದು ಬಡಿವ ಹಬ್ಬಗಳಲ್ಲಿ ಭಾಗವಹಿಸಲು ಆಗುವುದಿಲ್ಲ ಈ ದೌರ್ಭಾಗ್ಯಹೀನ ಜನರಿಗೆ ನವ್ಯ ಸಹಾನುಭೂತಿಯನ್ನು ಈಗ ತೋರಿಸಬೇಕು. ಟಿ ಬಿ-ಸೀಲುಗಳ ಮೂರಾಟದ ಪ್ರಚಾರಕ್ಕೆ ಉದಾರವಾದ ಹೊಸೆಗಾರಿಕೆಯನ್ನು ತೋರಿಸಬೇಕು. ನೀವು ಹೆಚ್ಚಿನ ಸಂಖ್ಯೆಯಲ್ಲಿ ಟಿ ಬಿ ಸೀಲುಗಳನ್ನು ಕೊಂಡುಕೊಂಡರೆ ಆರೋಗ್ಯ ಅಧಿಕಾರಿಗಳಿಗೆ ಕಾರ್ಯ ಪ್ರವೃತ್ತರಾಗಲು ಧೈರ್ಯಕೊಟ್ಟಂತೆ ಸಹಾಯ ನೀಡಿದಂತಾಗುವುದು.

ಒಂದು ಆಣೆ ಬೆಲೆಯ ಟಿ. ಬಿ. ಸೀಲುಗಳನ್ನು ಕೊಂಡು ಕೊಂಡು ಕೊಡಗಿನಲ್ಲಿ ಕ್ಷಯ ರೋಗ ನಿವಾರಣೆ ಕೆಲಸದ ಅಭಿವೃದ್ಧಿಗೆ ಸಹಾಯ ಮಾಡಿರಿ.

ಟಿ ಬಿ. ಸೀಲುಗಳು ಕೊಡಗಿನಲ್ಲಿ ಮಡಿಕೇರಿಯಲ್ಲಿರುವ ಸಿವಿಲ್ ಸರ್ಜನರಲ್ಲಿಯೂ ಮತ್ತು ಇತರ ಅಧಿಕಾರಿಗಳಲ್ಲಿಯೂ ದೊರಕುತ್ತವೆ.

ಇಂಡಿಯಾದಲ್ಲಿ ಎರಡನೆ ಸಾರಿಯ ಟಿ. ಬಿ. ಸೀಲುಗಳ ಮೂರಾಟದ ಕೆಲಸವನ್ನು ಹೊಸದೆಲ್ಲಿಯಲ್ಲಿರುವ ಇಂಡಿಯಾದ ಕ್ಷಯರೋಗ ನಿವಾರಣಾ ಸಂಸ್ಥೆಯವರು ಪ್ರಾರಂಭಿಸಿರುವರು.

(ಈ ಪ್ರಕಟನೆಗಾಗಿ ಅಹಮದಾಬಾದಿನಲ್ಲಿರುವ ಅರೋಗ್ಯೋದಯ ಸೂಲುವ ಮುಸ್ತು ಕೆಯಿಸೆಯು ಕಂಪನಿ ಲಿಮಿಟೆಡ್‌ನವರು ಹಣ ಸಹಾಯ ಮಾಡಿರುವರು)

Licence No. 60.
Licenced to Post without Prepayment

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ದೇವಯ್ಯನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೩೦ | ತಾರೀಕು ೨೮—೧೨—೧೯೩೮ನೇ ಶುಕ್ರವಾರ | ಸಂಚಿಕೆ ೩೯

ಓಟಿನ ಚಲಾವಣೆ.

ದೇಶದ ಭವಿಷ್ಯದ ವಿಚಾರ ಈಗ ಇಲ್ಲವೆಂದು ಕರ್ನಾಟಕೀಯ.ಕ್ಕೆ ಬಿದಿರುವ ಕೊಡಗು ಕಾಂಗ್ರೆಸಿಗೆ ಓಟು ಕೊಟ್ಟರೆ ಸಮ್ಮ ಕತ್ತನ್ನ ನಾವು ಕುಯ್ದುಕೊಂಡಂತೆ! ಅದ್ದರಿಂದ ಎಚ್ಚರಿಕೆ! ಎಚ್ಚರಿಕೆ!!

ಕೆಲವೇ ದಿನಗಳಲ್ಲಿ ಹಿಂದೂಸ್ಥಾನದ ವಿಲಿಯೂಂತ್ ಪ್ರಾಯ ಪ್ರಬುದ್ಧ ಪ್ರಜೆಗಳಿಗೆ ದೊರಕಿರುವ ಅಮೂಲ್ಯವಾದ ಓಟನ್ನ ಸ್ವಾತಂತ್ರ್ಯ ಸಡೆದ ನಂತರ ಮೊದಲನೆಯ ದಾಗಿ ಕೊಡಲಿರುವರು. ಪ್ರಜಾಪ್ರಭುತ್ವದಲ್ಲಿ ಈ ಓಟು ಕೊಡವ ಹಕ್ಕಿನ ಮಹತ್ವವ ಅಪ್ಪಿತ್ಪಳ್ಳು. ನಮ್ಮ ದೇಶದಲ್ಲಿ ಅವಿದ್ಯೆ ರಾಜಕೀಯದಲ್ಲಿ ಹೆಚ್ಚಿನ ಪೂರಿತಿ ತುಬಾ ಜನರಿಗೆ ಇಲ್ಲದಿರುವಿಲೆ, ಅನೇಕ ವಂದೂಳಗಳಲ್ಲಿ ಯೋಗ್ಯವಾಗಿ ವಿದ್ಯಾ ಜನರಿಗೆ ಈ ಮಹಕಾರ್ಯವನ್ನ ಸರಿಯಾದ ಮಾರ್ಗದಲ್ಲಿ ನಡೆಸುವಂತೆ ಪ್ರೇರಿಸುವ ವರ್ತನೆ ಇಲ್ಲದಿರುವಿಲೆ, ಮತ್ತು ಅನೇಕ ಬಡ ಜನರು ತಪ್ಪ ಆರ್ಥಿಕ ಬಲ ಹೀನತೆಯಿಂದ ಬಂಡವಾಳಶಾಹಿಗಳ ಆಗಲಿಗೆ ಒಳಗಾಗಿರುವ ಈ ಕಾರಣಗಳಿಂದ ಈ ಅಮೂಲ್ಯವಾದ ಈ ಓಟಿನ ಹಕ್ಕಿನ ಚಲಾವಣೆ ಸಮಂಜಸವಾಗಿ ನಡೆಯುವುದು ಕಷ್ಟವಾಗಿದೆ. ಆದರೂ ದೇಶದ ಎಲ್ಲಾ ಪಂಗಡಗಳ ಮುಂದಾಳುಗಳು ಪ್ರಜಾಪ್ರಭುತ್ವವು ಉಳಿಯುವ ಉದ್ದೇಶದಿಂ ನ್ಯಾಯಮಾರ್ಗದಲ್ಲಿ ವರ್ತಿಸಬೇಕಲ್ಲದೆ ಜನರಿಗೆ ದೇಶದ ಏತಾಹಿತಗಳನ್ನ ಹೆನ್ನಾಗಿ ತಿಳಿಸಿ ಅವರಿಗೆ ಯೋಕ್ಯತೆಗೆ ದಂತೆ ಓಟನ್ನು ಕೊಡುವ ಅನುವನ್ನ ಕಲ್ಪಿಸಿಕೊಡುವುದು ಕರ್ತವ್ಯವಾಗಿದೆ

ಕಾಂಗ್ರೆಸು ಮತ್ತು ಚುನಾವಣೆ.

